# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ-೧೯

**೧. ಕೃಷ್ಣ ಚರಿತೆ**

'ಕೃಷ್ಣಚರಿತೆ' ಪಾತಿಸುಬ್ಬ ಅವರ ಪ್ರಸಂಗಗಳಲ್ಲಿ ಪ್ರಾತಿನಿಧಿಕ ಎನ್ನಬಹುದು. ರಂಗತಾಂತ್ರಿಕತೆಯ ದೃಷ್ಟಿಯಿಂದ ನೋಡಿದಾಗಲೂ ಬಹಳ ಯಶಸ್ವೀಕೃತಿ. ಇಲ್ಲಿ ಯಾವ ದೃಶ್ಯವೂ ತೀರಾ ನೀಳವಾಗಿ ಬೇಸರತರುವಂತೆ ಇಲ್ಲ. ಘಟನೆಗಳು ಛಕ್ ಛಕ್ ಅಂತ ಬದಲಾಗುತ್ತ ಹೋಗುತ್ತವೆ. ಮತ್ತು ಅವು ಒಂದಕ್ಕೊಂದು ಕೊಂಡಿಯನ್ನು ಸಿಕ್ಕಿಸಿಕೊಂಡು ಬೆಳೆಯುತ್ತವೆ. ಘಟನೆಗಳು ವೈವಿಧ್ಯದಿಂದ ಕೂಡಿವೆ. ಕಂಸನ ಮೆರವಣಿಗೆಯ ದೃಶ್ಯದಲ್ಲಿ ವಿಧಿಯ ಸವಾಲೊಂದು ಆತನಿಗೆ ಆಘಾತಕಾರಿಯಾಗಿ ಬಂದೊದಗುತ್ತದೆ. ಈ ವಿಸ್ಮಯವನ್ನು ಆತ ಕ್ರೌರ್ಯದಿಂದ ಎದುರಿಸುವ ಛಲ ತೆಗೆದುಕೊಳ್ಳುತ್ತಾನೆ. ಇದು ಮುಂದಿನ ದೃಶ್ಯದಲ್ಲಿ ಕರುಣೆಗೆ ಅನುವು ಮಾಡಿಕೊಡುತ್ತದೆ. ದೇವಕಿಯ ಶೋಕವನ್ನು ಮತ್ತು ದೃಶ್ಯದಲ್ಲಿಯ ನೀಳತೆಯನ್ನು ಹಗುರಗೊಳಿಸಲೆಂಬಂತೆ ಕೊರವಂಜಿ ಬರುತ್ತಾಳೆ. ಮುಂದೆ ಇನ್ನೊಂದು ದೃಶ್ಯ, ಕೃಷ್ಣಶಿಶುವನ್ನು ಒಯ್ಯುವಾಗಿನ ಸಂದರ್ಭ ಮಳೆ, ನಾಗರಾಜ ಹೆಡೆಬಿಚ್ಚಿ ಕೊಡೆಹಿಡಿಯುವುದು ಇತ್ಯಾದಿ ದೃಶ್ಯರಂಗದ ಮೇಲೆ ತರಲು ಆಗಲಾರದು. ಆದರೆ ಅದನ್ನು ಶಬ್ದಚಿತ್ರವನ್ನಾಗಿಸುವಲ್ಲಿ ಯಶಸ್ವಿಯಾಗುತ್ತದೆ.

ಕೃಷ್ಣನ ಬಾಲಲೀಲೆ ಸಂಸಾರಿಗರನ್ನು ಮನಸೂರೆಗೊಳ್ಳುವ ದೃಶ್ಯ ಇಲ್ಲಿ ನಾಟಕೀಯತೆಯಿಂದ ಮುಪ್ಪುರಿಗೊಂಡಿದೆ. ಬಾಲ ಕೃಷ್ಣನನ್ನು ಮನೆಯಲ್ಲಿ ನೋಡಿದ ಗೋಪಿಯರ ವಾತ್ಸಲ್ಯಮಯವಾದ ಮಾತನ್ನು ಗಮನಿಸಬಹುದು.

"ಯಾರೆಬಂದವರು ಇಲ್ಲಿಗೆ ಕಳ್ಳ ರ‍್ಯಾರೆ ಬಂದವರು …. ಸಿಕ್ಕದೊಳಿರಿಸಿದ ಮಡಕೆಗಳೊಳಗೆ ಕಾಡ್ಬೆಕ್ಕಿನ ಹಾಗೆಲ್ಲ ಹುಡುಕಾಡುತ್ತ …"

ಇಲ್ಲಿ 'ಸಿಕ್ಕದ ಮೇಲೆ' 'ಕಾಡ್ಬೆಕ್ಕಿನಂತೆ' ಮುಂತಾದ ಪ್ರಯೋಗ ಗ್ರಾಮೀಣ ಪ್ರದೇಶದ ವಾತಾವರಣವನ್ನು ಸೆರೆಹಿಡಿಯುವುದು ಮಾತ್ರವಲ್ಲ ಹಾಲು - ಹೈನ ಸಂಸ್ಕೃತಿಯನ್ನು ಸಾಕಾರಗೊಳಿಸುತ್ತದೆ. ಅದನ್ನು ನೋಡಿದಂಥವರಿಗೆ ಇದು ಪ್ರೀತಿಯ ಬುಗ್ಗೆಯನ್ನು ಚಿಮ್ಮಿಸುತ್ತದೆ. (ಈಗ ಸಿಕ್ಕ ಮಾಯವಾಗಿದೆ - ಆದ್ದರಿಂದ ಕಾಡ್ಬೆಕ್ಕು - ಹಾಲುಕುಡಿದು ಕೊಬ್ಬಿದ ಬೆಕ್ಕು - ಮಾಯವಾಗಿದೆ). ಇಲ್ಲಿಯ ಸಂವಾದ ಗ್ರಾಮೀಣವಾಗಿರುವುದಕ್ಕೂ ಯಕ್ಷಗಾನ ಗ್ರಾಮಗಳಲ್ಲೇ ಬದುಕಿದ್ದಕ್ಕೂ ಆಂತರಿಕ ಸಂಬಂಧವೊಂದು ಮಿಂಚುತ್ತದೆ.

ಗೋಪಿಯರು ಬಾಲಕೃಷ್ಣನನ್ನು ನೀನು ಯಾರೆಂದು ವಿಚಾರಿಸಿದಾಗ ತಾನು ಸುಂಕದವನು ಎಂದು ಹೇಳುತ್ತ "ಕೊಟ್ಟು ಪೋಗೆನ್ನ ಸುಂಕವ । ಕಣ್ಣ । ಬಿಟ್ಟರಂಜುವನಲ್ಲ ದಿಟ್ಟ ಹೆಂಗಳಿರ" : ತುಂಬಯಶಸ್ವಿಯಾಗಿ ಮುದ್ದು, ಮುಗ್ಧತೆ, ವಾತ್ಸಲ್ಯವನ್ನು ದೃಶ್ಯೀಕರಿಸುತ್ತದೆ.

ಹಾಗೆಯೇ ಸಂಭಾಷಣೆಯ ಚುರುಕು ಕೂಡ ಇಲ್ಲಿದೆ. ಬಾಲಕೃಷ್ಣನ ಮೇಲೆ ದೂರು ಹೇಳುವ ಗೋಪಿಕೆಯರು ಮತ್ತು ಯಶೋದೆಯ ಮಧ್ಯೆ ನಡೆಯುವ ಮಾತುಕತೆ ಮನಸೂರೆಗೊಳ್ಳುತ್ತದೆ. ಬಾಲಕೃಷ್ಣ "ನೀರು ತರಲು ಪೋದ । ಈ ಸುದತಿಯ । ದಾರಿಯಡ್ಡವ ಕಟ್ಟಿದ ।

ನಾರಿ ಹೇಳಿದಕೇನು ಬೆಲೆ ಕೊಟ್ಟೆಯೆನುತುಟ್ಟ । ಸೀರೆಯನೆಗದೋಡಿದ ।" (ಎಂಥ ತುಂಟು! ಎಂದು ಕೇಳಿದ. ಬೆರಗಾಗಿ ಯಶೋದೆ ಆರೇಳುವರ್ಷದ ಬಾಲಕ ಸೀರೆ ಹಾರಿಸಿದರೇನಾಯಿತು?" ಎಂದು ಮುಗುಳುನಗುತ್ತಾಳೆ.

ಭಾಷೆ ತೀರಾ ಪ್ರೌಢವೂ ಅಲ್ಲದ ತೀರಾ ಸಾಮಾನ್ಯವೂ ಅಲ್ಲದ ರೀತಿಯಲ್ಲಿ ಹದಗೊಂಡಿದೆ. ಈ ಎಲ್ಲ ಗುಣಗಳಿಂದ ತನ್ನ ಕಲಾ ಮೌಲ್ಯವನ್ನು ಹೆಚ್ಚಿಸಿಕೊಂಡಿದೆ.

## ೨. ಯಾದವಾಭ್ಯುದಯ

ಇದರಲ್ಲಿ ಎರಡು ಸಂಧಿಗಳಿವೆ. ಯಾದವರ ಅಭ್ಯುದಯವನ್ನು ಈ ಕಥಾಭಾಗ ನಿರೂಪಿಸುತ್ತದೆ. ಕಥಾಭಾಗ ನೀಳವಾಗಿದ್ದರೂ ಬೇಸರಬರದಂತೆ ಕತೆಯ ಓಟವಿದೆ. ಪ್ರಾರಂಭದಲ್ಲಿಯೇ ಕೃಷ್ಣ ಬಲರಾಮನರ ಸಾಹಸ ವ್ಯಕ್ತವಾಗುತ್ತದೆ. ಬಲರಾಮ ಒಟ್ಟೊಟ್ಟಿಗೆ ಇರುವನಾದರೂ ಭಾಗವತದಲ್ಲಿ ಕೃಷ್ಣನೆ ಕೇಂದ್ರಬಿಂದು. ಅದಕ್ಕನುಸಾರವಾಗೇ ಇಲ್ಲಿನ ನಿರೂಪಣೆಯಿದೆ.

ಇಲ್ಲಿಯ ಒಂದು ವಿಶಿಷ್ಟತೆಯೆಂದರೆ ಕೃಷ್ಣನ ಬಾಲ್ಯವನ್ನು ಹಿನ್ನೋಟ (ಪ್ಲಾಶಬ್ಯಾಕ್)ದಿಂದ ನಿರೂಪಿಸುವುದು. ಉದ್ಧವನು ಕೃಷ್ಣನ ಆದೇಶದಂತೆ ನಂದಗೋಕುಲಕ್ಕೆ ಹೋದಾಗ ಕೃಷ್ಣನ ಬಾಲ್ಯ ಪುನಾಸೃಷ್ಟಿಯಾಗುತ್ತದೆ. ಈ ಭಾಗ ಮನೋಹರವಾಗಿದೆ. ಯಶೋದೆ "ಬಾಲನೊಂದಿಗೆ ಬಂದಪ | ಯದುಕುಲದೀಪ" ಬಹಳ ಸಾರ್ಥಕವಾದ ರೂಪಕ. "ಮತ್ತೊಮ್ಮೆ ಮೊಲೆಗುಡಿದು | ದಣಿಯುವ ಮೊದಲತ್ತ ವೋದರೆ ನಾನಂದು | ಸುತ್ತಲೂ ಚೆಲ್ಲುತ್ತ ಮೊಸರನು .... | ಮುಂತಾದ ಮಾತುಗಳು ಅವಳ ತಾಯ್ತನವನ್ನು ಪುನಃ ಅನುಭವಕ್ಕೆ ತಂದುಕೊಡುವಲ್ಲಿ ಸಾರ್ಥಕವಾಗಿದೆ. ಮೊದಲ ಸಂಧಿಯ ಕೊನೆಯಲ್ಲಿ ಮಂಡಿಸುವ ತತ್ವಜ್ಞಾನಕ್ಕೆ ಇದು ಪೂರಕವಾಗಿದೆ.

ಎರಡನೆಯ ಸಂಧಿಯಲ್ಲಿ ಮೂರು ಸಲ ಮಾಗಧನ ದಾಳಿಯ ಘಟನೆಗಳಿವೆ. ಘಟನೆಗಳು ಪುನರ್ ಸಂಭವಿಸುವಲ್ಲಿ ಬಲವಾದ ಕಾರಣಗಳಿಲ್ಲ. ಹಾಗೆಯೇ ವರ್ಣನೆಗಳ ಮಧ್ಯ ಬೇರೆ ದೃಶ್ಯಗಳಿಲ್ಲದ್ದರಿಂದ ವರ್ಣನೆಯ ಏಕತಾನತೆ ಉಂಟಾಗಿದೆ. ಆದರೆ ಯಾದವರ ಅಭ್ಯುದಯಕ್ಕೆ ಪೂರಕವಾಗಿದೆ.

## ೩. ರುಗ್ಮಿಣೀ ಸ್ವಯಂವರ

ಪದ್ಯಗಳು ಸುಲಭಗ್ರಾಹ್ಯವಾಗಿವೆ. ಸಂದರ್ಭವನ್ನು ಸ್ಫುಟವಾಗಿ ನಿರ್ಮಿಸುವುದರಲ್ಲಿ ಯಶಸ್ವಿಯಾಗಿದೆ. ಘಟನೆಗಳು ಹೆಚ್ಚು ವಿಲಂಬಿಸಿ ಬೇಸರ ತರುವುದಿಲ್ಲ. ಅಂಗಕತೆಗಳು ನಿಯಮಿತ ಆಗುವುದರಿಂದ ಕಥೆಯ ಓಟ ನೇರವಾಗಿದೆ. ವೀರ, ವಿರಹ, ವಾತ್ಸಲ್ಯ, ಭಕ್ತಿ ಹೀಗೆ ಭಾವಗಳು ಉಚಿತವಾಗಿ ಪರಿಪೋಷಿಸಿದೆ. ಭೀಷ್ಮಕನ ಮನಸ್ಸಿನಗೆ ವಿರುದ್ಧವಾಗಿ ಅವನ ಮಗ ರುಗ್ಮ ಶಿಶುಪಾಲನಿಗೆ ರುಗ್ಮಿಯನ್ನು ಮದುವೆ ಮಾಡಬಯಸುವುದು, ರುಗ್ಮಿ ವಿರಹ, ಬ್ರಾಹ್ಮಣನಿಂದ ಸಂದೇಶ, ಕೃಷ್ಣ ಬಲರಾಮರು ಬರುವುದು, ರುಗ್ಮಿ ಪೂಜೆಗಾಗಿ ದೇವಾಲಯಕ್ಕೆ ಹೋಗುವುದು, ಕೃಷ್ಣ ಅವಳನ್ನು ರಥದ ಮೇಲೆ ಕೂಡ್ರಿಸಿಕೊಳ್ಳುವುದು, ಶಿಶುಪಾಲ, ಮಾಗಧ, ರುಗ್ಮರು ಬಲರಾಮ-ಕೃಷ್ಣರೊಡನೆ ಯುದ್ಧ ಮಾಡಿ ಸೋಲುವುದು ಹೀಗೆ ಪಟ್ ಪಟ್ ಅಂತ ಘಟನೆಗಳು ಒಂದರಿಂದ ಒಂದಕ್ಕೆ ಹಾರುತ್ತ ಬೆಳೆಯುತ್ತ ನಡೆಯುತ್ತವೆ. ನಿರೂಪಣೆಯ ದೃಷ್ಟಿಯಿಂದಲೂ, ರಂಗಪ್ರಯೋಗ ದೃಷ್ಟಿಯಿಂದಲೂ ಯಶಸ್ವೀ, ರಂಜನೀಯ 'ಪ್ರಸಂಗ'.

## ೪. ಶ್ರೀಕೃಷ್ಣ ವಿವಾಹ

'ಶ್ರೀ ಕೃಷ್ಣ ವಿವಾಹ'ದ ವಿಶಿಷ್ಟತೆ ಇರುವುದು ಇದರ ವಿಧಾನದ ಹೊಸತನದಲ್ಲಿ. ಈ ಪ್ರಸಂಗವನ್ನು ನಾಟಕದ ಭಾಷೆಯಲ್ಲಿ ಹೇಳುವುದಾದರೆ ಏಕಾಂಕಗಳ ಸಂಯೋಜನೆ. ಅಂದರೆ ಇದರಲ್ಲಿ ಶ್ರೀಕೃಷ್ಣನ ನಾಲ್ಕು ವಿವಾಹಗಳ ಕತೆ ಇವೆ. ಪ್ರತಿಯೊಂದು ಮದುವೆಯೂ ಯುದ್ಧದ ಮುಖಾಂತರವೇ ನೆರವೇರುತ್ತದೆ. ಹಾಗೆಯೇ ಪ್ರೇಮ-ವಿರಹಗಳಿವೆ. ತಂತ್ರ ಪ್ರತಿತಂತ್ರಗಳಿವೆ. ಮತ್ತು ಪ್ರತಿಯೊಂದೂ ಕೃಷ್ಣ ಮಹಿಮೆಯನ್ನು ಸಾರುವಂತಹದು.

ಮೊದಲನೆಯದು ರುಕ್ಮಿಣಿಯೊಡನೆಯ ವಿವಾಹ. ಇದು ಮುಗಿದ ನಂತರದ ಕತೆ ಇದಕ್ಕೆ ಸಂಬಂಧವಿಲ್ಲ. ಅದು ಸ್ಯಮಂತಕ ಮಣಿಯೋಪಾಖ್ಯಾನ ಅಂದರೂ ಸರಿ. ಒಟ್ಟಾರೆ ಸತ್ರಾಜಿತನಿಗೆ ಸಂಬಂಧಿಸಿದ್ದು, ಇದರ ಅಂತ್ಯದಲ್ಲಿ ಸತ್ಯಭಾಮೆಯ ವಿವಾಹ. ಮೂರನೆಯದು ಮತ್ತೇ ಬೇರೆ. ಅದು ನರಕಾಸುರನ ಸೆರೆಮನೆಯಲ್ಲಿರುವ ಹದಿನಾರು ಸಾವಿರ ತರುಣಿಯರನ್ನು ಹೆಂಡತಿಯಾಗಿ

ಸ್ವೀಕರಿಸುವುದು. ನಾಲ್ಕನೆಯದು ಮತ್ತು ಕೊನೆಯದು ವಿಂದ-ಅನುವಿಂದ ಎಂಬುವರ ತಂಗಿ ಮಿತ್ರವಿಂದೆಯ ವಿವಾಹಕ್ಕೆ ಸಂಬಂಧಿಸಿದ್ದು, ಕೊನೆಗೆ ಮಿತ್ರವಿಂದೆ ಕೃಷ್ಣನ ವಿವಾಹ.

ಇದನ್ನು 'ಏಕಾಂಕ ಪ್ರಸಂಗ'ವನ್ನಾಗಿ ಯಶಸ್ವಿಯಾಗಿ ಆಡಬಹುದಾಗಿದೆ. ಮಂಗಳ ಮತ್ತು ಪೀಠಿಕಾ ಪದ್ಯಗಳನ್ನು ಭಾಗವತ ಹೊಂದಿಸಿಕೊಂಡುಬಿಟ್ಟರೆ ಒಂದು ತಾಸಿನಿಂದ ಎರಡು ತಾಸಿನ ತನಕ ಆಡಬಹುದಾದ ಇಲ್ಲಿಯ ಪ್ರತಿಯೊಂದು ಘಟನೆಯೂ ಪ್ರಯೋಗಾರ್ಹವಾಗಿದೆ. ಮತ್ತು ಪ್ರತಿಯೊಂದು ಘಟನೆಯೂ ಪರಿಪೂರ್ಣವಾಗಿದೆ. ಇಂದಿನ ಸಮಾರಂಭ, ಟಿ.ವಿ. ಪ್ರದರ್ಶನದ, ತಾಳಮುದ್ದಳೆ ಇಂಥ ಅನೇಕ ಸಂದರ್ಭದಲ್ಲಿ ಅರ್ಧತಾಸಿನಲ್ಲೇ ಪ್ರಯೋಗಿಸಬಹುದು. ರಂಜನೀಯವಾಗಿದೆ. 'ಪ್ರಸಂಗ'ವನ್ನು ಊನವಿಲ್ಲ ಎಂಬಂತೆ ಪ್ರದರ್ಶಿಸಬಹುದು.

**೫. ಜಾಂಬವತೀ ಕಲ್ಯಾಣ ಸತ್ಯಭಾಮಾ ಪರಿಣಯ**

೧೦೦ಳರಲ್ಲಿ ಪಾದೆಕಲ್ಲು ವಿಷ್ಣುಭಟ್ಟರು ಸಂಪಾದಿಸಿದ 'ಕಲ್ಯಾಣ ಪ್ರಸಂಗಗಳು' 'ಪ್ರಸ್ತುತ ಸಂಕಲನ' ಎಂಬ ಪ್ರವೇಶಿಕೆಯಲ್ಲಿ 'ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ' ಮೂರನೆಯ ಮುದ್ರಣ ೧೯೭೨ ಎಂದಿದೆ. ಈ ಸಂಪಾದನೆಯಲ್ಲಿ ಒಂದು ಹೆಚ್ಚಿನದಾದ ವೈಶಿಷ್ಟ್ಯವಿದೆ. ಆ ವೈಶಿಷ್ಟ್ಯವನ್ನು ಅವರು ಹೀಗೆ ಬರೆಯುತ್ತಾರೆ. "ಹಿಂದೆ ಪಠ್ಯಭಾಗವನ್ನು ಮುದ್ರಿಸುವಾಗ ಛಂದಸ್ಸಿಗನುಗುಣವಾಗಿ ವಿಂಗಡಿಸದೆ ಉದ್ದಕ್ಕೆ ಮುಂದುವರಿಯುವಂತೆ ಮುದ್ರಿಸುವುದು ಪದ್ಧತಿಯಾಗಿತ್ತು. ಬೇರೆ ಬೇರೆ ರಾಗತಾಳಗಳ ಪದ್ಯಗಳನ್ನು ಮಾತ್ರ ಬೇರೆ ಬೇರೆ ಖಂಡಗಳಾದಿ ಮುದ್ರಣ ಮಾಡುವುದು ಪದ್ಧತಿಯಾಗಿತ್ತು. ಈ ಮುದ್ರಣದಲ್ಲಿ ಪದ್ಯಗಳನ್ನು ಸಾಮಾನ್ಯವಾಗಿ ಛಂದಸ್ಸಿಗೆ ಅನುಗುಣವಾಗಿ ವಿಂಗಡಿಸಿ ಮುದ್ರಿಸಿದೆ". ಅದನ್ನೆ ಇಲ್ಲಿ ತೆಗೆದುಕೊಳ್ಳಲಾಗಿದೆ.

ಈ 'ಪ್ರಸಂಗ' ಕರ್ತರ ಹೆಚ್ಚುಗಾರಿಕೆಯೆಂದರೆ ಅವರ ಕಥನ ಕಲೆ. ಚೋರಾಡಿಯವರು ಬಹುದೊಡ್ಡ ಕಥನಕಾರರೆಂಬುವುದರಲ್ಲಿ ಸಂದೇಹವೇ ಇಲ್ಲ. ಹೊಯ್ಲಿಗೆಸಿಕ್ಕ ಹಡಗಿನ ಹಾಗೆ ಅವರ ಕಥನದ ಓಟ. ಕತೆ ಎಲ್ಲೂ ವಿಳಂಬಿಸುವುದಿಲ್ಲ. ತಡೆಯಾಗುವುದಿಲ್ಲ. ದೃಶ್ಯಗಳು ಕೂಡಲೇ ಬದಲಾಗುತ್ತವೆ. ಹೀಗೆ ಒಳ್ಳೆಯ ರಂಗಕೃತಿ ಕೂಡ ಹೌದು.

ಹಾಗೆಯೇ ಇಲ್ಲಿಯ ಭಾಷೆ ಸರಳಸುಂದರ ಮತ್ತು ನಿರರ್ಗಳ "ಯಾರೆಲೋ ಬಂದ ವೀರನೆನ್ನ ಠಾವಿಗೆ ಮಾರಹರನಿಗೊಮ್ಮೆ ಬರಲು ತೀರವಿಲ್ಲಿಗೆ" ಎನ್ನುವಂಥ, ಜಾಂಬವ ಕೃಷ್ಣನಿಗೇ ಹೇಳುವ ಧ್ವನಿಪೂರ್ಣ ಸಾಲುಗಳೂ ಇಲ್ಲಿವೆ. ಉತ್ತಮ ಕಥನಗಾರಿಕೆಗೆ 'ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಪರಿಣಯ' ಉತ್ತಮ ಮಾದರಿಯಾಗಿದೆ.

**೬. ಪಾರಿಜಾತ ಪ್ರಸಂಗ**

ಪಾರಿಜಾತ ಪ್ರಸಂಗ ರಮ್ಯವಾಗಿದೆ. ಇದಕ್ಕೆ ಆ ಪ್ರಸಂಗ ನಾಲ್ಕು (೧೯೮೧) ಅಚ್ಚು ಕಂಡುದೇ ಸಾಕ್ಷಿಯಾಗಿದೆ.

ಈ ಪ್ರಸಂಗದ ಕಥಾನಕ ಒಂದು ಭದ್ರವಾದ ಮುನ್ನೋಟದಿಂದ ವ್ಯವಸ್ಥೆಗೊಳಪಡಿಸಲಾಗಿದೆ. ಪ್ರಾರಂಭದಲ್ಲಿ ನಾರದ ಬಂದು ಪಾರಿಜಾತವನ್ನು ಕೊಟ್ಟು ಅದನ್ನು ರುಕ್ಮಿಣಿಗೆ ಮುಡಿಯುವಂತೆ ಹೇಳುವುದು ಒಂದು ವಿನಾಕಾರಣದ ಅಧಿಕ ಪ್ರಸಂಗ ಎಂದು ತೋರುತ್ತದೆ. ಆದರೆ ಅಲ್ಲಿಯೇ ಕಥಾಬೀಜ ಅಂಕುರ ಪಡೆಯುತ್ತದೆ. ಇದರಿಂದ ಪ್ರಚೋದಿತಳಾದ ಸತ್ಯಭಾಮೆ ಅಸೂಯೆಯೊಳಗಾಗಿ ಮುನಿಸುಗೊಳ್ಳುತ್ತಾಳೆ. ಇಲ್ಲಿ ಮುಂದಿನ ಕಥೆಯ ಬೆಳವಣಿಗೆಯಿದೆ. ದೃಶ್ಯ ಅಸೂಯಾಭಾವದಿಂದ ಪೋಷಣೆಗೊಳ್ಳುವ ಶೃಂಗಾರದಲ್ಲಿದೆ. ಚುರುಕಾದ, ವಿಡಂಬನೆಯಿಂದ ಕೂಡಿದ ಸಂವಾದವಿದ್ದು ಬಹುಜನ ಪ್ರಿಯವಾಗುವ ಪ್ರೇಮಕಲಹವಿದೆ. ಇದು ಈ ಪ್ರಸಂಗದ ಆಕರ್ಷಣೀಯ ಭಾಗವಾಗಿದೆ.

ಇಲ್ಲಿ ಪಾರಿಜಾತದ ಮುಂದಿನ ಚೌಕಟ್ಟು ಸಿದ್ಧವಾಗುತ್ತದೆ. ದಿನಗಳೆಯುತ್ತಿರುವಾಗ ದೇವೇಂದ್ರ ಬಂದು ನರಕಾಸುರನಿಂದ ಸ್ವರ್ಗದ ಸುವಸ್ತುಗಳು ಕಾಣೆಯಾದ ಬಗ್ಗೆ ಕೃಷ್ಣನ ಮೊರೆ ಹೋಗುತ್ತಾನೆ. ಇದು ಕಥೆಯ ಅಂತ್ಯವನ್ನು ತನ್ನ ಒಡಲಲ್ಲಿ ಧರಿಸಿದಂತಿದೆ.

ನರಕಾಸುರನನ್ನು ಶಿಕ್ಷಿಸಲು ಹೊಟರಟೊಡನೆ ಕೃಷ್ಣನೊಡನೆ ತಾನು ಬರುವುದಾಗಿ ಸತ್ಯಭಾಮೆ ಹೇಳುತ್ತಾಳೆ. ಇದು ಕತೆಯ ತಾಂತ್ರಿಕ ನಡೆಗೆ ಅವಶ್ಯವಾಗಿದೆ. ನರಕಾಸುರನ ವಧೆ ಆದೊಡನೆ ಕೃಷ್ಣ ಸ್ವರ್ಗಕ್ಕೆ ಹೋಗಿ ಬರುವಾಗ ಪಾರಿಜಾತದ ಮರ ಕಣ್ಣಿಗೆ ಬೀಳುತ್ತದೆ. ಪಾರಿಜಾತದ ಮುಖಾಂತರ ಯುದ್ಧ - ಹೀಗೆ.

ಸತ್ಯಭಾಮೆಯ ಹಟದಿಂದಾಗಿ ಪಾರಿಜಾತದ ಟೊಂಗೆಯೊಂದು ಭೂಮಿಗೆ ಬರುತ್ತದೆ. ಅದನ್ನು ಸತ್ಯಭಾಮೆಯ ಅಂಗಳದಲ್ಲಿ ನೆಟ್ಟು ಬೆಳೆಸುತ್ತಾರೆ.

ಹಾಗೆ ಪಾರಿಜಾತದಿಂದ ಹುಟ್ಟಿದ ಕತೆ ಪಾರಿಜಾತದ ಬಯಕೆ ಪೂರ್ಣವಾಗುವುದರಲ್ಲಿ ಪೂರ್ತಿಯಾಗುತ್ತದೆ. ಪರಿಜಾತದ ಹೂವೊಂದರ ಬದಲು ಗಿಡವೇ ಬರುತ್ತದೆ. ಹೀಗೆ ಕತೆಯ ಬೆಳವಣಿಗೆ ಮತ್ತು ಒಂದು ಆವರ್ತವಾಗಿ ಸಾರ್ಥಕವಾಗುತ್ತದೆ.

**೭. ರತಿಜನ್ಮ – (ಶಂಬರಾಸುರ ಕಾಳಗ)**

ಇದು ದೀರ್ಘವಾದ ಕಥನವನ್ನೊಳಗೊಂಡಿದೆ. ಇದರಲ್ಲಿ ೧) ರುಕ್ಮಿಣಿಯ ಸ್ವಪ್ನ, ಅಲ್ಲಿಂದ ಈಶ್ವರನಲ್ಲಿಗೆ ಹೋಗಿ ಮನ್ಮಥನ ಹುಟ್ಟಿಗೆ ಮೂಲವಾಗುವ ಘಟನೆ. ೨) ಘಂಟಾಕರ್ಣನ ಶಾಪವಿಮೋಚನೆ, ೩) ಕಾಶಿಯ ಅರಸ ಪೌಂಡ್ರಕವಧೆ ಘಟನೆ, ೪) ನಾರದನು ಶಂಬರಾಸುರನಿಗೆ ಮನ್ಮಥ ಜನನದ ಸಂಗತಿಯನ್ನು ತಿಳಿಸುವುದು ; ಮುಂದೆ ಆತನ ಅಂತ್ಯ.

ಹೀಗೆ ನಾಲ್ಕು ಘಟನೆಗಳಿದ್ದರೂ ಕೃಷ್ಣವಿವಾಹ ಪ್ರಸಂಗದಂತೆ ಪ್ರತಿಯೊಂದು ಘಟನೆಯೂ ಸ್ವತಂತ್ರ ಎಂಬಂತೆ ಹುಟ್ಟ ಬೆಳೆಯುತ್ತದೆ. ಕೃಷ್ಣಭಕ್ತಿ ಪಾರಮ್ಯವೇ ಇಲ್ಲಿ ಘಟನೆಗಳನ್ನು ಕೂಡಿಸುವ ಸೂತ್ರ. ಹಾಗಾಗುವುದರಿಂದ ಈ ದೀರ್ಘ ಪ್ರಸಂಗವನ್ನು ಬೇರೆ ಬೇರೆಯಾಗಿ ಮಿತವಾದ ಸಮಯದಲ್ಲಿ ಆಡಲು ಸಾಧ್ಯವಿದೆ. ಯಕ್ಷಗಾನ ಪ್ರಸಂಗವೆಂದರೆ ರಾತ್ರಿಯಿಡೀ ನಿದ್ದೆಗೆಟ್ಟು ನೋಡಬೇಕಾದುದು ಎಂಬುದನ್ನು ನಿವಾರಿಸಿ ಒಂದೊಂದೇ ಭಾಗವನ್ನು ಏಕಾಂಕ ನಾಟಕದಂತೆ ನೋಡಲು ಸಾಧ್ಯವಿದೆ. ಬಹುಶಃ ಮುಂದಿನ ದಿನಗಳಲ್ಲಿ ಇಂಥ ಪ್ರಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕುವ ಸಂಭವವಿದೆ.

'ಬಾಣಾಸುರ ಕಾಳಗ' ದಲ್ಲಿರುವಂತೆ ಇಲ್ಲಿಯೂ ಶೈವ-ವೈಷ್ಣವದ ಸಾಮರಸ್ಯತೆಯ ಪ್ರಸ್ತಾಪವಿದೆ. "ಕೇಳಿ ನೀವೆಲ್ಲಾ ಕಿವಿಗೊಟ್ಟು ಮಾತಾ ಪೇಳುವೆನಿದು ಸಿದ್ಧಾರ ಮುನಿವ್ರಾತ ಹರಿಯೆ ತಾ ಹರನಿಂದು ಹರನು ಶ್ರೀ ಹರಿಯೆಂದು ಮೆರೆವುತ್ತಲಿದೆ ಹರನು ಶ್ರುತಿ ಪರಮಂತ್ರಗಳಿಂದಾ" ಎಂದು ಕೃಷ್ಣ ಹೇಳುವ ಮಾತು ಮಹತ್ವದ್ದಾಗಿದೆ.

ಶಂಬರಾಸುರ ರಾಕ್ಷಸನಾದ್ದರಿಂದ ವಧಾರ್ಹ ಎನ್ನುವುದು ಮುಖ್ಯವಾಗುತ್ತದೆ. ಹಾಗಿದ್ದಾಗಲೂ ಆತ ತನ್ನ ಕೈಗೆ ಸಿಕ್ಕ ಮನ್ಮಥನನ್ನು ಕೊಲ್ಲುವುದಿಲ್ಲ. ಮಗಳ ವಿರಹ ದುಃಖವನ್ನು ಆತ ಸಹಿಸಲಾರ. ಆ ರಕ್ಕಸನ ಮನಸ್ಸು ಮಗಳಿಗಾಗಿ ಮಿಡಿಯುತ್ತದೆ. ಇದು ಮಾನವೀಯತೆಗೆ ಸಿಕ್ಕ ಗೆಲುವಾಗಿದೆ.

**೮. ಬಾಣಾಸುರ ಕಾಳಗ**

ಬಾಣಾಸುರನ ಅಂತ್ಯವೂ ಉಷಾಪರಿಣಯವೂ ಆಗುವ ಕಥಾಭಾಗವನ್ನೊಳಗೊಂಡಿದೆ. ಕನಕದಾಸರಮೋಹನ ತರಂಗಿಣಿಯ ಪ್ರಭಾವ ಕಥೆಯ ಆಯ್ಕೆಯ ಮೇಲಿದೆ ಎಂದು ಎನ್ನುತ್ತಾರೆ. ಅದೇನೇ ಇದ್ದರೂ ಕೃಷ್ಣ ಮಹಿಮೆಯ ಪಾರಂಪರ್ಯಕ್ಕೆ ಇಲ್ಲಿ ಕೊರತೆಯಾಗಿಲ್ಲ.

ಬಾಣನ ಆಶೆಯಂತೆ ಆತನಿಗೆ ಅಸುರವೈರಿ ಕೃಷ್ಣನೇ ಕೊನೆಗೆ ಗಂಟು ಬೀಳುತ್ತಾನೆ. ಬಾಣನ ಮನೆ ಬಾಗಿಲು ಕಾಯುವ ಈಶ್ವರನಿಗೂ, ಬಾಣನ ವೈರಿಯಾದ ಕೃಷ್ಣನಿಗೂ ಯುದ್ಧ ಗಂಟುಬೀಳುವ ರೋಚಕ ಘಟನೆ ಇಲ್ಲಿದೆ. ಈಶ್ವರನು ಶೂಲವನ್ನು ಅಸ್ತ್ರವನ್ನಾಗಿ ಉಪಯೋಗಿಸುವುದೂ ಕೃಷ್ಣ ಚಕ್ರವನ್ನು ಪ್ರತಿಯಾಗಿಸುವುದು ಕುತೂಹಲಕಾರಿಯಾಗಿದೆ. ಹೀಗೆ ಉಂಟಾದಾಗ ಆಕಾಶವಾಣಿ ಈಶನ ಶೂಲ, ಕೃಷ್ಣನ ಚಕ್ರದಿಂದ ಜಗತ್ತೆ ನಾಶವಾಗುವುದೆನ್ನುತ್ತದೆ. ಇದನ್ನು ಕೇಳಿದ ಈಶ್ವರ "ಸಿರಿವರನೆ ಕೇಳು ಸಂಗರ ಕೇಳಿಯೊಳಗೆ ನಾವಿರಲು ಮೂಜಗವೆಲ್ಲ ಉರಿದು ಪೋಪುದಲ್ಲೈ" ಎಂದು ತಾನು ಸೋಲುತ್ತೇನೆ ಎಂದು ಹಿಂದೆ ಸರಿಯುತ್ತಾನೆ. ಇಲ್ಲಿ ಈಶ್ವರನ ನಿರ್ಧಾರ ನಮ್ಮ ಇಂದಿನ ಜಾಗತಿಕ ಸ್ಥಿತಿಯಲ್ಲಿ ಹೆಚ್ಚು ಅರ್ಥಪೂರ್ಣವಾಗಿದೆ. ಅದೇ ಹೊತ್ತಿಗೆ ಕೃಷ್ಣನ ಉದ್ದೇಶ ಸುಗಮವಾಗಿ ವಿಷ್ಣು ಭಕ್ತಿ ಪಾರಮ್ಯ ಮೇಲುಗೈಯಾಗುತ್ತದೆ.

ಬಾಣನೊಡನೆ ಯುದ್ಧದಲ್ಲಿ ಸಹಸ್ರ ಬಾಹುವನ್ನು ಕಡಿದು ಇನ್ನೂ ಯುದ್ಧ ಮುಂದುವರಿಸಿದಾಗ ಈಶ್ವರ 'ಏಕೆ ನನ್ನ ಭಕ್ತನೊಡನೆ ಮುನಿಸು' ಎಂದು ಕೇಳಿದಾಗ ಕೃಷ್ಣ "ಚೆನ್ನಾಯ್ತು ಪೇಳ್ದ ಮಾತು ಪನ್ನಗಾಭರಣ ಕೇಳು ನಿನ್ನ ಹೊಂದಿದವರು ಜಗದೊಳೆನ್ನ ಭಕ್ತರು ಭಿನ್ನಭೇದವುಂಟೆ" ಎಂದು ಕೇಳುವ ಮಾತು ಮಾರ್ಮಿಕವಾಗಿದೆ. ಶೈವ ಮತ್ತು ವೈಷ್ಣವ ಪಂಥದ ಮಧ್ಯೆ ಇರುವ ಭೇದ-ದ್ವೇಷಗಳನ್ನು ಅಂತ್ಯಗೊಳಿಸುವ ಅಥವಾ ಸೌಮ್ಯಗೊಳಿಸುವ ಹರಿಹರ ಪ್ರತಿಮಾ ಸೃಷ್ಟಿಯ ಆಶಯ ಇಲ್ಲಿದ್ದುದು ಕೂಡ ಬಹಳ ಮುಖ್ಯ ಸಂಗತಿಯಾಗಿದ್ದು ಸಂದರ್ಭೋಚಿತವಾಗಿದೆ.

ಪ್ರಸಂಗಗಳ ಮಧ್ಯೆ ಅಡಗಿರುವ ಇಂಥ ಜನಪರವಾದ ಆಶಯವನ್ನು ಪ್ರದರ್ಶಿಸುವುದು. ಕಲಾವಿದರ ವಿವೇಚನೆಗೆ ವಸ್ತುವಾಗಬೇಕಾದ ಅವಶ್ಯಕತೆಯಿದೆ.

**೯. ನರಕಾಸುರವಧೆ**

ನರಕಾಸುರವಧೆ ಒಂದು ಕಿರು ಪ್ರಸಂಗ. ರಾತ್ರಿ ಬೆಳಗಾಗುವವರೆಗೂ 'ಆಟ' ನಡೆಯಬೇಕು. ಆದರೆ ಪ್ರಸ್ತುತ ಪ್ರಸಂಗ ಅಷ್ಟು ದೀರ್ಘ ಅವಧಿಯನ್ನು ಬಯಸುವುದಿಲ್ಲ. ಇಪ್ಪತ್ತು ಪುಟಗಳಷ್ಟು ಅಂದರೆ ಮೂರು ತಾಸಿನಲ್ಲಿ ಮುಗಿಸಬಹುದಾದ ಪ್ರಸಂಗ. ಇಂದಿನ ತುರ್ತಿಗೆ ತಕ್ಕಾದುದಾಗಿದೆ.

ಇದರಲ್ಲಿ ಎರಡೇ ಘಟನೆಗಳಿವೆ. ಒಂದು ನರಕಾಸುರ ಹತವಾಗುವ ಘಟನೆ. ಎರಡನೆಯದು ದೇವಲೋಕದಿಂದ ಭಾಮೆ ಪಾರಿಜಾತವನ್ನು ಭೂಮಿಗೆ ತರುವುದು. ಹೀಗೆ ಘಟನೆ ಕಡಿಮೆಯಾದರೂ ರಂಗದ ರೋಚಕತೆಗೆ ಕೊರತೆಯಾಗಲಿಲ್ಲ. ವೀರ, ಕರುಣೆ, ಶೃಂಗಾರ ಭಕ್ತಿ ಭಾವಗಳು ಸರಿದೊರೆಯಾಗಿ ಹರಿಯುತ್ತವೆ.

ಬಹಳ ಮುಖ್ಯವಾಗಿ ಗಮನಿಸಬೇಕಾದುದು ಇಲ್ಲಿಯ ಸಂಭಾಷಣೆಯ ತರ್ಕಬದ್ಧತೆ ಮುದನೀಡುವಂತಹದು. ಶಚಿಯನ್ನು ಅಪಹರಿಸಬಂದ ನವಿಯೊಡನೆಯ ಸಂಭಾಷಣೆಯಾಗಲಿ, ಭಾಮೆ-ಕೃಷ್ಣರ ಸಂಭಾಷಣೆಯಾಗಿಲಿ, ನರಕ ದೇವಲೋಕದ ಮೇಲೆ ಯುದ್ಧ ಸಾರುವ ಕಾರಣವಾಗಲಿ, ಹೆಚ್ಚು ಸುಸಂಬಂಧವಾಗಿರುವುದರಿಂದ ಸಂಭಾಷಣೆ ಚುರುಕುಗೊಳ್ಳುತ್ತದೆ. ಅಲ್ಲದೆ ಮನ ಸೆಳೆಯುತ್ತದೆ.

ಅಷ್ಟೇ ಮಹತ್ವದ ಸಂಗತಿಯೆಂದರೆ ಇಲ್ಲಿಯ ಪದ್ಯಗಳ ಸಹಜಸೌಂದರ್ಯ. ತಿಳಿನೀರ ಪ್ರವಾಹದಂತೆ ಇಲ್ಲಿಯ ಭಾಷಾ ಪ್ರವಾಹ ಹಾರ್ದಿಕವಾಗಿದೆ. ಪಾಂಡಿತ್ಯ ಪ್ರದರ್ಶನವೂ ಇಲ್ಲದ ನಿರ್ಲಕ್ಷಕ್ಕೂ ಒಳಗಾಗದ ಶೈಲಿ.

ನವಿಯ ಮಧ್ಯಪ್ರದೇಶದಿಂದ ದೇವತೆಗಳಿಗೆ ಬರುವ ಗಂಡಾಂತರದ ಮುಖ್ಯ ಸಂಗತಿಯ ಒಳನೋಟ ಸಿಕ್ಕುತ್ತದೆ. ನರಕನ ನಾಶಕ್ಕೆ ಬಲವಾದ ಕಾರಣವನ್ನು ಒದಗಿಸುತ್ತದೆ. ಶೂರ್ಪಣಖಿ ರಾಮ-ರಾವಣರ ಸಂದರ್ಭವನ್ನು ನೆನಪಿಸುತ್ತದೆ. ಕತೆಯ ಓಟಕ್ಕೆ ಎಲ್ಲೂ ತೊಡಕಿಲ್ಲ. ನೇರ ಒಂದಕ್ಕೊಂದು ಹೊಂದಿಕೊಂಡಿರುವಂತಹುದು. ಯಾವ ಪಾತ್ರವೂ ಹೆಚ್ಚು ಹೊತ್ತು ರಂಗದ ಮೇಲೆ ನಿಲ್ಲುವುದಿಲ್ಲ.

ಬಲಿಪ ನಾರಾಯಣ ಭಾತವತರು ನುರಿತ ಭಾಗವತರು. ಅನೇಕ ಪ್ರಸಂಗಗಳನ್ನು ರಂಗಕ್ಕೆ ತಕ್ಕಾಗಿ ಅಳವಡಿಸಿದ ಕುಶಲತೆ ಅವರಿಗಿದೆ. ಅಂಥ ನೈಪುಣ್ಯತೆ ಇಲ್ಲಿಯೂ ಇದೆ.

**೧೦. ಶ್ರೀಕೃಷ್ಣದಿನಾಶ್ವಮೇಧ**

'ಪ್ರಸಂಗ'ದ ಕೊನೆಯ ಪುಟದಲ್ಲಿ ಉಡುಪಿ ಸೋಮದೇವ ಮಠದ ರಾಜಗೋಪಾಲಾಚಾರ್ಯ ರಿಂದ ರಚಿಸಲ್ಪಟ್ಟ ಈ ಪುಸ್ತಕವು ಪಂಡಿತರಿಂದ ಪರಿಶೋಧಿಸಿ ಪಾವಂಜೆ ಗುರುರಾಜ್ ಇವರ ಉಡುಪಿ ಶ್ರೀಕೃಷ್ಣ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಸ್ವಕೀಯ ಉಡುಪಿ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಿಸಲ್ಪಟ್ಟಿತು. ಶಾ : ಶಕೆ ೧೮೫೦ "ಎಂದು ಇದೆ. ಇಲ್ಲಿ 'ಪಂಡಿತರಿಂದ ಪರಿಶೋಧಿಸಿ' ಎಂಬುದು ಮುಖ್ಯ. ಯಕ್ಷಗಾನ ಪ್ರಸಂಗಗಳು ಕೈಯಿಂದ ಕೈಗೆ ಬದಲಗುವುದೂ, ಆಗಾಗ ಪರಿಷ್ಕರಣಕ್ಕೆ ಒಳಗಾಗುವುದೂ ಉಂಟು. ಇದು ಯಕ್ಷಗಾನದ ಒಂದು ವೈಶಿಷ್ಟ್ಯ ಕೂಡ. ಇಲ್ಲಿ ಪಂಡಿತರಿಂದ ಇದು ಪರಿಶೋಧಿಸಿದೆ. ಅಥವಾ ರಚನೆಗೆ ಮೊದಲಿನಂತೇ ಇದ್ದಿರಬಹುದು. ಅದೇನೇ ಇದ್ದರೂ ಶಬ್ದಪ್ರಯೋಗದ ದೃಷ್ಟಿಯಿಂದ ಕಾಠಿಣ್ಯತೆ ತಲೆ ಹಾಕಿರುವುದಂತೂ ಹೌದು. ಅಂದರೆ ಈ ರಚನೆಯ ಎದುರು ಸಾಮಾನ್ಯ ಪ್ರೇಕ್ಷಕರು ಮಾತ್ರ ಇದ್ದಿರಲಿಲ್ಲ. ಕವಿಗೆ ತನ್ನ ಪಾಂಡಿತ್ಯ ಬಗ್ಗೂ ಕಾಳಜಿ ಇತ್ತು ಎಂದಾಯಿತು. ಆದ್ದರಿಂದ ಇಲ್ಲಿಯ ಶಬ್ದಪ್ರಯೋಗ ಪ್ರಜ್ಞಾಪೂರಕವಾದುದು. ಆದ್ದರಿಂದಲೇ ಕಠಿಣ ಶಬ್ದಗಳಿಗೆ ಅರ್ಥ ಸೂಚಿಸುವ ಹೊಸದೊಂದು ಉಪಕ್ರಮ ಇಲ್ಲಿಯದಾಗಿದೆ. ಈ ಕ್ರಮ ಸ್ವಾಗತಾರ್ಹವೂ ಹೌದು.

**ಸಮಾರೋಪ :**

ಭಾಗವತ ಪ್ರಸಂಗಗಳು ಕೃಷ್ಣ ಮಹಿಮೆಯನ್ನು ಸಾರಲೆಂದೇ ಬಂದವು. ಅನೇಕ ರಸಕ್ಷಣಗಳ ಸಾಕ್ಷಾತ್ಕಾರಕ್ಕೆ ಆಶ್ರಯ ಕೊಡುವುದು ಹೌದಾದರೂ ಅಂತಿಮವಾಗಿ ಭಕ್ತಿಯ ಸಾಕ್ಷಾತ್ಕಾರವೇ ಮುಖ್ಯ. ಆದ್ದರಿಂದ ಇಲ್ಲಿ ಗೋಪಿಯರ ವಿರಹ ಅನೀತಿಯಾಗುವುದಿಲ್ಲ. ಯಾಕೆಂದರೆ ಭಾಗವತ (ಭಕ್ತಿ) ಭಾವದಲ್ಲಿ ಸಖ-ಸಖಿಭಾವ ಒಂದು ವಿಧಾನ, ಒಂದು ರೂಪಕ.

ಹಾಗೆಯೇ ಇಂಥ ಹೆಚ್ಚಿನ ಪ್ರಸಂಗಗಳೆಲ್ಲ ಉಡುಪಿಯಲ್ಲೇ ಮುದ್ರಣಗೊಂಡಿರುವುದಕ್ಕೂ ಪ್ರಸಂಗಗಳ ಮೂಲಕ ಶ್ರೀಕೃಷ್ಣ ಭಕ್ತಿಯೇ ಪ್ರತಿಪಾದನೆಯ ಕೇಂದ್ರವಾಗುವುದಕ್ಕೂ ಚಾರಿತ್ರಿಕವಾದ ಮತ್ತು ಸಾಂಸ್ಕೃತಿಕವಾದ ಸಂಬಂಧ ಕೂಡ ಉಂಟು. ಅಂಥ ಭಾಗವತ ಭಕ್ತಿ ಕೇಂದ್ರವಾಗಿರುವುದಕ್ಕೆ ಉಡುಪಿಯೇ ಕೇಂದ್ರ ; ಮಠ ಅದರ ಆಶ್ರಯ.

ಈ ಭಾಗವತ ಭಕ್ತಿ ವಿಷ್ಣು ಭಕ್ತಿಯೇ ಆಗಿರುತ್ತದೆ. ಶಿವ ಭಕ್ತಿಯಾಗಿರುವುದಿಲ್ಲ. ಒಂದು ವೇಳೆ ಶಿವ ಬಂದರೂ ಆತ ಖಂಡನೆಗೆ ಗುರಿಯಾಗುತ್ತಾನೆ. ಅದಲ್ಲದಿದ್ದರೂ ವಿಷ್ಣುಭಕ್ತಿಯೇ ಬಲಶಾಲಿಯಾಗುತ್ತದೆ. ಇದಕ್ಕೆ 'ಕೃಷ್ಣದಿನಾಶ್ವಮೇಧ'ದಲ್ಲಿ ಮಾಗಧ 'ಶಂಭುಭಕ್ತನಹೆನು ನಾನು' ಎಂದು ಹೇಳಿಕೊಂಡರೆ ಭೀಮ, "ಹರಿಯ ಭಕ್ತನಹೆನುನಾನು ದುರುಳ ನೊಡೆಲಾ ಹರನ ಭಜಕ ನೀನು ನಮಗೆ ಗಣ್ಯವೇನಲಾ" ಎಂದು ಹಂಗಿಸುವ ಮಾತು ಸಾಕ್ಷಿಯಾಗಿದೆ.

ಅದೇನೇ ಇದ್ದರೂ ಮಧ್ಯಕಾಲೀನ ಊಳಿಗಮಾನ್ಯ ವ್ಯವಸ್ಥೆಯ ಸಂದರ್ಭದಲ್ಲಿ ಈ ಭಕ್ತಿ ಭಾಗವತ ಪಂಥ ವ್ಯವಸ್ಥೆಗೆ ಪೋಷಕವಾಗಿ ನಿಂತೇ ಅಂದಿನ ಮಹಿಳೆಯರನ್ನೊಳಗೊಂಡು ಜನಸಾಮಾನ್ಯರಿಗೆ ನೀತಿ ಶಿಕ್ಷಣದ ಮಾಧ್ಯಮವಾಗಿ ಕೆಲಸ ಮಾಡಿದ್ದು ನಿಜವಾಗಿದೆ. ಅದರ ಬಹಳ ಶಕ್ತಿಯುತ ಮಾಧ್ಯಮವಾಗಿ ಭಾಗವತ ಯಕ್ಷಗಾನ ಪ್ರಸಂಗಗಳು ಕೆಲಸ ಮಾಡಿದವು.

ಭಾಷಿಕ ದೃಷ್ಟಿಯಿಂದ ನೋಡಿದಾಗಲೂ ಬೇರೆ ವೈಶಿಷ್ಟ್ಯಗಳು ಕಾಣಬರುತ್ತದೆ. ಉದಾ : ತತ್ಸಮ-ತದ್ಭವಗಳು, ಘೋಷ-ಗೋಶ ; ನಿಮಿಷ-ನಿಮುಶ ; ಮಧುರ-ಮದುರ ; ಭೂಸುರ-ಬೂಸುರ ; ಪುರುಷ - ಪುರುಶ ; ಸಂತೋಷ-ಸಂತೋಶ ; ಧರೆ-ದರೆ ; ಘನತರ-

ಗನತರ ; ವಿಧವಿಧಾನ-ವಿದವಿಧಾನ ; ಖಳ-ಕಳ ; ಗೃಹ-ಗ್ರಹ ; ಇಚ್ಛೆ-ಇಚ್ಚೆ ; ವೀರಾಧಿವೀರ-ವೀರಾದಿವೀರ ; ನೆಂಟತನಕ್ಕೆ ನೆಂಟತೆ ಇವೇ ಮುಂತಾದವುಗಳನ್ನು ಗಮನಿಸಬಹುದಾಗಿದೆ.

ಉದ್ದೇಶ ಇಷ್ಟೇ ಎಂದು ಹೇಳಲಾಗದು. ಯಾಕೆಂದರೆ ಯಕ್ಷಗಾನ ಪ್ರಸಂಗಗಳು ಒಂದು ಸಾಮೂಹಿಕ ರಂಗ ಕೃತಿಯಾಗಿ - ರಂಗಕಲೆಯಾಗಿ ಬೆಳೆದುಬಂದು ಒಂದು ಅದ್ಭುತ ಸಾಂಸ್ಕೃತಿಕ ಕೊಡುಗೆಯಾಗಿದೆ.

**ಕೃತಜ್ಞತೆ :**

ಈ ಸಂಪುಟವನ್ನು ಮಿತವಾದ ಅವಧಿಯಲ್ಲಿ ಸಿದ್ಧಪಡಿಸುವಾಗ ಅನೇಕ ಮಹನಿಯರ ಸಹಾಯ ಯಾಚಿಸಬೇಕಾಯಿತು. ಅವರಲ್ಲಿ ಕೆಲವರನ್ನಾದರೂ ನೆನೆದುಕೊಳ್ಳದೇ ಇರಲಾರೆ. ಗೆಳೆಯರಾದ ಎನ್.ಆರ್.ಯಾಜಿ ಅವರು ಸಜ್ಜನರು, ಬ್ಯಾಂಕ್ ಮ್ಯಾನೇಜರರು, ಯಕ್ಷಗಾನ ಪ್ರಿಯರು. ಡಾ. ಪಾದೇಕಲ್ ವಿಷ್ಣುಭಟ್ಟರ ಸ್ನೇಹ ದೊಡ್ಡದು. ಸಹಾಯವೂ ದೊಡ್ಡದು. ತಮ್ಮದೇ ಕೆಲಸ ಎಂಬಂತೆ ಸಹಕರಿಸಿದ್ದಾರೆ. ಡಾ.ಜಿ.ಎಸ್. ಭಟ್ಟ ಸಾಗರ, ಅವರು ಕೂಡ ಹಾಗೇ ನಿರ್ವ್ಯಾಜ ಪ್ರೀತಿಯಿಂದ ಸಹಾಯ ಮಾಡಿದ್ದಾರೆ. ಕಟೀಲಿನ ಶ್ರೀನಿವಾಸ ಭಟ್ಟರ ಉಪಕಾರ ಅಷ್ಟಿಷ್ಟಲ್ಲ. ಇನ್ನೂ ಪರಸ್ಪರ ನೋಡಿರದಿದ್ದರೂ ಯಕ್ಷಗಾನ ಪ್ರಿಯರಾದ ಅವರು ನಾನು ಕೇಳಿದ್ದೆಲ್ಲಕ್ಕೆ ಸಹಕರಿಸಿದ್ದಾರೆ.

ಇತರ ಸಲಹೆ ಸಹಕಾರ ಇತ್ತವರು ಜಾನಪದ ವಿದ್ವಾಂಸ ಡಾ.ಎನ್.ಆರ್. ನಾಯಕರು ಮುಖ್ಯ ಸಂಪಾದಕರು ಶಂಭು ಹೆಗಡೆಯವರು ಮತ್ತು ಇತರ ಸದಸ್ಯರು. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

***– ಆರ್.ವಿ. ಭಂಡಾರಿ***

# ಕಥಾ ಸಾರಾಂಶ

**೧. ಕೃಷ್ಣ ಚರಿತೆ**

ದ್ವಾಪರಯುಗದಲ್ಲಿ ಭೂಮಿಯಲ್ಲಿ ರಾಕ್ಷಸರ ಉಪಟಳವು ಜಾಸ್ತಿಯಾಗಲು ಅದನ್ನು ತಾಳಲಾರದೆ ಭೂಮಿ ಗೋವಿನ ರೂಪವನ್ನು ಧರಿಸಿ ಬಂದು ಬ್ರಹ್ಮನಲ್ಲಿ ಮೊರೆಯಿಡಲು ಬ್ರಹ್ಮ ದೇವತೆಗಳನ್ನು ಕೂಡಿಕೊಂಡು ಸತ್ಯಲೋಕಕ್ಕೆ ಬರುತ್ತಾನೆ. ಅವರ ಮೊರೆಯನ್ನು ಕೇಳಿದ ವಿಷ್ಣುವು ತಾನು ಗೋಕುಲದಲ್ಲಿ ಹುಟ್ಟಿ ದುಷ್ಟರನ್ನು ನಾಶ ಮಾಡಿ ಕಷ್ಟ ನಿವಾರಿಸುವುದಾಗಿ ಭರವಸೆಯನೀಯುತ್ತಾನೆ. ಬ್ರಹ್ಮನು ಇನ್ನು ದುಃಖಿಸಬೇಕಿಲ್ಲವೆಂದೂ ದುಷ್ಟರು ನಾಶವಾಗಿ ಸತ್ಯಯುಗವು ಪ್ರಾರಂಭವಾಗುತ್ತದೆಂದು ಭೂದೇವಿಯನ್ನು ಸಂತೈಸುತ್ತಾನೆ.

ಇತ್ತ ಮಧುರೆಯಲ್ಲಿ ಉಗ್ರಸೇನನ ಮಗನಾದ ಕಂಸನೆಂಬ ರಾಕ್ಷಸನು ತನ್ನ ರಕ್ಕಸ ಮಿತ್ರನೊಡನೆ ಕೂಡಿ ದುರುಳನ ಗುರುವಿನಂತಾಗಿ ರಾಜ್ಯವಾಳುತ್ತಿದ್ದನು. ಹೀಗಿರುವಾಗ ಕಂಸನಿಗೆ ಓರ್ವ ತಂಗಿಯಿದ್ದಳು. (ದೊಡ್ಡ ತಂದೆ ದೇವಕನ ಮಗಳು) ಅವಳು ಸುಂದರಿಯಾಗಿದ್ದಳು. ಅವಳಿಗೆ ತಾರುಣ್ಯ ಬಂದೊದಗಲು ಶೂರುಸೇನನ ಮಗನಾದ ವಸುದೇವನು ಸದ್ಗುಣಭರಿತನಾಗಿ, ಸ್ಮರನ ಲಾವಣ್ಯದಂತೆ ಸುಂದರನಾಗಿಯೂ ಇರುವಾತನಿಗೆ ಮದುವೆ ಮಾಡಿಕೊಡುವುದನ್ನು ನಿಶ್ಚಯಿಸಿ ಕಂಸನಿಗೆ ಹೇಳಲು ಕಂಸನು ಬಹು ಸಂತೋಷದಿಂದಲೂ, ವಿಜ್ರಂಭಣೆಯಿಂದಲೂ ನೆರವೇರಿಸಿದನು. ಬೇಕುಬೇಕಾದ ದಾನದಕ್ಷಿಣೆಗಳನ್ನು ಕೊಟ್ಟನು. ಹೇರಳವಾಗಿ ಬಳುವಳಿಯನ್ನೂ ಕೊಟ್ಟನು. ವಸುದೇವ ದೇವಕಿಯನ್ನು ಬಹಳ ಸಂತೋಷದಿಂದ ಮಣಿಮಯ ರಥದಲ್ಲಿ ಕೂಡ್ರಿಸಿ ಕಂಸನು ತಾನೆ ಸಾರಥ್ಯವನ್ನು ವಹಿಸಿ ಮೆರವಣಿಗೆ ಹೋಗುತ್ತಿರುವಾಗ ಒಂದು ಭಯಂಕರ ಘಟನೆ ನಡೆದು ಹೋಯಿತು. “ಕೇಳೆಲವೋ ಖಳ ತಂಗಿಯ ಮೇಲೆ ಮೋಹವ ಮಾಳ್ಪ ನಿನಗೆ ಇವಳ ಎಂಟನೆಯ ಗರ್ಭದಲ್ಲಿ ವಿಷ್ಣುವು ಅವತರಿಸಿ ಬಲು ರಾಕ್ಷಸರನ್ನು ಕೊಂದು ನಿನ್ನನು ಸೀಳಿ

ಹಾಕುವನು' ಎಂದು ಅಶರೀರವಾಣಿ ಕೇಳಿಬಂತು. ಇದರಿಂದ ಖತಿಗೊಂಡ ಕಂಸ ತನ್ನ ಖಡ್ಗವನ್ನು ತೆಗೆದು ದೇವಕಿಯನ್ನು ಸಂಹರಿಸಲು ಹೊರಟಾಗ ಇದನ್ನು ಕಂಡು ವಸುದೇವನು ನಡಗುತ್ತಲೇ ಇವಳನ್ನು ಕೊಲೆ ಮಾಡುವದು ಉಚಿತವಲ್ಲ. ಇದರಿಂದ ನಿನ್ನ ಮಾನ ಹೋಗುತ್ತದೆ. ಒಳ್ಳೆಯದಾಗುವುದಿಲ್ಲ ಮುಂತಾಗಿ ಬುದ್ಧಿ ಹೇಳಿದ್ದನ್ನು ಕೇಳಿ ಕೆರಳಿ ತನಗೆ ನಿನ್ನ ಉಪದೇಶ ಬೇಡ ಎಂದು ಹೇಳಿದಾಗ ಮತ್ತೆ ವಸುದೇವನು "ಕೇಳೀ ಸತಿ ಪೆತ್ತಂದಿಗೆ ತನಗುದಿಸಿದ ಪುತ್ರಂದಿರನ್ನೆಲ್ಲರ ತಂದಿತ್ತಂದಿಗೆ ನಿನ್ನ ಚಿತ್ತದ ಭಯವ ಸಾಗಿಸುವೆನು" ಎಂದು ಭರವಸೆ ಕೊಡುತ್ತಾನೆ. ಇದರಿಂದ ದೇವಕಿಯ ಜೀವ ತೆಗೆಯದೆ ಅವರನ್ನು ಸೆರೆಮನೆಯಲ್ಲಿ ಇಡುತ್ತಾನೆ. ಹೀಗೆ ದಿನ ಹೋದಾಗ ದೇವಕಿ ಮಗುವನ್ನು ಹಡೆಯುತ್ತಾಳೆ. ವಸುದೇವನು ಆ ಶಿಶುವನ್ನು ಕಂಸನಿಗೆ ತಂದೊಪ್ಪಿಸಲು ಏಳು ಪರಿಯಂತರವು ತನಗೆ ಯೋಚನೆಯಿಲ್ಲ' ಎಂದು ಹೇಳಿ ಎಂಟನೆಯ ಶಿಶುವನ್ನು ತಂದುಕೊಟ್ಟರೆ ಸಾಕು ಎನ್ನುತ್ತಾನೆ. ತುಸುವೇ ಕಾಲದಲ್ಲಿ ನಾರದನು ಬಂದು ಹೀಗೆ ಎಂಟನೆಯ ಗರ್ಭವನ್ನೇ ನಂಬಿರುವುದು ಸರಿಯಲ್ಲ. ಹರಿಯ ಕಪಟವನ್ನು ತಿಳಿಯಲಾಗದು ಎಂದು ಬೋಧನೆ ಮಾಡಲು ಎಲ್ಲಾ ಶಿಶುಗಳನ್ನು ಸಂಹರಿಸುತ್ತಾನೆ. ದೇವಕಿ ಬಹಳ ದುಃಖದಿಂದಿರುತ್ತಾಳೆ.

ಹೀಗೆ ಕಾಲ ಹೋಗುತ್ತಿರುವಾಗ ದೇವಕಿಗೆ ವಿಷ್ಣು ಹುಟ್ಟುವುನೆಂಬ ವಾರ್ತೆಯನ್ನು ತಿಳಿಸಲೋಸುಗ ಓರ್ವ ಕೊರವಂಜಿ ಬರುತ್ತಾಳೆ. ಇಂಥ ಕೊರವಂಜಿ ಊರೂರು, ಲೋಕ ಲೋಕ ತಿರುಗುತ್ತ ಮಧುರಾ ಪಟ್ಟಣಕ್ಕೆ ಬರುತ್ತಾಳೆ. ದೇವಕಿ ಯಾವ ದೇಶದಿಂದ ಬಂದೆ - ನನಗೆ ಸಂತೋಷವಾಯಿತು. ಒಂದು ಪ್ರಶ್ನೆಯನ್ನು (ನಿಮಿತ್ತ) ಹೇಳು. ನನ್ನ ಬಾಳು ದುಃಖಮಯವಾಗಿದೆ. ಮರಿ ಕೋಗಿಲೆಯಂತಾದೆನಲ್ಲ" ಎಂದು ಚಿಂತಿಸುತ್ತಾಳೆ. ಕೈನೋಡಿದ ಕೊರವಂಜಿ ನಿನ್ನಂಥ ಭಾಗ್ಯವಂತಲಾರಿಲ್ಲ' ನಿನ್ನ ಉದರದಲ್ಲಿ ಗೋವಿಂದನು ಹುಟ್ಟುತ್ತಾನೆ. ಆತ ಕಂಸಾದಿಗಳನ್ನು ಕೊಂದು ಉಗ್ರಸೇನನಿಗೆ (ತಂದೆಯನ್ನು ಕಂಸ ಸೆರೆಮನೆಯಲ್ಲಿಟ್ಟು ತಾನೇ ರಾಜ್ಯವಾಳುತ್ತಿದ್ದನು) ಪಟ್ಟಕಟ್ಟುತ್ತಾನೆ. ಎಂದು ಮುಂತಾಗಿ ಭರವಸೆ ಕೊಡುತ್ತಾಳೆ. 'ಎಷ್ಟು ಹೇಳಿದರು ಮನವು ತುಷ್ಟಿ ಹೊಂದದಮ್ಮ ವಂಶ ವೃದ್ಧಿಯಾಗದಂತೆ ಕಂಸನೆನ್ನ ಸುತರ ಹಿಂಸಿಸಿ ಕೊಲ್ಲುವನೆಂಬ" ಸತ್ಯ ಅರಿತು ಬಾಳುತ್ತಿದ್ದೇನೆ ಎಂದು ದುಃಖತೋಡಿಕೊಂಡಾಗ ಧೈರ್ಯತಾಳು. ಹಿಂದೆ ಸೀತೆಯೂ ದಮಯಂತಿಯೂ ಅನೇಕ ದುಃಖದಿಂದ ಬಾಳಿದರು ಇತ್ಯಾದಿ ಸಾಂತ್ವನ ಹೇಳುತ್ತಾಳೆ. ಹೀಗೆ ಮಂಗಳವನ್ನು ಹೇಳಿದ ಕೊಂರವಂಜಿಗೆ ವಿವಿಧ ವಸ್ತುಗಳನ್ನಿತ್ತು ತೃಪ್ತಿಪಡಿಸಿ ಕಳಿಸುತ್ತಾಳೆ.

ಹರಿ ಗೋವಿಂದ ಎನ್ನುತ್ತ ದೇವಕಿ ಸೆರೆಮನೆಯೊಳಿರುವಾಗ ಎಂಟನೆಯ ಗರ್ಭ ಧರಿಸುತ್ತಾಳೆ. ಈ ಸುದ್ದಿಯನ್ನು ಕೇಳಿದ ಕಂಸ ಚಿಂತಿತನಾಗುತ್ತಾನೆ. "ಹರಿಯು ಬಹು ಕಪಟಿಗನು ಮೈಮರೆದಿರಲು ಬಾರದೆನುತ್ತ ತಾನೇ ಸೆರೆಮನೆಯೊಳಿರ್ದಂತೆ ಕಾದಿರಲಿರುಳು ಹಗಲು" ದೇವಕಿಯ ಶರೀರ ಬೆಳವಣಿಗೆಯನ್ನು ನೋಡಿದ ಕಂಸ ಇದೇ ಹರಿಯ ಗರ್ಭ ಎಂದು ತಿಳಿದು ಎಚ್ಚರದಿಂದ ಇರುತ್ತಾ ದೇವಕಿಗೆ ನವಮಾಸ ಭರಿತವಾಯಿತು. ಶ್ರಾವಣಮಾಸದ ಕೃಷ್ಣಪಕ್ಷದಲ್ಲಿ ಕೃಷ್ಣ ಹುಟ್ಟಿದ್ದನ್ನು ತಿಳಿದು ದೇವತೆಗಳು ಜಯಕಾರ ಮಾಡಿದರು. ದೇವಕಿಯು ಬಲು ದುಃಖದಿಂದ ಹರಿಯನ್ನು ಧ್ಯಾನಿಸಿದಳು. "ಕಂಸ ದೈತ್ಯನು ; ಕಡುಕೋಪಿ, ಕಂಡರೆ ನಿನ್ನ ಹಿಂಸೆ ಮಾಡದುಳಿಯನು ಪಾಪಿ. ನೋಡಲು ನಮ್ಮ ವಂಶದೊಳೆಲ್ಲ ಸುಪ್ರತಾಪಿ ಹೊತ್ತಿಲ್ಲವು ಕಾಯೋ ಹಂಸವಾಹನ ಪಿತ ನೀಂ ಸರ್ವೋತ್ತಮ" ಎಂದು ನೆನೆಸುತ್ತಿದ್ದಳು.

ಹೀಗೆ ಮೊರೆ ಹೋಗುತ್ತಿರುವಾಗ ಶಿಶು ಬಾಯಿ ತೆರೆದು 'ಇದೇ ಹೊತ್ತಿಗೆ ನಂದಗೋಕುಲದಲ್ಲಿ ಯಶೋದೆಗೆ ಮಾಯೆಯು ಮಗಳಾಗಿ ಹುಟ್ಟಿದ್ದಾಳೆ. ಕೂಡಲೇ ನನ್ನನ್ನು ತೆಗೆದುಕೊಂಡು ಹೋಗಿ ಅಲ್ಲಿಟ್ಟು ಆ ಶಿಶುವನ್ನು ಇಲ್ಲಿ ತಂದಿಡಿ' ಎಂದಿತು.

ಈ ಮಾತು ಬಂದ ತಕ್ಷಣ ಸತಿ ಪತಿಯರ ಕಾಲಿನ ಬಂಧನ ಕಳಚಿ ಹೋಯಿತು. ಶಿಶುವನ್ನು ಹೊತ್ತುಕೊಂಡು ವಸುದೇವನು ಹೊರಟನು. ಕಾರುಕತ್ತಲೆ ; ಒಂದೇ ಸವನೆ ಮಳೆ. ಬಾಗಿಲಿಗೆ ಬರಲು ಬಾಗಿಲು ತೆಗೆದುಕೊಂಡಿತು. ಭಯಂಕರ ಮಳೆ ಬೀಳುತ್ತಿರಲು ಒಡೆಯ ಕೋಪಿಸಿಗೊಳ್ಳಬಾರದೆಂದು ಮಹಾಶೇಷ (ಸರ್ಪ)ವು ಕೊಡೆಯಂತೆ ಹೆಡೆಯರಳಿಸಿ ಹಿಂದೆ ಬಂತು. ತುಂಬಿ ಹರಿಯುವ ಯಮುನೆ ಕೈಮುಗಿದು ಮುಂದೆ ಹೋಗಲು ದಾರಿ ಮಾಡಿಕೊಟ್ಟಿತು. ವಸುದೇವನು ಯಶೋದೆಯ ಅಂತಃಪುರವನ್ನು ಪ್ರವೇಶಿಸಿ ಶಿಶು ಕೃಷ್ಣನನ್ನು ಅಲ್ಲಿ ಮಲಗಿಸಿ ಶಿಶುಮಾಯೆಯನ್ನು ಹಿಂದಕ್ಕೆ ತಂದನು.

ಸೆರೆಮನೆಯಲ್ಲಿ ಮಾಯಾ ಶಿಶುವು ಚೀರಿದ್ದನ್ನು ಕೇಳಿ ಕಂಸನು "ಪುಟ್ಟಿದನು ಪಗೆಯೆಂದು ಮನದಲಿ ಬಿಟ್ಟ ಮಂಡೆಯೊಳೊದರಿ ಬುಸುಗುಟ್ಟುತೇಳುತ ಬೀಳುತಲೆ ಕಂಗೆಟ್ಟು ಭರದಿ" ಬಂದು ಶಿಶು ಕೊಡೆಂದು ಆರ್ಭಟಿಸಿದನು.

ಶಿಶುವನ್ನು ಕೊಟ್ಟ ದೇವಕಿ ಶಿಶುವನ್ನು ಕೊಲ್ಲವುದು ತರವಲ್ಲವೆಂದು ವಿಧವಿಧವಾಗಿ ಬೇಡಿಕೊಂಡಳು. ಭವಿಷ್ಯವಾಣಿ ಗಂಡು ಶಿಶು ನಿನ್ನ ಕೊಲ್ಲುತ್ತದೆ ಎಂದು ಹೇಳಿತ್ತು. ಇದು ಹೆಣ್ಣು ; ಇದೊಂದನ್ನು ಬಿಡು ಎಂದು ಹೇಳುತ್ತಿರುವಾಗಲೇ ಶಿಶುವನ್ನು ಎಳೆದು ಅಪ್ಪಳಿಸುತ್ತಾನೆ. ಕೂಡಲೇ ಆಶರೀರವಾಣಿಯೊಂದು ಮೊಳಗಿ "ಎಲೆ ಪಾಪಿ ಕೇಳು, ನೀನೆನ್ನ ಕೊಲ್ಲುವುದಕ್ಕೆ ಗಂಟಲೊಳಿಳಿವ ತುತ್ತಲ್ಲ' ನಿನ್ನ ವೈರಿ ಭೂಮಿಯಲ್ಲಿ ಬೆಳೆವುತಿರುವನು, ಕೊಲ್ಲದಿರ"ನೆಂದು ಹೇಳುತ್ತದೆ.

ಇದರಿಂದ ದುಃಖಿತನಾದ ಕಂಸ ನಾರದರ ಮಾತೆಲ್ಲ ಸುಳ್ಳಾದ ಬಗ್ಗೆ ನೆನೆಸುತ್ತ, ಭೂಮಿಯಲ್ಲಿರುವ ಶಿಶುಗಳನ್ನೆಲ್ಲ ಸಂಹರಿಸಲು ಅಪ್ಪಣೆ ಮಾಡುತ್ತಾನೆ. ಹಾಗೆಯೇ ವಸುದೇವ ದೇವಕಿಯರನ್ನು ಸೆರೆಯಿಂದ ಬಿಡುಗಡೆ ಮಾಡುತ್ತಾನೆ.

ಮಂತ್ರಿಗಳನ್ನು ಕರೆದು ಕೇಳಿದಾಗಲೂ ಗೋದ್ವಿಜರನ್ನು ಬಡಿದು ಎಲ್ಲ ಶಿಶುಗಳನ್ನು ಕೊಲ್ಲುವ ಸಲಹೆ ಕೊಡುತ್ತಾರೆ. ಕಂಸ ಹೀಗೆ ನಿಶ್ಚಯಿಸುತ್ತಿರುವಾಗ ಗೋಕುಲದಲ್ಲಿ "ಮಹಿಳೆಯರ್ ಬರುತಳುವ ಬಾಲನಂ ಕಾಣುತ್ತಲಹಹ ಸಿರಿವಂತೆ ನಮ್ಮೊಡತಿ" ಎಂಬ ಮಾತುಗಳನ್ನು ಕೇಳಿ ನಂದ ಯಶೋದೆಯರು ಸಂತೋಷ ಹೊಂದುತ್ತಾರೆ. ದನಕರುಗಳ ದಾನ ಕೊಡುತ್ತಾರೆ. ಇವೇ ಮುಂತಾಗಿ ಸುದ್ದಿ ತಿಳಿದ ಕಂಸ ಭಯದಿಂದ ಪೂತನಿಯನ್ನು ಕರೆದು ಎದೆ ಹಾಲನ್ನು ಕೊಟ್ಟು ಲೋಕದ ಶಿಶುಗಳನ್ನು ಕೊಲ್ಲಲು ಹೇಳುತ್ತಾನೆ. ಇದ ಕೇಳಿದ ಪೂತನಿ ಸುಂದರ ಸ್ತ್ರೀಯಾಗಿ ಪರಿವರ್ತನೆ ಹೊಂದಿ, ಕೃಷ್ಣನ ಕೊಲ್ಲುವೆನೆಂದು ನಂದನ ಮನೆಗೆ ಬರುತ್ತಾಳೆ. ಮಲೆತು ಮಲಗಿದ್ದ ಶಿಶಿವನ್ನು ಎತ್ತಿಕೊಂಡು ವಿಷದ ಹಾಲುಣಿಸುತ್ತಾಳೆ. ಸೋಕಿದರೆ ಮೈಯೊಡೆವ ವಿಷವ ಬಾಯಿಂದ ಉಗುಳುತ್ತ ಮೊಲೆ ಹೀರುತ್ತಾನೆ. ಪೂತನಿಗೆ ನೋವು ಶುರುವಾಗುತ್ತದೆ. ರಕ್ತ ಹೀರುತ್ತ ಹೋಗುತ್ತಾನೆ ಕೃಷ್ಣ "ದಮ್ಮಯ್ಯ ಕೊಲದಿರು ಬಿಡು ಕಂದ ತೊತ್ತಾಗುವೆ ಕಣ್‌ಗತ್ತಲೆ ಬರುತಿದೆ" ಎಂದು ಒದರುತ್ತಾಳೆ. "ನಾ ಕೆಟ್ಟೆನೆನುತ ಬಾಯಾರಿ ಬಸವಳಿದು, ಮಗುವಲ್ಲದೀ ಮಾರಿ" ಎಂದು ಅಬ್ಬರಿಸುತ್ತ ಭೀಕರಾಕೃತಿಯನ್ನು ತಳೆದು "ಮಿಗೆ ಬಿದ್ದಳಸುರೆ ತಾನೈದು ಯೋಜನ ಉದ್ದವಗಲದು ನಗರಕಿದಿರಾಗಿ".

ಕೃಷ್ಣನಿಗೆ ವಿಷವೇರಿದೆಯೆಂದು ವಿವಿಧವಾದ ಔಷಧಿಯನ್ನು ಕೊಟ್ಟು ಉಪಚರಿಸುತ್ತಾರೆ. ಪೂತನಿಯನ್ನು ಕೊಂದ ಮೇಲೆ ಶಟಕಾಸುರನೆಂಬ ಹಾಗೆಯೇ ಧೇನುಕನೇ ಮೊದಲಾದ ರಾಕ್ಷಸರನ್ನು ಕೊಂದ ಬಲರಾಮ ಕೃಷ್ಣರಿಗೆ ತೊಟ್ಟಿಲೊಳಿಟ್ಟು ತೂಗಿದರು. "ಜೋಜೋ ದೇವಾದಿದೇವ ಮುಕುಂದ ಜೋಜೋ ಗೋಪಿಯ ಕಂದ" ಮುಂತಾಗಿ ಹಾಡಿ ಮುದಗೊಳಿಸುತ್ತಿದ್ದರು. ಹೀಗಿರುತ್ತ ಕೃಷ್ಣ-ಬಲರಾಮರು ವಿವಿಧ ಬಾಲಲೀಲೆಯನ್ನು ತೋರಿದರು.

"ಮೆಲ್ಲ ಮೆಲ್ಲಡಿಯಿಡುತ್ತ ಪಶುಪಾಲಕರ ಸ್ನೇಹದಲ್ಲಿ ಗೋವ್ಗಳ ಮೇಯಿಸುತ್ತ" ಇರುವಾಗ ಮೊಸರು ಮಾರಲು ಬಂದ ಗೋಪಿಕೆಯರೊಡನೆ "ಕೊಟ್ಟು ವೋಗೆನ್ನ ಸುಂಕವ ಕಣ್ಣಬಿಟ್ಟರಂಜವನಲ್ಲ ದಿಟ್ಟ ಹೆಂಗಳಿರ" ಎಂದು ಹಾಲು ಮೊಸರ ಬಗ್ಗೆ ಸುಂಕ ಕೊಡಿರೆಂದು ಕಾಡುತ್ತಿರಲಾಗಿ "ಸುಂಕದ ನಿಜವೇನು ಹೇಳು ನಿನ್ನ ಅಂಕೆಗೆ ನಾವಂಜುವವರಲ್ಲ ಕೇಳು" ಎಂದು ಎದುರೇಟು ನೀಡುತ್ತಾನೆ. ರಾತ್ರಿ ಕದ್ದು ಗೋಪಿಯರ ಮನೆ ಹೊಕ್ಕಿ ಮೊಸರು ತಿನ್ನುವ ಕೃಷ್ಣನನ್ನು "ಯಾರೆ ಬಂದವರು" ಮುಂತಾಗಿ ಅರಸುತ್ತಾರೆ. ಸರಿರಾತ್ರಿಯಲ್ಲಿ ಯಾರೋ ಬಂದಂತಾಯಿತು. "ಚಿನ್ನ ಬೆಳ್ಳಿಗಳ ಬಿಟ್ಟು ರಸಬಾಳೆ ಹಣ್ಣಿಗೆಂದಾಸೆ ಪಟ್ಟು" ಯಾರೋ ಬರುತ್ತಾರೆ. ಆ ಬಾಲರು ಸಿಕ್ಕದೇ ಇರರು ಎಂದು ಗೋಪಿಕೆಯರು ಮಾತಾಡಿಕೊಳ್ಳುತ್ತಾರೆ. ರಾತ್ರಿ ಕನಸೆಂಬಂತೆ ಕೃಷ್ಣ ಬಂದುದನ್ನು ವರ್ಣಿಸಿಕೊಳ್ಳುತ್ತಾರೆ. "ಪೇಳಲಂಜುವೆ ಬಂದ ಹೊಸಪರಿ ಬಾಲಗೆ ಕಾಲಲಂದುಗೆ ಗೆಜ್ಜೆ ಕಡಗ ಮೊದಲುಂಟು ... ನಂದಗೋಪ ಯಶೋದೆ ಕಂದನಲ್ಲದೆ ಮನೆಗೆ ಬಂದು ಕಳುವವರಿಲ್ಲ" ಎಂದು ಮುಂತಾಗಿ ಹಳಹಳಿಸುತ್ತಾರೆ.

ಹೀಗೆಲ್ಲ ಮಾತಾಡಿಕೊಂಡು ಹೆಂಗಳೆಯರು ಯಶೋದೆಯಲ್ಲಿಗೆ ಹೋಗುತ್ತಾರೆ. ಬಂದ ಹೆಂಗಳೆಯರನ್ನು ಕಂಡು ಕುಳ್ಳಿರಿಸಿ, ಬಂದ ಕಾರಣವನ್ನು ಕೇಳಲಾಗಿ ಅವರು "ಕೇಳೆ ಗೋಪಿ ರಂಗನಾಟವ ಪೇಳದಿರುವುದುಚಿತವಲ್ಲ. ಪೇಳ್ದೊಡೊಂದು ಕಾರ್ಯವಿಲ್ಲ.

ರಾತ್ರಿಯೊಳಗೆ ಬಾಗಿಲ್ಮುರಿಯಲಾಗಿ ಬೆದರಿ ಕದವ ತರೆಯಲೊಳಗೆ ಬಂದು ನಾವರಿಯದಂತೆ ಹಾಲು ಮೊಸರು ಸುರಿವುತೋಡಿ ಬರುವ ಸುಮ್ಮನೆ ಮೇಲಡಗಿಸಿ ಬಚ್ಚಿಟ್ಟಿದರ ಬುಡಕೆ ಕೋಲಲಿಟ್ಟು ತೂತು ಮಾಡುತ್ತಾನೆ ಎನ್ನುತ್ತಾರೆ. ಇದನ್ನು ಕೇಳಿದ ಗೋಪಿ ವಿಸ್ಮಯಪಟ್ಟು ರಾತ್ರಿ ತನ್ನ ಮಗ ಬಂದುದಕ್ಕೆ ಗುರುತೇನು ಎಂದು ಕೇಳುತ್ತಾಳೆ. ನಿಮ್ಮ ಮಾತು ವಿಚಿತ್ರ ಇಲ್ಲಿ ಮೊಸರು-ಬೆಣ್ಣೆ ಹಾಕಿದರೆ ತಿನ್ನುವುದಿಲ್ಲ ಎನ್ನುತ್ತಾಳೆ. ಗೋಪಿಯರು ಮುಂದುವರಿಸುತ್ತಾರೆ. "ಸಣ್ಣವರಾಟವಲ್ಲ ಸಂಗಡಬಂದ ಚೆಣ್ಣರೊಳ್ ಕೇಳ್ದೆವೆಲ್ಲ ಅಣ್ಣರಾಮರಿಯದಂದದೊಳೋಡೋಡಿ ಬಂದಿವಳ ಬಣ್ಣದುಟಿಯ ಸವಿದ ಕೇಳು" ಎಂದರೆ ಗೋಪಿ ಎನ್ನಣುಗಗೆ ಆಲದ ಹಣ್ಣು ತಿಂದು ಅಭ್ಯಾಸವಾಗೆ ಒಂದರಿಯದ ಬಾಲ ಮುಗುದೆ ನಿನ್ನಧರವ ತಿಂದರೇನಾಯಿತೆ" ಎಂದು ಮಗನನ್ನು ಸಮರ್ಥಿಸಿಕೊಳ್ಳುತ್ತಾಳೆ. ನಸು ಬೆಳಗಿರುವಾಗ ಯವ್ವನವತಿ ಮೊಸರ ಮಂತಿಸುತಿಪ್ಪನ ಕುಶಲದಿಂದೆಳೆದಮರ್ದಪ್ಪುತ ತರುಣಿಯ ಪೊಸ ಕುಚಂಗಳ ಮುಟ್ಟಿದ" ಮುಂತಾಗಿ ದೂರುತ್ತಾರೆ.

ಅವರು ಹೋದ ಮೇಲೆ ಗೋಪಿ ಕೃಷ್ಣನನ್ನು ಕರೆದು "ಚಂದವಾಯಿತು ಮಗನೆ ನಂದಗೋಪ ನಣುಗ ಕದ್ದು ತಿಂದನೆಂಬ ಮಾತು ಬಂದುದು" ಮುಂತಾಗಿ ಬುದ್ಧಿ ಹೇಳುತ್ತಾಳೆ. ಅವರು ಮತ್ಸರದಿಂದ "ದೂರುವರೆನ್ನ ಕೊಲ್ಲಿಸಬೇಕೆನುತಲಮ್ಮ ಇರುಳ ಪಟ್ಟಣ ಸಂಚರಿಸಲ್ಕೆನಗೇನು ಮರುಳಾಯ್ತೇ ನಮ್ಮ' ಮುಂತಾಗಿ ಹೇಳುತ್ತಾನೆ. ಗೋಪಿಯರು ಇನ್ನೊಮ್ಮೆ ಕೃಷ್ಣನನ್ನು ಹಿಡಿದುತಂದರೆ ಅಂತಹದೇ ಮಗು ಯಶೋದೆಯ ತೊಡೆಯಲ್ಲಿರುವುದನ್ನು ನೋಡಿ ನಾಚುತ್ತಾರೆ. ಯಶೋದೆ ಮಗುವಿಗೆ ಬುದ್ಧಿ ಹೇಳಿ ಹಾಲು ಕುಡಿಸಿ ಸಂತೋಷಪಡುತ್ತಾಳೆ.

ಮಾರನೆಯದಿನ ಕೃಷ್ಣ ಗೋಪಬಾಲಕರನ್ನು ದನಕರುಗಳನ್ನು ಹೊಡೆದುಕೊಂಡು ವೃಂದಾವನಕ್ಕೆ ಹೋಗುತ್ತಾನೆ. ಆತನ ಕೊಳಲನಾದವನ್ನು ಕೇಳಿ ಗೋವುಗಳು ತಮ್ಮ ತಮ್ಮ ಹಸಿವೆಯನ್ನು ಮರೆತು ಆತನ ಹಿಂದೆ ಓಡುತ್ತವೆ. ಹಣ್ಣುಗಳನ್ನು ಕೊಯ್ದು ಬಲರಾಮಸಹಿತ ಗೋಪ ಮಕ್ಕಳು ತಿನ್ನುತ್ತಾರೆ. ಗೋಪಾಲ ಎಲ್ಲಿ ಹೋದ? "ನಿಲಲಾರೆವ್ಯೆ ಗೋಪಾಲಕೃಷ್ಣನ ಪ್ರಾಣನಾಯಕ ಪಂಚಬಾಣ ಜನಕ ಈ ವೇಣುಗೋಪಾಲನ" ಎಂದು ಗೋಕುಲದ ಗೋಪಿಕೆಯರೆಲ್ಲ ಕೃಷ್ಣನನ್ನು ಕಾಣದೇ ವಿರಹದಂತಹ ಅನುಭವವನ್ನು ಹೊಂದುತ್ತಾರೆ. ಅವರೆಲ್ಲ ಕೂಡಿ ಯಮುನೆಯ ದಡದಲ್ಲಿ ಗೌರಿವ್ರತ ಮಾಡಿ ಕೃಷ್ಣನನ್ನು ಮೆಚ್ಚಿಸಲು ನಿಶ್ಚಯಿಸುತ್ತಾರೆ. "ಹಲವು ವಿಧದಲಿ ನಲಿದು ಪ್ರಾರ್ಥಿಸಿ, "ಶ್ರೀ ಗೌರಿಗೆ ಶುಭ ಶೋಭಾನವೆ ಪುಂಡರೀಕ ನೇತ್ರನೆನ್ನ ಗಂಡನಾಗಿದ್ದರೆ ನಿನ್ನ ಮಂಡೆಗೆ ರತ್ನ ಮುಕುಟ ಕೊಂಡು ತರಿಸುವೆನು" ಮುಂತಾಗಿ ಪ್ರಾರ್ಥಿಸುತ್ತಾರೆ.

ವ್ರತ ಮುಗಿದ ಮೇಲೆ ಯಮುನೆಯಲ್ಲಿ ನೀರಾಟ ಆಡಿ ಹೋಗುವ ಎಂದು ಅವರು ತಮ್ಮ ಸೀರೆ ಕುಪ್ಪುಸಗಳನ್ನು ಚಿನ್ನಾಭರಣಗಳನ್ನು ಬಿಚ್ಚಿಟ್ಟು ನೀರಿಗಿಳಿಯುತ್ತಾರೆ. "ಜಲಕ್ರೀಡೆಯೊಳಗಿದ್ದರೆಲ್ಲ ತಂತಮ್ಮೊಳಗೊಬ್ಬಬ್ಬರ ಎಳೆದಾಡುತ್ತ ಪುಲ್ಲಶರನರಗಿಣಿಯಂತೆ ಪೋಲ್ದ ಚೆಲ್ವ ಲಲನೆಯರೆಲ್ಲ ನೋಡಿದ ಲಕ್ಷ್ಮೀನಲ್ಲ".

ಹೀಗೆ ನೋಡಿದ ಕೃಷ್ಣ ಬುದ್ಧಿಕಲಿಸಲು ಇದೇ ಸಮಯವೆಂದರಿತು ಅವರ ಸೀರೆಗಳನ್ನು ಮೆಲ್ಲನೆ ಎತ್ತಿಕೊಂಡು ಮರವೇರಿ ಕುಳಿತು ಕುಕ್ಕೂರು ಕೂಗುತ್ತಾನೆ. ಮರದ ಮೇಲೆ ಬ್ರಹ್ಮರಾಕ್ಷಸನಿದ್ದಾನೆ. ಕೊಲ್ಲುತ್ತಾನೆ. ಕೆಳಗಿಳಿ ಎಂದು ಗೋಪಿಯರು ಹೇಳಿದರೂ ಆತ ಇಳಿಯುವುದಿಲ್ಲ. "ಸೀರೆಯ ನೊಯ್ವರೆ ಶ್ರೀಕೃಷ್ಣ ನಿನಗಿಂತ ಚೋರ ವಿದ್ಯೆಯದೇಕೊ" "ಮನೆಯವರಿದ ಕೇಳಿದರೆ ನಿನ್ನ ಎಳೆದೊಯ್ದು ದಣಿಸಿ ದಂಡಿಸುವರು. ವಸನಂಗಳನು ಕದ್ದ ವಸುದೇವನಣುಗನೆ ವಶ ವಾದೆವ್ಯೆನಿನ್ನ" ಎಂದು ಸೀರೆ ಕೊಡು ಎಂದು ಮೊರೆಯಿಡುತ್ತಾರೆ. ಅದಕ್ಕೆ ಕೃಷ್ಣ "ಮರುಳಾದಿರಿ ನೀವು ಕೆರೆಯೊಳು ನಿಂತುಕೊಂಡು ಶಿರವರಿದವರಂತೆ ಮೊರೆಯಿಟ್ಟು ಕೂಗಲ್ಯಾಕೆ" ಎನಲು "ಅರಿಯದೆ ಮೋಸ ಹೋದೆವು ಅರವಿಂದ ನೇತ್ರ ಬೇಡುವೆವು ಸೆರಗೊಡ್ಡಿ" ಎಂದರೆ, ನಾನೆಲ್ಲಿ ಕದ್ದಿದ್ದೇನೆ ಕಾಣಿಸಿ ಕೊಡಿರಿ ಎನ್ನುತ್ತಾನೆ. "ದಾಸಿಯರಾದೆವಯ್ಯ ವಸನವ ನೀಡುದಮ್ಮಯ್ಯ ಅಂಬುಧಿಯೊಳಾಡುವ ದಿಗಂಬರೆಯರಾದೆವು ಮನೆಗೆ ಬೆಂಬಿಡದ್ಯೆದುವದೆಂತು" ಮುಂತಾಗಿ ಹೇಳಿದರೆ ಕೃಷ್ಣ "ಬಾಲೆಯರೆ ನೀರಿಂದ ನೀವು ಮೇಲೆ ಬನ್ನಿ ಕೊಡುವೆನು ನಿಮ್ಮ ಸೀರೆಗಳನ್ನೆಲ್ಲ" ಎನ್ನುತ್ತಾನೆ. ಇದನ್ನು ಕೇಳಿದ ಬಾಲೆಯರು ತಮ್ಮ ತಾವು ಮರೆಮಾಡಿಕೊಳ್ಳುತ್ತ ಮೇಲೆ ಬಂದು "ಇನ್ನಾದರೂ ದಯಮಾಡು

ಬಂದೆವಲ್ಲದಡಹತ್ತಿ" ಎನ್ನುತ್ತಾರೆ. "ಬೆತ್ತಲೆ ಕೊಳವಿಳಿದ ಪ್ರಾಯಶ್ಚಿತ್ತವಾಗಿ ನೀವು ಸುರರ್ಗೆ ಭಕ್ತಿಯಿಂದ ನಮಿಸಿ ಕೊಡುವೆ" ಎನ್ನಲು "ಮಡದಿಯರು ತಮ್ಮ ತಮ್ಮ ಜಡೆಬಿಚ್ಚಿ ಪಸರಿಸುತ್ತ ಒಡನೆ ಮುಗಿದರೊಂದು ಕೈಯ ಬಿಡದೆ ನಾಚುತ" ಅದನ್ನು ಗಮನಿಸಿದ ಕೃಷ್ಣ ತನ್ನ ಆಟವನ್ನು ಇನ್ನೂ ಮುಂದುವರಿಸುತ್ತಾನೆ. "ಒಂದು ಕೈಯ ಮುಗಿದರೆ ದೇವೇಂದ್ರ ಮುಖ್ಯ ದೇವತೆಗಳಿಗೆ ಚಂದವಲ್ಲ ಎರಡೂಕೈಗಳಿಂದ ಮುಗಿಯಿರೆ" ಎನ್ನುತ್ತಾನೆ. ಅವರು "ಮಾರನ ಮಂದಿರಕೆ ತೊಡೆಯ ಸೇರಿಸುತ್ತ ಮೆಚ್ಚಿಕೊಂಡು ಬೇರೆ ಬೇರೆ ಎರಡು ಕೈತೋರಿ ಮುಗಿದರು."

ತನ್ನದು "ಕುರಂಗಲೋಚನದ ಬಣ್ಣ ಹೊಂಗೇದಗೆಸಳಿನ ತೆರಕುಪ್ಪುಸವ," ಚಂದ್ರಕಾವಿಯ ಸೀರೆ ಚಂದದರವಕೆ ಗೋವಿಂದ ನೀದಯಮಾಡು" ಪನ್ನಗಾರಿ ಧ್ವಜನೆ ಕೇಳೆನ್ನ ವಸ್ತ್ರದಂಡವನ್ನು ಸ್ವರ್ಣರೇಖೆ ಸುತ್ತಲು ಮೆರೆವುದು ಮಿಂಚುತಿರುವುದು.." ಹಳ್ಳಿಯವಳಲ್ಲ ನಾನು ಹರುಷದಿಂದುಟ್ಟಿಂತಾದ್ದು ಬೆಳ್ಳಿಯ ಕಂಬಿಯ ಸೀರೆ ಪಾಲಿಸೊ" ಅರಮನೆಯಿಂದ ಮೆಚ್ಚಿಕೊಟ್ಟಂಥ ಸೀರೆ ತೋರಯ್ಯ ಕೈಯೋಳ್ ತಾರಯ್ಯ" ಮುಂತಾಗಿ ಮುದಗೊಂಡು ಬೇಡುತ್ತಾರೆ. "ಬಾಲೆಯರನೆಲ್ಲ ಕರೆದು ಶಾಲೆಗಳ ಕೊಟ್ಟನರಿದು ಲೀಲೆಯಿಂದ ಉಟ್ಟುಕೊಂಡು ಮೆರೆದರು ಸುಖಿಸಿದರು" ಬಾಲೆಯರು.

ಹೀಗೆ ಲೀಲಾಲೋಲನಾದಂಥ ಕೃಷ್ಣ ತರುಣಿಯರನೆಲ್ಲ ಕೂಡಿ ಗೋಕುಲಕ್ಕೆ ನಡೆತಂದು ಸುಖದಿಂದಿದ್ದನು.

**೨. ಯಾದವಾಭ್ಯುದಯ**

ಒಂದು ದಿನ ಮಧುರೆಯ ಅರಸನಾದ ಉಗ್ರಸೇನನು ವಸುದೇವನನ್ನು ಕರೆದು ಬಾಲ್ಯದಲ್ಲಿಯೇ ಕಂಸಾದಿ ರಾಕ್ಷಸರನ್ನು ಸದೆಬಡಿದು ರಾಜ್ಯವನ್ನು ರಕ್ಷಿಸಿದ ಕೃಷ್ಣ ಮಹಾಮಹಿಮನೇ ಸೈ. ಸುಮ್ಮನೆ ಕಂಸ ಹರಿಯ ದ್ವೇಷವ ಮಾಡಿ ಹಾಳಾದ. ಇಂಥ ಮಹಾಮಹಿಮರ ಮಕ್ಕಳಾಗಿ ಪಡೆದ ನಿನ್ನ ಭಾಗ್ಯವೇ ಭಾಗ್ಯ. ಆದುದರಿಂದ ಯಾದವರ ಪದ್ಧತಿಯ ಪ್ರಕಾರ ಕೃಷ್ಣ ಬಲರಾಮರಿಗೆ ಉಪನಯನವೇ ಮೊದಲಾದ ಕಾರ್ಯ ನೆರವೇರಿಸು ಎನ್ನಲು ವಸುದೇವನು ಕುಲಪುರೋಹಿತ ಗಾರ್ಗ್ಯರನ್ನು ಕರೆಸಿ ಚೌಳ ಕಾರ್ಯವನ್ನು ನಡೆಸಿ ಕಲಶೋದಕ ಸ್ನಾನ ಮಾಡಿಸಿ ಭೋಗ್ಯಗಳಿಂದ ಸಂತಸಪಡಿಸಿ ಮುಂದೆ ಬ್ರಹ್ಮೋಪದೇಶವನ್ನು ಕೊಟ್ಟು ತಾನು ಸೆರೆಯಲ್ಲಿದ್ದಾಗ ಹೊತ್ತ ಹರಕೆಯಂತೆ ಲಕ್ಷಗೋಧನವನ್ನು ಬ್ರಾಹ್ಮಣರಿಗೆ ದಾನವಿತ್ತು ಕಾರ್ಯ ನೆರವೇರಿಸಿದರು.

ವಟುಗಳಾದ ಬಲರಾಮ ಕೃಷ್ಣರಿಗೆ "ಭಿಕ್ಷೆಯ ನೀಡೆಸಖಿ ಸಾರಸ ಮುಖಿ ಭಿಕ್ಷೆಯ ನೀಡೆ ಸಖಿ ಇಕ್ಷುಚಾಪನ ಸಿತ ಪಕ್ಷಿವಾಹನ ಪರ ಪಕ್ಷರಹಿತ ನಿತ್ಯ ಲಕ್ಷ್ಮೀಕಾಂತಗೆ ಮುದದಿ" ಎಂದು ಸುದತಿಯರು ಸಂಸ್ಕಾರ ನೆರವೇರಿಸಲು ಬಲರಾಮ, ಕೃಷ್ಣ, ಸಾಂದೀಪನೆಂಬ ಋಷಿಯ ಆಶ್ರಮಕ್ಕೆ ವಿದ್ಯೆ ಕಲಿಯಲು ಹೋದರು. ಅಲ್ಲಿ "ಪರಮ ಪುರುಷರಿಂತು ಹರುಷದಿಂ ಚೌಷಷ್ಠಿ ಪರಿಗಣನೆಯ ವಿದ್ಯೆಯ ಅರವತ್ತು ನಾಲ್ದಿನ ಹರಿವಷ್ಟರೊಳು ಕಲ್ತು" ಸರ್ವಜ್ಞರಾದರು.

ಹೀಗೆ ಅಧ್ಯಯನವನ್ನು ಪೂರ್ತಿಮಾಡಿ ಗುರುವನ್ನು ಆಶ್ಚರ್ಯಗೊಳಿಸಿದ ಇವರು ತಮ್ಮ ಮನೆಗೆ ಹೋಗಲು ನಿಂತು ಗುರುಕಾಣಿಕೆ ಏನು ಕೊಡಬೇಕೆಂದು ಕೇಳಲು ಗುರುಪತ್ನಿ ತನ್ನ ಗಂಡನೊಡನೆ ಇವರು ಜಗತ್ರಾಣ ಮೂರ್ತಿಗಳಲ್ಲದೆ ಬೇರಲ್ಲ, ಇವರಲ್ಲಿ ತಮ್ಮ ಸತ್ತು ಹೋದ ಮಗನನ್ನು ತಂದು ಕೊಡಲು ಹೇಳಿದರೆ ತಮಗೆ ಉತ್ಸವವಾಗುತ್ತವೆ ಎನ್ನಲು ಸಂದೀಪನು ವರುಣನಿಂದ ಅಳಿದುಹೋದ ತನ್ನ ಮಗನನ್ನು ತಂದು ಕೊಟ್ಟರೆ ತಮಗೆ ಸಂತೋಷವಾಗುತ್ತದೆ ಎನ್ನಲು ಅದಕ್ಕೊಪ್ಪಿ ಗುರುವಿಗೆ ನಮಸ್ಕರಿಸಿ ಹೊರಟರು.

ಇದನ್ನು ಅರಿತ ವರುಣನು ಆತನನ್ನು ಎದರುಗೊಂಡು ಜಯ ಜಯವೆನಲು ಗುರುವಿನ ಮಗುವನ್ನು ಕೊಡುವಂತೆ ಕೇಳಲಾಗಿ, ಗುರುಪುತ್ರನ ಸಾವಿನಲ್ಲಿ ತನ್ನ ಪಾತ್ರವಿಲ್ಲವೆಂದೂ, ಅದಕ್ಕೆ ಶಂಖಾಸುರನು ಕಾರಣನೆಂದೂ ಆತ ಸಮುದ್ರದ ಮಧ್ಯೆ ಅಡಿಯಲ್ಲಿ ವಾಸವಾಗಿರುವುದಾಗಿ ತಿಳಿಸುತ್ತಾನೆ. ಸನ್ನೆಯಿಂದ ಸ್ಥಳವನ್ನು ತೋರಿಸಲು ಶಂಖಾಸುರನು "ಎಲೆಲೊ ಮದಾಂಧರಾಗಿ ವಾರಿಧಿಯೊಳು ಮುಳುಗುತಿದ್ದು ಯಾರು ನಿಂತು ಹುಡುಕುವಿರಿ ಮೊಗೇರರಂದದಿ" ಎಂದು ಕೇಳಲು, "ಕಳ್ಳರಂತೆ ಕಡಲ ಮಧ್ಯದಲ್ಲಿ ಮನೆಯ

ಮಾಡಿಕೊಂಡು ಮೆಲ್ಲನಬ್ದಿಗಿಳಿವ ಜನರ ಕೊಲ್ಲು" ತಿರುವ ಅಧಮನೀನು. ಪ್ರಭಾಸದಲ್ಲಿಯ ಸಾಂದೀಪ ಪುತ್ರನನ್ನು ತೋರಿಸು ಎಂದನು. ಕೃಷ್ಣ ಈ ಕೆಲಸಕ್ಕೆ ಬಂದಿದ್ದಿಯಾ ನಿನ್ನ ಗುರುಪುತ್ರ ನನ್ನ ಹಸಿವಿಗೆ ಇಂಗಿ ಹೋದ. ಈಗ ನನ್ನ ಹಸಿವು ಇಳಿಸಲು ನೀವು ಸಿಕ್ಕಿದ್ದೀರಿ ಎಂದು ಮುಂತಾಗಿ ಹೇಳಲು ಬಲರಾಮನು ಖಳನನ್ನು ತಿವಿದನು. ನೀವು ಹೇಡಿಗಳು, ಕಳ್ಳರು ಎಂದೆಲ್ಲ ಹೇಳಿದ ಶಂಖಾಸುರನು ಕೃಷ್ಣನ ಪೆಟ್ಟಿಗೆ ರಕ್ತಕಾರಿ ಬಿದ್ದನು. ಹೀಗೆ ಬಿದ್ದ ಶಂಖಾಸುರ ಕೃಷ್ಣನನ್ನು ಸ್ತುತಿಸಿ ತನ್ನ ತಪ್ಪನ್ನು ಕ್ಷಮಿಸಿ ಮುಕ್ತಿ ನೀಡಬೇಕೆಂದೂ ಆದರೆ ತನ್ನ ಹೆಸರು ಸ್ಥಿರವಾಗುವ ಹಾಗೆ ತನ್ನ ಅಸ್ಥಿಯಿಂದ ಶಂಖ ನಿರ್ಮಿಸಿಕೊಂಡು ಅದನ್ನು ಕೈಯಲ್ಲಿ ಹಿಡಿದುಕೊಂಡಿರುವಂತೆ ಅನುಗ್ರಹಿಸಬೇಕೆಂದು ಕೇಳಿಕೊಳ್ಳಲಾಗಿ ಆತನ ಎಲುಬಿನಿಂದ ಪಾಂಚಜನ್ಯವೆಂಬ ಶಂಖವನ್ನು ಮಾಡಿಕೊಂಡನು. ಅಲ್ಲಿಂದ ಕೃಷ್ಣ ಯಮಲೋಕಕ್ಕೆ ಹೋಗಲು ಯಮ ಆತನನ್ನು ಸ್ವಾಗತಿಸಿ ಸಂದೀಪಪುತ್ರನನ್ನು ಕೊಟ್ಟನು. ಹಾಗೆ ಸಾಂದೀಪರಲ್ಲಿ ಹೋಗಿ ಅವರ ಮಗುವನ್ನು ಒಪ್ಪಿಸಿ ಆಶೀರ್ವಾದ ಪಡೆದು ಮಧುರೆಗೆ ತೆರಳಿದರು..

ಹೀಗೆ ಮಧುರೆಯಲ್ಲಿ ಸಂತೋಷದಿಂದ ಕಾಲ ಕಳೆಯುತ್ತಿರುವಾಗೊಂದು ದಿನ ಕೃಷ್ಣ ಉದ್ಧವನನ್ನು ಕರೆದು ನಂದಗೋಕುಲವನ್ನು ಮತ್ತು ತಂದೆ-ತಾಯಿಗಳ (ನಂದಗೋಪ ಮತ್ತು ಯಶೋದೆ) ಅಗಲಿ ಬಹಳ ಕಾಲವಾಯಿತು. ಅವರಿಗೆಲ್ಲ ನೋವಾಗದೆ ಇಲ್ಲ, ಅವರಿಗೆಲ್ಲ ನಾನು ವಂಚಿಸಿದಂತಾಯಿತು. ನೀನು ನನಗೆ ಸಮಾನ ಬಾಂಧವ, ನೀನು ಹೋಗಿ ಅವರನ್ನೆಲ್ಲ ವಿಚಾರಿಸಿಕೊಂಡು ಸಂತೈಸಿ ಬಾ ಎನ್ನುತ್ತಾನೆ.

ನಂದಗೋಕುಲದಲ್ಲಿ ಅಹಾ, ನಮ್ಮನ್ನು ಕೃಷ್ಣ ನೆನೆವನೇ, ಗೋಪಿಕೆಯರನ್ನು ನೆನೆವನೇ ಎಂದು ಕಾತರದಿಂದ "ಬಾಲನೆಂದಿಗೆ ಬಂದಪ ಯದುಕುಲದೀಪ, ಚೆನ್ನಕೇಶವ ಮೊಸರು-ಹಾಲನು ಮೇಣುಬೆಣ್ಣೆಯ ಗೋಪಿಯರ ಕಣ್ಣನೂಮರೆಗೆಯ್ದು" ರೀತಿಯಾಡಿದ ಕೃಷ್ಣನನ್ನು ಮತ್ತೊಮ್ಮೆ ಮೊಲೆಯೂಡಿಪನೇ ಎಂದು ನೆನೆಸುವ ಯಶೋದೆಯರನ್ನೆಲ್ಲ ಕಂಡು, ಶೋಕಬೇಡ, ಕೃಷ್ಣನನ್ನು ಮಗನಾಗಿ ಪಡೆದ ನಿಮ್ಮ ಭಾಗ್ಯವೇ ಭಾಗ್ಯ ಎಂದು ಅವರಿಗೆ ಸಮಾಧಾನ ಹೇಳುತ್ತಾನೆ. ಹೀಗೆ ಅವರು ಸಮಾಧಾನಪಡಿಸುತ್ತಿರಲು ಮತ್ತೊಂದು ಕಡೆ "ಗೋಪಿಕೆಯರು ಸುಸ್ವರದಿ ಮನವೊಲಿದು ಹರಿಲೀಲೆಗಳ ಭಕ್ತಿಭರದಿ ಪಾಡುತಲಿ ಮೊಸರ ಕಡೆವುತಿದ್ದರಂದು" ಅವರು ತುಳಸಿಮಾಲೆ ಧರಿಸಿರುವ ಉದ್ಧವನನ್ನು ನೋಡಿ ಕೃಷ್ಣನನ್ನು ನೆನೆದು ಆತನು ಯಾರೆಂದು ವಿಚಾರಿಸಿಕೊಳ್ಳುತ್ತಾರೆ. ಹರಿಯ ನೆನಪಾಗಿ ಕಣ್ಣೀರು ಹಾಕುತ್ತ "ಆರು ಕೃಷ್ಣನಿಗೆ ನಾವೆಮಗವನಾರು ವ್ಯಥೆ ಸುಮ್ಮನೆ, ಸೇರೆ ಸಾಮ್ರಾಜ್ಯವು ವೈರಿಗಳೆಲ್ಲ ಸೇರೆ ಬಲುಸುಖವು ನೀರಜನರಯನಿನ್ನಾರ ಹರಿಗೆಮ್ಮ ಓತ ಮನೆ ಮಕ್ಕಳ ಬಿಡುವ ಗೆಯ್ದು ಪ್ರೀತಿಗಿದೆ ಸುಫಲ" ಮುಂತಾಗಿ ದೂರುತ್ತಾರೆ. ಈ ರೀತಿಯ ವಿರಹದ ಕೃತ್ರಿಮ ಸಿಟ್ಟನ್ನು ತೋರುವ ಅವರು, "ಸಂಧಿಯಮಾಡೆ ನೀಬಂದುದಾದರೆ ಬಹೆವಿಂದೆಲ್ಲವನು ಮರೆತು" ಎಂದು ಕೃಷ್ಣ ಪ್ರೀತಿಯನ್ನು ತೋರುತ್ತಾರೆ.

ಅದನ್ನು ಕೇಳಿದ ಉದ್ಧವನು "ಧನ್ಯರಾರು ನಿಮ್ಮ ಹೋಲುವ ಪುಣ್ಯವಂತರಮ್ಮ" ಎಂದು ಹೇಳಿದರೂ "ಎಂದು ಮೈದೋರುವನೊ ಹರಿ" ಎಂದು ನೆನೆಸುವ ಅವರಿಗೆ ಕೃಷ್ಣ ನಿಮ್ಮನ್ನು ಅಗಲುವುದಿಲ್ಲ. ಆತ ಚೇತನ ರೂಪದಲ್ಲಿ ನಿಮ್ಮ ಹೃದಯದಲ್ಲಿ ಇದ್ದಾನೆ. ತನ್ನ ಮಾಯೆಯಲ್ಲಿ ಸೃಷ್ಟಿಲಯಗಳನ್ನು ಮಾಡುತ್ತಾನೆ. ಇವೆಲ್ಲವೂ ಅವನ ರೀತಿ. ಆತನನ್ನು ಪ್ರೀತಿಸಿದವರಿಗೆ ಮುಕ್ತಿಯನ್ನು ಕೊಡುತ್ತಾನೆ, ಮುಂತಾಗಿ ಸಮಾಧಾನ ಹೇಳಿ. ಅವರ ಹರಕೆಗಳನ್ನೆಲ್ಲ ಗ್ರಹಿಸಿ, ನಂದ-ಯಶೋದೆಯರ ಉಡುಗೊರೆಗಳನ್ನೆಲ್ಲ ಹೊತ್ತುಕೊಂಡು ಮಧುರೆಗೆ ಹಿಂದಿರುತ್ತಾನೆ.

ಒಂದು ದಿನ ಮಗಧನು ತನ್ನ ಗಿರಿವ್ರಜದ ರಾಜಧಾನಿಯಲ್ಲಿ ಸಭೆಗೊಡುತ್ತಿರುವಾಗ ಕಂಸನ ಹೆಂಡಂದಿರಾಗಿ ವಿಧವೆಯರಾದ ಹೆಣ್ಣು ಮಕ್ಕಳು ಬಂದು ಜನಕನೆ ನಮ್ಮ ಬಾಳುವೆ ಇನ್ನು ಯಾಕೆ, ನಮಗೆ ಸಾಯಲು ಅನುಮತಿ ಕೊಡು. ಕಂಸನ ದುರ್ಮರಣದಿಂದ ನಾವು ಅನಾಥರಾದೆವು ಎಂದು ಹೇಳಿಕೊಳ್ಳಲು ಮಾಗಧನು ದುಃಖಿಯಾಗಲು ಹೆಣ್ಣುಮಕ್ಕಳು, ತಂದೆಯೇ ಬಿಲ್ಲು ಹಬ್ಬದ ನೆಪದಲ್ಲಿ ಬಲರಾಮ ಮತ್ತು ಕೃಷ್ಣರು ಕಂಸನನ್ನು ಕೊಂದು ನಿನ್ನನ್ನು ಕೊಲ್ಲಲು ಹವಣಿಸುತ್ತಿದ್ದಾರೆ ಎನುತ್ತಾರೆ. ಅದನ್ನು ಕೇಳಿದ ಮಾಗಧ, ವಸುದೇವ ಮಗುವನ್ನು ಬಚ್ಚಿಟ್ಟು ಕಂಸನನ್ನು ಕೊಲ್ಲಿಸಿದ. ತಾನು ಹಗೆಯನ್ನು ಬಿಡುವುದಿಲ್ಲ. ಅವರನ್ನು ಶಿಕ್ಷಿಸುತ್ತೇನೆಂದು ಅವರನ್ನು

ಸಾಂತ್ವನಗೊಳಿಸಿ, ಚರರನ್ನು ಕರೆದು ಶಿಶುಪಾಲನನ್ನು ಬರಹೇಳಿ ಕಳುಹಿಸಲು ಆತ ಬಂದು ಕೆಲಸವೇನೆಂದು ಕೇಳಲು ಬಲರಾಮ-ಕೃಷ್ಣರು ತನ್ನ ಹೆಣ್ಣು ಮಕ್ಕಳಿಗೆ ವೈಧವ್ಯವನ್ನು ತಂದಿದ್ದಾರೆ. ಕುರಿಗಳಂತಿರುವ ಅವರನ್ನು ಮುರಿಯಬೇಕೆಂದು ನಿನ್ನ ಕರೆಸಿದೆ ಎನ್ನುತ್ತಾನೆ. ಶಿಶುಪಾಲನು ಅಂಜದಿರು ಅರಸ ಈಶ್ವರನೇ ಬಂದರೂ ವೈರಿಗಳನ್ನು ಬಿಡೆನು ಎಂದು ಹೇಳಿ ದೊಡ್ಡ ಸೈನ್ಯದೊಂದಿಗೆ ಹೊರಡುತ್ತಾನೆ. ದಂತವಕ್ರ, ಹಾಹ್ಲಿಕ, ಮೊದಲಾದವರು ಮಧುರೆಯನ್ನು ಮುತ್ತಲಾಗಿ ಕೋಟೆಯನ್ನು ಕಾಯುತ್ತಿರುವ ಕಾವಲು ಭಟರು ಗಾಬರಿಯಿಂದ ಬಂದು ಕೃಷ್ಣನಿಗೆ ತಿಳಿಸುತ್ತಾರೆ.

ಇದನ್ನು ತಿಳಿದ ಕೃಷ್ಣನು ಮಾಗಧನು ತಾನಾಗೇ ಬಂದುದು ಒಳ್ಳೆಯದೇ ಆಯಿತು. ಆದರೆ ಆತನನ್ನು ಒಮ್ಮೆಲೆ ಕೊಲ್ಲಬಾರದು. ಆತ ಹೆಚ್ಚು ಹೆಚ್ಚು ದುಷ್ಟರನ್ನು ಕೂಡಿಬರುತ್ತಿರುತ್ತಾನೆ. ಆ ದುಷ್ಟರನ್ನೆಲ್ಲ ಮೊದಲು ಕೊಲ್ಲಬೇಕು. ಸಜ್ಜನರ ರಕ್ಷಿಸುವುದೇ ತನ್ನ ಉದ್ದೇಶ ಎಂದುಕೊಂಡು ಬಲರಾಮನಲ್ಲಿ ಮಗಧನ ದಾಳಿಯ ವಾರ್ತೆ ತಿಳಿಸುತ್ತಾನೆ. ಬಂದುದು ಒಳ್ಳೆಯದೇ ಆಯಿತು. ಅವರನ್ನೆಲ್ಲ ಯಮಸದನಕ್ಕೆ ಅಟ್ಟುತ್ತೇವೆ ಎನ್ನುತ್ತಾನೆ. ಕೂಡಲೇ ಕೃಷ್ಣ, ಕೃತವರ್ಮ, ಉದ್ಧವ ಮುಂತಾದವರನ್ನು ಕರೆಸಿ ಯುದ್ಧಕ್ಕೆ ಹೊರಡುತ್ತಾನೆ.

ಯುದ್ಧ ಸಂಭವಿಸಿತು. ರಕ್ತದ ಕಾಲುವೆಯೆ ಹರಿಯಿತು. ಆದರೆ ಮಾಗಧನ ಸೈನ್ಯ ಓಡಿ ಹೋಗಲಿಲ್ಲ. ಕಿರಾತನು ಬಂದು ಯಾದವರನ್ನು ತಡೆದು "ಯಾರು ನೀನೆಲೆ ಹುಡುಗ ಗೋಪಕುಮಾರನ ನುಡಿಕೇಳಿ ಮಾರಬೇಡಲೊ ತಲೆಯ" ಎಂದು ಸಾತ್ಯಕಿಯನ್ನು ತಡೆಯುತ್ತಾನೆ. ಕುರುಬರು ದಾರಿಯಲ್ಲಿ ಬಿದ್ದ ಕಲ್ಲನ್ನು ಮಾಣಿಕ್ಯವೆಂದು ತಿಳಿದ ಹಾಗೆ ಕೃಷ್ಣನನ್ನು ಪರಬ್ರಹ್ಮ ಎಂದುಕೊಂಡು ಯಾದವರು ಕೆಟ್ಟರು ಎನ್ನುತ್ತಾರೆ. ಇದನ್ನು ಕೇಳಿದ ಸಾತ್ಯಕಿ ಎಲ್ಲೊ ಕಾಡುಮಿಗವನ್ನು ಅರಸುವ ಬೇಡನೆ ನಿನ್ನ ಸೊಕ್ಕೇನು, ತೊಡುಬಿಲ್ಲನ್ನು ಎಂದು ಅವನನ್ನು ರಥಹೀನನನ್ನಾಗಿ ಮಾಡಲು ಅದನ್ನು ಕಂಡ ಭೂರಿಶ್ರವ ಮುಂದೆ ಬರುತ್ತಾನೆ. ಯುದ್ಧದಲ್ಲಿ ಸೋತು ಸುಣ್ಣಾಗುತ್ತಾನೆ. ರಣಕಣದಲ್ಲಿ ಹೆಣಗಳರಾಶಿಯೇ ಬೀಳುತ್ತದೆ. ಇದನ್ನೆಲ್ಲ ಗಮನಿಸಿದ ಮಾಗಧನು "ದುಷ್ಟನೀ ನೆಲವೊ ಕಿಟ್ಟನೆಂಬವ ನಮ್ಮ ಕೊಟ್ಟ ಮಗಳಿಂದರೆರೆಯನನು ಕುಟ್ಟಿಕಳದೆಯೇಕೆ" ಮುಂತಾಗಿ ಹೇಳಿ ಅವನ ಮೇಲೆ ಎರಗುತ್ತಾನೆ. ಆದರೆ ಭಯಂಕರ ಯುದ್ಧದಲ್ಲಿ ಕೃಷ್ಣ ಮಾಗಧನ ಸೈನ್ಯವನು ಕೊಚ್ಚಿ ಹಾಕುತ್ತಾನೆ.

ಇದನ್ನು ಕಂಡ ಶಿಶುಪಾಲನು ರಭಸದಿಂದ ಮುಂದೊತ್ತಿಬರುತ್ತಾನೆ. "ಎಲವೊ ಗೋಪಕುಮಾರ ಸಾಕೆಲೊ ಹುಲು ಬಲಸಂಹಾರ ಗೆಲವೆಂಬಡವಿಕುಠಾರ ಎನ್ನೊಳು ನಿನ್ನಳವನ್ನು ತೋರು" ಎಂದು ಬೊಬ್ಬಿರಿಯುತ್ತಾನೆ. ಆದರೆ ಯುದ್ಧದಲ್ಲಿ ಕೃಷ್ಣನ ಕೈಮೇಲಾಗಲು ಶಿಶುಪಾಲ ಮೆಲ್ಲನೆ ಜಾರುತ್ತಾನೆ. ಇನ್ನುಳಿದ ಮಾಗಧನ ಬಲವನ್ನು ಬಲರಾಮನು ನಾಶಮಾಡುತ್ತಾನೆ. ಮಾಗಧ ಮುಂದೆ ಬರಲು ಭೀಕರ ಕಾಳಗವಾಗಿ ಅದರಲ್ಲಿ ಸೋತು ಹೋಗಲು ಚೈದ್ಯನೊಡಗೂಡಿ ಪಲಾಯನ ಮಾಡುತ್ತಾನೆ.

ಆದರೆ ಮಗಧ ಸೇಡನ್ನು ಮಾತ್ರ ಮರೆಯಲಿಲ್ಲ. ಮತ್ತೆ ಮೂರೇ ತಿಂಗಳಲ್ಲಿ ಬಲಾಢ್ಯವಾದ ಸೈನ್ಯವನ್ನು ತೆಗೆದುಕೊಂಡು ಮಧುರೆಯನ್ನು ಮುತ್ತಲು ಬರುತ್ತಾನೆ. ಯಮುನಾನದಿಯ ಅಂಚಿಗೆ ಬರುತ್ತಿರಲಾಗಿ ದುಷ್ಟನ ಮೋರೆಯನ್ನು ನೋಡಲಾರೆ ಎಂಬಂತೆ ಸೂರ್ಯಮುಳುಗುತ್ತಾನೆ. ರಾತ್ರಿ ಅಲ್ಲೇ ಕಳೆದು ಮರುದಿನ ದಾಳಿ ನಡೆಸುವುದಾಗಿ ನಿಶ್ಚಯಿಸಿ ಅಲ್ಲಿಯೇ ಇರುಳು ತಂಗುತ್ತಾರೆ.

ಆದರೆ ಈ ವಾರ್ತೆಯು ಕೃಷ್ಣನಿಗೆ ಕಾವಲುಗಾರರಿಂದ ತಿಳಿಯಲು ಕೃಷ್ಣ ಬಲರಾಮನೊಡನೆ ವಿಚಾರವಿನಿಮಯ ನಡೆಸುತ್ತಾನೆ. ನದಿಯಿಂದೀಚೆ ಆ ದುಷ್ಟರನ್ನು ಬರಗೊಡುವುದು ತಕ್ಕದ್ದಲ್ಲ. ಸದ್ಯ ಎದುರಿಸುವ ಬಲ ನಮ್ಮದಲ್ಲ ಎಂದು ಗ್ರಹಿಸಿದ ಅವರು ರಾತ್ರಿ ವೈರಿ ಸೈನ್ಯದವರು ನಿದ್ರಿಸುತ್ತಿದ್ದಾಗ ದಾಳಿ ಮಾಡುತ್ತಾರೆ.

ಕೃಷ್ಣ, ಬಲರಾಮ, ಸಾತ್ಯಕಿ ಮೊದಲಾದವರು ವೈರಿ ಸೈನ್ಯವನ್ನು ಕಾಡುಮೃಗಗಳನ್ನು ಕೊಚ್ಚಿ ಹಾಕಿದಂತೆ ಕೊಲ್ಲುತ್ತ ಹೋಗುತ್ತಾರೆ. ಇದರಿಂದ ಎಚ್ಚತ್ತ ಮಗಧನು ತನ್ನ ಮಗಳಿಗೆ ವೈಧವ್ಯವನ್ನು ತಂದಿತ್ತ ನಿನ್ನನ್ನು ಕೊಲ್ಲದೆ ಬಿಡೆ ಎಂದು ಅರ್ಭಟಿಸುತ್ತಾನೆ. ಆದರೆ ಯುದ್ಧದಲ್ಲಿ ಸೋತು ಓಡಿಹೋಗುತ್ತಾನೆ. ಹೇಗೆ ಇವರನ್ನು ನಾಶಮಾಡಬೇಕೆಂದು ಚಿಂತಿಸುತ್ತಲೇ ಶೋಣಿತಾಪುರಕ್ಕೆ ಹೋಗುತ್ತಾನೆ.

ಶೋಣಿತಾಪುರದಲ್ಲಿ ಬಲಿಯ ಮಗನಾದ ಬಾಣಾಸುರನು ಈಶ್ವರನನ್ನು ತಪಸ್ಸಿನಲ್ಲಿ ಮೆಚ್ಚಿಸಿ ಸಾವಿರ ಭುಜಗಳನ್ನು ಪಡೆದು ಈಶ್ವರನನ್ನೂ ತನ್ನ ರಾಜಧಾನಿಯಲ್ಲಿ ನಿಲ್ಲಿಸಿಕೊಂಡಂಥ ಬಲಶಾಲಿಯಾಗಿ ರಾಜ್ಯವಾಳುತ್ತಿರುತ್ತಾನೆ.

ಅಲ್ಲಿಗೆ ಮಗಧ ಹೋಗಿ ತನ್ನ ಸೋಲಿನ ಪರಿಯನ್ನು ಹೇಳಿಕೊಳ್ಳಲು "ಅರರೇ ಚೋದಿಗವೈಸೆ ಗೋಪಾಲತರಳಲೀ ಎಂದು ತನ್ನ ಬಲವಾದ ಸೈನ್ಯವನ್ನು ನೀ ಒಯ್ಯಿ ಅಲ್ಲದೆ ಅದರ ಮುಖ್ಯಸ್ಥನಾಗಿ ಆತನ ಮಂತ್ರಿ ಕುಂಭಾಂಡಕ, ಕೂಪಕರ್ಣರನ್ನ ಕಳಿಸುತ್ತಾನೆ.

ಮೂರನೆಯ ಸಲ ಮಾಗಧ ಬಂದವಾರ್ತೆಯನ್ನು ತಿಳಿದು ಕೃಷ್ಣ ಬಲರಾಮರು ಸಕಲ ಸಿದ್ಧತೆಯೊಂದಿಗೆ ಯುದ್ಧಕ್ಕೆ ಹೋಗುತ್ತಾರೆ. ಯುದ್ಧದಲ್ಲಿ ಅಸುರರು ದೊಡ್ಡ ಸಂಖ್ಯೆಯಲ್ಲಿ ಅಳಿಯಲು ಬಾಣಾಸುರನ ಮಂತ್ರಿ ಕೂಪಕರ್ಣ ಮುಂದೊತ್ತಿಬರಲು ಕೃತವರ್ಮ ಅವನನ್ನು ತಡೆಯಲು "ನೀನಾರೊ ನರಗುರಿಸೆಣಸುವ ದಾನವರೆಮ್ಮೊಡನೆ" ಎಂದು ಕಾದಾಡಿ ಸಾಯಲು ಕುಂಭಾಂಡಕನು ಆವೇಶದಿಂದ ಬರುತ್ತಾನೆ. ಯದುಕುಲದ ಕ್ಷತ್ರಿಯರು ಅಧಮರು ಕೃಷ್ಣ ಜನಿಸಿದ ಯದುಕುಲಕ್ಕೆ ಪ್ರಳಯಕಾಲ ಬಂದಂತೆ ಮುಂತಾಗಿ ಕೂಗುತ್ತಾನೆ. ಈ ಯುದ್ಧದಲ್ಲಿ ಕೃತವರ್ಮನು ಮೂರ್ಛೆ ಹೋಗುತ್ತಾನೆ. ಆದರೆ ಕೂಡಲೇ ಎದ್ದು "ಲೇಸು ಲೇಸೆಲವೊ ಮಂತ್ರೀಶ ನಾನೊಮ್ಮೆ ಹಮ್ಮೈಸಿದೆನುತ ರಾಶಿ ವರ್ಗವ ಹೊಂದದೀಶರದೆಸಕವ ನೀಸಲೆ ನೋಡೆನುತ" ಬಾಣ ಬಿಡುತ್ತಾನೆ. ಮಂತ್ರಿ ಸಾಯುತ್ತಾನೆ.

ಇದೀಗ ಮಗಧನು ಬಂದು ಬಲರಾಮನಿಗೆ ಎದುರಾಗಿ "ಭಳಿ ಭಳಿರೆ ಹಿಡಿಬೇಗ ಬಲನೆ ನಿನ್ನಯ ಮುಸಲಗಳನು" ನಿನ್ನ ತಲೆಯನ್ನು ಗದೆಯಿಂದ ಒಡೆಯುತ್ತೇನೆ ಎನ್ನುತ್ತಾನೆ. ಬಲರಾಮನು ಎಡಗೈಯಿಂದ ಗದೆಯನ್ನು ಕಸಿದಾಗ ಮಾಗಧ ಮುಷ್ಠಿ ಯುದ್ಧಕ್ಕೆ ಮುಂದಾಗುತ್ತಾನೆ. ಮಾಗಧ ಸೋತು ಹೋಗಲು, ನೀನು ಮಹಾವೀರ, ಶಿಶುಪಾಲನೆ ಮೊದಲಾದ ವೀರರ ಮಿತ್ರ ದೇವರಿಂದ ವರಪಡೆದವ. ನಾವು ಗೋವಳರು ಆದರೂ ನಿನ್ನ ಗತಿ ಮುಗಿಯಿತು. ಈಗ ಕೊಲ್ಲುತ್ತೇನೆ ಎಂದು ನೇಗಿಲನ್ನು ಹೊಡೆಯಲು ಅಶರೀರವಾಣಿಯಾಗಿ ನೇಗಿಲನ್ನು ತೆಗೆ. ಈತನಿಗೆ ನಿನ್ನಿಂದ ಸಾವಿಲ್ಲ. ನಿನಗೆ ವಿಜಯವಾಯಿತು. ಹಿಂದಿರುಗು ಎಂಬ ಮಾತು ಕೇಳಿ ಮಾಗಧನನ್ನು ಬಿಟ್ಟನು.

ಹೀಗೆ ವಿಜಯಿಗಳಾದ ಬಲರಾಮ, ಕೃಷ್ಣ, ಸಾತ್ಯಕಿಯೇ ಮೊದಲಾದ ಯಾದವರು ತಮ್ಮ ಮನೆಯ ಕಡೆ ಹೆಜ್ಜೆ ಹಾಕಿದರು.

**೩. ರುಗ್ಮಿಣಿ ಸ್ವಯಂವರ**

ವಿದರ್ಭದೇಶದೊಳಗೆ ಕುಂಡಿನಾಖ್ಯಪುರವೆಂಬುದು ನಾಲ್ಕು ದ್ವಾರದ ನಡುವೆ ನೆಲೆಸಿದೆ. ಕೇರಿಕೇರಿಗಳು ತೋರಣಗಳಿಂದ ಅಲಂಕೃತವಾಗಿವೆ. ಎಲ್ಲ ಕಡೆ ಸಂಗೀತ, ನೃತ್ಯ, ವಾದ್ಯಗೋಷ್ಠಿಗಳು ಮೆರೆದಿವೆ. ಒಟ್ಟಾರೆಯಾಗಿ ಪಟ್ಟಣವನ್ನು ವರ್ಣಿಸಲು ಸರ್ಪರಾಜನಿಗೂ ಸಾಧ್ಯವಾಗದು.

ಇಂಥಲ್ಲಿ ರಾಜನಾದವನು ಭೀಷ್ಮಕ. ಸುಖದಿಂದ ರಾಜ್ಯವಾಳುತ್ತಿದ್ದನು. ಅವನಿಗೆ ರುಗ್ಮನೆಂಬವ ಹಿರಿಯ ಮಗ. ತಮಗೆ ಮಗಳೊಂದು ಇಲ್ಲವೆಂದು ರಾಣಿ ವಿಷ್ಣುವ್ರತವನ್ನು ಕೈಗೊಂಡು ಚಿಂತಿಸುತ್ತಿರುವಾಗ ಭೂಮಿಯಲ್ಲಿಯ ದುಷ್ಟಶಕ್ತಿಗಳನ್ನು ಕೊಂದು ಭೂಭಾರ ಇಳಿಸಲೆಂದೇ ಹರಿಯು ಅವತರಿಸಿರುನೆಂದರಿತ ಲಕ್ಷ್ಮೀ ಭೀಷ್ಮಕನ ಮಡದಿಯ ಉದರದಲ್ಲಿ ತಾನು ಹುಟ್ಟುವುದಾಗಿ ನಿಶ್ಚಯಿಸಿದಳು.

ಭೀಷ್ಮಕನ ಹೆಂಡತಿ ಚಂದ್ರಾನನೆ ಗರ್ಭವತಿಯಾಗಿ ನವಮಾಸ ಸಮೀಪಿಸಿದಳು. "ತಾಳಲಾರೆನು ಎನ್ನಂಗದ ವ್ಯಥೆಯ ಗಳಿಗೆಗಳಿಗೆಗೊಂದಲಗು ನಟ್ಟಿಂತಹದು" ಎಂದು ಶೋಕಿಸುತ್ತಿರುವಾಗ ಮಗು ಹುಟ್ಟಿತು. ಮಗುವನ್ನು ಮಜ್ಜನಾದಿಗಳನ್ನು ಮಾಡಿಸಿ, ರುಗ್ಮಿಣಿ ಎಂದು ಹೆಸರಿಟ್ಟರು. ಸೇವಕವರ್ಗದ ಸ್ತ್ರೀಯರು ಜೋ ಜೋ ಎಂದು ಹಾಡಿ ನಲಿಸಿದರು.

ಹೀಗಿರುತ್ತ ಒಂದು ದಿನ ದ್ವಾರಕೆಯಿಂದ ಜನರು ಬಂದು "ದೊರೆಯ ಸಮ್ಮುಖದಲ್ಲಿ "ಪವನ ಪಾವನಚರಿತ ಮಹಿಮೆಯಂ ಪರಿಪರಿಯ ರಾಗದಲಿ" ಹಾಡಿದರು. ಇದನ್ನು "ತರಳೆ ರುಗ್ಮಿಣಿ ಕೇಳಿ ಪರಿತೋಷಮಂ ತಾಳ್ದಳೂ".

ಬೆಳೆಯುತ್ತಿದ್ದ ಹುಡುಗಿ ಶ್ರೀಕೃಷ್ಣನ ರೂಪ ಸೌಂದರ್ಯವನ್ನು ನೆನೆಸುತ್ತ ಅವನ ಚರಿತ್ರೆಯನ್ನು ಕಣ್ಮುಂದೆ ತಂದುಕೊಳ್ಳುತ್ತ ತನ್ನ ಮುಂದಿರುವ ಪ್ರತಿಮೆಯೇ ಶ್ರೀಕೃಷ್ಣನೆಂದು ಗ್ರಹಿಸಿ "ಪತಿ ತನಗೆ ಶ್ರೀಕೃಷ್ಣನೆನುತಲಿ ಹಿತದಿ ಭಾವಿಪ ತನ್ನ ಮೋಹದ ಸುತೆಯ ಮತಮಂ ತಿಳಿದು ವಿಸ್ಮಯವಾಗಿ ಸಂತೋಷದಿಂದಿದ್ದರೂ ತಂದೆತಾಯಿಗಳು".

ಹೀಗೆ ಬೆಳೆದ ತನ್ನ ಮಗಳನ್ನು ಕೃಷ್ಣನಿಗೆ ಮದುವೆ ಮಾಡಿಕೊಡುವುದಾಗಿ ಭೀಷ್ಮಕನ ನಿಶ್ಚಯದಿಂದಿರಲು ಸೇವಕರು ಬಂದು ರುಗ್ಮನಿಗೆ ತಿಳಿಸಿದೊಡನೆ ರುಗ್ಮ ಸಿಟ್ಟಿನಿಂದ ಕಿಡಿಕಿಡಿಯಾದನು. ಹಾಗೆ ತಂದೆ ಬಳಿ ಹೋಗಿ ವಿರೋಧಿಸಿದನು. "ಪಾತಾಳ ಭೂವ್ಯೋಮಕೆಲ್ಲನಾಥ ಕಾಣ್ವೆ ಏತಕ್ಕಿಂತ ಬುದ್ಧಿ ನಿನಗೆ" ಎಂದು ತಂದೆ ಹೇಳಿದರೆ "ತೆಗೆ ತೆಗೆ ಜಾರ ಚೋರನ ಬಗೆಯನೆಲ್ಲ ಬಲ್ಲೆ ನಾನು ಜಗದೊಳು ಜಾತಿ ಹೀನಂಗೆ ಮಗಳೀಯಬೇಡಾ" ಎಂದನು. "ಸರ್ವರ ಹೃದಯದಲ್ಲಿ ವಾಸವಾಗಿರ್ಪಾತ" ಎಂದು ತಂದೆ ಬುದ್ಧಿ ಹೇಳಿದರೆ "ವೃದ್ಧರಯ್ಯ ತಾತಾ ನಿಮ್ಮ ಬುದ್ಧಿಯು ಹಾಗಿರಲಿ" ಕೃಷ್ಣ ಅಂಥ ವೀರನಲ್ಲವೆಂದೂ ಮಗಧ, ಶಿಶುಪಾಲರ ಮುಂದೆ ಆತ ಕಡಿಮೆಯವನೆಂದೂ ಹೇಳಿದರೂ ತಂದೆ "ಮಗನೆ ನಿನಗಿನ್ನೇನ ಹೇಳಲಿ ಜಗದ ಭಾರವ ಇಳಿಸಲೋಸುಗ ನಗಧರನು ತಾನುದಿಸಿದನು" ಎಂದು ಕೃಷ್ಣರಾಯನಲ್ಲಿ ಹಗೆತನ ಬೇಡವೆಂದೂ ಎಷ್ಟು ಹೇಳಿದರೂ ಕೇಳಲಿಲ್ಲ. ರುಗ್ಮನು ತಾನೇ ಓಲೆಯನ್ನು ಬರೆದು ಮಗಧ, ಶಿಶುಪಾಲರಲ್ಲಿಗೆ ಚರರನ್ನು ಕಳಿಸಿದನು.

ಚರರು ಮಾಗಧನಿಗೆ ಓಲೆಯನ್ನು ತಲುಪಿಸಿ ನೇರ ಚೈದ್ಯಭೂಪ ಶಿಶುಪಾಲನಲ್ಲಿಗೆ ಹೋಗಿ ಓಲೆಯನ್ನು ಕೊಡಲು ಅದರಲ್ಲಿ ಬರೆದಿರುವ "ಕೇಳಯ್ಯ ಚೈದ್ಯಭೂಪ ಸತ್ಕುಲದೀಪ" ಜನಕ ಭೀಷ್ಮಕರಾಯನು ತನ್ನ ಕುವರಿಯನ್ನು ಶ್ರೀಕೃಷ್ಣನಿಗೆ ಕೊಡುವುದಾಗಿ ಹೇಳಲು ಪ್ರತಿರೋಧಿಸಿ ತಾನು ನಿನಗೆ ಕೊಡುವುದಾಗಿ ನಿಶ್ಚಯಿಸಿದ್ದೇನೆ. ಓಲಗ ಸಹಿತ ಬಾ. ತಂಗಿಯನ್ನು ಕೊಡುವುದು ನಿನಗೇ. ಶ್ರೀಕೃಷ್ಣ ಯುದ್ಧಮಾಡಬಹುದು ಆದ್ದರಿಂದ ಸೈನ್ಯ ಸಹಿತ ಬಾ ಎಂಬ ಮಾತುಗಳನ್ನು ಓದಿ ಸಂತೋಷಗೊಂಡು ಮಂತ್ರಿಯನ್ನು ಕರೆದು ರುಗ್ಮನು ಬಾಲ್ಯಸ್ನೇಹದಿಂದ "ಶೀಲ ಗುಣವತಿಯಾದ ಶ್ರೀಲತಾಂಗಿಯನ್ನು ಎನಗೆ ನಾಳೆ ಕೊಡುವೆ ಒಪ್ಪುವುದೆಂದು ಓಲೆಬರೆದಿಹಾ" ಒಡನೆ ಬರುವೆನೆಂದು ನೀನು ಹೋಗಿ ತಿಳಿಸು ಎಂದು "ತೊಡುವುದುಡುವ ಒಡವೆಗಳ ಕೊಡಿಸು ಬಂದ ಗಡಣ ತಿಳಿಯಲಿ" ಎಂದು ಅಪ್ಪಣೆ ಮಾಡಿದನು. ಮಂತ್ರಿ ಬಂದ ಸಂಗತಿ ತಿಳಿದು ರುಗ್ಮ, ಶಿಶುಪಾಲ ಸುಖಿಯೇ ಮಾಗಧನು ಸುಖಿಯೇ ಇತ್ಯಾದಿ ವಿಚಾರಿಸಿದನು. ಮಂತ್ರಿ ಶಿಶುಪಾಲನೂ, ಅವನ ಪರಿವಾರದವರೂ, ಪ್ರಜೆಗಳೂ ಸುಖವಾಗಿರುವರೆಂದೂ ಮಾಗಧನು ಸ್ನೇಹದಿಂದಿರುವೆನೆಂದು ಉತ್ತರಿಸಿದನು. ಆತನನ್ನು ಒಡವೆ ಕಾಣಿಕೆಗಳೊಡನೆ ಭೀಷ್ಮಕನಲ್ಲಿಗೆ ಕಳಿಸಲು ಬಂದ ಮಂತ್ರಿಗೆ ಆಸನವನ್ನು ಕೊಟ್ಟು ಕುಳ್ಳಿರಿಸಿ ಇದನ್ನು "ನಿಮ್ಮೊಡಯನೇಕೆ ಕಳುಹಿದ ನಮ್ಮಿಂದ ಆಗುವುದೇನು ಕೇಳಯ್ಯ ಮಂತ್ರಿ" ಎಂದು ಹೇಳಿದಾಗ ಮಂತ್ರಿ ಮಹಾರಾಜನೇ ತಮ್ಮ ಪುತ್ರಿಯನ್ನು ನಮ್ಮ ದೊರೆ ಚೈದ್ಯನಿಗೆ ಕರುಣೆಯಿಂದ ಮದುವೆ ಮಾಡಿಕೊಡಬೇಕೆಂದು ವಿನಂತಿಸಿದನು. ಶಿಶುಪಾಲ ಸಂಪನ್ನನೇ, ಹೆಣ್ಣು ಕೇಳುವುದು ಉಚಿತವೇ. ಆದರೆ "ಕನ್ನೆಯ ಪಣೆಯಲ್ಲಿ ವಿಧಿ ತಾನು ಬರೆದಿರ್ಪುದನ್ನು ಮೀರುವರ್ಯಾರು?" ಎಂದುದನ್ನು ತಿಳಿದ ರುಗ್ಮನು ಸಿಟ್ಟಾಗಿ "ತಾತ ವೃದ್ಧನು ಪೇಳಿದುದು ನಿಜವೆಂದು ತೋರ್ಪುದು ಮೇಲೆ ನಡೆಸುವ ಭಾರ ನಮ್ಮದು ಚಿಂತೆ ಏತಕೆ ನಾಳೆ ಲಗ್ನವು ಬರಲಿ" ಎಂದು ಹೇಳಿ ಕಳಿಸಿದನು. ಮಂತ್ರಿ ಹೋಗಲು ರುಗ್ಮನು ಸುತ್ತೆಲ್ಲ ರಾಜರಿಗೆ ಪತ್ರ ಕಳಿಸುವುದಲ್ಲದೆ ಮದುವೆಯ ಏರ್ಪಾಡು ಮಾಡಿ, ಚೈದ್ಯನು ಕಳಿಸಿದ ಒಡವೆಗಳನ್ನು ರುಗ್ಮಿಣಿಗೆ ಕಳಿಸಿದನು.

ಅಂತಃಪುರದ ಗೆಳತಿಯರು ಬಂದು ಚೈದ್ಯನು ನಿನ್ನ ಮೇಲೆ ಮನವಿಟ್ಟು ಕಳಿಸಿದ ವಿವಿಧ ರತ್ನಾಭರಣಗಳನ್ನು ರುಗ್ಮನು ನಿನಗೆ ತಲುಪಿಸಲು ಕಳಿಸಿದ್ದಾನೆ, ಎಂದು ಹೇಳಿ ಆಭರಣ ಕೊಡುತ್ತಾರೆ. ಆತ ಕುಲದೊಳುತ್ತಮನು ಗುಣಶೀಲ "ಮತ್ತೊಂದು ನೆನೆಯದಲ್ಲವ ನೋಡಿ ವಿನಯದಿಂ ನಲಿದಾಡು ತಾಯೇ" ಎನ್ನುತ್ತಾರೆ. ಇದನ್ನು ಕೇಳಿದ ರುಗ್ಮಿಣಿ ಇಂತು ಹೇಳುತಲಿಪ್ಪ ಕಾಂತೆಯರ ನುಡಿಕೇಳಿ ಸಂತಾಪವನು ತಾಳ್ದ ಮನದೀ ಅಂತರಂಗದಲಿ ಶ್ರೀಕಾಂತನನು ನೆನೆದು ಗುಣವಂತೆ" ನೀವು ತಂದ ಒಡವೆಗಳನ್ನು ಇಟ್ಟು ಹೋಗಿ

“ಜಲಜಸಂಭವ ಬರೆದ ಬರಹದ ನೆಲೆಯ ಕಂಡವರಾರು ದಾನವ ಕುಲವಿರೋಧಿಯ ಬಲ್ಲವೆಂಗಳು ಸುಯ್ದುಲಲಿತಾಂಗಿ” ಅಣ್ಣನೆಂಬವನೆನಗೆ ಹಣ್ಣಿದನು ಮೃತ್ಯುವನು ಇನ್ನಾರುಗತಿ ಎನುತ ಕಣ್ಣೀರು ಗರೆದೂ” ಊಟವನ್ನು ಮಾಡದವಳಾಗಿ, ಯಾಕಾದರೂ ಹೆಣ್ಣಾಗಿ ಹುಟ್ಟಿದೆ ಎಂದು ಹಲುಬಿ ಮೂರ್ಛೆ ಹೋಗುತ್ತಾಳೆ. ತಾಯಿ ಬಂದು ಏಕೆ ಮೊಗ ಕುಂದಿತು ಕೇಳಲಾಗಿ ತಾಯಿಯೆ ಅಣ್ಣ ನನ್ನನ್ನು ಚೈದ್ಯನಿಗೆ ಕೊಡುವುದಾದರೆ ತಾನು ಬದುಕಲಾರೆ ಎಂದು ಗೋಳಿಡುತ್ತಾಳೆ. ತಾಯಿ, ಶ್ರೀಕೃಷ್ಣ ಅಸಾಮಾನ್ಯನು. ಅವನು ನಿನ್ನ ಇಚ್ಛೆಯನ್ನು ನೆರವೇರಿಸಿಕೊಳ್ಳುತ್ತಾನೆ ಎಂದು ಸಂತೈಸಿದಳು.

ಇದನ್ನು ತಿಳಿದ ರುಗ್ಮ ನಾಳೆ ತಾನೇ ಶಿಶುಪಾಲನಿಗೆ ರುಗ್ಮಿಯನ್ನು ಮದುವೆ ಮಾಡುತ್ತೇನೆಂದು ಸಕಲ ಸಿದ್ಧತೆ ಮಾಡಲು ಮಂತ್ರಿಗೆ ಆದೇಶಿಸುತ್ತಾನೆ. ಇಡೀ ರಾಜ್ಯವು ಶೃಂಗಾರಗೊಳ್ಳುತ್ತಿರುವಾಗ ಆ ಕಡೆ ಚೈದ್ಯನ ಮಂತ್ರಿ ತನ್ನ ರಾಜನಿಗೆ “ರುಗ್ಮನ ಚಿತ್ತದುತ್ಸಾಹಗಳನ್ನು ಸಭೆಯೊಳು ಬಿತ್ತರಿಸಿದಾ” ಇದನ್ನು ಕೇಳಿದ ಶಿಶುಪಾಲ ಸಕಲ ಸೈನ್ಯ ಸಿದ್ಧತೆಯನ್ನು ಮಾಡಲು ಮಂತ್ರಿಗೆ ಹೇಳಿ “ಚೈದ್ಯನಾಗ ಭೂಮಿಕಾಂತ ಜರೆಯ ಸುತರ ಕೂಡಿಕೊಂಡು ಬೇಗಾ ಚಾರುತರ ಬಾಸಿಗವಕಟ್ಟಿ ನಲವಿಂದಾ ಸರ್ವಧಾರಿಣೀಶಾರನ್ನು ಕೂಡಿ” ಬರುತ್ತಿರುವಾಗ ಅನೇಕ ದುಶ್ಶಕುನಗಳು ಕಂಡವು.

ಬಂದ ದಿಬ್ಬಣವನ್ನು ರುಗ್ಮನು ಎದುರುಗೊಳ್ಳುತ್ತಾನೆ. ಬಂಧುಗಳೂ, ಪುರೋಹಿತರು ಕಲಶಕನ್ನಡಿಯನ್ನು ಹಿಡಿದ ವನಿತೆಯರೂ ಎದುರುಗೊಳ್ಳುತ್ತಾರೆ. ಈ ಕಡೆ ರುಗ್ಮಿಣಿ ವ್ಯಥೆಮಾಡಿ ಉಪಾಯಗಾಣದೆ ಒಬ್ಬ ಬ್ರಾಹ್ಮಣನನ್ನು ಕರೆದು ಕೃಷ್ಣನಿಗೆ ಒಂದು ಪತ್ರವನ್ನು ಕಳಿಸಿ ಕೊಡುತ್ತಾಳೆ. ಆ ಬ್ರಾಹ್ಮಣನು ಊರುಗಳನ್ನೂ ಕಾಡುಗಳನ್ನು ನೋಡುತ್ತ ಕೃಷ್ಣನಲ್ಲಿಗೆ ತಲುಪುತ್ತಾನೆ. ಕೃಷ್ಣ ಅವನನ್ನು ಕರೆದು ಕುಳ್ಳಿರಿಸಿ “ಎಲ್ಲಿಂದೆಲ್ಲಿಗೆ ಬಂದಿರಿ ಯಾವ ದೇಶ ನಮ್ಮಲ್ಲಿ ಕಾರ್ಯವೇನು” ಮುಂತಾಗಿ ಕೇಳಲು ಆತ ರುಗ್ಮಿಣಿಯ ಪತ್ರವನ್ನು ಕೊಟ್ಟನು.

“ಶ್ರೀ ರಮಣಿಯರಸ ಸುವಿಚಾರಿ ಸನ್ನುತತೋಷ ಮಾರನಯ್ಯನೆ ನಿನ್ನ ಪದಕೆ” ಎಂದು ಶುರುಮಾಡಿ “ಲಾಲಿಸು ಕೃಪಾಂಬುನಿಧಿ ಬಾಲತನದಲಿ ನಾನು ಶೀಲ ಗುಣಗಳಕೇಳಿ ನಿನ್ನ ಮೇಲೆ ಮನವಿರಿಸಿಹೆನು” ಆದರೆ ಅಣ್ಣ ತನ್ನನ್ನು ಚೈದ್ಯನಿಗೆ ನಾಳೆಯೇ ಮದುವೆ ಮಾಡುವ ತಯಾರಿ ನಡೆಸಿದ್ದಾನೆ. “ಒಡೆಯ ನೀನಿಹೆನೆಂದು ಪಿಡಿದಿಹೆನು ಜೀವವನು ತಡೆಯದ್ಯೆತರಬೇಕು ಜವದೀ” ಎಂದು ಬರೆದ ಲೇಖನವನ್ನು ಓದಿ ಸಂತೋಷದಿಂದ ಅಣ್ಣ ಬಲರಾಮನನ್ನು ಕರೆದು ಸಂಗತಿಯನ್ನು ತಿಳಿಸಲು ಇಬ್ಬರೂ ಹೊರಟುಬಿಡುತ್ತಾರೆ. ಅದಕ್ಕೂ ಮೊದಲು ಬ್ರಾಹ್ಮಣನು ಅವರು ಬಂದು ರುಗ್ಮಿಣಿಯ ಸೆರೆ ಬಿಡಿಸಬೇಕೆಂದೂ, ವೈರಿಗಳನ್ನು ನಾಶಮಾಡಬೇಕೆಂದೂ ತನಗೆ ಅಭಯಕೊಡಿ ಎಂದು ಅಭಯ ಪಡೆದು ರುಗ್ಮಿಣಿಯ ಕಡೆ ಧಾವಿಸುತ್ತಾನೆ.

ಇತ್ತ ರುಗ್ಮಿಣಿಯು ಪತ್ರ ತೆಗೆದುಕೊಂಡು ಹೋದ ಬ್ರಾಹ್ಮಣನು ಇನ್ನೂ ಉತ್ತರತರಲಿಲ್ಲವೆಂದು ಬಹುಶಃ ಹರಿಯು ಹೆಂಗಸು ಪತ್ರ ಬರೆದಳೆಂದು ಅದನ್ನು ತಂದಿದ್ದಕ್ಕಾಗಿ ಹಂಗಿಸಲಾಗಿ ವಿಪ್ರ ಮೋರೆತೋರಲು ನಾಚಿಕೆಯಾಗಿ ಎಲ್ಲಾದರೂ ಹೋದನೇ ಮುಂತಾಗಿ ಚಿಂತಿಸಿ ತನಗಿನ್ನಾರು ಗತಿ ಎಂದು “ಕೆಟ್ಟೆನಕಟ ಕೃಷ್ಣ ಕೈಯಬಿಟ್ಟ” ಎಂದು ಸಖಿಯೊಡನೆ ಮರುಗುತ್ತಿದ್ದಳು. ಅಷ್ಟು ಹೊತ್ತಿಗೆ ವಿಪ್ರ ಬಂದು “ಬರೆದ ಓಲೆಯ ನೋಡಿ ಮುರಹರನು ಪ್ರೀತಿಯ ಮಾಡಿ ಶೀಘ್ರದಲಿ ದುರುಳರ ಶಿರಗಳ ತಂದು ಭರದೊಳು ನಿನ್ನನ್ನು ಕದ್ದೊಯ್ವೆನೆಂದ” ಎನ್ನಲು ರುಗ್ಮಿಣಿಗೆ ಬಹಳ ಸಂತೋಷವಾಯಿತು.

ಬಲರಾಮ, ಕೃಷ್ಣರು ಕುಂಡನೀಪುರಕ್ಕೆ ಬಂದುದನ್ನು ಕಂಡ ಭೀಷ್ಮಕರಾಜನು “ಏನಯ್ಯ ರಂಗ ನೀಲನಿಭಾಂಗ ಬಾಲೆಗೋಸ್ಕರ ಬಂದು ಸುಮ್ಮನೆ ವೇಳೆ ಕಳೆವುದು ನೀತಿಯೇ?” ಎಂದು ಕೇಳಲಾಗಿ ಕೃಷ್ಣನು ಒಳಗೆ ಬರುತ್ತಾನೆ. “ಹರಿಯೇ ಲಾಲಿಸು ನಿನ್ನ ಸಿರಿಪಾದವನು ಕಂಡು ಹರಿದು ಹೋದುದು ವೆನ್ನದುರಿತ” ಎಂದು ಸ್ವಾಗತಿಸಿ ಎಲ್ಲರ ಕ್ಷೇಮ ಸಮಾಚಾರವನ್ನು ವಿಚಾರಿಸಿ ತನ್ನ ಮಗಳ ಕೈ ಹಿಡಿದು ಪೊರೆ ಎಂದು ಕೇಳಿಕೊಂಡನು.

ಇನ್ನೊಂದು ಕಡೆ ರಾಜರು ಮಾಗಧನೊಡನೆ ನಿನ್ನಿಂದಾಗಿ ನಮಗೆ ಧೈರ್ಯ, ಕೃಷ್ಣ ಬಂದಿದ್ದಾನೆ. ತರಳೆಯನ್ನು ಒಯ್ಯಬಹುದು ಚೈದ್ಯನಿಗೆ ಮಗಳನ್ನು ಕೊಡಹೇಳು ಎಂದು ಒತ್ತಾಯಿಸುತ್ತಾರೆ. ಆ ಬಗ್ಗೆ ಹೆದರಬೇಡಿ, ತನ್ನೆದರು ಯಾದವರ ಪಾಡೇನು ಎಂದು

ಅವರಿಗೆ ಧೈರ್ಯ ಹೇಳುತ್ತಾನೆ. ಹಾಗೆಯೇ ಭೀಷ್ಮಕನೊಡನೆ ಬೇಗ ಚೈದ್ಯನಿಗೆ ಮಗಳ ಧಾರೆಯೆರೆ ಎನ್ನುತ್ತಾನೆ. ಆಗ ಭೀಷ್ಮಕನು "ರುಗ್ಮಿಣಿಯ ಕುಲದೇವಿಯನ್ನು ಮೊದಲೂ ಒಲಿದು ಪೂಜೆಯ ಮಾಡಲೀ ಬಳಕ ಶುಭ ಕೆಲಸವನು ಕೈಗೊಳ್ಳಲೀ" ಎನ್ನುತ್ತಾನೆ. ಇದಕ್ಕೆ ರುಗ್ಮನೂ ಒಪ್ಪಿ ಭಟರನ್ನೂ, ಕುದುರೆಗಳನ್ನು ಸಂಗಡವಿಟ್ಟು ತಂಗಿಯನ್ನು ದೇವಿಗುಡಿಗೆ ಕಳಿಸುತ್ತಾನೆ. ಆಕೆ ಗುಡಿಗೆ ಬಂದು "ಪಾಲಿಸೆ ಪಾರ್ವತಿ ಇಷ್ಟಾರ್ಥವನ್ನು ಬಾಲೆಂದು ಧಾರಿಣಿ ಭಾಗ್ಯ ಪ್ರದಾಯಿನಿ" ಎಂದು ಮುಂತಾಗಿ ಸ್ತುತಿಸಿ ಪೂಜಿಸಿ ಹಿಂದಿರುಗುತ್ತಿದ್ದಾಗ ಕೃಷ್ಣ ಅವಳನ್ನು ತನ್ನ ರಥಕ್ಕೆ ಏರಿಸಿಕೊಳ್ಳುತ್ತಾನೆ. ಬಲರಾಮನು ಕೃಷ್ಣನನ್ನು ಮುಂದಕ್ಕೆ ದ್ವಾರಕೆಯೆಡೆ ಕಳಿಸಿ ತಾನು ನಿಂತುಕೊಳ್ಳುತ್ತಾನೆ. ಇದನ್ನು ಕಂಡ ಮಾಗಧನು ಕಿಡಿಕಿಡಿಕಾರಿ ಯಾದವ ಸೈನಿಕರನ್ನು ಪುಡಿಗೈಯ್ಯುತ್ತ ಮುಂದೆ ಬರುತ್ತಾನೆ.

ಇದನ್ನು ಕಂಡ ಬಲರಾಮನು ತನ್ನ ಹಲಾಯುದದಿಂದ ಅವರನ್ನು ಬಡಿದುರುಳಿಸುತ್ತಾ ಕೋಲಾಹಲವೆಬ್ಬಿಸಿದನು. ಆದರೆ ಅವರೂ ಬಲರಾಮನನ್ನು ಹೊಡೆಯುತ್ತ "ಕನ್ನೆಯ ಕದ್ದೊಯ್ದ ಖೂಳನೆ ಶಿರವನ್ನರಿಯುವೆ ನೋಡು ನೋಡು ಚೋರನೆ" ಎಂದು ಹಂಗಿಸಿದಾಗ ಬಲರಾಮನು ತರುಣಿಯ ನೆಪದಿಂದ ಜೀವ ಕಳೆದುಕೊಳ್ಳುತ್ತೀರಿ ಸುಮ್ಮನೆ ಹಿಂದಿರುಗಿ ಎಂದು ಬಡಿಯ ತೊಡಗಲು ಮಾಗಧ ಮೊದಲಾದವರು ಅಸಹಾಯಕರಾಗಿ ಈಗ ಯುದ್ಧ ಬೇಡ ಹಿಂದಕ್ಕೆ ಹೋಗುವ ಎಂದು ಚೈದ್ಯನನ್ನು ಸಂತೈಸಲು ಆ "ಹರಹರೆನಗೀ ದುರ್ದೆಶೆ ದೊರಕಿದುದೇಹಾಯೆನುತ ತನ್ನಯ ಬಾಸಿಗವ ತೆಗೆದಿರಸಿ ಬರದೀ ಮುಂಗಡೆಯೊಳಿರಿಸಿದ್ದ ಚೆಲುವಿನ ಪೊಂಗಲಶ ಕನ್ನಡಿಯ ಕಾಣುತ ಕಂಗಳಲಿ ಕಿಡಿಗೆದರಿ ಬಿಸುಟನು ಅಂಗಳದಲೀ".

ಈ ರೀತಿ ಅವಮಾನಿತರಾಗಿ ಅವರೆಲ್ಲ ತೆರಳಲು ರುಗ್ಮನು ಕೃಷ್ಣನ ಬೆನ್ನಟ್ಟಿಕೊಂಡು ಹೋಗುತ್ತಾನೆ. "ನಿಲ್ಲು ನಿಲ್ಲೆಲೊ ಬಡ ಗೊಲ್ಲನೆ ಕಳ್ಳತನಗಳೇಕೆ ಖುಲ್ಲನೆ" ಎಂದು ಅಬ್ಬರಿಸಿ ತನ್ನ ತಂಗಿಯನ್ನು ಬಿಟ್ಟು ಹೋಗದಿದ್ದರೆ ತುಂಡರಿಸುತ್ತೇನೆ ಎಂದು ಹೂಂಕರಿಸುತ್ತಾನೆ. "ಹಿರಿಯ ಭಾವಯ್ಯ ಕೇಳ್ ತಂಗಿಯ ದಯವಿರಿಸಿ ಮಾಡೆನಗೀ ಪರಿಣಯ" ಎಂದು ಕೃಷ್ಣ ಹೇಳಿದುದನ್ನು ಕೇಳಿ "ಬೊಗಳಬೇಡವೋ ಬಾಲೆಯನು ಬಿಡೊ" ಎಂದು ಅರಚುತ್ತಾನೆ. ನೀನು ಮಗಧನಿಗೆ ಹೆದರಿ ಕಡಲಿನಲ್ಲಿ ಮನೆ ಮಾಡಿಕೊಂಡಿದ್ದಿಯಾ ತರಳೆಗಾಗಿ ಬಂದು ಇಲ್ಲಿ ತಲೆಕೊಡುವೆಯಾ ಮುಂತಾಗಿ ಹಂಗಿಸಿ ಬಾಣ ಬಿಡುತ್ತಾನೆ. ಈತನ ಅಬ್ಬರವನ್ನು ನೋಡುತ್ತ ಮುಗುಳ ನಕ್ಕು ಕೃಷ್ಣ ಚೋರತನದಲ್ಲಿ ಬಂದದ್ದು ಹೌದು. ಈಗ ಬಲತೋರು ಎಂದು ಅಸ್ತ್ರ ಪ್ರಯೋಗಿಸಲು ರಥವು ಛಿದ್ರವಾಗುತ್ತದೆ. ರುಗ್ಮನು "ವಾಸುದೇವ ನಿನ್ನ ತಲೆಯ ಈಶ ತಾನೆ ಬರಲಿ ಕೇಳು ನಾಶ ಮಾಡದುಳಿಯೆ" ಎಂದು ಬಾಣ ಬಿಡುತ್ತಾನೆ. ಕೃಷ್ಣನು ಕೆರಳಿ ಆತನ ಸೆರೆ ಹಿಡಿದು ಕುತ್ತಿಗೆ ಕಡಿಯುತ್ತೇನೆ ಎಂದು ಮುಂದೆಬಂದನು.

ಇದನ್ನು ಕಂಡ ರುಗ್ಮಿಣಿ "ಕೊಲ್ಲಬೇಡವೀಗಾ ನಮ್ಮಣ್ಣನ ಕೊಲ್ಲಬೇಡಾ" ಎಂದು ಬೇಡಿಕೊಳ್ಳುತ್ತಾಳೆ. ಬಲರಾಮನು ಬಂದು ಅವನನ್ನು ಸೆರೆಬಿಡಿಸಿ, ಅರಿಯದೇ ಆದ ತಪ್ಪು ಬೇಸರ ಮಾಡಿಕೊಳ್ಳಬೇಡ ಇತ್ಯಾದಿ ಹೇಳಿ ಸಾಂತ್ವನಪಡಿಸಿದನು.

ಮುಂದೆ ರುಗ್ಮಿಣಿ, ಬಲರಾಮ ಇತ್ಯಾದಿಗಳು ಸೇರಿ ಮಧುರೆಗೆ ಹಿಂದಿರುಗುತ್ತಾರೆ. ವಸುದೇವನು ಸಂತೋಷದಿಂದ ಭೀಷ್ಮಕನನ್ನು ಕರೆಸಿ ಮದುವೆ ಸಮಾರಂಭ ನೆರವೇರಲಿ ಎನ್ನುತ್ತಾನೆ. ಉದ್ಧವನನ್ನು ಬಗೆಬಗೆಯ ಕಾಣಿಕೆಗಳನ್ನು ಕೊಟ್ಟು ಕುಂಡಲಿನೀಪುರಕ್ಕೆ ಕಳಿಸುತ್ತಾರೆ. ಅವರೆಲ್ಲ ಬರಲು ವಾಸುದೇವನು ಸತ್ಕರಿಸುತ್ತಾನೆ. ಹೀಗೆ ಮದುವೆಯ ಉತ್ಸವವು ವಿಜ್ರಂಭಣೆಯಿಂದ ನಡೆಯಿತು.

**೪. ಶ್ರೀಕೃಷ್ಣ ವಿವಾಹ**

ವಿದರ್ಭ ದೇಶದ ಕುಂಡಿನಿ ಪುರದ ಅರಸು ಭೀಷ್ಮಕನಿಗೆ ಓರ್ವ ಮಗಳೂ ಐದು ಜನ ಮಗಂದಿರೂ ಇದ್ದರು.. ಒಂದು ದಿನ ರಾಜಸಭೆಯನ್ನು ನೆರವೇರಿಸಿ ತನ್ನ ಮಂತ್ರಿಗಳನ್ನು ಕರೆದು ಮಗಳು ರುಕ್ಮಿಣಿಗೀಗ ಹದಿನಾರು ವರ್ಷವಾಯಿತು. ಅವಳಿಗೆ ಲಗ್ನಮಾಡಬೇಕು. "ಸರಸಿಜನೇತ್ರನೇ ಹರಿಯಬಿಟ್ಟನ್ಯಾರು ಸಲ್ಲರೆಂದು ಅರಿತಿಹೆ" ಎನ್ನಲಾಗಿ ಮಂತ್ರಿ ಕೈಮುಗಿದು ತಾರುಣ್ಯಕ್ಕೆ ಬಂದ ಮಗನಿದ್ದಾನೆ. ಅವನನ್ನು ಕೇಳಿ ಮುಂದಿನ ಕೆಲಸ ಮಾಡಬಹುದು ಎನ್ನಲು ರುಕ್ಮನಿಗೆ ಹೇಳಿ ಕಳಿಸಲಾಗಿ ಆತ ಬಂದು ದೈನ್ಯದಿಂದ ತನ್ನ ಕರೆಸಿದ ಕಾರಣವೇನು ಎಂದು ಕೇಳುತ್ತಾನೆ. ಭೀಷ್ಮಕನು ರುಕ್ಮಿಣಿಗೆ ಹದಿನಾರು ವರ್ಷ ತುಂಬಿದವು. ಆಕೆಗೆ

ಯೋಗ್ಯನಾದವನೆಂದರೆ ಕೃಷ್ಣನೊಬ್ಬನೇ. ಆದ್ದರಿಂದ ಆತನನ್ನು ಕರೆದು ರುಕ್ಮಿಣಿಯನ್ನು ಮದುವೆಯಾಗುವಂತೆ ಕೇಳಿಕೊಳ್ಳಬೇಕು ಎನ್ನಲು ಕೆರಳಿ, "ಜನಕನೇ ಭಳಿಭಳಿರೆಂಬೆನು ತವಮನಕೀನೆಂಟತೆಯು ಘನವಾದುದೆ ಕುಲಪರಿಕಿಸೆ ಗೋವಳ", ಗುಣವೋ ಸೋದರ ಮಾವನನ್ನೇ ಕೊಂದವನು. ಬೆಕ್ಕು ಕದ್ದು ಹಾಲು ಕುಡಿವಂತೆ ಹಾಲು-ಮೊಸರ ನೆಕ್ಕುವ ಶೀಲವುಳ್ಳವನು. ಅದರ ಬದಲು ಧೀರನೂ ಶೂರನೂ ಆದ ಶಿಶುಪಾಲನಿಗೆ ರುಕ್ಮಿಣಿಯನ್ನು ಕೊಡುವುದು ಮೇಲು. ಆದ್ದರಿಂದ ಆತನಿಗೆ ಲೇಖನ ಬರೆಸು ಎಂದಾಗ, ಕೃಷ್ಣ ತಿಳಿದರೆ ವಿಘ್ನವ ಮಾಡದೆ ಇರನು ಎಂದು ಸೂಚಿಸಲಾಗಿ "ಬಿಡು ಬಿಡೆನ್ನೆಯ ಜನಕನ ಕೃಷ್ಣನೆನ್ನೊಡನೆ ಕಪಟವನು ತೋರ್ಪನೆ" ಎಂದು ಅಬ್ಬರಿಸುತ್ತಾನೆ.

ಅದೇ ಹೊತ್ತಿನಲ್ಲಿ ದ್ವಾರಕೆಯಲ್ಲಿ ಕೃಷ್ಣನು ಸಭೆಗೊಂಡಿರುವಾಗ ಬ್ರಾಹ್ಮಣನೊಬ್ಬನನ್ನು ಕಂಡು ಸ್ವಾಗತಿಸಿ ಬಂದ ಕಾರಣವನ್ನು ಕೇಳುತ್ತಾನೆ. ಆತ ತನ್ನೊಡನೆ ರುಕ್ಮಿಣಿ ಕೊಟ್ಟು ಕಳುಹಿಸಿದ ಪತ್ರವನ್ನು ಕೊಡುತ್ತಾನೆ. ಅದು "ಕುಂಡಿನಾಪುರದ ಭೀಷ್ಮಕನ ತರಳೆ ರುಕ್ಮಿಣಿ ಬಿನ್ನಹ" ಎಂದು ಪ್ರಾರಂಭವಾಗಿ "ವರಿಸಿಕೊಂಬುದು ಎನ್ನತೊರೆದರೆ ಜೀವದೊಳಿರೆನು ನಿಶ್ಚಯಗಳಿದು ತರುಣಿ ಹತ್ಯಾದೋಷಬಹುದು ನಂಬಿಹೆ ಸ್ವಾಮಿ ಚರಣಕ್ಕೆ ಬಿನ್ನಹವು" ಎಂದು ಮುಕ್ತಾಯವಾಗುತ್ತದೆ. ಪ್ರೀತಿಯಿಂದ ಕೃಷ್ಣನು ಬ್ರಾಹ್ಮಣನಿಗೆ ಉಡುಗೊರೆ ಕೊಟ್ಟು ಕಳಿಸುತ್ತಾನೆ.

ಇತ್ತ ಕಡೆ ಚೈದ್ಯ ದೇಶದ ಶಿಶುಪಾಲ ಸಭೆಗೊಡುತ್ತಿರಲು ರುಕ್ಮನ ಚಾರರು ಹೋಗಿ ಪತ್ರ ಕೊಡುತ್ತಾರೆ. ಪತ್ರದಲ್ಲಿದ್ದ "ಅನುಜೆ ರುಕ್ಮಿಣಿಯನ್ನು ಚಿನುಮಯನಿಗೀಯುವರ್ ಜನಕನೆಣ್ಣಿದನಿದಕೆ ಮನವ ಕೊಡದಾನು ನಿನಗೆ ಪರಿಣಯದಿಂದ ಬರುವ ಸಪ್ತಮಿ ದಿನದಿ ವನಜಾಕ್ಷಿಯಳನೀವೆನೆನುತ ನಿಶ್ಚಯಿಸ"ಲಾಗಿದೆ. ತಂಗಿ ರುಕ್ಮಿಣಿಯನ್ನು ಕೃಷ್ಣನಿಗೆ ಮದುವೆಮಾಡಿ ಕೊಡಲು ತಂದೆ ನಿಶ್ಚಯಿಸಿದ್ದನು. ತಾನು ಅದನ್ನು ಅಲ್ಲಗಳೆದು ನಿನಗೆ ಕೊಡಲು ನಿಶ್ಚಯಿಸಿದ್ದೇನೆ. ಬರುವ ಸಪ್ತಮಿಯ ದಿನ ಮದುವೆ ನಿಶ್ಚಯಿಸಲಾಗಿದೆ ಎಂದಿದ್ದುದನ್ನು ನೋಡಿ "ಭಳಿಭಳಿರೆನ್ನಯ ಸಖ ರುಕ್ಮನ ಹೋಲುವರ ಇಳೆಯೊಳಗಾರಿಹರು" ಎಂದು ಮುಂತಾಗಿ ಹೇಳಿಕೊಳ್ಳುತ್ತಾನೆ. ಚರರನ್ನು ಮಾಗಧನಲ್ಲಿಗೆ ಕಳಿಸಿ ಆಮಂತ್ರಣವನ್ನೀಯುತ್ತಾನೆ. ಮತ್ತು ದಿಬ್ಬಣ ತೆಗೆದುಕೊಂಡು ಕುಂಡಿನಿ ಪುರಕ್ಕೆ ಹೊರಡುತ್ತಾನೆ.

ಇಲ್ಲಿ ಮದುವೆಯ ತಯಾರಿ ನಡೆಯುತ್ತಿರುವಾಗ ರುಕ್ಮಿಣಿ ಚಿಂತೆಪಡುತ್ತ ಬ್ರಾಹ್ಮಣ ಇನ್ನೂ ಏಕೆ ಬರಲಿಲ್ಲ ? ಬರಲಿಕ್ಕಿಲ್ಲವೇ? ಚೈದ್ಯನ ಮೋರೆಯನ್ನು ಹೇಗೆ ನೋಡಲಿ ತಾನು ನಿರ್ಭಾಗ್ಯೆ ತನ್ನ 'ಅಣ್ಣನೇ ಕೊರಳು ಕೊಯ್ಯುತ್ತಾನೆ ಎಂದು ಮರುಗುತ್ತಾಳೆ.

ಅಷ್ಟರಲ್ಲಿ ಚೈದ್ಯನೇ ಮೊದಲಾದ ಅರಸರು ಬರುತ್ತಾರೆ. "ತವಕದಿ ರುಕ್ಮನಾಕ್ಷಣದಿ ಬಾಂಧವರೊಡಗೂಡಿ ಸಂಭ್ರಮದಿ" ಎಲ್ಲರನ್ನೂ ಸ್ವಾಗತಿಸುತ್ತಾನೆ. "ಸತಿಯರೊಳ್ ಬೇಗ ಗಿರಿಜಾಲಯಕ್ಕೆ ರುಕ್ಮಿಣಿಯನ್ನು ಕರೆದೊಯ್ದು ವಿರಚಿಸಿ ಪೂಜೆಗಳ" ಎಂದು ಕಳಿಸುತ್ತಾನೆ. ಅಷ್ಟು ಹೊತ್ತಿಗೆ ದ್ವಾರಕೆಯಲ್ಲಿ ಬಲರಾಮನು ಸಭೆ ನಡೆಸುತ್ತಿರುವಾಗ ಕೃಷ್ಣ ರುಕ್ಮಿಣಿಯ ಪತ್ರದ ಸಂಗತಿ ತಿಳಿಸಲು "ಹೊರಡು ತಡವೇಕೆಂದು" ಹೇಳುತ್ತಾನೆ. ಕುಂಡಿನೀ ನಗರಕ್ಕೆ ಅವರು ಬರಲು ಭೀಷ್ಮಕನು ಸ್ವಾಗತಿಸುತ್ತಾನೆ. ಗಿರಿಜಾಲಯಕ್ಕೆ ಹೋದ ರುಕ್ಮಿಣಿಯನ್ನು ಕರೆತರಲು ಸಖಿಯರು ಹೋಗಲು ಶಿಶುಪಾಲನು ಹರುಷದಿಂದ ಮಂಟಪದಲ್ಲಿ ಕುಳಿತಿರುವುದನ್ನು ಕೃಷ್ಣನು ನೋಡಿ ಕೂಡಲೇ ರಥವೇರಿ ಗಿರಿಜಾಲಯದ ಕಡೆಗೆ ಹೋಗಿ ತಿರುಗಿ ಬರುತ್ತಿರುವ ರುಕ್ಮಿಣಿಯನ್ನು ಸಂಸಾರ ಪತಿತರನ್ನು ಎತ್ತಿಕೊಳ್ಳುವ ಹಾಗೆ ಎತ್ತಿಕೊಂಡು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ನಡೆಯುತ್ತಾನೆ. ಈ ಸುದ್ದಿಯನ್ನು ಸತಿಯರು ತಿಳಿಸಲಾಗ ರುಕ್ಮನು "ಅರೆರೆ ಗೋವಳಬಾಲನೆನ್ನುತ ಬಾರೆಲೋ ಚೈದ್ಯ ನಾರಿಮಣಿಯನ್ನು ಪೋರನೊಯ್ವನು" ಎಂದು ಬೊಬ್ಬಿರಿಯಲಾಗಿ ಮಾಗಧ ಇತ್ಯಾದಿಗಳು ಶಸ್ತ್ರ ಹಿಡಿದು ಹೊರಡುತ್ತಾರೆ..

ರುಕ್ಮನು "ಫಡ ಫಡೆಲೋ ಗೋವಳರ ಹುಡುಗತನಗಳ ಶೂರರೊಡನೆ ತೋರುವಿರ್ಯೆಸೆ ಭಳಿರೆ" ಎಂದು ಅಬ್ಬರಿಸುತ್ತಾನೆ. "ದೊರಕಲಾಪುದೆ ಸುರಭಿ ತಿರುಕನಿಂಗಲೆ ಮರುಳೆ" ಎಂದು ಬಲರಾಮ ಕೇಳಿದರೆ ಶಿಶುಪಾಲ, ಗೋವಳನೆ, ಕಳ್ಳನೆ ನಿನ್ನ ಸಾಹಸವನ್ನು ತೋರು ಎಂದು ಅಬ್ಬರಿಸಿದನು. ಆದರೆ ಬಲರಾಮನು ತನ್ನ ಹಲಾಯುಧದಿಂದ ಅವನ ಬಾಣಗಳನ್ನು ನಿವಾರಿಸಿಕೊಳ್ಳುತ್ತಾನೆ. ಮುಂದೆ ನಡೆದ ಯುದ್ಧದಲ್ಲಿ ಶಿಶುಪಾಲನು ಮೂರ್ಛೆ ಹೋಗಲು ಮಗಧನು ಯುದ್ಧಕ್ಕೆ ನಡೆಯುತ್ತಾನೆ. "ಹದಿನೇಳು ಬಾರಿಯೊಳು

ಗೋವಳಕೃಷ್ಣನೊದಗಿ ಕಾಲ್ದೆಗೆದಾಗಳು ಬೆದರಿಪೋಡಿಹ ಭಂಡರುಭಯರ ಕ್ಷಣದೊಳು ನಿಧನಮಾಳ್ಪೆನು" ಎಂದು ಅಬ್ಬರಿಸುತ್ತಾನೆ. ಇಬ್ಬರಲ್ಲಿಯೂ ಭಯಂಕರ ಯುದ್ಧ ನಡೆಯುತ್ತದೆ. ಆ ಯುದ್ಧದಲ್ಲಿ ಮಾಗಧ ಮೂರ್ಛೆ ಹೋಗಲು ಕೂಡಲೆ ಚೈದ್ಯನನ್ನು ಕರೆದು ಇಂದು ನಮಗೆ ಯುದ್ಧದಲ್ಲಿ ಜಯವಿಲ್ಲ. ತರುಣಿಯ ಆಸೆ ಈಗ ಬೇಡ ಎನ್ನುತ್ತಾನೆ.

ರುಕ್ಮನು ಹಿಂದಿರುಗದೆ "ಅರೆರೆ ಜಾರ ಕೃಷ್ಣ ಧುರದಿ ನಿನ್ನ ಕೊಲದೆ ಪುರಿಗೆ ತೆರಳುವಧಟನಲ್ಲ" ಎಂದು ಮೇಲುವರಿದು ಹೋಗುತ್ತಾನೆ. "ಭಾವನೆನ್ನೊಳೇಕೆ ಮುನಿಸು ಸಾವಧಾನದಿಂದ ಸತಿಯ ನೀವುದುಚಿತ" ಎಂದು ಮೂದಲಿಸಿದರೆ ರುಕ್ಮ "ಬಲ್ಲೆ ನಿನ್ನ ಕಪಟ ಕೃತ್ಯ ಬಿಲ್ಲಹಬ್ಬಕೆನುತಪೋಗಿ ಕಳ್ಳ ನೀನು ಕಂಸನನ್ನು ಕೊಂದೆ" ಎಂದು ಹೀಯಾಳಿಸುತ್ತಾನೆ. ಹಾಗೆಯೇ ಪೂತನಿಯ ಕೊಂದ ಬಗ್ಗೆ, ಯಯಾತಿಯ ಶಾಪದ ಬಗ್ಗೆ ಒಂದೊಂದನ್ನು ಹೇಳಿ ಕೃಷ್ಣನನ್ನು ಜರೆಯುತ್ತಾನೆ. ಇದರಿಂದ ಕ್ರುದ್ಧನಾದ ಕೃಷ್ಣ "ತೋರೆಲೊ ನಿನ್ನಯ ಪರಾಕ್ರಮವೆನ್ನೊಳು" ಎಂದು ಯುದ್ಧಕ್ಕೆ ನಿಲ್ಲಲು ರುಕ್ಮ ಅನೇಕ ಬಾಣಗಳಿಂದ ಆತನನ್ನು ಹೊಡೆಯುತ್ತಾನೆ. ಕೊನೆಗೆ ಕೃಷ್ಣ ಅವನ ಕೈಗಳ ಕಟ್ಟಿ ಖಡ್ಗ ತೆಗೆದು ಕೊರಳು ಕತ್ತರಿಸಲು ಮುಂದಾದಾಗ "ದೇವರಕ್ಷಿಸೆನುತ್ತ ರುಕ್ಮಿಣಿ ದೇವದೇವನ ಕರವ ಪಿಡಿಯುತ ಭಾವನನು ನೀ ಕೊಲುವೆಯಂತ್ಯೆ ಸಾವಧಾನದಿ ಯೋಚಿಸು" ಎಂದು ಮುಂತಾಗಿ ಬೇಡಿಕೊಳ್ಳುತ್ತಾಳೆ. ಕೃಷ್ಣ ಅವಳಿಗೆ ಅಭಯ ಕೊಟ್ಟು ಸಂತೈಸುತ್ತಿರುವಾಗ ಬಲರಾಮ ಬಂದು ರುಕ್ಮನ ಕಟ್ಟಿದ ಕೈಗಳನ್ನು ಬಿಚ್ಚಿ ರುಕ್ಮನನ್ನು ಕಳಿಸುತ್ತಾನೆ.

ರುಕ್ಮಿಣಿ ಸಹಿತ ಬಲರಾಮ ಕೃಷ್ಣರು ತಮ್ಮ ಪಟ್ಟಣಕ್ಕೆ ಹಿಂದಿರುತ್ತಾರೆ. ತಂದೆಯನ್ನು ವಂದಿಸಲಾಗಿ ಆತ ಸಂತೋಷಗೊಂಡು ಭಾಂದವರನ್ನೂ ಭೀಷ್ಮಕನನ್ನೂ ಕರೆಸಿ ರುಕ್ಮಿಣಿ ವಿವಾಹವನ್ನು ಮಾಡಿಸಿ, ಬೇಕು ಬೇಕಾದ ದಾನ ಧರ್ಮವನ್ನು ಮಾಡಿ ಎಲ್ಲರನ್ನು ಸಂತೋಷಗೊಳಿಸುತ್ತಾನೆ. ಭೀಷ್ಮಕ ತಿರುಗಿ ತನ್ನ ಪಟ್ಟಣಕ್ಕೆ ಹೋಗುತ್ತಾನೆ.

ಇನ್ನೊಂದು ಕಡೆಗೆ ರಾಜನಾದ ಸತ್ರಾಜಿತನು ಒಡ್ಡೋಲಗದಲ್ಲಿ ಮಂಡಿಸಲು ಚಾರಕರು ಬಂದು ಕೈಮುಗಿದು "ಚಿತ್ತಾವಧಾನ ಭೂಪಾಲ ಕರಡಿ ಕಾಡ್ಗೋಣ ಜಂಬುಕವು ಮತ್ತೆ ಶರಬ ಶಾರ್ದೂಲ" ಮುಂತಾದವು ತುಂಬಿ ಹೋಗುತಿವೆ ಎನ್ನಲು ಸತ್ರಾಜಿತನು ಬೇಟೆಗೆ ಅಪ್ಪಣೆ ಕೊಡಲು ಅವನ ತಮ್ಮನಾದ ಪ್ರಸೇನನು ಬಂದು ನಮಸ್ಕರಿಸಿ ಅಣ್ಣನ ಸ್ಯಮಂತಕ ಮಣಿ ಸರವನ್ನು ಧರಿಸಿ ಬೇಟೆಗೆ ಹೊರಡುತ್ತಾನೆ.

ವನದಲ್ಲಿ ಜಿಂಕೆ, ಮೊಲ, ಕಾಡಾನೆ, ಖಡ್ಗಮೃಗ ಮೊದಲಾದವುಗಳನ್ನು ಬೇಟೆಯಾಡುತ್ತ ಸಂತೋಷದಿಂದ ಮುಂದುವರಿಯುತ್ತಿರಲು ಸಿಂಹವೊಂದು ಕೆರಳಿ ಬರುತ್ತದೆ. ಅದನ್ನು ಕಂಡ ಪ್ರಸೇನನು ಹುರುಪಿನಿಂದ "ಕೆಟ್ಟ ಕಾನನ ಮೃಗವೆ ಜೀವದೊಳಾಶೆ ಬಿಟ್ಟು ಮುಂದಕೆ ಬಾ" ಎಂದು ಬಾಣವನ್ನು ಬಿಡುತ್ತ ಮುಂದುವರಿಯಲು ಸಿಂಹವು" ಪ್ರಸೇನನ ಮೇಲೆ ಹಾರಿ ಆತನನ್ನು ಕೊಂದು ಆತನ ಕೊರಳಲ್ಲಿರುವ ಶ್ಯಮಂತಕ ಸರವನ್ನು ಎತ್ತಿಕೊಂಡು ಹೋಗುತ್ತಿರುವಾಗ ಜಾಂಬವನು ಬಂದು ಆ ಸರವನ್ನು ಕೊಡೆನ್ನುತ್ತಾನೆ. ಆದರೆ ಸಿಂಹವು ಅವನ ಮಾತಿಗೆ ಬಗ್ಗದೆ ರಭಸದಿಂದ ಅವನ ಮೇಲೆ ಜಿಗಿಯಲು ಜಾಂಬವ ಸಿಂಹವನ್ನು ಕೊಂದು ಪ್ರಕಾಶಮಾನವಾದ ಸ್ಯಮಂತಕ ಮಣಿ ಸರವನ್ನು ಒಯ್ದು ತನ್ನ ಗುಹೆಗೆ ಹೋಗಿ ತನ್ನ ಮಗನ ತೊಟ್ಟಿಲಿಗೆ ಕಟ್ಟುತ್ತಾನೆ.

ಪ್ರಸೇನನು ಬಾರದಿರಲು ಸತ್ರಾಜಿತ ದುಃಖದಿಂದಿರುವಾಗ ಚಾರರು ಬಂದು ಆತ ಕಾಣೆಯಾದ ಸುದ್ದಿಯನ್ನು ಹೇಳುತ್ತಾರೆ. ಇದರಿಂದ ದುಃಖಿತನಾದ ಸತ್ರಾಜಿತ ಯಾಕಾದರೂ ಸ್ಯಮಂತಕ ಸರವನ್ನು ಧರಿಸಿ ಹೋದೆಯೋ, ಹಿಂದೆ ತನಗೆ ಸೂರ್ಯನು ತನ್ನ ತಪಸ್ಸಿಗೆ ಮೆಚ್ಚಿ ಕೊಟ್ಟಿದ್ದನು ಎಂದೂ ಅದು ಎಷ್ಟು ಆಕರ್ಷಕವಾಗಿತ್ತೆಂದರೆ ಕೃಷ್ಣ ಸ್ವತಃ ಅದನ್ನು ತನಗೆ ಕೊಡು ಎಂದು ಅನೇಕ ಬಾರಿ ಕೇಳಿದ್ದ. ಆತನೇ ತಮ್ಮನನ್ನು ಕೊಂದು ಅಪಹರಿಸಿರಬೇಕು ಎಂದು ನಿಶ್ಚಯಿಸಿ ದುಃಖಿತನಾಗುತ್ತಾನೆ.

ಹೀಗಿರುವಾಗೊಂದು ದಿನ ದ್ವಾರಕೆಯಲ್ಲಿ ಬಲರಾಮನು ಸಭೆಯಲ್ಲಿ ಆಸೀನನಾಗಿರುವಾಗ ನಾರದಮುನಿ ಬರುತ್ತಾನೆ. ಅವನು ಬಲರಾಮನಲ್ಲಿ ಕೃಷ್ಣನ ಬಗ್ಗೆ ಆತ ಜನರ ನಿಷ್ಠುರವನ್ನು ಗಳಿಸುತ್ತಾನೆ. ಮಿತ್ರವಿಂದೆಯನ್ನು ಕಲಹದಲ್ಲಿ ಕದ್ದು ತಂದು ಮದುವೆಯಾದನು. ಹೀಗೆಯೇ ನಗ್ನಜಿತು ಸುತೆಯ, ಮದ್ರಾಧೀಶಸುತೆ ಲಕ್ಷಣೆಯ ಮತ್ತೂ ಕೆಲವರನ್ನು ಹೊತ್ತು ತಂದು ಮದುವೆಯಾದ ಅವನ ತುಂಟಾಟ ತಡೆಯಲಾರದು. ಈಗ ಮತ್ತೊಂದು ಘನತರವಾದ ಅಪರಾಧವನ್ನು ಮಾಡಿದ್ದಾನೆ. ಸತ್ರಾಜಿತನ ಸ್ಯಮಂತಕ ಮಣಿಯುಳ್ಳ ಸರವನ್ನು

ಅವನ ತಮ್ಮ ಪ್ರಸೇನ ಧರಿಸಿ ಬೇಟೆಗೆ ಹೋದಾಗ ಆ ಸರದ ಮೇಲಿನ ಪ್ರಲೋಭದಿಂದ ಕೃಷ್ಣನೆ ಅವನನ್ನು ಕೊಂದು ಅಪಹರಿಸಿರಬೇಕೆಂದು ಸತ್ರಾಜಿತ ತಿಳಿದು ದುಖಿತನಾಗಿದ್ದಾನೆ. ನಿನ್ನ ತಮ್ಮನಿಗೆ ಬುದ್ಧಿ ಹೇಳು ಮುಂತಾಗಿ ಚುಚ್ಚಿ ಹಾಕಿ ಹೋಗುತ್ತಾನೆ.

ನಾರದರ ಮಾತು ಕೇಳಿ ಬಲರಾಮನಿಗೆ ಕೃಷ್ಣನ ಮೇಲೆ ಕೋಪ ಬಂದು ಆತನನ್ನು ಕರೆಯುತ್ತಾನೆ. "ಪುಟ್ಟಿದೆಯೇಕೆಮ್ಮಯನ್ವಯದೊಳು ಕಡುದುಷ್ಟನು ನೆಂಟರಲಿ ಕಟ್ಟಿಸಿ ದ್ವೇಷವ ಅಪಹಾಸ್ಯವು ನಿಷ್ಠುರವಾಯಿತಲ್ಲ" ಎಂದು ಜರೆಯುತ್ತಾನೆ. ಪ್ರಸ್ತುತ ಆದ ತಪ್ಪೇನೆಂದು, ಸ್ಯಮಂತಕದ ಕುರಿತಾದ ಆರೋಪವನ್ನು ಕೇಳಿ ಜನನಿ ಜನಕರಾಣೆಯಾಗಿಯೂ ತನಗೆ ಈ ಕುರಿತು ಏನೂ ತಿಳಿಯದೆಂದೂ, ಹಿಂದೊಮ್ಮೆ ಅದನ್ನು ಕೇಳಿದ್ದೆ ; ಅದು ತಂದೆಗೆ ತಂದುಕೊಡಲು ಎನ್ನುತ್ತಾನೆ. ಹಾಗಾದರೆ ಪ್ರಸೇನನನ್ನು ಹುಡುಕಿಬಾ ಎಂದು ಬಲರಾಮ ಹೇಳಲಾಗಿ ಕೃಷ್ಣನು ಪ್ರಸೇನ ಮೂರು ಲೋಕದಲ್ಲೇ ಇದ್ದರೂ ತಂದುಕೊಡುವೆ ಎಂದು ಕೃತವರ್ಮ ಸಾತ್ಯಕಿ ಮೊದಲಾದವರನ್ನು ಕೂಡಿಕೊಂಡು ಹೊರಡುತ್ತಾನೆ.

ಹಾಗೆ ಹೊರಟ ಕೃಷ್ಣನು ವಿಂಧ್ಯಾರಣ್ಯವನ್ನು ಹೊಕ್ಕು ಹುಡುಕುತ್ತಿರಲು ಹೆಜ್ಜೆಗುರುತನ್ನನು ಸರಿಸಿ ಬರಲಾಗಿ ಪ್ರಸೇನ ರಕ್ತದ ಮಡುವಿನಲ್ಲಿ ಬಿದ್ದುದನ್ನು ನೋಡುತ್ತಾನೆ. ಕರುಹನ್ನು ನೋಡಿ ಸಿಂಹವೆ ಕೊಂದಿರಬೇಕೆಂದು ಗುರುತು ಹಿಡಿದು ಹೋಗುತ್ತಿರುವಾಗ ಸಿಂಹದ ಹೆಣವನ್ನು ನೋಡುತ್ತಾನೆ. ಕರಡಿಯ ಹೆಜ್ಜೆಯನ್ನು ನೋಡಿ ಅದೇ ಜಾಡಿನಲ್ಲಿ ಮುಂದೆ ಹೋಗಲು ಅದು ಆತನನನ್ನು ಗವಿಗೆ ಒಯ್ಯುತ್ತದೆ. ಅಲ್ಲಿ ಹೋಗಿ ನೋಡಲಾಗಿ ತರುಣಿಯೂ, ಸುಂದರಿಯೂ ಆದ ಕನ್ಯೆಯೋರ್ವಳು ಜಾಂಬವನ ಮಗಳು ಸ್ಯಮಂತಕಮಣಿ ಮಾಲೆಯನ್ನು ಕಟ್ಟಿದ ತೊಟ್ಟಿಲು ತೂಗುವುದನ್ನು ನೋಡುತ್ತಾನೆ. "ತಂದೆಯಾಗಿಹ ಜಾಂಬವಂತ ಕೇಸರಿಯಕೊಂದು ತಂದಿಹ ಸ್ಯಮಂತಕ ಮಣಿಯ ಚೆಂದದೊಳು ನಿನ್ನ ತೊಟ್ಟಿಲಬಳಿಯ ಬಂಧಿಸಿಹನು ನೋಡುಭಾಗ್ಯಾಂಭೋ ನಿಧಿಯ ಜೋಜೊ" ಮುಂತಾಗಿ ಹಾಡುತ್ತಿರುವುದನ್ನು ಕೇಳುತ್ತಾನೆ. ಆತ ತನ್ನ ಪಾಂಚಜನ್ಯವನ್ನು ಊದುತ್ತಾನೆ. ಆ ಭಯಂಕರ ನಾದವನ್ನು ಕೇಳಿ ಜಾಂಬವನು "ಅರೊ ಎನ್ನಯ ಗುಹೆಯ ಸ್ವತಂತ್ರಿಸಿ ಸೇರಿದೆಯ ಪೆಸರೇನು ಬಂದಿಹ ಕಾರಣಗಳಿದೇನಿದು" ಎಂದು ಅಬ್ಬರಿಸುತ್ತಾನೆ. ಕೃಷ್ಣ ತನ್ನ ಪರಿಚಯ ಹೇಳಲು ಒಬ್ಬಳೇ ಇರುವ ಬಾಲೆಯನ್ನು ಬೆದರಿಸಿದ್ದಕ್ಕಾಗಿ ನಿನ್ನ ತಲೆ ಕಡಿವೆ ಎನ್ನುತ್ತಾನೆ. ಹಿತದಿಂದ ಮಣಿಯನ್ನು ಕೊಡೆಂದು ಕೃಷ್ಣ ಹೇಳಿದರೆ, ತಾನು ಸಾಮಾನ್ಯ ಮೃಗವಲ್ಲ ದ್ವಾಪರದಲ್ಲಿ ಹುಟ್ಟಿದವ ತನ್ನಲ್ಲಿ ಇಷ್ಟು ಛಲದಿಂದ ಯುದ್ಧಮಾಡಿದವರೇ ಇಲ್ಲ ನೀನು ಯಾರು ಎಂದು ಜಾಂಬವ ಆಶ್ಚರ್ಯವ್ಯಕ್ತಪಡಿಸುವರೆ, ಯಾರಾದರೇನು ನಿನ್ನ ಪರಾಕ್ರಮ ತೋರು ಎಂದು ಕೃಷ್ಣ ಸಡ್ಡು ಹೊಡೆಯುತ್ತಾನೆ. ಕೊನೆಗೆ ಕೃಷ್ಣನು ರಾಮನಾಗಿ ಕಾಣಿಸಿಕೊಳ್ಳುತ್ತಾನೆ. "ರಾಮರಾಘವ ದಶರಥಬಾಲ ಜಯ ಸೀತಾಲೋಲ" ಮುಂತಾಗಿ ಜಾಂಬವ ಸ್ತುತಿಸುತ್ತಾನೆ. ಶರಣ ಲಾಲಿಸು ಹಿಂದೆ ನಿನಗೆ ಮುಂದಿನ ಯುಗದಲ್ಲಿ ದರ್ಶನ ಕೊಡುವೆನೆಂದು ಮಾತುಕೊಟ್ಟಿದ್ದೆ. ಆ ಪ್ರಕಾರ ನಿನಗೆ ದರ್ಶನವಿತ್ತೆ. ಈ ಕಲ್ಪಾಂತರದವರೆಗೆ ಜೀವಿಸಿದ್ದು ಮುಂದೆ ನೀನು ಮುಕ್ತಿ ಹೊಂದುವೆ ಎಂದು ಆಶೀರ್ವದಿಸುತ್ತಾನೆ. "ಆದಿದೇವರದೇವ ನಿನ್ನೊಡನೆ ಮುಳಿದು ನಾ ಕಾದಿದಪರಾಧ ಪರಿಹಾರಕೆನ್ನಯ ಸುತೆಯ ಮೋದದಿಂದೀದಪೆನು ಜಾಂಬವತಿಯೆಂಬಿವಳ ಸಾದರಿಸಿ ಸ್ವೀಕರಿಪುದು" ಎಂದು ಅರ್ಪಿಸುತ್ತಾನೆ. ಅಲ್ಲಿಂದ ಕೃಷ್ಣ ಹೊರಡುತ್ತಾನೆ.

ಬಂದ ಕೃಷ್ಣನನ್ನು ಕಂಡು ಬಲರಾಮ ಸಂತೋಷಗೊಳ್ಳುತ್ತಾನೆ. ಸತ್ರಾಜಿತನನ್ನು ಕರೆಸಿ ನಡೆದ ಸಂಗತಿಯನ್ನು ತಿಳಿಸಿ ಅವನಿಗೆ ಸ್ಯಮಂತಕಮಣಿಯನ್ನು ಅರ್ಪಿಸುತ್ತಾನೆ. ಸತ್ರಾಜಿತ ತನ್ನ ಮಗಳನ್ನು ಕೃಷ್ಣನಿಗೆ ಕೊಡುತ್ತಾನೆ.

ಹೀಗಿರುತ್ತಿರಲಾಗಿ ಒಂದು ದಿನ ದೇವದೂತನೊಬ್ಬನು ಬಂದು 'ದೇವರದೇವ' ಎಂದು ಕೃಷ್ಣನನ್ನು ಸ್ತುತಿಸಿ ಪ್ರಾಗ್ಜ್ಯೋತಿಷಪುರವನ್ನು ಆಳುತ್ತಿರುವ ನರಕಾಸುರ ಮತ್ತು ಅವನ ತಮ್ಮ ಮುರಕಾಸುರರು ದೇವಲೋಕವನ್ನು ಮುತ್ತಿ ಉಚ್ಛೈಶ್ರವ, ಕಲ್ಪವೃಕ್ಷ ಮೊದಲಾದವುಗಳನ್ನು ಅಪಹರಿಸಿದ್ದಲ್ಲದೆ ಸುರಸ್ತ್ರೀಯರಿಗೆ ಉಪಟಳಕೊಡುತ್ತಾರೆಂದೂ, ರಾಕ್ಷಸರನ್ನು ನಾಶಮಾಡಿ ತಮಗೆ ಸುಖವೀಯಬೇಕೆಂದು ದೇವೇಂದ್ರ ನಿನ್ನನ್ನು ವಿನಂತಿಸುದ್ದಾನೆಂದೂ ಹೇಳುತ್ತಾನೆ.

ದೂತನ ಮಾತನ್ನು ಕೇಳಿ ಕೃಷ್ಣನು ಗರುಡವಾಹವನ್ನೇರಿ ಸತ್ಯಭಾಮೆಯನ್ನು ಕರೆದುಕೊಂಡು ನರಕಾಸುರನ ಅರಮನೆಗೆ ಹೊರಡುತ್ತಾನೆ.

ಅಸುರರ ಭದ್ರವಾದ, ಮಾಯಾಜಾಲದಿಂದ ಕೂಡಿದ ಕೋಟೆಯನ್ನು ನೊಡಿ ಕೃಷ್ಣ ತನ್ನ 'ಪಾಂಚಜನ್ಯ'ವನ್ನು ಊದುತ್ತಾನೆ. ಇದನ್ನು ಕೇಳಿದ ನರಕ "ಆರೆಲೊ ದುರ್ಗವ ಭೇದಿಸಿ ಪುರದೊಳು ಸಾರಿಬಂದಿಹೆ ಬಳಿರೆ ಕಾರಣವೇನೆಲೊ" ಎಂದು ಮುರನು ಬಂದನು. ಅದಕ್ಕುತ್ತರವಾಗಿ ಕೃಷ್ಣ "ಧುರದೊಳು ಕಂಸನ ತರಿದಿಹ ಕೃಷ್ಣನನರಿಯ ವಾರ್ತೆಯನು" ಎಂದು ಮರುತ್ತರವೀಯುತ್ತಾನೆ. ಮುರನು ನಿನ್ನನ್ನು ಕೊಂಡು ಕೀರ್ತಿಪಡೆವೆ ಎಂದರೆ, ಕೃಷ್ಣ ಅವನೆಲ್ಲ ಬಾಣಗಳನ್ನು ಖಂಡಿಸಿ ಚಕ್ರದಿಂದ ಆತನ ತಲೆ ಕತ್ತರಿಸಿ ಕೆಡಹುತ್ತಾನೆ.

ಮುರನು ಸತ್ತ ವಾರ್ತೆಯನ್ನು ತಿಳಿದು ನರಕಾಸುರನು "ಭೋರ್ಗುಡಿಸುತ ನರಕದೈತ್ಯನು ಗಜರುತ ಅರೆರೆ ಪೋರನ ವಾರ್ತೆಯ ಪಿಂದೆನಾನರಿತಿರ್ವೆ ಕುಟಿಲೋಕ್ತಿಯ" ಎಂದು ಧಾವಿಸಿ ಬರುತ್ತಾನೆ. ದೇವಲೋಕದಿಂದ ತಂದ ದಿವ್ಯವಸ್ತುಗಳನ್ನು ಕೊಡದಿದ್ದರೆ ಗಂಟಲು ಕತ್ತರಿಸುವುದಾಗಿ ಕೃಷ್ಣ ಹೇಳಲು "ಕೊಡೆನೆಂದಿಗು" ತಂದವಸ್ತುವ. ತನ್ನಲ್ಲಿ ಯುದ್ಧಮಾಡಿ ಒಯ್ಯಿ ಎಂದು ಆರ್ಭಟಿಸಿದ ನರಕನು "ಮೂರುಲೋಕದೊಳೆನ್ನ ಗೆಲ್ಲುವ ಶೂರರನ್ನು ಕಾಣೆ ಜಾರಗೋವಳನೆ" ಎಂದು ಹೇಳಿ ಅಸ್ತ್ರ ಬಿಡುತ್ತಾನೆ. ಇಬ್ಬರಿಗೂ ಘನಘೋರವಾದ ಯುದ್ಧ ನಡೆದು ಕೆರಳಿ ಕೃಷ್ಣ ಚಕ್ರದಿಂದ ಕೊರಳನ್ನು ಕತ್ತರಿಸಿಕೆಡಹುತ್ತಾನೆ. ಆಗ ನರಕಾಸುರನ ಹೆಂಡತಿ ಧಾರಣಿದೇವಿ ಕಣ್ಣೀರು ಸುರಿಸುತ್ತ ಕೃಷ್ಣನಿಗೆ ನಮಿಸುತ್ತ ನರಕಾಸುರನ ಮಗನಾದ ಭಗದತ್ತನನ್ನು ಕಾಪಾಡಬೇಕೆಂದು ಪಾದದಲ್ಲಿಡುತ್ತಾಳೆ. ಕೃಷ್ಣನು ಆತನಿಗೆ ಪ್ರಾಗ್ಜ್ಯೋತಿಪುರದ ಪಟ್ಟಕಟ್ಟುತ್ತಾನೆ.

ನರಕಾಸುರನ ಸೆರೆಮನೆಯಲ್ಲಿದ್ದ ಹದಿನಾರು ಸಾವಿರ ಹೆಂಗಳೆಯರು ಬಂದು ಕೃಷ್ಣನಿಗೆ ಕೈಮುಗಿದು ತಮ್ಮನ್ನು ಮದುವೆಯಾಗಿ ಉದ್ಧರಿಸಬೇಕೆಂದು ಬೇಡಿಕೊಳ್ಳುತ್ತಾರೆ. ಅವರ ಮೊರೆಯನ್ನು ಸ್ವೀಕರಿಸಿ, ತನ್ನ ಪಟ್ಟಣಕ್ಕೆ ಬಂದು ಸುಖವಾಗಿದ್ದನು.

ಹೀಗೆ ಸುಖದಿಂದಿರುತ್ತಿರುವೊಂದುದಿನ ಆವಂತಿ ನಗರದಲ್ಲಿ ಶೃತದೇವನ ಮಕ್ಕಳಾದ ವಿಂದ ಮತ್ತು ಅನುವಿಂದರು ಸಭೆ ನಡೆಸುತ್ತಿರುವಾಗ ವಿಂದನು ತನ್ನ ತಮ್ಮನೊಡನೆ ತನ್ನ ಸೋದರಿಯ ವಿವಾಹವನ್ನು ನೆರವೇರಿಸಿದಾಗ ಮಿತ್ರವಿಂದೆಯನ್ನು ಯಾರೋ ಅಪಹರಿಸಿದ್ದಾರೆ. ಕೂಡಲೇ ಹುಡುಕಿ ಬರಬೇಕು. ಎನ್ನುತ್ತಾನೆ. ಅಷ್ಟು ಹೊತ್ತಿಗೆ ಚರನು ಬಂದು ಎಲ್ಲ ಕಡೆಗೆ ಹುಡುಕಿದೆವು. ಆಕೆ ದ್ವಾರಕೆಯಲ್ಲಿ ಕೃಷ್ಣನ ಅರಮನೆಯೊಳಿದ್ದಾಳೆ ಎನ್ನುತ್ತಾರೆ.

ಕೂಡಲೇ ವಿಂದನು ಗೋವಳನ ತಲೆ ಕತ್ತರಿಸುವೆ ಎಂದು ತಮ್ಮನೊಡನೆ ಹೊರಡುತ್ತಾನೆ. ಕೃಷ್ಣನಲ್ಲಿ ಹೋಗಿ ನೀನು ಕದ್ದು ತಂದ ತನ್ನ ಗಂಗಿ ಮಿತ್ರವಿಂದೆಯನ್ನು ತನಗೊಪ್ಪಿಸಬೇಕು ಎಂದು ಬೆದರಿಸುತ್ತಾನೆ. ಅದಕ್ಕೆ ಕೃಷ್ಣ "ಅತ್ತೆ ರಾಜಾದೇವಿಯು ಎನಗಾಗಿ ಪೆತ್ತಿರ್ಪ ಸುಕುಮಾರಿ ಮಿತ್ರವಿಂದೆಯುಯೆನ್ನು ಬಿಡದೆ ನೆನೆಯುತ್ತಿರಲು ತಂದಿಹೆನು" ಎನ್ನುತ್ತಾನೆ. ಇದನ್ನು ಮನ್ನಿಸದೆ ಮುಂದೊತ್ತಿಬರುತಿರಲು ಬಲರಾಮ ಯುದ್ಧದಲ್ಲಿ ಜಯಿಸಿ ವರಿಸುವುದೇ ಚಂದ. ನಾನು ಸಿದ್ಧನಾಗಿದ್ದೇನೆ ಎಂದು ಹೇಳಿದಾಗ ಇಬ್ಬರೂ ವಿಂದಾನುವಿಂದರನ್ನು ಎದುರಿಸುತ್ತಾರೆ. "ಎಲೆ ಗೋವಳ ನೀನೆನ್ನೊಳು ಸಮರದಿ ಬಲಪೌರುಷತೋರೊ" ಎಂದರೆ "ಪೇಳಿರೆ ಕುಲದೂಷಣಗಳ ಕೃತ್ಯವ ಖೂಳನೆ ನುಡಿಯದಿರೆ ಸೀಳುವೆ ಜಿಹ್ವೆಯನೆನ್ನುತ ಕ್ರೋಧವ ತಾಳಿ ಹಲಾಯುಧನು", ನಿನಗಿಂತ ನಿನ್ನ ಹೆಂಡತಿಯೇ ಹಿರಿಯಳೆಂದು ಬಲರಾಮನನ್ನು ಚೇಡಿಸಿದರೆ, ಬ್ರಾಹ್ಮಣ ಆದೇಶದಿಂದ ಹಾಗೆ ವರ್ತಿಸಿದ್ದೇನೆ, ಎಂದು ಬಲರಾಮ ಹೇಳಿ ಯುದ್ಧಕ್ಕೆ ತೊಡಗುತ್ತಾನೆ. ವಿಂದನು ಮೂರ್ಛೆ ಹೋಗಲು ಅನುವಿಂದನು ಬರುತ್ತಾನೆ. ಆತನೂ ಮೂರ್ಛೆ ಹೋಗಲು ಮತ್ತು ವಿಂದನು ಎದ್ದುಬರುತ್ತಾನೆ. ಇಬ್ಬರೂ ಒಬ್ಬರೊಬ್ಬರು ಹಂಗಿಸಿ ಮಾತನಾಡಿಕೊಂಡು ಯುದ್ಧದಲ್ಲಿ ತೊಡಗುತ್ತಾರೆ. ಭೀಕರವಾದ ಯುದ್ಧ ನಡೆದಾಗ ಕೃಷ್ಣ ಚಕ್ರವನ್ನು ಹಿಡಿದು ಕಡಿಯಲೆಳೆಸಲು ಮಿತ್ರವಿಂದೆ ಅಣ್ಣನನ್ನು ಕೊಲ್ಲಬಾರದೆಂದು ಬೇಡಿಕೊಳ್ಳಲು ಆತನನ್ನು ಹೋಗೆಂದು ಬಿಡುತ್ತಾನೆ.

ಆಗ ಮಿತ್ರವಿಂದೆಯು ವಿಂದನೊಡನೆ ಸುಮ್ಮನೆ ವಿರಸಬೇಡ ತನ್ನನ್ನು ಕೃಷ್ಣನಿಗೆ ಮದುವೆ ಮಾಡಿಕೊಡು ಎನ್ನುತ್ತಾಳೆ. ತೋರದಿರಲೆ ನಿನ್ನಾನನ ಧೂರ್ತಳೆ" ಎಂದು ಅವಳನ್ನು ಹೀನೈಸುತ್ತಾನೆ.

ಮಿತ್ರಮಿಂದೆಯನ್ನು ಕೂಡಿಕೊಂಡು ಕೃಷ್ಣನು ದ್ವಾರಕೆಗೆ ಬರಲು ಬಲರಾಮ ವಿಶ್ವಕರ್ಮನನ್ನು ಕರೆಸಿ ಸಭಾಮಂಟಪವನ್ನು ರಚಿಸಿ ಕುಲಪುರೋಹಿತ ಗಾರ್ಗ್ಯಾಚಾರ್ಯನನ್ನು ಕರೆದು ಕೃಷ್ಣನಿಗೆ ಮದುವೆ ಮಹೋತ್ಸವವನ್ನು ನೆರವೇರಿಸಲು ಹೇಳಿದರೆ ಈ ಹದಿನಾರು ಸಾವಿರ ಮದುವೆಯನ್ನು ಮಾಡಿಸುವುದು - ಮುಹೂರ್ತ ಹುಡುಕುವುದು ಹೇಗಪ್ಪಾ ಎಂದು ಹೇಳಿ ಕೊನೆಗೆ ಪರಮಾತ್ಮನ ಮದುವೆಯನ್ನು ಸರಿಯಾಗೇ ಮಾಡಿಸುತ್ತೇನೆಂದು ಸತ್ಯಭಾಮೆ ಸಹಿತ ಎಲ್ಲರ ಮದುವೆ ನೆರವೇರಿಸುತ್ತಾನೆ. ಹೀಗೆ ಹರಿಯು ಸಂತೋಷದಿಂದ ಸರಸಿಜಾಕ್ಷಿಯರೊಡನೆ ಸುಖ ಸಂತೋಷದಿಂದಿರುತ್ತಾನೆ.

**೫. ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮ ಪರಿಣಯ**

ಕುಶಸ್ಥಳವನ್ನು ಆಳುತ್ತಿದ್ದ ಸತ್ರಾಜಿತನಿಗೆ ಕಾಂಚನಮಾಲಿನಿ ಎಂಬ ಹೆಂಡತಿ. ಅವರಿಬ್ಬರ ಮಗಳೇ ಸತ್ಯಭಾಮೆ. ಹೀಗೆ ದಿನ ಕಳೆದಂತೆ ಸತ್ರಾಜಿತನು ಹಿಂದಿನ ಜನ್ಮದಲ್ಲಿ ಶಿವನನ್ನು ಪೂಜಿಸುತ್ತಿರುವುದರಿಂದಲೇ ಈಗ ತಾನು ಮಂದಭಾಗ್ಯನಾಗಿದ್ದೇನೆ. ಇನ್ನೇನು ಮಾಡಬೇಕೆಂಬುದೇ ತೋಚುತ್ತಿಲ್ಲ. ಆದ್ದರಿಂದ ಈಗ ಸೂರ್ಯನನ್ನು ಆರಾಧಿಸಿ ಸುಖ ಪಡೆಯುವೆನು, ಎಂದು ವಿಚಾರಿಸಿ ಸೂರ್ಯನ ತಪಸ್ಸು ಮಾಡತೊಡಗಿದನು. ಸೂರ್ಯನು ಮೆಚ್ಚಿ ಬಂದು ಮನದಿಷ್ಟವನ್ನು ಹೇಳು ಎನ್ನಲು 'ದೇವನೆ ನಿನಗೆ ತಿಳಿಯದ್ದೇನಿದೆ. ನಿನ್ನ ದರ್ಶನದಿಂದ ಧನ್ಯನಾದೆ. ಹೊನ್ನಿನ ಭಾಗ್ಯವನ್ನು ಕೊಟ್ಟು ರಕ್ಷಿಸು' ಎನ್ನಲು ಸೂರ್ಯನು ಆತನಿಗೆ ಸ್ಯಮಂತಕಮಣಿ ಮಾಲೆಯನ್ನು ಕೊಟ್ಟು ಹರಿಸಿದನು.

ಹೀಗೆ ಸತ್ರಾಜಿತನು ಸ್ಯಮಂತಕಮಣಿಯನ್ನು ತಂದಾಗ ಅದರಿಂದ ಹೊರಸೂಸುವ ಪ್ರಕಾಶವನ್ನು ಸೂರ್ಯನೆಂದೇ ಭಾವಿಸಿ ದ್ವಾರಕೆಯ ಪ್ರಜರು ಕೃಷ್ಣನಲ್ಲಿ ಓಡಿಬಂದು ತಮ್ಮನ್ನು ಕಾಪಾಡಬೇಕೆನಲು, ಅದು ಸೂರ್ಯ ಅಲ್ಲವೆಂದೂ,. ಸ್ಯಮಂತಕದ ಕಿರಣನೆಂದೂ, ಅದರಿಂದ ನಿಮಗೇನೂ ಅಪಾಯವಿಲ್ಲವೆಂದೂ ಅಭಯವನ್ನಿತ್ತನು.

ಇತ್ತಲಾಗಿ ಸತ್ರಾಜಿತನು ಸ್ಯಮಂತಕದ ಪ್ರಭಾವದಿಂದಾಗಿ ತನ್ನ ಬಡತನವನ್ನು ನೀಗಿಕೊಂಡು ಸುಖದಿಂದಿರುವಾಗ ಒಂದು ದಿನ ಶ್ರೀಕೃಷ್ಣನು ಸ್ಯಮಂತಕಮಣಿ ಮಾಲೆಯನ್ನು ಯದುರಾಜನಿಗೆ ತೊಡಿಸಬೇಕೆಂಬ ಅಭಿಲಾಷೆಯಿಂದ ಚಾರಕರ ಮುಖಾಂತರ ಸತ್ರಾಜಿತನನ್ನು ಕರೆಸಿಕೊಂಡು "ಭಾನು ನಿನಗಿತ್ತ ವಿಮಲ ರತ್ನವನೊಂದ ಸನುಮತದಲಿ ಯದುರಾಜನಿಗೆ ಕೊಡು ಎಂದು ಹೇಳಲು ಸತ್ರಾಜಿತನು "ಅಹಹಾ ಏ ಮುರಮಥನ ನೀನೆಂಬುದು ವಿಹಿತವೆ" ಎಂದೆನಲು ಸರಿ, ಮನಸಿಲ್ಲದಿದ್ದರೆ ಬೇಡ ಎಂದು ಹಿಂದಕ್ಕೆ ಕಳಿಸಿದನು.

ಹೀಗೆ ಸತ್ರಾಜಿತನು ಸುಖವಾಗಿ ಕಾಲ ಕಳೆಯುತ್ತಿರಲೊಂದು ದಿನ ಬೇಡರುಬಂದು ಖಗಮೃಗಗಳ ಬಾಧೆ ಹೆಚ್ಚಾಗಿಹೋಗಿದೆಯೆಂದು ತಿಳಿಸಲು ಸತ್ರಾಜಿತನ ತಮ್ಮನಾದ ಪ್ರಸೇನನು ಕುದುರೆಯನ್ನು ತರಿಸಿ, ಆಯುಧ ಹಿಡಿದು ಸ್ಯಮಂತಕಮಣಿಯನ್ನುಧರಿಸಿ ಬೇಡರೊಡಗೂಡಿ ಬೇಟೆಗೆ ನಡೆದನು.

ಅಡವಿಯಲ್ಲಿ ಕರಡಿ, ಕಾಡುಕೋಣ, ಆನೆಯೇ ಮೊದಲಾದ ಕ್ರೂರಮೃಗಗಳನ್ನು ಬೇಟೆಯಾಡುತ್ತ ಸಾಗುವಾಗ ಸಿಂಹವೊಂದು ಹಾರಿ ಆತನ ಕೊರಳೊಳಗಿದ್ದ ಸ್ಯಮಂತಕಮಣಿಯನ್ನು ಒಯ್ಯುತ್ತಿರಲು ಜಾಂಬವನೆಂಬ ಕರಡಿ ರಾಜನು ಸಿಂಹವನ್ನು ಕೊಂದು ಸ್ಯಮಂತಕಮಣಿಯನ್ನು ತಾನು ಒಯ್ದನು.

ಬೇಡರು ಪ್ರಸೇನನ ಹೆಣವನ್ನು ನೋಡಿ ಅಂಜಿ ಸತ್ರಾಜಿತನಲ್ಲಿ ಬಂದು ಆದ ಬಗೆಯನ್ನು ತೋಡಿಕೊಂಡರು. ಇದನ್ನು ಕೇಳಿದ ಸತ್ರಾಜಿತನು "ಈ ರೀತಿಯ ಮರಣಬಂತೆ ತಮ್ಮಾ ನಾನಿನ್ನಾರ ಕೂಡೆ ಬಾಳಲಯ್ಯೊ ತಮ್ಮಾ ತಮ್ಮಾ" ಮುಂತಾಗಿ ಮಮ್ಮಲ ಮರುಗುತ್ತಾನೆ. ಸೂರ್ಯಕೊಟ್ಟ ರತ್ನವನ್ನು ಯದುರಾಜಗಿತ್ತಡದು ಯೋಗ್ಯವೆಂದೆನುತ ಶ್ರೀಕೃಷ್ಣನು ಕೇಳಿದ್ದನು. ಈಗ ಆತನೆ ತಮ್ಮನನ್ನು ಕೊಂದು ಮಣಿಯನ್ನು ಅಪಹರಿಸಿದನೆಂದು ಗ್ರಹಿಸಿಕೊಂಡನು.

ಕೃಷ್ಣ ತನ್ನಲ್ಲೇ ತಾನು ನಗುವುದನ್ನು ಕಂಡು ರುಕ್ಮಿಣಿ ನಗೆಯಾಡಿದ ಕಾರಣವೇನು ಎಂದು ಹಟಹಿಡಿದುಕೇಳಲಾಗಿ, ಬೇಟೆಯಲ್ಲಿ ಪ್ರಸೇನನು ಸತ್ತಬಗೆಯನ್ನು ಸತ್ರಾಜಿತ ತನ್ನನ್ನು ದೋಷಿಯೆಂದು ಗ್ರಹಿಸಿದ್ದನ್ನೂ ನೆನೆದು ನಕ್ಕೆನೆಂದನು. ಇದನ್ನು ಕೇಳಿ ರುಕ್ಮಿಣಿ ಸುಮ್ಮನೆ ಅಪವಾದ ಬಂತಲ್ಲಾ ಎಂದರೆ ಗಣೇಶಚೌತಿಯದಿನ ಚಂದ್ರನನ್ನು ನೋಡಿದ್ದಕ್ಕೆ ಈ ಅಪವಾದ ಎನ್ನುತ್ತ ಸಾತ್ಯಕಿಯನ್ನು ಕರೆದು ಯುದಬಲವನ್ನು ಕೂಡಿಕೊಂಡು ವನದೆಡೆ ನಡೆದ.

ವನದಲ್ಲಿ ನಡೆಯುತ್ತಿರುವಾಗ ಮಾಗಧ "ಗೋರಾರ್ಭಟೆಯ ರಭಸದಲಿ" ಬಂದು "ಅರೆಲೊ ಕಾಡೊಳು ಪರಿವಾರ ಸಹಿತಿ ಕೂಡಿ ಚೋರರಂತೆ ಕುಳಿತಿರ್ಪನ್ಯಾರು ನೋಡೀತ" ಎಂದವನಿಗೆ ಸಾತ್ಯಕಿ "ಕೂಗಲ್ಯಾತಕೊ ಫಡಫಡ ನಿನ್ನಾಗಮನವು ಎಮ್ಮೊಡನೆ ಸಲ್ಲದು" ಎಂದು ಸರಳು ಬಿಟ್ಟನು. ಯುದ್ಧದಲ್ಲಿ ಸಾತ್ಯಕಿ ಮೂರ್ಛೆ ಹೋಗಲು ಕೃಷ್ಣ ಬಂದು ಮಗಧನನ್ನು ಎದುರಿಸಲು ಕೃಷ್ಣನನ್ನು ಜಾರ ಚೋರ, ತನ್ನಲ್ಲಿ ಎಂಬತ್ತನಾಲ್ಕು ಸಲ ಸೋತು ನೀರಿನಲ್ಲಿ ಮನೆಮಾಡಿಕೊಂಡವ ಮುಂತಾಗಿ ಬಯ್ಯುತ್ತ ಯುದ್ಧಮಾಡಲು ಕೃಷ್ಣನಿಂದ ಸೋತನು. ಮಗಧನನ್ನು ನಿವಾರಿಸಿಕೊಂಡು ಕೃಷ್ಣ ಸ್ಯಮಂತಕ ಮಣಿಯನ್ನೊಯ್ದು ಕರಡಿಯ ಹೆಜ್ಜೆಯ ಗುರುತಿನಿಂದ ಗವಿಯ ಬಳಿ ನಡೆದನು. ಅಲ್ಲಿ ಒಳಗಡೆ ಜಾಂಬವತಿ ತೊಟ್ಟಿಲು ತೂಗುತ್ತ "ಸ್ಯಮಂತಕಮಣಿ ನಿನ್ನಯ್ಯ ತಂದಿಹ ಸಂತವಿರುವೆನಲಂದು" ಎಂದು ಹೇಳಿತ್ತಿರುವುದನ್ನು ಕೇಳಿದ ಶ್ರೀಹರಿ 'ಸ್ಯಮಂಕತವನ್ನು ಕರಡಿ ಒಯ್ದಿದ್ದಕ್ಕೆ ಈಗ ನೀವು ಸಾಕ್ಷಿಯಾದಿರಿ. ನಾನು ಒಳಪ್ರವೇಶಿಸುತ್ತೇನೆ. ಹನ್ನೆರಡುದಿನ ನೀವು ಇಲ್ಲಿ ಹೊರಗಿದ್ದು ಅನಂತರ ದ್ವಾರಕೆಗೆ ಮರಳಿ ಎಂದು ಸಂಗಡಿಗರಿಗೆ ಹೇಳಿ ಗವಿಪ್ರವೇಶಿಸಿ ಜಾಂಬವನ ಮಗನನ್ನು ನೋಡಿ ಮಗುವಿನ ಕೈಲಿರುವ ರತ್ನವನ್ನು ಒಯ್ಯುವ ಬಗ್ಗೆ ಆಲೋಚೆಸುತ್ತಿರುವಾಗ ಮಗುವು ಕೂಗಿಕೊಳ್ಳಲು ಜಾಂಬವನು ಬಂದು ಕ್ರುದ್ಧನಾಗಿ "ಯಾರೆಲೊ ಬಂದ ವೀರನೆನ್ನ ಠಾವಿಗೆ ಮಾರಹರನಿಗೊಮ್ಮೆ ಬರಲು ತೀರದಿಲ್ಲಿಗೆ ಚೋರ ನಿನ್ನ ಬಲವ ಮೀಟಿ ತೋರಿಸೆನುತಲಿ ಕಾರಿಕೆಂಡಗಳಿಂದ ಸಾರೆನುತ್ತಲಿ" ಎನ್ನಲು ಇಬ್ಬರ ಮಧ್ಯ ದೊಡ್ಡ ಹೊಡೆದಾಟ ನಡೆಯುತ್ತದೆ. "ನೀಲಗಾತ್ರ ಕೇಳುನಿನ್ನ ಕೋಲಿಗಾನು ಬೆದರ್ವುದುಂಟೆ ತೋಳಬಲುಹ ನೋಡೆನುತ್ತ ಸೀಳಿಶಿರವನು" ಎನ್ನುತ್ತ ಬಾಲದಿಂದ ಬಡಿಯುತ್ತಾನೆ. ಮುಂದೆ ಮಲ್ಲಯುದ್ಧ ನಡೆಯುತ್ತದೆ. ಹೀಗೆ ಕಾಯುತ್ತಿದ್ದರೂ ಜಾಂಬವನಿಗೆ ಗಲುವಾಗುವುದಿಲ್ಲ. ಆಗ "ಹರಹರ ತಾನಿಷ್ಟು ಯುಗ ಪರಿಯಂತವು ಪರರಕೈಯಲಿ ಸೋತುದಿಲ್ಲ" ಮುಂತಾಗಿ ವ್ಯಥೆಮಾಡುತ್ತಿರಲು ಕೃಷ್ಣನೇ ರಾಮನಾಗಿ ಆತನಿಗೆ ಕಾಣಿಸಿಕೊಳ್ಳುತ್ತಾನೆ. ಆಗ "ಜಯ ಜಯ ದಶರಥಬಾಲ ಮುನಿಯಜ್ಞ ಪರಿಪಾಲ" ಎಂದು ಸ್ತುತಿಸಲು ಆತನನ್ನು ಅಪ್ಪಿ ಹೀಗೆ ಕಾದೆನೆಂದು ನೊಂದುಕೊಳ್ಳಬೇಡ, ನನ್ನ ಮೇಲೆ ಸ್ಯಾಮಂತಕದಿಂದಾಗಿ ಅಪವಾದ ಬಂದುದರಿಂದ ಬಂದೆ ಎನ್ನಲಾಗಿ ನಿನ್ನ ಮಹಿಮೆಯರಿಯದೆ ನಾನು" ಯುದ್ಧ ಮಾಡಿದೆ ಎಂದು ಶರಣಾಗುತ್ತಾನೆ. ಸ್ಯಮಂತಕ ಮಣಿಯನ್ನು, ತನ್ನ ಮಗಳಾದ ಜಾಂಬವತಿಯನ್ನು ಕೃಷ್ಣನಿಗೆ ಅರ್ಪಿಸುತ್ತಾನೆ.

ಬಾಗಿಲಲ್ಲಿ ನಿಂತಿದ್ದ ಸಾತ್ಯಕಿಯೇ ಮೊದಲಾದವರು ಕಾದು ಕಾದು ಕೃಷ್ಣ ಬಾರದಿರಲು ಹಿಂದಕ್ಕೆ ಹೋಗುತ್ತಾರೆ. ಕೃಷ್ಣನನ್ನು ಕಾಣದಾದೆವೆಂದು ತಿಳಿಸಲು ದೇವಕಿ ದುಃಖಿತಳಾಗಿ "ಎಲ್ಲಿಗೈದೆ ರಂಗಯ್ಯ ನಿನ್ನ ಕಾಣದೆ ತಲ್ಲಣಿಸುವುದು ಕಾಯ ಫುಲ್ಲಲೋಚನೆ ರುಗ್ಮಿಣಿ ಕ್ಷಣಾರ್ಧ ಬಿಟ್ಟು ನಿಲ್ಲಳು ನಾರೀಮಣಿ, ತರಳತನದಿ ಚಂದ್ರನ ಪಿಡಿದ ಮೃದು ಕರವ ತೋರೋ ಚಿಣ್ಣ" ಇತ್ಯಾದಿಯಾಗಿ ಹಂಬಲಿಸಿ ಬೇಯುತ್ತಾಳೆ. ವಸುದೇವ ಅವಳಿಗೆ ಸಾಂತ್ವನ ಹೇಳುತ್ತಾನೆ. ಇತ್ತ ಗೋಪ ಕಾಂತೆಯರು, "ರಂಗನ ಸುಂದರ ವದನವು ಕಂಗೊಳಿಸದೆಯಿಹ ಕಾರಣ ಭಂಗದೊಳಂಗಜ ಶರಕೆ ನನ್ನಂಗವು ಕೇಳ್‌ಸೂರೆ ತುಂಗಕುಚವ ಬಲ್ಪಿಡಿದಾಲಂಗಿಸಿ ಸುರತಕಲಾಪವ ಸಂಗವ ಮರೆತಿಹ ವ್ಯಥೆ ಗಂಗಾಧರ ಬಲ್ಲ" ಮುಂತಾಗಿ ವಿರಹವನ್ನು ತೋಡಿಕೊಳ್ಳುತ್ತಾರೆ. ಹೀಗೆ ತವಕದೊಳೆಲ್ಲರು ಹೋಗಿ ಪರಶಿವೆಯ ಪಾದಕೆಬಾಗಿ ನವವಿಧದಲಿ ಪೂಜಿಪೆವು ನಾವೆಂದವರೆಲ್ಲರನಾ ಯುವತಿ ಸೈರಿಸಿದಳು" ಈ ತೆರದೊಳು ಅಂಬಿಕೆಯೊಳು ನಾನಾ ರೀತಿಯಿಂದ ಬೇಡಿಕೊಳ್ಳಲು ಭೂತಳದೊಳು ಜಗನ್ಮಾತೆಯ ಪದಯುಗ ಓತುನಂಬಿದವರಿಗೆ ಭೀತಿಬರುವುದುಂಟೆ" ಎಂದು ಸಮಾಧಾನ ಮಾಡಿಕೊಂಡಿರುತ್ತಾರೆ.

ಸತ್ರಾಜಿತನ ಮನೆಗೆ ಕೃಷ್ಣ ಬರುತ್ತಾನೆ. ಅವನನ್ನು ಸ್ವಾಗತಿಸುತ್ತಾರೆ. ಆಗ ಕೃಷ್ಣ ಸತ್ರಾಜಿತನಿಗೆ ಇಲ್ಲಿಯವರೆಗೆ ನಡೆದ ಸಂಗತಿಗಳನ್ನು ಸಾದ್ಯಂತವಾಗಿ ಹೇಳುತ್ತಾನೆ. "ನಿನ್ನ ಮನದೊಳು ಶಂಕೆ ಎನ್ನ ಮೇಲಿರುವುದಕೆ ಮುನ್ನ ಕಳೆಯಲು ಪೋಗೆ ಕನ್ನಿಕೆಯು ಎನಗೆ ದೊರಕಿದಳು. ಇನ್ನು ಮಣಿಕೊಳ್ಳುವುದು, ನಿನ್ನ ಮಣಿ ನಿನಗಾಯ್ತು" ಎನ್ನುತ್ತಾನೆ. ಆತನ ಮಾತನ್ನು ಕೇಳಿ ಸತ್ರಾಜಿತ

ಲಜ್ಜಿತನಾಗುತ್ತಾನೆ. "ಹರಹರಾ ನಾನರಿಯದಾದೆ ಪರಮಾತ್ಮ ನೀನೆಂದು ಪರಮಾತ್ಮನ ಮೇಲೆ ದೋಷ ಹೊರಿಸಿ ಪೇಳ್ದೆನಿಂದೆ" ಮುಂತಾಗಿ ಹೇಳಿ ಮರುಗುತ್ತಾನೆ. ಕೃಷ್ಣ ಸಮಾಧಾನ ಹೇಳುತ್ತಾನೆ.

ತನ್ನಿಂದಾದ ಅಪರಾಧವನ್ನು ಪರಿಹರಿಸಿಕೊಳ್ಳಲು ತನ್ನ ಮಗಳಾದ ಸತ್ಯಭಾಮೆಯನ್ನು ಕೃಷ್ಣನಿಗೆ ಕೊಡಲು ಸತ್ರಾಜಿತ ನಿಶ್ಚಯಿಸಿದ.

ಇತ್ತ ಹೃದಿಕನ ಮಗನಾದ ಅಕ್ರೂರನು ಸತ್ರಾಜಿತನು ತನಗೆ ಮಗಳನ್ನು ಕೊಡುತ್ತೇನೆಂದು ಇದೀಗ ಗೋವಳನಿಗೆ ಕೊಡುತ್ತಿದ್ದಾನೆ. "ಕುಹಕಿಯನ್ನು ಬಿಡುವುದುಚಿತವೇನಯ್ಯ" ಎಂದು ಮಂತ್ರಿಯನ್ನು ಕೇಳಲು, ಕೃಷ್ಣನನ್ನು ಕೆಣಕುವುದು ಬೇಡವೆಂದೂ ದೃಢಮನದಿಂದಲಿ ನೋಡು ಜಗದೊಡೆಯನಾಶ್ರಿತರನು ಕೆಣಕಲು ಕೇಡು. ಹುಡುಗಿಯ ನೆವದಿಂದ ಪೋಗಿ ಕೆಡಬೇಡ ನಿನಗೆ ಸಾರಿದೆ ಕಡ್ಡಿಮುರಿದು" ಎಂದರೂ ಆತ ಕೇಳದೆ ವೀರಾವೇಶದಿಂದ ಹೊರಡುತ್ತಾನೆ. ಹೀಗೆ ಬಂದು ಕುಶಸ್ಥಳವನ್ನು ಮುತ್ತಿಗೆ ಹಾಕಲು ಕಾವಲು ಭಟರು ರಾಜನಿಗೆ ವರದಿ ಸಲ್ಲಿಸುತ್ತಾರೆ. ಸತ್ರಾಜಿತ ತಾನೇ ಧನುಶರ ಹಿಡಿದು ಆತನನ್ನು ಎದುರಿಸುತ್ತಾನೆ. ಚೋರನಂತೆ ರಾತ್ರಿಯಲ್ಲಿ ದಾಳಿ ಮಾಡಲು ಕಾರಣವೇನೆನ್ನಲು "ಸತ್ಯಧರ್ಮವ ಪೇಳುವೆ ವಚನ ಭ್ರಷ್ಟ ವ್ಯರ್ಥ ನಿನ್ನಯ ಬಾಳುವೆ ಪುತ್ರಿಯನು ಕೊಡದಿರ್ದ ಧೂರ್ತನಾಲಿಗೆ ಕೊಯ್ದು ಶಸ್ತ್ರದೊಳುರ ಸೀಳುವೆ" ಎನ್ನುತ್ತಾನೆ. ಯುದ್ಧದಲ್ಲಿ ಸತ್ರಾಜಿತನನ್ನು ಕೊಲ್ಲಲು ಸೈನಿಕರು ಓಡುತ್ತಾರೆ. ಈಗ ತನ್ನ ಪುರಿಗೆ ಮರಳುತ್ತಾನೆ.

ಇದನ್ನು ತಿಳಿದ ಸತ್ಯಭಾಮೆ ಚಕ್ರಧರನಲ್ಲಿ ಹೇಳಿ ಕೊರಳನ್ನು ಕತ್ತರಿಸುವೆ ಎಂದು ಅರಸುತ್ತ ಬರುತ್ತಾಳೆ. ಈ ಎಲ್ಲ ಕತೆಯ ಕೇಳಿ ಕೃಷ್ಣ ಸಿಟ್ಟಿನಿಂದ ಶತಧನ್ವನನ್ನು ನಾಶಮಾಡುವುದಾಗಿ ಹೊರಡುತ್ತಾನೆ. ಶತಧನ್ವ ಮಾವನ ಕೊಂದವನು ಮುಂತಾಗಿ ಹಂಗಿಸುತ್ತಾನೆ. ಯುದ್ಧ ಮಾಡುತ್ತಾನೆ. ಯುದ್ಧದಲ್ಲಿ "ಜಡಜನಾಭನು ಕರದಿ ಪಿಡಿದಿರುವ ಚಕ್ರ ಬಿಡೆ ಕಿಡಿಸೂಸಿ ಬಂದು ನಿಂದಿರುವ ಕಡುಪರಾಕ್ರಮಿಯ ಕೊರಳೆಡೆಯ ಕತ್ತರಿಸಲಡಗೆಡೆದ ಬೇರರಿದವೋಲ್ ತರುವ".

ಹೀಗೆ ರಕ್ಕಸನನ್ನು ನಾಶಮಾಡಿದಂಥ ಪುರುಷೋತ್ತಮ ಗರುಡವಾಹನವನ್ನು ಏರಿ ತನ್ನ ರಾಜಧಾನಿಗೆ ಬಂದು ಸುಖ ಸಂತೋಷದಿಂದ ತನ್ನ ಪತ್ನಿಯರನ್ನು, ತಂದೆ ತಾಯಿ ಬಂಧು ಬಳಗದವರನ್ನು ಕೂಡಿ ವಾಸವಾಗುತ್ತಾನೆ.

**೬. ಪಾರಿಜಾತ ಪ್ರಸಂಗ**

ಒಂದಾನೊಂದು ದಿನ ಶ್ರೀಕೃಷ್ಣ ತನ್ನ ಮಡದಿ ರುಕ್ಮಿಣಿ ಸಹಿತ ಸಭೆಯಲ್ಲಿ ಕುಳಿತಿದ್ದಾನೆ. ಭವನವೋ ರತ್ನಖಚಿತ ಗೋಡೆಗಳಿಂದ ಕೂಡಿದೆ. ರಾಜರೂ, ಸುರನರರೂ ಸಭೆಯಲ್ಲಿ ಮಂಡಿಸಿದ್ದಾರೆ. ಸಂಗೀತ ನರ್ತನಗಳು ನಡೆದಿವೆ. ಹೀಗಿರುವಾಗ ನಾರದ ಆ ಸಭೆಗೆ ಬರುತ್ತಾನೆ.

ಬಂದ ನಾರದನನ್ನು ಬಹುವಿಧವಾಗಿ ಸತ್ಕರಿಸಿ ಬಂದ ಕಾರಣವನ್ನು ಕೇಳಲಾಗಿ, ಭೂಮಿ ಭಾರವನ್ನು ಇಳಿಸಲೆಂದೇ ಅವತರಿಸಿ ಬಂದು ಮಾನವಸಹಜವಾಗಿ ವರ್ತಿಸುವ ನರನಾಟಕದ ರಂಜಿಸುವ ಪರಮಪುರುಷ ನೀನಾಗಿದ್ದೂ ಪ್ರಶ್ನೆಗಳನ್ನು ಕೇಳುತ್ತಿಯಾ ಎಂದು ಹೇಳಿ ತಾನು ಸುರಲೋಕದಿಂದ ತಂದ ಪಾರಿಜಾತವನ್ನು ಅವನ ಕೈಗೆ ಕೊಡುತ್ತಾನೆ.

ಇಂಥ ಪಾರಿಜಾತವನ್ನು ಯಾರು ಮುಡಿಯಲು ಯೋಗ್ಯರು ಎಂದು ಕೃಷ್ಣ ಕೇಳಲಾಗ ಇದನ್ನು ರುಕ್ಮಿಣಿ ಮುಡಿಯಲೆಂದೂ, ಮುಡಿದವರಿಗೆ ಮಕ್ಕಳ ಭಾಗ್ಯ ಬರುವುದೆಂದೂ ಹೇಳಿ ಹೊರಟು ಹೋಗುತ್ತಾನೆ.

ನಾರದನ ಮಾತಿನಂತೆ ಕೃಷ್ಣ ಪಾರಿಜಾತವನ್ನು ರುಕ್ಮಿಣಿಯ ಮುಡಿಯಲ್ಲಿಡಲು, ಅವಳು ಬಹು ಸಂತೋಷದಿಂದ ಮುಡಿದು ಆತನ ಕಾಲ್ಗೆರಗಿ, ನಾರದನಿಗೂ ನಮಸ್ಕರಿಸಿ ಸುಖದಿಂದಿರುತ್ತಾಳೆ. ಇದನ್ನು ಕಂಡ ದೂತಿಯೋರ್ವಳು ಈ ಸುದ್ದಿಯನ್ನು ಸತ್ಯಭಾಮೆಗೆ

ತಿಳಿಸುತ್ತಾಳೆ. ಆ ಪಾರಿಜಾತವನ್ನು ಮುಡಿಯಲು ವೈದರ್ಭಿಗಲ್ಲದೆ ಅನ್ಯರಿಗೆ ಅರ್ಹತೆಯಿಲ್ಲ ಎಂದು ನಾರದ ಹೇಳಿದನು ಎಂದು ಹೇಳುತ್ತಾಳೆ. ಆದರೂ ಸತ್ಯಭಾಮೆ "ಕಂಡು ಬಂದೆಯೋ ನೀನು ಕಾಣದೆ ಪೇಳ್ವೆಯೋ" ಎಂದು ಕೇಳಿದರೆ "ಪೇಳಿದೆನು ನೋಡಿದುದನು ಪುಸಿಯಲ್ಲ, ಕೇಳದರ ಚಲ್ವಿಕೆಯನು" ಮುಂತಾಗಿ ಹೇಳುತ್ತಾಳೆ. ಇದರಿಂದ ಭಾಮೆ ಕ್ರುದ್ಧಳಾಗುತ್ತಾಳೆ. ಮಮತೆಯ ಮಡದಿ ತಾನಿರುವಾಗ ರುಕ್ಮಿಣಿಗೆ ಹೂ ಕೊಡುವುದು ಅವಳ ಮನಸ್ಸಿಗೆ ಮುಳ್ಳು ಚುಚ್ಚಿದಂತಾಗುತ್ತದೆ. "ಹೆಂಡಿರೆಲ್ಲರನು ಸಮ ಕಂಡು ನಡೆಸದೆ ಹೀಗೆ ಪುಂಡತನವೇಕೆ ಕರದಂಡನಾಭನಿಗೆ" ಎಂದು ಅಂದುಕೊಳ್ಳುತ್ತಾಳೆ. ಇನ್ನೂ ಮನಸ್ಸಿಗೆ ಸಮಾಧಾನವಾಗದೆ ಮತ್ತೋರ್ವ ದೂತಿಯ ಕಡೆ ತಿರುಗಿ "ಏನು ಮಾಡಲಿಯುವತಿ ಇನಿಯನಿಗಿಲ್ಲವೆ ನೀತಿ, ಆ ನಾರಿಯೊಳು ಪ್ರೀತಿ ಅಧಿಕ ಕೇಳ್ ಸುದತಿ" ಮುಂತಾಗಿ ಹೇಳಿ ಊಟ-ಉಡುಗೆಯನ್ನು ನಿರ್ಲಕ್ಷಿಸಿ, "ಭರದಿ ಚಿಂತಾಗೃಹಕೆ ಪರಿತಂದು ಬೇಗ ಬಲಿದು ಕದವನು ಮಂಚದಲಿ ಪವಡಿಸಿದಳು".

ಈ ವಾರ್ತೆಯನ್ನು ದೂತಿಯೋರ್ವಳು ಕೃಷ್ಣನಿಗೆ ತಿಳಿಸಲಾಗಿ ಆತ ಅವಳಲ್ಲಿ ಬಂದರೆ ಭಾಮೆ ಆತನನ್ನು ಮಾತಾಡಿಸುವುದಿಲ್ಲ. ಹೊರಗೆ ನಿಂತವರು ಯಾರು ಹೆಸರೇನು ಎಂದು ಕೇಳುತ್ತಾಳೆ. ತಾನು ವೇಣುಗೋಪಾಲ ಎಂದರೆ ವೇಣುಗೋಪಾಲ ಆಗಿದ್ದರೆ ದನ ಕಾಯಲು ಹೋಗು ಎನ್ನುತ್ತಾಳೆ. ಹೀಗೆ ಸಂಭಾಷಣೆ ನಡೆದು ಅವಳು ಆತನಿಗೆ ಒಲಿಯುತ್ತಾಳೆ. ನಾರದ ತಂದ ಪಾರಿಜಾತವನ್ನು ತನಗೆ ಕೊಡದೆ ಕಳ್ಳತನದಲ್ಲಿ ಬೆನ್ನು ಹತ್ತಿ ಬಂದ ನೀತಿಯಿಲ್ಲದ ರುಕ್ಮಿಣಿಗೆ ಕೊಟ್ಟಿದ್ದು ಯಾಕೆ? ಇತ್ಯಾದಿ ಕೇಳಿದ ಮೇಲೆ ನಿನಗೆ 'ಕಲ್ಪದ್ರುಮ'ವ ತೋರಿಸುವೆನು ಎಂದು ಸಂತೋಷಪಡಿಸುತ್ತಾನೆ.

ಹೀಗೆ ಇರುತ್ತಲಾಗಿ ಇಂದ್ರಾದಿ ದೇವತೆಗಳು ಕೃಷ್ಣನಲ್ಲಿ ಬಂದು ನರ-ಮುರಕಾ ಸುರರು ಸ್ವರ್ಗವನ್ನು ಸೂರೆಗೈದು ಕಲ್ಪದ್ರುಮವೇ ಮೊದಲಾದ ಸುವಸ್ತುಗಳನ್ನು ಅಪಹರಿಸಿದ್ದಲ್ಲದೆ, ಸ್ವರ್ಗದ ಸ್ತ್ರೀಯರನ್ನು ಥಳಿಸಿದರೆಂದು ಹೇಳುತ್ತಾರೆ. ಕೃಷ್ಣ ಅವರ ಕಷ್ಟ ನಿವಾರಿಸುವುದಾಗಿ ಭರವಸೆ ಕೊಡುತ್ತಾನೆ.

ಹಾಗೆ ನರ-ಮುರಕಾಸುರರ ರಾಜಧಾನಿಯತ್ತ ತೆರಳುತ್ತಿರುವಾಗ ಭಾಮೆಯೂ ತಾನೂ ಬರುವುದಾಗಿ ಸ್ವರ್ಗಲೋಕದ ಕಲ್ಪದ್ರುಮವನ್ನು ತೋರಿಸುತ್ತೇನೆಂಬುದನ್ನು ನೆನಪಿಸುತ್ತಾಳೆ.

ಹೀಗೆ ಕೃಷ್ಣ ಸತ್ಯಭಾಮೆಯ ಸಹಿತ ಗರುಡನನ್ನು ಏರಿ ಹೊರಡುತ್ತಾನೆ. ನರಕಾಸುರನ ಅರಮನೆಯ ಹತ್ತಿರ ಬರುತ್ತಾನೆ. ಆ ಅರಮನೆ ಬಹು ಭದ್ರವಾಗಿರುವಂತಹುದು. ಅದನ್ನೆಲ್ಲ ಭೇದಿಸಿ ಕೃಷ್ಣ ತನ್ನ ಶಂಖವನ್ನು ಊದುತ್ತಾನೆ.

"ಮೊರೆವ ಶಂಖಧ್ವನಿಯನಾಲಿಸಿ ಮುರನು ಮೈ ಮುರಿದೆದ್ದು - ಕಾಲನಾಗಲಿ, ಮೃತ್ಯುವಾಗಲಿ, ಕಾಲಭೈರವನಾದಡಾಗಲಿ ನಿಮಿಷ ಮಾತ್ರಕೆ ಬೀಳಕಡಿವೆ" ಎಂದು ಬರುತ್ತಾನೆ. ಅನೇಕ ರೀತಿಯಲ್ಲಿ ಕೃಷ್ಣನನ್ನು ಜರೆಯುತ್ತಾನೆ. ಅದಕ್ಕೆ ಉತ್ತರವನ್ನು ಕೃಷ್ಣ ಕೊಡುತ್ತಾನೆ. ಕೊನೆಗೆ ಚಕ್ರದಿಂದ ಮುರನ ತಲೆ ಕಡಿಯುತ್ತಾನೆ.

ಮುರನು ಅಳಿದ ಸುದ್ದಿ ತಿಳಿದು ಮುರನ ಮಗ ಯುದ್ಧಕ್ಕೆ ಬರುತ್ತಾನೆ. "ಧುರದೊಳೆಮ್ಮಪಿತನಗೆಲಿದ ಗರುವತನವನು ಮುರಿವೆನೆಲವೋ" ಎಂದು ಸಡ್ಡು ಹೊಡೆಯುತ್ತಾನೆ. ಆದರೆ ಆತ ಸಾಯುತ್ತಾನೆ.

ಈ ವಾರ್ತೆಯನ್ನು ದೂತನು ನರಕಾಸುರನಿಗೆ ತಿಳಿಸುತ್ತಾನೆ. "ಚರರ ನುಡಿಯನು ಕೇಳ್ದು ನರಕನತಿರೋಷದಲಿ ಉರಿಯನುಗುಳುತ ಕರೆದ ನೆರೆದಭಟರ". ಮುಂಬತ್ತಿಬರುವ ಸೈನ್ಯವನ್ನು ಗರುಡನು ತಡೆಯುತ್ತಾನೆ. ಈ ಯುದ್ಧದಲ್ಲಿ ನರಕಾಸುರನ ಸೈನ್ಯಕ್ಕೆ ಅನೇಕ ಹಾನಿಯನ್ನು ಮಾಡುತ್ತಾನೆ. ಇದನ್ನರಿತ ನರಕ ಕೃಷ್ಣನೆದುರು ಬಂದು "ಬಿನುಗು ಮಾನವ ಕೇಳು ನಮ್ಮೊಳು ಸೆಣಸಿ ನೀ ಬದುಕುವೆಯೊ ನಿನ್ನಯ ಹಣೆಯಬರಹವ ತೊಡೆವೆ ನಿಮಿಷದೊಳೆನುತ" ಬಾಣಗಳನ್ನು ಬಿಡಲು ಕೃಷ್ಣ ಘನಪರಾಕ್ರಮಿಗಳಹುದು ನಿನ್ನೊಳು ಸೆಣಸಿ ಜೀವಿಸಬಲ್ಲನೇ ಹುಲುಮನುಜರ್ನೈನಾವೆತ್ತ" ತಮಾಶೆ ಮಾಡಿ ಅವನ ಧನಸ್ಸನ್ನು ಕಡಿಯುತ್ತಾನೆ. ಆದರೆ ತಿರುಗೇಟು ಹಾಕಿದ ನರಕನ ಪೆಟ್ಟಿಗೆ ಕೃಷ್ಣ ಮೂರ್ಛೆ ಹೋಗುತ್ತಾನೆ.

ಈ ಘಟನೆಯಿಂದ ಸುರರು ಕೆಟ್ಟೆವು ಎನ್ನುತ್ತಿರುವಂತೆಯೇ ಸತ್ಯಭಾಮ ಯುದ್ಧಕ್ಕೆ ಮುಂದಾಗುತ್ತಾಳೆ. ಇವಳ ಯುದ್ಧಕ್ಕೆ ಭೀತನಾದಾಗ ಹೀನೈಸಲೆಂಬಂತೆ ನಿನ್ನೊಡನೆ ಯುದ್ಧ ಸಲ್ಲದು ಎಂದು ಅವಳ ಸೆರಗು ಹಿಡಿಯಲೆತ್ನಿಸುತ್ತಾಳೆ. ಕ್ರುದ್ಧಳಾದ ಭಾಮೆಯ ಹೊಡೆತಕ್ಕೆ ನರಕ ಮೂರ್ಛೆಬೀಳುತ್ತಾನೆ.

ಈಗ ಇಬ್ಬರೂ ಮೂರ್ಛೆನಿವಾರಿಸಿಕೊಂಡು ಏಳುತ್ತಾರೆ. ನರಕ ಎಲವೊ ಮನುಜ ಕೇಳು ನಿನ್ನ ತೆರದಿ ಲಲನೆಯಿಂದ ಜೀವಿಸುವರ ಕಾಣೆ ಜಗದೊಳು" ಎಂದು ಕೃಷ್ಣನನ್ನು ಹಂಗಿಸಿ ಮುಂದೆ ಬರುತ್ತಾನೆ. ಇದರಿಂದ ಸಿಟ್ಟಿಗೆದ್ದ ಕೃಷ್ಣ ನರಕಾಸುರನ ತಲೆಯನ್ನು ಕೆಡಹುತ್ತಾನೆ. ದೇವತೆಗಳು ಬಂದು ಶ್ರೀಕೃಷ್ಣನ ಕಾಲಿಗೆ ಮಣಿಯುತ್ತಾರೆ.

ನರಕ ಸತ್ತ ಸುದ್ದಿ ತಿಳಿದು ಆತನ ಹೆಂಡತಿ ತನ್ನ ಬಾಲಕನನ್ನು ತಂದು ಕೃಷ್ಣನ ಪಾದದ ಮೇಲಿಟ್ಟು ಕಾಪಾಡಬೇಕೆನ್ನುತ್ತಾಳೆ. ಈ ಹುಡುಗ ಭಗದತ್ತ ತನ್ನ ಭಕ್ತನೆಂದು ಹೇಳಿ ಆತನನ್ನು ಸಲಹುವುದಾಗಿ ಭರವಸೆ ಕೊಡುತ್ತಾನೆ. ಹಾಗೆಯೇ ಸ್ವರ್ಗದಿಂದ ಅಪಹರಿಸಲಪಟ್ಟ ಎಲ್ಲ ಸುವಸ್ತುಗಳನ್ನು ದೇವೇಂದ್ರನಿಗೆ ಕೊಡುತ್ತಾನೆ. ನರಕಾಸುರನ ಸೆರೆಯಲ್ಲಿದ್ದ ಸಾವಿರಾರು ಹೆಂಗಳೆಯರನ್ನು ದ್ವಾರಕೆಗೆ ಕಳುಹಿಸುತ್ತಾನೆ.

ದೇವೇಂದ್ರನ ವಿನಂತಿಯಂತೆ ಕೃಷ್ಣ ಭಾಮೆ ಸಹಿತ ಸ್ವರ್ಗಕ್ಕೆ ಹೋಗುತ್ತಾನೆ. ದೇವೇಂದ್ರನು ಆತನನ್ನು ಸ್ವಾಗತಿಸುತ್ತಾನೆ. ಅವನ ಆತಿಥ್ಯವನ್ನು ಸ್ವೀಕರಿಸಿ, ಅದಿತಿಯ ಮನೆಗೆ ಬರುತ್ತಾನೆ. ಸತ್ಯಭಾಮೆ ಅವಳಿಗೆ ಕರ್ಣಕುಂಡಲವನ್ನಿರಿಸುತ್ತಾಳೆ. ಅದಿತಿ ಸಂತೋಷಗೊಂಡು ಹರಸುತ್ತಾಳೆ.

ಹೀಗೆ ಬೀಳ್ಕೊಂಡು ಕೃಷ್ಣಭಾಮೆ ಸಹಿತವಾಗಿ ಹಿಂದಿರುಗುತ್ತಾನೆ. ಹೀಗೆ ಬರುವಾಗ ಭಾಮೆ "ಪಗಲ್ ಬೆಳದಿಂಗಳಂದದಿ ಸೊಗಯಿಸಿ ಷಡೃತುಗಳೇಕಕಾಲದೊಳಿಹುದಂ" ತಾನು ನೋಡಿಲ್ಲವೆಂದೂ ಇದು ಯಾವುದು ಎಂದು ಕೇಳಿದಾಗ "ಭಾವಕಿರನ್ನ ಕೇಳೀ ದಿವ್ಯವನವು ದೇವೇಂದ್ರನುದ್ಯಾನವೆಂಬ ನಂದನವು" ಎಂದು ಕೃಷ್ಣ ಹೇಳುತ್ತಾನೆ.

ಆ ವನವನ್ನು ಸತ್ಯಭಾಮೆಗೆ ತೋರಲು ಕೃಷ್ಣ ಪ್ರವೇಶ ಮಾಡುತ್ತಾನೆ. ಸುಂದರವಾದ ಆ ವನವನ್ನು ನೋಡನೋಡುತ್ತ "ನೀರೆ ಕಂಡಳು ಮುಂದೆ ರಾಜಿಪ ಭೂರಿನೇತ್ರನ ವಿಭವನಗಳಿಗಾಧಾರವೆನಿಸುವ ಕಲ್ಪಪಾದದ ಪಾರಿಜಾತವನು"

ಇದನ್ನು ಕಂಡು ಮೋಹಿತಳಾಗಿ ಆ ಪಾರಿಜಾತದೊಂದು ಗಿಡವನ್ನು ತಾವು ಒಯ್ಯಬೇಕೆನ್ನುತ್ತಾಳೆ. "ಬೇಡವೆ ವೃಕ್ಷದ ತಳ್ಳಿ ಬೇಡವೆ" ಎಂದು ವಿಧವಿಧವಾಗಿ ಹೇಳಿದರೂ ಆಕೆ ಹಟಬಿಡುವುದಿಲ್ಲ. ಕೃಷ್ಣನ ಅನುಮತಿಯಿಂದ 'ಕಲ್ಪದ್ರುಮ'ವನ್ನು ತೆಗೆದುಕೊಳ್ಳುತ್ತಾಳೆ.

ಈ ಸಂಗತಿಯನ್ನು ವನಪಾಲಕರು ದೇವೇಂದ್ರನಿಗೆ ತಿಳಿಸುತ್ತಾರೆ. ಹೀಗೆ ತಂದು ಕೊಟ್ಟ ವಸ್ತುವನ್ನು ಕಳ್ಳರಂತೆ ಒಯ್ಯುವುದೇ? ಸ್ವರ್ಗದಲ್ಲಿ ಮಾತ್ರ ಇರಬೇಕಾದ ಪಾರಿಜಾತವನ್ನು ಭೂಮಿಗೆ ಒಯ್ಯುವುದೇ? ಇದು ಸರಿಯಲ್ಲ - ಎಂದು ಶಚಿ ಹೇಳಲಾಗಿ ದೇವೇಂದ್ರ ಕೃಷ್ಣನೊಡನೆ ಯುದ್ಧಕ್ಕೆ ಹೊರಡುತ್ತಾನೆ. "ಕರೆದರೆಲವೊ ಕೃಷ್ಣ ನಿನಗೆ ತರವೆ ಚೋರ ವೃತ್ತಿ ಕಲ್ಪತರುವನಿರಿಸಿ ನಿಲ್ಲೆನುತ್ತ ಜರಿದು ನಡಿದನು". ಈ ಬಿರು ನುಡಿಗಳನ್ನು ಕೇಳಿದ ಭಾಮೆ ತಾನೇ ಸ್ವತಃ ಅಸ್ತ್ರ ಹಿಡಿದು ಮುಂದುವರಿಯುತ್ತಾಳೆ. ಇದನ್ನು ಕಂಡ ದೇವೇಂದ್ರ "ಬಾಲೆ ನಿನಗೆ ಯುದ್ಧವೇಕೆ, ಕೋಲು ಬಿಸುಡು ಬಿಸುಡು ನಿನ್ನ ಆಳಿದವಗೆ ಕೊಡು ಕೊಡೆಂದು ಖೂಳತನದಲಿ".

ಭಾಮೆಯೊಡನೆ ಸೋತ ದೇವೇಂದ್ರ ತನ್ನ ರಾಜಧಾನಿಯ ಕಡೆ ನಡೆದ. ಹೀಗೆ ಭಾಮೆಯಿಂದ ದೇವೇಂದ್ರ ಸೋತು ಹೋಗಲಾಗಿ, ವರುಣನು ಬಂದು ನಿಲ್ಲು ನಿಲ್ಲು ಎಂದು ತಡೆಯಲಾಗಿ ಗರುಡನು ಅವನನ್ನು ಸೋಲಿಸುತ್ತಾನೆ. ಆತನ ಸೋಲನ್ನು ಕಂಡ ಅಗ್ನಿ ಮತ್ತು ವಾಯು ಒಂದಾಗಿ ಯುದ್ಧಕ್ಕೆ ಬರುತ್ತಾರೆ. ಯಮಧರ್ಮನೂ ಸೋತು ಹೋಗುತ್ತಾನೆ. ಈಗ ಈಶ್ವರನೇ ಬಂದು "ನಿಲ್ಲು ನಿಲ್ಲು ಕೃಷ್ಣ

ಎಲ್ಲಿಗೆ ಪೋಗುವೆ" ಎಂದು ತಡೆಯುತ್ತಾನೆ. ಈಶ್ವರನೂ ಸೋತ ಮೇಲೆ ದೇವೇಂದ್ರನೇ ಕೆರಳಿ ಮತ್ತೆ ಬರುತ್ತಾನೆ. "ಕಳ್ಳತನವೆ ನಮ್ಮ ಕೂಡೆ ಸಲ್ಲದೆಲವೊ ನಿನಗೆ" ಎಂದು ಬೆದರಿಸುತ್ತಾನೆ.

ಯುದ್ಧದಲ್ಲಿ ಸೋತು ಹೋಗಲು ಸತ್ಯಭಾಮೆ ಅವನನ್ನು ಜರೆಯುತ್ತಾಳೆ. ಅದನ್ನು ಕೇಳಿ ದೇವೇಂದ್ರ ಕೃಷ್ಣನ ಹೆಂಡತಿ ಎಂದು ಗರ್ವದಿಂದ ನಮ್ಮನ್ನು ಹಂಗಿಸುತ್ತೀಯೆ. ನಮಗೇನು ನೀವು ಬೇರೆಯವರೆ, ತಪ್ಪು ನಮ್ಮದಾಗಿರಲಿ. "ತನಯರೊಂದು ತಪ್ಪ ಮಾಡೆ ಮುನಿವುದುಂಟೆ ಜಗಜ್ಜನಕನಯ್ಯಗೆಮ್ಮ ಮೇಲೆ ಕ್ರೋಧವುಂಟೆ" ಎಂದು ತನ್ನ ರಥವನ್ನಿಳಿದುಬಂದು ಕೃಷ್ಣನ ಪಾದಕ್ಕೆ ಎರಗುತ್ತಾನೆ.

ಪಾರಿಜಾತ ಸಹಿತವಾಗಿ ಬಂದ ಕೃಷ್ಣ, ಭಾಮೆಯರು ವಸುದೇವ ದೇವಕಿ, ಬಲರಾಮಾದಿಗಳಿಗೆ ವಂದಿಸುತ್ತಾರೆ. ಪಾರಿಜಾತವನ್ನು ಸತ್ಯಭಾಮೆಯ ಅಂಗಳದಲ್ಲಿ ನೆಡುವುದಾಗಿ ಕೃಷ್ಣ ವ್ಯವಸ್ಥೆ ಮಾಡುತ್ತಾನೆ. ಆ ಉತ್ಸವಕ್ಕೆ ರುಕ್ಮಿಣಿಯನ್ನು ಕರೆಯಲು ಭಾಮೆ ಹೋಗುತ್ತಾಳೆ.

"ತಂಗಿಯ ಬರವಂ ಕಾಣುತ್ತಂಗೋದ್ಭವಜನನಿ ಸಂತೋಷದಿಂದಾಕ್ಷಣದೊಳ್" ಅವಳನ್ನು ಸತ್ಕರಿಸುತ್ತಾಳೆ. ಭಾಮೆ ನಡೆದ ಕತೆಯೆಲ್ಲವನ್ನು ಹೇಳುತ್ತಾಳೆ. ರುಕ್ಮಿಣಿ ಹಾಗೂ ಕಾಳಿಂದಿಯೇ ಮೊದಲಾದವರಲ್ಲಿ ಬರುತ್ತಾರೆ.

"ನಾರಿಯರೆಲ್ಲರು ನೆರೆದು ಪಾರಿಜಾತಕೆ ಕೈ ಮುಗಿದು" ಶಾಸ್ತ್ರೋಕ್ತವಾಗಿ ಪೂಜೆ ಮಾಡುತ್ತಾರೆ. ವಾದ್ಯಘೋಷಮೊಳಗುತ್ತದೆ. ಕೃಷ್ಣ ನರಕಾಸುರ ಸೆರೆಬಿಡಿಸಿತಂದ ಹದಿನಾರು ಸಾವಿರ ಹೆಂಗಳೆಯರನ್ನು ಮದುವೆಯಾಗುತ್ತಾನೆ ಕಥೆ ಮಂಗಲವಾಗುತ್ತದೆ.

**೭. ರತಿಜನ್ಮ – ಶಂಬರಾಸುರ ಕಾಳಗ**

ಕೃಷ್ಣ ತನ್ನ ವೈಭವಯುತವಾದ ಅರಮನೆಯಲ್ಲಿ ಇಂದ್ರನ ಸಭೆಯನ್ನು ಮೀರಿಸುವ ಸಭೆಯನ್ನು ಹೊಂದಿ "ಸಂತೋಷದೊಳಿರಲೊಂದು ದಿನಂ ಅಂತಃಪುರದಲಿ ರುಕ್ಮಿಣಿಯು ಸಂತತಿಯ ಬಯಸಿ ತನ್ನ ಪತಿಯೊಡನೆಂದಳ್" ಮನೋಹರನೆ ರಾತ್ರಿ ಕನಸಲ್ಲಿ ಒಂದು ಶಿಶುವು ನನ್ನ ತೊಡೆಯ ಮೇಲೆ ಆಡಿದಂತೆ ಕಂಡಿತು. ಅದರ ಅರ್ಥವೇನು ಎಂಬುದಾಗಿ ಕೇಳಲು ನೀನು ಸದ್ಯವೇ ಸಂತತಿಯನ್ನು ಪಡೆಯುವೆ ಎಂದುತ್ತರಿಸಿ, ಈಶ್ವರನ ಒಲುಮೆಯನ್ನು ಸಂಪಾದಿಸಿ ಸಂತತಿಯ ಫಲವನ್ನು ಪಡೆದು ಬರುವೆ ಎಂದು ಹೊರಡುತ್ತಾನೆ.

ಹೀಗೆ ಹೊರಟ ಕೃಷ್ಣನು ಬದರಿಕಾಶ್ರಮಕ್ಕೆ ಬರುತ್ತಾನೆ. ಅದನ್ನು ತಿಳಿದು ಅನೇಕ ಋಷಿಮುನಿಗಳು ಬರುತ್ತಾರೆ. ಅದೇ ಸಮಯದಲ್ಲಿ ಘಂಟಾಕರ್ಣನೆಂಬ ರಾಕ್ಷಸನೂ ಬರುತ್ತಾನೆ. ಆತ ಮೂಲತಃ ಗಂಧರ್ವದರಲ್ಲೊಬ್ಬನಾಗಿದ್ದು ಕೃಷ್ಣ ಭಕ್ತನಾಗಿದ್ದ. ಆದರೆ ಶಾಪದ ಫಲವಾಗಿ ರಾಕ್ಷಸನಾಗಿ ಭೂಮಿಯಲ್ಲಿ ಹುಟ್ಟಿರುತ್ತಾನೆ. ತನ್ನವರ ಗುಂಪನ್ನು ಕೂಡಿ ಮೆರೆಯುತ್ತಿರುತ್ತಾನೆ. ಈಗ ಆತ ಕೃಷ್ಣ ವಿರೋಧಿ. ಆದ್ದರಿಂದ ಈಶ್ವರನ ಹೆಸರಲ್ಲದೆ ಬೇರೆಯದು ಕೇಳಬಾರದೆಂದು ಕಿವಿಗೆ ಹತ್ತಿರವೇ ಒಂದು ಗಂಟೆಕಟ್ಟಿಕೊಂಡಿರುತ್ತಾನೆ. ಈತ ಮತ್ತು ಈತನ ಉಪಟಳದಿಂದಾಗಿ ಋಷಿಗಳು ಬದುಕಿದರೆ ಸಾಕು ಎಂದು ಆ ವನದಿಂದ ಹೋಗಲು ತೊಡಗುತ್ತಾರೆ. ಇದನ್ನು ನೋಡಿ ಕೃಷ್ಣನಿಗೆ ನಗೆಬರುತ್ತದಲ್ಲದೆ ಘಂಟಾಕರ್ಣನನ್ನು ಕರೆಸಿಕೊಳ್ಳುತ್ತಾನೆ. ಘಂಟಾಕರ್ಣ ರೊಚ್ಚಿಗೆದ್ದ ತನ್ನವರನ್ನು ಸುಮ್ಮನುಳಿಸಿ, ಕೃಷ್ಣನೊಡನೆ ತಾನು ಹರಿಭಕ್ತನೇ ಆಗಿದ್ದೇನೆಂದೂ ಪೂರ್ವಜನ್ಮದ ತಪ್ಪಿನಿಂದ ಹೀಗಾಗಿರುವೆನೆಂದೂ, ವನಕ್ಕೆ ಹರಿಯನ್ನು ಕಾಣುವ ಉತ್ಸಾಹದಲ್ಲಿ ಬಂದಿರುವೆನೆಂದು ಕೃಷ್ಣನ ಕಾಲಿಗೆ ಎರಗುತ್ತಾನೆ. "ನಗಧರ ನಿನ್ನನ್ನು ನೋಡಿದ ಬಳಿಕಿನ್ನು ಜಗದಿ ನಾನೇ ಧನ್ಯ ಜ್ಞಾನದಿ ಪಿತಯನ್ನಾ ಪಾಲಿಸೊ" ಎಂದು ಪ್ರಾರ್ಥಿಸುತ್ತಾನೆ. ಈತ ದುರುಳನಲ್ಲವೆಂದು ಭಕ್ತನೆಂದು ಕೃಷ್ಣ ಅವನ ಮೈದಡವಲು ಆತನ ಶಾಪ ವಿಮೋಚನೆಯಾಗಿ ಗಂಧರ್ವನಾಗಿ ಮಾರ್ಪಡುತ್ತಾನೆ.

ಈ ಕಡೆ ಸ್ವರ್ಗದಲ್ಲಿ ದೇವತೆಗಳು ಬಂದು ಇಂದ್ರನಲ್ಲಿ ತಮಗೆ ಶಂಬರಾಸುರನ ಕಾಟವಾಗಿದೆಯೆಂದೂ ಆತನನ್ನು ಕೊಂದು ತಮ್ಮನ್ನು ಉದ್ಧರಿಸಬೇಕೆಂದು ಕೇಳಿಕೊಳ್ಳುತ್ತಾರೆ. ಆದರೆ ಅದು ತನ್ನಿಂದ ಅಸಾಧ್ಯವೆಂದು ಇಂದ್ರ ತಿಳಿಸುತ್ತಾನೆ. ಹಾಗೂ ಕೃಷ್ಣನ ಮೊರೆ

ಹೋಗಲು ಬದರಿಕಾಶ್ರಮಕ್ಕೆ ಬರುತ್ತಾರೆ. ಹಾಗೆ ಬಂದ ಅವರಿಗೆ ಕೃಷ್ಣ ಶಂಬರಾಸುರ ಈಶ್ವರನಿಂದ ವರ ಪಡೆದ ಕಾರಣ ಮನ್ಮಥನ ಹೊರತು ಯಾರಿಂದಲೂ ಸಂಹರಿಸಲು ಅಸಾಧ್ಯ. ಆದ್ದರಿಂದ ರುಕ್ಮಿಣಿಯಲ್ಲಿ ಮನ್ಮಥ ಹುಟ್ಟಿ ಶಂಬರಾಸುರನನ್ನು ಸಂಹರಿಸುತ್ತಾನೆ. ನಿಶ್ಚಿಂತೆಯಿಂದಿರಿ ಎಂದು ಕಳಿಸಿಕೊಡುತ್ತಾನೆ.

ಮುಂದೆ ಕೃಷ್ಣನು ಗರುಡನನ್ನು ಏರಿ ಕೈಲಾಸಕ್ಕೆ ಈಶ್ವರನನ್ನು ಕಾಣಲು ಹೋಗುತ್ತಾನೆ. ಈತ ಬಾಗಿಲಿಗೆ ಬಂದ ವಾರ್ತೆಯನ್ನು ತಿಳಿದು ಅವನನ್ನು ಸ್ವಾಗತಿಸಿ ಕರೆ ತರುತ್ತಾನೆ. "ಏನಿದು ವಿಚಿತ್ರ ವಿಮಲಚಾರಿತ್ರಾ, ದಾನವಾರುಧಿ ಬಂದ ಕಾರಣವೇನಿದು" ಮುಂತಾಗಿ ಉಪಚರಿಸುತ್ತಾನೆ. "ಯಾರಿಗಿಷ್ಟುಪಚಾರವೈ ಪಾರ್ವತೀಪತಿಯಾರಿಗಿಷ್ಟುಪಚಾರವೈ" ಮುಂತಾಗಿ ಉತ್ತರಿಸಿ, ನೋಡಪ್ಪಾ, ಸುಮನಶರ (ಕಾಮ) ಹೋದ. ಅವನನ್ನು ಬದುಕಿಸಿ ಕೊಟ್ಟರೆ ಶಂಬರಾಸುರ ವಧೆಯಾಗಿ ಸಜ್ಜನರು ಸುಖದಿಂದ ಬಾಳಲು ಸಾಧ್ಯ ಎನ್ನುತ್ತಾನೆ. ಈ ಮಾತನ್ನು ಕೇಳಿದ ಈಶ್ವರ ರುಕ್ಮಿಣಿಯಲ್ಲಿ ಆತ ಹುಟ್ಟುತ್ತಾನೆ ಎಂದು ಭರವಸೆ ಕೊಡುತ್ತಾನೆ. ಈಶ್ವರ-ಪಾರ್ವತಿಯರೊಡನೆ ಭೋಜನವನ್ನು ಮಾಡಿ ಸಂತಸದಿಂದ ಕೃಷ್ಣ ಮನೆಗೆ ಹಿಂದಿರುಗುತ್ತಾನೆ.

ಇನ್ನೊಂದು ಕಡೆ ಕಾಶಿ ದೇಶದ ಅರಸ ಗಂಡು ಮಕ್ಕಳಿಲ್ಲವೆಂದು ತನ್ನ ಮಗಳನ್ನು ವಸುದೇವನಿಗೆ ಕೊಟ್ಟು ಲಗ್ನಮಾಡಿರುತ್ತಾನೆ. ಅವಳಿಗೆ ಕಂದರ್ಪನ ಹಾಗಿರುವ ಪೌಂಡ್ರಕನೆಂಬ ಮಗ ಜನಿಸಲು ಆತನನ್ನು ಕಾಶಿ ರಾಜ ಸಾಕಿಕೊಂಡಿರುತ್ತಾನೆ. ಹಾಗಾಗಿ ಪೌಂಡ್ರಕನು ಕಾಶಿ ರಾಜನಾಗಿದ್ದಾನೆ. ಆತನಿಗೆ ಕಂಸನತಂಗಿ ದೇವಕಿಯಲ್ಲಿ ಕೃಷ್ಣ ಹುಟ್ಟಿದ ಸುದ್ದಿ ತಿಳಿದು ಆತನನ್ನು ನೋಡಿ ಬರಲು ದೂತರನ್ನು ಕಳಿಸುತ್ತಾನೆ. ಅವರು ತಾವು ನೋಡಿದ ಕೃಷ್ಣನನ್ನು "ಪಂಕಜಾಂಬಕಗೆ ಚತುರ್ಭುಜವಂತೆ ಶಂಖಚಕ್ರ ಗದಾಪದ್ಮ ನಾಲ್ಕಂತೆ ಕುಂಕುಮ ಸಮಕಸ್ತೂರಿ ಬೊಟ್ಟಂತೆ ಅಂಕದಿ ಭುಜ ರಾಕ್ರಮ ವೀರನಂತೆ" ಎಂದು ವರ್ಣಿಸಲಾಗಿ ಹೊಟ್ಟೆಕಿಚ್ಚು ಉಂಟಾಗುತ್ತದೆ. ತಾನು ಅವನಿಗಿಂತ ಮೇಲಾಗಬೇಕೆಂದು ತಾನೂ ಅದೇ ರೀತಿ ವೇಷಧರಿಸುತ್ತ, ವರ್ತಿಸುತ್ತಾನೆ. ಮನೆಯಳಿಯತನಕ್ಕಾಗಿ ನನ್ನನ್ನು ಕೊಟ್ಟು ನನಗೆ ವಂಚಿಸಿದರೆಂದು ಸಿಟ್ಟು ಮಾಡಿ "ವರಸಚಿವ ಕೇಳ್ ಧುರಕೆ ಸನ್ನಾಹಗಳನುವದಗಿಸು ದ್ವಾರಕೆಯ ಮುತ್ತುವ ತರಳ ಕೃಷ್ಣನ ಪಿಡಿವನಕಲೇಸಲ್ಲ ನಮಗಿನ್ನು" ಗರ್ಜಿಸುತ್ತಾನೆ. ಆದರೆ ಮಂತ್ರಿ ಆತನಿಗೆ ಬುದ್ಧಿ ಹೇಳಿ "ಕ್ರೋಧವೆಂಬುದು ಶತ್ರು ಸರ್ವಥಾ. ಸಮಾಧಾನವೆಂಬುದು ಸಕಲ ಸಮ್ಮತಾ ಮಾಧವನೊಡನೆ ಗೆಲ್ಲುವ ಚಿಂತೆಬೇಡ ಸಾಧಿಸಿ ಮೃತ್ಯುವ ಕರೆದಂತೆ" ಎಂದು ಹೇಳಿದರೂ ಕೇಳದೆ ಯುದ್ಧಕ್ಕೆ ಹೊರಡುತ್ತಾನೆ. ರಾತ್ರಿಯ ಹೊತ್ತಾದರೂ ದ್ವಾರಕೆಯನ್ನು ಮುತ್ತಿಗೆ ಹಾಕುತ್ತಾನೆ.

ತಾನು ಹಿರಿಯನೆಂದೂ ಕೃಷ್ಣನ ಕೈಲಿರುವ ಶಂಖಚಕ್ರ ಮೊದಲಾದವುಗಳನ್ನು ತಂದು ತನಗೆ ಒಪ್ಪಿಸಿದರೆ ಆತನ್ನನ್ನು ಕಾಪಾಡುತ್ತೇನಾಗಿ ಹೇಳಿಕಳಿಸುತ್ತಾನೆ. ಇದನ್ನು ಕೇಳಿದ ಕೃಷ್ಣ ನಗೆಯಾಡಿ ಆತನನ್ನು ಎದುರಿಸಲು ಶಸ್ತ್ರ ಸಹಿತನಾಗಿ ಯುದ್ಧ ರಂಗಕ್ಕೆ ಹೊರಡುತ್ತಾನೆ. ಪೌಂಡ್ರಕನನ್ನು ಕಂಡು "ಅಣ್ಣನವರೇ ತಮ್ಮ ಗರುಡನ ಬಣ್ಣ ಮಿಗಿಲಾಹುದು" ಇತ್ಯಾದಿ ವರ್ಣಿಸಿದರೆ ಆತ ನಿಜವೆಂದೇ ಗ್ರಹಿಸಿ ತರಳನಾಗಿರುವ ನಿನ್ನನ್ನು ಮುಗಿಸಿಬಿಡುತ್ತೇವೆ ಎನ್ನುತ್ತಾನೆ. ಕೃಷ್ಣನಿಂದ ಮನೆತನಕ್ಕೇ ಅಪಕೀರ್ತಿಯಾಗಿದೆಯೆಂದು ಜರೆಯುತ್ತಾನೆ. ಯುದ್ಧವಾಗುತ್ತದೆ. ಯುದ್ಧದಲ್ಲಿ ಆತನ ಕೃತ್ರಿಮವಾದ ಹೆಚ್ಚಿನ ಎರಡು ಕೈಗಳನ್ನು, ಶಂಖ ಚಕ್ರ ಮೊದಲಾದವುಗಳನ್ನು ಕಳೆದುಕೊಂಡು ನೆಲಕ್ಕೆ ಬೀಳುತ್ತಾನೆ. ಆದರೆ ಆತ ಸುಮ್ಮನಿರದೇ ಕೃಷ್ಣನನ್ನು ವಿಡಂಬಿಸಿ ಜರೆಯುತ್ತಾನೆ. ಕೊನೆಗೆ ಕೃಷ್ಣನ ಚಕ್ರಕ್ಕೆ ಆತನ ತಲೆ ಕಡಿದು ಬೀಳುತ್ತದೆ.

ರುಕ್ಮಿಣಿ ಗರ್ಭವತಿಯಾಗುತ್ತಾಳೆ. ಚೆಲುವಿನಿಂದ ಆಕೆ ನಳನಳಿಸುತ್ತಾಳೆ. ಸಖಿಯರೇ ಮೊದಲಾದವರು ಅವಳನ್ನು ಉಪಚರಿಸಿ ಸಂತೋಷದಲ್ಲಿಡುತ್ತಾರೆ. "ರುಕ್ಮಿಣಿಯು ಹರುಷದಿಂ ನವಮಾಸ ತುಂಬಿ ಸುಮೂರ್ತದೊಳು ಮೆರಗ ಸತ್ಪುತ್ರನಂ ಪಡೆದಳೇನೆಂಬೆತತ್ಸುತನ ಚೆಲುವಿಕೆಯನೂ" ಹೀಗೆ ಹುಟ್ಟಿದ ಶಿಶುವನ್ನು ಆಸ್ಥಾನದ ರಾಣಿಯರೆಲ್ಲರೂ ಬಹು ಸಂತೋಷದಿಂದ ಜೋ ಜೋ ಹಾಡುತ್ತ ಬೆಳೆಸುತ್ತಿದ್ದರು.

ಇತ್ತ ಈಶ್ವರನಿಂದ ತನ್ನ ಗರಡಿ ಸಾಧಕತನದ ಸಹವಾಸ ಹೊಂದಿದವನಿಂದ ಮಾತ್ರ ತನಗೆ ಸಾವು ಬರಲೆಂದು ವರಪಡೆದ ಶಂಬರಾಸುರನಿಗೆ ಕೃಷ್ಣಪುತ್ರನ ಗಂಟುಹಾಕುವುದರಿಂದ ಆತನಿಗೆ ಸಾವು ಬರುತ್ತದೆಂದು ಬಗೆದ ನಾರದ ಶಂಬರಾಸುರನಲ್ಲಿ ಬಂದು, ರುಕ್ಮಿಣಿಯಲ್ಲಿ ಮನ್ಮಥನು ಹುಟ್ಟಿರುವನು. ಆತ ರಕ್ಕಸರ ಅಂದರೆ ಶಂಬರಾಸುರ ವೈರಿ; ಆತನಿಂದಲೇ ಶಂಬರಾಸುರ ವಧೆ ಆಗುತ್ತದೆ. ಆದ್ದರಿಂದ ಬೆಳೆಯಲ್ಲಿಯೇ ಚಿವುಟಿಹಾಕುವುದೇ ಸೂಕ್ತ. ಆದ್ದರಿಂದ ಮನ್ಮಥನನ್ನು ಅಪಹರಿಸಿ ಕೊಲ್ಲು ಎಂದು ಸಲಹೆ ಕೊಡುತ್ತಾನೆ.

ನಿಜವೆಂದು ತಿಳಿದ ಶಂಬರಾಸುರನು, ಮಾಯೆಯಿಂದ ದ್ವಾರಕೆಗೆ ಹೋಗಿ ಅಂತಃಪುರ ಪ್ರವೇಶಿಸಿ "ಮಾಯದಲಿ ಮಲಗಿರುವ ಶಿಶುವನು ನೋಯಿಸದೆ ನುಶಿಯಂತೆ ಕರದೊಳು ಕಾಯಜನ ಕೊಂಡೊಯ್ದನೇ ಖಳರಾಯ" ಆದರೆ ಬರಬರುತ್ತ ಶಿಶುವನ್ನು ನೋಡುತ್ತಿರುವಾಗ ನಾರದನ ಹೇಳಿಕೆ ಸುಳ್ಳಿರಬೇಕೆಂದು ಬಗೆದು ಶಿಶುಹತ್ಯೆ ದೋಷಕ್ಕೆ ಗುರಿಯಾಗುವುದೇಕೆಂದು ಆ ಶಿಶುವನ್ನು ಸಮುದ್ರಕ್ಕೆ ಒಗೆಯುತ್ತಾನೆ.

ತೊಟ್ಟಿಲಲ್ಲಿ ಮಲಗಿದ ಶಿಶು ಕಾಣದಿರಲು ಎಲ್ಲರೂ ಗಾಬರಿಯಾಗಿ ಊರೆಲ್ಲ ಹುಡುಕಿದರು. ಶಿಶು ಹುಟ್ಟಿದ ಮನೆಯನ್ನೆಲ್ಲ ಶೋಧಿಸಿದರು. ಆದರೆ ಶಿಶು ಸಿಕ್ಕಲಿಲ್ಲ. "ಎಲ್ಲಿರುವೆಯೆಲೊ ಕಂದಾ, ಏನಾದುದೆಲೆ ಕಂದಾ" ಎಂದು ರುಕ್ಮಿಣಿ ಶೋಕಿಸುತ್ತಾಳೆ.

ಸಮುದ್ರದಲ್ಲಿ ಒಗೆದ ಶಿಶುವನ್ನು ಮೀನೊಂದು ನುಂಗುತ್ತದೆ. ಆ ಮೀನು ಅಂಬಿಗರ ಬಲೆಗೆ ಸಿಕ್ಕುತ್ತದೆ. ಆ ಮೀನನ್ನು ಅವರು ಶಂಬರಾಸುರನಿಗೆ ತಂದೊಪ್ಪಿಸುತ್ತಾರೆ. ಹಿಂದೆ ಮನ್ಮಥನು ಉರಿದು ಹೋದಾಗ ದುಃಖದಿಂದ ಬಹಳ ದೇಶಗಳ ಸಂಚರಿಸಿದ ರತಿ ಕೊನೆಗೆ ಶಂಬರಾಸುರನಲ್ಲಿ ಬಂದು ಅಡಿಗೆಯವಳಾಗಿ ಜೀವನ ಸಾಗಿಸುತ್ತಿರುತ್ತಾಳೆ. ಅವಳನ್ನು ಕರೆದು ಪೊಗದಸ್ತಾಗಿ ಪದಾರ್ಥವನ್ನು ಮಾಡೆಂದು ಅವಳ ಕಡೆ ಮೀನನ್ನು ಕೊಡಲು, ಅವಳು ಮೀನನ್ನು ಸೀಳಿದಾಗ ಶಿಶುವನ್ನು ಕಾಣುತ್ತಾಳೆ. "ಎಲೆ ಎಲೆ ಇದೇನು ವಿಚಿತ್ರವೈ ಶಿವಶಿವಾ ಜಲಜಂತುವಿನಲಿ ಮಾನವನುದಿಸುವುದು" ಎಂದು ಆಶ್ಚರ್ಯಪಟ್ಟು ಏನು ಮಾಡಬೇಕೆಂದು ತಿಳಿಯದಿರುವಾಗ ನಾರದ ಬರುತ್ತಾನೆ. ಈಶ್ವರನ ಕಣ್ಣಿನಿಂದ ಭಸ್ಮವಾದ ನಿನ್ನ ಗಂಡನೇ ತಿರುಗಿ ರುಕ್ಮಿಣಿಯಲ್ಲಿ ಹುಟ್ಟಿದ್ದಾನೆ. ಎಂದು ತಿಳಿಸಿ ಸ್ತನ್ಯಪಾನ ಮಾಡಿಸದೆ ಪಾಲಿಸುವಂತೆ ಉಪದೇಶಿಸುತ್ತಾನೆ. ಇದರಿಂದ ಅವಳಿಗೆ ಸಂತೋಷವಾದರೂ ಮರೆಸಿ ಉಳಿಸಲಾಗದ್ದಕ್ಕೆ ಶಂಬರಾಸುರನೆದುರು ತಂದು ಇಟ್ಟು ಮೀನಿನ ಉದರದಿ ಜನಿಸಿದ ಶಿಶುವೆಂದು ಆಶ್ಚರ್ಯ ವ್ಯಕ್ತಪಡಿಸುತ್ತಾಳೆ. ಚೆಲುವಾದ ಶಿಶುವನ್ನು ಕಂಡ ಶಂಬಾಸುರ ಇರಲಿ. ದೇವರೆ ಕೊಟ್ಟ ಶಿಶು. "ಸಂತತ್ಕರುಣದಿಂದಲಿ ಸಲಹಿಕೋ ಚೆಂದವಾಗಿ" ಎನ್ನುತ್ತಾನೆ. ರತಿ-ಮನ್ಮಥರು ಗಂಡ ಹೆಂಡಿರ ಹಾಗೇ ಪ್ರೀತಿಯಿಂದಿರುತ್ತಾರೆ. ಶಂಬರಾಸುರನು "ಗರುಡಿಯೋಳ್ ತನ್ನೊಡನೆ ದಿನದಿನದಲಿ ಪಾದಕ ಮರ್ಮಗಳನರುಹಿ ಸತ್ಕರುಣದಿಂದ ಬಿಡದೆ" ಬೆಳೆಸುತ್ತಾನೆ.

ಹೀಗಿರುವಾಗ ನಾರದ ಬಂದು ನಿನ್ನ ಅರಮನೆಯಲ್ಲೇ ನಿನ್ನ ನಾಶದ ತಯಾರಿ ನಡೆಯುತ್ತಿದೆ. 'ಪಗಲಿರುಳೆನ್ನದೆ ಸಂಪತಿಗೆ ಮೇಲ್ ದಂಪತಿಗಳಂತೆ ಸುಬಗಿನಿಂದಹರ್ಯೆ" ಎಂದು ತಿಳಿಸಿ, ಗರಡಿಯ ಮನೆಯಲ್ಲಿ ನಿನ್ನ ಸಾಧನೆ ಜೊತೆ ಇರುವವನಿಂದ ನಿನ್ನ ಮರಣ ಎಂಬುದು ನೆನಪಿದೆಯೇ ಎಂದು ಕೇಳುತ್ತಾನೆ. ಇದನ್ನು ಕೇಳಿ ಶಂಬರಾಸುರ ಸಿಟ್ಟಿಗೇಳುತ್ತಾನೆ. ಅಡಿಗೆಯವಳನ್ನು ಸೆರೆಮನೆಯಲ್ಲಿಡಲು ಹೇಳುತ್ತಾನೆ. ಆದರೆ ಹಾಗೆ ಹೋದ ದೂತರನ್ನು ಮನ್ಮಥ ಸಂಹರಿಸಿ, ಸೇವಕನೊಡನೆ ನಿಮ್ಮ ಒಡೆಯನಿಗೆ ಹೇಳೆನ್ನುತ್ತಾನೆ.

ತಾನು ತನಗೇ ಅಪಾಯಕಾರಿ ಕಾರ್ಯ ಮಾಡಿದೆನೆಂದು ಆತನಿಗೆ ಈಗ ಅರಿವಾಗುತ್ತದೆ. ಆರ್ಭಟಿಸಿ ಆತ ಬರುತ್ತಾನೆ. ಆದರೆ ಇಲ್ಲಿ ಮನ್ಮಥ-ರತಿಯರ ಸರಸಸಲ್ಲಾಪ ನಡೆಯುತ್ತಿರುತ್ತದೆ. ಅತಿ ಮೋಹದಿಂದ ತಕ್ಕೈಸುವ ಅವಳ ತೋಳುಗಳನ್ನು ಬಿಡಿಸಿಕೊಂಡು ಮನ್ಮಥ ಯುದ್ಧಕ್ಕೆ ಬರುತ್ತಾನೆ. ಮೋಹನಾಂಗಿಯನ್ನು ತನಗೆ ಇತ್ತು ಸಲಹು ಎನ್ನುತ್ತಾನೆ. ಶಂಬರಾಸುರನು ಉಗ್ರವಾದ ಬಾಣ ಪ್ರಯೋಗ ಮಾಡುತ್ತಾನೆ. ಅದಕ್ಕೆ ಮಿಗಿಲೆನ್ನುವಂತೆ ಮನ್ಮಥನು ಬಾಣ ಪ್ರಯೋಗ ಮಾಡುತ್ತಾನೆ. "ಅಡಿಗೆ ಮನೆಯೊಳ್ಳಲಿವ ಆ ಮಡದಿಯ ಮಾತಾಡಿಸು ಬೆಡಗಲ್ಲಾ ನೋಡ್ ತರಳ" ಎಂದು ಬೋರ್ಗರೆಯುತ್ತಾನೆ. ಆದರೆ ಮನ್ಮಥ ತಿಳುಕದೆ ಆತನ ತಲೆ ಕಡಿದುರುಳಿಸುತ್ತಾನೆ.

ದೇವತೆಗಳು ಸಂತೋಷಪಟ್ಟರು. ದ್ವಾರಕೆಗೆ ಬಂದ ನಾರದನನ್ನು ಮನ್ಮಥನ ಪತ್ತೆ ಇದೆಯೇ ಎಂಬ ಕೃಷ್ಣ-ರುಕ್ಮಿಣಿಯರು ವಿಚಾರಿಸಲಾಗಿ ಮನ್ಮಥ ಶಂಬರಾಸುರನನ್ನ ಸೇರಿದ ಕಥೆಯನ್ನೆಲ್ಲ ವಿಸ್ತರಿಸುತ್ತಾನೆ. ಅಷ್ಟರಲ್ಲಿ ಮನ್ಮಥ ಮತ್ತು ರತಿಯರು ಪುಷ್ಪಕ ವಿಮಾನದಿಂದ ಬಂದು ನಮಸ್ಕರಿಸುತ್ತಾರೆ. ರತಿ, ಮನ್ಮಥರ ಮದುವೆ ಮಹೋತ್ಸವ ನಡೆಯುತ್ತದೆ.

**೮. ಬಾಣಾಸುರ ಕಾಳಗ**

ದ್ವಾರಕಾ ಪಟ್ಟಣದಲ್ಲಿ ಶ್ರೀಕೃಷ್ಣನಿಗೆ ಅನಿರುದ್ಧನೆಂಬ ಮೊಮ್ಮಗನು ಹುಟ್ಟಿದಂತೆ ಬಲಿಗೆ ಹುಟ್ಟಿದ ನೂರು ಜನ ಮಕ್ಕಳಲ್ಲಿ ಬಾಣಾಸುರನೇ ಹಿರಿಯನಾಗಿರುತ್ತಾನೆ. ಬಾಣಾಸುರನು ಶಿವಭಕ್ತನಾಗಿ ಸಾವಿರ ತೋಳುಗಳನ್ನು ಪಡೆದ ವೀರನಾಗಿರುತ್ತಾನೆ. ಆತ ಮನೆ ಬಾಗಿಲನ್ನು ಸ್ವತಃ ಈಶ್ವರನೇ ಕಾಯುತ್ತಿರುತ್ತಾನೆ. ಹಾಗೆ ಐಶ್ವರ್ಯದಿಂದಲೂ ಅಹಂಕಾರದಿಂದಲೂ ಮೆರೆಯುತ್ತಿದ್ದ ಬಾಣನಿಗೆ ಓರ್ವ ಚಿನ್ನಗೊಂಬೆ ಯಂತಹ ಮಗಳು ಹುಟ್ಟಿ ಬೆಳೆಯುತ್ತಾಳೆ.

ಒಂದು ದಿನ ಬಾಣನು ಈಶ್ವರನನ್ನು ಪರಮ ಭಕ್ತಿಯಿಂದ ಪೂಜಿಸಲಾಗಿ ಈಶ್ವರ ಪ್ರತ್ಯಕ್ಷನಾಗಿ ಆತನ ಆಶೆ ಏನೆಂದು ಹೇಳುತ್ತಾನೆ. ಆಗ ಬಾಣ 'ಶಿವನೆ ನೀನೇ ಬಾಗಿಲು ಕಾಯುತ್ತಿರುವಾಗ ಮತ್ತೆ ಯಾವ ಐಶ್ವರ್ಯ ಕೇಳಲಿ. ನನಗೆ ಸಮನಾಗಿ ಹೋರಾಡುವ ವೀರನನ್ನು ತೋರಿಸು' ಎನ್ನುತ್ತಾನೆ. "ವೀರಖಳನಿಂತೆನಲು ಕೇಳುತ್ತ ಮಾರಮಣನುಸುರಿದನು. ನಿನ್ನ ಮಯೂರಕೇತನ ಮುರಿದು ಭೂಮಿಗೆ ಬಿದ್ದ ದಿವಸದಲಿ ವಾರಿಜಾಕ್ಷನೊಳ್ಕೈದೆ ಸಮರವು ದೋರುವುದು ನಿನಗೆಂದು" ನಿನ್ನ ಮಯೂರ ಧ್ವಜ ಮುರಿದು ಬಿದ್ದ ದಿನ ನಿನಗೆ ಕೃಷ್ಣನೊಡನೆ ಯುದ್ಧ ಸಂಭವಿಸುತ್ತದೆ - ಎಂದು ಅಂತರ್ದಾನನಾಗುತ್ತಾನೆ.

ಹೀಗೆ ಕಾಲ ಹೋಗುತ್ತಿರುವಾಗ ತಾರುಣ್ಯಕ್ಕೆ ಬಂದ ಉಷೆ ತಂದೆ ತನಗೆ ಪರಿಣಯದ ಕಾರ್ಯ ಮಾಡಲಿಲ್ಲವೆಂದು ಕಳವಳಿಸಿ ಸಖಿಯೊಡನೆ ಹೇಳಲು ಆಕೆ ಪಾರ್ವತಿಯನ್ನು ಒಲಿಸಿಕೊಳ್ಳಬೇಕೆನ್ನುತ್ತಾಳೆ. ಹಾಗೆಯೇ ತಂದೆಯ ಅಪ್ಪಣೆ ಪಡೆದು ಉದ್ಯಾನಕ್ಕೆ "ನಡೆಗೆ ಹಂಸ ಮರುಳಾಗೆ, ನುಡಿಗೆ ಗಿಣಿಗಳು ಕೂಡ್ಕೈತರೆ" ಈ ರೀತಿಯಲ್ಲಿ ಬರಲಾಗಿ ಶಿವನು ಬಂದುದೇಕೆಂದು ಕೇಳಲು ತಾವು ಶಿವೆಯನ್ನು ಕಾಣಲು ಬಂದೆವೆಂದು ಸಖಿ ಹೇಳುತ್ತಾಳೆ. ಅವರು ಬಂದ ಕಾರಣವನ್ನು ತಿಳಿದ ಶಿವೆ "ನಾಳೆ ಬರುವ ವೈಶಾಖ ಶುದ್ಧ ದ್ವಾದಶಿಯ ದಿನದಿ ಬಾಲೆ ಸರಿರಾತ್ರಿಯೋಳ್ ಸ್ವಪ್ನದಲ್ಲಿ ಮದನನಂದದಾತ ಬಂದಿರದೆ ನೆರೆವನವನು ಕಾಂತನಹನು ನಂಬಿಮಾತ" ಎನ್ನುತ್ತಾಳೆ.

ಪಾರ್ವತಿ ಹೇಳಿದ ಕನಸನ್ನು ನೆನೆಸುತ್ತ ಕಾತುರತೆ ತಾಳುತ್ತ ಬೇಕಾದ ಭೋಜನ ಮಾಡಿ ಮಲಗಿ ನಿದ್ರಿಸುವಾಗ ಅನಿರುದ್ಧನ ಕಂಡು ರಮಿಸುತ್ತಾಳೆ. ಎಚ್ಚರಾದಾಗ ಆತನನ್ನು ಕಾಣದೆ ದುಃಖಿಸುತ್ತಾಳೆ. ಅವಳ ಸಖಿ-ಮಂತ್ರಿಯ ಮಗಳು ಬೆಳಗಾಗಲಿ ತಡೆ ಎಂದು ಸಂತೈಸುತ್ತಾಳೆ. ಬೆಳಗಾದ ಮೇಲೆ, ತನಗೆ ಆತನ ಗುರುತು ಹೇಳುವುದಾದರೆ ಹುಡುಕಿಬರುವ ಎಂದು, ತಾನು ಕಲಿತ ಮಾಯಾ ವಿದ್ಯೆಯಿಂದ ದೇವಗಂಧರ್ವರೇ ಮೊದಲಾದವರ ತೋರಲು ಅನಿರುದ್ಧನಂತಹ ಚಿತ್ರ ಕಂಡು ಈತನೇ ಎನ್ನಲು ಸಖಿ ದೇಶಾಂತರ ಹೋಗಿ ಆತನನ್ನು ದ್ವಾರಕೆಯಲ್ಲಿ ಕಂಡು, ಮಲಗಿದಲ್ಲಿಂದಲೇ ಎತ್ತಿ ತಂದು ಉಷೆಯ ಕೋಣೆಯಲ್ಲಿ ಬಿಡುತ್ತಾಳೆ.

ಆತನನ್ನು ಕಂಡು ಉಪಚರಿಸಿ ತನ್ನನ್ನು ಸ್ವಪ್ನದಲ್ಲಿ ಬಂದು ರಮಿಸಿ ಬಿಟ್ಟುಹೋಗಬಹುದೇ ಎಂದಾಗ "ಮಾನಿನಿ ಕೇಳೆ ವಂಚಿಸಿಪೋದವಳ್ ನೀನು ನಾನಲ್ಲ" ಎಂದು ಹೇಳಿ ರಮಿಸುತ್ತಾನೆ. ಹೀಗೆ "ಅನಿರುದ್ಧ ನೊಡೀಪರಿಯಿಂ ದಿನದಿನದೊಳು ಬಾಣತನುಜೆಯಲಿ ಸಂಭ್ರಮದಿಂ ಮನುಮಥಕೇಳಿಯೊಳಿರುತಿರೆ ಮುನಿಪತಿ ನಾರದಸುರನ ಸಭೆಗೇಳ್ತಂದಂ".

ನಾರದನನ್ನು ಬಾಣನು ಸತ್ಕರಿಸಿ ಬಂದ ಕಾರಣ ಕೇಳಲು ನಾರದ "ಉಸಿರೆಂದರುಸಿರ್ವೆ ನಾನು ನೀ ತಲೆಯ ತಗ್ಗಿಸುವ ಹಾಗಾಯಿತಿನ್ನು" ಎಂದು ಉಷೆಯ ಕಥೆಯನ್ನು ಹೇಳುತ್ತಾನೆ. ತನ್ನ ಸರ್ಪಕಾವಲನ್ನೂ ಮೀರಿಬಂದವನು ಯಾರೆಂದು ಕೇಳಲು ಆತ ಕೃಷ್ಣನ ಮೊಮ್ಮಗನೆಂದೂ ನೀನು ಕೊಲ್ಲುತ್ತೇನೆ ಎಂದರೆ ನಿನ್ನ ಕೈಗಳನ್ನೇ ಕಡಿಯುವನು ಎನ್ನುತ್ತಾನೆ.

ಈ ಸಂಗತಿಯನ್ನು ಕೇಳಿದ ಬಾಣ ತನ್ನ ಮಂತ್ರಿ ಕುಂಭಾಂಡನನ್ನು ಕರೆದು ತನ್ನ ಮಗನಿಗೆ ಈತ ಯೋಗ್ಯ ಗಂಡನಾಗಬಹುದೇ ಎಂದು ಹೇಳಿದಾಗ ತಾನೇ ಹೋಗಿ ನೋಡಿ ಬರುವುದಾಗಿ ಹೇಳಲು ಆತನನ್ನು ಕರೆತರದಿದ್ದರೆ ನಿನ್ನನ್ನೇ ಕೊಲ್ಲುವುದಾಗಿ ಹೇಳುತ್ತಾನೆ.

ಇದು ತಿಳಿದ ಉಷೆ ದುಃಖಿಸುತ್ತಾಳೆ. ಸಖಿ ರಾಕ್ಷಸರ ಕಾವಲು ಇರಿಸುತ್ತಾಳೆ. ಅನಿರುದ್ಧನನ್ನು ಕಂಡು ಮಂತ್ರಿ ಬಹು ವೀರರನ್ನು, ಶಸ್ತ್ರಾಸ್ತ್ರ ಸಹಿತನಾಗಿ ಬರುವನೆಂದೂ ತಾನೇ ಕರೆತಂದು ಕೊಲ್ಲಿಸುವಂತಾಯಿತೆಂದೂ ಮರಗುತ್ತಾಳೆ. ಅನಿರುದ್ಧ ಹಾಗೇನೂ ಇಲ್ಲ. ಚೆಲುವೆಯನ್ನು ನೀನು ನನಗೆ ಒದಗಿಸಿದೆ. ಅದಕ್ಕೆ ಕೊಲಿಸುವುದು ಎನ್ನಲಾಗದು ಎನ್ನಲು ಉಷೆ ಪರಿಪರಿಯಾಗಿ ದುಃಖಿಸುತ್ತಾಳೆ. ಇದ ನೊಡಿದ ಅನಿರುದ್ಧ "ಬೇಡವೇ, ನಿನಗೆ ಶೋಕವು, ಕೇಳು, ಯುದ್ಧ ಮಾಡುವುದನು ನೋಡು ನೀನೇಳು, ಕೂಡಿದ ರಾಕ್ಷಸ ಬಲವನು ಮಣ್ಣಗೂಡಿಸುವೆನು ನಿಮಿಷಗೊಳಾನು" ಎಂದು ಸಂತೈಸುತ್ತಾನೆ.

ಅಲ್ಲಿ ಮಂತ್ರಿ ಬರುತ್ತಾನೆ. ಬಾಗಿಲು ತೆಗೆಯಲು ಹೇಳಿದರೆ ತೆಗೆಯುವುದಿಲ್ಲ. ಆಗ ಆತ ಆನೆಗಳಿಂದ ಬಾಗಿಲನ್ನು ಮುರಿಸುತ್ತಾನೆ. "ಕರಿಗಳಿಂದ ಬಾಗಿಲನ್ನು ಮುರಿಸುವನು ಗೈಯೆ ಕಂಡು ಸ್ಮರಜ ಖಾತಿವೆತ್ತು ಹೂಂಕರಿಸುತಾಕ್ಷಣ ಶರಶರಾಸನವನು ಕೊಂಡು ಭರದಿ ಕದವ ತೆಗೆದು ಪೊರಟು ಸರಳಿನಿಂದ ಗಜವ ಧರಣಿಗುರುಳಲೆಚ್ಚನು" ಯುದ್ಧದಲ್ಲಿ ದೈತ್ಯರನ್ನು ನಾಶ ಮಾಡಲು ಮಂತ್ರಿ ಮೂಗಿನ ಮೇಲೆ ಬೆರಳಿಡುತ್ತಾನೆ. ತಾನು ಚಿಕ್ಕವನಾದರೂ ತನ್ನ ಶರ ಚಿಕ್ಕದೇ ಎಂದು ವೀರತ್ವವನ್ನು ತೋರುತ್ತಾನೆ. ಅನಿರುದ್ಧನ ಬಾಣಕ್ಕೆ ಮೂರ್ಛೆ ಹೋದ ಕುಂಭಾಂಡಕ ಮತ್ತೆ ಎದ್ದು "ಬಲಿಯ ಕೊಡುವೆ ಭೂತಗಳಿಗೆ" ಎಂದು ಗರ್ಜಿಸಿ ಯುದ್ಧಕ್ಕೆ ತೊಡಗುತ್ತಾನೆ. ಆದರೆ ಸೋತು ಮೂರ್ಛೆ ಹೋಗಲಾಗಿ ದೂತನು ಬಾಣನ ಕಡೆಗೆ ಬಂದು ನಡೆದ ರೀತಿಯನ್ನು ಹೇಳುತ್ತಾನೆ. ಇದನ್ನು ಕೇಳಿದ ಬಾಣ ತನ್ನ ಸಕಲ ಯುದ್ಧ ತಯಾರಿಯಿಂದ ಬರುತ್ತಾನೆ.

ಇದನ್ನು ತಿಳಿದ ಅನಿರುದ್ಧನು ಧನುರ್ಬಾಣಗಳನ್ನು ಹಿಡಿದು ಯುದ್ಧಕ್ಕೆ ಬರುತ್ತಾನೆ. ಎದುರಿಗೆ ಬಂದ ದೈತ್ಯಗಣಗಳನ್ನು ಸಂಹರಿಸುತ್ತಾನೆ. ಇದರಿಂದ ಬಾಣ ಉಗ್ರರೂಪದಿಂದ ಅವನ ಮೆಲೆ ಎರಗುತ್ತಾನೆ. ಇಲ್ಲಿಯವರೆಗೆ ಗೆದ್ದೆನೆಂದು ಬೀಗಬೇಡ. ನಿನ್ನ ದೇಹವನ್ನು ಸೀಳುತ್ತೇನೆ. ಎನ್ನುತ್ತಾನೆ. ಇದನ್ನು ಕೇಳಿ ಅನಿರುದ್ಧ ನಿನ್ನ ಮಗಳ ಗಂಡನಾದ ನನ್ನ ಮೇಲೆ ಸಿಟ್ಟಿನಿಂದ ಮಾತಾಡುವುದೇಕೆ ಎನ್ನಲು, ನನ್ನ ಮಗಳನ್ನು ನಿನಗೆ ಕೊಟ್ಟವರು ಯಾರು ? ಕಳ್ಳತನದ ಮಾತು ಬೇಡವೆನ್ನುತ್ತಾನೆ. ಮಗಳ ಕೊಟ್ಟವರು ಯಾರೆಂಬುದು ಬೇಡ. ಎಲ್ಲ ಬ್ರಹ್ಮ ಬರಹದಿಂದಾದುದು. ನೀವು ಹಿರಿಯರು. ಇದ ಮೀರಿ ನಿಮ್ಮೊಡನೆ ಯುದ್ಧ ಮಾಡಲಾರೆ ಎನ್ನುತ್ತಾನೆ. ಆದರೂ ಯುದ್ಧ ನಡೆದು ಬಾಣನು ಅನಿರುದ್ಧನನ್ನು ಸೆರೆಹಿಡಿಯುತ್ತಾನೆ.

ಅನಿರುದ್ಧನನ್ನು ಹಿಡಿದುದನ್ನು ತಿಳಿದು ಉಷೆ ದುಃಖಪಡುತ್ತಾಳೆ. ಇದನ್ನು ನೋಡಿದ ಬಾಣ ಅವನನ್ನು ಕೊಲ್ಲುವುದಿಲ್ಲವೆಂದು ಸಂತೈಸುತ್ತಾನೆ.

ಇಷ್ಟಕ್ಕೆ ನಾರದನು ಅಲ್ಲಿಗೆ ಬರುತ್ತಾನೆ. ತಾನು ಮುಂದೆ ಏನು ಮಾಡಬೇಕೆಂದು ಕೇಳಲು ತಾನು ಹೇಳುವುದೇನು? ನಿನ್ನ ಬಾಗಿಲನ್ನೆಲ್ಲ ಕಾಯುತ್ತಿದ್ದ ಈಶ್ವರನನ್ನು ಕೇಳು ಎನ್ನುತ್ತಾನೆ. ಈಶ್ವರನನ್ನು ಕೇಳಲು ಆತ ಈತನಿಗೆ ಶಿಕ್ಷೆಕೊಟ್ಟರೆ ಕೃಷ್ಣ ಸಿಟ್ಟುಗೊಂಡು ಯುದ್ಧಕ್ಕೆ ಬರುತ್ತಾನೆ. ಯಾಕೆ ಆತನೊಡನೆ ಯುದ್ಧ, ಎಂದರೆ ಬಾಣ ಬರಲಿ, ಆತನನ್ನು ಕ್ಷಣಾರ್ಧದಲ್ಲಿ ಕೊಂದು ಮುಗಿಸುತ್ತೇನೆ ಎಂದು ಅನಿರುದ್ಧನಿಗೆ ವಜ್ರ ಶೃಂಕಲೆಯನ್ನು ತೊಡಿಸಿ ಸೆರೆಯೊಳಗಿಡುತ್ತಾನೆ.

ನಾರದನು ಅಲ್ಲಿಂದ ಹೊರಟು ದ್ವಾರಕೆಗೆ ಬರಲು ಅವನನ್ನು ಸತ್ಕರಿಸಿದ ಕೃಷ್ಣ ಮುನಿಯೇ ನೀನು ಜಗತ್ತನ್ನೆಲ್ಲ ತಿರುಗುತ್ತಿಯೇ ಆದ್ದರಿಂದ ಅನಿರುದ್ಧನ ಇರುವಿಕೆಯೇನಾದಹ ಗೊತ್ತಾ ಎಂದು ಕೇಳಿದಾಗ ಬಾಣನು ಆತನನ್ನು ಸೆರೆಮನೆಯಲ್ಲಿ ಬಂಧಿಸಿಟ್ಟ ವಿಚಾರವನ್ನು ಹೇಳುತ್ತಾನೆ. ಇದನ್ನು ಕೇಳಿದ ರುಕ್ಮಿಣಿ ತಾನು ಅನಿರುದ್ಧ ಕಾಣೆಯಾದಾಗಲೇ ಹೇಳಿದರೂ ಹರಿ ಮಾತಾಡಲಿಲ್ಲ ಎಂದು ದುಃಖಿಸಲು, ದುಃಖಿಸಬೇಡ ವಿಧಿ ಬರಹ ಆದಂತೆ ಆಗುತ್ತದೆ. ತಾನು ಆತನನ್ನು ಸೆರೆಬಿಡಿಸಿ ತರುತ್ತೇನೆಂದು ಅಣಿಗೊಂಡು, ಗರುಡನನ್ನು ನೆನಪಿನಿಂದ ಕರೆಯುತ್ತಾನೆ. ಗರುಡ ತಾನೇ ಹೋಗಿ ಆತನ ಅರಮನೆಯನ್ನು ಕಿತ್ತು ತರುತ್ತೇನೆ ಎನ್ನಲು, ಅಲ್ಲಿ ಈಶ್ವರ

ಕಾವಲಿದ್ದಾನೆ. ನಿನ್ನಿಂದ ಅಸಾಧ್ಯ ಎಂದು ಸೈನ್ಯ ಸಹಿತ ಗರುಡನನ್ನು ಏರುತ್ತಾನೆ. ಬಲು ವೇಗದಿಂದ ಗರುಡ ಹಾರುವಾಗ ಪರ್ವತಗಳೇ ಅಲುಗಿ ಹೋದಂತಾಗುತ್ತದೆ.

ದಾರಿಯಲ್ಲಿಳಿದು ಗೋಮತಿ ನದಿಯಲ್ಲಿ ಮಿಂದು ವಿಶ್ರಾಂತಿ ಪಡೆದು ಕೃಷ್ಣನು ಸಭೆಯನ್ನುದ್ದೇಶಿಸಿ ಇದೀಗ ನಾನು ಬಾಣನ ಸಾವಿರ ತೋಳುಗಳ ಕಡಿದುಹಾಕುವೆನೆಂದು, ಬಾಣನ ಪ್ರಾಣ ತೆಗೆವೆನು, ಆದ್ದರಿಂದ ನಾರದನೇ, ಬೇಗ ನೀನು ಈಶ್ವರನಲ್ಲಿ ಹೋಗಿ ಈ ಸಂಗತಿಯನ್ನು ತಿಳಿಸು. ನಿನ್ನ ಸಹಾಯದಿಂದಾಗಿ ಬಾಣನು ಅಷ್ಟುಬಲಯುತನಾಗಿದ್ದಾನೆ. ನನ್ನ ಮೊಮ್ಮಗನನ್ನು ಸೆರೆಯಲ್ಲಿಟ್ಟಿದ್ದಾನೆ. ಕೊನೆಗೆ ತನ್ನ ಭಕ್ತರನ್ನು ನೀನು ಕೊಂದೆ ಎಂಬ ಅಪಕೀರ್ತಿಯನ್ನು ಆತ ತನ್ನ ಮೇಲೆ ಹೊರಿಸುವನು. ಅದೆಲ್ಲ ಬೇಡ. ನೀನು ಉಷೆಯನ್ನು ಅನಿರುದ್ಧನೊಡನೆ ಮದುವೆ ಮಾಡುವಂತೆ ಬಾಣನಿಗೆ ಹೇಳು ಎಂದು ಹೇಳಲು ನಾರದನು ಈಶ್ವರನಲ್ಲಿ ಬಂದು ಸಂಗತಿ ತಿಳಿಸಿದನು.

ಈಶ್ವರನು ಚರನನ್ನು ಕರೆದು ಕೃಷ್ಣ ತನ್ನ ಮೊಮ್ಮಗನಿಗಾಗಿ ಯುದ್ಧಕ್ಕೆ ಬಂದಿದ್ದಾನೆ. ಕೃಷ್ಣನ ವೈರ ಒಳ್ಳೆಯದಲ್ಲ. ಯುದ್ಧ ಬೇಡ. ಉಷೆಯನ್ನು ಅನಿರುದ್ಧನಿಗೆ ಮದುವೆ ಮಾಡಿಕೊಡಲು ನಾನು ಹೇಳಿರುವೆನೆಂದು ಬಾಣನಿಗೆ ತಿಳಿಸು ಎಂದು ಕಳಿಸುತ್ತಾನೆ.

ಇದನ್ನು ಕೇಳಿ ಬಾಣಾಸುರನು ಸಿಟ್ಟುಗೊಂಡು ಮಂತ್ರಿಯನ್ನು ಕರೆದು ನೋಡು ಈಶ್ವರ ತನ್ನನ್ನು ದನಕಾಯುವವನಿಗಿಂತ ಕಡಿಮೆ ಮಾಡಿದನು ಮುಂತಾಗಿ ಹೇಳಲು ಮಂತ್ರಿ "ತನುಜೆಯ ಸ್ಮರಜಗಿತ್ತರೆ ಚಂದವಯ್ಯ ದನುಜಾರಿ ಬಂಧುತ್ವವಾದರೆ ಸುಖವಯ್ಯ" ಮುಂತಾಗಿ ಹೇಳುತ್ತಾನೆ. ಇದರಿಂದ ಆತ ಸಿಟ್ಟಾಗಿ ನಿನಗೆ ಸಲುಗೆ ಕೊಟ್ಟಿದ್ದು ಜಾಸ್ತಿಯಾಯಿತು. ಯುದ್ಧಕ್ಕೆ ಹೋಗು. ನಾನು ಶಿವನ ಪೂಜೆ ಮಾಡಿ ಬರುತ್ತೇನೆ. ಎನ್ನಲು ಮಂತ್ರಿ ಯುದ್ಧಕ್ಕೆ ಹೊರಡುತ್ತಾನೆ.

ಈಗ ಈಶ್ವರನೇ ಸ್ವತಃ ನಂದಿಯನ್ನೇರಿಕೊಂಡು ಯುದ್ಧಕ್ಕೆ ಹೊರಡುತ್ತಾನೆ. ಸ್ಕಂದನಾಗ ಅವನ ಜೊತೆ ಇರುತ್ತಾನೆ. ಮೊದಲು ಸ್ಕಂದನು ಎದುರು ನಿಂತು ಯುದ್ಧಕ್ಕೆ ಆಹ್ವಾನ ಕೊಡುತ್ತಾನೆ. ಆತನನ್ನು ಮನ್ಮಥನು ಎದುರಿಸುತ್ತಾನೆ. ಅವರ ಮಧ್ಯೆ ಅವರ ಹುಟ್ಟಿಗಾಗಿ ವ್ಯಂಗ್ಯಾತ್ಮಕ ಸಂಭಾಷಣೆ ನಡೆಯುತ್ತದೆ. ಅವರಲ್ಲಿ ಮನ್ಮಥ ಸೋತು, ಕೃಷ್ಣ ಎದುರು ಬರಲಾಗಿ ಯುದ್ಧದ ಭೀಕರತೆಯನ್ನು ನೋಡಿದ ಈಶ್ವರ ಹರಿಯ ಸಂಗಡ ಯುದ್ಧಬೇಡವೆನ್ನಲು ಸ್ಕಂದ ಹಿಂದೆ ಸರಿಯುತ್ತಾನೆ.

ಈಗ ಈಶ್ವರನೇ ಯುದ್ಧಕ್ಕೆ ನಿಲ್ಲುತ್ತಾನೆ. "ಹರಿಯೆ ನಿನ್ನೊಳಿಂದು ಸಮರ ದೊರಕಿತೆನಗೆ ದುರುಳ ಖಳರ ಮುಂದೆ ತೆರವಿದಲ್ಲ ಕಳುಹು ಸರಳ ವೇಗದಿ" ಎಂದು ಬೊಬ್ಬಿರಿಯುತ್ತಾನೆ. ಭಾರೀ ಯುದ್ಧ ನಡೆದು ಈಶ್ವರನು ತ್ರಿಶೂಲವನ್ನು ತೆಗೆಯಲಾಗಿ ಕೃಷ್ಣನು ಚಕ್ರವನ್ನು ಹಿಡಿಯುತ್ತಾನೆ. ಈಗ ಆಕಾಶವಾಣಿಯಾಗಿ ತ್ರಿಶೂಲ ಮತ್ತು ಚಕ್ರದ ಯುದ್ಧವಾದರೆ ಜಗತ್ತೇ ನಾಶವಾಗುತ್ತದೆಂಬುದನ್ನು ಕೇಳಿದ ಈಶ್ವರನು "ಸಿರವರನೆ ಕೇಳು ಸಂಗರ ಕೇಳಿಯೊಳಗೆ ನಾವಿರಲು ಮೂಜಗವೆಲ್ಲ ಉರಿದು ಪೋಪುದಲ್ಲೈ" ಎಂದು ಹೇಳಿ ಸೋತೆ ಎಂದು ಹಿಂದಿರುಗುತ್ತಾನೆ.

ಇದನ್ನು ತಿಳಿದು ಯಾದವರೆಲ್ಲ ಬಾಣಾಸುರನ ಊರನ್ನು ಮುತ್ತುತ್ತಾರೆ. ಇದನ್ನು ಚಾರರು ಬಾಣನಿಗೆ ತಿಳಿಸಲಾಗಿ ಮಂತ್ರಿ ಸಹಿತವಾಗಿ ಬಾಣನು ಎರಗಿದನು. ಯಾದವ ಸೈನ್ಯವನ್ನು ನುಚ್ಚುನೂರು ಮಾಡುತ್ತಾರೆ.

ಹರಿಯು ಮುಂದೆ ಬಂದು ಬಾಣ ಮಳೆಗರೆಯಲಾಗಿ ಆತ ಬಾಣವನ್ನು ಖಂಡಿಸಿ ಬಾಣನು ತಿಮಿರಶರವನ್ನು ಬಿಡಲಾಗಿ ಕತ್ತಲೆಯೆ ಮುತ್ತಿಕೊಳ್ಳುತ್ತದೆ. ಕೃಷ್ಣ ಸೂರ್ಯಾಸ್ತ್ರ ಬಿಟ್ಟು ಬೆಳಕು ಮಾಡುತ್ತಾನೆ. ಹೀಗೆ ಯುದ್ಧವಾಗುತಿರಲು, ಬಾಣ ತನ್ನ ಮಾಯಾಸ್ತ್ರವನ್ನು ಪ್ರಯೋಗಿಸುತ್ತಾನೆ. ಕೃಷ್ಣನಿಗೆ ಕಾಣದ ಹಾಗೆ ಆಕಾಶದಲ್ಲಿ ಬಾಣ ಯುದ್ಧ ಮಾಡತೊಡಗುತ್ತಾನೆ. ಆತನ ಮಂತ್ರಿ ಕುಂಭಾಂಡಕನೂ ಇದರಲ್ಲಿ ಸೇರಿಕೊಳ್ಳುತ್ತಾನೆ. ಇದರಿಂದ ಮಂತ್ರಿ ಉಳಿದವರನ್ನು ಸೋಲಿಸಿ ಬಲರಾಮನಿಗೆ ಎದುರಾಗುತ್ತಾನೆ. ಬಲರಾಮನು ಮಂತ್ರಿಯನ್ನು ಗದೆಯಿಂದ ಬಡಿಯಲು ಆತ ಪಲಾಯನಗೈಯ್ಯುತ್ತಾನೆ.

ಕೃಷ್ಣ ಗರುಡನನ್ನು ಕರೆದು ಆಕಾಶದಲ್ಲಿ ಹಾರಾಡುವ ಬಾಣ ಮೊದಲಾದವರನ್ನು ನೆಲಕ್ಕೆ ಇಳಿಸೆನ್ನಲು ಗರುಡ ಆಕಾಶವನ್ನು ಏರಿ ಅವರನ್ನು ಭಂಗಿಸಿ ನೆಲಕ್ಕೆ ಕೆಡಹುತ್ತಾನೆ. ಈಗ ಕೃಷ್ಣಚಕ್ರ ಹಿಡಿದು ಬಾಣನ ಸಹಸ್ರ ತೋಳುಗಳನ್ನು ಕತ್ತರಿಸುತ್ತಾನೆ. ಕೊರಳನ್ನು ಕತ್ತರಿಸಲು ಚಕ್ರವನ್ನೆತ್ತಲು ಈಶ್ವರ ಅದನ್ನು ತಡೆಯುತ್ತಾನೆ. ಕೃಷ್ಣ ಈಶ್ವರನ ಮಾತನ್ನು ಬೆಂಬಲಿಸಿ ನಿನ್ನ ಭಕ್ತರು ನನ್ನ ಭಕ್ತರೂ ಹೌದು ಎನ್ನುತ್ತಾನೆ. ಈಶ್ವರ ಪ್ರೀತಿಯಿಂದ ಬಾಣನನ್ನು ಸ್ಪರ್ಶಿಸಲು ಅವನ ನೋವು ಮಾಯವಾಗುತ್ತದೆ.

“ಇಂದಿರಾವರ ಕೇಳ್ಕೆ ನಾ ನಿಂದು ಬಾಣ ಸಹಿತ ಪೋಪೆನು ಚಂದದಿಂದವನೂರಸಲಹಿಕೊ ಮುಂದೆ ನೀ ಸಂತಸದಲಿ” ಎಂದು ಹೇಳಲು ಬಾಣನು ಅರಿಯದೇ ನಾ ನಿನ್ನ ಪಾದಕೆ ದುರುಳುತನ ಮಾಡಿದೆ” ಎಂದು ನಮಸ್ಕರಿಸಿ ಈಶ್ವರನ ಸಂಗಡ ಕೈಲಾಸಕ್ಕೆ ಹೋಗುತ್ತಾನೆ.

ಮಂತ್ರಿಯು ಕಾಣಿಕೆ ತಂದು ಕೊಡುತ್ತಾನೆ. ಅನಿರುದ್ಧ ಬಂದು ಕೃಷ್ಣನೆದುರು ಬಂದು ಉಷೆ ಸಹಿತ ನಮಸ್ಕರಿಸಲು “ಇಂದಿರಾಧವತೋಷದಿ ಈ ಪಾಟಿ ಚೆಲುವಿನ ಕನ್ಯೆಯು ಕಮನೀಯ ರೂಪ ನಿನಗೆ ಹೊರತು ಕಾಪುರುಷರ್ಗೆ ಕೈಸೇರುವಳೆ ಎಂದು ಶ್ರೀಪತಿ ನಗುತೆಂದನು”.

ಅನಿರುದ್ಧ ಉಷೆಯನ್ನೊಡಗೂಡಿ ದ್ವಾರಕೆಗೆ ಬಂದು ಮದುವೆ ನೆರವೇರಿಸಿ, ಸುಖದಿಂದುಳಿದರು.

**೬. ನರಕಾಸುರನ ವಧೆ**

ಅಷ್ಟದಿಕ್ಪಾಲಕರಿಂದಲೂ, ಗರುಡ, ಗಂಧರ್ವ, ಯಕ್ಷರೇ ಮೊದಲಾದವರಿಂದಲೂ, ರಂಭಾದಿಗಳ ಸಂಗೀತ ನರ್ತಗಳಿಂದಲೂ ಸಜ್ಜನರಿಂದಲೂ ಕೂಡಿ ವೈಭವದಿಂದ ದೇವೇಂದ್ರನು ಸ್ವರ್ಗವನ್ನಾಳುತಿರ ಲಾಗಿ ನರ, ಮುರಕರೆಂಬ ರಾಕ್ಷಸರು ಶಿವನ ವರವನ್ನು ಪಡೆದು ದೇವತೆಗಳನ್ನು ಪೀಡಿಸುತ್ತಾರೆ. ಧರೆಯಲ್ಲಿಯ ಅರಸರನ್ನು ಸೋಲಿಸಿ, ಮಂಗಳೆಯರನ್ನು ಸೆರೆಹಿಡಿದು ತೊಂದರೆ ಕೊಡುವ ನರಕ ಇಲ್ಲಿ ಬಾರದೆ ಇರನು ಎಂದು ದೇವೆಂದ್ರನು ಚಿಂತೆಯಿಂದ ಹರಿಹರರನ್ನು ಧ್ಯಾನಿಸುತ್ತ ಕಾಲ ಕಳೆಯುತ್ತಿದ್ದನು.

ತಂದೆ ತಾಯಿಗಳಿಂದಲ್ಲದೆ ಮರಣವಿಲ್ಲವೆಂದು ವರ ಪಡೆದ ಭೂಮಿಪುತ್ರ ನರಕ ಹದಿನಾರು ಸಾವಿರ ಹೆಂಗಳೆಯರನ್ನು ಕೂಡಿ ಹಾಕಿ, ಅವರನ್ನೆಲ್ಲ ಒಂದೇ ಹೊತ್ತಿಗೆ ಮದುವೆಯಾಗಲು ಮುಹೂರ್ತ ಸಿಕ್ಕದೇ ಚಡಪಡಿಸುತ್ತಿರುತ್ತಾನೆ. ಆ ಸಮಯದಲ್ಲಿ ನಾರದನ ಆಗಮನವಾಗುತ್ತದೆ. ಆತನೊಡನೆ ಸಮಸ್ಯೆಯನ್ನಿಡಲು ಆತ ನರಕನ ಪರಾಕ್ರಮವನ್ನು ಹೊಗಳಿ, ಆದರೆ, ಒಂದು ಕೊರತೆ ಇರುವುದಾಗಿ, ಅದೆಂದರೆ “ಸೃಷ್ಟಿಗಧಿಕನಿನ್ನಾಳ್ತನಕ್ಕೆ ಪಟ್ಟದ ರಾಣಿತ್ವಕಾಹ ಬಟ್ಟ ಕುಚೆಯರಿಲ್ಲ. ಪೇಳ್ವೆ ಗುಟ್ಟನೊಂದನು ಅಟ್ಟಿಸುರಪ ಮುಖ್ಯಾಮರರ ಥಟ್ಟನೇ ನೀ ಸಚಿಯ ತರಲು ಅಷ್ಟಭಾಗ್ಯ ಶೋಭಿಸುವುದು. ಕಷ್ಟವಲ್ಲದು” (ಮಹಾವೀರನಾದ ನಿನಗೆ ಪಟ್ಟದ ರಾಣಿಯರಿಲ್ಲ. ಆದ್ದರಿಂದ ದೇವೇಂದ್ರನ ಹೆಂಡತಿಯಾದ ಶಚಿ ಅದಕ್ಕೆ ಯೋಗ್ಯಳು ಅವಳನ್ನು ಪಡೆ) ಎನ್ನುತ್ತಾನೆ.

ಇದರಿಂದ ಪ್ರಚೋದಿತನಾದ ನರಕಾಸುರನು ಸ್ವರ್ಗದ ಮೇಲೆ ದಾಳಿ ಮಾಡಲು ಸಿದ್ಧತೆ ಮಾಡುತಿದ್ದಾನೆ. ಅವನ ತಂಗಿ ನವಿ ಎನ್ನುವವಳು ಬಂದು ಆ ಕೆಲಸವನ್ನು ಉಪಾಯದಿಂದ ತಾನು ಮಾಡುವುದಾಗಿ ಹೇಳಿ ಸ್ವರ್ಗಕ್ಕೆ ಹೋಗುತ್ತಾಳೆ.

ಒಬ್ಬಳೇ ಉದ್ಯಾನದಲ್ಲಿರುವ ಶಚಿಯನ್ನು ಹಾರಿಸಿಕೊಂಡು ಬರಲು ಕೈ ಹಾಕಿದಾಗ ಅವಳು ಕೂಗಿಕೊಳ್ಳುತ್ತಾಳೆ. ಈ ಕೂಗನ್ನು ಕೇಳಿದ ಅವಳ ಮಗ ಜಯಂತ ಬಂದು ಅವಳನ್ನು ತಡೆಯುತ್ತಾನೆ. ಆದರೆ ಶೌರ್ಯದಿಂದ ನೀನು ಹುಡುಗನಾದ್ದರಿಂದ ಕೊಲ್ಲಲಾರೆ, ಮರಳಿ ಹೋಗು ಎನ್ನುತ್ತಾಳೆ. ನೀನು ಹೆಣ್ಣಾದ್ದರಿಂದ ಕೊಲ್ಲುವುದಿಲ್ಲ ಎಂದು ಅವಳ ಎರಡು ಕೈಗಳನ್ನು ಕತ್ತರಿಸುತ್ತಾನೆ. ಅವಳು ಬೊಬ್ಬೆಯಿಡುತ್ತ ಬಂದು ನರಕಾಸುರನಿಗೆ ತನಗಾದ ಬವಣೆಯನ್ನು ಹೇಳುತ್ತಾಳೆ. ಇದರಿಂದ ಕ್ರುದ್ಧನಾದ ನರಕ ಸ್ವರ್ಗದ ಮೇಲೆ ದಂಡೆತ್ತಿ ಬರುತ್ತಾನೆ.

ಸ್ವರ್ಗದ ಸಮಸ್ತ ವಸ್ತುವನ್ನು ಗೆದ್ದು ನರಕ ತನ್ನ ಅರಮನೆಗೆ ಮರಳುತ್ತಾನೆ. ಇಂದ್ರ ತನ್ನ ಸ್ಥಿತಿಯನ್ನು ಕೃಷ್ಣನಿಗೆ ಹೇಳುತ್ತಾನೆ. ಕೃಷ್ಣ ನರಕಾಸುರನ ಮೇಲೆ ದಾಳಿ ಮಾಡುತ್ತಾನೆ.

ಮುರಕಾಸುರನು ಸತ್ತನೆಂದು ತಿಳಿದೊಡನೆ ನರಕನು ಮುಂದರಿದು ಬರುತ್ತಾನೆ. "ಎಲವೋ ಮನುಜ ಲಲನೆಯೊಡನೆ ಬಂದು ನಿಶೆಯಲಿ ಹಲವರನ್ನು ತರಿದು ಉಬ್ಬಿ ನಲಿಪೆ ಮುದದಲಿ ಕಳೆದುಕೊಳ್ಳಬೇಡ ಪ್ರಾಣ ಚೆಲುವೆಯಿವಳನೆಮಗೆ ನಲಿವಿನಿಂದಿತ್ತು ಪೋಗು" ಎನ್ನುತ್ತಾನೆ. ಭೀಕರವಾದ ಯುದ್ಧ ನಡೆಯುತ್ತದೆ. ಕೃಷ್ಣ ಬಳಲಿದಂತೆ ತೋರಿಸಿಕೊಳ್ಳುತ್ತಾನೆ. ಕೂಡಲೇ ಭಾಮೆ ಅಸ್ತ್ರವನ್ನು ತೆಗೆದುಕೊಂಡ ನರಕನ ಮೇಲೆ ಕೈ ಮಾಡುತ್ತಾಳೆ.

"ತರುಣಿ ನಾಚಿಕೆ ತೊರೆದು ಎನ್ನೊಳು ಧುರಕೆ ಇದಿರಾಗುವೆಯೊ ನಿನ್ನಯ ವರನ ಭಂಗವನರಿತು ಚರಣಕೆರಗಿ" ಇತ್ಯಾದಿ ಹೇಳಿದರೆ "ಘೋರ ಪಾತಕ ಪುರುಷರನು ಸಂಹಾರ ಗೈವುದು ಸತಿಯರಿಗೆ ನಾ ಸಾರಿ ಪೇಳುವ ನೀತಿ" ಎಂದು ಯುದ್ಧಕ್ಕೆ ತೊಡಗುತ್ತಾಳೆ. ಕೃಷ್ಣ ಮತ್ತೆ ಯುದ್ಧಕ್ಕೆ ನಿಲ್ಲುತ್ತಾನೆ. ನರಕಾಸುರ ಸೊಕ್ಕು ನಿಲ್ಲಿಸುತ್ತೇನೆಂದು ಶರಬಿಡಲಾಗಿ ಕೃಷ್ಣ ಅದನ್ನು ತುಂಡಿಸಿ ಚಕ್ರ ಬಿಡಲು ಅದು ಉದರವನ್ನು ಪ್ರವೇಶಿಸುತ್ತದೆ. ತಂದೆ ತಾಯಿಂದಲ್ಲದೆ ಮರಣವಿಲ್ಲ ಎಂದು ಈಶ್ವರನ ವರ ನೆನಪಿಗೆ ಬಂದು ಸತ್ಯಭಾಮೆ ಭೂಮಿಯ ಅಂಶ ಮತ್ತು ಕೃಷ್ಣ ಆದಿಪುರುಷ' "ಘನಮಹಿಮರೀರುವರು ಜನನಿ ಜನಕರು ಎನ್ನ ಜನುಮ ಸಾರ್ಥಕವಾಯಿತಿನ್ನು" ಎಂದು ಕೈ ಮುಗಿಯುತ್ತಾನೆ. ಕೃಷ್ಣ ಮತ್ತು ಭಾಮೆಯರಿಬ್ಬರೂ ಸಂತೈಸುತ್ತಾರೆ. ನರಕ ತನ್ನ ಹೆಸರು ಸ್ಥಿರಸ್ಥಾಯಿಯಾಗಿ ಭೂಮಿಯಲ್ಲಿರಬೇಕೆಂದು "ಅಶ್ವೀಜದ ಸಿತಪಕ್ಷಾ ಇನಿತು ತ್ರಯೋದಶಿ ಕಳೆದ ಚತುರ್ದಶಿಯನು ತನ್ನ ಹೆಸರಿಂದ ಕರೆದು ಹಿರಿಯರು, ಯತಿಗಳು ಸಹ ಹಿಮಕರನುದಯದಿ ತೈಲಾಭ್ಯಂಗ ವರಸ್ನಾನ ವಿರಚಿಸಿ ಭಕ್ಷಭೋಜ್ಯವನುಂಡು ಮೆರೆವುದು ಜಗತಿಯೊಳೆಲ್ಲ" ಎಂದು ವರ ಕರುಣಿಸುವಂತೆ ಕೇಳಿಕೊಳ್ಳುತ್ತಾನೆ. ಅನಂತರ ಆತನ ಆತ್ಮಜ್ಯೋತಿ ಶ್ರೀವರನನ್ನು ಸೇರುತ್ತದೆ. ದೇವತೆಗಳಿಗೆ ಅವರ ಎಲ್ಲ ಸುವಸ್ತುಗಳನ್ನು ಕೊಡುತ್ತಾನೆ. ಸೆರೆಯಲ್ಲಿದ್ದ ಹೆಂಗಸರನ್ನು ದ್ವಾರಕೆಗೆ ಕಳಿಸುತ್ತಾನೆ. ಭಗದತ್ತನಿಗೆ (ನರಕನ ಮಗ) ರಾಜ್ಯವನ್ನೀಯುತ್ತಾನೆ. ಸ್ವರ್ಗದ ಅದಿತಿಗೆ ಅವಳ ಕರ್ಣಕುಂಡಲವನ್ನು ಕೊಡುತ್ತಾನೆ. ಹೀಗೆ ಇಂದ್ರನಿಂದ ಸತ್ಕಾರವನ್ನು ಪಡೆದು ಭಾಮೆ ಸಹಿತ ಹಿಂದಿರುತ್ತಾನೆ.

ಹಾಗೆ ಬರುವಾಗ ಉದ್ಯಾನವನ್ನು ಸಂಚರಿಸುವಾಗ ಭಾಮೆ "ಮುಂದೆ ಕಂಡಳು ಮಹಾಪಾರಿಜಾತ ತರುವನು". ವೃಕ್ಷದ ತಳ್ಳಿಬೇಡವೆಂದರೂ ಭಾಮೆ ಒಂದು ಟೊಂಗೆಯನ್ನು ಮುರಿದುಕೊಂಡು ಭೂಲೋಕಕ್ಕೆ ಒಯ್ಯುವೆವೆನ್ನುತ್ತಾಳೆ. ಇದನ್ನು ಕಂಡ ಚರರು ಅವರನ್ನು ತಡೆಯುತ್ತಾರೆ. ಮತಿಹೀನ, ಚೋರ ಮುಂತಾಗಿ ಹೇಳಲು ಅವರ ಕೈ ಕಟ್ಟಿ ಸಂಗತಿಯನ್ನು ಇಂದ್ರನಿಗೆ ತಿಳಿಸಿ ಎಂದು ಬಿಡುತ್ತಾನೆ.

ಚರರು ಇಂದ್ರನ ಬಳಿ ಬಂದು ನಡೆದ ಸಂಗತಿಯನ್ನು ತಿಳಿಸುತ್ತಾರೆ. ತನಗೆ ನರಕನಿಂದ ಆದ ಪರಿಭವನನ್ನು ಬಗೆಹರಿಸಿ, ಸುವಸ್ತುಗಳನ್ನು ತಂದುಕೊಟ್ಟವನೇ ಹೀಗೆ ಅಪಹರಿಸಿದರೆ ಏನು ಮಾಡುವುದು ಎಂದು ಚಿಂತಿಸಿ ಈಶ್ವರನನ್ನು ಕೇಳುತ್ತಾನೆ. ಸ್ವರ್ಗದಲ್ಲೇ ಇರಬೇಕಾದ ವಸ್ತುವನ್ನು ಭೂಮಿಗೆ ಒಯ್ದನಾದರೆ ಬೇಲಿ ಬೆಳೆ ತಿಂದು ಕೆಡಿಸಿತು ಎಂದಂತಾಗುತ್ತದೆ ಎನ್ನುತ್ತಾನೆ. ಗಿರಿಜೆ ಕೂಡ ಭಾಮೆಗೆ ಮನವರಿಕೆ ಮಾಡಿ ಪಾರಿಜಾತವನ್ನು ಒಯ್ಯದಂತೆ ಮಾಡುವೆನೆಂದು ಶಿವನ ಸಂಗಡ ಹೊರಡುತ್ತಾಳೆ.

ಸ್ವರ್ಗದಲ್ಲಿ ತ್ರಿಮೂರ್ತಿಗಳಿಂದ ದತ್ತವಾದ ಪಾರಿಜಾತವನ್ನು ಭೂಮಿಗೆ ಒಯ್ಯುವೆನೆಂದು ತಿಳಿದು ತಾನು ಬಂದೆ ಎಂದು ಶಿವನು ಹೇಳುತ್ತಾನೆ. ಒಂದು ಕೊಂಬೆಯನ್ನು ಮುರಿದಡೇನು ಎಂದು ಕೃಷ್ಣ ಹೇಳಿದರೆ ಗಿರಿಜೆ ಒಡಂಬಡುತ್ತಿಲ್ಲ ಇದರಿಂದ ಮೇದಿನಿಯೊಳು ಅಪವಾದ ಬರುವುದು ಎನ್ನುತ್ತಾನೆ. ಅವರ ಮಧ್ಯೆ ವಾದ ವಿವಾದ ಬಡಿದಾಟ ಶುರುವಾಗುತ್ತದೆ. ಆಗ ಅಲ್ಲಿಗೆ ಬ್ರಹ್ಮನೇ ಬರುತ್ತಾನೆ. ಆತ ಶ್ರೀರಮಣ ಭೂಮಿಯಲ್ಲಿರುವ ತನಕ ಮಾತ್ರ ಇದು ಅಲ್ಲಿರಲಿ - ಎಂದು ರಾಜಿ ಮಾಡಿಸುತ್ತಾನೆ. ಹೀಗೆ ಪಾರಿಜಾತದ ಒಂದು ಟೊಂಗೆಯನ್ನು ಭಾಮೆಗೆ ಕೊಡುತ್ತಾರೆ. ಅದನ್ನು ತಂದು ತನ್ನ ಅಂಗಳದಲ್ಲಿ ನೆಟ್ಟು ಬೆಳೆಸುತ್ತಾಳೆ. ಆ ಪಾರಿಜಾತದ ಮರ ಬೆಳೆದು

ಹೂವುಗಳೆಲ್ಲ ರುಕ್ಮಿಣಿಯ ಅಂಗಳದಲ್ಲಿ ಉದುರಿ ಪರಿಮಳಿಸುವುದನ್ನು ತಿಳಿಯದೆ ಸತ್ಯಭಾಮೆ ತನ್ನ ಸಾಹಸವನ್ನು ವರ್ಣಿಸಿಕೊಳ್ಳುತ್ತಾಳೆ.

**೧೦. ಶ್ರೀಕೃಷ್ಣದಿನಾಶ್ವಮೇಧ**

ಒಂದಾನೊಂದುದಿನ ಶ್ರೀಕೃಷ್ಣ ಮಡದಿ ರುಕ್ಮಿಣಿ ಸಹಿತ ಒಡ್ಡೋಲಗಕ್ಕೆ ಬಂದು ಝಗಝಗಿಸುವ ರತ್ನಗಳ ಮಧ್ಯೆ ಶೋಭಿಸುವ ಪೀಠದಲ್ಲಿ ಕುಳಿತು ತನ್ನ ಮಡದಿಯರಿಗೆ ನಾಳೆ ಸೂರ್ಯಗ್ರಹಣದ ದಿನವಾಗಿದ್ದು, ತಾನು ಶಾಮಂತಪಂಚಕಕೆ ತೀರ್ಥ ಸ್ನಾನಕ್ಕಾಗಿ ಹೋಗುವುದಾಗಿ ಹೇಳಲು ರುಕ್ಮಿಣಿ- ಸತ್ಯಭಾಮೆಯರು ತಾವೂ ಬರುವುದಾಗಿ ಹೇಳುತ್ತಾರೆ. ಅದನ್ನೊಪ್ಪಿದ ಕೃಷ್ಣ ತನ್ನಣ್ಣ ಬಲರಾಮನನ್ನು ಚಾರರ ಮುಖಾಂತರ ಹೇಳಿ ಕರೆಸಿಕೊಳ್ಳುತ್ತಾನೆ.

ತನ್ನನ್ನು ಕರೆದ ಕಾರಣವೇನು ವೈರಿಗಳಿಂದೇನಾದರೂ ತೊಂದರೆ ಬಂತೇ ಎಂದು ಬಲರಾಮ ಕೇಳಲು ಕೃಷ್ಣ ನಿನ್ನಂತಹ ಮಹಾವೀರನಿರುವಾಗ ಯಾವ ಕಷ್ಟವೂ ಬರಲಾರದು ಎಂದು ವಿನಯದಿಂದ ಉತ್ತರಿಸಿ ಶಾಮಂತಪಂಚಕದ ವ್ರತಾಚರಣೆಗಾಗಿ ಗಂಗಾನದಿ ಸ್ನಾನಕ್ಕಾಗಿ ಹೋಗಬೇಕಾಗಿ ತಿಳಿಸುತ್ತಾನೆ. ಆ ಪ್ರಕಾರ ಅವರು ಗಂಗಾತಟಕ್ಕೆ ತಲುಪುತ್ತಾರೆ.

ಇತ್ತ ಇಂದ್ರಪ್ರಸ್ಥರಲ್ಲಿ ತಮ್ಮಂದಿರನ್ನು ಮಡದಿ ದ್ರೌಪದಿಯನ್ನೊಡಗೂಡಿ ಧರ್ಮರಾಯ ವೈಭವದಿಂದ ಸಭೆನಡೆಸುತ್ತ ರಾಜ್ಯದ ಆಗುಹೋಗುಗಳನ್ನು ತಮ್ಮಂದಿರಲ್ಲಿ ವಿಚಾರಿಸಿ ಎಲ್ಲವೂ ಸರಿಯಾಗಿದ್ದು, ಸುಖ ಸೌಖ್ಯ ಇರುವುದನ್ನು ತಿಳಿದು ಸಂತಸದಿಂದಿರುವಾಗ ಅಲ್ಲಿಗೆ ವ್ಯಾಸಮುನಿ ಬರುತ್ತಾನೆ. ಧರ್ಮರಾಯನ ಹಾಗೆಯೇ ದ್ರೌಪದಿಯ ಗುಣಗಾನ ಮಾಡಿ ಪಾಂಡವರು ರಾಯಸೂಯಾಯಾಗವನ್ನು ಮಾಡಿ ಕೀರ್ತಿ ಹೊಂದಬೇಕಾಗಿ ಉಪದೇಶಿಸುತ್ತಾನೆ. ಹಾಗೆಯೇ ಶಾಮಂತಕನಾಮಕ ಕ್ಷೇತ್ರಕ್ಕೆ ಕೃಷ್ಣ ಬಂದಿರುವ ಸಂಗತಿಯನ್ನು ತಿಳಿಸಿ, ಅವರಿಗೂ ಅಲ್ಲಿಗೆ ಹೋಗಲು ಸೂಚಿಸುತ್ತಾನೆ. ವ್ಯಾಸನೊಡಗೂಡಿ ಅವರು ಪಯಣಿಸುತ್ತಾರೆ.

ಅವರ ಬರವನ್ನು ಕಂಡು ಕೃಷ್ಣ ಸಂತೋಷದಿಂದ ಸ್ವಾಗತಿಸಿದರೆ ಬಲರಾಮ ಸುಭದ್ರೆಯನ್ನು ಅರ್ಜುನ ಕದ್ದೊಯ್ದದ್ದನ್ನು ನೆನೆಸಿಕೊಂಡು ಮುನಿಸುಗೊಳ್ಳುತ್ತಾನೆ. ಕೃಷ್ಣ ಅವನನ್ನು ಸಾಂತ್ವನ ಗೊಳಿಸುತ್ತಾನೆ.

ಸತ್ಯಭಾಮೆ ದ್ರೌಪದಿಯ ಕ್ಷೇಮ ಸಮಾಚಾರ ಕೇಳಿ, "ಕಪಟ ಮುನಿಯ ವೇಷದಿಂದ ಜಪಿಸುತಿರ್ಪ ನರನ ಮೋಹಿಸಿ ಗುಪಿತದಿಂದ ರಮಿಸಿಹೋದ ಚಪಲೆಗೆ ಸುಖವೆ?" ಎಂದು ಸುಭದ್ರೆಯನ್ನು ಚೇಡಿಸಿದರೆ ಅದಕ್ಕೆ ತಕ್ಕಾಗಿ ಸುಭದ್ರೆ ಕೂಡ ರುಕ್ಮಿಣಿಯ ಮದುವೆಯ ವಂಚನೆಯನ್ನು ಹೇಳುತ್ತಾಳೆ. ಇಂತಹದೇ ಧಾಟಿಯಲ್ಲಿ ದ್ರೌಪದಿ ಭಾಮೆಯರ ಸಂವಾದವೂ ನಡೆಯುತ್ತದೆ.

ಕೃಷ್ಣ ಬಲರಾಮರು ಪಾಂಡವರನ್ನು ಕೂಡಿಕೊಂಡು ಗಂಗಾಸ್ನಾನ ಮಾಡಿ ಬೇಕುಬೇಕಾದ ದಾನ ದಕ್ಷಿಣೆಯನ್ನು ಕೊಡುತ್ತಾರೆ. ಹಾಗೆಯೇ ಪಾಂಡವರ ಸಹಿತ ಕೃಷ್ಣ ದ್ವಾರಕೆಗೆ ಹಿಂದಿರುಗುತ್ತಾನೆ. ಅಲ್ಲಿ ಅವರೊಡನಿದ್ದ ವ್ಯಾಸಮುನಿ "ವಾಜಿಮೇಧವ ಚಂದದಲಿ ವಿರಜಿಸುತ ಬಂದಿಹ" ನರರಿಗೆ ಸುಖವಾಗುತ್ತದೆಂದೆನ್ನಲು ಕೃಷ್ಣ ಯಾಗನಿಶ್ಚಯ ಮಾಡುತ್ತಾನೆ. ಯಜ್ಞ ಭವನ ಸಿದ್ಧವಾಗುತ್ತದೆ. ಯಜ್ಞಾಶ್ವವನ್ನು ಶೃಂಗರಿಸಿ ಅದರ ಹಣೆಪಟ್ಟಿಯಲ್ಲಿ "ಬಂದ ವೀರರು ಕಟ್ಟಿ ವಾಜಿಯ ಧುರದಲ್ಲಿ ಕಾದುವದುಚಿತಾ ಸಲ್ಲದ ರಾಜರು ಕಪ್ಪಕಾಣಿಕೆ ಕೊಡುತೆಲ್ಲರು ನಮಿಸುವುದು" ಎಂದು ಬರೆದು, ಬಿಡುತ್ತಾರೆ. ಅದರ ಬೆಂಗಾವಲಿಗೆ ದೊಡ್ಡ ಸೈನ್ಯವನ್ನು ತೆಗೆದುಕೊಂಡು ಅರ್ಜುನನ ಅಧಿಪತ್ಯದಲ್ಲಿ ಭೀಮ, ಸಾತ್ಯಕಿ, ಪ್ರದ್ಯುಮ್ನ ಮೊದಲಾದವರು ಹೊರಡುತ್ತಾರೆ. ಆ ಹಯವು ಸಂಚರಿಸುತ್ತ ವೇಗವಾಗಿ ಮಗಧದೇಶಕ್ಕೆ ಬಲುಪುತ್ತದೆ.

ಮಗದಕ್ಕೆ ಮಗಧ (ಜರಾಸಂಧ) ದೊರೆಯಾಗಿದ್ದು, ಸಭೆಗೆ ಬಂದಾಗ ದುಶ್ಯಕುನವಾಗಲು ತನ್ನ ಇಷ್ಟದೈವವಾದ ಶಿವನನ್ನು ಪೂಜಿಸುತ್ತಿರಲು ಯಜ್ಞ ಕುದುರೆಯ ತಿರುಗಾಟದ ಸದ್ದಿನಿಂದ ವಿಚಲಿತನಾದ ಮಗಧ ಕ್ರುದ್ಧನಾಗಿ ಕುದುರೆಯನ್ನು ನೋಡಿ ಅದರ

ಹಣೆಯ ಫಲಕವನ್ನು ಓದಿ ತನ್ನ ಮಂತ್ರಿಯನ್ನು ಕರೆಸಿ ವಿಚಾರ ತಿಳಿಸಲು ಆತ ತಾನೇ ಯುದ್ಧಮಾಡುವುದಾಗಿ ಹೇಳಿದ ಮಾತಿನಿಂದ ಸಂತೋಷ ಹೊಂದಿ ಅವನನ್ನು ಕಳಿಸುತ್ತಾನೆ.

ಅರ್ಜುನನಿಂದ ಅಪ್ಪಣೆ ಪಡೆದ ಸಾತ್ಯಕಿ ಮಂತ್ರಿ ಎದುರಾಗಲು "ಪುಂಡಯಾದವ" ಎಂದು ಮೇಲೆ ಬೀಳುತ್ತಿರುವ ಮಂತ್ರಿಯನ್ನು ಸಂಹರಿಸುತ್ತಾನೆ. ಇದ ಕಂಡ ಮಾಗದ ಭಯಂಕರ ಸಿಟ್ಟಿನಿಂದ ಸಿಡಿಯುತ್ತಾನೆ. ಸಾತ್ಯಕಿ ಅವನನ್ನು ತಡೆದು ಕುದುರೆಯನ್ನು ಕಪ್ಪಸಹಿತ ಬಿಟ್ಟುಕೊಡದಿದ್ದರೆ ಆತನನ್ನು ಯುದ್ಧದಲ್ಲಿ ಕೊಲ್ಲುವುದಾಗಿ ಹೇಳುತ್ತಾನೆ. ಆದರೆ ಮಾಗಧ ಹುಚ್ಚು ಯಾದವ ತನ್ನ ಮುಂದೆ ನೀವೆಲ್ಲ ಕ್ರಿಮಿಗಳ ಸಮಾನ ಎಂದು ಯುದ್ಧಕ್ಕೆ ತೊಡಗುತ್ತಾನೆ. ಅವರಲ್ಲಿ ಸಮಾನ ಯುದ್ಧವು ನಡೆಯುತ್ತಿರುವುದನ್ನು ತಿಳಿದ ಭೀಮ ತಾನೇ ಯುದ್ಧಕ್ಕೆ ಬರುತ್ತಾನೆ.

ಗದೆಯನ್ನು ತಿರುವುತ್ತ ಬಂದಭೀಮನು "ಇಂದಿರೇಶನಧ್ವರಾಶ್ವವನ್ನು ಬಿಡದಿರೆ ಬಂಧಿಸೀಗಲೊಯ್ವೆ" ಹೇಳಿದರೆ "ಹರನ ಭಕ್ತನಿಹೆನು ತಾನು ದುರುಳ ನೋಡೆಲ" ಎಂದ ಮಾಗಧನ ಮಾತಿಗೆ "ಹರನ ಭಜಕ ನೀನು ನಮಗೆ ಗಣ್ಯವೇನಲಾ" ಎಂದು ಉತ್ತರಿಸುತ್ತಾನೆ. ನನ್ನ ಭಯದಿಂದ ಹರಿಯೇ ನೀರಮಧ್ಯೆ ನೆಲೆ ಅರಸಿದವನು, ಅವನ ಭಕ್ತನು ತನಗೆ ಗಣ್ಯನೇ ಎಂದು ಮಾಗಧ ಸವಾಲು ಹಾಕುತ್ತಾನೆ. ಲಕ್ಷಭಾರವಾದ ಗದೆಯನ್ನು ತಿರುಗತೊಡಗಲು ಭೀಮ ಸಮಬಲನಾಗಿ ಆತನನ್ನು ತಡೆದನು. ಹೀಗೆ ಬ್ರಹ್ಮಾಂಡವೇ ನಡುಗುವಂತಹ ಘೋರ ಯುದ್ಧದಲ್ಲಿ ಭೀಮ ಗದೆ ಚೂರು ಚೂರಾಗಲು ಹೆದರದೆ ಮೇಲೆ ಬಿದ್ದು ಮಾಗಧನನ್ನು ಗುದ್ದಿದಾಗ ಮೂರ್ಛೆ ಹೋಗುತ್ತಾನೆ.

ಮೂರ್ಛೆಯಿಂದ ಎಚ್ಚತ್ತ ಮಾಗಧ ಯುದ್ಧಮಾಡಲು ಬಲವೇ ಬರುತ್ತಿಲ್ಲವಾದುದರಿಂದ ಕಪ್ಪ ಕೊಡುವುದೇ ಗತಿಯೆಂದು ಮನದಲ್ಲೇ ಕಳವಳಿಸಿ ಭೀಮನಿಗೆ "ಪಂಥವೇತಕೆ ರಣಧಿ ಸೋತಿಹೆ ನಂತಕನ ತೆರ ಕೊಲದಿರೆನ್ನನು ಕುಂತಿಸುತ ತಾನೀವೆ ಕರ ಹಯವೆಂದು" ಹೇಳುತ್ತಾನೆ. ಇಲ್ಲಿಗೆ ಮೊದಲ ಸಂಧಿ ಮುಕ್ತಾಯವಾಗುತ್ತದೆ.

ಮಗಧ ದೇಶದಿಂದ ಹೊರಟ ಅಶ್ವ ಅನೇಕ ದೇಶಗಳನ್ನು ಸಂಚರಿಸಿ ಅಂಗದೇಶವನ್ನು ಪ್ರವೇಶಿಸಿತು. ಅಲ್ಲಿಯ ಅರಸನ ಪರಿಚಯವನ್ನು ಅರ್ಜುನ ಕೇಳಿದಾಗ ಭೀಮ ಬಿಲ್ವಿದ್ಯೆಯ ಪರೀಕ್ಷೆಯಲ್ಲಿ ಅರ್ಜುನನೊಡನೆ ಬಹಳ ಶೌರ್ಯದಿಂದ ಮೆರೆದು ಕೌರವನೂ ಬೆಚ್ಚಿಬೆರಗಾಗುವಂತೆ ಪರಶುರಾಮನಲ್ಲಿ ತಾನು ಕಲಿತ ವಿದ್ಯೆಯನ್ನು ತೋರಿದ, ಯಾವನನ್ನು ಕೌರವನು ಒಲಿದು ಕರೆತಂದು ಅರ್ಜುನನಿಗೆ ಸಮನಾದ ವೀರನೀತನೆಂದು ಅಂಗದರಾಜ್ಯವನ್ನು ಕೊಟ್ಟನೋ ಆ ರಾಧೇಯ ಕ್ರೋಧದಿಂದ ಹಯವನ್ನು ಕಟ್ಟಿದ್ದಾನೆ. ಆತ ಕಾಯದೆ ಇರಲಾರ ಎಂದು ಹೇಳುತ್ತಾನೆ.

ಬಂದತ್ತ ಕುದುರೆಯನ್ನು ಕಾವಲುಗಾರರು ತಕ್ಷಣದಲ್ಲಿ ಹಿಡಿದು, ಅದರ ಹಣೆಯಲ್ಲಿರುವ ಬರಹವನ್ನು ಕಂಡು ಇದು ಯಜ್ಞ ಕುದುರೆಯಾದ್ದರಿಂದ ಅರಸನಿಗೆ ಒಪ್ಪಿಸುವುದಾಗಿ ಒಯ್ಯುತ್ತಾರೆ. ಹಾಗೆ ಬಂದ ಚಾರಕರು ಸಭೆಯಲ್ಲಿ ಕುಳಿತಿರುವ ಕರ್ಣನಿಗೆ ಐದು ಬಣ್ಣಗಳಿಂದ ಕೂಡಿದ ಮತ್ತು ಹಣೆಯಲ್ಲಿ ಚಿನ್ನದ ಓಲೆ ಇರುವ ಈ ಕುದುರೆ ಸಂಚರಿಸುತ್ತ ನಮ್ಮ ಪಟ್ಟಣಕ್ಕೆ ಬಂತು. ಅದರ ಹಿಂದೆ ಭಾರಿ ದೊಡ್ಡ ಸೈನ್ಯ ಇರುವುದನ್ನು ಕಂಡು ಭಯಭೀತರಾಗಿ ಬಂದೆವು ಎನ್ನುತ್ತಾರೆ.

ಇದನ್ನು ಕೇಳಿದ ಕರ್ಣ ಅತ್ಯಂತ ಸಿಟ್ಟಿನಿಂದ ತನ್ನಂಥ ಶೂರನಾದ ರಾಜ ಇರುವಾಗ ಯಾರಿಗೆ ಯಜ್ಞಾಶ್ವವನ್ನು ಬಿಡುವ ಧೈರ್ಯ ಬಂತು? ಸಿಂಹವು ನರಿಯನ್ನು ಛಿದ್ರಮಾಡಿ ಒಗೆವಂತೆ ಮಾಡುತ್ತೇನೆಂದು ಕುದುರೆಯ ಹಣೆಯ ಪಟ್ಟಿಯನ್ನು ತೆಗೆದು ಓದುತ್ತಾನೆ. ಅದರಲ್ಲಿ ಬರೆದಿರುವ ಚಂದ್ರವಂಶದವನೂ ವೈರಿಗಳಿಗೆ ಭಯಾನಕನೂ ಆದ ವಸುದೇವನ ಮಗ ಕೃಷ್ಣ ಮಹಾವೀರನು ದ್ವಾರಕಾಪುರದಲ್ಲಿ ಒಂದು ದಿನ 'ವಾಜಿಮೇಧ' (ಕುದುರೆಯಜ್ಞ)ದ ದೀಕ್ಷೆಗೊಂಡು ಕುದುರೆಯನ್ನು ಬಿಟ್ಟಿದ್ದಾನೆ. ವೀರರಾದವರು ಬಂಧಿಸಿ ಭೀಮ, ಅರ್ಜುನ, ಪ್ರದ್ಯುಮ್ನನೊಡನೆ ಹೋರಾಡಬೇಕೆಂದೂ, ಹೇಡಿಗಳಾದರೆ ಕರ ಕಾಣಿಕೆ ಕೊಟ್ಟು ಶರಣಾಗಬೇಕೆಂಬ ಸಂದೇಶವನ್ನು ತಿಳಿದು ಕರ್ಣನು ಕಲ್ಪದದುರ್ಜಟಿಗೆ ಮಿಗಿಲಿನಿಸುವಂತೆ ಗರ್ಜಿಸಿ ಪರಾಕ್ರಮವನ್ನು ಯುದ್ಧದಲ್ಲಿ ತೋರುತ್ತೇನೆ ಎನ್ನುತ್ತಾನೆ.

ಆ ಕಡೆ ಅರ್ಜುನನ ಅಪ್ಪಣೆ ಪಡೆದು ಸಾತ್ಯಕಿ ಯುದ್ಧಕ್ಕೆ ಬರುತ್ತಾನೆ. ಇದ ತಿಳಿದ ವಿಕರ್ಣ ಧುರಕ್ಕೆ ತನ್ನನು ಕಳುಹಿಸಬೇಕೆಂದೂ, ಇಂಥ ಸಣ್ಣ ಕೆಲಸಕ್ಕೆ ಕರ್ಣನೇ ಹೋಗುವುದು ಉಚಿತ ಅಲ್ಲವೆಂದೆನ್ನಲು ಕರ್ಣ ತನ್ನ ಸೋದರನಿಗೆ ಅಪ್ಪಣೆ ಕೊಟ್ಟು ಕಳಿಸುತ್ತಾನೆ. ವಿಕರ್ಣ ಮತ್ತು ಸಾತ್ಯಕಿಯರು ಒಬ್ಬನ್ನೊಬ್ಬರು ಜರೆದುಕೊಳ್ಳುತ್ತ ಯುದ್ಧಮಾಡುತ್ತಿರುವಾಗ ವಿಕರ್ಣ ಮೂರ್ಛಿತನಾಗುತ್ತಾನೆ. ಇದನ್ನು ತಿಳಿದ ಕರ್ಣ "ತೋರುತೋರೆಲೊ ಸಾಹಸ ನಮ್ಮನುಜನ ಗಾರುಗೆಡಿಸಿದ ತೋಷಾ" ಎನ್ನುತ್ತ ಯುದ್ಧಕ್ಕೆ ಬರುತ್ತಾನೆ. ತಾನು ಮೂರ್ಖನಲ್ಲವೆಂದೂ ಕೌರವರಲ್ಲಿ ಸದಾ ಇದ್ದು ಉಪದೇಶ ಕೇಳಿ ಕೇಳಿ ಪಾರ್ಥನ ವಿರುದ್ಧ ವೈರಮಸೆಯುವ ನೀನು ಖಳನೆಂದು ಹೇಳುತ್ತಾನೆ. ಖಳನೆಂದು ಹೇಳಬೇಡ ಗರುಡನೆದುರು ಸರ್ಪ ಸಿಕ್ಕಿದಂತೆ ಸಿಕ್ಕಿದ್ದಿಯಾ ಎಂದು ಕರ್ಣ ಬಾಣ ಬಿಡುತ್ತಾನೆ. ಅದರಿಂದ ಸಾತ್ಯಕಿ ಸೋತು ಹಿಂದಿರುತ್ತಾನೆ.

ಇದನ್ನು ಕಂಡ ಪ್ರದ್ಯುಮ್ನನು ಕರ್ಣನ ಎದುರು ಬಂದು "ಅರರೆ ಸೂತಸುತನೆ ಸಾಕು ಧುರದಿ ಸಾತ್ಯಕಿಯ ಗೆಲಿದ ಹರುಷ ಬೇಡ ವಿಶಿಖ ಪರಿಕಿಸೆನ್ನ ಸಮರವಾ" ಎಂದು ಆಹ್ವಾನಿಸುತ್ತಾನೆ. "ಸೂತನಾದರೇನು" ತಾನು ಪರಶುರಾಮನ ಶಿಷ್ಯ ಗೊಲ್ಲನಲ್ಲ ಎಂದು ತಿರುಗೇಟುಕೊಡುತ್ತಾನೆ. ಹೀಗೆ ಅವರಲ್ಲಿ ಅನೇಕ ಮಾತುಗಳು ನಡೆದು ಯುದ್ಧವು ನಡೆಯುತ್ತದೆ. ಇಬ್ಬರೂ ಪಂಥ ಹಿಡಿದು ಸಮತಳದಲ್ಲಿ ಯುದ್ಧ ನಡೆಸುತ್ತಿರುವಾಗ ಈತನನ್ನು ಗೆಲ್ಲಲು ನಿಜ ಯುದ್ಧದಲ್ಲಿ ಸಾಧ್ಯವಾಗದೆಂದು ಬಗೆದ ಪ್ರದ್ಯುಮ್ನ "ಭ್ರಾಮಕಶಿರ"ವನ್ನು ಪ್ರಯೋಗಿಸಲು ಕರ್ಣನ ಮನಕರಗಿ ಕ್ಷಣಕಾಲ ಸಾವರಿಸಿಕೊಂಡು ಮತ್ತೆ ಬೋರ್ಗರೆದು ಯುದ್ಧ ಶುರುಮಾಡುತ್ತಾನೆ. ಈಗ ಸ್ವತಃ ಅರ್ಜುನನೇ ಎದುರಾಗುತ್ತಾನೆ. ಕುದುರೆ ಕಳ್ಳ ಎಂದು ಕರ್ಣನನ್ನು ಅರ್ಜುನ ಜರೆದರೆ, ಆತ ಸುಭದ್ರೆಯಕದ್ದವನೆಂದು ಕರ್ಣ ಹೇಳುತ್ತಾನೆ. ಭಾನುಮತಿಯ ಮದುವೆಯಲ್ಲಿ ಕೌರವನ ಸಹಿತ ನೀನು ಎಳೆಯುವಾಗ ಪೆಟ್ಟುತಿಂದೆ ಎಂದರೆ ಕುರುಭೂಪ ನಿಮ್ಮನ್ನು ಜತುಗೃಹದಲ್ಲಿಟ್ಟು ಬೆಂಕಿಹಾಕಲು ತಲೆತಪ್ಪಿಸಿಕೊಂಡಿರೆಂದು ಕರ್ಣ ಹೇಳುತ್ತಾನೆ. ಹೀಗೆ ಸಮಜೋಡಿಯಲ್ಲಿ ಯುದ್ಧಮಾಡುತ್ತಿರುವಾಗ ಅರ್ಜುನನ ಬಾಣಕ್ಕೆ ಕರ್ಣ ಎಚ್ಚರತಪ್ಪುತ್ತಾನೆ. ಇದನ್ನು ಕಂಡು ಸೈನ್ಯ ಬೆರಗಾಗುತ್ತದೆ. ಕೂಡಲೇ ಎಚ್ಚತ್ತ ಕರ್ಣ ಯುದ್ಧಕ್ಕೆ ನಿಲ್ಲಲು ಅರ್ಜುನನು ಆತನನ್ನು ಸೂರ್ಯಾಸ್ತ್ರದಿಂದ ಖಂಡಿಸುತ್ತಾನೆ. ಇದರಿಂದ ಕರ್ಣ ರಥದಲ್ಲಿ ಬೀಳುತ್ತಾನೆ. ಆದರೆ ಸೂರ್ಯಾಸ್ತ್ರ ಕರ್ಣನ ತಂದೆಯ ಅಸ್ತ್ರವಾದ್ದರಿಂದ ಅದು ಕರ್ಣನನ್ನು ಸುಡುವುದಿಲ್ಲ. ಹೀಗಾಗಿ ಕರ್ಣ ಮತ್ತೆ ಎದ್ದು ಯುದ್ಧದಲ್ಲಿ ತೊಡಗುತ್ತಾನೆ. ಸಿಟ್ಟುಗೊಂಡ ಅರ್ಜುನ ಆತನನ್ನು ಕೊಂದೇ ಬಿಡುತ್ತೇನೆನ್ನಲು ಭೀಮ ಕೊಲ್ಲುವುದು ಉಚಿತವಲ್ಲ ಆತನ ಕೈಗಳನ್ನು ಬಿಗಿದು ಕರೆ ತರುತ್ತೇನೆ ಎಂದು ಸಂತೈಸಿ "ಕಿಡಿಕಿಡಿಯೆನುತಲಿ ಭೀಮ ಗದೆ ಪಿಡಿಯುತ ಬಲು ನಿಸ್ಸೀಮಾ" ಹೋಗುತ್ತಾನೆ. ಕರ್ಣನಿಗೂ, ಭೀಮನಿಗೂ ಘನಘೋರವಾದ ಯುದ್ಧ ನಡೆಯುತ್ತದೆ. ಅದರಲ್ಲಿ ಕರ್ಣ ಸೋತು ಬೀಳುತ್ತಾನೆ. "ಧೀರನಾಗಿ ಕಟ್ಟಿ ಹಯವ ಧೀರತನದ ತೊರೆದೂ ನಾರಿಯಂತೆ ಮರುಗಲೆನ್ನ ಯಾರು ಕೇಳ್ವರು" ಎಂದು ಮುಂತಾಗಿ ಚಿಂತಿಸಿ ಮತ್ತೆ ಎದ್ದು ಯುದ್ಧ ಕೊಡುತ್ತಾನೆ. ಆದರೆ ಭೀಮನನ್ನು ಗೆಲ್ಲಲಾರದಾಗಲು ಭೀಮ ಯಜ್ಞ ಕುದುರೆಯನ್ನು ಮತ್ತು ಕಪ್ಪಗಾಣಿಕೆಯನ್ನು ಕೊಡದಿದ್ದರೆ ನಿನ್ನ ಕೈಗಳನ್ನು ಕಟ್ಟಿ ಒಯ್ದು ಕೃಷ್ಣನ ಪಾದಲ್ಲಿ ಕೆಡುಹುತ್ತೇನೆ ಎನ್ನುತ್ತಾನೆ. ಈಗ ಕರ್ಣನು ಭೀಮನಂತಹ ವೀರ ಭೂಮಿಯ ಮೇಲೆ ಇಲ್ಲ. ಈಗ ಕಾದಾಡಲು ತನ್ನಲ್ಲಿ ಶಕ್ತಿಯು ಇಲ್ಲ. ಆದ್ದರಿಂದ ಮುಂದೆ ಪಾಂಡವರಿಗೆ ತನ್ನ ಪಂಥ ತೋರುವೆ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ ಭೀಮನೊಡನೆ ಕಪ್ಪಕೊಡುವುದಾಗಿ ಹೇಳುತ್ತಾನೆ.

ಸೂರ್ಯನ ರಥ ಮುಂದೆ ಹೋಗುವ ರೀತಿಯಲ್ಲಿ ಯಜ್ಞ ಕುದುರೆಯ ಸಾಲ್ವಪುರಕ್ಕೆ ತಲುಪಿತು. ಅದೇ ಸಮಯದಲ್ಲಿ ಹಂಸ ಮತ್ತು ಡಿಭಿಗಾ ಎಂಬ ಸೋದರ ರಾಕ್ಷಸರು ಬೇಟೆಗೆ ಹೊರಡುತ್ತಾರೆ. ಅಲ್ಲಿ ಕೇಸರಿ, ಕರಡಿ, ಕಾಡ್ಗೋಣ, ಹೆಬ್ಬುಲಿಯೇ ಮೊದಲಾದವುಗಳನ್ನು ಕೊಂದ ಶ್ರಮವನ್ನು ಕಳೆದುಕೊಳ್ಳಲು ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಸಮಯಕ್ಕೆ ಯಜ್ಞಾಶ್ವವು "ಹಂಸನ ಪರಿಮುಖಕೆ ರಾಘವನ ಶರದವೋಲ್ ಬರುವುದನು" ತಡೆದು ಅದರ ಹಣೆಯನ್ನು ಓದಿ "ಕ್ರುದ್ಧರಾಗುವ ಹಂಸ, ಡಿಭಿಗರು ಶುದ್ಧ ಗೋವಳ ಕೃಷ್ಣ ನಮ್ಮಿಂದಲೆಂತು ಮಖಗೈವ" ಎಂದು ಹಯವನ್ನು ಕಟ್ಟುತ್ತಾರೆ.

ಹೀಗೆ ಹಯವನ್ನು ಕಟ್ಟಿ ಬಾಣದ ಮಳೆಗರೆಯುತ್ತ ಬರಲಾಗಿ ಡಿಭಿಗನಿಗೆ ಅರ್ಜುನನು ಎದುರಾಗುತ್ತಾನೆ. ಅರ್ಜುನನು ಅಬ್ಬರಿಸಿ "ಆರು ನಮ್ಮಯ ಹರಿಯ ಮಖಹಯ ಚೋರನಭಿಮುಖನಾಗಲೆನ್ನುತ ಘೋರ ಲಯಭೈರವನಂತೆ" ನಿಂತರೆ ಡಿಭಿಗ "ಧೀರ ನಿನ್ನ ಹಯವ

ಬಿಗಿದ ವೀರ ನಾನೇ" ಎಂದು ಸದ್ದು ಹೊಡೆಯುತ್ತಾನೆ. ಹೀಗೆ ಪರಸ್ಪರ ಯುದ್ಧಮಾಡುತ್ತಾರೆ. ಅಂಥಯುದ್ಧದಲ್ಲಿ ಡಿಭಿಗನು ಮೂರ್ಛೆ ಹೋದುದನ್ನು ಕಂಡ ಹಂಸ "ಭೇದಿಸುವೆನೀ ದುರುಳನೆಂದನು ತಾ ಧನಂಜಯನನ್ನು.

"ದುರುಳ ನೀನಮ್ಮವಾಜಿಯ ಬಿಡದಿರಲು ತೋರ್ವೆನು ಕಾಲನಗರಿಯಾ" ಎಂದರೆ ಹಂಸ "ಮಂದಮತಿಯೆ ತಾ ಧುರದಲ್ಲಿ ಶರವೃಂದದಿ ತೋರುವೆ ಜವದಲ್ಲಿ" ಎಂದು ಶೌರ್ಯತೋರುತ್ತಾನೆ. ಪರಸ್ಪರರಲ್ಲಿ ಯುದ್ಧ ನಡೆದು ಹಂಸನು ಸೋಲುತ್ತ ಹೋದಂತೆ ಈಶ್ವರ ಗಣಗಳನ್ನು ನೆನೆಯುತ್ತಾನೆ. ಅವರು ಬಂದು ಹಂಸನೊಡನೆ ತಮ್ಮಿಂದೇನಾಗಬೇಕೆನ್ನಲು ಈತನನ್ನು ರಣದಲ್ಲಿ ಸೋಲಿಸಿ ತನಗೆ ಕೀರ್ತಿ ತನ್ನಿ ಎನ್ನುತ್ತಾನೆ. ಅವರು ಬಾಲರವಿಯ ಮೇಲೆ ಕತ್ತಲೆಯಂತೆ ಬರುತ್ತಾರೆ. ಅವರನ್ನು ಭೀಮ ಎದುರಿಸಿ "ನಿಮ್ಮಯ ಸ್ವಾಮಿಯನ್ನು ಬಿಡುತ ಬಂದುದ್ಯಾರೆ ನಮ್ಮಯ ಈ ಮಹಾದ್ಭುತನ ನಡೆಯ ಹತಿಯ ತಿಳಿಯದೆ" ಎನ್ನುತ್ತಾನೆ. ಯುದ್ಧದಲ್ಲಿ ಶಿವಗಣ ಸೋತು ಹೋಗಿ ಕುದುರೆ ಸಹಿತ ಅವರು ದ್ವಾರಕೆಗೆ ಬರುತ್ತಾರೆ.

ವಿಜಯಿಯಾಗಿ ಬಂದ ಭೀಮಾದ್ಯರನ್ನು ಕೃಷ್ಣ ಆಲಿಂಗಿಸಿ ಹೊಗಳುತ್ತಿರಲಾಗಿ ಅಲ್ಲಿಗೆ ತೊಂಬತ್ತೈದು ವರ್ಷದ ಮುದುಕನೊಬ್ಬನು ಬರುತ್ತಾನೆ. ಬ್ರಾಹ್ಮಣನು ಅರ್ಜುನನನ್ನು ವಿಧವಿಧವಾಗಿಸ್ತುತಿ ಸುತ್ತ ಭೂಮಿಗೆ ಬೀಳುವಂತಿರಲು ಅರ್ಜುನನು "ಎಲೆವೃದ್ಧ ಭಯವೇಕೆ ನುಡಿವುದೆನ್ನೊಡನೆಲ್ಲ ಸಲಹುವೆ ತಾನೆನಲು" ಆತ ಕೊಟ್ಟ ಮಾತಿಗೆ ನೀನು ತಪ್ಪುವನಲ್ಲೆಂದು ನಟ್ಟಗೆ ನಿನ್ನಡೆಗೆ ಬಂದೆ" ಎಂದು ಕೃಷ್ಣ ರಾಮಾದ್ಯರಿಗಿಂತ ಅರ್ಜುನನೇ ಶ್ರೇಷ್ಠ ಎನ್ನುತ್ತಾನೆ. ತನ್ನದು ಕೃಷ್ಣ ರಾಮರ ಪರಿಯಲ್ಲ, ಏನೆಂದು ಹೇಳು ಎನ್ನಲು ತನ್ನ ಕಥೆಯನ್ನು ಹೇಳುತ್ತಾನೆ.

"ಇದಕೇಳಿ ವಿಪ್ರನು ಮುದಗೊಂಡು ಬೆಸಗೊಂಡ ಮುದುಕನೆನಗೆ ಮೂರನೆ ಮದುವೆಯ ಸತಿಯೊಳು ಮೂರು ಬಾಲರು ಪುಟ್ಟಲದರೊದರ್ಯಾರ್ಗೆ ಕಾಣೇ" ಆದ್ದರಿಂದ ನಿನ್ನ ಭಾಷೆ ಖರೆ ಎಂದು ಜಗದಲ್ಲೇ ಪ್ರಸಿದ್ಧ, ಈಗ ನೀನು ತಪ್ಪಿ ಅಪಹಾಸ್ಯಕ್ಕೆ ಎಡೆಯಾಗಬೇಡ ನನ್ನ ಹೆಂಡತಿಗೆ ನಾಲ್ಕನೆಯ ಬಸುರು ಈಗ ಹತ್ತನೆಯ ಮಾಸ ಗರ್ಭವನೆ ಸಲಹು ಎನ್ನುತ್ತಾನೆ. ಗರ್ಭವನ್ನು ಯಾರು ಕಳದಹಾಗೆ ರಕ್ಷಿಸುತ್ತೇನ್ನುತ್ತ ಏಳಲು ಕೃಷ್ಣನು ನಗುತ್ತ ನರವೀರನೆ ನಿನಗೆ ಸಾಧ್ಯವೊ ಈ ಮಾತು ಉಳಿಸಿಕೊಳ್ಳಲು ಮಾತು ಕೊಟ್ಟು ತಪ್ಪಬಾರದೆಂದು ನಾನು ನಿನಗೆ ಸಾರಿ ಹೇಳಿದೆ. ಈಗ ಹೋಗು ಎನ್ನುತ್ತಾನೆ. ಅರ್ಜುನ ಈ ಗರ್ಭವನ್ನು ರಕ್ಷಿಸಲಾಗದಿದ್ದರೆ ಅಗ್ನಿಗೆ ಬಿದ್ದು ಸಾಯುತ್ತೇನೆ ಅನ್ನುತ್ತಾನೆ. ಇದರಿಂದ ಕೃಷ್ಣ ಮೆಚ್ಚಿಗೆ ವ್ಯಕ್ತಪಡಿಸಲು ಬ್ರಾಹ್ಮಣ ಸಂತೋಷದಲ್ಲಿ ತೇಲುತಿರಲಾಗಿ ಅರ್ಜುನ ಶಸ್ತ್ರಸಹಿತ ರಥವೇರಿ ವೃದ್ಧನನ್ನು ಹತ್ತಿಸಿಕೊಂಡು ತೆರಳುತ್ತಾನೆ.

ಅರ್ಜುನನು ವಿಪ್ರನ ಮನೆಯಲ್ಲಿ ಪೀಠದಲ್ಲಿ ಕುಳಿತಿರುತ್ತಾನೆ. ಆಗ ಮುದುಕನು ತನ್ನ ಮಡದಿಯನ್ನು ಕರೆಯಲು ಅವಳು ನೆಲಕ್ಕೆ ಕೈಕೊಟ್ಟು ಬುಸುಗುಡುತ್ತ ಏಳುತ್ತ ಮೂರು ಗರ್ಭಧರಿಸಿದರೆ ಮಕ್ಕಳನ್ನು ಕಾಣಲಿಲ್ಲ ಬರಿದೆ ಪ್ರಾಯ ಹೋಯಿತು. ಗರ್ಭವನ್ನು ರಕ್ಷಿಸುವವರನ್ನು ನೀನು ಗುರುತಿಸಲಿಲ್ಲ ಎಂದು ದುಃಖಿಸಲು ಮುದುಕ ನೋಡು ಕೃಷ್ಣನ ಭಾವವನ್ನೇ ಕರೆತಂದಿದ್ದೇನೆ. ಈತ ಮಹಾಶೂರ, ದುಃಖಿಸಬೇಡ ಎಂದರೆ, ಬ್ರಾಹ್ಮಣ ಹೆಂಡತಿ ರಾಮಕೃಷ್ಣರಿಗೆ ಅಸಾಧ್ಯವಾಗುವ ಕೆಲಸ ಈತನಿಂದಾಗುವುದೇನು ಎಲ್ಲ ವ್ಯರ್ಥ ಎನ್ನಲು ಅರ್ಜುನ ಸಿಟ್ಟುಗೊಂಡು ನಿನ್ನ ಸೊಕ್ಕಿನ ಮಾತು ಸಾಕು ಕೃಷ್ಣ - ರಾಮರೆ ತಡೆದರೂ ರಕ್ಷಿಸುತ್ತೇನೆ ಎಂದು ಹೇಳುತ್ತಾನೆ.

ವಿಪ್ರಮಡದಿಗೆ ಹಡೆವ ಬೇನೆ ಶುರುವಾಗುತ್ತದೆ. ಪುತ್ರರಿಲ್ಲದ ತಮಗೆ ಮುಕ್ತಿ ಇಲ್ಲವೆಂದು ದುಃಖಿಸುತ್ತಾಳೆ. ದೇವರೇ ಹೇಗಾದರೂ ಗರ್ಭ ರಕ್ಷಿಸೆಂದು ಗೋಳಿಡುತ್ತಾಳೆ. ಹಡೆವ ಹೊತ್ತು ಬಂದಿತೆಂದು ತಿಳಿಸಲು ಅರ್ಜುನನು "ಪಂಜರವನು ಮಾಡಿ ಸರಳ ಪುಂಜದಿಂದ ಗೃಹಕೆ ಸುತ್ತು ಅಂಜದಂತೆ ಧೈರ್ಯಹೇಳಿ" ಕಾಯುತ್ತಿರುವಾಗ ಅವಳು ಹಡೆಯುತ್ತಾಳೆ. ಆದರೆ ಕೃಷ್ಣ ಭಟರು ಮಾಯದಿಂದ ಅದನ್ನು ಒಯ್ದುಬಿಡುತ್ತಾರೆ. ಒಯ್ದವರು ಆಕಾಶದಲ್ಲಿ ನಿಂತು ಗರ್ಜಿಸುತ್ತಾರೆ. ಅರ್ಜುನನ ಬಾಣ ವ್ಯರ್ಥವಾಗುತ್ತದೆ.

ಆಗ ಬ್ರಾಹ್ಮಣ "ಹರಿಯ ಭಾವ ನೀನೆನುತ್ತ ಕರೆಯಲೆನಗೆ ಫಲವಿದೇನೊ" ಎಂದು ಖಾಂಡವವನ ದಹನದ ಸಂದರ್ಭದಲ್ಲಿ ಸುರರನ್ನೇ ಗೆದ್ದ ವೀರನೇ ನೀನಾ ಮುಂತಾಗಿ ಮೂದಲಿಸುತ್ತಾನೆ. ಇದರಿಂದ ಲಜ್ಜೆಗೊಂಡ ಪಾರ್ಥ ನಿಮ್ಮ ಮಗುವನ್ನು ಮೂರು ಲೋಕದಲ್ಲಿ ಎಲ್ಲೆ ಇದ್ದರೂ ತಂದೊಪ್ಪಿಸುವುದಾಗಿ ಹೇಳುತ್ತಾನೆ.

ಅರ್ಜುನನು ಕುಶಿಕನು ದಶರಥ ಮಕ್ಕಳಿಗೆ ಉಪದೇಶಿಸಿದ ಮಂತ್ರವನ್ನು ಜಪಿಸಿ, ಆಕಾಶಕ್ಕೆ ಏರಿ ಹೋದನು. ಎಲ್ಲಿಯೂ ಮಗುವು ಸಿಕ್ಕಲಿಲ್ಲವೆಂದು ತಿರುಗಿಬಂದು ವಿಪ್ರನಿಗೆ ಹೇಳಲು ಆತ ಧೂತರ್ಜಟಿಯಂತೆ ಆರ್ಭಟಿಸಿ ನಿಂದಿಸುತ್ತಾನೆ. ಅರ್ಜುನ ಬ್ರಾಹ್ಮಣನನ್ನು ಕರೆದುಕೊಂಡು ಕೃಷ್ಣನಲ್ಲಿಗೆ ಬರುತ್ತಾನೆ. ಅಲ್ಲಿ ಬಂದರೂ ವಿಪ್ರ "ಹರಿಯ ಬಳಿಗೆ ಬಂದುದಾಯ್ತು ತರಳನನ್ನು ತೋರಿಸೆಯಾ" ಮಾತುಕೊಟ್ಟು ತಪ್ಪುವ ನೀನು ಮೋಸಗಾರ ಇತ್ಯಾದಿ ನಿಂದಿಸುತ್ತಾನೆ.

ಇದನ್ನು ಕೇಳಿ ಅರ್ಜುನನ್ನು "ಸರಳ ಪಂಡಿತನ್ನ ಸೇರಿ ವರಮಾಹಾಸ್ತ್ರವನ್ನು ಕಲಿತೇ ಪರಮವಿದ್ಯವಿಂತು ವ್ಯರ್ಥ" ಎಂದು ಚಿಂತಿಸುತ್ತಾ "ತಂಗಿಯನ್ನು ಕೊಟ್ಟು ತನ್ನ ಭಂಗನೊಳ್ಪುದೇನೋ ರಂಗ ದ್ವಿಜಗೆ ನುಡಿದ ತುಂಗಭಾಷೆ ಸಲಿಸೊ" ಎಂದು ಬೇಡಿಕೊಳ್ಳುತ್ತಾನೆ. ಅಷ್ಟಕ್ಕೆ ನಿಲ್ಲದೆ ಪಂಥದಂತೆ ಜೀವಕೊಡಲು ಅಗ್ನಿಕುಂಡ ರಚಿಸುತ್ತಾನೆ. ಆಗ ಕೃಷ್ಣ ಅವನನ್ನು ಬಿಗಿದಪ್ಪಿ ಸಂತೈಸುತ್ತಾನೆ. "ಬರಿದೆ ಶೋಕಿಸಲೇಕೆ ಬಿಡು" ಎಂದು ರಥವನ್ನು ತರಿಸಿ ಬ್ರಾಹ್ಮಣನನ್ನು ಕೂಡ್ರಿಸಿಕೊಂಡು ಅರ್ಜುನನೊಡನೆ ಸಾರಥ್ಯವನ್ನು ಮಾಡಲು ಹೇಳುತ್ತಾನೆ.

ಏಳು ಸಮುದ್ರವನ್ನು ಸ್ವರ್ಣಭೂಮಿಯಲ್ಲಿ ಚರಿಸುತ್ತ ವಜ್ರಾದಿಲೇಪಿತ ದೇಶಗಳನ್ನು ಕೃಷ್ಣ ತನ್ನ ಚಕ್ರದಿಂದ ಕತ್ತರಿಸಿ ತೋರಿಸಿದ, ನೀರಿನ ರಾಶಿಯನ್ನು ತೋರಿಸಿದ, ಅದನ್ನು ದಾಟಿ ಮಣಿಯೋಜ್ವಲ ಆಸನವನ್ನು ಕಂಡು ಕೃಷ್ಣ ತನ್ನ ಮನೆಯನ್ನು ಹೊಕ್ಕು ಅದ್ವಿತೀಯವಾದ ದೃಶ್ಯವನ್ನು ತೋರಿದಾಗ ಎಲ್ಲರೂ ಬೆರಗಾದರು ಇದನ್ನು ಕಂಡು ಅರ್ಜುನನು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಂಡ ತನ್ನ ಅಹಂಕಾರವನ್ನು ಬಿಟ್ಟು ಕೃಷ್ಣನನ್ನು ಭಜಿಸಲಾಗಿ ಹರಿಯ ಚಾರಕ ವಿಪ್ರನಿಂದ ಅಪಹರಿಸಲ್ಪಟ್ಟ ನಾಲ್ಕು ಶಿಶುವನ್ನು ತರಲು ಕೃಷ್ಣನು ತನ್ನ ನಾಲ್ಕು ಕೈಯಲ್ಲಿ ಹಿಡಿದು ತಂದುಕೊಟ್ಟು ಪಾರ್ಥನ ಭಾಷೆಯನ್ನು ಸಲ್ಲಿಸಿದನು. ಅದನ್ನು ಕಂಡು ವಿಪ್ರನು ಅರ್ಜುನನ್ನು ಹೊಗಳುತ್ತಾನೆ.

ಅರ್ಜುನನು ವಿಸ್ಮಯಗೊಂಡು ಈ ತರಳರು ಯಾರು ಭೂಮಿಗೆ ಬರಲು ಕಾರಣವೇನು ಎಂದು ಕೇಳುತ್ತಾನೆ. ಕೃಷ್ಣ ಅವರು ನನ್ನ ದ್ವಾರಪಾಲಕರೇ, ಜಗತ್ತಿಗೆ ತಾನೇ ಏಕೈಕ ವೀರನೆಂದು ತಿಳಿದ ನಿನ್ನ ಅಹಂಕಾರವನ್ನು ಅಳಿಸಲು ಹೂಡಿದ ತನ್ನ ಲೀಲೆ ಇದು ಎನ್ನುತ್ತಾನೆ. 'ಆವಾವಕಾಲದಲ್ಲಿ ನೋವುಬಾರದ ತೆರದಿ ಶ್ರೀವತ್ಸ ಸೇವಕನತಾರಯದಿ ಕಾಯುವಂಥ ಶ್ರೀ ಕೃಷ್ಣನ ಹೊಗಳಲು' ಇದು ಸಾಧನವಾಗಿದೆ.

ಶ್ರೀಕೃಷ್ಣನು ತನ್ನ ಮಡದಿಯನ್ನು ಕೂಡಿ ಯಜ್ಞಕ್ಕೆ ಕುಳಿತ ಮುಹೂರ್ತದಲ್ಲಿ ದೇವತೆಗಳು ಹೂಮಳೆಯ ಸುರಿಸಿದರು. ವ್ಯಾಸನೇ ಕುದುರೆಗೆ ಪ್ರೋಕ್ಷಣೆಯ ಮಾಡಿದನು. ಅರ್ಜುನನು ಕುದುರೆಯು ಮುಕ್ತಿಪಾಲಿಸೆಂದು ಕೇಳುತ್ತದೆ ಎನ್ನುತ್ತಾನೆ. ನಿಶ್ಚಯವಾಗಿ ಸಾಯುಜ್ಯ ನೀಡುವೆನು ಎಂದು ಕೃಷ್ಣ ಎನ್ನುತ್ತಾನೆ. ಕುದುರೆಯನ್ನು ಛೇದಿಸಲಾಗುತ್ತದೆ. ಅದರ ಜೀವವು ಆಕಾಶದಲ್ಲಿ ಹೋಗುವುದನ್ನು ಕಂಡು ಎಲ್ಲರೂ ಬೆರಗುಗೊಳ್ಳುತ್ತಾರೆ. ಅದರ ಶರೀರವನ್ನು ತುಂಡುಮಾಡಿ ಹೋಮಿಸುತ್ತಾರೆ. ಹಾಲು-ಮೊಸರನ್ನು ಹೋಮಿಸಿ ಸಾಮಗಾನವ ಪಠಿಸುವಾಗ ಅಗ್ನಿಯು ಅದನ್ನೆಲ್ಲ ಕೊಂಡು ದೇವತೆಗಳಿಗೆ ಸಲ್ಲಿಸಿದನು. ಹೀಗೆ ಯಜ್ಞವು ಪೂರ್ತಿಯಾಗುವ ಸಂದರ್ಭದಲ್ಲಿ ದಂತವಕ್ರ ಎಂಬ ರಾಕ್ಷಸನು ಭೋರಿಡುತ ಶಸ್ತ್ರವ ಬೀರುತ್ತ ಬಂದನು.

ತನ್ನನ್ನು ಗೆಲ್ಲದೆ ಯಜ್ಞಹುಸಿ ಎಂದು ಮುಂದಾಗಲು ಕೃಷ್ಣನಿಂದ ಹತನಾಗಲು ವಿಡೂರಥನು ಯುದ್ಧಕ್ಕೆ ಬಂದನು. ಅವನನ್ನು ಕೃಷ್ಣ ಜಯಿಸಿದ. ಸುರರೆಲ್ಲ ಜಯಜಯವೆನ್ನಲು ಎಲ್ಲರೂ ಸಂತೋಷಪಟ್ಟರು. ಹೀಗೆ ಶ್ರೀಕೃಷ್ಣದಿನಾಶ್ವಮೇಧವು ಪೂರ್ತಿಯಾಗುತ್ತದೆ.

# ೧. ಕೃಷ್ಣ ಚರಿತೆ

**ಕಂದ**

ನಿದ್ದೆಯ ಹೊತ್ತಿಲಿ ಬೆಣ್ಣೆಯ |
ಮುದ್ದೆಯ ರಸಬಾಳೆ ಹಣ್ಣು ಜೇನ್ ತುಪ್ಪಗಳಂ ||
ಕದ್ದವರಾರೆನೆ ಕೇಳುತ |
ಬುದ್ಧಿವಿಶಾಲತೆಯೊಳೆಂದಳೊಬ್ಬಳು ತರುಣಿ || ||೨೦೫||

**ರಾಗ ಸೌರಾಷ್ಟ್ರ ಅಷ್ಟತಾಳ**

ಮರುಳಾದೆ ಏನೆ ಬಾಲೆ | ಇಲ್ಲಿಗೆ ರಾತ್ರೆ | ಬರುವರಾರೆಂದು ಪೇಳೆ |
ನೆರೆಹೊರೆಯವರು ಎಚ್ಚರಿತುಕೊಂಡಿರುವಾಗ |
ಸರಿರಾತ್ರೆಯೊಳಗೋರ್ವ ಸುಳಿವ ಮಾತುಂಟೆನೆ || ಮರುಳಾದೆ ||೨೦೬||

ಚಿನ್ನ ಬೆಳ್ಳಿಗಳ ಬಿಟ್ಟು | ಸಕ್ಕರೆ ಬಾಳೆ | ಹಣ್ಣಿಗೆಂದಾಸೆ ಪಟ್ಟು |
ಬೆಣ್ಣೆ ತುಪ್ಪಗಳ ಮೆಲ್ವರೆ ಮನೆಯೊಳಗಿದ್ದ |
ಸಣ್ಣವರಾಟವಲ್ಲದೆ ಬೇರಿನ್ನಾರುಂಟು || ಮರುಳಾದೆ ||೨೦೭||

ಅಕ್ಕ ನೀ ಸುಮ್ಮನಿರೆ | ಆದರೆ ಕಳ್ಳ | ಸಿಕ್ಕದೆ ಪೋಗ ಬಾರೆ |
ದಕ್ಕದು ಕಳವು ಹಾದರವೆರಡಕು ಸಣ್ಣ |
ಮಕ್ಕಳಾದರು ಕಂಡು ಸೊಕ್ಕ ಮುರಿಯಬೇಕು || ಮರುಳಾದೆ ||೨೦೮||

**ಭಾಮಿನಿ**

ವನಿತೆಯರು ತಮ್ಮೊಡನೆ ಯೋಚಿಸಿ |
ಮನೆಗೆ ಬಂದಾಕ್ಷಣವೆ ಮಕ್ಕಳ |
ಘನತರದೊಳಂಜಿಸುತ ಕೇಳುತ್ತಿರಲು ರಾತ್ರೆಯಲಿ ||
ಕನಸ ಕಂಡಂದದಲಿ ಮರುದಿನ |
ಕೆನೆ ಮೊಸರ ಸುರಿದೋಡುತಿರಲಾ |
ಧ್ವನಿಯ ಲಾಲಿಸಿ ತಿಳಿದು ಬಳಿಕಿಂತೆಂದಳಾ ತರುಣಿ || ||೨೦೯||

**ರಾಗ ನಾದನಾಮಕ್ರಿಯೆ ಝಂಪೆತಾಳ**

ಅಕ್ಕ ಕೇಳೀ ಕೇರಿ | ಒಕ್ಕಲೊಳು ಕಳುವವರು |
ಮಕ್ಕಳೊಳಗಲ್ಲದೆ ಮತ್ತೊಬ್ಬರಲ್ಲ ||೨೧೦||

ಪೇಳಲಂಜುವೆ ಬಂದ | ಹೊಸ ಪರಿಯ ಬಾಲಕಗೆ |
ಕಾಲಲಂದುಗೆ ಗೆಜ್ಜೆಕಡಗ ಮೊದಲುಂಟು ||೨೧೧||

ಪೀತಾಂಬರವನುಟ್ಟು | ಫಣೆಗೆ ತಿಲಕವನಿಟ್ಟು |
ಜಾತಿ ತುಳಸಿಯ ದಂಡೆ ಕೊರಳೊಳಗೆ ಕಂಡೆ ||೨೧೨||

ನೀಲವರ್ಣದ ಮೈಯ | ನುಡಿವ ಕೊಳಲಿದೆ ಕೈಯ |
ಬಾಲಕೃಷ್ಣನ ರೂಪ ಪ್ರತಿಯಾಗಿ ತೋರ್ಪ ||೨೧೩||

ನಂದಗೋಪ ಯಶೋದೆ | ಕಂದನಲ್ಲದೆ ಮನೆಗೆ |
ಬಂದು ಕಳುವವರಿಲ್ಲ ಬದಲೊಬ್ಬರಿಲ್ಲ ||೨೧೪||

ಅರಸುಗಳ ಬಾಲಕರು ಅನ್ಯಾಯ ಮಾಡಿದರೆ |
ಪರರೊಡನೆ ಪೇಳ್ದರದ ಪರಿಹರಿಪರ‍್ಯಾರು ||೨೧೫||

**ಭಾಮಿನಿ**

ಶರಧಿ ಮೇರೆಯ ತಪ್ಪಿತಾದರೆ |
ಧರಣಿ ತಲೆಕೆಳಗಾಗಿ ಪೋದರೆ |
ಕರುಣವಿಲ್ಲದೆ ಬೇಲಿಯೇ ಬೆಳೆತಿಂದು ಕೆಡಿಸಿದರೆ ||
ಅರಸುಗಳೊಳನ್ಯಾಯವಾದರೆ |
ಪರಿಹರಿಪರಿಲ್ಲೆಂದು ಗೋಕುಲ |
ದರಸಿಯಾದ ಯಶೋದೆಯೆಡೆಗೈತಂದರರಮನೆಗೆ || ||೨೧೬||

**ರಾಗ ಸೌರಾಷ್ಟ್ರ ಅಷ್ಟತಾಳ**

ಏನಿರೆ ಸತಿಯರೆಲ್ಲರು ನಡೆತಂದಿರಿ | ಏನಿರವ್ವ |
ಮಾನಿನಿಯರಿರ ಮಂಚದಲಿ ಕುಳ್ಳಿರಿ ಬನ್ನಿ | ಏನಿರವ್ವ || ಪಲ್ಲವಿ ||

ಆನನ ರಸತಗ್ಗಿತಂಬುಜವದನೆಯ | ರೇನಿರವ್ವ | ನಿಮ್ಮ |
ಮಾನಸ ಹರುಷ ನಿ | ಧಾನವಾಗಿರುವದಿ | ದೇನಿರವ್ವ ||೨೧೭||

ಊಟ ಮೀವುಗಳಲ್ಲಿ ತೊಡರು ಬಂದಡರಿತೆ | ಏನಿರವ್ವ |
ಕಾಟಕ ಜನರಿಂದ ಮುನಿಸು ಬಂದೊದಗಿತೆ | ಏನಿರವ್ವ
ಕೋಟಲೆ ಮನೆಯ ಸಂಸಾರ ವೆಗ್ಗಳಿದು | ದೇನಿರವ್ವ
ಆಟಕವಲ್ಲಿದು ವೇಳ್ಯ ಸಾಧಿಸಿ ಬಂದು | ದೇನಿರವ್ವ ||೨೧೮||

ಅಂತರಂಗದೊಳನುತಾಪವೆಗ್ಗಳಿಸಿಹು | ದೇನಿರವ್ವ | ಬಲು |
ಚಿಂತೆಯಿಂದರಮನೆಗೈತಂದ ಕಾರಣ| ವೇನಿರವ್ವ |
ಕಾಂತೆಯರಿರ ಕಪಟವ ಮಾಡದುಸುರಿ ಮ | ತ್ತೇನಿರವ್ವ | ಲಕ್ಷ್ಮಿ |
ಕಾಂತನು ದಯದಿ ನಮ್ಮೆಲ್ಲರ ಸಲಹುವ | ಏನಿರವ್ವ ||೨೧೯||

**ಕಂದ**

ಪದುಮದಳಾಕ್ಷಿ ಯಶೋದೆಯು |
ಸುದತಿಯರಂ ಮನ್ನಿಸುತ್ತ ವೀಳ್ಯವ ಕೊಡಲುಂ |
ಮದಗಜಗಮನೆಯರಾಗಲೇ |
ಮುದದಿಂ ಪೇಳಿದರು ಕೃಷ್ಣ ನಾಟಂಗಳನು || ||೨೨೦||

**ರಾಗ ಪಂತುವರಾಳಿ ಮಟ್ಟೆತಾಳ**

ಕೇಳೆ ಗೋಪಿ ರಂಗನಾಟವ | ನೀ ಕರುಣದಿಂದ | ಕೇಳೆ ಗೋಪಿ ರಂಗನಾಟವ |
ಪೇಳದಿರುವುದಚಿತವಲ್ಲ | ಪೇಳ್ದೊಡೊಂದು ಕಾರ್ಯವಿಲ್ಲ |
ಕೇಳೆ ಗೋಪಿ ರಂಗನಾಟವ || ಪಲ್ಲವಿ

ಸರಿಯ ರಾತ್ರಿಯೊಳಗೆ ಬಾಗಿ | ಲ್ಮುರಿಯಲಾಗಿ ಬೆದರಿ ಕದವ |
ತೆರೆಯಲೊಳಗೆ ಬಂದು ನಾ | ವರಿಯದಂತೆ ಹಾಲು ಮೊಸರ |
ಸುರಿವು ತೋಡಿ ಬರುವ ಸುಮ್ಮನೆ | ಇರಲು ಸ
ಕ್ಕರೆಯ ಕದ್ದು ಮೆಲುವ | ಘಮ್ಮನೆ | ನಗುತ ಮೇಲ್ |
ಬರಿಯ ಮಾಡಿ ಬಿಡುವ ನಮ್ಮನೆ ನೀ | ಕರುಣದಿಂದ || ಕೇಳೆ ||೨೨೧||

ಅಟ್ಟದ ಮೇಲಡಗಿಸಿ ಬ | ಚ್ಚಿಟ್ಟರದರ ಬುಡಕೆ ಕೋಲ
ಲಿಟ್ಟು ತೂತು ಮಾಡಿ ಬಂದಷ್ಟು ಬಾಯನಿಟ್ಟು ಸವಿಯ |
ತೊಟ್ಟಿನವರ ಕರೆದು ಕೊಡುವನು | ಬೆದರಿಸಲುಕ |
ಲ್ಲಿಟ್ಟು ಭಾಂಡಗಳನು ಒಡೆವನು | ಸತಿಪತಿಯರ |
ಜುಟ್ಟು ಜುಟ್ಟು ಕಟ್ಟಿ ಬಿಡುವನು ನೀ | ಕರುಣದಿಂದ || ಕೇಳಿ ಗೋಪಿ ||೨೨೨||

**ಕಂದ**

ಬಾಲೆಯರಿಂತೆಂದಾ ಗೋ |
ಪಾಲನ ದೂರನರುಹಲು ನಸುನಗುತಾಗಂ ||
ಬಾಲಕನೆಸಗಿದರೆಮ್ಮಯ |
ಮೇಲಪಕೀರ್ತಿಯು ಬಹುದೆನುತವರೊಡನೆಂದಳ್ || ||೨೨೩||

**ರಾಗ ಕಾಂಭೋಜಿ ಏಕತಾಳ**

ಅಮಮ ಇದೆಂಥ ಚೋದ್ಯವು ||
ಇವರಾಡುವ ಮಾತುಗ | ಳಮಮ ಇದೆಂಥ ಚೋದ್ಯವು || ಪಲ್ಲವಿ ||

ತಮ್ಮ ಮನೆಗೆ ರಾತ್ರಿಯೊಳಗೆ ಪೋ |
ಗೆಮ್ಮ ಬಾಲ ಬಾಗಿಲ ಮುರಿದನು ಗಡ | ಅಮಮ || ಅನು ಪಲ್ಲವಿ ||

ಸಂಜೆಯೊಳಂಗಳಕಿಳಿಯದ ಬಾಲನು | ಪರರೊಡವೆಯ ಮುಟ್ಟಲಿ
ಕಂಜುತ್ತಲಳುಕುತ್ತ | ಲಿಹ ಗೋಪಾಲನು ಮೀಸಲ್ಕೊಸರ್ಬೆಣ್ಣೆಯ
ಎಂಜಲ ಮಾಡಿದನಂತೆ ವಿಶಾಲನು | ಶಿವಶಿವಾ ನಾವು
ರಂಜಿಸಿ ಕೇಳಿದೆ ವೀಪರಿ ಜಾಲವನು || ||೧೧೪||

**ರಾಗ ಕೇದಾರಗೌಳ ಅಷ್ಟತಾಳ**

ಸರಿ ರಾತ್ರೆಯೊಳಗೆನ್ನ | ತರಳ ಮನೆಗೆ ಬಂದ | ಗುರುತವೇನಮ್ಮ ಪೇಳು ||
ಇರುಳು ಪಟ್ಟಣವ ರಕ್ಷಿಪ ತಳವಾರಿನ | ಚರರ ನೀ ಕರೆಸಿ ಕೇಳು ||೧೧೫||

ಕಂದನಿರುಳು ನಿಮ್ಮ | ಮಂದಿರದೊಳು ಬೆಣ್ಣೆ | ತಿಂದಿಹ ಗುರುತವೇನೆ |
ಒಂದರ ಮೇಲೊಂದಿಟ್ಟೊಡೆದ ಭಾಂಡದ ಚಿಪ್ಪು | ತಂದು ತೋರುವೆವು ಕಾಣೆ ||೧೩೬||

**ಕಂದ**

ಪರಿಹಾಸ್ಯದಿಂದ ನಗುತಾ |
ತರುಣಿಯರಂ ಬಹುಮಾನಿಸುತ ಕಳುಹಲ್ಕಂದು ||
ಮರುದಿನ ಮಾಡಿದ ಲೂಟಿಯ |
ಭರದಿಂದೈತಂದು ಪೇಳ್ದಳೊಬ್ಬಳು ತರುಣಿ || ||೧೧೭||

**ರಾಗ ಕಲ್ಯಾಣಿ ಅಷ್ಟತಾಳ**

ಎಷ್ಟೆಂದು ಪೇಳಲಮ್ಮ | ಗೋಪಾಲನ | ದುಷ್ಟತನವ ಗೋಪಮ್ಮ ||
ಕಟ್ಟಿದ ಕರುಗಳ | ಬಿಟ್ಟು ಕರೆವ ಮುನ್ನ |
ಹಟ್ಟಿಯಿಂ ನೆಗೆದೋಡಿದ | ಕೇಳು ವಿನೋದ || ಎಷ್ಟೆಂದು ||೧೧೮||

ಬಣ್ಣಗತಿಯಲಿ ಬಂದ | ಪಾಲ್ಕೊಸರ್ತುಪ್ಪ | ಬೆಣ್ಣೆಯ ಕದ್ದು ತಿಂದ |
ಮಿಣ್ಣನೆ ಮಲಗಿದ್ದ | ಚಿಣ್ಣನ ಮೂಗಿಗೆ |
ಸುಣ್ಣವ ಬರೆದೋಡಿದ | ನೀ ಕೇಳವ್ವ ||೧೧೯||

ಇಷ್ಟೆಲ್ಲ ಕಂಡುನಾವು | ಅಟ್ಟದಲಿ ಬ | ಚ್ಚಿಟ್ಟ ದುಗ್ಧದ ಭಾಂಡವು |
ಪುಟ್ಟಗೋಪಾಲರ ಹೆಗಲೇರಿ ಕೆಳಗೆ ಮೈ |
ದಿಟ್ಟೋಡಿ ಪೋದ ಕಾಣೆ | ಕೇಳೆಲೆ ಜಾಣೆ ||೧೨೦||

ಭಟ್ಟ ಬ್ರಾಹ್ಮಣರಿಗೆನ್ನುತ್ತ | ಮೂಲೆಯಲಿ ಬ | ಚ್ಚಿಟ್ಟದರ್ಡದ ನೋಡುತ |
ಕೆಟ್ಟ ಮೂಳಿಯ ಮಕ್ಕಳೆನುತ ಬಾಗಿಲ್ಗೆ ಕ |
ಲ್ಲಿಟ್ಟೋಡಿ ಪೋದನಮ್ಮ | ಕೇಳೆ ಗೋಪಮ್ಮ ||೧೨೧||

**ಕಂದ**

ಮಕ್ಕಳ ಮಾಣಿಕ ಪಾಲ್ಗೊಸ |
ರಿಕ್ಕಿದರದನುಣ್ಣಲೊಲ್ಲ ಸೇರದು ಬೆಣ್ಣೆ ||
ಚೆಕ್ಕವ ನಿಮ್ಮಡಿಗೆಯ ಮನೆ |
ಪೊಕ್ಕನು ಸರಿರಾತ್ರೆಯೊಳೆಂಬುದಿದಚ್ಚರಿಯಂ || ||೧೩೧||

**ರಾಗ ಕಲ್ಯಾಣಿ ಅಷ್ಟತಾಳ**

ಸಣ್ಣವರಾಟವಲ್ಲ | ಸಂಗಡ ಬಂದ | ಚೆಣ್ಣರೊಳ್ ಕೇಳ್ದೆವೆಲ್ಲ |
ಅಣ್ಣರಾಮರಿಯದಂದದೊಳೋಡಿ ಬಂದಿವಳ |
ಬಣ್ಣದುಟಿಯ ಸವಿದ | ಕೇಳು ವಿನೋದ || ಸಣ್ಣವ ||೧೩೩||

ಎಂದೂ ಎನ್ನಣುಗನಿಗೆ | ಆಲದ ಹಣ್ಣು | ತಿಂದು ಅಭ್ಯಾಸವಾಗೆ |
ಒಂದರಿಯದ ಬಾಲ ಮುಗುದೆ ನಿನ್ನಧರವ |
ತಿಂದರಿಂದೇನಾಯಿತೆ | ಪೇಳೆಲೆ ಕಾಂತೆ || ಸಣ್ಣವ ||೧೩೪||

ನಸುಬೆಳಕಾಗುವಾಗ | ಯವ್ವನವತಿ | ಮೊಸರ ಮಂತಿಸುತಿಪ್ಪಾಗ |
ಕುಶಲದಿಂದೆಳೆದಮರ್ದಪ್ಪುತ ತರುಣಿಯ |
ಪೊಸ ಕುಚಂಗಳ ಮುಟ್ಟಿದ | ಕೇಳು ವಿನೋದ ||೧೩೫||

ದೇವತಾರ್ಚನೆಗೆನ್ನುತ್ತ | ನಿತ್ಯದಲಿ ರಾ | ಜೀವಗಳನು ಕೊವಂಥ |
ತಾವರೆ ಮೊಗ್ಗೆಂದರಿಯದೆ ಮುಟ್ಟಲು |
ಆವಮಾನಗಳು ಕುಂದಿತೆ | ಕೇಳೆಲೆ ಕಾಂತೆ ||೧೩೬||

ನೀರನು ತರಲು ಪೋದ | ಈ ಸುದತಿಯ | ದಾರಿಯಡ್ಡವ ಕಟ್ಟಿದ |
ನಾರಿ ಹೇಳಿದಕೇನು ಬೆಲೆಕೊಟ್ಟೆಯೆನುತುಟ್ಟ |
ಸೀರೆಯ ನೆಗೆದೋಡಿದ | ಕೇಳು ವಿನೋದ ||೧೩೭||

ಆರೇಳು ವರ್ಷವಾದ | ಬಾಲಕನುಟ್ಟ | ಸೀರೆಯಂದವ ನೋಡಿದ |
ಸೌರಮ್ಯಾಂಬರವಿದರ ಬೆಲೆ ಏನೆನುತ ಮೇಲ್ |
ಹಾರಿಸಲೇನಾಯಿತೇ | ಪೇಳೆಲೆ ಕಾಂತೆ ||೧೩೮||

**ರಾಗ ಬಿಲಹರಿ ಅಷ್ಟತಾಳ**

ಮಗಗಿನ್ನಾದರು ಬುದ್ಧಿ ಪೇಳೆ | ಇನ್ನು |
ನಗೆಯಲ್ಲ ಕೈ | ಮುಗಿವೆವು ಮಾತ ಕೇಳೆ || ಮಗ || ಪಲ್ಲವಿ ||

ಕಳವು ಹಾದರವು ಮದ್ದಲ್ಲ | ನೀವು | ಇಳೆಯಪಾಲಿಸುವರಿ | ಗಿದು ಯೋಗ್ಯವಲ್ಲ ||
ಬಳಸುವುದಪಕೀರ್ತಿ ಎಲ್ಲ | ರಾಜ್ಯ | ದೊಳಗಿರುವುದು ಕಷ್ಟ ನೀ ಕೇಳು ಸೊಲ್ಲ ||೧೩೯||

ಉಂಡದಕಳಲುವರಾರು | ನೆಲ | ನುಂಡು ಕೆಟ್ಟಿತು ಎಲ್ಲ ಪಾಲ್ಬೆಣ್ಣೆ ಮೊಸರು |
ಕಂಡ ಕಡೆಯಲಿ ಚೆಲ್ಲುವರು | ಕಪಿ | ವಿಂಡುಗಳಿಗೆ ಸಹ ಕರೆದು ಕೊಡುವರು ||೧೪೦||

**ರಾಗ ಪಂತುವರಾಳಿ ರೂಪಕತಾಳ**

ಚಂದವಾಯಿತು ಮಗನೆ | ಚಂದವಾಯಿತು |
ನಂದಗೋಪನಣುಗ ಕದ್ದು | ತಿಂದನೆಂಬ ಮಾತು ಬಂದುದು || ಪಲ್ಲವಿ ||

ಪರರ ಮನೆಯ ಪಾಲು ಬೆಣ್ಣೆ | ಸುರಿವುತೋಡಿಬರುವುದಕ್ಕೆ |
ಕರವದೇನು ಕಡಿಮೆಯಾಯಿತೆ | ಅಯ್ಯಯ್ಯೊ ನಡತೆ || ಚಂದ ||೧೪೧||

ನರಿಯು ನಾಯಿ ತಿಂದು ಪೋದುದೆಮ್ಮ ತೋಟದಲ್ಲಿ ಪಣ್ಗಳ |
ತರಿಸಲ್ಯಾರು ಬೇಡವೆಂದರೇ | ಬೇಕೆಂಬುದಾದರೆ || ಚಂದ ||೧೪೨||

ಪರರಿಗೆಲ್ಲ ಬುದ್ಧಿ ಪೇಳಿ ಪಾಲಿಸುತ್ತಿರುವ ನಾವು |
ನೆರೆಮನೆಯೊಳ್ಕಳವು ಮಾಳ್ಪರೆ | ಕೈಮಾಡಿದಾದರೆ ||೧೪೩||

**ರಾಗ ಕಲ್ಯಾಣಿ ಅಷ್ಟತಾಳ**

ಗೊಲ್ಲ ಹೆಣ್ಣುಗಳು ಕೂಡಿ | ನಿನ್ನೊಡನೆಲ್ಲ | ಸಲ್ಲದ ಮಾತನಾಡಿ |
ಖುಲ್ಲಗಾತಿಯರು ಮತ್ಸರದಿ ದೂರುವರೆನ್ನ | ಕೊಲ್ಲ ಬೇಕೆನುತಲಮ್ಮ ಕೇಳ್ ಗೋಪಮ್ಮ ||೧೪೪||

ನೆರೆಮನೆಯೊಳ್ಕಳುವರೆ ಪಾಲ್ಮೊಸರ್ಗೇನು | ಬರಗೆಟ್ಟು ಪೋದುದೇನು |
ಇರುಳು ಪಟ್ಟಣವ ಸಂಚರಿಸಲ್ಕೆನಗೇನು | ಮರುಳಾಟವಾಯ್ತೇನಮ್ಮ | ಗೋಪಮ್ಮ ||೧೪೫||

ಮೀಸಲು ಮೊಸರುಂಡರೆ | ಮಾನವರ್ಗದು | ದೋಷದ ಗುಣವಲ್ಲವೆ |
ಆ ಸುದತಿಯರೆಂದ | ಮಾತಿಗಣ್ಣನ ಕೂಡೆ | ನೀ ಸಾಕ್ಷಿಗಳನು ಕೇಳು | ಆ ಕ್ಷಣದೊಳು ||೧೪೬||

**ಕಂದ**

ಕಂದನ ನುಡಿಯಂ ಕೇಳ್ದಾ |
ನಂದನ ಸತಿ ಮಗುವ ಮುದ್ದು ಮಾಡುತ್ತಾಗಂ |
ಬಂದರೆ ನಿಮ್ಮನೆಗೀತನ |
ತಂದೆನಗೊಪ್ಪಿಸುವದೆಂದೊಡಂಬಡಿಸಿದಳಾಗಳ್ || ||೧೪೭||

**ವಾರ್ಧಕ**

ಮಂದಗಾಮಿನಿ ಯಶೋದೆಯ ಮಾತಿಗವರು ನಡೆ |
ತಂದು ಕೃಷ್ಣನ ಹಿಡಿಯಬೇಕೆಂಬ ಮೊದಲವರ |
ಮಂದಿರವ ಪೊಕ್ಕೊಡನೆ ನಲವಿನಿಂದಿಟ್ಟಿರುವ ಬಿಂದಿಗೆಯ ಮೊಸರ ಸುರಿದು ||
ಮುಂದೆ ಪಾಲ್ಮೊಸರು ಬೆಲ್ಲವನಿಟ್ಟ ಠಾವಾವು |
ದೆಂದು ಹುಡುಕಾಡುತಿಹ ಸಮಯದೊಳು ಗೋಪಿಯರು |
ಇಂದಿರಾಪತಿಯನಡ್ಡವಗಟ್ಟಿ ಹಿಡಿದು ಎಳೆ ತಂದರು ಯಶೋದೆಯೆಡೆಗೆ || ||೨೪೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದು ಗೋಪಿಯ ಕೈಯೊಳಿದ್ದ ಮು | ಕುಂದನನು ಕಾಣುತ್ತ ಬರಿಗೈ |
ಯಿಂದ ತಾವಿದ್ದಿರವನೀಕ್ಷಿಸು | ತಂದು ಭ್ರಮಿಸಿ ||೨೪೯||

ಮಾತನಾಡದೆ ನಾಚುತಲಿ ಮನ | ಸೋತು ಸುಮ್ಮನೆ ಮನೆಗೆ ಬಂದತಿ |
ಕೌತುಕದ ಶಿಶುವೆನುತ ಕೃಷ್ಣನ | ಪೊಗಳುತಿಹರು ||೨೫೦||

ಕಾರಣೀಕದ ನಂದಗೋಪ ಕು | ಮಾರಕನ ಪಡೆ | ದವರ ಪುಣ್ಯ ವಿ |
ಚಾರವೆಂದೇ ಪೊಗಳುತಿರ್ದರು | ಕೇರಿಯೊಳಗೆ ||೨೫೧||

**ರಾಗ ಆನಂದ ಭೈರವಿ ಏಕತಾಳ**

ತಪ್ಪಿಸಿಕೊಳ್ಳದ ಹಾಗೆ | ಕಟ್ಟುವ ಸಿಕ್ಕಿದರೆ ಕೈಗೆ |
ಬಾಲನ | ಚಾರು | ಶೀಲನ ||೨೫೨||

ಜಾಗರದೊಳಿರುವ ನಾವು | ಜತನವೆಂದು ಮಾತಾಡುತ್ತ |
ಪೋದರು | ಮನೆಯೊಳ್ | ಕಾದರು ||೨೫೩||

ಕದ್ದು ಮೊಸರು ಬೆಣ್ಣೆ ತುಪ್ಪ | ಮೆದ್ದೋಡಲಾ ಕೃಷ್ಣನ |
ತಡೆದರು | ಎಲ್ಲ | ಹಿಡಿದರು ||೨೫೪||

**ರಾಗ ಮಧ್ಯಮಾವತಿ ಅಷ್ಟತಾಳ**

ಸಿಕ್ಕಿದ | ಕಳ್ಳ | ಸಿಕ್ಕಿದ | ಇವನ
ಸೊಕ್ಕುಗಳನೆ ಮುರಿ | ದಿಕ್ಕದೆ ಬಿಡೆವು || ಸಿಕ್ಕಿದ ||೨೫೫||

ಬೊಂಬೆಯ ಮದುವೆಯಾಟದೊಳಿರಲಿವ ಬಾಲ |
ನೆಂಬುದಕಾಗಿ ಸುಮ್ಮನೆ ಬಿಟ್ಟೆವು |

ಕಂಬದ ಮರೆಗಾಗಿ ಕರೆದೊಯ್ದೀ ತುರಣಿಯ |
ಚುಂಬಿಸಿ ತುಟಿಕಚ್ಚಲುಚಿತವೇನಮ್ಮ | | ಸಿಕ್ಕಿದ ||೧೫೬||

ಮೊಸರು ತುಪ್ಪ ಬಾಳೆಯ ಹಣ್ಣ ಮೆಲುವಾಗ |
ಹಸುಮಗುವೆಂದು ಲಾಲಿಸಿ ಕೊಂಡೆವು |
ನಿಶೆಯೊಳಗಡಗಿ ಬಳಿಗೈತಂದೀ ತರುಣಿಯ |
ಪೊಸಕುಚಗಳ ಮುಟ್ಟಲುಚಿತವೇನಮ್ಮ || ಸಿಕ್ಕಿದ ||೧೫೭||

ಕಣ್ಣಮುಚ್ಚಾಲೆಯಾಡುವ ಎಂದು ಕರೆವಾಗ |
ಸಣ್ಣವನೆಂದು ಸುಮ್ಮನೆ ಬಿಟ್ಟೆವು |
ಕಣ್ವಪುರೀಶ ಶ್ರೀಕೃಷ್ಣ ಈ ತರುಣಿಯ |
ಬೆನ್ನ ಮೇಲೇರಿರಬಹುದೆ ಏನಮ್ಮ ||೧೫೮||

**ವಾರ್ಧಕ**

ಗೋಪಾಲಕೃಷ್ಣ ಸಿಕ್ಕಿದನಿವನ ಬೆಳಗಾಗೆ |
ಗೋಪಿಯಿದ್ದೆಡೆಗೊದು ಬುದ್ಧಿಕಲಿಸುವೆನೆನುತ |
ಆ ಪುಣ್ಯಚರಿತೆಯರು ಸರಿರಾತ್ರೆಪರಿಯಂತ ಕಾದಿರ್ದರಾ ಬಾಲನ |
ಶ್ರೀಪತಿಯು ಮನೆಗೆ ತಾ ಬಾರದಿರಲು ಯಶೋದೆ |
ತಾಪವನು ನೆರೆತಾಳಿ ಮಗನೆಲ್ಲಿ ಪೋದನೆಂ |
ದಾ ಪುರದ ಕೇರಿಯೊಳಗರಸಿದಳು ಶ್ರೀಹರಿಯ ಗುಣರೂಪಮಂ ಪೊಗಳುತ || ||೧೫೯||

**ರಾಗ ರೇಗುಪ್ತಿ ಅಷ್ಟತಾಳ**

ರಂಗ ಬಂದನೇ | ಪಾಂಡು | ರಂಗ ಬಂದನೆ |
ರಂಗು ಮಾಣಿಕದ ಹರಳ | ಉಂಗುರದ ಕಯ್ಯ ಬೆರಳ || ಪಲ್ಲವಿ ||

ಸಿರಿಯ ಸೋಲ್ಮುಡಿಯ ಸೌಂ | ದರ್ಯ ಪುಷ್ಪಮಾಲೆಯ |
ಧರಿಸಿ ಕುಂಕುಮವ ಕ | ಸ್ತುರಿಯ ನಾಮ ಹಣೆಯೊಳಿಟ್ಟು || ರಂಗ ||೧೬೦||

ಕೊರಳ ಕೌಸ್ತುಭ ಹಾರ | ಮೆರೆವ ಕರ್ಣಕುಂಡಲದ |
ಕರದಿ ಕಂಕಣ ಪೀತಾಂ | ಬರದುಡಿಗೆಯನುಟ್ಟು || ರಂಗ ||೧೬೧||

ಉರದೊಳೊಪ್ಪುದ ರತ್ನ | ಸರ ವೈಜಯಂತೀಮಾಲೆ |
ಕರದಿ ಕೊಳಲ ಪಿಡಿದ ಕಣ್ವಪುರದ ಗೋಪಾಲಕೃಷ್ಣ ||೧೬೨||

**ಕಂದ**

ತಂದರೆ ಮಾಳ್ಪೆ ವಿಚಾರವ |
ನೆಂದಾಡಿದ ಮಾತಿಗಾಗಿ ಗೋಪಿಯರಾಗಳ್ ||
ವಂದಿಸಿ ಸಿಕ್ಕಿಹ ನಿನ್ನಯ |
ಕಂದಗೆ ನೀಂ ಬುದ್ಧಿ ಹೇಳೆನುತ್ತಿಂತೆಂದರ್ || ||೨೬೩||

**ರಾಗ ಭೈರವಿ ಏಕತಾಳ**

ಗೋಪಮ್ಮ | ನಿಮ್ಮ | ಕಂದನ ಕಳ್ಳ ಚಾಡಿಯ ಬಿಡಿಸೇ | ಬೇಡ |
ವೆಂದೊಡಂಬಡಿಸೇ | ದಯ | ದಿಂದ ನಮ್ಮೆಲ್ಲರ ನಡೆಸೇ | ಬೇ |
ಕೆಂಬ ವಸ್ತುಗಳೆಲ್ಲ ಕೊಡಿಸೆ || ಗೋಪಮ್ಮ || ಪಲ್ಲವಿ ||

ಸುಳ್ಳು ಮಾತಾಡುವಿರಿ ನೀವೆಂದೆ | ಗೋಪಾಲಕೃಷ್ಣ | ಒಳ್ಳೆಯವನೆಂದೆ | ಗುಣದಿ ಹಿಂದೆ |
ದಯ | ಉಳ್ಳಡಿನ್ನಾದರು ಮುಂದೆ | ಇಕೊ | ಕಳ್ಳನ ಒಪ್ಪಿಸಿದೆವು ಇಂದೆ |
ಸಟೆ | ಯಲ್ಲ ಕೈ ಮುಗಿದು ಬೇಡುವದೊಂದೆ || ಗೋಪಮ್ಮ ||೨೬೪||

ಬೆಳಗು ಜಾವದಲಿ ಮೆಲ್ಲಗೆ ಬಂದ | ದಂಪತಿಗಳು ಕೋಣೆ | ಯೊಳಗೆ ಮಲಗಿರೆ ನಾಚಿಕೆಗೊಂಡ |
ನಮ | ಗಳವಲ್ಲ ಪೇಳಲ್ಕಾ ಭಂಡ | ನೋಡ | ಲಿಳೆಯೊಳಗೀತನು ಬಲು ಪುಂಡ |
ಮುದ | ದೊಳ ನಗುತಿರುವನು ದೇವ ಮುಕುಂದ || ಗೋಪಮ್ಮ ||೨೬೫||

**ರಾಗ ಧನಾಸರಿ – ಅಷ್ಟತಾಳ**

ಲಾಲಿಸು | ಮಾತ | ಲಾಲಿಸು || ಪಲ್ಲವಿ ||

ಮೂಲೋಕದೊಡೆಯನ ಮಹಿಮೆಯ ಕಿವಿಗೊಟ್ಟು || ಲಾಲಿಸು || ಅನು ಪಲ್ಲವಿ ||

ಕಾರೆಂಬ ಕತ್ತಲೆ ಕವಿಯಲು ದಶದಿಕ್ಕು | ಭೋರೆಂದು ಮಳೆ ಹೊವುತಿರಲಾಗ |
ಶ್ವೇತ | ದ್ವಾರದೊಳಾಲಿವಿಂಡಿಗೆ ಬೇಗ | ಕಳಚಿ | ದಾರಿಯಾಯಿತು ಶೌರಿ ಬರುವಾಗ |
ಕಾಣುತಿರುವಾಗ | ಕಾವಲವರಾಗ | ನಿದ್ರೆ | ಭಾರಿಸಲೆಚ್ಚರಿಲ್ಲದ ಯೋಗ | ಸೂತ್ರ |
ಧಾರಿಯ ಮಹಿಮೆಯಿಂದಲಿ ಬೇಗ || ಲಾಲಿಸು ||೧೪೨||

ಒಡೆಯ ಕೋಪಿಸಬಾರದೆನುತ ಪನ್ನಗರಾಜ | ನಡುವಿರುಳಿನೊಳೆದ್ದು ಬಂದನು |
ಮಳೆ | ಹೊಡೆಯಲಂಜುವುದನ್ನು ಕಂಡನು | ತನ್ನ | ಪೆಡೆಯನಂಬರಕೆತ್ತಿ ನಿಂದನು |
ಮಾಣಿಕ್ಯಗಳನು | ಪ್ರಕಾಶಗಳನು | ತೋರ | ಲಡಿಯಿಡುತಲೆ ನಡೆತಂದನು | ಭೋ |
ರ್ಗುಡಿಸುವ ಯಮುನೆಯ ಕಂಡನು || ಲಾಲಿಸು ||೧೪೩||

ಬಂದು ತನ್ನಯ್ಯಗೆ ತಾ ಕೈಯೆ ಮುಗಿಯ ಬೇ | ಕೆಂದಾಗ ಮನದಿ ಯೋಚಿಸಿದಳು |
ಭಕ್ತಿ | ಯಿಂದಲಾಕ್ಷಣವೆದ್ದು ನಿಂದಳು | ಮುದ | ದಿಂದ ಪೋಗಲು ದಾರಿ ಕೊಟ್ಟಳು |

ದಾಟಿ ಜವದೊಳು | ಬರೆ ಪಥದೊಳು | ದೂರ | ದಿಂದ ಗೋಕುಲದ ವೈಭವಗಳು | ಕಣ್ಗೆ |
ಮುಂದೆ ಕಾಣಿಸಲತಿ ಭಯದೊಳು || ಲಾಲಿಸು ||೧೪೪||

ಪೊತ್ತುಕೊಂಡಿರ್ದ ಗೋವಿಂದನ ವಸುದೇವ | ನತ್ತುಕೊಳುತ ತಗ್ಗಿಗಿರಿಸಿದ |
ಕೈಯೊ | ಳೆತ್ತಿ ಮಾಯಾಂಗಿಯ ಧರಿಸಿದ | ಕಾ | ಱುತ್ತಲಿ ಮನದಿ ಕಾತರಿಸಿದ |
ಪಿಂತಿರುಗಿದಾ | ಸೆರೆ ನಿಲಯದ | ಬಳಿ | ನಿತ್ತೊಳ ಪೊಗಲು ಮುಚ್ಚಿತು ಕದ | ಕಾಲಿ |
ಗೊತ್ತೆ ಸಂಕಲೆ ಪೇಳಲೇನದ || ಲಾಲಿಸು ||೧೪೫||

**ರಾಗ ಸೌರಾಷ್ಟ್ರ – ತ್ರಿವುಡೆತಾಳ**

ಕೇಳು ಭೂವರ ಬಳಿಕ ಮಾಯಾ | ಬಾಲಕಿಯು ಬಲು ತೆರದಿ ಚೀರಿದ |
ಳಾಲಯದಿ ಹೊರಗಿರ್ದ ಖಳನದ | ನಾಲಿಸುತಲಿ ||೧೪೬||

ಪುಟ್ಟಿದನು ಪಗೆಯೆಂದು ಮನದಲಿ | ಬಿಟ್ಟ ಮಂಡೆಯೊಳೊದರಿ ಬಲು ಬುಸು |
ಗುಟ್ಟುತೇಳುತ ಬೀಳುತಲೆ ಕಂ | ಗೆಟ್ಟು ಭರದಿ ||೧೪೭||

ತಡವುತೆಡಹುತ ಬಂದು ಬಾಗಿಲ | ನೊಡೆದು ಹುಂಕರಿಸುತ್ತ ಶಿಶುವನು |
ಕೊಡು ಕೊಡೆನುತಾರ್ಭಟಿಸಿನಿಂದನು | ಘುಡು ಘುಡಿಸುತ ||೧೪೮||

ಕಂಡು ದೇವಕಿ ಮನದೊಳಗೆ ಭಯ | ಗೊಂಡಳುತ ಬಾಲಕಿಯನಪ್ಪುತ |
ದಂಡದಂತೆರಗುತ್ತ ಪೇಳಿದ | ಳಂಡಲೆವುತ ||೧೪೯||

**ರಾಗ ನೀಲಾಂಬರಿ ತ್ರಿವುಡೆತಾಳ**

ಅಣ್ಣಯ್ಯ ಕೊಲ್ಲಬೇಡ | ಕಡೆಯೊಳೊಂದು | ಹೆಣ್ಣು ಪುಟ್ಟಿಹುದು ನೋಡ ||
ಪುಣ್ಯವಂತನೆ ನಿನ್ನ ಸೊಸೆಯೆಂದೆನಿಸುತೆನ್ನ | ಕಣ್ಣ ಮುಂದಿರಲೋರ್ವಳು | ದಯಾಳು ||೧೫೦||

ಅಶರೀರವಾಣಿಯಂದು | ಎನ್ನೆಂಟನೆ | ಬಸುರಿನ ಮಗನು ಬಂದು ||
ಕುಸುರಿದರಿವನೆನುತುಸುರಿ ಜಾರಿದ ಮಾತು | ಪುಸಿಯಾಯಿತಲ್ಲ ನೋಡು || ದಯಮಾಡು ||೧೫೧||

ಪಡೆದ ಬಾಲಕರನೆಲ್ಲ | ಬರಿದೆ ಕೊಂದೆ | ಕಡೆಗೆ ಹೆಣ್ಣುದಿಸಿತಲ್ಲ ||
ಕಡುಪಾಪಿ ತಾನೈಸೆ ನುಡಿದಿನ್ನು ಫಲವೇನು | ಹುಡುಗಿಯನುಳುಹಿಸಯ್ಯ || ದಮ್ಮಯ್ಯ ||೧೫೨||

**ವಾರ್ಧಕ**

ಹಲವು ಪರಿಯಲಿ ಬೇಡಿಕೊಳೆ ಕೇಳದಾ ಶಿಶುವ |
ಸೆಳೆದು ಕಾಲೆರಡ ಪಿಡಿದಪ್ಪಳಿಪೆನೆನಲೆದೆಯ |
ತುಳಿದು ಚಿಗಿದಂಬರದೊಳಷ್ಟಭುಜೆಯಾಗಿ ತಾ ಖಳನ ಜರೆದಿಂತೆಂದಳು ||
ಎಲೆ ಪಾಪಿ ಕೇಳು ನೀನೆನ್ನ ಕೊಲುವುದಕೆ ಗಂ |

ಟಲೊಳಿಳಿವ ತುತ್ತಲ್ಲ ನಿನ್ನರಿಪು ಧಾತ್ರಿಯಲಿ |
ಬಳೆವುತಿರುವನು ಕೊಲ್ಲದಿರನೆಂದು ಪೇಳಲಿಂತೆಂಬ ನುಡಿ ಕೇಳಿಸಿದುದು || ||೧೫೩||

**ರಾಗ ಭೈರವಿ ಝಂಪೆತಾಳ**

ಚಂಡಿಕೆಯ ನುಡಿಗೆ ಭ್ರಮೆ | ಗೊಂಡು ಬಳಿಕಾ ದೈತ್ಯ |
ಮಂಡೆಯನು ಬಡಿದಂತೆ | ಮನಕಾಯ್ತು ಚಿಂತೆ ||೧೫೪||

ಋಷಿ ನಾರದನ ಮಾತು | ಪುಸಿಯಾಯ್ತು ವ್ಯರ್ಥ ದಂ |
ಡಿಸಿದೆ ತಂಗಿಯನು ರಿಪು | ವಶವಾಗಲಿಲ್ಲ ||೧೫೫||

ನಾನು ಮನದೊಳು ನೆನೆದು | ದೊಂದಾಯ್ತು ದೈವಗತಿ |
ತಾನೊಂದನೆಣಿಸಿತಿದ | ಕೇನು ಗತಿ ಮುಂದೆ ||೧೫೬||

ಎನ್ನ ಪ್ರಾಣವ ಕಳೆವ | ಚಿಣ್ಣನನು ಹಿಡಿವುದಕೆ |
ಕನ್ನಡಿಯ ಗಂಟಾಯ್ತು | ಕೈ ತಪ್ಪಿ ಹೋಯ್ತು ||೧೫೭||

ಇಳೆಯೊಳಗೆ ಬೆಳೆದ ಮ | ಕ್ಕಳನೆಲ್ಲ ಕೊಲಿರೆನುತ |
ಖಳರಿಗಪ್ಪಣೆಯಿತ್ತು | ಕಂಸ ಕೋಪಿಸುತ ||೧೫೮||

**ಕಂದ**

ಹಿಂದವಗುಣವಾಯ್ತೆನುತಲೆ |
ಬಂಧನವಂ ಬಿಡಿಸಿ ತೆಗೆಸಿ ಕಾವಲನಾಗಳ್ ||
ಮುಂದಿರಿ ಸುಖದೊಳಗೆನುತಂ |
ಚಂದದಿ ದಂಪತಿಯರನುಪಚರಿಸಿದ ಕಂಸಂ || ||೧೫೯||

**ರಾಗ ಕಾಂಭೋಜಿ ಝಂಪೆತಾಳ**

ಬಂದು ಮನೆಯೊಳು ಕುಳಿತು ಖಳ ದುಷ್ಟ ಮಂತ್ರಿಗಳೊ |
ಳೆಂದನಿರುಳಾದ ಸಂಗತಿಯ ||
ಮುಂದೇನುಪಾಯ ಕಂಡಿರಿ ನೀವೆನಲು ನುಡಿದ |
ರಂದವರು ಜಳಪಿಸುತ್ತಸಿಯ ||೧೬೦||

ಜೀಯ ಚಿಂತಿಪುದೇಕೆ ಸಿಕ್ಕನಾ ವಿಷ್ಣು ಬಲು |
ಮಾಯಾವಿಯಾಗಲದಕೇನು ||
ನೋಯಿಸದೆ ಕೊಲ್ಲುವ ಉಪಾಯನಮ್ಮೊಳಗುಂಟು |
ಬಾಯ ಬಿಡದಿರು ಬರಿದೆ ನೀನು ||೧೬೧||

ಪೊಡವಿಯೊಳು ಗೋದ್ವಿಜರ ಬಡಿದು ಶಿಶುಗಳ ತರಿದು |
ತಡೆಯದೆಜ್ಞಾದಿ ಕರ್ಮಗಳ ||
ಕೆಡಿಸಿದರೆ ತಾಳಲಾರದೆ ಬರುವನವನೆಂದು |
ನುಡಿದರವರತಿ ಪೌರುಷಗಳ ||೧೬೨||

**ವಾರ್ಧಕ**

ಅಹುದು ತಪ್ಪಲ್ಲವೀ ನುಡಿಯೆಂದೊಡಂಬಡುತ |
ಲಹಿತನನು ಕೊಲ್ವದೀ ತೆರದಿಂದಲೆಂದವರ |
ವಿಹಿತ ಸಂತೋಷದಿಂ ಬೀಳ್ಕೊಟ್ಟು ಕಂಸನಿರಲತ್ತಲಾ ಗೋಕುಲದಲಿ ||
ಮಹಿಳೆಯರ್ಬರುತಳುವ ಬಾಲನಂ ಕಾಣುತ್ತ |
ಲಹಹ ಸಿರಿವಂತೆ ನಮ್ಮೊಡತಿಯೆಂಬೊಸಗೆಯಂ |
ಬಹಳ ಸಂಭ್ರಮದಿಂದ ನಂದಗುಸುರಲ್ಕೇಳುತತಿ ಸಂತಸಂಬಟ್ಟನು || ||೧೬೩||

**ದ್ವಿಪದಿ**

ಇಂತೆನೆ ಮಹೋತ್ಸವದಿ ದಾನಗಳನಿತ್ತು |
ಅಂತರಂಗದಿ ನಂದಗೋಪಮುದವೆತ್ತು ||೧೬೪||

ಪುರಜನವ ಪರಿಜನವ ಮನ್ನಿಸುತಲಾಗ |
ಹರುಷದಲಿ ಜೋಯಿಸರ ಕರೆಸಿದನು ಬೇಗ ||೧೬೫||

ತನುಜನುದಿಸಿದ ವೇಳ್ಯವೆಂತೆನಲಿಕವರು |
ಗುಣಿಸಿ ನೋಡುತಲೆಂದರಧಿಕ ಕೋವಿದರು ||೧೬೬||

ನಂದ ಲಾಲಿಸು ನಿನ್ನ ಮಗನು ಲೋಕದಲಿ |
ಇಂದಿರಾಧವನಂತೆ ಮೆರೆವ ಗುಣಗಳಲಿ ||೧೬೭||

ಎನಲು ಕೇಳುತ ಸಕಲವುಡುಗರೆಯನಿತ್ತು |
ವಿನಯದಿಂ ಕಳುಹಿದನು ಘನ ಹರುಷವೆತ್ತು ||೧೬೮||

**ಭಾಮಿನಿ**

ನಂದಗೋಪನು ತನಯನುದಿಸಿದ |
ನೆಂದು ಸಂತೋಷದಲಿ ಧನಪಶು |
ವೃಂದವಿತ್ತನು ಧರಣಿಸುರರಿಂಗಪರಿಮಿತವಾಗಿ ||
ಬಂದರಾ ಯಾಚಕರು ಮಧುರೆಗೆ |
ಮಂದಮತಿ ಖಳ ಕೇಳಿ ತಾ ಭಯ |
ದಿಂದ ಪೂತನೆಯೆಂಬ ದಾನವಿಯೊಡನೆ ತಾನೆಂದ || ||೧೬೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರಿಯು ತನ್ನನು ಕೊಲ್ವೆನೆಂದವ | ತರಿಸಿದನು ಭೂತಳದೊಳೆಂದೆನ |
ಗರುಹಿದಳು ಚಂಡಿಕೆಯು ಚಿಗಿದಂ | ಬರದಿ ನಿಂತು ||೧೭೦||

ವಿಷದ ಮೊಲೆಯನು ಕೊಟ್ಟು ಲೋಕದ | ಶಿಶುಗಳನು ಸಂಹರಿಸಿ ಪೋಗೆಂ |
ದಸುರ ನೇಮಿಸಿ ಕಳುಹಿಸಿದನು ರಾ | ಕ್ಷಸಿಯ ಭರದಿ ||೧೭೧||

**ರಾಗ ಭೈರವಿ ತ್ರಿವುಡೆತಾಳ**

ಬಂದಳಾಗ | ಪೂತನೆ | ಬಂದಳಾಗ || ಪಲ್ಲವಿ ||

ಮಂದಮತಿ ಕಂಸಾಖ್ಯನಾಜ್ಞೆಯೊ |
ಳಂದು ಶಿಶುಗಳ ಕೊಂದು ಕೂಗುತ | ಬಂದಳಾಗ || ಅನುಪಲ್ಲವಿ ||

ಅಸುರಭಾವವ ಮರೆಸಿ ನಡುವಿನೊ | ಳೆಸೆವ ಸೀರೆಯನುಟ್ಟಳು |
ಬಿಸಜಕೋರಕ ಕುಚಕೆ ಕುಪ್ಪಸ | ಹೊಸೆದು ಹೊಂದಿಸಿ ತೊಟ್ಟಳು |
ನೊಸಲಿಗಮರುವ ದಿವ್ಯ ಕಸ್ತುರಿ | ಎಸೆವ ನಾಮವನಿಟ್ಟಳು |
ಕುಸುಮಶರನರಗಿಣಿಯ ಭಾವದೊ | ಳೊಸಗೆ ಮಿಗೆ ರಂಜಿಸುತ ಬೇಗದಿ ||
ಬಂದಳಾಗ || ||೧೭೨||

**ರಾಗ ಸೌರಾಷ್ಟ್ರ – ತ್ರಿವುಡೆತಾಳ**

ವನಿತೆಯರ ಸಂಗಡದಿ ನಂದನ | ಮನೆಗೆ ಬಂದಳು ದುಷ್ಟಪೂತನೆ |
ಘನಪರಾಕ್ರಮದಿಂದ ಕೃಷ್ಣನ | ಕೊಲುವೆನೆಂದು ||೧೭೩||

ಮರೆತು ಮಲಗಿಹ ಹರಿಯ ರಾಕ್ಷಸಿ | ಎರಡು ಕೈಯಲಿ ನೆಗಹಿ ಗರಳವ |
ಸುರಿವ ಮೊಲೆಯನು ಬಾಯಿಗಿಟ್ಟಳು | ಮರುಳುತನದಿ ||೧೭೪||

ಲೋಕ ಶಿಶುಗಳ ಕೊಂದ ಮೊಲೆಯನು | ತಾ ಕರಾಗ್ರದಿ ಪಿಡಿದು ಬಾಯ್ಗಿಡ |
ಲೌಕಿ ಪಲ್ಲಿನೊಳೆಳೆವುತುಂಡನು | ಲೋಕನಾಥ ||೧೭೫||

**ರಾಗ ಕಾಂಭೋಜಿ ಝಂಪೆತಾಳ**

ಸೋಕಿದರೆ ಮೈಯೊಡೆವ ವಿಷವಕಟ ಬಾಯಿಂದ | ಲಾಕಳಿಸುತುಗುಳುತೆಳೆದೆಳೆದು ||
ಆ ಕುಟಿಲೆಯಂಗರಕುತವ ಹೀರಿ ಬಿಡಲು ಪರಿ | ದೋಕುಳಿಯ ತೆರದಿ
ತೋರಿದುದು || ||೧೭೬||

**ರಾಗ ಕಮಾಚು ಏಕತಾಳ**

ಬಿಡು ಕಂದ ಬಿಡು ಕಂದ | ಒಂದೇ ಕ್ಷಣ ಮಾತ್ರ | ಬಿಡು ಕಂದ ಬಿಡು ಕಂದ  || ಪಲ್ಲವಿ ||
ನಮ್ಮಯ ಕಂದನಿ | ಗಿಮ್ಮಡಿ ನೀನೇ |
ಭಿಮ್ಮೆಣಿಸುವೆ ಸೈ | ದಮ್ಮಯ್ಯ ಕೊಲದಿರು || ಬಿಡು ಕಂದ ||೧೭೭||

ತೊತ್ತಾಗುವೆ ಕಣ್ | ಗತ್ತಲೆ ಬರುತಿದೆ |
ವೃತ್ತ ಕುಚಂಗಳು | ಬತ್ತಿದವೆನ್ನಯ || ಬಿಡು ಕಂದ ||೧೭೮||

ಒರಗಿಸದಿರು ಕರಿ | ವರದ ವೆಂಕಟಗಿರಿ |
ಯರಸನೆ ನಿನಗಾಂ | ಕರಗಳ ಮುಗಿವೆನು || ಬಿಡು ಕಂದ ||೧೭೯||

**ರಾಗ ಕಾಂಭೋಜಿ – ಝಂಪೆತಾಳ**

ಥೀ ಕುವರ ಬಿಡು ಸಾಕೆನುತ್ತೆರಡು ಕೈಯಿಂದ | ನೂಕಿದರೆ ಬಿಡದಡರುತುಣಲು ||
ನಾ ಕೆಟ್ಟೆನೆಂದೆನುತ ಬಾಯಾರಿ ಬಸವಳಿದು | ಭೀಕರಾಕೃತಿಯ ತೋರಿದಳು ||೧೮೦||

ಮಗುವಲ್ಲವಿದು ಮಾರಿ ಎನುತ ನಿಷ್ಠುರದಬ್ಬ | ರಗಳಿಂದ ಬಾಯ್ ಬಿಡುತ ಕೂಗಿ ||
ಮಿಗೆ ಬಿದ್ದಳಸುರೆ ತಾನೈದು ಯೋಜನದುದ್ದ | ದಗಲದಲಿ ನಗರಕಿದಿರಾಗಿ ||೧೮೧||

ಒಡಲು ಬೀಳ್ವಾಗ ಪುರಸೌಧ ಗೋಪುರವೆಲ್ಲ | ಪುಡಿಯಾಯ್ತನೇಕ ಪಟ್ಟಣದಿ ||
ಬುಡತುದಿಯ ನೋಡಿದರೆ ನೀಲಾದ್ರಿಯಂತೆ ಭಯ | ಪಡಿಸಿದಳು ನಂದ ಗೋಕುಲದಿ ||೧೮೨||

ಮಡದಿಯರು ಬಂದಾ ಯಶೋದೆಗುಸುರಲು ಕೇಳಿ | ನಡೆತಂದು ರಾಕ್ಷಸಿಯ ಮೇಲೆ ||
ಅಡರಿದಣುಗನ ತನ್ನ ಮನೆಗೊದಳಾಗ ನಡ | ನಡುಗಿ ಭೀತಿಯೊಳಾ ಸುಶೀಲೆ ||೧೮೩||

**ಕಂದ**

ಭರದಿಂ ಮನೆಗೊಯ್ದಣುಗನ |
ಕರಸಲ್ಕಂದೊಡನೆ ವಿಷದ ಗಾರುಡಿಗರನುಂ ||
ಉರಗಾಧಿಪಶಯನಗೆ ಚ |
ಚ್ಚರದೊಳ್ ಮಂತ್ರಿಸುತ ಸೊಪ್ಪ ನಿಕ್ಕಿದರಾಗಳ್ || ||೧೮೪||

**ರಾಗ ಪಂತುವರಾಳಿ ಅಷ್ಟತಾಳ**

ಸೊಪ್ಪನಿಕ್ಕಿದರು ಗಾರುಡಿಗರು | ಶೇಷ |
ತಲ್ಪಗೆ ವಿಷ ತಲೆಗೇರಿತೆಂದೆನುತ || ಸೊಪ್ಪ  || ಪಲ್ಲ ||

ವಿಷವ ಭುಂಜಿಸುವನ ಮೇಲೇರಿ ಬಪ್ಪಗೆ |
ವಿಷಕಂಧರನ ಮಿತ್ರ ಮಾಧವಗೆ ||

ವಿಷವ ತೊಡೆದು ಮೊಲೆಯುಣ್ಣನೆನುತಲನಿ |
ಮಿಷರು ವಂದಿಸುವಂತ ಪಾದ ಸರೋಜಗೆ || ಸೊಪ್ಪ ||೧೮೫||

ಕಣ್ಣು ಕೈ ಕಾಲಾಡಿತಿನ್ನು ಯಶೋದೆಯ |
ಪುಣ್ಯದಿಂದುಳಿಯಿತು ಶಿಶುವೆನುತ ||
ಕಣ್ವಪುರದಿ ನಿಂತ ಶ್ರೀಕೃಷ್ಣ ಕರುಣಾಳು |
ಚೆನ್ನಾಗಿ ಸುಖದಿಂದ ಬಾಳಿರೆಂದೆನುತಲಿ || ಸೊಪ್ಪ ||೧೮೬||

**ವಾರ್ಧಕ**

ಘೋರ ಪೂತನಿಯ ಕೊಂದಾ ಮೇಲೆ ಶಕಟನ ಶ |
ರೀರ ವಡಗಿಸುತ ಯಮಳಾರ್ಜುನರ ಭಂಗಿಸುತ |
ವೀರ ತೃಣವರ್ತಧೇನುಕ ವತ್ಸವವಿದರಂ ಸೇರಿಸಿದ ಯಮನ ಪುರಕೆ ||
ಶ್ರೀರಮಣ ಕೃಷ್ಣ ಬಲರಾಮರೆಂದಿಬ್ಬರಿಗೆ |
ಚಾರುನಾಮವನಿರಿಸಿ ನಂದಗೋಪನಸತ್ಕು |
ಮಾರರನು ತೊಟ್ಟಿಲೊಳ ಗಿಟ್ಟು ಪಾಡಿದರಾಗ ನಾರಿಯರು ಸಂಭ್ರಮದೊಳು || ||೧೮೭||

**ರಾಗ ಮಧ್ಯಮಾವತಿ ಅಷ್ಟತಾಳ**

ಗೋಕುಲದೊಳಗುಳ್ಳ ಗೋಪನಾರಿಯರ |
ರಾಕೇಂದು ನಿಭಮುಖ ಕರೆದು ಮನ್ನಿಸುತ ||
ಆ ಕೀರವಾಣಿಯರೊಡನೆ ಯಶೋದೆ |
ಶ್ರೀಕೃಷ್ಣರೆನ್ನಿರೆ ನೀರೆಯರೆನುತ || ಜೋಜೋ ||೧೮೮||

ಉನ್ನತ ನವರತ್ನ ಮಂಟಪದೊಳಗೆ |
ಸನ್ನುತಾಂಗಿಯರತಿ ಸಂತಸದೊಳಗೆ ||
ಚೆನ್ನದ ಮಿಣಿಗಳ ಕಟ್ಟಿಯಶೋದೆ |
ರನ್ನದ ತೊಟ್ಟಿಲೊಳ್ ಶಿಶುವ ತಂದಿರಿಸಿ | ಜೋ ಜೋ ||೧೮೯||

ಜೋಜೋ ಜೋ ದೇವ ಸಚ್ಚಿದಾನಂದ |
ಜೋಜೋ ದೇವಾದಿ ದೇವ ಮುಕುಂದ ||
ಜೋಜೋಜೋ ಗೋಪಗೋಪಿಯ ಕಂದ |
ಜೋಜೋಜೋ ಗೋಪ ಕೃಷ್ಣ ಗೋವಿಂದ || ಜೋಜೋ ||೧೯೦||

**ಭಾಮಿನಿ**

ಇಂತು ಗೋವಿಂದನನು ತೂಗಿದ |
ಕಾಂತೆಯರ ಮನ್ನಿಸಿ ಯಶೋದೆ ಮ |

ಹಾಂತ ವಿಭವದೊಳಣುಗರನು ಸಲಹುತ್ತಲಿರುತಿರಲು ||
ಚಿಂತಿತಾರ್ಥಪ್ರದನು ತಾನೆಂ |
ಬಂತೆ ಗೋಕುಲ ವಾಸಿಗಳಿಗ |
ತ್ಯಂತ ಮಹಿಮೆಯ ತೋರುತಿರ್ದನು ಬಾಲಲೀಲೆಯಲಿ ||೧೯೧||

**ರಾಗ ಭೈರವಿ ಝಂಪೆತಾಳ**

ಬಾಲರುಡಿಗೆಗಳುಟ್ಟು | ಬಂಗಾರಗಳ ತೊಟ್ಟು |
ಕಾಲೊಳಾಡುತ ಬರುವ ಕಾಣಲತಿ ಚೆಲುವ ||೧೯೨||

ನಡೆವುದನು ಕಲಿಸುವರು | ನಂದನರ ಕೈ ಪಿಡಿದು |
ನುಡಿಯುವರೆ ಕಲಿಸುವರು ನಟನಗಾರರಿಗೆ ||೧೯೩||

ಅಂಬೆಗಾಲಿಕ್ಕುತಂಗಳದೊಳಗೆ ಕುಣಿದಾಡಿ |
ಬೆಂಬಿಡದೆ ನಡೆಯುವರು ಬೀಳುತಡಿಗಡಿಗೆ ||೧೯೪||

**ಬಾಲಲೀಲೆ**

**ವಾರ್ಧಕ**

ಮೆಲ್ಲ ಮೆಲ್ಲಡಿಯಿಡುತ ಪಶುಪಾಲಕರ ಸ್ನೇಹ |
ದಲ್ಲಿ ಗೋವ್ಗಳ ಮೇಯಿಸುತ್ತ ಬಹರನವರತ |
ಎಲ್ಲಿ ಮುಳ್ಬೇಲಿ ಹಾವ್ಚೇಳುಗಳ ನಿಕರವಿದ್ದಲ್ಲಿಗೊದಗುವರು ಬಿಡದೆ ||
ಬಲ್ಲತನದಿಂ ಗೋಪಿಯರ್ಮೊಸರ ಗಡಿಗೆಗಳ |
ಉಲ್ಲಾಸದಿಂ ಪೊತ್ತುಕೊಂಡು ಪುರಬೀದಿಯೊಳ
ಗಲ್ಲಲ್ಲಿ ಮಾರುತ್ತೈತಂದರೊಂದು ದಿನ ಪುರದಂಗಡಿಯ ಬಾಗಿಲೊಳಗೆ || ||೧೯೫||

**ರಾಗ ಪಂತುವರಾಳಿ ಏಕತಾಳ**

ಮೊಸರ ತೆಕ್ಕೊಳ್ಳಿರವ್ವಾ | ಮಾನಿನಿಯರು | ಮೊಸರ ತೆಕ್ಕೊಳ್ಳಿರವ್ವ |..
ಪಶುಗಳ ಕರೆದು ಹಾಲಿಗೆ ಹೆಪ್ಪುಕೊಟ್ಟ ಅಚ್ಚ-ಕೆನೆ ||
ಮೊಸರ ತೆಕ್ಕೊಳ್ಳಿರವ್ವ ||೧೯೬||

ನಂದನ ಮನೆಯ ಬಾಗಿ | ಲಿಂದೋಡುತ ಸಣ್ಣ
ಕಂದನು ಬರುವ ಮಂದಗಮನೆಯರ ಆ |
ನಂದವ ಕಂಡು ಸುರಿದ ನಿವನ್ಯಾವ | ನೆಂದು ಭ್ರಮಿಸುತಿರೆ |
ಬಂದು ಸುಂಕಗಾರನು ತಾ | ನೆಂದು ತಡೆದು ನಿಲ್ಲಿಸಿ ಪೇಳ್ದ ||೧೯೭||

**ರಾಗ ಕಲ್ಯಾಣಿ ಅಷ್ಟತಾಳ**

ಕೊಟ್ಟು ಪೋಗೆನ್ನ ಸುಂಕವ | ಕಣ್ಣ | ಬಿಟ್ಟರಂಜುವನಲ್ಲ | ದಿಟ್ಟ ಹೆಂಗಳಿರ || ಕೊಟ್ಟು || ಪ ||

ಕುಂಭಿನಿಯೊಳಗೆ ಈ ನಂದಗೋಕುಲದಲ್ಲಿ |
ಒಂಭತ್ತು ಕಡೆಯಲ್ಲಿ ಠಾಣ್ಯವುಂಟು |
ಒಂಭತ್ತು ಕಡೆಯೊಳು | ತೊಂಭತ್ತು ಸರತಿಗೆ |
ಡೊಂಬಿಗೆ ಹೋಗುವ ಜಂಭರವಾಯ್ತೆ || ಕೊಟ್ಟು ||೯೮||

**ರಾಗ ಪೂರ್ವಿ ಅಷ್ಟತಾಳ**

ಸುಂಕದ ನಿಜವೇನು ಪೇಳು | ನಿನ್ನ | ಅಂಕೆಗೆ ನಾವಂಜುವವರಲ್ಲ ಕೇಳು || ಸುಂಕದ || ಪ ||

ಬೆಣ್ಣೆ ಮಣವಿಗೊಂದು ತಾರ | ಮೂರು
ಹೊನ್ನು ಮೊಸರ ಭಾರಕಹುದು ನೀವಿದರ |
ಮನ್ನಿಸದಿರೆ ನಿಮ್ಮೆಲ್ಲವರ | ಮನೆ |
ಯನ್ನೊಳ ಪೊಕ್ಕು ಸೆಳಗೊಂಬೆ ಪಾಲ್ಮೊಸರ || ಸುಂಕದ ||೯೯||

ನಂದಗೋಪನ ಸುಕುಮಾರ | ಸಣ್ಣ |
ಕಂದ ನಿನಗಿದ್ಯಾತಕಿನಿತು ವಿಚಾರ |
ಮುಂದೆಮ್ಮ ತಡದರಿದರ | ನಿನ್ನ |
ತಂದೆ ತಾಯ್ ಬಳಿಗೈದು ಪೇಳ್ವೆವು ದೂರ || ಸುಂಕದ ||೧೦೦||

**ಕಂದ**

ಶಶಿವದನೆಯರಿಂತೈದಿಯೆ |
ಮೊಸರಂ ಮರ್ದಿಸುತಲಿಪ್ಪಾ ವೇಳ್ಯದಿ ಬಂದಾ |
ವಸುದೇವಾತ್ಮಜ ತಾ ಕಾ |
ಣಿಸಿಕೊಳ್ಳದ ತೆರದಿ ಕದ್ದು ಮೆದ್ದೈತಂದಂ || ||೧೦೧||

**ರಾಗ ಶಂಕರಾಭರಣ ಅಷ್ಟತಾಳ**

ಯಾರೆ ಬಂದವರು | ಇಲ್ಲಿಗೆ ಕಳ್ಳ | ರ್‍ಯಾರೆ ಬಂದವರು |
ಸೋರೆಯ ಮೊಸರು ಬೆಣ್ಣೆಯ ತಿಂಬುತೋಡಿದ | ರ್‍ಯಾರೆ ಬಂದವರು || ಪ ||

ಸಿಕ್ಕದೊಳಿರಿಸಿದ ಮಡಕೆಗಳೊಳಗೆ ಕಾ | ಡ್ಬೆಕ್ಕಿನ ಹಾಗೆಲ್ಲ ಹುಡುಕಾಡುತ್ತ |
ಅಕ್ಕನವರು ಭಾವಗೆಂದು ಕಟ್ಟಿರಿಸಿದ | ಸಕ್ಕರೆ ಜೇನು ತುಪ್ಪವ ತಿಂಬುತೋಡಿದ || ಯಾರೆ ||೧೦೨||

ಸುತ್ತಲು ಚಾವಡಿಯೊಳು ಮಲಗಿರುವಾಗ | ಹಿತ್ತಿಲ ಬಾಗಿಲಿಂದೊಳಗೆ ಬಂದು |
ಅತ್ತೆಯು ಮಲಗಿ ನಿದ್ರಿಸಲಾಕೆ ಕೊರಳಿಂದ | ಮುತ್ತಿನ ಸರವನ್ನು ಹರಿದು ಬಿಟ್ಟೋಡಿದ || ರ್‍ಯಾರೆ ||೧೦೩||

ಹುಣ್ಣಿಮೆ ದಿವಸ ಮುತ್ತೈದೆ ಬ್ರಾಹ್ಮರಿಗೆಲ್ಲ | ಚೆನ್ನಾಗಿ ಬರಹೇಳಿ ಬಡಿಸಲೆಂದು |
ಅಣ್ಣನವರು ತೆಗೆದಿರಿಸಿದ ರಸಬಾಳೆ | ಹಣ್ಣಿನ ಗೊನೆಯ ವಂಚನೆ ಮಾಡುತ್ತೋಡಿದ || ಯಾರೆ ||೧೦೪||

**ಭಾಮಿನಿ**

ನಂಬು ನಿಶ್ಚಯವಿನ್ನು ಹಲವನು |
ಹಂಬಲಿಸಬೇಡೆಂದು ಕಂಸಗೆ |
ನಂಬುಗೆಯ ನೀಡಿದರೆ ಬಿಟ್ಟನು ಸತಿಯ ಮುಂದಲೆಯು ||
ತೂಂಬನುಗಿದಂತಿರುವ ಕಂಗಳ |
ಕಂಬನಿಯೊಳಾ ಖಳನ ಬೀಳ್ಕೊ |
ಟ್ಟಂಬುಜಾನನೆ ಸಹಿತಲಾ ವಸುದೇವ ನಡೆತಂದ || ||೬೧||

**ರಾಗ ಭೈರವಿ ಝಂಪೆತಾಳ**

ಇತ್ತಲರಮನೆಗೆ ನಡೆ | ತಂದು ಕಾಲಾಂತರಕೆ |
ಪುತ್ರನನು ಪಡೆದಳಾ | ಮತ್ತಗಜಗಮನೆ ||೬೩||

ಉತ್ತಮ ಗುಣಾಢ್ಯನಹ | ವಸುದೇವ ನೃಪತಿ ತಂ |
ದಿತ್ತನಿದಕೋ ಸತಿಯು | ಪೆತ್ತಳೆಂದೆನುತ ||೬೪||

ಕಂಡನಾ ಖಳತಿಲಕ | ಗಂಡುಗಲಿತನದಿರುವ |
ಕೊಂಡು ಪೋಗೀ ಶಿಶುವ | ದಂಡಿಸಲದ್ಯಾಕೆ ||೬೫||

ಏಳು ಪರಿಯಂತರವು | ಯೆನಗೆ ಗೋಚರವಿಲ್ಲ |
ಮೇಲೆ ನಿನಗುದಿಸಿದರೆ | ಬಾಲಕರನೆನಗೆ ||೬೬||

ತಂದುಕೊಡು ಸಾಕೆನ್ನ | ಕುಂದ ನೆಣಿಸದೆ ನಿನ್ನ |
ಕಂದರನು ಸಲಹಿಕೋ ತಂಗಿಯಿರುವನಕ ||೬೭||

**ಭಾಮಿನಿ**

ಎಲೆ ಪರೀಕ್ಷಿತರಾಯ ಕೇಳಾ |
ಲಲನೆ ಕೆಲವು ದಿನಕ್ಕೆ ದಂಡಕೆ |
ಫಳಿಸಿದರ್ಥದ ತೆರದಿ ಪಡೆದಳು ಕುವರರೈವರನು ||
ಸಲಹಿಕೊಂಡಿರಲಿತ್ತ ನಾರದ |

ನಿಳಿದನಂಬರದಿಂದ ಕಂಸನ |
ನಿಲಯ ಕಮಲಪ್ರಭೆಯ ಚಂದ್ರಮನಂತೆ ಥಳಥಳಿಸಿ || ||೬೮||

**ಕಂದ**

ಸುರಮುನಿಯಂ ದೂರದೊಳು |
ಪರಿಕಿಸುತಿದಿರೆದ್ದು ನಮಿಸುತಾ ಋಷಿಯಡಿಗಂ ||
ಕರವಿಡಿದಾಸನದೊಳ್ಕು |
ಳ್ಳಿರಿಸುತ ತತ್ಪದವನರ್ಚಿಸಿದನಾ ಕಂಸಂ || ||೬೯|

**ರಾಗ ಸಾಂಗತ್ಯ ರೂಪಕತಾಳ**

ಮರುಳಾದೆಯೇನಯ್ಯ ನೀ ಮಾಡಿದುದು ಸರಿ |
ಬರಲಿಲ್ಲೆನಗೆ ಕಂಸರಾಯ ||
ಒರೆಯಲಿನ್ನ್ಯಾತಕೆ ವಸುದೇವನಣುಗರ |
ಮರಳಿ ನೀ ಕೊಟ್ಟುದನ್ಯಾಯ ||೭೦||

ಒಂದೆರಡೆಂಟೇಳು ಲೆಕ್ಕವ ಗಣಿಸಲು |
ಹಿಂದು ಮುಂದಕೆ ಸಮನಹುದು ||
ಇಂದಿರೆಯರಸ ಯಾವಾಗ ಪುಟ್ಟುವನೋ ಹೀ |
ಗೆಂದು ನಿಶ್ಚಯವಾರಿಗಿಹುದು ||೭೧||

ಮೊಳೆಯಲ್ಲಿ ಕಿಚ್ಚ ನಂದಿಸದಿರ್ದಡದು ಮತ್ತೆ |
ಬೆಳೆಯಲು ಮಣಿಯದೋರುವರ |
ತಲೆಗೇರದನಕ ತಗ್ಗಿಸದಡೆ ವಿಷವದು |
ನೆಲೆಗೊಳ್ಳದಲ್ಲ ಪಂಡಿತರ || ೭೨||

ಪರಿಕಿಸೆ ನೀ ಕಾಲನೇಮಿ ನಿನ್ನಲ್ಲಿ ನಿ |
ರ್ಜರರಿಗೆ ವೈರ ಪೂರ್ವದೊಳು |
ಅರಿತುಕೋ ಮನದಲ್ಲಿ ಯಾದವರಲ್ಲದೆ |
ಪರರಿಲ್ಲ ನಿನಗೆ ಶತ್ರುಗಳು ||೭೩||

ಯಾರೆತ್ತಲಾದರೆ ನಮಗೇನು ಗೋವಿಂದ |
ನಾರಾಯಣಾಚ್ಯುತಯೆಂದು ||
ನಾರದನುತಿಸಿ ಪೋಗಲು ಕಂಸ ಗಜರಿ ಕಾ |
ಳೋರಗಗೆಣೆಯಾದನಂದು ||೭೪||

**ರಾಗ ಭೈರವಿ ಏಕತಾಳ**

ಸುರಮನಿಯಿಂತೆನುತತ್ತಾ | ತಾ | ತೆರಳಲು ಖಳ ಗಜರುತ್ತ ||
ಪೊರೆಯುಬ್ಬಿದ ಭುಜಗನನು | ಪೋ | ಲ್ದುರೆ ಕೋಪವ ತಾಳಿದನು ||೭೫||

ಕರೆಸಿದ ವಸುದೇವನನು | ತಾ | ತರಿಸಿದ ತತ್ಪುತ್ರರನು ||
ತರುಣಿ ಮರುಗಲಾರ್ವರನು | ಬಡಿ | ದುರುಳಿಸಿದನು ಖಳವರನು ||೭೬||

ಸೆರೆ ಸಂಕೋಲೆಯೊಳವರ | ತಾ | ನಿರಿಸುತುಳಿದ ಯಾದವರ ||
ಪರಿ ಪರಿ ವಿಧದಾಜ್ಞೆಯಲಿ | ಖಳ | ಮರುಗಿಸಿದನು ಖಾತಿಯಲಿ ||೭೭||

**ವಾರ್ಧಕ**

ಮದಕಂಸನಾಜ್ಞೆಯಲಿ ವಸುದೇವ ದೇವಕಿಯ |
ರೆದೆಯುರಿತದಿಂದ ಸೆರೆಮನೆಯೊಳಳುತಿರಲಿತ್ತ |
ಪದುಮ ಸಂಭವನರಿತು ಪರರಿಗುಪಕಾರಮಂ ಮಾಳ್ಪುದೇ ಸತ್ಯವೆಂದು ||
ಮುದದಿಂದ ಕೃಷ್ಣ ಜನನ ಸ್ಥಿತಿಯ ಗೋಕುಲದ |
ಸುದತಿಯರ ಸೌಭಾಗ್ಯ ದುಷ್ಟಾಪಹಾರಗಳ |
ಮೊದಲಾದ ಗುಣಗಳಂ ಪೇಳ್ವ ಮನದಿಂದೊಲಿದು ಲೋಕೇಶನಣಿಯಾದನು || ||೭೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳಾ ಹರಿಯ ಜನನದ |
ಪರಿಯ ದೇವಕಿಗೊರೆಯಲೋಸುಗ |
ಸರಸಿಜೋದ್ಭವನಂದು ಮಾಯಾ | ಕೊರವಿಯಾದ || ||೭೯||

**ರಾಗ ಶಂಕರಾಭರಣ ಅಷ್ಟತಾಳ**

ಬಂದಳು ಕೊರವಂಜೀ ನೀರೇ | ಮುದ | ದಿಂದ ತ್ರಿಭುವನ ವಿಚಾರೇ |
ಸುಂದರಮಯದ ಶರೀರೇ | ಮನ | ಕುಂದದೆ ಶರಧಿ ಗಂಭೀರೇ | ರಾಕಾ |
ಚಂದಿರವದನೆ ಆ | ನಂದಪೂರದನೆ ಬಾ |
ಲೇಂದು ಶೇಖರ ಶರ | ಣೆಂದು ಸಜ್ಜನನುತೆ ||೮೦||

**ಕಂದ**

ಪದುಮಾನನೆಯೀಪರಿಯಿಂ |
ಮುದದಿಂ ತಾ ಕಣಿಯ ಪೇಳ್ದು ತಿರುಗುತಲಿಳೆಯೊಳ್ ||
ಮಧುಹರನಂ ಧ್ಯಾನಿಸುತಲಿ |
ಮಧುರಾಪಟ್ಟಣಕೆ ಬಂದಳತ್ಯುತ್ಸಹದೊಳ್ || ||೮೧||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಮಧುರಾ ಪಟ್ಟಣಕಾಗಿ ಬಂದಳು | ಅಲ್ಲಿ | ಸುಧೆಯ ಬಾಗಿಲ ಮುಂದೆ ನಿಂದಳು ||
ಮುದದಿ ಕಣಿಯ ಕೇಳಿರೆಂದಳು | ಹಿಂದಾ | ದುದ ಮುಂದಹುದ ಪೇಳ್ವೆನೆಂದಳು ||೮೧||

ಈ ವಿಧಗಳ ಸುದ್ದಿ ಪೇಳುತ್ತಾ | ನಾರಿ | ದೇವಕಿ ಹರುಷವ ತಾಳುತ್ತ ||
ಕಾವಲಂಗನೆಯರ್ಗೆ ಪೇಳುತ್ತಾ | ಕರೆಸಿ | ಕೋವಿದೆಯನ್ನು ಕಂಡೇಳುತ್ತ ||೮೨||

**ವಚನ**

ಅಮ್ಮ ಕೇಳಡಿಯಮ್ಮ ಅಮ್ಮೋಯಮ್ಮ ಸಂದೋಷ ಮಾಯಾಲ್ ಪೋರ್ಂದು, ಕಣಿಯಾನ್ ಚೊಲ್ವೇನ್ ನಾನ್, ಯೋಚನೈ ವೇಂಡಾಮ್ ನೀನ್ ನಿನಚ್ಚುಕಾರ್ಯ ಮೆಲ್ಲಾಂ ಕೈಗೂಡುಂ ತಿರುನಾರಾಯಣನ್ ಕೃಪೆಯಾನೇ.

**ರಾಗ ಪಂತುವರಾಳಿ ಏಕತಾಳ**

ಯಾವ ದೇಶದಿಂದ ಬಂದೆ | ದೇವಿ ಕೊರವಂಜಿ ||
ಯಾವಲ್ಲಿಗೆ ಪಯಣವಿಂದು ನಾರಿ | ಕೊರವಂಜಿ ||೮೪||

ಪೊಂಗಳಶ ಕುಚದ ಬಾಲೆ | ಯಾರೆ ಕೊರವಂಜೀ ||
ಶೃಂಗಾರದ ಸದನೆ ಸುಪ್ರ | ವೀಣೆ ಕೊರವಂಜಿ ||೮೫||

ನೋಡಿಯೆನ್ನ ಮನದ ಕೊರತೆ | ನೀಗಿದೆ ಕೊರವಂಜಿ ||
ಪಾಡಿನಿಂದ ಪ್ರಶ್ನೆಯೊಂದ | ಪೇಳ್ ಕೊರವಂಜಿ ||೮೬||

**ರಾಗ ಕೇದಾರಗೌಳ ಅಷ್ಟತಾಳ**

ನೀ ಕೇಳು ತರುಣಿ ನಾಯಕರನ್ನೆ ನಾ ಸತ್ಯ |
ಲೋಕದೊಳಿರುವೆ ಕಾಣೆ ||
ನಾಕು ರಾಜ್ಯವನೆಲ್ಲ ತಿರುಗುತಿಲ್ಲಿಗೆ ಬಂದೆ |
ನಾ ಕೊರವಂಜಿ ಜಾಣೆ ||೮೭||

ಲೋಕದ ಸಕಲ ಪ್ರಪಂಚವನರಿತು ವಿ |
ವೇಕದಿ ಸತಿಯರಿಗೆ ||
ವಾಕು ತಪ್ಪದೆ ಪೇಳಲುಂಟಮ್ಮ ಕೊಲ್ಲೂರ |
ಮೂಕಾಂಬೆ ದಯವೆನಗೆ ||೮೮||

ಎಂಬ ಮಾತನು ಕೇಳಿ ಹರಿಣಾಕ್ಷಿ ತೋಷದೊ |
ಳಂಬುಜಸುಮ ತರಿಸಿ ||

ಪೊಂಬಣ್ಣ ರಂಗಮಾಲೆಯನಿಕ್ಕುತಕ್ಷತೆ |
ತಾಂಬೂಲಗಳನಿರಿಸಿ ||೮೯||

ಲಿಂಬೆಯ ಹಣ್ಣನು ಕಾಣಿಕೆಗಳನಿತ್ತು |
ತುಂಬಿ ಮುತ್ತಿನ ಸೇಸೆಯಾ |
ಮುಂಬರಿದಿಡಲು ಮಾಡಿದಳಾಗ ಕೊರವಿ ಹೇ |
ರಂಬನ ಪ್ರಾರ್ಥನೆಯ ||೯೦||

**ಕಂದ**

ಗಣಪತಿಯಂ ಪೂಜಿಸುತಲಿ |
ತ್ರಿಣಯಂಗೆರಗುತ್ತ ಮನದೊಳತಿ ಭಕ್ತಿಯೊಳು ||
ಮಣಿದಾಕಣಿಗೂಡೆಗೆ ಮನ |
ದೆಣಿಕೆಯ ದೇನೆನಲು ಜವದಿ ದೇವಕಿ ನುಡಿದಳ್ || ||೯೧||

**ರಾಗ ಸಾಂಗತ್ಯ ರೂಪಕತಾಳ**

ನೀ ಕೇಳು ಕೊರವಿ ಎನ್ನಂಗದ ವ್ಯಥೆಯನ್ನು | ಲೋಕೇಶ ಶಿವನೊಬ್ಬ ಬಲ್ಲ |
ಕಾಕಾ ಕದಂಬವಟ್ಟುತ್ತಲಿರುವ ಮರಿ | ಕೋಕಿಲೆಯಂತಾದೆನಲ್ಲ ||೯೨||

ಶ್ವಾನದ ಬಾಲದ ತ್ರಾಣ ತಗ್ಗಿಸಲೆಂದು | ಕೋಣನ ಬಲಿಯಕೊಟ್ಟಂತೆ ||
ಭಾನುವಾಕ್ಯವ ಕೇಳಿ ಕಳೆದನೆನ್ನಣುಗರ | ಪ್ರಾಣವನಣ್ಣನೋರಂತೆ ||೯೩||

ಮೋರೆ ಗಂಟಿಕ್ಕಿ ಮೊದಲು ನಮ್ಮೀರ್ವರ | ಸೇರಿಸಿದನು ಸೆರೆಮನೆಗೆ ||
ಘೋರ ದಾನವರ ಕಾವಲನಿಕ್ಕಿ ನಿತ್ಯ ಕ | ಣ್ಣೀರ ಕೂಳುಣಿಸುವ ನಮಗೆ ||೯೪||

ಶೂರ ನೃಪಾಲನ ಮಗನೆತ್ತ ಸಂಕೋಲೆ | ಸೇರಿಕೊಂಬುದಿದೆತ್ತ ||
ಧಾರೆಯ ನೀರಿಗೆ ಕೈಯೊಡ್ಡಿದಂದಿಂದ | ನೀರ ತಾನುಂಡ ಭಾಗ್ಯಗಳ ||೯೫||

**ರಾಗ ಸೌರಾಷ್ಟ್ರ ಅಷ್ಟತಾಳ**

ಕೈಯ ತೋರಿಸೆ ನಾರಿಯರ ಮೌಕ್ತಿಕವೆ ನಿನ್ನ | ಕೈಯ ತೋರೆ | ಬಲು |
ವೈಯಾರದೊಳಗೊಂದು ಕುರುಹ ನಾ ಪೇಳುವೆ | ಕೈಯ ತೋರೆ ||೯೬||

ಅಕ್ಕರದಿಂದ ಬಾಂಧವರನುದ್ಧರಿಸುವ | ಕೈಯ ತೋರೆ | ಸಣ್ಣ
ಮಕ್ಕಳ ಬಿಡದೆ ಮುದ್ದಿಸಿ ನೋಡಿ ಸಲಹುವ | ಕೈಯ ತೋರೆ ||೯೭||

ಧಿಕ್ಕರಿಸದೆ ದ್ವಿಜಜನಕೆ ದಾನವನೀವ | ಕೈಯ ತೋರೆ | ಚಲ್ವ |
ಮುಕ್ಕಣ್ಣ ಶಿವ ಮುರಹರನ ಪೂಜೆಯ ಮಾಳ್ಪ | ಕೈಯ ತೋರೆ ||೯೮||

**ರಾಗ ಮಧುಮಾಧವಿ ಏಕತಾಳ**

ವಸುದೆವನರಸಿ ಕೇಳ್ ಮದ್ವಚನವನು |
ರಸೆಯೊಳು ಕಾಣೆ ನಿನ್ನಂತ ಸ್ತ್ರೀಯರನು ||
ಎಸಳು ರೇಖೆಯ ಸಂತಸದ ಸೌಭಾಗ್ಯವನು |
ಉಸುರಲೇನಿನ್ನು ಪೇಳುವೆ ಮುಂದಹುದನು ‖೯೯‖

ಪೂರ್ವ ಜನ್ಮದಲಿ ನೀ ಮಾಡಿದ ತಪವ |
ಸರ್ವಲೋಕೇಶನೊಳು ಬೇಡಿದ ವರವ ||
ಸರ್ವಥಾ ಮಗನಾಗಲೆಂದ ಕಾರಣವ |
ಗರ್ವೆ ನಿನ್ನುದರದೊಳೀಗ ಜೀವಿಸುವ ‖೧೦೦‖

ಮೊದಲೆರಡಂತ್ರ ಪುಟ್ಟಿದನು ಗೋವಿಂದ |
ಇದುವೆ ಮೂರನೆಯ ಪ್ರಾರಂಭದೊಳಾದ ಕಂದ ||
ಬೆದರಬೇಡಿನ್ನು ಕಾರ್ಯಗಳೆಲ್ಲ ಚಂದ |
ಮುದದಿಂದ ನಂಬು ತಪ್ಪದೆ ಮಾತಿದೊಂದ ‖೧೦೧‖

ಶಿಶುಪಾಲ ದಂತವಕ್ತ್ರರ ಕೊಲ್ವ ಬಗೆಗೆ |
ವಸುಧೆಯೊಳವತರಿಸುವನಮ್ಮ ನಿಮಗೆ ||
ಅಸುರ ಕಂಸನ ಕಳುಹಿಸುತೆಮನೆಡೆಗೆ |
ವಸುಧೆ ಪಟ್ಟವನೀವನುಗ್ರಸೇನನಿಗೆ ‖೧೦೨‖

ಪಾಂಡುನಂದನರೊಳು ಬೆಳೆಸುತ್ತ ನಂಟೂ |
ಹಿಂಡು ಕೌರವರ ಕೊಲ್ಲಿಸುವ ನಿಘಂಟು ||
ಕಂಡು ಹದಿನಾರು ಸಾವಿರದ ನೂರೆಂಟು |
ಹೆಂಡಿರನೊಲಿಸುತಾಳುವ ಯೋಗವುಂಟು ‖೧೦೩‖

**ಕಂದ**

ಕಂದನು ನಿಮಗುದಿಸಿಯೆ ಬಲು |
ಬಂಧನವಂ ಕಿತ್ತು ಬಾಲಲೀಲೆಯ ತೋರ್ದು೦ ||
ಮುಂದತಿ ಭಾಗ್ಯದೊಳಿಹಿರೆನೆ |
ಚಂದಿರಮುಖಿ ಕೇಳ್ದು ಪೇಳ್ದಳಾ ಕೊರವಿಯೊಳು ‖ ‖೧೦೪‖

**ರಾಗ ರೇಗುಪ್ತಿ ತ್ರಿವುಡೆತಾಳ**

ಮನಸೊಡಂಬಡದು ಕಾಣೀ | ಮಾತಿನ ಹೋಲ್ವೆ | ಎನಗಾಹುದಿಲ್ಲ ಜಾಣೆ ||
ಘನತರ ಪುಣ್ಯ ಸಾಧನವೆನಿಸುವ ಕೃಷ್ಣ |
ಜನಿಸಿ ಖಂಡಿಸುವ ಬಂಧನವೆಂಬ ಮಾತಿಗೆ || ಮನ ||೧೦೫||

ಹುಟ್ಟಿದರೆಂತಾದರೂ | ರಕ್ಷಿಸುವಂಥ | ಬಟ್ಟೆ ಹ್ಯಾಗಮ್ಮ ತೋರೂ ||
ಕಟ್ಟು ಕಾವಲು ಕಂಸನಾಜ್ಞೆಯೆಂಟನೆಯಲ್ಲಿ |
ಕೃಷ್ಣನುದ್ಭವಿಸಿ ಕೊಲ್ಲುವನೆಂಬ ಮಾತಿಗೆ || ಮನ ||೧೦೬||

ಲೊಟ್ಟೆ ಜೋಯಿಸಗಾರರೂ | ಶಕುನ ವಾಕ್ಯ | ಮುಟ್ಟಿ ಪೇಳ್ವಂತೆಲ್ಲರೂ ||
ಹೊಟ್ಟೆಗೋಸುಗವಾಗಿ ನುಡಿದ ನಿಮಿತ್ತದಿ |
ಪಟ್ಟಿಯಾಗುವದಿಲ್ಲ ದಿಟ್ಟೆ ನಂಬುವದಕ್ಕೆ || ಮನ ||೧೦೭||

**ರಾಗ ಶಂಕರಾಭರಣ ತ್ರಿವುಡೆತಾಳ**

ಹೊನ್ನಿನಾಸೆಗೆ ಬಂದುದಿಲ್ಲವು | ಹಸ್ತಿಗಮನೇ ನಿನ್ನಯಾ ||
ಪುಣ್ಯವನು ನಿನಗೊರೆಯಲೋಸುಗ | ಬಂದೆನಮ್ಮ ||೧೦೮||

ನಾಡ ಮಾತನು ಪೇಳಿ ಪೋಗಲು | ಬಂದುದಿಲ್ಲಾ ಶಿವದಯಾ ||
ಮಾಡಿದುದ ನಿನಗೊರೆಯ ಲೋಸುಗ | ಬಂದೆನಮ್ಮ ||೧೦೯||

ಕಟ್ಟು ಬಣ್ಣದ ಜಾಲ ಮಾತಿನ | ಕೊರವಿಯಲ್ಲಾ ಲೋಕದ ||
ಸೃಷ್ಟಿಯಧಿಪತಿತನಕೆ ಯೋಗ್ಯದ | ಕೊರವಿಯಮ್ಮ ||೧೧೦||

**ರಾಗ ಆನಂದಭೈರವಿ ಏಕತಾಳ**

ಎಷ್ಟು ಪೇಳಿದರು ಮನವು | ತುಷ್ಟಿ ಹೊಂದದಮ್ಮ ನಿತ್ಯ |
ಕಷ್ಟ ಬಿಡುವೆನೆಂತು ಬಿಡಲಿ || ಕ್ಲೇಶವಾ | ಮೋಹ | ಪಾಶವಾ ||೧೧೧||

ವಂಶ ವೃದ್ಧಿಯಾಗದಂತೆ | ಕಂಸನೆನ್ನ ಸುತರ ನಿಂತು |
ಹಿಂಸಿಸಿ ಕೊಲ್ಲುವನೆಂಬು || ದರಿವೆನೇ | ನಾ ಬಾ | ಳಿರುವೆನೆ ||೧೧೨||

ಎಂದಿಗೆ ನೀಗುವುದೆನಗೆ | ಬಂದ ಬಾಧಕವಿದಮ್ಮ |
ಇಂದಿರೇಶ ದಯಮಾಡಿ || ಕಾವುದೂ | ಸುಖ | ನೀವೀವುದು ||೧೧೩||

**ರಾಗ ಭೈರವಿ ಝುಂಪೆತಾಳ**

ನಿನ್ನ ಪಾಡೇನಮ್ಮ | ಮುನ್ನ ನಾರಿಯರೊಳಗೆ |
ಬನ್ನ ಬಿಟ್ಟವರುಂಟು | ಬಹಳ ದುಃಖದಲಿ ||೧೧೪||

ಹಿಂದೆ ಜನಕನ ಮಗಳು | ಹೇಗಿದ್ದಳದ ಹೇಳು |
ಮುಂದವಳ ಸುಖವೇನು | ಮನದಿ ತಿಳಿ ನೀನು ||೧೧೫||

ನಳನೆಂಬ ಭೂಪಾಲ | ನರಸಿ ದಮಯಂತಿ ಸುಳಿ |
ಸುಳಿದು ವನಗಳನೆಲ್ಲ | ಸುಖದಿಂದಲಿರಳೆ ||೧೧೬||

ಪೊಡವಿಯೊಳು ಹರಿಶ್ಚಂದ್ರ | ಮಡದಿಯಹ ಚಂದ್ರಮತಿ |
ಪಡೆದ ಮಗ ಲೋಹಿತನ | ಸುಖವ ತಿಳಿನೀನು ||೧೧೭||

ಎಲೆ ದೇವಿ ಕೇಳು ನೀ | ನೆಂದಿಗಾದರು ದೈವ |
ನೆಲೆಯ ಮೀರುವರುಂಟೆ | ನರರೊಳಗೆ ಕಾಂತೆ ||೧೧೮||

**ರಾಗ ಕೇದಾರಗೌಳ ಏಕತಾಳ**

ಸೊಲ್ಲ ಕೇಳೆ ಸೊಲ್ಲ ಕೇಳೆ | ಸೊಗಸುಗಾರರವ್ವ ||
ಬಲ್ಲಿದ ಸುಜಾಣೆ ಮರಿ | ಹುಲ್ಲೆಗೆಣ್ಣೆನವ್ವ ||೧೧೯||

ಇಳೆಯೊಳವತರಿಸಿ ಖಳರ | ಕೊಲುವನು ನೋಡವ್ವ ||
ಗೆಲುವಿನಿಂದ ನಿಮ್ಮೆಲ್ಲರ | ಸಲಹುವ ಕಾಣವ್ವ ||೧೨೦||

ಸಣ್ಣ ಕೂಸಿಗೊಂದಿಷ್ಟಾದ | ರನ್ನವ ನೀಡವ್ವ ||
ಚನ್ನಕೃಷ್ಣರಾಯನೆಂದು | ಚಲುವಾಗಿರವ್ವ ||೧೨೧||

**ವಾರ್ಧಕ**

ಪರಮ ಮಂಗಳಕರವ ಪೇಳ್ದ ಕೊರವಂಜಿಗಾ |
ತರುಣಿ ತಾ ಸಕಲವಸ್ತುವನಿತ್ತು ಬೀಳುಕೊಡ |
ಲರವಿಂದ ಭವನೈದಿದಂ ತನ್ನ ನಿಜಲೋಕಕಿತ್ತ ಹರಿ ಶರಣೆನ್ನುತ ||
ಸೆರೆಮನೆಯೊಳಿರಲು ದೇವಕಿಗೇಳನೆಯ ಗರ್ಭ |
ಕರಗಿ ಭುಜಗಾಧಿಪತಿ ರೋಹಿಣಿಗೆ ಜನಿಸಿದಂ |
ಸುರರಿಗಭಯವನಿತ್ತು ಹವಣಮಂಮನದಿ ಗೋಚರಿಸಿದಂ ಜಗದೀಶನು || ||೧೨೨||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ಕಂಸನು ಗರ್ಭವಡಗಿದ | ವರ್ತಮಾನವ ಕೇಳಿ ತನ್ನಯ |
ಚಿತ್ತದಲಿ ಖತಿಯಾಂತು ಚಿಂತೆಗೆ | ತೆತ್ತು ಮನವ ||೧೨೩||

ಹರಿಯು ಬಹು ಕಪಟಿಗನು ಮೈಮರೆ | ದಿರಲು ಬಾರನೆನುತ್ತ ತಾನೇ |
ಸೆರೆಮನೆಯೊಳಿರ್ದಂತೆ ಕಾದಿರ | ಲಿರುಳು ಹಗಲು ||೧೨೪||

ತರುಣಿ ದೇವಕಿ ಜಠರದೊಳು ಸಿರಿ | ಹರಿಯು ನೆಲಸಿದನೇನನೆಂಬೆನು |
ಪರಮ ಪುರುಷನ ಮಹಿಮೆಯನು ಕೇಳ್ | ಧರಣೀಪಾಲ ||೧೨೫||

**ದ್ವಿಪದಿ**

ದೇವಕಾ ದೇವಿಯುದರದೊಳಗಚ್ಯುತನು |
ಆವಾಸವಾದನೆಂದರಿತು ಕಮಲಜನು ||೧೩೬||

ಶತಮಖಾದ್ಯಮರ ಸಂದೋಹ ಸಹಿತಂದು |
ನುತಿಗೈವುತಿರ್ದರಾಗಂಬರದಿ ನಿಂದು ||೧೨೭||

ಸ್ಫಟಿಕ ಕಲಶದ ದೀಪದಂತೆ ದೇವಕಿಯಾ |
ಜಠರದೊಳಗೊಪ್ಪುತಿರ್ದುದು ಬಿಂಬ ಹರಿಯ ||೧೨೮||

ಖಳ ಕಂಸನನುಜೆಯಂಗಚ್ಛವಿಯ ನೋಡಿ |
ತಿಳಿದನೀತನೆ ವೈರಿಯೆಂದು ಭಯಗೂಡಿ ||೧೨೯||

ಅರೆನಿಮಿಷವೆಡೆಬಿಡದೆ ದುಷ್ಟಬಲ ಸಹಿತ |
ಸೆರೆಮನೆಯಕಾದಿರ್ದ ದಿನವ ಲೆಕ್ಕಿಸುತ ||೧೩೦||

**ವಾರ್ಧಕ**

ಅರಸ ಕೇಳಿಂತಿರಲು ದೇವಕಿಯ ಬಸುರಿಂಗೆ |
ತೆರಳೆ ನವಮಾಸಮನಿತರೊಳು ಶ್ರಾವಣ ತಿಂಗ |
ಳಿರುಳಪರ ಪಕ್ಷದಷ್ಟಮಿ ದಿನದಿ ರೋಹಿಣಿಗನಂತನುದಿಸಿದ ಸಮಯದಿ ||
ಧರಣಿಗವತರಿಸಿದಂ ಪುರುಷೋತ್ತಮಂ ಸುರರು |
ನೆರೆದಭ್ರದೊಳಗೆ ಜಯವೆಂದು ಸುಮದೃಷ್ಟಿಯಂ |
ಗರೆದರಂಬುಜಭವಾದಿಗಳೆರಗಿನುತಿಸಿದರ್ ಜಗಕೆ ಮಂಗಳವಾದುದು || ||೧೩೧||

**ದ್ವಿಪದಿ**

ಸಿರಿಮುಡಿಯ ಸುಳಿಗುರುಳ ತರುಣ ತುಲಸಿಗಳ |
ಮಿರುಪ ನಾಸಿಕದ ಮಣಿಮಕುಟ ದೀಪ್ತಿಗಳ ||೧೩೨||

ಕರ್ಣಕುಂಡಲ ಕಪೋಲಗಳ ಚುಬುಕುಗಳ |
ಅರ್ಣವಸುಗಂಭೀರದತಿಶಯದ ಕೊರಳ ||೧೩೩||

ವೈಜಯಂತಿಯ ಮಾಲೆ ಕೌಸ್ತುಭವು ಮೇಲೆ ||
ತೇಜದಿಂದೆಸೆವ ನವರತುನಗಳ ಲೀಲೆ ||೧೩೪||

ಶಶಿನೀಲ ಶುಭಕಾಂತಿ ಭುಜ ಚತುಷ್ಟಯದ |
ನಿಜ ಶಂಖ ಚಕ್ರ ಗದೆ ಪದ್ಮ ಧಾರಣದ ||೧೩೫||

ಮುಂದೆಸೆವ ಬಾಲಕನ ಕಂಡು ವಸುದೇವ |
ವಂದಿಸಿದ ದೇವಕಿಯು ಸಹಿತಲರೆಜಾವ ||೧೩೬||

**ರಾಗ ರೇಗುಪ್ತಿ – ಏಕತಾಳ**

ಕೃಷ್ಣ ಹರೇ ಪಾಹಿಮಾಂ | ಜಯ ಜಯ ಬಾಲ | ಕೃಷ್ಣ ಹರೇ ಪಾಹಿಮಾಂ ||
ಜಿಷ್ಣು ಮುಖ್ಯಸುರೌಘವಂದಿತ ಪರ | ಮೇಷ್ಠಿ ಪೂಜಿತ ಚಲ್ವಪಾದ ವಿನೋದ ||೧೩೭||

ಇಂದಿರಾಸತಿ ರಮಣ | ಸಕಲ ಮುನಿ | ವಂದಿತ ಸಚ್ಚರಣ ||
ಸುಂದರಾಂಗ ಸರ್ವಲೋಕ ನಾಯಕ ದಯಾ | ಸಿಂಧು ಶ್ರೀವನಮಾಲ ಸಜ್ಜನ ಪಾಲ ||೧೩೮||

**ರಾಗ ಪಂತುವರಾಳಿ – ಏಕತಾಳ**

ಕರುಣಿಸು ಕಂಜದಳ ನೇತ್ರ | ಕೋಮಲಗಾತ್ರ |
ಪರಮ ಪಾವನ ಸುಪ್ರಸನ್ನ | ಕೀರ್ತಿಸಂಪನ್ನ || ಪಲ್ಲವಿ ||
ಎಂತು ಧರಿಸಿದೆ ನಿನ್ನ ನಾನು | ಎನ್ನುದರಾಬ್ಧಿಯೊ |
ಳಿಂತು ಪುಟ್ಟಿದೆಯಯ್ಯ ನೀನು | ನೋಡಿದರಾ |
ದ್ಯಂತವಿಲ್ಲದ ಕಾಮಧೇನು || ಕಾಲ ಕಾಲದೊ |
ಳಂತರಂಗದಲಿ | ಚಿಂತಿಪ ಭಕ್ತರ |
ಸಂತತಿಗೊಲಿವಾ | ನಂತ ಗುಣಾಢ್ಯ || ಕರುಣಿಸು ||೧೩೯||

ಕಂಸ ದೈತ್ಯನು ಕಡುಕೋಪಿ | ಕಂಡರೆ ನಿನ್ನ |
ಹಿಂಸೆಮಾಡದುಳಿಯನು ಪಾಪಿ | ನೋಡಲು ನಮ್ಮ |
ವಂಶದೊಳೆಲ್ಲ ಸುಪ್ರತಾಪಿ || ಹೊತ್ತಿಲ್ಲವು ಕಾಯೋ |
ಹಂಸವಾಹನ ಪಿತ | ನೀಂ ಸರ್ವೋತ್ತಮ |
ಪುಂಸರಿಪೂ | ಭಯ | ಧ್ವಂಸಮಾಡಯ್ಯ || ಕರುಣಿಸು ||೧೪೦||

**ವಾರ್ಧಕ**

ವಸುದೇವ ದೇವಕಿಯರಿಂತೆಂದು ಕೈಯ ಮುಗಿ |
ದಸುರ ಕಂಸನ ಬಾಧೆಗೆಣೆಯಿಲ್ಲವೆಂದೆನಲು |
ವಸೆದು ಗೋಕುಲದೊಳು ಯಶೋದೆಗಾತ್ಮಜೆಯಾಗಿ ಮಾಯೆಯಿಹಳೀ ರಾತ್ರಿಯೆ ||
ಕೊಸರುಗೊಳದೆನ್ನ ಕೊಂಡಲ್ಲಿರಿಸಿ ತರುತಲಾ |
ಶಿಶುವ ಕಂಸಂಗೆ ಕೊಡಿರೆನಲುಟ್ಟ ಧೋತ್ರವನು |
ಮುಸುಕಿಡಲು ಸತಿಪುರುಷರಿಬ್ಬರಿಗೆ ಕಾಲ ಸಂಕಲೆ ಕಳಚಿತಾ ಕ್ಷಣದೊಳು || ||೧೪೧||

**ಶಾರ್ದೂಲವಿಕ್ರೀಡಿತ ವೃತ್ತ**

ಶ್ರೀಗೋಪಾಲ ಮುಕುಂದ ಭಕ್ತವರದಂ ಶಾಂತಂ ಯಶೋದಾರ್ಭಕಂ |
ನಾಗಾರಾತಿಸುವಾಹನಂ ಗಿರಿಧರಂ ಕ್ಷೀರಾಬ್ಧಿಜಾತಾಧವಂ ||
ವಾಗೀಶಾದಿ ಸುಪರ್ವಸನ್ನುತ ಮಹಾ ಗೋಪಾಂಗನಾವೇಷ್ಟಿತಂ |
ಯೋಗೀಂದ್ರಾರ್ಚಿತ ಪಾದಪದ್ಮಯುಗಳಂ ವಂದೇ ಸರೋಜಾಂಬಕಂ ||

**ರಾಗ ನಾಟಿ ಝಂಪೆತಾಳ**

ಜಯ ಗೋಪಿಕಾನಂದ | ಜಯ ಗೋಪಜನವೃಂದ |
ಜಯ ಸಚ್ಚಿದಾನಂದ | ಜಯತು ಗೋವಿಂದ || ಜಯ || ಪಲ್ಲವಿ ||

ನಂದಗೋಪಕುಮಾರ | ನವನೀತ ವರಚೋರ |
ಸಿಂಧುಕನ್ಯಾ ರಮಣ | ಸರಸಿರುಹ ಚರಣ ||
ಇಂದ್ರಾದಿಸುರ ನಮಿತ | ಸ್ಥಾಣುಸಖ ಶುಭಚರಿತ |
ಸುಂದರಾತ್ಮಕ ವರ್ಣ | ಸಕಲಗುಣ ಪೂರ್ಣ || ಜಯ ||೧||

ಕಂಸದೈತ್ಯವಿನಾಶ | ಕಮಲನೇತ್ರ ವಿಲಾಸ |
ಹಂಸವಾಹನ ತಾತ | ಲೋಕ ವಿಖ್ಯಾತ ||
ವಂಶ ಶರನಿಧಿ ಸೋಮ | ಶರಣು ಮುನಿಜನ ಪ್ರೇಮ |
ಹಂಸಡಿಬಿಕರ ಪ್ರಾಣ | ಕಳೆದ ನೆರೆ ಜಾಣ || ಜಯ ||೨||

ಪುಣ್ಯನಾಮ ವಿಧೇಯ | ಪರಮಮಂಗಳ ಕಾಯ |
ಅರ್ಣವ ಸುಗಂಭೀರ | ನತ ಜನೋದ್ಧಾರ ||
ಪೂರ್ಣಚಂದ್ರ ಸುವದನ | ಕ್ಷೀರವಾರಿಧಿ ಶಯನ |
ಕಣ್ವಪುರ ಸ್ಥಿರವಾಸ | ಕೃಷ್ಣಜಗದೀಶ || ಜಯ ||೩||

**ವಾರ್ಧಕ**

ಗುರುಗಣಪ ಗೌರಿಶಂಕರ ಶಾರದಾಂಬಿಕೆಯ |
ಚರಣಕಮಲಕೆ ನಮಿಸಿ ಸರಸಿಜಾಸನಗೆರಗಿ |
ತರಣಿ ಶಶಿ ಮುಂತಾದ ಸಕಲಸುರ ದೇವರ್ಕಳಿಗೆ ಕರವ ಮುಗಿದು ಬಳಿಕ |
ಪರಮವೈಷ್ಣವ ಶುಕಾಚಾರ್ಯ ಮುನಿವದನಸರ |
ಸಿರುಹದಿಂದೊಗೆದ ಶ್ರೀಕೃಷ್ಣಚರಿತವನು ನಾ |
ವಿರಚಿಸುವೆ ಕನ್ನಡದ ಯಕ್ಷಗಾನದಲಿ ಶಿವಕರುಣಿಸಿದ ಬುದ್ಧಿಯಿಂದ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶ್ರೀ ಮಹೋನ್ನತ ಭಾಗವತವ | ನ್ನಾ ಮಹಾಯೋಗೀಂದ್ರ ಶುಕನತಿ |
ಪ್ರೇಮದಿಂ ಪೇಳ್ದನು ಪರೀಕ್ಷಿತ | ಭೂಮಿಪತಿಗೆ ||೪||

ಆ ಪುರಾಣ ಕಥಾ ಸಮುದ್ರದಿ | ಗೋಪಿಜನ ಲೀಲಾ ಚರಿತ್ರವ |
ನಾ ಪೊಗಳಿ ವರ್ಣಿಸುವೆನತಿ ಸಂ | ಕ್ಷೇಪದಿಂದ ||೫||

ಜಾಲಮಾತುಗಳಲ್ಲ ಮಾನವ | ರಾಳಿದಂತ ಚರಿತ್ರವಲ್ಲಿದು |
ಪೇಳಿ ಪೊಗಳಲು ಮುಕುತಿ ರಾಜ್ಯವ | ನಾಳಬಹುದು ||೬||

**ದ್ವಿಪದಿ**

ಆ ಪರೀಕ್ಷಿತ ರಾಯ ಬೆಸಗೊಂಡನೊಲಿದು |
ತಾಪಸೇಂದ್ರನೊಳೊಂದು ದಿವಸ ಕೈಮುಗಿದು ||೭||

ಜಗದಪತಿ ದೇವಕಿಗೆ ಜನಿಸಿ ರಾಕ್ಷಸರ |
ಪಗೆಯಿಂದ ತರಿದು ಸಲಹಿದನೆಂತು ಸುರರ ||೮||

ಬಲರಾಮ ಸಹಿತೊಡನೆ ಬಳೆದು ಗೋಕುಲದಾ |
ಲಲನೆಯರ ಮೋಹಿಸುತಲೆಂತು ಸೋಲಿಸಿದ ||೯||

ಎನಗೆ ಕರುಣಿಪುದೆಂದು ಎರಡಿಲ್ಲದಂದು |
ಮುನಿಯ ಪಾದಕೆ ನಮಿಸಲಾ ದಯಾಸಿಂಧು ||೧೦||

ಕೇಳಿದನು ಭೂಪತಿಯ ಕಡು ದೈನ್ಯ ನುಡಿಯ |
ಪೇಳಿದನು ಭಾಗವತ ಪೌರಾಣ ಕಥೆಯ ||೧೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೂಪ ಕೇಳೈ ಮೊದಲು ಸಂದ | ದ್ವಾಪರಾಯುಗದೊಳಗೆ ರಾಕ್ಷಸ |
ಭೂಪರಿದ್ದರು ಭೂಮಿಗಧಿಕ ಪ್ರ | ತಾಪದಿಂದ ||೧೨||

ದಾನವರು ದಿನದಿನದೊಳೆಸಗುವ | ಹೀನ ಕರ್ಮವ ತಡೆಯಲಾರದೆ |
ತಾನೆ ಭುವಿ ಯೋಚಿಸಿದಳಂದು ನಿ | ಧಾನದಿಂದ ||೧೩||

ಧರಣಿ ತಾ ಬಡಗೋವು ರೂಪವ | ಧರಿಸಿ ಬಂದಳು ಸತ್ಯಲೋಕಕೆ |
ಸರಸಿಜೋದ್ಭವಗೆರಗಿ ಪೇಳ್ದಳು | ಮರುಕದಿಂದ ||೧೪||

**ರಾಗ ಕಾಂಭೋಜಿ ಅಷ್ಟತಾಳ**

ಕರುಣಿಸು ಕಮಲ ಸಂಜಾತ | ಅವ |
ಧರಿಸಿ ಲಾಲಿಪುದೊಂದು ಮಾತಾ ||
ದುರುಳ ದಾನವರು ಮಾಡುವ ದುಶ್ಚರಿತ್ರವ |
ನೊರೆವೆನೆಂದರೆ ಎದೆ ತರಹರಗೊಳುತಿದೆ ||೧೫||

ಸುಜನರ ತಿರುಗಾಡಗೊಡರು | ದೈತ್ಯ |
ಕುಜನರೆಸಗುವಂತ ತೊಡರು ||
ಯಜನ ಕರ್ಮಗಳೆಲ್ಲ ವನದ ಪಾಲಾಯಿತು |
ನಿಜವೇದ ಮತಗಳು ತ್ಯಜವಾಯ್ತು ಧರೆಯೊಳು ||೧೬||

ಧರ್ಮನಾಶನವಾಯಿತಯ್ಯ | ಅ |
ಧರ್ಮ ವೆಗ್ಗಳವಾಗಿ ಮಹಿಯ ||
ನಿರ್ಮಲಾತ್ಮಕ ನಿರಂಜನನ ಪೂಜಿಸದ ದು |
ಷ್ಕರ್ಮಿಗಳನು ಪೊತ್ತು ದಣಿದೆನು ಬೇಸತ್ತು ||೧೭||

ತಂದೆ ಮಕ್ಕಳ ನಂಬಲಾರ | ಬಂಧು |
ಬಾಂಧವರಲಿ ಬದ್ಧ ವೈರ ||
ಒಂದ ಕೊಟ್ಟೊಂಬತ್ತ ಕೊಂಬರ ನ್ಯಾಯದಿ |
ಬಂದಿಕಾರರ ಕಾಟ ದಿನನಿತ್ಯ ಕೊಂದಾಟ ||೧೮||

**ವಾರ್ಧಕ**

ಧರಣಿಯಿಂತೆಂದಜನ ಚರಣದೊಳ್ ಮಣಿದಿರಲು |
ಕರುಣದಿಂದಾ ಧರೆಯ ಶಿರವನುಂ ನೆಗಪಿ ನೀ |
ಮರುಗದಿರು ನೋಳ್ಪೆನೆಂದರವಿಂದಭವನ ಭವ ಸುರಪ ಮುಖ್ಯಾಮರರನು ||
ಕರೆದೆಂದನಮ್ಮೊಡನೆ ಹರಿವುದಲ್ಲಿದು ಜಗ |
ದ್ಭರಿತನಹ ವಿಷ್ಣುವಿಂಗರುಹಲೇಳಿರೆನುತ್ತ |
ಸುರರನೊಡಗೊಂಡತುಳ ಹರುಷದಿಂದೈದಿದಂ ಭರದೊಳಿಂಗಡಲ ತಡಿಗೆ || ||೧೯||

**ಕಂದ**

ಆ ಪಾಲಾಂಬುಧಿಯಂ ಕಂ |
ಡಾ ಪರಮೇಷ್ಠಿ ಮೊದಲಾದ ನಿರ್ಜರವ್ರಾತಂ ||
ಶ್ರೀಪತಿಯಂ ಪೊಗಳುತ್ತಿರ |
ಲೀ ಪರಿ ಬಿನ್ನಪವ ಗೈದ ಭಾರತಿನಾಥಂ ||೨೦||

**ರಾಗ ತ್ರಿಪದಿ ನೀಲಾಂಬರಿ ಝಂಪೆತಾಳ**

ಜಯ ಸದಾನಂದ ಭಗವಂತ | ಕಮಲಾಕ್ಷ |
ಜಯಲೋಕನಾಥ ಜಯ ಜಯ ರಮಾಕಾಂತ || ಜಯ || ಪಲ್ಲವಿ ||

ದನುಜ ಶಿಶುಪಾಲ ಮದಕಂಸ | ರಾಕ್ಷಸರ |
ಪೆಸರು ಘನವಾತು ಖಳವಂಶ | ಅನ್ಯಾಯ |
ವೆಸಗುವರು ಮಿತಿಯಿಲ್ಲ ತಿಂದು ಮಧುಮಾಂಸ || ಜಯ ||೧೦||

ಸಜ್ಜನರಿಗೆಡೆಯಿಲ್ಲವೈಯ್ಯ | ಲೋಕದೊಳು |
ದುರ್ಜನರು ಬಲು ಹೆಚ್ಚಿತಯ್ಯ | ದಾನವರ |
ಘರ್ಜನೆಯ ನಿಲಿಸಿ ನಮ್ಮುವನು ಸಲಹಯ್ಯ || ಜಯ ||೧೧||

ಭೂಕನ್ನೆ ಮೊರೆಯಿಡುವಳೆನಗೆ | ಬಿನ್ನಪವ |
ನಾ ಕಾಲದೊಳು ಗೈವೆ ನಿನಗೇ | ಜಗದುಪತಿ |
ನೀ ಕರುಣದಿಂದ ನೀಡಭಯ ಧಾರುಣಿಗೆ || ಜಯ ||೧೩||

**ವಾರ್ಧಕ**

ಇಂತೆಂದು ಸುರರೆಲ್ಲ ಬಿನ್ನವಿಸುತಿರಲಾಗ |
ಕಂತುಪಿತ ಮನದಿ ಗೋಚರಿಸುತಾಕ್ಷಣದೊಳಗೆ |
ಸಂತಸವ ತಾಳಿಯಭಯವನಿತ್ತನಾಗಲಾನಂತಶಯನನು ಕರುಣದಿ ||
ಚಿಂತೆ ಬೇಡಿನ್ನು ಗೋಕುಲದೊಳಗೆ ಪಶುವಕಾ |
ವಂತ ಚನ್ನಿಗರಾಗಿ ನೀವೆನುತ ಗಗನ ನುಡಿ |
ಯಂತೆ ಕೇಳಿಸಿತದರನಾಲಿಸುತಲಜನು ಭೂಕಾಂತೆಯೊಡನಿಂತೆಂದನು || ||೧೪||

**ರಾಗ ನಾದನಾಮಕ್ರಿಯೆ ಏಕತಾಳ**

ಕೇಳಿದೆಯ ಭೂದೇವಿ | ಇನ್ನೇನೇ | ಸತ್ಯ |
ಕಾಲವು ಬಂದೊದಗಿದಾಮೇ | ಲಿನ್ನೇನೇ ||೧೫||

ನೀಗಿತಮ್ಮ ನಿನ್ನ ಬಾಧೆ | ಇನ್ನೇನೇ | ಲಯ |
ವಾಗುವರು ದನುಜರು ಮುಂ | ದಿನ್ನೇನೇ ||೧೬||

ಪೋಗು ನೀ ಸದನಕ್ಕೆ | ಇನ್ನೇನೇ | ಧೈರ್ಯ |
ಳಾಗು ಸುಖದಿಂದ ಬಾಳು | ಇನ್ನೇನೆ ||೧೭||

**ಕಂದ**

ವಾರಿಜಭವನೀ ಪರಿಯಿಂ |
ಧಾರುಣಿಯನು ಸಂತವಿಟ್ಟು ನಿಜ ಮಂದಿರಕಂ ||

ಭೋರನೆ ನಡೆತಂದಸುರರು |
ವೈರಿಯ ನೆನವುತ್ತಲಿದ್ದನತಿ ಭಕ್ತಿಯೊಳು ||೧೮||

**ಭಾಮಿನಿ**

ಧರಣಿಪತಿ ಕೇಳಿತ್ತ ಮಧುರಾ |
ಪುರದೊಳಗೆ ನೃಪನುಗ್ರಸೇನನ |
ತರಳ ಕಂಸನೆನಿಪ್ಪ ದುಷ್ಟನುದಾರ ಗರ್ವದಲಿ |
ದುರುಳರಿಗೆ ಗುರುವೆನಿಸಿ ದೈತ್ಯರ |
ನೆರವಿಯಲಿ ಧರೆಗರಸನಾಗುತ |
ಮೆರವುತಿರ್ದನು ಭುಜಬಲೋನ್ನತ ಮದದ ಮೋಡಿಯಲಿ ||೧೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಈ ತೆರದೊಳಿಹ ಕಂಸನೆನಿಪನ | ತಾತನಗ್ರಜ ದೇವಕನ ಸಂ |
ಜಾತೆ ದೇವಕಿಯೆಂಬವಳು ರೂ | ಪಾತಿಶಯದಿ ||೨೦||

ಮೆರವುತಿರ್ದಳು ಮಾತೆಪಿತರಿಗೆ | ಹರುಷವನು ಬೀರುತ್ತ ಸದ್ಗುಣ |
ಭರಿತೆಯಾಗಿ ಸುಶೀಲದಲಿ ಹೊಸ | ಹರೆಯದಿಂದ ||೨೧||

ವರನನರಸುತ್ತಿರಲು ತತ್ಪುರ | ವರನು ಶೂರನೃಪಾಲನಣುಗನು |
ಸ್ಮರನ ಲಾವಣ್ಯವತಿ ಸದ್ಗುಣ | ಭರಿತನಾಗಿ ||೨೨||

ಇರಲು ವಸುದೇವಾಭಿಧಾನವ | ನರಿತು ಸಾರಸಗಮನೆಗೀತನೆ |
ವರನೆನುತ ನಿಶ್ಚೈಸಿ ಖಳಗೆ | ಚ್ಚರಿಸೆ ಮುದದಿ ||೨೩||

ನೋಡಿ ಕಂಸನು ಪಿತನನುಜ್ಞೆಯ | ಬೇಡಿ ತಂಗಿಗೆ ಪರಿಣಯವ ತಾ |
ಮಾಡಬೇಕೆಂದೆನುತ ಸಂತಸ | ಗೂಡಿ ಭರದಿ ||೨೪||

**ರಾಗ ಶಂಕರಾಭರಣ ಏಕತಾಳ**

ಸತ್ಯವಂತ ವಸುದೇವ ನೃ | ಪೋತ್ತಮಂಗೆ ಮದುವೆಯಾಗೆ |
ಪೃಥ್ವಿಪಾಲರೆಲ್ಲ ಬಂದ | ರುತ್ಸಾಹಕೆಂದು ||೨೫||

ರಂಗ ಮಂಟಪದಿ ಕೋಮ | ಲಾಂಗಿ ದೇವಕಿ ವಸುದೇವ |
ಗಂಗನೆಯ ರೆತ್ತಿದರು | ಮಂಗಳಾರತಿಯ ||೨೬||

ಪೊಂಗಲಶಕುಚದ ಮೋಹ | ನಾಂಗಿಯರೆಲ್ಲರು ಶೋಭಾ |
ನಂಗಳ ಪಾಡಿದ ರಾಗ | ಶೃಂಗಾರದಿಂದ ||೨೭||

**ರಾಗ ಕೇದಾರಗೌಳ ಅಷ್ಟತಾಳ**

ದಾರೆ ಚತುರ್ಥಿನಾಗೋಲೆಯ ಕಳೆದುಪ | ಚಾರ ಮನ್ನಣೆಗಳಿಂದ ||
ಬೇರೆ ಬೇರರಸುಗಳಿಗೆ ಕೊಟ್ಟನುಚಿತವ | ಭೂರಿ ಸಂತೋಷದಿಂದ ||೩೮||

ಚಾರುಚರಿತೆ ತನ್ನ ಮಗಳಿಗೆಂದೆನುತಾಗ | ನೂರು ತುರಗ ಕೊಟ್ಟನು ||
ಮೀರಿದ ಮದವೆತ್ತಾನೆಗಳ ಶೃಂಗರಿಸಿ ನಾ | ನೂರೆಣಿಕೆಯೊಳಿತ್ತನು ||೩೯||

ಸಾರಥಿ ಸಹಿತ ಸಂದಣಿಸಿದ ತೇರ್ಗಳ | ತೋರಿದನತಿ ಬೆಲೆಯ ||
ಹೇರಳಪಟ್ಟೆ ಪೀತಾಂಬರವಿತ್ತ ಕು | ಮಾರಿಗೆ ಬಳುವಳಿಯ ||೪೦||

ಪಾವಕನಂತೆ ಪ್ರಜ್ವಲಿಪ ರತ್ನಗಳ ರಾ | ಜೀವಾಕ್ಷಿಗಿತ್ತನೆಲ್ಲ ||
ಸೇವೆಯ ಮಾಳ್ಪ ದಾಸಿಯರ ಕೊಟ್ಟುದಕಿನ್ನು | ದೇವ ಶಂಕರನೆ ಬಲ್ಲ ||೪೧||

ಎಲ್ಲಿ ನೋಡಿದರು ದಂಡಿಗೆಯಾನೆ ಕುದುರೆಯ | ಚೆಲ್ಲಾಟ ಘನವಾಯಿತು ||
ಅಲ್ಲಲ್ಲಿ ಪಿಡಿದ ಚಾಮರ ಛತ್ರ ಬಿರುದಿನ | ಫಲ್ಲಣೆ ಮೀತಿಮೀರಿತು ||೪೨||

ವಲ್ಲಭೆ ಸಹಿತಾಗ ವಸುದೇವ ಮಣಿರಥ | ದಲ್ಲಿ ಕುಳ್ಳಿರ್ದ ಬಂದು ||
ಉಲ್ಲಾಸದೊಳು ತೇರ ನಡೆಸುತ್ತ ಬರುತಿರ್ದ | ಬಲ್ಲಿದ ಕಂಸನಂದು ||೪೩||

**ರಾಗ ಮಾರವಿ ತ್ರಿವುಡೆತಾಳ**

ವಸುಧೆ ಪಾಲಕನೆ ಕೇಳಾ | ವೇಳ್ಯದೊಳೊಂದು |
ವಿಷಮ ಸಂಭವಿಸಿದುದ ||
ವಸುದೇವ ದೇವಕಿಯರ ಕಳುಹಿಸಲು ಬಂ |
ದಸುರ ಕಂಸಾಖ್ಯಗಾಗಸದೊಳಗೆಸೆದುದ || ವಸುಧೆ || ||೪೪||

**ಭಾಮಿನಿ**

ಕೇಳೆಲವೊ ಖಳ ಕಂಸ ತಂಗಿಯ |
ಮೇಲೆ ಮೋಹವ ಮಾಳ್ಪೆ ನಿನಗೀ |
ಲೋಲಲೋಚನೆಯುದರದೊಳಗೆಂಟನೆಯ ಗರ್ಭದಲಿ ||
ಶ್ರೀಲಲಾಮನು ಜನಿಸಿ ಬಲು ದೈ |
ತ್ಯಾಳಿಯನು ಸಂಹರಿಸಿ ನಿನ್ನನು |
ಸೀಳುವನು ಪುಸಿಯಲ್ಲೆನುತ್ತಡಗಿತು ನಭೋವಚನ || ||೪೫||

**ರಾಗ ಭೈರವಿ – ಏಕತಾಳ**

ಖಳನತಿ ಕೋಪವ ತಾಳ್ದು | ಕಂ | ಗಳೊಳಿಂಗಳವನುಗುಳ್ದು ||
ಜಳಪಿಸಿ ಖಡ್ಗವನುಗಿದು | ಖತಿ | ಯೊಳು ತಾನಧರವನಗಿದು ||೪೬||

ಘಡ ತಂಗಿಯೆ ತನಗಿವಳು | ಎ | ನ್ನೊಡಲಿಗೆ ವಿಷವಾದವಳು ||
ನುಡಿದರೆ ಫಲವೇನಿನ್ನು | ತಲೆ | ಕಡಿದೀಗಲೆ ತೀರ್ಚುವೆನು ||೪೭||

ಕೆಡೆಯೆನುತಲಿ ಬಾಲಕಿಯ | ಕೊರ | ಳೆಡೆಗಾನಿಸೆ ಕೂರಸಿಯ ||
ಮಿಡುಕುತಬಲೆ ಬಾಯ್ ಬಿಡಲು | ಕಂ | ಡೊಡನೆಲ್ಲವರಳುತಿರಲು ||೪೮||

**ಕಂದ**

ಈ ವಿಧಮಂ ಕಂಡಾ ವಸು |
ದೇವಂ ನಡುಗುತ್ತಲಿಳಿವ ಕಂಬನಿಯಿಂದಂ ||
ಹಾ ವಿಧಿಯೆಂದತಿ ಸುಯ್ಯುತ |
ಕೋವಿದನಂ ತಡೆವುತಸಿಯಪಿಡಿದಿಂತೆಂದಂ || ||೪೯||

**ರಾಗ ನಾದನಾಮಕ್ರಿಯೆ – ಏಕತಾಳ**

ಲೇಸು ಕಾರ್ಯವೇನೊ ನಿನಗೆ | ಕಂಸರಾಯ | ಇವಳ |
ಘಾಸಿ ಮಾಳ್ಪುದುಚಿತವಲ್ಲ | ಕಂಸರಾಯ ||
ಹೇಸದಿಹಳೆ ಭಾಗ್ಯಲಕ್ಷ್ಮಿ | ಕಂಸರಾಯ | ಕೀರ್ತಿ |
ಮಾಸುವುದು ಗ್ರಹಿಸಿನೋಡು | ಕಂಸರಾಯ ||೫೦||

ಮಾನಿನಿಯ ಕೊಲೆಗೆ ಬಯಸಿ | ಕಂಸರಾಯ | ನಿನ್ನ |
ಮಾನ ಕೆಡಿಸಿ ಕೊಳದಿರಯ್ಯ ಕಂಸರಾಯ ||
ಜ್ಞಾನವಂತನಾಗಿ ನೀನು | ಕಂಸರಾಯ | ಇಂತು |
ಹೀನ ಬುದ್ಧಿಯೋಚಿಸುವರೆ | ಕಂಸರಾಯ ||೫೧||

ಒಡಲು ಶಾಶ್ವತವಲ್ಲ | ಕಂಸರಾಯ | ಮಳೆ
ಹೊಡೆದ ನೀರ ನೆರೆಗಳಂತೆ | ಕಂಸರಾಯ
ಮಡದಿ ಮಕ್ಕಳೆಂಬ ಭಾಗ್ಯ | ಕಂಸರಾಯ | ಪ್ರಾಣ |
ಬಿಡುವ ವೇಳ್ಯಕೊದಗದಯ್ಯ | ಕಂಸರಾಯ ||೫೨||

ಕಂಡು ಕಂಡು ತಿಳಿದು ತಿಳಿದು | ಕಂಸರಾಯ | ಯಮನ |
ದಂಡನೆಗೆ ಸಿಲುಕದಿರಯ್ಯ | ಕಂಸರಾಯ ||
ಬಂಡಾಟಗಳುಚಿತವಲ್ಲ | ಕಂಸರಾಯ | ನರಕ |
ಕುಂಡದೊಳಗೆ ಬೀಳದಿರಯ್ಯ | ಕಂಸರಾಯ ||೫೩||

**ರಾಗ ಮಾರವಿ – ಏಕತಾಳ**

ಎನಲಾ ಕಂಸನು ಕನಲುತಲೆಂದನು | ನಿನಗೀ ಧರ್ಮವನು |
ವಿನಯದಿ ಕಲಿಸಿದನ್ಯಾರವ ನಾರಿಂ | ಗೆನುತಿಹೆ ನೀನಿದನು ||೫೪||

ಮರೆಯದೆ ಲಾಲಿಸುವರಿಗುಸುರುವ ದೀ | ಪರಮ ರಹಸ್ಯಗಳ ||
ಒರೆಯದಿರೈ ಸಾಕರಿತಿಹೆ ನಾನೀ | ಪರಿಯ ಪ್ರಯತ್ನಗಳ ||೫೫||

ಆರು ಕೊಲುವರಾರಿಂದಾರಳಿವರು | ಬೇರು ಬಲ್ಲರಿಗೆಲೆಯ ||
ತೋರುವುದುಚಿತವೆ ಸಾರತ್ತಲು ನಾ | ತೀರಿಸುವೆನು ಸತಿಯ ||೫೬||

**ರಾಗ ನೀಲಾಂಬರಿ ರೂಪಕತಾಳ**

ಕೊಂದವರಿಗೆ ಕೊಲೆ ತಪ್ಪದು | ಕಡೆಗೀ ಭಯ ನಿನಗಪ್ಪುದು |
ನೊಂದರೆ ಪ್ರಾಣದ ಹಗೆಯೆಂ | ದೆಂದಿಗು ಬಿಡದಯ್ಯ || ಪಲ್ಲವಿ ||

ಹುಟ್ಟಿದ ಕೂಡಲೆ ಮರಣವ | ಕಟ್ಟಿರಿಸಿದ ವಿಧಿ ಫಣೆಯಲಿ |
ಕೆಟ್ಟಲ್ಲದೆ ಲೋಕದಿ ಮನ | ಪುಟ್ಟದು ಮನುಜರಿಗೆ ||
ಸಿಟ್ಟೇಕೀಪರಿ ನಿನ್ನೊಡ | ಹುಟ್ಟಿದ ಸೋದರಿಯಲ್ಲವೆ |
ನಿಷ್ಠುರವ ಬಿಡು ಪಾತಕ | ತಟ್ಟದಿರದು ನಿನಗೆ ||೫೭||

ಮುಳ್ಳೊಳ್ನೆ ಕಾಲಿಗೆ ನೆಟ್ಟರೆ | ಪಲ್ಕೊಳ್ನೆ ಚುಚ್ಚುವದೇತಕೆ |
ಸುಳ್ಳನಸಿನ ಭ್ರಮೆಯಿಂದಲಿ | ಕಲ್ಮನ ಮಾಡದಿರು ||
ತಾಳ್ಮಮತೆಯನೆನ್ನೀ ಸತಿ | ಯೊಳ್ಮಾಡದಿರಕೃತ್ಯವ |
ಜನ್ಮಾಂತ್ರಕು ಬಿಡದವಗುಣ | ಪಾಳ್ಮಾಡಿಸದಿರದು ||೫೮||

ಮತ್ತೊಂದನು ಕೇಳೀ ಸತಿ | ಪೆತ್ತಂದಿಗೆ ತನಗುದಿಸಿದ |
ಪುತ್ರಂದ್ಯರನೆಲ್ಲರ ತಂ | ದಿತ್ತಂದಿಗೆ ನಿನ್ನ ||
ಚಿತ್ತದ ಭಯ ನೀಗಿಸುವೆನು | ಸತ್ಯದ ಮಾತಿದು ನೀ ಕೇ |
ಉತ್ತಮ ಮಾಂಗಲ್ಯದೊಳವ | ಕೃತ್ಯವ ಮಾಡದಿರು ||೫೯||

**ರಾಗ ತೋಡಿ ಅಷ್ಟತಾಳ**

ನಿಜವಲ್ಲ | ಮಾತು | ನಿಜವಲ್ಲ || ಪಲ್ಲವಿ ||

ನಿಜವಲ್ಲವೀ ಮಾತು ನಿನ್ನಂತರಂಗ |
ಕುಜನರ ಕೂಡಾಡುವಂಥ ಪ್ರಸಂಗ || ನಿಜವಲ್ಲ || ಅ.ಪ ||

ಬೀಸಿದ ಕೈ ತಪ್ಪಿ ನಡೆದರೆ ಮುಂದೆ |
ಸಾಸಿರ ಕಾಲವೆಂಬರು ಗಾದೆ ಹಿಂದೆ ||

ನೀ ಶಿಶುಗಳ ತಂದು ಕೊಡುವ ಮಾತುಂಟೆ |
ಲೇಸೆಂದು ನಂಬಿ ಬಿಟ್ಟರೆ ಟೆಂಟೆಮೆಂಟೆ || ನಿಜವಲ್ಲ ||೬೦||

ಬೆಟ್ಟದ ಮೊಸಳೆಯ ಜಲದೊಳು ತಂದು |
ಬಿಟ್ಟರುಪಕಾರವೆಂದರಿವುದೆ ಮುಂದು ||
ದುಷ್ಟರಿಗುಂಟೆ ದಾಕ್ಷಿಣ್ಯವೆಂದೆಂದು |
ಭ್ರಷ್ಟಕಾರ್ಯದ ಮಾತಾಡುವರೆ ನೀನಿಂದು || ನಿಜವಲ್ಲ ||೬೧||

**ಭಾಮಿನಿ**

ವಾರಿಜಾಕ್ಷಿಯರಿಂತು ಕೃಷ್ಣನ |
ದೂರುಸುರುತಿರೆ ತಿಂದ ಮೊಸರಿನ |
ನೀರು ತುಪ್ಪದ ಜೊಲ್ಲು ಕೈ ಬಾಯೆಂಜಲೂಡಿರಲು ||
ಚೋರನಿವನಹುದೆನಲು ತನ್ನ ಕು |
ಮಾರನನು ಕಂಡಬಲೆ ನಾಚಿವಿ |
ಚಾರಮತಿ ಮನೆಗೊಯ್ದುಸಲೆ ಬೆದರಿಸಿದಳರ್ಭಕನ || ||೧೬೬||

**ರಾಗ ಘಂಟಾರವ ಝಂಪೆತಾಳ**

ಚೋರತನದಲಿ ಪಾಲು ಮೊಸರು ಬೆಣ್ಣೆಯ ಮೆಲಲು |
ಧಾರಿಣೀ ಪತಿಗಳಿಗೆ ಧೀರತನವೇನೋ ||೧೬೭||

ಇನಿತು ದಿನ ಸೈರಿಸಿದೆ ಈ ಮಾತುಗಳು ನಿನ್ನ |
ಘನತರದಿ ನೋಡಿದನು ಗಂಭೀರ ಗುಣವ ||೧೬೮||

ಕಂಡವರ ಮನೆಯ ಪಾಲುಂಡು ಮೊಸರ್ಕಳುವುದಕೆ |
ಪುಂಡು ಪೋಕನೆ ನೀನು ಪುರುಷಾರ್ಥವೇನು ||೧೬೯||

ಬೆಣ್ಣೆ ತುಪ್ಪ ಬೇಡಿ ಬೇಸರಿಸಿ ಕಾಡುವರೆ |
ಉಣ್ಣಲಿಲ್ಲದ ತಿರುಕುಳಿಯ ಕೂಟದವನೆ ||೧೭೦||

**ರಾಗ ಶಂಕರಾಭರಣ ಅಷ್ಟತಾಳ**

ತರವೇನೊ ರಂಗ | ತಾಳು ತಾಳಯ್ಯ |
ತರುಣಿಯ ಒಡನಾಟ ಬೇಡವೆ ನಿನಗೆ || ತರವೇನೊ  || ಪಲ್ಲವಿ ||

ಸರಿ ರಾತ್ರೆಯವರ ಮಂದಿರದಿ ದಂಪತಿಗಳು |
ಸರಸದೊಳಿರಲೊಳ ಸರಿಯುತಲ್ಲಿ |

ಮರಿಯಾದೆ ಕೆಟ್ಟು ಮೈ ಮುಟ್ಟಿವಂಚಿಸುತವ |
ರರಿಯದಂ ತೋಡಿ ಕಾಡುವ ಮಂಗಚೇಷ್ಟೆಯು || ತರವೇನೋ ||೨೭೧||

ಅನ್ಯರ ಮನೆಯೊಳಗಡಗಿರಿಸಿದ ಬಾಳೆ |
ಹಣ್ಣಿನ ಗೊನೆಯ ತುಪ್ಪವ ಭಕ್ಷಿಸಿ
ಹೆಣ್ಣು ಮಕ್ಕಳು ಮೊಸರ್ಕಡೆವಾಗ ಬಲುಮೆಯೊಳ್ |
ಬೆನ್ನ ಮೇಲಡರಿ ಚೆಂದುಟಿಯ ಕಚ್ಚುವದಿದು || ತರವೇನೋ ||೨೭೨||

ಬಚ್ಚಲು ಮನೆಯೊಳು ನೀನಡಗಿರುವುದಕೆ ನೀ |
ಹುಚ್ಚಾದೆಯೇನೊ ನೀ | ಮಂದಿರ ಬಿಟ್ಟು |
ಉಚ್ಚೆಯ ಹೊವದರೊಡನೆ ದೃಷ್ಟಿಸುವುದೇ |
ನಾಶ್ಚರ್ಯ ಪೋಕವಿದ್ಯೆಗಳ ಮಾಡುವದಿದು || ತರವೇನೋ ||೨೭೩||

ಚೋರರ ಪಿಡಿದು ಬುದ್ಧಿಯ ಪೇಳಿ ನಡೆಸುವ |
ಧಾರಿಣೀಪತಿಗಳೆ ನಾವಾಗೀ |
ಸೇರದ ನಡತೆಯ ನಡೆಸುವದಪಕೀರ್ತಿ |
ಊರ ಮಕ್ಕಳ ಕೂಡಿಕೊಂಡು ಪುಂಡೇಳ್ವದು || ತರವೇನೊ ||೨೭೪||

ಅರಿತವರಂತರಂಗದಿ ನಿನ್ನ ವರ ಕಣ್ವ |
ಪುರದ ಶ್ರೀ ಗೋಪಾಲಕೃಷ್ಣನೆಂದು |
ಹಿರಿಯಣ್ಣ ಬಲರಾಮನುರಗೇಂದ್ರನೆಂಬಂಥ |
ಮರಿಯಾದೆಯಲಿ ಪಾಠಕರು ಪೊಗಳುವುದಾಗಿ ||೨೭೫||

**ಕಂದ**

ಮದಗಜಗಮನೆ ಯಶೋದೆಯು |
ಬೆದರಿಸಲವನಂಜಿದಂತೆ ಸುಮ್ಮನಿರಲ್ಕಾ |
ಮದನಪಿತನ ಮೈದಡವುತ |
ವಿಧುಮುಖಿ ಪಾಲ್ಕುಡಿಸಿ ಸಂತವಿಟ್ಟಳು ಮಗನ ||೨೭೬||

**ರಾಗ ಕೇದಾರಗೌಳ ಅಷ್ಟತಾಳ**

ಮರುದಿನ ಬೆಳಗಾಗೆ ಗೋಕುಲದೊಳಗಿದ್ದ | ತುರುಗಾವರೊಡನಾಡುತ್ತ |
ಕರು ದನಂಗಳ ಬಿಟ್ಟು ಹೊಡೆದು ವೃಂದಾವನಾಂ | ತರಕೆ ತಾ ತೆರಳಿ ಬಂದ ||೨೭೭||

ಕೊಳಲ ಧ್ವನಿಯ ಕೇಳಿ ತಲೆದೂಗಿ ಗೋವ್ಗಳ | ಬಳಗ ಸಂಗಡ ಓಡುತ್ತ |
ಬಳಲಿ ನೀರಡಿಕೆ ಆಹಾರವೆನ್ನದೆ ಸುತ್ತಿ | ತೊಳಲಾಡುತಿರ್ದರೆಲ್ಲ ||೨೭೮||

ಫಲಮರಂಗಳನೇರಿ | ಪೆಣ್ಗೊನೆಗಳ ನೀರಿಂ | ಗಿಳಿದು ಪಂಕಜವ ಕೊಯ್ದು |
ಬಲರಾಮ ಸಹಿತ ಗೋವಳರೊಡನಾಡುತ್ತ | ಗೆಲವಿನಿಂದಿರಲಿತ್ತಲು ||೧೭೯||

**ಕಂದ**

ಗೋಕುಲದೊಳ್ ಸುದತಿಯ ರಾ |
ಶ್ರೀಕೃಷ್ಣನ ಕಾಣದಿರಲು ಬಲು ಬೇಸರದಿಂ |
ಏಕಾಂತದಿ ಮಾತಾಡುತ |
ಶ್ರೀಕಾಂತನ ಗುಣವ ಪೊಗಳುತ್ತರಸಿದರಾಗಳ್ || ||೧೮೦||

**ರಾಗ ತೋಡಿ ಏಕತಾಳ**

ಎಲ್ಲಿಗೆ ಎದ್ದು ಪೋದ | ಗೋಪಾಲ |
ಪುಲ್ಲಲೋಚನ ಪರಮಾತ್ಮ ತಾ ಮುನಿಸಿಂದ || ಎಲ್ಲಿಗೆ || ಪಲ್ಲವಿ ||

ಬೆದರಿಸೆ ತಾಯ ಮಾತಿಗೇ | ಕೋಪಿಸಿಕೊಂಡು |
ಬದಲೊಂದು ರಾಜ್ಯ ಸೇರಿದನೋ ಗೋವಳರಾಯ || ಎಲ್ಲಿಗೆ ||೧೮೧||

ಗಾಡಿಗಾರಿನ ಮುದ್ದು ಮೋರೆ ನಟನೆಯಿಂದ |
ಆಡುತ್ತ ದಿನದಿನ ಬರುವ ಗೋಪಾಲ ತಾ || ಎಲ್ಲಿಗೆ ||೧೮೨||

ಬಲರಾಮ ಸಹಿತ ಗೋವಳರೊಡಗೊಂಡು ಗೋ |
ಕುಲದ ಬೀದಿಯೊಳಾಡುತಿರುವ ಕೃಷ್ಣಯ್ಯ ತಾ || ಎಲ್ಲಿಗೆ ||೧೮೩||

**ರಾಗ ಆನಂದಭೈರವಿ ತ್ರಿವುಡೆ – ಅಷ್ಟತಾಳ**

ಕಾಣದೆ ನಿಲಲಾರೆವೈ | ಗೋಪಾಲಕೃಷ್ಣನ || ಪಲ್ಲವಿ ||

ಕಾಣದೆ ನಿಲಲಾರೆ | ಪ್ರಾಣನಾಯಕ ಪಂಚ |
ಬಾಣ ಜನಕ ಶ್ರೀ | ವೇಣುಗೋಪಾಲನ || ಅ.ಪ ||

ಅಂಬುಜದಳನೇತ್ರನ | ಆಶ್ರಿತನಿಕು | ರುಂಬ ಲಲಿತ ಗಾತ್ರನ |
ಸದ್ವಿಜಕ | ದಂಬ ಸನ್ನುತಿ ಪಾತ್ರನ |
ಕಂಬು ಚಕ್ರಾಂಕ ಪೀ | ತಾಂಬರಧರ ದೇವ |
ಶಂಭು ಮಿತ್ರ ಸರ್ವೇಶ | ಶ್ರೀಕೃಷ್ಣನ || ಕಾಣದಿ ||೧೮೪||

ವಿಷದ ಮೊಲೆಯನುಂಡನ | ಮಹಾಂತ ರಾ | ಕ್ಷಸಿಯ ಪ್ರಾಣವ ಗೊಂಡನ |
ಗೋಕುಲಕೆ ಬಂ | ದಸಮದೈತ್ಯರ ಕೊಂದನ |

ಮೊಸರು ಬೆಣ್ಣೆಯ ಕದ್ದು | ಮೆದ್ದು ಗೋವಳರ್ಗಿತ್ತು |
ಹಸನಾಗಿ ನಲಿದಾಡುತ್ತಿರುವ ಕೃಷ್ಣಯ್ಯನ | | ಕಾಣದೆ ||೧೮೫||

**ಕಂದ**

ವಾರಿಜಲೋಚನ ತಾ ಮೈ |
ದೋರದೆ ವಂಚಿಸಿದಕೆ ನಾವೀಗಲೆ ಯಮುನಾ |
ತೀರದಿ ಮಳಲಿನ ಗೌರಿಯ |
ನಾರಾಧಿಸಿ ಮನದಿರಮಂ ಪಡೆವುದುಚಿತಂ || ||೧೮೬||

**ರಾಗ ಸವಾಯ್ ಏಕತಾಳ**

ಬಂದರು ಯಮುನಾ ತೀರದೊಳೆಲ್ಲರು | ಮಿಂದು ಮಡಿಯ ವಸನವನುಟ್ಟು |
ಚಂದದಿ ಮಳಲಿನ ಗೌರಿಯ ಮಾಡುತ | ಮಂದಗಮನೆಯರು ಪೊಡಮಟ್ಟು ||೧೮೭||

ಬರಿಸುತ ಬ್ರಾಹ್ಮಣ ದಂಪತಿಗಳನುಪ | ಚರಿಸಿ ಕನಕ ವಸ್ತ್ರಂಗಳಲಿ |
ಪರಿಪರಿಯಲಿ ಪೂಜಿಸಿ ಪಾದಾಂಬುಜ | ಕೆರಗುತವರೊಳಪ್ಪಣೆ ಬೇಡಿ ||೧೮೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹಲವು ವಿಧದಲಿ ನಲಿದು ಪ್ರಾರ್ಥಿಸಿ | ಕಲಶ ಕನ್ನಡಿ ಧೂಪದಿ |
ಫಲ ಮಹಾ ನೈವೇದ್ಯ ಪುಷ್ಪಾಂ | ಜಲಿ ಸುಶೋಭನ ಘೋಷದಿ | ||೧೮೯||

ಶರಣು ಸಕಲಾಭೀಷ್ಟದಾಯಕಿ | ಶರಣು ತ್ರಿಭುವನ ಪಾಲಕಿ ||
ಶರಣು ಶ್ರೀ ತ್ರೈಲೋಕ್ಯನಾಯಕಿ | ಶರಣು ವರ ನೀಲಾಳಕೀ | ಶರಣು ಶರಣೂ ||೧೯೦||

ಪಂಕಜಾನನೆ ಪರಮ ಪಾವನೆ | ಶಂಕರಾರ್ಧ ಶರೀರಿಣೀ |
ಶಂಖಚಕ್ರ ಗದಾಬ್ಜಪಾಣಿ ಭ | ಯಂಕರೋಂಕಾರಾತ್ಮಕಿ || ಶರಣು ಶರಣು ||೧೯೧||

**ವಚನ**

ಇಂತೆಂದು ಬೇರೆಬೇರೆ ಪ್ರಾರ್ಥಿಸುತ್ತಾ ಆ ಗೋಕುಲದ ನಾರಿಯರು ದಂಪತಿಗಳಿಗೆ ಬಾಯನ ದಾನವಿತ್ತು ಉಪಚರಿಸಿ ನವರತ್ನದಾರತಿಯನ್ನು ಬೆಳಗಿದರದೆಂತೆನೆ –

**ರಾಗ ಧವಳಾರ ಅಷ್ಟತಾಳ**

ಶ್ರೀ ಗೌರಿಗೆ ಶುಭ ಶೋಭನವೆ | ನಾಗವೇಣಿ ಪದ್ಮಾಂಬಕಿಗೆ || ಪ ||

ಭುವನವ ನುಂಗುವೆ ತಾನೆಂದ | ಬವರಕೆ ಮಹಿಷದಾನವ ಬಂದ |
ವಿವರವ ತಿಳಿದು ರಣಾಂಗದೊಳವನ | ಜವನಗರಿಗೆ ಕಳುಹಿದವಳಿಗೆ || ಶ್ರೀ ಗೌರಿಗೆ ||೧೯೨||

ಚಂದಿರವದನೆಗೆ ಚಾರು ಚರಿತ್ರೆಗೆ | ಇಂದ್ರಾದಿ ಸಕಲ ದಿವಿಜನುತೆಗೆ |
ಕಂದರ್ಪ ವೈರಿಯ ರಾಣಿ ಭವಾನಿಗೆ | ಸೌಂದರ್ಯ ರೂಪ ಮಹೇಶ್ವರಿಗೆ || ಶ್ರೀ ಗೌರಿಗೆ ||೧೯೩||

ಧರೆಯೊಳಗಧಿಕ ಕೊಲ್ಲಾಪುರದೊಳಗೆ | ಸ್ಥಿರವಾಗಿ ಭಕ್ತರ ಪೊರೆವಳಿಗೆ |
ಕರಿಮುಖ ಜನನಿಗೆ ಕಲಕೀರವಾಣಿಗೆ | ಕನಕದ ಬೊಂಬೆ ಮುಕಾಂಬಿಕೆಗೆ ||೧೯೪||

ಗಜಮುಖ ಜನನಿಮಹೇಶ್ವರಿಯೆ | ಭುಜಬಲಯುತೆ ಹಿಮಗಿರಿತನಯೆ |
ಭಜಿಸಿದೆವೈ ನಿನ್ನಯ ಪಾದವ ಪಂ | ಕಜನಾಭನ ಕರುಣಿಸು ನಮಗೆ ||೧೯೫||

**ರಾಗ ಘಂಟಾರವ ಏಕತಾಳ**

ಹೂವ ಕೊಡೆ | ಗೌರಿ | ಹೂವ ಕೊಡೆ | ಸತ್ಯ
ಭಾವೆಯ ರಮಣ ನಮ್ಮ ಆಳುವಾತನಾಗುವಂತೆ | ಹೂವ ||
ಎನ್ನ ಮನದಭೀಷ್ಟಂಗಳನ್ನು ನೀ ಪಾಲಿಸಿದರೆ |
ಹೊನ್ನ ಗೋಪುರಕ್ಕೆ ಕಲಶವನ್ನು ಸಲಿಸುವೆ |
ಚೆನ್ನದ ತೋರಣವ ಕಟ್ಟಿ | ಮುತ್ತಿನ ಚಪ್ಪರವನಿಕ್ಕಿ |
ಹನ್ನೊಂದು ನವಮಿಯ ಉಪವಾಸ | ವನ್ನು ಮಾಳ್ಪೆ ನೀ ಬಲಗೈಯ || ಹೂವ ||೧೯೬||

ಪುಂಡರೀಕ ನೇತ್ರನೆನ್ನ | ಗಂಡನಾಗಿದ್ದರೆ ನಿನ್ನ |
ಮಂಡೆಗೆ ರತ್ನದ ಮುಕುಟ | ಕೊಂಡು ತಂದಿರಿಸುವೆನು |
ದುಂಡುಮಲ್ಲಿಗೆ ಸುವರ್ಣ | ಕೆಂಡ ಸಂಪಿಗೆಯ ಮುಡಿಸಿ |
ಮಂಡಲಾರ್ಧ ದಿವಸ ವ್ರತವ ಕೈ | ಗೊಂಡು ನಾ ಜಾಗರವ ಮಾಳ್ಪೆ || ಹೂವ || ||೧೯೭||

**ಕಂದ**

ಮಾಧವನಾಗಲಿ ಪತಿಯೆಂ |
ಬಾ ದೇವಿಯ ಬೀಳುಗೊಂಡು ಮುಂದಲ್ಲಿಂದಂ ||
ಪೋದರು ಯಮುನೆಯ ತಡಿಗಂ |
ಕೊದರು ವನ ಕುಂಜದೊಳಗೆ ಫಲಪುಷ್ಪಗಳಂ || ||೧೯೮||

**ರಾಗ ಮಾರವಿ ಅಷ್ಟತಾಳ**

ಮಿಂದು ಪೋಗುವ ನಾವು ಮನೆಗೆ | ಇಲ್ಲಿ |
ಬಂದು ಹೊತ್ತಾಯಿತು ಈ ಜಲದೊಳಗೆ || ಮಿಂದು || ಪಲ್ಲವಿ ||

ಉಟ್ಟ ಸೀರೆಗಳ ಬಿಚ್ಚೆರಿಸಿ | ಅಳ | ವಟ್ಟ ಕುಪ್ಪಸದಿ ಚಿನ್ನಗಳ ಕಟ್ಟೆರಿಸಿ |
ಕಟ್ಟಿದ ಮುಡಿಯ ಸಡಿಲಿಸಿ | ನೀರಿ | ಗೊಟ್ಟಾಗಿ ಇಳಿದರೆಲ್ಲರು ಧಡಧಡಿಸಿ || ಮಿಂದು ||೧೯೯||

ಕಂಕಣಗಳು ಘಿಲಿರೆನುತ | ಗಂಧ | ಕುಂಕುಮ ಪರಿಮಳಂಗಳನು ತೊಳೆಯುತ ||
ಸೋಂಕಿದ ಕೆಸರನೊರಸುತ | ಹರಿ | ಣಾಂಕ ವದನೆಯರೊಬ್ಬೊಬ್ಬರೆಳೆಯುತ ||೨೦೦||

ಜಲಕ್ರೀಡೆಯೊಳಗಿದ್ದರೆಲ್ಲ | ತಂತ | ಮ್ಮೊಳಗೊಬ್ಬರೊಬ್ಬರು ಮುಳುಗೇಳುತೆಲ್ಲ ||
ಫುಲ್ಲಶರನರಗಿಣಿಯಂತೆ ಪೋಲ್ವ | ಚೆಲ್ವ | ಲಲನೆಯರೆಲ್ಲ ನೋಡಿದ ಲಕ್ಷ್ಮೀನಲ್ಲ ||೨೦೧||

**ಭಾಮಿನಿ**

ಬಾಲೆಯರು ತಮತಮಗೆ ಸೊಗಸಿನ |
ಮೇಲೆ ಚೆಲ್ಲುವರುದಕಗಳ ಬಿರು |
ಗಾಳಿಯಂದದೊಳೋಡಿ ಧುಮ್ಮಿಕ್ಕುವರು ಜಲದೊಳಗೆ ||
ಆಳ ಸರಿ ಮರನೇರಿ ಲಂಘಿಸಿ |
ಸೂಳನಿಡುತೊಬ್ಬೊಬ್ಬರಳುಕದೆ |
ಏಳುವರು ಘಟಿಕಾ ಪ್ರಮಾಣದೊಳಾ ಜಲಾಂತರದಿ ||೨೦೨||

ಆಡುತಿರಲಾ ಸಮಯದೊಳಗದ |
ನೋಡುತಿದ್ದನು ಕೃಷ್ಣನಿವರನೆ |
ಕೂಡಲಿದುವೇ ಸಮಯವೆನುತ್ತೈತಂದ ನಾ ಕ್ಷಣಕೆ ||
ಗಾಢದಿಂದಾವರಿಸಿ ಸೀರೆಯ |
ಮೋಡಿಯಿಂದಲಿ ತೆಗೆದು ನಲಿನಲಿ |
ದಾಡಿ ಕಡಹದ ಮರವನೇರಿದ ನಿಮಿಷ ಮಾತ್ರದಲಿ ||೨೦೩||

**ಕಂದ**

ಸೀರೆಯನೊಯ್ದುದ ಕಂಡಾ |
ನಾರಿಯರಾರೆಂದು ತಿಳಿಯದಿರೆ ಲಜ್ಜಿಸುತಂ |
ಘೋರೆಂದೆನುತೆಲ್ಲರು ಬಾ |
ಯಾರುತ ಕೂ ಕೂ ಕು ಎಂದು ಕೂಗಿದರಾಗಳ್ ||

**ರಾಗ ಭೈರವಿ ಅಷ್ಟತಾಳ**

ಕು ಕ್ಕೂ ಕೂ | ಕೂ ಎಂದು ಕೂಗಿಡೆ ಸತಿಯರು | ದಿಕ್ಕೆಲ್ಲ ಕೇಳಿತು ಕು ಕ್ಕೂ ಕೂ |
ಅಕ್ಕೊ ಮತ್ತಿಕ್ಕೊ ಮರನೇರದಿರು ಬೊಮ್ಮ | ರಕ್ಕಸ ನೈದನೆ ಕುಕ್ಕೂಕೂ ||೨೦೪||

ಕೊಲುವನು ದನುಜ ಸಾಯಲು ಬೇಡ ಮರದಿಂದ | ಇಳಿಯಯ್ಯ ಶ್ರೀಕೃಷ್ಣ ಕುಕ್ಕೂಕೂ ||
ಮೆಲುವನು ಭೇತಾಳ | ಬ್ರಹ್ಮರಾಕ್ಷಸನಿಪ್ಪ | ಸ್ಥಳವಯ್ಯ ಇದು ತಿಳಿ ಕುಕ್ಕೂಕೂ ||೨೦೫||

ಸೀರೆಯ ನೊಯ್ದರೆ ಶ್ರೀಕೃಷ್ಣ ನಿನಗಿಂಥ | ಚೋರವಿದ್ಯೆಯದೇಕೊ ಕುಕ್ಕೂಕೂ |
ಸೋರೆಯ ಮೊಸರ್ಬೆಣ್ಣೆ | ಸೂರೆಯ ಮಾಳ್ಪ ವಿಚಾರವಿದಲ್ಲಯ್ಯ | ಕುಕ್ಕೂಕೂ ||೨೦೬||

ಮನೆಮನೆ ಗೈತಂದು ಕೆನೆಮೊಸರನೆ ತಿಂದು | ಜುಣುಗಾಡಿದಂತಲ್ಲ ಕುಕ್ಕೂ ಕೂ ||
ಮನೆಯವರಿದ ಕೇಳಿದರೆ ನಿನ್ನ ಎಳೆದೊದು | ದಣಿಸಿ ದಂಡಿಸುವರು ಕುಕ್ಕೂ ಕೂ ||೩೦೭||

ಅಂಬರಗಳ ನೊಯ್ವುದುಚಿತವೆ ನಿನಗೆ ಪೀ | ತಾಂಬರ ಧಾರಿಯೆ ಕುಕ್ಕೂ ಕೂ ||
ಶಂಬರ ವೈರಿಯ ಜನಕ ಈ ಪರಿಯಲ್ಲಿ | ಡೊಂಬಿ ಏಳುವುದಯ್ಯ ಕುಕ್ಕೂ ಕೂ ||೩೦೮||

ಮತ್ಸ್ಯ ಕೂರ್ಮ ವರಾಹ ನರಸಿಂಹನಾದ ಶ್ರೀ | ಚಿತ್ತಜನಯ್ಯನೆ ಕುಕ್ಕೂ ಕೂ ||
ಮತ್ತೆ ವಾಮನನಾದ ಕ್ಷತ್ರಿಯರನು ಕೊಂದ | ಉತ್ತಮ ರಾಮನೆ ಕುಕ್ಕೂ ಕೂ ||೩೦೯||

ಹೊಡೆದಂಥ ಮಳೆಗೇಳು ದಿನ ಗೋವರ್ಧನವನ್ನು | ಕೊಡೆಪಿಡಿದಾತನೆ ಕುಕ್ಕೂ ಕೂ ||
ಮಡದಿಯ ವ್ರತವನ್ನು ಕೆಡಿಸಿ ವಾಜಿಯನೇರಿ | ನಡೆದ ನಾರಾಯಣ ಕುಕ್ಕೂ ಕೂ ||೩೧೦||

ವಸನಂಗಳನು ಕದ್ದ ವಸುದೇವ ನಣುಗನೆ | ವಶವಾದೆವೈ ನಿನ್ನ ಕುಕ್ಕೂ ಕೂ ||
ವಸುಧೆಯೊಳಗೆ ಕಣ್ವಪುರದ ಗೋಪಾಲನ | ಬಿಸರುಹ ಚರಣಕ್ಕೆ ಕುಕ್ಕೂ ಕೂ ||೩೧೧||

**ಕಂದ**

ಅಂಬುಜವದನೆಯರಿನಿತತಿ |
ಸಂಭ್ರಮದಿಂ ಕೂಗೆ ಕೇಳ್ದನಸುನಗುತಾಗಂ |
ಶಂಬರಮರ್ದನಪಿತನಂ |
ದಂಬುಜ ವದನೆಯರ ನೋಡಿ ನಗುತಿಂತೆಂದಂ || ||೩೧೨||

**ರಾಗ ಘರಜು ಏಕತಾಳ**

ಮರುಳಾದಿರಿ ನೀವು ಮರುಳಾದಿರಿ |
ಮರುಳಾದಿರಿ ನೀವು ಕೆರೆಯೊಳು ನಿಂತುಕೊಂಡು |
ಶಿರವರಿದವರಂತೆ | ಮೊರೆಯಿಟ್ಟು ಕೂಗಲ್ಯಾಕೆ ||೩೧೩||

ಬೊಮ್ಮರಕ್ಕಸ ತಿಂದರೆ | ನಮ್ಮ ವರ್ಗಲ್ಲದೆ |
ನಿಮ್ಮೊಳೇನಿದೆ ನೀವು | ಸುಮ್ಮನೆ ಮರುಗಲ್ಯಾಕೆ ||೩೧೪||

ಸತ್ಯವುಳ್ಳವರು ನೀವು ನಿ | ಮಿತ್ತವನ್ನು ಕೇಳಿಕೊಳ್ಳಿ |
ಮತ್ಯಾವುದಕ್ಕು ಮನೆಗೆ ಚಿತ್ತೈಸಿರೆಲ್ಲ ಹೀಗೆ ||೩೧೫||

ಕಾಣಲಿಲ್ಲವೆಂದು ಹೀಗೆ | ಆಣೆ ಕೊಡುವೆ ನಿಮಗೆ ಬಂದು |
ಜಾಣೆಯರ್ನೀವೆ ಕಳವ ಕಾಣಿಸಿ ಕೊಡಿರಿ ||೩೧೬||

ಧರೆಯೊಳು ಕಣ್ವಪುರುದ | ಕರುಣಿ ಶ್ರೀಕೃಷ್ಣರಾಯ ಎನ್ನ |
ಬರಿದೆ ದೂರಿಕೊಳ್ಳಲ್ಯಾಕೆ | ಮರುಳು ಹೆಂಗಳಿರಜೋಕೆ ||೩೧೭||

**ರಾಗ ಶಂಕರಾಭರಣ ಏಕತಾಳ**

ಅರಿಯದೆ ಮೋಸಹೋದೆವು | ಮರಿಯಾದೆ ಕೆಡಿಸದಿರು |
ಅರವಿಂದ ನೇತ್ರ ಬೇಡುವೆವು | ಸೆರಗೊಡ್ಡಿ ನಿನ್ನ ನಾವು ||
ಬರಿದೆ ಬೇಡಿಕೊಂಬುದೇನು | ಅರಿಯೆ ನಿಮ್ಮ ವಸ್ತ್ರಗಳನು |
ತರವಲ್ಲ ನಿಮ್ಮ ಕಣ್ಣಾಣೆ | ತರುಣಿಯರಿರ ||೩೦೮||

ಕಾಣಿಸಿಕೊಂಡಂಥದಕ್ಕು | ಆಣೆ ಭಾಷೆ ಕೊಡುವ ಠಕ್ಕು |
ಜಾಣತನ ಬಿಟ್ಟು ಕೊಡಿಸು | ನೀನು ವಸ್ತ್ರವ ||
ಏನನೆಂಬೆನಿಂಥ ನುಡಿಯ | ಮಾನಿನಿಯರೆಂದು ಮೇಲೆ |
ಜಾಣೆಯರ್ನೀವೆನ್ನ ಕಳವ | ಕಾಣಿಸಿಕೊಡಿರೆ ||೩೦೯||

ದಾಸಿಯರಾದೆವಯ್ಯ | ವಸನವ ನೀಡು ದಮ್ಮಯ್ಯ |
ಲೇಸಲ್ಲ ಬಳಲಿಸುವದಿಂತು | ಈ ಸಾರಿ ಕೃಷ್ಣ ||
ದಾಸಿಯರಾಗಿರುವುದತಿ | ಹೇಸಿಕೆಯು ಮನೆಗಳಲ್ಲಿ |
ಸಾಸಿರ ಸೀರೆಗಳಿಲ್ಲವೆ | ಏ ಸುದತಿಯರಿರ ||೩೧೦||

ಅಂಬುಧಿಯೊಳಾಡುವ ದಿ | ಗಂಬರೆಯರಾವು ಮನೆಗೆ |
ಬೆಂಬಿಡದ್ಯೆದುವದೆಂತು | ಅಂಬುಜವದನ ||
ಕುಂಭಿನಿಯೊಳಗಾಶ್ಚರ್ಯ | ವೆಂಬುದ ಕೇಳ್ದೆವೀ ಪರಿಯ |
ರಂಬೆಯನೀರ್ವು ಬತ್ತಲೆ ಮೀವ | ಸಂಭ್ರಮವೇನು ||೩೧೧||

ಸೀರೆಗಳ ಕೊಡದಿದ್ದರೆ | ದೂರುವೆವು ಗೋಪಿಯೊಡನೆ |
ಸಾರವಲ್ಲವೆಲವೊ ಕೇಳ್ಳೆ | ನೀರಜನಯನ ||
ಊರ ತಲವಾರರೊಳು | ದೂರ ಪೇಳಲವರು ಎನ್ನ ಸದ್ದಿ |
ಚಾರವ ಮಾಳ್ಪರು ತೆರಳಿ | ನೀರೆಯರೆಲ್ಲ ||೩೧೨||

ಪಾಳು ಮಾಡಬೇಡವಯ್ಯ | ಪೇಳ್ವುದ ಕೇಳ್ವೆವು ದಮ್ಮಯ್ಯ |
ಕಾಲಿಗೆ ಬೀಳ್ವೆವು ಈಗ | ಪಾಲಿಸೊ ಬೇಗ ||
ಕಾಲಿಗೆ ಬೀಳುವುದೇಕೆ | ಬಾಲೆಯರೆ ನೀರಿಂದ ನೀವು |
ಮೇಲೆ ಬನ್ನಿ ಕೊಡುವೆ ನಿಮ್ಮ | ಸೀರೆಗಳನೆಲ್ಲ ||೩೧೩||

ಎಂದ ಮಾತ ಕೇಳಿ ಮದನ | ಮಂದಿರವ ಮರೆಗೊಳ್ಳುತ್ತ |
ಬಂದರಾಗ ದಡವಹತ್ತಿ | ಮಂದಗಮನೆಯರು ||
ಇಂದಿರೆಯರಮಣ ಕೇಳು | ಇನ್ನಾದರು ದಯೆಯ ಮಾಡು |
ಬಂದೆವಲ್ಲ ದಡವ ಹತ್ತಿ | ಕಂದರ್ಪಜನಕ ||೩೧೪||

ಬತ್ತಲೆ ಕೊಳವಿಳಿದ ಪ್ರಾಯ | ಶ್ಚಿತ್ತವಾಗಿ ನೀವು ಸುರರ್ಗೆ |
ಭಕ್ತಿಯಿಂದ ನಮಿಸಿಕೊಡುವೆ | ಸುತ್ತು ವಸ್ತ್ರವ ||
ಮಡದಿಯರು ತಮ್ಮ ತಮ್ಮ | ಜಡೆಯಬಿಚ್ಚಿ ಪಸರಿಸುತ್ತ |
ಒಡನೆ ಮುಗಿದರೊಂದೆ ಕೈಯ | ಬಿಡದೆ ನಾಚುತ್ತ | | ೨೧೫||

ಒಂದು ಕೈಯ ಮುಗಿವರೆ ದೇ | ವೇಂದ್ರ ಮುಖ್ಯ ದೇವರ್ಕಳಿಗೆ |
ಚಂದವಲ್ಲ ಎರಡು ಕೈಗ | ಳಿಂದ ಮುಗಿಯಿರೆ ||
ಮಾರನ ಮಂದಿರಕೆ ತೊಡೆಯ | ಸೇರಿಸುತ್ತ ಮುಚ್ಚಿಕೊಂಡು |
ಬೇರೆ ಬೇರೆ ಎರಡು ಕೈಯ | ತೋರಿ ಮುಗಿದರು ||೨೨೬||

ಧಾರುಣಿಯೊಳು ಕಣ್ವಪುರದ | ಶ್ರೀರಂಗ ಗೋಪಾಲನೆಂದ |
ತೋರಿಸಿ ಸೀರೆಯ ಗುರುತ | ನಾರಿಯರೆ ನಿಮ್ಮ | | ೨೧೭||

**ರಾಗ ನವರೋಜು ಏಕತಾಳ**

ಅಂಗಜ ಜನಕ ಕೇಳಾನುಟ್ಟ ಸೀರೆ ಕು | ರಂಗಲೋಚನದ ಬಣ್ಣ ||
ಹೋಂಗೇದಗೆಸಳಿನ | ತೆರ ಕುಪ್ಪಸವ ದೇವೋ | ತ್ತುಂಗ ನೀ ದಯಮಾಡು ||೨೧೮||

ಇಂದ್ರಾದಿಸುರ ಸೇವ್ಯ | ನಭರಾಜ ವರದ ಶ್ರೀ | ಚಂದ್ರಶೇಖರನ ಪ್ರಿಯ |
ಚಂದ್ರಕಾವಿಯ ಸೀರೆ | ಚಂದದ ರವಕೆ ಗೋ | ವಿಂದ ನೀ ದಯ ಮಾಡು ||೨೧೯||

ಪಗಲರಸನ ಕೋಟಿ | ತೇಜ ಸರ್ವೇಶ ನೀ | ಜಗದಂತರಾತ್ಮಕನೆ |
ನಗಧರ ನಾರಾಯಣದೇವ ನಾನುಟ್ಟ | ಪಗಡೆ ಬಣ್ಣದು ಪಾಲಿಸೊ ||೨೨೦||

ಶ್ರೀಲೋಲ | ಪರಮ ಕೃಪಾಳು ದಾನವ ಶಿಶು | ಪಾಲ ಮರ್ದನನೆ ಬೇಗ |
ಶಾಲೆಯದಕೊ ಬಲಗಡೆಯೊಳಿಹುದು ಗೋ | ಪಾಲ ನೀ ದಯವ ಮಾಡು ||೨೨೧||

**ರಾಗ ಭೈರವಿ ಏಕತಾಳ**

ಪನ್ನಗಾರಿ ಧ್ವಜನೆ ಕೇಳೆನ್ನ ವಸ್ತ್ರದಂದವನ್ನು |
ಸ್ವರ್ಣದ ರೇಖೆ ಸುತ್ತಲು | ಮೆರೆವುದು | ಮಿಂಚು | ತಿರುವುದು ||೨೨೨||

ಹಳ್ಳಿಯವಳಲ್ಲ ನಾನು ಹರುಷದಿಂದ ಉಟ್ಟಂಥಾದ್ದು |
ಬೆಳ್ಳಿಯ ಕಂಬಿಯ ಸೀರೆ | ಲಾಲಿಸೊ | ಬೇಗ | ಪಾಲಿಸೊ ||೨೨೩||

ಅಚ್ಚುತಾನಂದ ಗೋವಿಂದ | ಅರಮನೆಯೊಳಗಿಂದ
ಮೆಚ್ಚಿ ಕೊಟ್ಟಂಥ ಸೀರೆ | ತೋರಯ್ಯ | ಕೈಯೊಳ್ | ತಾರಯ್ಯ ||೨೨೪||

ಬಾಲೆಯರನೆಲ್ಲ ಕರೆದು | ಶಾಲೆಗಳ ಕೊಟ್ಟನರಿದು |
ಲೀಲೆಯಿಂದ ಉಟ್ಟುಕೊಂಡು | ಮೆರೆದರು | ಸುಖ | ವೆರೆದರು ||೩೩೫||

ಭಾಳ ಹೊತ್ತಾಯಿತಿಂದು | ಜಲದೊಳಾಡುತ ನಿಂದು |
ಕೇಳಿದರೆ ಬೈವರೆಮ್ಮ ಹಿರಿಯರು | ಮನೆ | ಕಿರಿಯರು ||೩೩೬||

ಮರದ ಮೇಲಿಂದಿಳಿದು ಕಣ್ವ | ಪುರದ ಗೋಪಾಲಕೃಷ್ಣ |
ನೆರೆದ ಗೊಲ್ಲ ಹೆಂಗಳೆಲ್ಲ | ನೋಡಿದ | ಒಡ | ಗೂಡಿದ ||೩೩೭||

**ವಾರ್ಧಕ**

ಹರಿಯು ಈ ತೆರದಿ ಯಮುನಾ ನದಿಯ ತೀರದೊಳು |
ತರುಣಿಯರನೊಡಗೂಡಿ ಸಂಗಡವೆ ಗೋಕುಲಕೆ |
ತೆರಳಿ ನಡೆತಂದು ಸುಖದಿಂದಿರ್ದನೆಂಬಲ್ಲಿ ಸಂಧಿ ಸಂಪೂರ್ಣವಾಯ್ತು ||
ಅರಿತು ಪೇಳುವ ಕೇಳ್ವ ಪುಣ್ಯವಂತರ ಸಕಲ |
ದುರಿತಮಂ ಪರಿಹರಿಸಿ ಕರುಣದಿಂ ಕಣ್ವಪುರ |
ವರದ ಶ್ರೀಗೋಪಾಲ ಕೃಷ್ಣ ರಾಧಾರಮಣ ಪಾಲಿಸುವನನುಗಾಲವು || ||೩೩೮||

**ಯಕ್ಷಗಾನ ಕೃಷ್ಣ ಚರಿತೆ ಮುಗಿದುದು**

***

# ೨. ಯಾದವಾಭ್ಯುದಯ - ಪಾತ್ರಗಳು

ಗುರುಪತ್ನಿ
ದೇವಕಿ
ಗೋಪಿಯರು
ಸಖಿಯರು
ಕಂಸನ ವಿಧವಾ ಪತ್ನಿಯರು
ಉಗ್ರಸೇನ
ವಸುದೇವ
ಗಾರ್ಗ್ಯ
ಸಂದೀಪ
ವರುಣ
ಚೈದ್ಯ
ಸಾಗರ
ಶಂಖಾಸುರ
ನಂದಗೋಪ

ಬಲರಾಮ

ಕೃಷ್ಣ

ಮಾಗಧ

ಸಾತ್ಯಕಿ

ಉದ್ಧವ

ಮಂತ್ರಿ

ದಂತವಕ್ರ

ಕಿರಾತ

ಬಾಣಾಸುರ

ಕುಂಭಾಡಕ

ಕೂಪಕರ್ಣ

ಬಾಹ್ಲಿಕ

ಸೇವಕರು

ಸೈನಿಕರು

**ರಾಗ ಕೇತಾರಗೌಳ ಝಂಪೆತಾಳ**

ಅರರೆ ಚೋದಿಗವಿದ್ಯೆಸೆ | ಗೋಪಾಲ | ತರಳರೀ ನೃಪರ ಜೈಸೆ |
ತರುವಲಿಗಳೊಡನೆ ಯುದ್ಧ | ಪೇಳೆಂತು | ನೆರೆದುದಾವೆಡೆಯೆಂಬುದ ||೨೧೯||

ಮಿತ್ರ ಕೇಳ್ ಯಾದವರನು | ಮುರಿಯಲು ಧ | ರಿತ್ರಿಪರ ನೆರಹಿ ನಾನು |
ಮಿತ್ರಸುತೆ ದಡದಿ ಸೇನೆ | ಬಂದಿಳಿಯೆ | ರಾತ್ರಿ ಜೈಸಿದರು ಮೊನ್ನೆ ||೨೨೦||

ಮೋಸದಿಂ ಗೆಲ್ದರಿನ್ನು | ಪಟು ಭಟರ | ನೀ ಸೋಲ್ಗೆ ಚಿಂತೆಯೇನು |
ರೋಷವೇಕಾಯ್ತು ನಿನಗೆ | ಯಾದವರೊ | ಳೀಸು ವಿಸ್ತರಿಪುದೆನಗೆ ||೨೨೧||

ಆದರಾಲಿಸುವುದೆನ್ನ | ತನುಜೆಯರ | ಕಾದಲನ ಕಪಟಿ ಕೃಷ್ಣ |
ಯಾದವರ ಪಕ್ಷದಿಂದ | ಬಲಸಹಿತ | ಕಾದಿ ಬರಿಗಯ್ಯ ಕೊಂದ ||೨೨೨||

ಹರಹರಾಮರ ದನುಜರ | ಧುರಕೆ ಹಿಂ | ಜರಿಯದಾ ಕಂಸವೀರ |
ಹರಿದನೇ ಗೋಪರಿಂದ | ಪೇಳೇನ | ವಿರಚಿಸಿದೆ ಪ್ರತಿಯ ಮಗಧ ||೨೨೩||

ಆ ಲತಾಂಗಿಯರು ಬಂದು | ಮರುಗೆ ನಾ | ಕೇಳಿ ಮಾರ್ಬಲವನಂದು |
ಮೇಳವಿಸಿ ರಣಕೊದಗಲು | ಮಧುರೆಯೊಳು | ಸೋಲಿಸಿದರೆಮ್ಮ ಮೊದಲು ||೨೨೪||

**ಕಂದ**

ಕೇಳುತ ಹರಿರಾಮರ ಕ ।
ಟ್ಟಾಳು ತನಂಗಳ ಬೆರಳನು ಮೂಗಿನೊಳಿಡುತಂ ॥
ಆಲೋಚಿಸುತಿರೆ ಬಾಣಂ ।
ಪೇಳಿದ ತನ್ನೆಣಿಕೆಯಂ ಜರಾಸಂಧಂ ತಾಂ ॥೩೩೫॥

**ರಾಗ ಶಂಕರಾಭರಣ ತ್ರಿವುಡೆತಾಳ**

ಆನಿದಕೆ ಚಿಂತಿಸೆನು ತನಗಾ । ಗೀ ನೃಪಾಲ ಸಂಕುಲ ।
ಹಾನಿಹೊಂದಿತು ರಣದೊಳಸು ಧನ । ಮಾನಗಳಲಿ ॥೩೩೬॥

ಸೋಲವಾದುದು ವೈಪರೀತ್ಯದ । ಕಾಲಗತಿಯು ಧರಣಿಪ ।
ಜಾಲವೆತ್ತಲು ಮಲೆವ ಹುಲು ಗೋ । ಪಾಲರೆತ್ತ ॥೩೩೭॥

ಕಾದಿ ವಿಜಯವನಲ್ಲದಿರೆ ಮೃತಿ । ಸಾಧಿಸುವೆನು ಬಿಡೆನೆನು ।
ತೈದಲೆನ್ನನು ತಡೆದರಿವರೀ । ಮೇದಿನಿಪರು ॥೩೩೮॥

ಬಂದೆನದರಿಂ ಪೇಳ್ದೆ ನಾಚಿಕೆ । ಯಂದವೆಲ್ಲ ಯಾದವ ।
ವೃಂದ ನಾಶ ವ್ರತನಿಗಭಯವ । ನಿಂದು ನೀಡು ॥೩೩೯॥

**ಭಾಮಿನಿ**

ಪೊಡವಿಪತಿ ಕೇಳದಕೆ ಬಾಣನು ।
ನುಡಿದನೈ ಸಲೆ ಸಾಕು ದುಗುಡವ ।
ಬಿಡು ಮಗಧ ತವ ಭಂಗವೆನ್ನದೆನುತ್ತ ತಕ್ಕೈಸಿ ॥
ಒಡನೆ ನೃಪರೆಲ್ಲರನು ಮನೆಗೊ ।
ಯ್ದುಡಿಗೆ ತೊಡಿಗೆಗಳಿಂದ ಮನ್ನಿಸಿ ।
ಷಡುರಸಾನ್ನವನುಣಿಸಿ ಶ್ರಮ ಪರಿಹರಿಸುತಿಂತೆಂದ ॥೩೪೦॥

**ರಾಗ ದೇಸಿ ಅಷ್ಟತಾಳ**

ಲಾಲಿಸೋ । ಮಾತ । ಲಾಲಿಸೋ ॥ ಪಲ್ಲವಿ ॥

ಲಾಲಿಸು ಮಗಧ ಭೂ । ಪಾಲ ವಾಕ್ಯವನು ।
ಪೇಳೆ ನೀನೆ ಬಂದೆ । ಊಳಿಗದವನು ।
ಓಲೆಯ ತರಲೊಂದ । ಸಾಲದೆ ನೀನು ।
ಆಲಸ್ಯ ಗೈವಂಥ । ಕೀಳನೆ ನಾನು ॥ ಲಾಲಿಸೊ ॥೩೪೧॥

ರೂಢಿಪ ಕೇಳೆನ್ನ । ನಾಡಸಂಪದದ ।
ರೂಢಿ ನಿನ್ನದು ಕೋಶ । ನೋಡೊಪ್ಪಿದಂದ ।

ನಾಡ ಮಾತುಗಳಿನ್ನು । ಬೇಡಶ್ವರಥದ ।
ಜೋಡು ಶಸ್ತ್ರಾಸ್ತ್ರದ । ಪಾಡನೋಡೆಂದ ॥ ಲಾಲಿಸೊ ॥೩೪೧॥

ಇತ್ತೆಕೊಳ್ಳೆಂದಾನೆ । ಹತ್ತು ಸಾವಿರವ ।
ದೈತ್ಯಪಾಲಕ ಲಕ್ಷ । ವುತ್ತಮ ರಥವ ।
ಇತ್ತನೊರಲ್ದಶ್ವ । ಹತ್ತು ಲಕ್ಷಗಳ ।
ಮತ್ತಾಳಲೆಕ್ಕವೆನಿತ್ತೊ ಗೊತ್ತಿಲ್ಲ ॥ ಲಾಲಿಸೊ ॥೩೪೩॥

**ವಾರ್ಧಕ**

ಪೃಥ್ವಿಪತಿ ಕೇಳ್ಬಳಿಕ ಮುನ್ನೂರು ಮಂದಿ ದನು ।
ಜೋತ್ತಮರ ಮಾಯಾವಿದರನಖಿಳ ಶಸ್ತ್ರಾಸ್ತ್ರ ।
ವಸ್ತುವಾಹನ ಕನಕ ಸಂಚಯವನಿತ್ತಧಿಕ ಮೈತ್ರಿಯಿಂ ಮಾಗಧಂಗೆ ॥
ಮತ್ತೆ ನಿಜತಳ ತಂತ್ರರಕ್ಷೆಗೆನ್ನುತ ಮಂತ್ರಿ ।
ಸತ್ತಮರ ಕುಂಭಾಂಡ ಕೂಪ ಕರ್ಣರ ನೇಮಿ ।
ಸುತ್ತ ಬಾಣಂ ಬೀಳ್ಕೊಡಲು ಮಗಧಗೆಂದರತಿ ಧೈರ್ಯಮಂ ಸಚಿವೇಶರು ॥೩೪೪॥

**ರಾಗ ಮಾರವಿ ಏಕತಾಳ**

ಬಿಡುಬಿಡು ಮಾಗಧ । ಪೊಡವಿಪ ಚಿಂತೆಯ । ತಡೆಯದೆ ಗೋವಳರ ॥
ಹುಡುಗರ ಗರ್ವವ । ತಡೆಗಡಿವೆವು ನೀ । ಕೊಡಿಸೈ ವೀಳೆಯವ ॥೩೪೫॥

ಹುಲುಗೆಲಸವಿದ । ಕ್ಕಲಸೆವು ಮನದಲಿ । ಹಲವೆಣಿಸದಿರಿಂದು ॥
ಜಲಧಿಯ ಪೀರ್ವೆವು । ಮುಳಿದರೆ ಪದಿನಾ । ಲ್ಕಿಳೆಯಡಿ ಮಗುಚುವೆವು ॥೩೪೬॥

ಬರಲಾಖಂಡಲ । ಸರಸಿಜ ಭವ ಮುಖ । ಸುರರಲ್ಲದಡಭವ ॥
ನೆರೆ ಬೆಂಬಲಕವ । ದಿರಪೆಸರಡಗಿಸ । ದಿರೆವೈ ತೋರವರ ॥೩೪೭॥

**ವಾರ್ಧಕ**

ಕೇಳರಸ ಮಂತ್ರಿಗಳ ವಿಕ್ರಮೋಕ್ತಿಯ ಮಗಧ ।
ನಾಲಿಸುತ ಮುದವಾಂತು ಭರ್ಗನಕ್ಷಿಜ್ವಾಲೆ ।
ಕಾಳುರಿಗೆ ಕೂಡಿದಂದವಿ ಮತ್ತೆ ನೆರಹಿದಂ ಚೆದರಿದಾಳ್ಗಳ ಕಟಕವ ॥
ಪೇಳಲೇನಿಪ್ಪತ್ತ ಮೂರು ಅಕ್ಷೋಹಿಣಿಯ ।
ಪಾಳಿಯಿಂದಾ ಪಡೆಗೆ ಕೈವೀಸೆ ವಹಿಲದಿಂ ।
ಧಾಳಿಯಿಟ್ಟುದು ಮಧುರೆಗನಿಲನಂ ಹಿಂದುಳುಹಿ ಮನುಜ ದಿತಿಜರ ಸಮೂಹ ॥೩೪೮॥

**ರಾಗ ಅಹೇರಿ ಏಕತಾಳ**

ಸಮರಕ್ಕೈತಂದರಾಗ । ಭೋರಿಡು । ತ್ತಮಮ ಸಾಹಸದಿ ಬೇಗ ॥ ಸಮರ ॥ ಪಲ್ಲವಿ ॥

ಮತ್ತ ಗಜರಥ ತುರಗ । ಪತ್ತಿಗಳು ಬಿಡದೆ ದಂ ।
ಡೆತ್ತಿ ನಡೆದುವು ಗಿರಿಯ । ಮಸ್ತಕವ ಕಾರ್ಮುಗಿಲು ।
ಮುತ್ತುವಂದದಿ ಮಧುರೆಗೆ । ಪದಹುತಿಗೆ । ಕಿತ್ತೆದ್ದ ಧೂಳಿ ಮಸಗೆ ।
ಗಗನವನು ಕತ್ತಲಿಸಿ ದೆಸೆಗಾಣದಾಗೆ ॥ ಸಮರ ॥೩೪೯॥

ಭರಕೆ ಫಣಿಪತಿ ಕುಗ್ಗೆ । ಕರಿಕಮಠರಳಿವಳಿಯೆ ।
ಧರಣಿ ಬೆಸಲಾದಂತೆ । ಶರಧಿ ಗಡಿಮಿಕ್ಕಂತೆ ।
ಬರುತ ಕೋಟೆಯ ಕೆಡವಿತು । ಗುದ್ದಲಿಯ । ಕರದ ಬಲ ಕಡಿದೊಟ್ಟಿತು ।
ಕೊಡಲಿಗರ । ನೆರವಿ ತರುಗಳ ಸೂರೆಹೋಯ್ತು ॥ ಸಮರ ॥೩೫೦॥

ಹನುಮರಾವಿದು ಲಂಕೆ । ಯೆನುತ ಮನೆಮನೆಗಳನು ।
ಅನಲಗಿತ್ತುರೆ ಕೇರಿ । ಯನು ಹೊಕ್ಕು ಬೊಬ್ಬಿರಿಯೆ ।
ಜನಪದದ ಕಾವಲಿಗರು । ತರು ಬಲವ । ರನು ಕೈಯ್ಯ ಬಲಿದು ಖಳರು ।
ಹೊಡೆದು ಕೃಷ್ಣನಿಗೆ ದೂರಿದನೆಂದರು ॥ ಸಮರ ॥೩೫೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೂತಳಾಧಿಪ ಕೇಳು ಭಯದಿಂ । ದೂತರಾಗಳೆ ಪೋಗಿ ವೈರಿ ।
ವ್ರಾತ ಬಂದುದನರುಹಿದರೆ ಶ್ರೀ । ನಾಥ ಕೇಳಿ ॥೩೫೨॥

ಮೂರನೆಯ ಸೂಳಿಂಗೆ ಪುನರಪಿ । ಸಾರಿಬಂದನೆ ಮಗಧ ಧುರಕೆ ವಿ ।
ಚಾರ ಫಲಿಸಿತ್ತೆನುತ ಕೂಡಲೆ । ವಾರಿಜಾಕ್ಷ ॥೩೫೩॥

ಕರೆಸಿ ಯಾದವ ಸೈನಿಕರ ಹಲ । ಧರಸಹಿತ ಸಂಗರಕೆ ಪೊರಮಡ ।
ಲೊರೆದರಾ ಯದುವೀರರೊಡೆಯನ । ಚರಣಕೆರಗಿ ॥೩೫೪॥

**ರಾಗ ಕೇತಾರಗೌಳ ಝಂಪೆತಾಳ**

ದೇವ ಚಿತ್ತೈಸು ವಚನ । ನೀ ಬಿಜಯ । ಗೈವನಿತು ಘನವೆ ಕದನ ।
ದಾವಶಿಖಿಗಿದಿರೆ ಹಳುವ । ನೋಡೊಮ್ಮೆ । ಸೇವಕರ ಕೈ ಚಳಕವ ॥೩೫೫॥

ಹೋರುವೆವು ಸಮರಾಗ್ರದಿ । ರಿಪುಗಳಸು । ಹೀರುವೆವು ಭುಜಸತ್ವದಿ ।
ಬೀರುವೆವು ವಿಕ್ರಮಗಳ । ಇರೆ ನಿನ್ನ । ಕಾರುಣ್ಯ ತೊಲಗದು ಛಲ ॥೩೫೬॥

ಹಿಂದೆ ಬಹುದೆಂದಪ್ಪಣೆ । ಕೈಕೊಂಡು । ಗಾಂದಿನಿಜ ಮುಖ್ಯರೊಡನೆ ।
ಮುಂದೆ ನಡೆದಾರ್ದುಧನುವ । ಜೇವೊಡೆದು । ಸಂಧಿಸಲು ರಣರಂಗವ ॥೩೫೭॥

**ವಾರ್ಧಕ**

ಪುರವ ಹೊರವಂಟಸುರ ರಿಪು ರಾಮರನುವರಕೆ ।
ಬರುತ ಶಂಖವ ಮೊಳಗಿ ಮತ್ತದಂತಿಗಳಂತೆ ।
ಪರಬಲವ ಹರ್ಯಕ್ಷನಾದದಿಂದುರವಣಿಸುತೆಸೆದರಂಬುಧಿ ಮಧ್ಯದ ॥
ವರಮಂದರಾದ್ರಿಯಂತದ ಕೇಳಿಬಂದವನು ।
ಹರಿಯೆ ಕವಿಕವಿಯೆನುತ ಮುತ್ತಿದರು ದುಷ್ಟ ಭೂ ।
ಪರು ಕಮಲ ಬಾಂಧವನನಭ್ರಗಳ್ಮುಸುಕುವಂದದಿ ಬಾಣ ವೃಷ್ಟಿಯಿಂದ ॥೩೫೮॥

**ರಾಗ ಭೈರವಿ ತ್ರಿವುಡೆತಾಳ**

ಮುತ್ತಿತಾಗ । ಹರಿಯನು । ಮುತ್ತಿತಾಗ  ॥ ಪಲ್ಲವಿ ॥

ಮುತ್ತಿತಾ ನೃಪಮೊತ್ತವಾಪುರು । ಷೋತ್ತಮನ ಬಿಡದೊತ್ತಿ ಹೊಸಮಸೆ ।
ವೆತ್ತ ಶರದೊಳು ಮತ್ತೆ ಹರಿಶಂ । ಖೋತ್ತಮವ ಮೊಳಗುತ್ತ ಶಾರ್ಙ್ಗವ ।
ನೆತ್ತಿ ಜೇವೊಡೆದಸ್ತ್ರ ಸುರಿಯಲು । ಕತ್ತಲೆಯ ಮುರಿದುತ್ತಪಿಸುವಾ ।
ದಿತ್ಯ ನಂದದಿ ಮತ್ತ ಗಜಹಯ । ಪತ್ತಿರಥಗಳು ಸತ್ತ ಪರಿಯೇಂ
ಬಿತ್ತರಿಪೆನೂ । ಸೈನ್ಯದವಸ್ಥೆಯನ್ನು ॥ ಮುತ್ತಿತಾಗ ॥೩೫೯॥

ಕುಲಿಶ ಹತ ಕುಲಗಿರಿಗಳೋ ಕೊಳು । ಗುಳಿದೊಳಡಗೆಡದಾನೆಗಳೊ  ಶರ ।
ದಳಿತ ಕಂಧರದಶ್ವನಿಚಯವೊ । ಹಳುವವೋ ಬಿರುಗಾಳಿ ಬೀಸಿದ ।
ಬಲವೊ ಯೆನೆ ನುಗ್ಗಾಯ್ತು ಪರಬಲ । ವಿಳೆ ಹಗುರವಾಗಲ್ಕೆ ಕಂಡ ।
ಗ್ಗಳೆಯ ಮಾಯಾವಿಗಳೂ ಮುನ್ನೂರ್ । ಖಳರು ಬೀಸಿದರಾಗ ಕೃಷ್ಣನ ।
ಬಳಿಗೆ ಮಾಯ । ಕೇಳ್ ಶಶಿಕುಲದ ರಾಯ ॥ ಮುತ್ತಿತಾಗ ॥೩೬೦॥

ಕವಿಸಿ ಮಾಯೆಯ ಪುಲಿಕರಡಿ ಸಿಂ । ಹವೆ ಮೊದಲ ಮೃಗಗಣವೆನಿಸಿ ದಾ ।
ನವ ಸುಭಟರಾ ಗಜ ಹಯಾಳಿಯ । ಸವರುತಿರಲೀಕ್ಷಿಸುತ ಕರುಣಾ ।
ರ್ಣವನು ವಿಜ್ಞಾನಾಸ್ತ್ರದಲಿ ಪರಿ । ಭವಿಸುತೆಚ್ಚಡೆ ಮುರಿದುದೊಂದೇ ।
ನಿಮಿಸದೊಳು ರಾಕ್ಷಸರ ಮೋಹರ । ತವಕೆ ಬೆದರುವುದುಂಟೆ ಸೂರಿಯ ।
ನವನಿಪಾಲ । ಚೋದ್ಯದಿರವನು ಕೇಳ ॥ ಮುತ್ತಿತಾಗ ॥೩೬೧॥

**ವಾರ್ಧಕ**

ಶರಹತಿಗೆ ಮಡಿದುರುಳ್ದಾನೆಗಳ ಸೇನೆಗಳ ।
ಮುರಿದುಡಿದ ಖಳರ ಕೈಕಾಲುಗಳ ಸೀಳುಗಳ ।
ಧುರರಂಗದೊಳು ಸಿಡಿವ ರುಂಡಗಳ ಮುಂಡಗಳ ರಥಹಯದ ತಂಡಗಳೊಳು ॥
ನೊರೆರಕುತ ಹರಿಯುವ ಪ್ರವಾಹಗಳ ಊಹೆಗಳ ।

ಲಿರದೆ ತೋರ್ಪತಿ ಭಯಂಕರವಾದ ವರಮೋದ ।
ವಿರುತಿರ್ಪ ಗೃಧ್ರವೃಕ ಜಾತಗಳ ಭೂತಗಳ ಕೂಟದಿಂ ಕಣವಿರ್ದುದು ॥೩೬೨॥

**ಭಾಮಿನಿ**

ಭೂಪ ಕೇಳಿಂತಸುರರಳಿಯಲು ।
ಕೋಪದಿಂ ಬಾಣನ ಸಚಿವರಂ ।
ದಾ ಪರ್ವಾತರನೆಡೆಗೆ ಹಾಯ್ದೈ ತರಲು ಕೃತವರ್ಮ ॥
ಕೂಪಕರ್ಣನ ತಡೆದು ಬೇಗದಿ ।
ಚಾಪವನು ಜೇವೊಡೆಯೆ ಕಾಣುತ
ತಾಪಿರಿದು ರೋಷದಲಿ ಸರಳನು ತೂಗುತಿಂತೆಂದ ॥೩೬೩॥

**ರಾಗ ಮಾರವಿ ಏಕತಾಳ**

ನೀನಾರೆಲವೋ ನರಗುರಿ ಸೆಣಸುವೆ । ದಾನವರೆಮ್ಮೊಡನೆ ॥
ಪ್ರಾಣದೊಳ್ಳೈದು ವೊಡಭಿಲಾಷೆಯಿರಲ್ । ಮಾಣೆನ್ನನುವರವ ॥೩೬೪॥

ಕಾದುವ ಭಟನಾರಾದೊಡೆ ನಿನಗೇಂ । ಪೋದುದು ಬಾಹುಜರು ॥
ಮೈದೆಗೆವರೆ ಬಿಡು ಕೂರ್ಗಣೆಗಳ ನೀ । ಸಾಧಿಸು ಕೈಗುಣವ ॥೩೬೫॥

ಘಡ ಬಾಯಿಗೆ ಬಂದಂದದಿ ಗಳಹುತ । ಕೆಡದಿರು ಪೊಡವಿಪರ ॥
ಕಡು ನೀಚತ್ವದಿ ಕಳ್ಗೊಲೆಗೊಂಡಾ । ಹುಡುಗರ ತೋರಿಕೊಡು ॥೩೬೬॥

ತೊರೆಯನು ದಾಟಲ್ಕರಿಯದ ಹೇಡಿಗೆ । ಶರಧಿಯ ಮಾತೇಕ ॥
ಮರಿಸಿಂಹವು ಗಜದುರುಬೆಗೆ ಸೆಡೆವುದೆ । ಪರಿಕಿಸಿ ಪೋಗೆನ್ನ ॥೩೬೭॥

ಎಂದೆನೆ ನಿಶಿತಾಸ್ತ್ರಂಗಳ ಸುರಿಯಲು । ಕುಂದದೆ ಮಂತ್ರೀಶ ॥
ಒಂದುಳಿಯದೆ ಕೃತವರ್ಮ ತರಿದು ತಂ । ಸಂದಿಸೆ ಪೊಸ ಸರಳ ॥೩೬೮॥

**ಕಂದ**

ಕೃತವರ್ಮಕನೆಸುಗೆಯೊಳಾ ।
ಯತಿಗಿಡೆ ಸಚಿವಂ ಬಳಿಕ್ಕಲಾ ಕುಂಭಾಂಡಂ ॥
ಅತಿರೋಷದಿ ಬರೆ ಸತ್ಯಕ ।
ಸುತ ರಥವಂ ತಡೆಯೆ ನೋಡಿ ಮಾತಾಡಿಸಿದಂ ॥೩೬೯॥

**ರಾಗ ತುಜಾವಂತು ಮಟ್ಟೆತಾಳ**

ಆರೆಲೋ ಪ್ರಮತ್ತ ಯೋಧನೆ ॥ ಪಲ್ಲವಿ ॥

ಆರು ನೀನು ಹುಡುಗ ನೋಡೆ | ಸಾರಿ ಬಂದು ನಿಮ್ಮ ಬಲವ |
ಸೂರೆಗೊಂಬೆ ಭಳಿರೆ ಜನಕ | ನಾರು ನಾಮಧೇಯವೇನು |
ವೀರನಹಡೆ ಬೇಗ ಪೇಳೆಲಾ | ಜೀವಿಪರೆ ತೊಲಗು | ದೂರ ಸಮರವನ್ನು ಬಿಟ್ಟೆಲಾ |
ಇಂತೆಂಬ ಯೆನ್ನ | ವಾರತೆಯನು ಪೇಳ್ವೆ ಕೇಳೆಲಾ || ಆರೆಲೋ ||೩೭೦||

ಗಂಡುಗಲಿ ಬಲೀಂದ್ರ ತನುಜ | ರುಂಡಮಾಲ ಶರಣದೈತ್ಯ |
ಮಂಡಲಾಧಿನಾಥ ಮಲೆವ | ತುಂಡು ದೊರೆಗಳೆದೆಯ ಬಾಣ |
ಚಂಡ ಬಾಣ ಸಚಿವ ವಾರಿಧಿ | ಸುಧಾಂಶು ಸಮಕುಂ | ಭಾಂಡ ತಾನು ಸೆಣಸಲಸ್ತ್ರದಿ |
ಸದೆಬಡಿದು ನಿನ್ನ | ಹಿಂಡುಗಣಕೆ ಕೊಡುವೆ ನಿಮಿಷದಿ || ಆರೆಲೋ ||೩೭೧||

ಬಿನುಗು ಸಚಿವ ಕೇಳು ಖಳವಿ | ಪಿನ ಕುಠಾರ ಸಾಧುಕಮಲ |
ವನ ಪತಂಗ ವಾಸುದೇವ | ಸನಕ ಮುಖ್ಯವಿನುತ ಸಗುಣ |
ತ್ರಿಣಯ ಮಿತ್ರ ನೀಲಗಾತ್ರನ | ಕೇವಲ ಭಕ್ತ | ಶಿನಿಯ ಮೋಹದಣುಗನಾ ಕಣಾ |
ಈ ರೀತಿ ಸಾವ | ತನಕ ಬಗುಳುತಿಹುದೆ ತವ ಗುಣ || ಆರೆಲೋ ||೩೭೨||

**ರಾಗ ಶಂಕರಾಭರಣ ಅಷ್ಟತಾಳ**

ಸಾಕು ಸಾಕು ಬಾಯ ಬೊಮ್ಮ | ವೇಕೆ ಹಿಂದೆ ರಣದಿ ನೃಪರ |
ನೀಕವನ್ನು ಗೆಲಿದ ಹಮ್ಮ | ಭೀಕರಿಸುವೆನು ||
ಭೀಕರಿಪುದು ಮತ್ತೆ ನಿನ್ನ | ನಾ ಕೃತಾಂತನೆಡೆಗೆ ಪೋದ |
ನೇಕ ಬಲಕಧೀಶನಾಗಿ | ಜೋಕೆಗೆಯ್ವೆನು ||೩೭೩||

ಒದರ ಬೇಡವೆಲವೊ ಧೂರ್ತ | ಯದುಕುಲಜರು ಕ್ಷತ್ರಿಯರೊಳು |
ಅಧಮರವರಿಗಳಿವ ಕಾಲ | ಒದಗಿ ತಿಂದಿಗೆ ||
ಒದಗಿತೆಂಬುದಹುದು ಕೃಷ್ಣ | ಮುದದಿ ಜನಿಸೆ ಸುಪ್ರಸಿದ್ಧಿ |
ಯದುಕುಲಕ್ಕೆ ಪ್ರಳಯಕಾಲ | ಮದಮುಖರಿಗೆ ||೩೭೪||

ಮೂಗಿಲಿಗಳ ಪುರಕೆ ಸೊಟ್ಟ | ಮೂಗಿನಾತ ನರಸನೆಂಬ |
ಹಾಗೆ ನಿಮ್ಮ ಮೂರ್ಖಕುಲಕೆ | ಆಗನ್ನಗತಕಿ ||
ಆಗದಾತನಿರವು ನಿಮಗೆ | ಗೂಗೆ ರವಿಯ ಕಾಣದು ನಿ |
ರ್ಭಾಗಧೇಯ ನರಿವನೆ ಕಾ | ಲ್ದಾಗಿದ ನಿಧಿಯ ||೩೭೫||

ಹೊಳೆಗೆ ಬುರುಡೆಯನ್ನು ನೆಚ್ಚಿ | ಜಳಕಕಿಳಿಯೆ ಮುಳುಗದಿಹರೆ |
ಇಳೆಯಧೀಶ ಮಗಧ ನಹಿತ | ಬಳಸಿ ಕೆಟ್ಟೆರಿ ||
ಬಳಸಿ ಕೆಟ್ಟುದಿಲ್ಲ ನಾವು | ಖಳರ ಕೊಲಿಸಿ ಧರೆಯ ಭಾರ |
ಕಳೆವನಂಬುಜಾಕ್ಷ ಮಗಧ | ಮುಳಿದ ನೆವದೊಳು ||೩೭೬||

**ರಾಗ ಭೈರವಿ ಏಕತಾಳ**

ಕೂಗದಿರೆಲೊ ಸಾತ್ಯಕಿಯೇ | ಕೈ | ಯಾಗದು ಕೇಳ್ ನರಗುರಿಯೆ ||
ಸಾಗಿದ ನೃಪಬಲವಲ್ಲ | ದನು | ಜಾಗಮವಿದು ಲೇಸಿಲ್ಲ ||೩೭೭||

ನರನಾಥರ ಬಲತೀರೆ | ದಿತಿ | ಜರನೊರಸಲು ಕರತಾರೆ |
ಸರುವರಿಗಂತಕ ಮಗಧ | ನೀ | ನರಿತಿದನ್ನೆದು ಮದಾಂಧ ||೩೭೮||

ಹುಡುಗನೆನಿಪ ದಯೆಯಿಂದ | ಹಿತ | ನುಡಿಯಲೊಡಂಬಡೆ ಮುಗುದ |
ತೊಡುಮಾರ್ಗಣವನೆನುತ್ತ | ಖಳ | ಕಿಡಿಯುಗುಳುತ ಕಣ್ಣೊಳೆ ತಾ ||೩೭೯||

ಮೂರು ಮಹಾಸ್ತ್ರಂಗಳನು | ಯದು | ವೀರಗೆ ಬಿಡಲದನಿವನು |
ಭೋರನೆಯೆರಡಂ ತರಿದ | ಒಂ | ದೇರಲೆದಗೆ ನೆಲಹಿಡಿದ ||೩೮೦||

**ಕಂದ**

ಅರೆ ನಿಮಿಷಂ ನಸುಮೂರ್ಛೆಯೊ |
ಳುರೆ ಹ | ಮ್ಮೈಸುತಲನಂತನೊಲವಿನೊಳಂ ಚೇ ||
ತರಿಸುತ ಸಾತ್ಯಕಿ ಮಂತ್ರಿಯ |
ಜರೆದಿಂತೆಂದಂ ಕನಲ್ದು ತೂಗುತ್ತಂಬಂ ||೩೮೧||

**ರಾಗ ಕೇತಾರಗೌಳ ಅಷ್ಟತಾಳ**

ಲೇಸು ಲೇಸೆಲವೊ ಮಂ | ತ್ರೀಶ ನಾನೊಮ್ಮೆ ಹ | ಮ್ಮೈಸಿದೆನೆಂದೆನುತ ||
ರಾಶಿ ಗರ್ವವ ಹೊಂದ | ದೀಶರದೆಸಕವ | ನೀ ಸಲೆ ನೋಡೆನುತ ||೩೮೨||

ನಿಶಿತ ಕಳಂಬಗ | ಳೆಸಲು ಕುಂಭಾಂಡಕ | ನಸವಸದಿಂ ಕಡಿಯೆ ||
ಮಸೆದ ಮಂತ್ರಾಸ್ತ್ರದ | ವಿಸರವ ಹೂಡಿದ | ರಸುರ ಮಧ್ಯದಿ ತುಂಡಿಸೆ ||೩೮೩||

ಮುಳಿದು ಶಿನೇಯ ಕೈ | ಚಳಕದಿ ಬಾಣದ | ಮಳೆಗರೆದಾ ಮಂತ್ರಿಯ ||
ಸಲೆ ಸಂದು ಸಂದುಗಳ್ | ಕಳಚುವಂತೆಚ್ಚಡೆ | ನೆಲಕೊರಗಿದ ಸಚಿವ ||೩೮೪||

**ಭಾಮಿನಿ**

ಬಿದ್ದ ಸಚಿವನು ರಕ್ತಕಾರುತ |
ಲೊಯ್ದುನಾತನ ರಥದಿ ಸಾರಥಿ |
ಹೊದ್ದಿದರು ಮಿಕ್ಕಸುರರಂತಕನೆಡೆಯ ಕೃತವರ್ಮ ||
ಗೆದ್ದಡಾಗಳೆ ಕೂಪಕರ್ಣನ |

ಬಳ್ದ ದೈತ್ಯರು ಕೂಡಿ ಭಯದಿಂ ।
ಹಾಯ್ದರೀ ದಂದುಗವು ನಮಗೇಕೆಂದು ನಿಜಪುರಕೆ ॥೩೮೫॥

**ಭೋಗಷಟ್ಪದಿ**

ಅತ್ತಲನಕ ಮಗಧನೆದೆಯು ।
ಹೊತ್ತೆ ಮೊದಲ ಭಂಗದಿಂದ ।
ಸುತ್ತಲಿರ್ಪ ಬಲವ ಕೊಲುವ ಸೀರ ಪಾಣಿಯ ॥
ಕೃತ್ಯವನ್ನು ಕಂಡು ದೃಷ್ಟಿ ।
ನೆತ್ತರಂತೆ ಮಸಗೆ ವಿಲಯ ।
ಮೃತ್ಯುವೆನಲು ಕೆರಳಿ ರಥವ ಚಾಚಿ ನುಡಿದನು ॥೩೮೬॥

**ರಾಗ ಕಾಂಭೋಜಿ ತ್ವರಿತ ಝಂಪೆತಾಳ**

ಭಳಿಭಳಿರೆ ಹಿಡಿಬೇಗ । ಬಲನೆ ನಿನ್ನಯ ಮುಸಲ । ಹಲಗಳನು ವೈರಿ ಭಂಜನದ ॥
ಬಲುಹ ತೋರಿಸು ನಿನ್ನ । ತಲೆಗೆ ಗದೆಯನು ತೊಡದೆ । ಕಲಿತನಕೆ ತೆರಪಿಲ್ಲವೆನ್ನ ॥೩೮೭॥

ಲೇಸೆನ್ನ ಬಾಹುಗಳಿ । ಗೇಸು ಜನ್ಮದ ಪುಣ್ಯ । ರಾಸಿಯೋ ಫಲಿಸಿತ್ತು ಮಗಧ ॥
ಸಾಸಿಗನು ದೊರೆತೆ ನೀ । ನೀ ಸಮರದೊಳಗೆನುತ । ರೋಷದಿಂದುಗಿದನಾಯುಧವ ॥೩೮೮॥

ಒಂದು ಬಾರಿಗೆ ಗೆಲ್ದಿ । ರೆಂದು ಬರಲೆರಡನೆಗೆ । ಸಂಧಿಸುತ ಮೋಸದಿಂದಿರುಳು ॥
ಕೊಂದು ನಿದ್ರಿಸುವವರ । ದಂದುಗಮನಿತ್ತೆಲವೊ । ಹಂದೆ ಮೆರೆದಿರಿ ಕಳ್ಳತನದಿ ॥೩೮೯॥

ಹೇಡಿ ನೀನೇಕೆ ಮೊದ । ಲೋಡಿ ಬದುಕಿದೆ ನಿನ್ನ । ಕೂಡಿದರಸರ ಕೊಲಿಸುತಧಮ ॥
ರೂಢಿಪರಬಿರುದೇಕೆ । ಬೀಡಕೊಡಿಸುವೆ ಯಮನ । ನಾಡೊಳಗೆ ಪೋದವರ ಬಳಿಯ ॥೩೯೦॥

ಹಾರದಿರು ಮದವೇರಿ । ಕಾರೊಂದಕೊಂದು ಕೊಡೆ । ಹಾರಿಸಲು ಸಲ್ಲದೆಂದೆನುತ ॥
ಚೋರರಿರ ನಿಮ್ಮ ಕೌ । ಮಾರ ಮತಿಗಿತ್ತೆದಯ । ಸಾರಿದೆನು ಕೊಡಬೇಡ ತಲೆಯ ॥೩೯೧॥

ಆದಡೀ ಕ್ಷಣ ನೀನು । ಕೈದುವಿಡಿ ನಿನ್ನರಸಿ । ಯೈದೆ ತನಕವಸಾನವನ್ನು ॥
ಗೈದುಕೊಡುವೆನೆನುತ್ತ । ಕ್ರೋಧದಿಂ ತಿರುಗಿಸುತ । ಹೊಯ್ದ ಮಗಧನ ಹಲದಿ ಬಲನು ॥೩೯೨॥

**ಭಾಮಿನಿ**

ಅರಸ ಕೇಳಾ ಮುಸಲ ಹರಿಯೊಳು ।
ಧರಣಿಪಾಲ ಗಿರಿವ್ರಜನ ರಥ ।
ತುರಗ ಸಾರಥಿ ಛತ್ರಧಾರಿಗಳಳಿದರಾಕ್ಷಣದಿ ॥
ಹರಣವುಳಿಯಲು ಕವಚ ಸೀಸಕ ।

ವಿರದೆ ಕುಪ್ಪಳಿಸಲ್ಕೆ ಖತಿಯಿಂ ।
ವಿರಥನಡಹಾಯ್ದೆಂದ ಗದೆಯಂ ಜಡಿದು ಹಲಧರಗೆ ॥೩೯೩॥

**ರಾಗ ಭೈರವಿ ಏಕತಾಳ**

ಧೀರುರೆ ರಥವಿಲ್ಲೆನುತ । ಪುಟ । ವೇರದಿರೆಲವೋ ಧೂರ್ತ ।
ತೇರಿನ ಹಂಗೇತಕ್ಕ । ಕೈ । ಮೀರಲು ತಡೆವುದು ಜೋಕೆ ॥೩೯೪॥

ಕಡೆಯೆನುತಲೆ ಮಾಗಧನು । ತಿರು । ಹಿಡೆಗದೆಯನು ಹಲಧರನು ।
ತುಡುಕಿದನೆಡಗೆಯ್ಯಿಂದ । ಅವ । ಗಡಿ ಸುತಲೇನಿಹುದೆಂದ ॥೩೯೫॥

ರಪಣಗಳೇಕೆಲೊ ಹೂಹೆ । ಭುಜ । ರಪಣವು ಭಟೆಗಾಜಿಗಿಹೆ ॥
ನಿಪುಣನಹಡೆ ನಿಲು ನಿಲ್ಲು । ನಾ । ತೃಪುತಿಗೊಳಿಪೆ ಮುಷ್ಟಿಯೊಳು ॥೩೯೬॥

ಎನುತ ಗಿರಿವ್ರಜ ಭುಜವ । ಹೊ । ಯ್ದನು ವರಕಿದಿರಾಗಲಿವ ।
ಕಣಕಿಳಿದನು ರಥ ಬಿಟ್ಟು । ಭುಜ । ವನು ತಟ್ಟುತ ಹಲವಿಟ್ಟು ॥೩೯೭॥

**ರಾಗ ಸುರುಟಿ ಮಟ್ಟೆತಾಳ**

ಕಾದಿದರವರು । ಮಾಗಧ ಬಲರು । ಕಾದಿದರವರು ॥ ಪಲ್ಲವಿ ॥

ನೀಲಾಂಬರನಿಲು ನಿನ್ನ । ತೋಳಿನ ಬಲುಹನ್ನು ।
ಕಾಳೆಗದೊಳು ತೋರೆನುತಲೆ । ತಾಳುತ ಕಿನಿಸನ್ನು ॥ ಕಾದಿದ ॥೩೯೮॥

ಗುದ್ದಿದ ಮಾಗಧನಾತನ । ಹೊದ್ಯೆರಗಿದ ಬಲನು ॥
ಬಿದ್ದರು ನೆಲಕಿತ್ತಟ್ಟಿನ । ಯುದ್ಧವಿಶಾರದರು ॥ ಕಾದಿದ ॥೩೯೯॥

ಮಾಗಧನನು ಬೀಳಿಸಿದರೆ । ನೇಗಿಲ ಗೆಯ್ಯನು ತಾ ।
ನಾಗಲೆ ಮೇಲಕೆ ನೆಗೆದನು । ರೇಗಿ ಜರಾಸಂಧ ॥ ಕಾದಿದ ॥೪೦೦॥

**ಭಾಮಿನಿ**

ಏಳುತೆತ್ತಿದರಾಕ್ಷಣದಿ ಕ ।
ಟ್ಟಾಳುಗಳು ಗದೆ ಮುಸಲಗಳನೇ ।
ವೇಳುವೆನು ಘಾತಿಸಿದರನ್ಯೋನ್ಯದಿ ಮಹಾಭಟರು ॥
ಶೈಲವೆರಡರ ಪೋಲ್ವ ಬಲನರ ।
ಪಾಲಕರ ಹತಿ ಸಿಡಿಲಿನಂತಿರೆ ।
ಕಾಳೆಗವನಚ್ಚರಿಯೊಳೀಕ್ಷಿಸುತಿರ್ದುದಮರಗಣ ॥೪೦೧॥

**ರಾಗ ಶಂಕರಾಭರಣ ಮಟ್ಟೆತಾಳ**

ಉಡುಗಣೇಶ ಕುಲಜ ಕೇಳು | ಕಡುವಿರೋಧದಿ ||
ಹೊಡೆದು ಕೊಂಡರಾಗ ಹಲಿಯು | ಬಿಡದೆ ಮುಸಲದಿ ||
ಪೊಡವಿಪಾಲನುರವ ಹೆಗಲ | ಪೊಡೆಯ ನುಡಿಯನು |
ತೊಡೆಯ ನಾಭಿ ಜಂಘೆಗಳನು | ಜಡಿದು ಹೊಯ್ದನು ||೪೦೨||

ಕೆರಳಿ ಹಲಿಯನೆದೆಯ ಪೆಗಲ | ಶಿರವ ಜಠರವ |
ಭರದೊಳಾತನೆರಗಿದಂತೆ | ಸರುವ ಭಾಗವ |
ಧರಣಿಪಾಲ ಹೊಡೆಯಲಿವರ | ಧುರಭಯಂಕರ |
ತೆರದಿ ಕಂಡುದೆನಿತೊ ಶೌರ್ಯ | ಸಾರವಿಬ್ಬರ ||೪೦೩||

ನೆಗ್ಗಿತವನಿ ಭಟರ ಹತಿಯ | ಲಗ್ಗೆಗಮರರು ||
ಹುಗ್ಗಿದರು ಫಣೀಂದ್ರ ವೇಣು | ದಿಗ್ಗಜಂಗಳು |
ಕುಗ್ಗಿ ತಲ್ಲಣಿಸೆ ಕೆನ್ನೀರ | ಹೆಗ್ಗಡಲಿನೊಳು |
ಬಗ್ಗದೊವಲಗಣವು ಮೀಯ | ಲಗ್ಗಮುದದೊಳು ||೪೦೪||

**ರಾಗ ಕೇತಾರಗೌಳ ಅಷ್ಟತಾಳ**

ಕೇಳೆಲೊ ಮಗಧ ನೃ | ಪಾಲಾಧಮನೆ ನಿನ್ನ | ಬಾಳುವೆ ಕೊನೆಯಾಯಿತು ||
ಪೇಳಿ ಕಳುಹು ಬಂಧು | ಚಾಲಕಂತಿಮ ಸುದ್ದಿ | ಬೀಳಮುನ್ನೆನಲೆಮಂದನು ||೪೦೫||

ಗಳಹದಿರೆಲೊ ನಿನ್ನ | ಬಲುಹ ಕುಂದಿಸುತ ನಿ | ರ್ಬಲನಾಗಿಸುತೆ ಭೂಪರ |
ಗೆಲಿದ ಗರುವ ರೋಗ | ವಿಳಿಸು ಮದ್ದೀವೆ | ತಿಳಿದು ನಿಲ್ಲೆಂದೆನುತ ||೪೦೬||

ಪೊಡವಿಪ ಮುಷ್ಟಿಯಿಂ | ದಿಡೆ ಗಣಿಸದೆ ರಾಮ | ನಡೆಸಿ ಜರಾಸಂಧನ ||
ಘಡ ಬೀಳೆಂದೆರಗುತ್ತ | ಹಿಡಿದು ಮುಂದಲೆಯನು | ನುಡಿದಪಚಾರಿಸುತ ||೪೦೭||

**ರಾಗ ದೇಶಿ ಅಷ್ಟತಾಳ**

ಏನೆಲವೆಲೊ ಮಗಧ | ಈ ಪರಿ ಸೋತು | ದೇನೆಲವೆಲೊ ಮಗಧ  || ಪಲ್ಲವಿ ||

ಮಾನನಿಧಿಯು ನಿನಗೀ ನಿಕೃಷ್ಟಾವಸ್ಥೆ || ಏನೆಲವೆಲೊ || ಅನು ಪಲ್ಲವಿ ||

ಭೂರಿ ಬಲಾಢ್ಯ ತಾನೆಂದೆ | ಸೈನ್ಯ | ವಾರಿಧಿಯನು ಕರತಂದೆ |
ಮೂರು ಸೂಳಿಗೆ ನಮ್ಮ | ಹೋರಾಟಕೆಂದು ಮ | ತ್ತೀ ರೀತಿ ಸಿಲುಕುವದೆ |
ಬೆಂಬಲಕೀಗ | ಯಾರಾದರೂ ಬಪ್ಪರೇ | ಕೊರಳು ಕೊಯ್ಯು | ವಾರವನಚ್ಚುವರೆ ||
ಏನೆಲವೆಲೊ ||೪೦೮||

ಹರನ ವರವ ನೀನು ಪಡೆದೆ । ಸರ್ವ । ದೊರೆ ಮಕ್ಕಳನು ಸೆರೆಗೆಯ್ದೆ ।
ವರ ಚೈದ್ಯ ಬಾಣರು । ಪರಮ ಮಿತ್ರರು ನಿನ್ನ । ಸರಿಯಾರು ಭೂತಳದಿ ।
ಏಕಚ್ಛತ್ರದರಸು ನೀನೀ ವೇಳ್ಯದಿ । ಪೇಳುವುದೇನ । ಚ್ಚರಿ ನಿನಗಾದ ವಿಧಿ ॥ ಏನೆಲ ॥೪೦೯॥

ಕುಲಹೀನರಾವು ಗೋವಳರು । ನೀವು । ಬಲವುಳ್ಳ ಬಾಹುಜೋತ್ತಮರು ।
ಸಲೆ ನಮ್ಮೊಡನೆ ಸೋತು । ತಲೆಬಾಗಿ ಮನೆವೊಕ್ಕು । ಲಲನೆಯರಿಗೆ ಮೊಗವ । ತೋರುವೆಯೆಂತು । ಖಳ ನಿನಗುಚಿತ ಸಾವ ।
ಹರಿಬವೆಂದು ಬಲನೆಗಹಿದ ಹಲವ ॥  ಏನಿಲವೆಲೋ ॥೪೧೦॥

**ಭಾಮಿನಿ**

ಗೋಮಿನಿಪ ಕೇಳಾಕ್ಷಣದೊಳಾ ।
ವ್ಯೋಮದಲಿ ನೇಗಿಲನು ತೆಗೆತೆಗೆ ।
ರಾಮ ನಿನ್ನೊಳು ಮಡಿವನಲ್ಲೀ ವಿಗಡನದರಿಂದ ॥
ಸೌಮನಸ್ಯದಿ ನಡೆ ಮನೆಗೆ ಸಂ ।
ಗ್ರಾಮದೊಳು ಜಯವಾಯ್ತು ನಿನಗೆಂ ।
ದಾ ಮಹಾಸಿಡಿಲಂತೆ ನುಡಿದಡಗಿತು ನಭೋವಚನ ॥೪೧೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಿಟ್ಟನದ ಕೇಳುತ್ತ ಮಗಧನ । ಕೊಟ್ಟೆನಸುದಾನವನು ನೀನಿಂ ।
ಬಿಟ್ಟು ಕೋ ಬುದ್ಧಿಯನು ನಡೆ ನಿಜ । ಪಟ್ಟಣಕ್ಕೆ ॥೪೧೨॥

ಎನುತ ತಿರುಗಿದನಿತ್ತ ಹಲಧರ । ಜನಪರನು ಪರಿಭವಿಸಿ ಭೀಕರ ।
ಕಣವನುಳಿದವನೀಶರಾಚೆಯೊ । ಳನುವರದೊಳು ॥೪೧೩॥

ಜಾತಭಂಗದ ಭರದಿ ಮಗಧ ಸ । ಮೇತ ಹಾಯ್ದರು ನಗರಕಲ್ಪ ಪ ।
ದಾತಿಯಲಿ ಸಂತಪಿಸುತಲೆ ಪರಿ । ಪಾತಬಲರು ॥೪೧೪॥

ಅತ್ತಲಸುರಾರಾತಿ ವೈರಿ ಜ । ಯೋತ್ತರದ ಸಂತೋಷದಿಂದೂ ।
ದುತ್ತ ಶಂಖವ ಯಾದವರ ಕೂ । ಡುತ್ತ ಬಳಿಕ ॥೪೧೫॥

ಸಮರರಂಗವ ದಾಟಿ ಬಲು ಸಂ । ಭ್ರಮದಿ ನಗರವ ಪೊಕ್ಕರಭ್ರದೊ ।
ಳಮರರಬ್ಜಜಹರರು ಜಯವೆನೆ । ಸುಮವ ಸುರಿಸಿ ॥೪೧೬॥

**ಭಾಮಿನಿ**

ಪುರವನಿತೆಯರು ಮುದದಿ ಕೃಷ್ಣನ ।
ನೆರೆದು ನೋಡಲು ರಥವನಿಳಿಯುತ ।
ಕರುಣವಾರಿಧಿಯಿಕ್ಕೆಲದಿ ಬಹ ಯಾದವರ ಕೂಡೆ ॥

ಅರಮನೆಯ ಸೇರ್ದಲ್ಲಿ ಹರಿಹರ ।
ಧರಸಹಿತ ಹರಿಪೀಠದೊಳಗೆಸೆ
ದಿರಲು ನಾರೀಮಣಿಯರೆತ್ತಿದರಾರತಿಯನೊಲಿದು ॥೪೧೭॥

**ರಾಗ ಸುರುಟಿ ಆದಿತಾಳ**

ಶ್ರೀರಾಮರಮಗೆ । ಧಾರಿಣಿ । ಭಾರ ನಿವಾರಣೆಗೆ ।
ನೀರದಗಾತ್ರಗೆ । ಶೌರಿಗೆ ಖಳ ಕಂ ।
ಸಾರಿಗೆ ನತವೃಂ । ದಾರಕ ಕುಜಗೆ ॥
ವಾರಿಜದಾರತಿಯ ಬೆಳಗಿರೆ ॥೪೧೮॥

ಸಿಂಧುರ ವರದನಿಗೆ । ಸುರನರ । ವಂದಿತ ಚರಣನಿಗೆ ।
ಚಂದದಿ ಶರಣರ । ವೃಂದವ ಕಾವ ಮು ।
ಕುಂದಗೆ ನಿತ್ಯಾ । ನಂದಗೆ ಸತಿಯರು ॥
ಕುಂದಣದಾರತಿಯ ಬೆಳಗಿದರು ॥೪೧೯॥

ರಾಮಗೆ ಕೃಷ್ಣನಿಗೆ । ಮಾಗಧ । ಭೀಮಮಹಾಭುಜಗೆ ।
ತಾಮರಸಾಕ್ಷಗೆ । ಕಾಮಿತವೀವಗೆ ।
ಸಾಮಜ ಗಮನದ । ಶ್ಯಾಮೆಯರೆಲ್ಲರು ॥
ಪ್ರೇಮದೊಳಾರತಿಯ ಬೆಳಗಿರೆ ॥೪೨೦॥

**ಭಾಮಿನಿ**

ಗಜಪುರಾಧಿಪ ಲಾಲಿಸಿಂತಾ ।
ಸುಜನ ಹಿತ ವಿಗ್ರಹರು ಖಳ ಭೂ ।
ಭುಜರ ಕಟಕವ ಸದೆದು ವಸುಧೆಯ ಭಾರವನು ಕಳೆದು ॥
ಭಜಿಪ ತನ್ನೇಕಾಂತ ಸಾಧು ।
ವ್ರಜವ ರಕ್ಷಿಸುತಲಿ ಮಧುರೆಯೊಳು ।
ನಿಜ ವಿನೋದದೊಳಿದ್ದರಾ ನಿತ್ಯಾತ್ಮ ಹಲಧರರು ॥೪೨೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತೆಸೆವ ಸತ್ಕಥೆಯ ಗೋಪೀ । ಕಾಂತನೊಲವಿಂ ಶುಕ ಮುನೀಂದ್ರನು ।
ದಂತಿಪುರ ಪತಿಗುಸುರೆ ಕೇಳ್ದತಿ । ಸಂತಸದೊಳು ॥೪೨೨॥

ಜಗದಧೀಶನ ಮನುಜಲೀಲೆಯ । ಪೊಗಳಲಸದಳವೆನುತ ಕೀರ್ತಿಸಿ ।
ನಗಧರನ ಭೂಪಾಲನಿರ್ದನು । ಮಿಗೆ ಸುಖದೊಳು ॥೪೨೩॥

ಶೈಲಜಾರ್ಧ ಶರೀರನಹ ಪೆರ । ಡಾಲ ವುದನೇಶ್ವರನ ದಾಸ ಸು ।
ಶೀಲ ಸದ್ಗುಣ ವೆಂಕಟಾಚಲ । ಬಾಲಕೃಷ್ಣ ॥೪೨೪॥

ಮಹಿತಜನ ಸಂಸ್ಕೃತ ಸುವಿದ್ಯಾ । ಗೃಹದ ಕನ್ನಡದೋಜನಾನೀ ।
ಯಹಿಶಯನ ಕಥೆಯಿದನು ಪೇಳಿದೆ । ಮಹಿಗೊರಲ್ದು ॥೪೨೫॥

ಯಕ್ಷಗಾನದಿ ತಪ್ಪಿರಲ್ಕೆ ವಿ । ಚಕ್ಷಣರು ಸರಿಗೊಳಿಸಿ ನೋಳ್ಪುದು ।
ಪೇಕ್ಷಿಸದೆ ಗುಣವನೆ ಸದಾ ಹರಿ । ರಕ್ಷಿಸುವನು ॥೪೨೬॥

**ಭಾಮಿನಿ**

ಶಾಲಿವಾಹನ ಶಕದ ನಭ ನಿಗ ।
ಮಾಳಿ ದಿಕ್ಚಂದ್ರಮರ ಸಂಖ್ಯೆಯ ।
ಕಾಲಯುಕ್ತಿಯ ವತ್ಸರದೊಳಾಷಾಢ ಮಾಸದಲಿ ॥
ನೀಲಪಕ್ಷದ್ವಾದಶಿಯೊಳಿದ ।
ಪೇಳಿ ಮುಗಿಸಿದೆ ಶಿವದಯದಿ ಹರಿ ।
ಲೀಲೆಯನು ಪೊರೆಗನವರತ ಸಜ್ಜನರ ನಿತ್ಯಾತ್ಮ ॥೪೨೭॥

**ರಾಗ ಭೂಪಾಳಿ ತ್ರಿವುಡೆತಾಳ**

ಮಂಗಲಂ ಜಯ ಮಂಗಲಂ ಶುಭ । ಮಂಗಲಂ ನಿತ್ಯಾತ್ಮಗೆ ॥
ಮಂಗಲಂ ಜಯ ಮಂಗಲಂ ಶುಭ । ಮಂಗಲಂ ಸರ್ವಾತ್ಮಗೆ  ॥ ಪಲ್ಲವಿ ॥

ರಂಗ ಕರುಣಾಪಾಂಗ ಖಳನೃಪ । ಭಂಗ ಜಲದನಿಭಾಂಗಗೆ ॥
ತುಂಗಭುಜ ಸತ್ಸಂಗ ವರ ಗೋ । ಪಾಂಗನಾಳಿ ಭುಜಂಗಗೆ ॥ ಮಂಗಲಂ ॥ ॥೪೨೮॥

ನಂದ ಹೃದಯಾನಂದ ವರ್ಧನ । ಇಂದಿರೇಶ ಮುಕುಂದಗೆ ॥
ಸುಂದರಾಂಬುಜ ಕಂದಸುರ ನರ । ವಂದಿತಾಂಘ್ರಿ ದ್ವಂದ್ವಗೆ ॥ ಮಂಗಲಂ ॥೪೨೯॥

ಈಶ ಸಜ್ಜನಪೋಷ ಹಿಮಗಿರಿ । ಜೇಶ ಪನ್ನಗ ಭೂಷಗೆ ॥
ಕೇಶವಾಪ್ತ ಸುರೇಶನುತ ನಭ । ಕೇಶ ಶ್ರೀ ಉದನೇಶಗೆ ॥ ಮಂಗಲಂ ॥೪೩೦॥

* * *

**ರಾಗ ಮಾರವಿ ಏಕತಾಳ**

ತೋರಾದಡೆ ವಲ | ವೈರಿ ಮುಖಾಮರ | ವಾರವು ಪರಿಕಿಸಲಿ ||
ಭೋರನೆ ಛಲವ ವಿ | ಚಾರಗಳೇತಕೆ | ಕೂರಸಿಗಳು ಬರಲಿ ||೨೬೨||

ತಲೆಗಾಯ್ವರ ಬೆಂ | ಬಲಕೀಗಳೆ ಕರೆ | ತಳುವದೆನುತ ಚೈದ್ಯ ||
ಮುಳಿದೆಚ್ಚೆಡೆ ಮಸೆ | ದಲಗುಗಳನು ಪಥ | ದೊಳೆ ಕಡಿದಬ್ಜಾಕ್ಷ ||೨೬೩||

ಖಳ ನಿನ್ನಯ ಗಂ | ಟಲ ಮುರಿಯುವ ಜನ | ತಿಳಿನಾನೆಂದೆನುತ ||
ಹುಲುಗಣೆಗಳೊಳೇಂ | ಫಲ ಮಂತ್ರಾಸ್ತ್ರವ | ಕಳುಹೆಂದೆನುತೆಚ್ಚ ||೨೬೪||

ಸೈರಿಸಿ ಚೇದಿಪ | ನೇರಿಸುತನಲನ | ಶೌರಿಗೆ ಗುರಿಯಿಡಲು ||
ವಾರುಣದಿಂದ ನಿ | ವಾರಿಸೆ ಗರಳವ | ಕಾರುವ ಸರ್ಪಾಸ್ತ್ರ ||೨೬೫||

ಬಿಡಲಸುರಾರಿ ಗ | ರುಡನಿಂದರಿಯಲು | ಜಡಜಾಸನ ಶರವ ||
ಪೊಡವಿಪನೆಚ್ಚಡೆ | ನಡುವಿನೊಳಗೆ ಹರಿ | ಕಡಿದಿಡೆ ಮತ್ತವನು ||೨೬೬||

**ಭಾಮಿನಿ**

ಎಚ್ಚಮಂತ್ರ ಶಿಲೀಖಂಗಳ |
ನುಚ್ಚುನುರಿಗೆಯ್ದಬ್ಜನಾಭನು |
ಕೊಚ್ಚಿದನು ರಥದಶ್ವಗಳ ನಾ ಕೇತುದಂಡವನು ||
ಅಚ್ಚಮಸೆಯಲಗಿನಲಿ ಕವಚವ |
ಬಿಚ್ಚಿದನು ಡೊಣೆ ಬಿಲ್ಗಳನು ಮಗು |
ಳೆಚ್ಚು ಮಕುಟಚ್ಛತ್ರಗಳ ಕೆಡಹಿದನು ಚೇದಿಪನ ||೨೬೭||

**ಕಂದ**

ಭೂಲೋಲನೆ ಕೇಳ್ಳೈ ಶಿಶು |
ಪಾಲಾದಿಗಳಸುವಿಡಿವೊಡೆ ಮೈಗರೆದೋಡಲ್ |
ನೀಲಾಂಗಂ ಪಡೆಯುತ ಜಯ |
ಬಾಲೆಯ ಶಂಖವ ಮೊಳಗಿದ ಘೇಯೆನೆ ವಿಬುಧರ್ ||೨೬೮||

**ರಾಗ ಶಂಕರಾಭರಣ ಮಟ್ಟೆತಾಳ**

ಜನಪ ಲಾಲಿಸಿತ್ತ ಮಾಗ | ಧನ ಬಲೌಘವ |
ಕನಲಿಹೊಕ್ಕು ಕಡಿದ ರಾಮ | ಬಿನುಗರಡವಿಯ ||೨೬೯||

ಮುಸಲ ಹಲಗಳಿಂದ ಹೊಡೆದು । ವಸುಧೆಗುರುಳಿಸಿ ॥
ಅಸಿಯರೆದ ಚತುರ್ಬಲವನು । ಅಸಮ ಸಾಹಸಿ ॥೨೭೦॥

ಹರಿವ ರಕ್ತಕರುಳ ಹೊರಳಿ । ಧರೆಯ ತುಂಬಲು ॥
ಅರರೆ ಬಲು ಭಯಾನಕದೊಳು । ಧುರವು ತೋರಲು ॥೨೭೧॥

ಸೃಷ್ಟಿಪಾಲ ನಿಚಯ ಮಗಧ । ನಿಟ್ಟ ಕಿಚ್ಚಿದು ॥
ಅಟ್ಟಿಸುಡುವುದೆನುತ ರಣವ । ಬಿಟ್ಟು ಹಾಯ್ದದು ॥೨೭೨॥

**ವಾರ್ಧಕ**

ಕರಿನಿಕರ ದೀವಿಗಳೊಳಶ್ವರಥನಕ್ರಗಳೊ ।
ಳಿರಿದ ಭುಜಫಣಿಗಳೊಳ್ ಕರವೆಂಬ ಝಷಗಳೊಳ್ ।
ಕರುಳ ಹಾವಸೆಗಳೊಳ್ ಬಿಲ್ಲೊಗ್ಗಿನಲೆಗಳೊಳ್ ಮುರಿದಾಯುಧಂಗಳೆನಿಪ ॥
ಕಿರುಗಿಡಂಗಳೊಳು ಭೀಕರ ಮಹಾನಕ ವಿಡಿದ ।
ವರ ಸುಳಿಗಳೊಳ್ ರತ್ನಭೂಷಣದ ಶಿಲೆಗಳೊಳ್ ।
ಹರಿದ ತಲೆ ಕೂರ್ಮಗಳೊಳರುಣ ಜಲವಾರಿನಿಧಿ ನಡುಗಿಸಿತು ನೋಳ್ಪರೆದೆಯ ॥೨೭೩॥

**ಭಾಮಿನಿ**

ಮೇದಿನೀಪತಿ ಕೇಳು ಬಲನು ।
ಗ್ಗಾರುದನು ಮೇಣಖಿಳ ಭೂಪರು ।
ಹೋದುದನು ಮಾಗಧನು ಕಾಣುತ ರೋಷಭೀಷಣನು ॥
ಬಯ್ದು ವೇತುಗರೆನುತಲಿದಿರಡ ।
ಹಾಯ್ದು ಕಾದುವಡಿದಿರು ನಿಲುನಿಲ್ ।
ಕೈದುಗೊಳ್ಳೆಂದೆನುತ ಮುಸಲಿಯನೆರಗು ತಿಂತೆಂದ ॥೨೭೪॥

**ರಾಗ ಮಾರವಿ ಅಷ್ಟತಾಳ**

ಒನಕೆಗಾರನೆ ಮಝ ಭಾಪೆಲ । ನಿನ್ನ । ರಣದ ಕೌಶಲ್ಯವ ತೋರೆಲ ।
ಜನಪರ ಗೆಲಿದಿಹ ಗರ್ವವ । ಬಿಟ್ಟು । ಮನೆಗೆಯ್ದು ಪಿಡಿವೊಡೆ ಜೀವವ ॥೨೭೫॥

ಬಲಹೀನ ಭೂಪರ ಕೇಳ್ಕುಟ್ಟಿ । ಸರ್ವ । ನೆಲವನನ್ಯಾಯದಿ ಜಗಜಟ್ಟಿ ।
ತಳಮಳಿಸುವ ನಿನ್ನ ಪೆರ್ಮೆಯ । ಕ್ಷಣ । ಹಲದೊಳಿಳಿಸಿ ಸೇರ್ವೆನಾಲಯ ॥೨೭೬॥

ಮೊರೆಯೇನು ನಿನಗೆ ಭೂಮಿಪರೊಳು । ಸಹೋ । ದರರೊ ಹೆತ್ತವರೊ ಪೇಳೆನ್ನೊಳು ।
ಬರಿದಂಭವೀಕಡೆ ಸಲ್ಲದು । ನಿನ್ನ । ತುರುಗಾವ ಹಳ್ಳಿಗುಚಿತವದು ॥೨೭೭॥

ಬಂಧುತ್ವವೆಮಗೆ ಸಾಧುಗಳೊಳು । ದುರ್ಮ । ದಾಂಧರೊಡನೆ ಕಡುಹಗೆ ಕೇಳು ।
ಕೊಂದು ದುಷ್ಟರ ಧರ್ಮರಕ್ಷಣ । ಮಾಳ್ಪು । ದೊಂದೆ ಕರ್ತವ್ಯವೆಮ್ಮದು ಕಾಣ ॥೧೭೮॥

ಹೆಳವಗೇತಕೆ ತೀರ್ಥಯಾತ್ರೆಯು । ಗೋವು । ಗಳ ಮೇಯಿಸುವುದಾದವ ರೀತಿಯು ।
ಬಲವಂತ ಕಂಸನ ಕೆಡಹಿದ । ತರು । ವಲಿಯ ಕಳುಹು ಸಾಕೀ ವಾಗ್ವಾದ ॥೧೭೯॥

ಗೋವಿನಿಂದತಿ ಸಾಧು ಜೀವಿಯ । ಕಾಣ । ದೋವಿದೆ ಪಶುಗಳು ನಿಮ್ಮಯ್ಯ ।
ನೋವುದ ಸಹಿಸದೆ ಕಂಸನ । ಕೊಂದ । ಗೋವಿಂದವಧಿಸುವೆ ನಾ ನಿನ್ನ ॥೧೮೦॥

**ರಾಗ ಕೇತಾರಗೌಳ ಝಂಪೆತಾಳ**

ಪೂತುರೇ ರೌಹಿಣೇಯ । ಚದುರನಹೆ ಮಾತಿ । ನೊಳು ತಿಳಿದೆ ಬಗೆಯ ।
ಮಾತುಳನ ಕೊಂದ ಪಾಪ । ತೊಲಗುವುದೆ । ಏತಕೀ ಬರಿ ವಿಲಾಪ ॥೧೮೧॥

ನೆರೆ ಗುಣಾವಳಿ ದುರ್ಗುಣ । ಲೇಶವನು । ಮರೆಸದೇ ಚಂದ್ರಕಿರಣ ।
ಕರೆಯ ಮುಚ್ಚದೆ ಕಂಸನ । ವಧಿಸೆ ಸುಖ । ವರಿಸಿಹುದು ಯಾದವ ಗಣ ॥೧೮೨॥

ಮೋಹದಣುಗೆಯರ ಶೋಕ । ಮನಕೆ ಬಲು । ದಾಹಕುಡೆ ಬಂದೆ ಧುರಕಾ ।
ದ್ರೋಹಿ ತಡೆಯೆನುತ ಗದೆಯ । ತಿರುಗಿಸುತ । ಸಾಹಸಿಗೆ ಹೊಡೆದನೆದೆಯ ॥೧೮೩॥

ಪುಸಿಗೆಯ್ದು ಹತಿಯ ರಾಮ । ಪ್ರತಿಯಾಗಿ । ಮುಸಲದಿಂ ಹೊಯ್ದನಮಮ ।
ವಸುಧೆಯರಸನ ವರೂಥ । ನುಗ್ಗಾದು । ದೆಸೆವಶ್ವಸೂತ ಸಹತ ॥೧೮೪॥

**ಭಾಮಿನಿ**

ಧರಣಿಪತಿ ಕೇಳಿಂತು ಮಗಧನ ।
ವಿರಥನಾಗಿಸಿ ಹೊಡೆದು ಭಂಗಿಸಿ ।
ಹರಣ ಮಾತ್ರವನುಳುಹೆ ಕೊಲುವಡೆ ಸಮಯವಲ್ಲೆಂದು ॥
ತಿರುಗಿಸಲು ಹರಿ ರಥವ ತನ್ನಪ ।
ಮರುಳಿದನು ನಿಜಪುರಕೆ ಲಜ್ಜಾ ।
ಭರದಿ ಚೈದ್ಯ ಸಮೇತವಪಜಯ ಲಲನೆಯೊಡಗೂಡಿ ॥೧೮೫॥

**ವಾರ್ಧಕ**

ಹರಿರಾಮರಿಂತು ಹಗೆಗಡಲನುತ್ತರಿಸುತ್ತ ।
ಹರಣವಿತ್ತಳಿದ ಸೈನ್ಯಕೆ ರಿಪು ಬಲದ ಕೋಶ ।
ವರ ವಸ್ತುವಾಹನಾಯುಧಗಳಂ ಹೇರಿಸುತ ಸುರರಭ್ರದೊಳಗುಲಿಯಲು ॥
ಪುರಕೆ ನಡೆತರೆ ಪೌರರುತ್ಸವದೊಳಿದಿರ್ಗೊಳಲು ।

ಬಿರುದಿನ ಕಹಳೆಯುಲಿಯೆ ಬಂದು ಧನಜಾಲವಂ ।
ದೊರೆಯುಗ್ರಸೇನಗಿತ್ತತಿ ವಿಭವದಿಂದಿರ್ದರಸುರಾರಿ ಬಲಭದ್ರರು ॥೧೮೬॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಅರಸ ಕೇಳಾಚೆಯೊಳು ಮಾಗಧ । ಧರಣಿಪತಿ ಮನಮರುಗುತಲಿ ನಿಜ ।
ಪುರವ ಹೊಕ್ಕನು ತಲೆಯ ಮುಸುಕಿನ । ಮೆರೆವ ದುಗುಡದಿ ಬೇವುತ । ಇರುಳು ಹಗಲು ॥೧೮೭॥

ಮತ್ತೆ ಮೂರನೆ ತಿಂಗಳಿಗೆ ಪಗೆ । ವೆತ್ತು ಫಣಿಯಂತೊದಗಿಸಿದನಿ ।
ಪ್ಪತ್ತು ಮೂರಕ್ಷೋಹಿಣೀ ಬಲ । ಪೃಥ್ವಿಪಾಲರ ಕೂಡುತ । ಮಗಧಪಾಲ ॥೧೮೮॥

ವೀರ ಸೌವೀರಾಂಧ್ರಿ ಮದ್ರಮ । ಹೀರಮಣನಾಚೇದಿಪತಿ ಹ ।
ಮ್ಮೀರ ಗುರ್ಜ್ಜರ ಮುಖ್ಯ ಮಾರ್ಬಲ । ವಾರಿಧಿಗೆ ನದನದಿಗಳ । ತೆರದಿ ಬರಲು ॥೧೮೯॥

**ಭಾಮಿನಿ**

ಎನ್ನ ಬಿಡು ತನ್ನ ಬಿಡು ಸಮರಕೆ ।
ಮುನ್ನರಿವೆ ಬಲಕೃಷ್ಣರನು ತಾ ।
ನೆನ್ನ ಹರಿಬವಿದೆನ್ನದೆಂದುಲಿದುದು ಭಟಾನೀಕ ॥
ಹೊನ್ನರಥವೇರಲು ಗಿರಿವ್ರಜ ।
ಸೈನ್ಯ ಶರಧಿಯು ಸಹಿತ ಯಮುನೆಯ ।
ಸನ್ನಿಧಿಯ ಸೇರಿತು ಖಳಾವನಿಪಾಲರುರು ಕಟಕ ॥೧೯೦॥

**ವಾರ್ಧಕ**

ಮರುತ ಹತಿಗೇಳುವ ತರಂಗದಿಂ ಭಂಗದಿಂ ।
ಚರಿಸುತಿರುತಿಹ ಪೋತನಿಕರದಿಂ ಮಕರದಿಂ ।
ಕರೆವಿಡಿದು ಬೆಳೆದ ವೃಕ್ಷಂಗಳಿಂ ಮೀಂಗಳಿಂ ದಡಿಯ ಕರ್ಗಲ್ಗಳಿಂದ ॥
ಭರದೊಳುಯ್ಯಲ್ಪಡುವ ಸುಮಗಳಿಂ ದ್ರುಮಗಳಿಂ ।
ಪರಿದು ಬಂದೊಳವುಗುವ ತೊರೆಗಳಿಂ ನೊರೆಗಳಿಂ ।
ದುರೆ ನೀರನೀಂಟೆ ಬಹ ಮೃಗಗಳಿಂ ಖಗಗಳಿಂದಾ ಜಗುನೆ ಕಣ್ಗೆಸೆದಳು ॥೧೯೧॥

**ರಾಗ ಕೇತಾರಗೌಳ ಅಷ್ಟತಾಳ**

ಕುರುಕುಲೋದ್ಭವನೆ ಕೇಳುರು ನದೀ ತೀರಕೆ ।
ಬರಲು ಮಾಗಧನ ಸೈನ್ಯ ॥
ದುರುಳರ ಮೊಗನೋಡ । ಲರಿದೆಂದು ಹೊಕ್ಕನು ।
ತರಣಿಯು ಪಡುಗಡಲ ॥೧೯೨॥

ಮುಗಿಯೆ ಪಂಕಜ ನಸು । ನಗಲು ಕೈರವಗೂಡ ।
ಖಗ ಸಂದೋಹವು ಸೇರಲು ॥
ಜಗವ ಮುಸುಕೆ ತಮ । ನೆಗೆಯೆ ತಾರಾಗಣ ।
ಜಗುನೆಯುಸಿಕನಿರ್ದಳು ॥೧೯೩॥

ಕಾಣುತ್ತ ಮಾಗಧ । ಕ್ಷೋಣಿಪಾಲಕ ತನ್ನ ।
ಸೇನಾಧಿಪರ ಕರೆದು ॥
ಈ ನಿಶಿ ಕಳೆದು ಮುಂಜಾನೆ ನಡೆವುದೆನೆ ।
ಸೇನೆ ಬೀಡನು ಬಿಟ್ಟಿತು ॥೧೯೪॥

**ಕಂದ**

ಮಾಗಧ ಸೈನಿಕರಿರುಳೊಳ ।
ಗಾಗಿ ಸುಷುಪ್ತಿಗೆ ಸುಖದೊಳಿರಲ್ ಬಳಿಕತ್ತಲ್ ॥
ಬೇಗನೆ ಬೇಹಿನವರ್ ಹರಿ ।
ದಾಗಳೆ ಹದನಂ ಸರೋಜನೇತ್ರಂಗೆಂದರ್ ॥೧೯೫॥

**ರಾಗ ಮುಖಾರಿ ಏಕತಾಳ**

ಚಿತ್ತಾವಧಾನ ಗೋವಳರಾಯ । ನವನೀರದ ಕಾಯ । ಚಿತ್ತಾವಧಾನ ॥ ಪಲ್ಲವಿ ॥

ಮೊದಲೊಂದು ಬಾರಿ ವೈರಿಬಲವ । ಸದೆದಿತ್ತೆ ಸುಖವ । ಮಧುರಾಪುರಕ್ಕೆ ಮಗುಳೆ ಛಲವ ।
ಅಧಿಕವೆನಿಸಿ ಮಾ । ಗಧ ತಾಳುತಲಿಂ । ತುದಧಿಯ ಪಡಿಬಲ । ವೊದಗಿಸಿಕೊಂಡು ॥ ॥೧೯೬॥

ತುರಿಹದಿ ಬರ್ಪನಾಜಿಗಿಂದು । ಇರುಳಾಯಿತೆಂದು ॥ ಸರುವರು ಯಮುನಾತಟದಿ ನಿಂದು ।
ಬರುವರು ನಾಳೆಯಿ । ದರಿ ತುದನೊರೆದೆವು । ಕರುಣಾಕರ ನೀ । ಪೊರೆಯೆಂದೆರಗಲು ॥೧೯೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದಡಾಹವ ಧೀರ ಮಾಗಧ । ಬಂದ ವಾರ್ತೆಯ ಕೇಳಿ ರಾಮ ಮು ।
ಕುಂದರಾಲೋಚಿಸಿ ರಹಸ್ಯದೊ । ಳಂದಿನಿರುಳು ॥೧೯೮॥

ಮಂದಮತಿಯನು ಬರಗೊಡುವುದೆಮ । ಗಿಂದು ಹಿತವಲ್ಲಾತ ಮಧುರೆಗೆ ।
ಬಂದರೀ ಸಮಯದೊಳು ನಾವ್ತಡೆ । ವಂದವೆಂತು ॥೧೯೯॥

ಆದುದಷ್ಟೇ ಮೂರು ತಿಂಗಳು । ಯಾದವರ ಪೆಸರಿಲ್ಲವೀಸೂ ।
ಳಾದುರುಳರನು ತರಿವ ರಾತ್ರಿಯೊ । ಳೈದಿ ನಾವು ॥೨೦೦॥

ಎನುತ ಸತ್ಯಕ ತನುಜ ಗದ ಗಾಂ । ದಿನಿಜ ಪೃಥು ಕೃತವರ್ಮ ಮುಖ್ಯರ ।
ನನಿಮಿಷಾರ್ಚಿಸಿ ಕರೆಸಿ ನುಡಿದನು । ಮನದ ಬಗೆಯ ॥೨೦೦॥

**ರಾಗ ತುಜಾವಂತು ಮಟ್ಟೆತಾಳ**

ಕೇಳಿ ಯಾದವಾಗ್ರಗಣ್ಯರು ॥ ಪಲ್ಲವಿ ॥

ಖೂಳ ಮಾಗಧೇಶ ನಮ್ಮ । ಕಾಳೆಗದಲಿ ಸೋತು ಮುನ್ನ ।
ಮೂಲಬಲವ ನೆರಹಿ ಮತ್ತೆ । ಧಾಳಿಯಿಡಲು ಬರುವನಂತೆ ॥ ಕೇಳಿ ॥೨೦೧॥

ಆ ಮಹಾರಿಬಲವ ಮಧ್ಯ । ತಾಮಸಿಯೊಳು ತಡೆದು ನಾವು ।
ಸಾಮರ್ಥ್ಯದಿ ತರಿದು ವಿಜಯ । ಕಾಮಿನಿಯನು ಪಡೆವುದುಚಿತ ॥ ಕೇಳಿ ॥೨೦೨॥

ಒಮ್ಮೆ ನಡೆದ ರಣದೊಳಾದ । ನಿಮ್ಮ ನೋವು ಮಾಸದಿರಲು ।
ಧರ್ಮವೆಮಗೆ ಮುಯ್ಯಿ ದುಷ್ಟ । ಕರ್ಮರ ಸರ್ವಸ್ವ ಹರಣ ॥ ಕೇಳಿ ॥೨೦೪॥

ಎನಲು ಘುಡು ಘುಡಿಸುತ ಸಿಂಹ । ನಿನದವೆಸಗಿ ಯದುವರೇಣ್ಯ ।
ರನಘರೆದ್ದರಾಗ ತಮ್ಮ । ಧನುವನೊದರಿಸುತ್ತ ಜನದಿ ॥ ಕೇಳಿ ॥೨೦೫॥

**ಭಾಮಿನಿ**

ನಟ್ಟಿರುಳು ಯದುಸೇನೆ ದನುಜ ಘ ।
ರಟ್ಟನಾಜ್ಞೆಯೊಳೈದೆ ರಿಪುಗಳು ।
ಬಿಟ್ಟು ಕೈದುವ ಹಾಸಿಯುಡುಗೆಯ ನಿದ್ರಿಸುತ್ತಿರಲು ॥
ಕಟ್ಟಿದಶ್ವಗಜಂಗಳನು ಕಂ ।
ಡೊಟ್ಟಿನಲಿ ಮೇಲ್ವಾಯ್ದು ವಾದ್ಯವ ।
ನಟ್ಟಹಾಸದಿ ಮೊಳಗೆ ಬಲ ಸಂಭ್ರಮಿಸಿತಾಹವಕೆ ॥೨೦೬॥

**ರಾಗ ಭೈರವಿ ತ್ರಿವುಡೆತಾಳ**

ಹೊಡೆದರಾಗ । ರಿಪುವನ । ಗಡಿದರಾಗ ॥ ಪಲ್ಲವಿ ॥

ಮತ್ತೆ ಹರಿಯೆಡವಂಕದಲಿ ಖತಿ । ವೆತ್ತು ಮುತ್ತಲು ಮಾಗಧ ।
ಮೊತ್ತವನು ಬಲವಂಕದಲಿ ಬರೆ । ಸಾತ್ಯಕಿಯು ಮುಸಲಾಯುಧ ।
ಕತ್ತರಿಸಿ ಗಜಹಯವ ಮಧ್ಯದೊ । ಳೊತ್ತಿದೊಡೆ ದಾವಾನಲ ।
ಸುತ್ತಿ ದಡವಿಯೊಲಾಯ್ತು ವೈರಿ ಬ । ಲೋತ್ತಮರ ಕೋಲಾಹಲ ॥ ಹೊಡೆದರಾಗ ॥೨೦೭॥

ತುರಗ ಹೂಡದ ರಥಕೆ ರಥಿಕರು । ತೊರೆದು ಸೂತನನಡರುತ ।
ಕರಿಗಳಿಗೆ ಗುಳವಿಡದೆ ಮಾವರು । ಬರಿಯ ಹಸ್ತದೊಳೇರುತ ।

ಧರಿಸಿ ಚಮ್ಮಟಿಕೆಯನು ಬಿಗಿಯದ । ಹರಿಗೆ ಲಂಘಿಸಿ ರಾವುತ ।
ನೆರವಿ ಬಂತು ನಿರಸ್ತ್ರದಿಂ ಪದ । ಚರರು ನಡೆದರು ಸಮರಕೆನುತ ॥ ಹೊಡೆದರಾಗ ॥೩೦೮॥

ಬಿಟ್ಟ ಮಂಡೆಯಲೈದಿದರು ಜಗ । ಜಟ್ಟಿಗಳು ಧುರಧೀರರು ।
ಮುಟ್ಟಿಹೊಯ್ದರು ಹಾಯ್ದರಮರ್ದುಣಿ । ಹೆಟ್ಟುಗೆಯರನು ವೀರರು ॥
ಅಟ್ಟಿತರಿದರು ಶತ್ರು ಬಲವನು । ಕುಟ್ಟಿ ಕೈ ಕಾಲ್ದಲೆಯನು ।
ಬಟ್ಟಬಯಲಾಯ್ತರಿ ಚತುರ್ಬಲ । ಸುಟ್ಟಡವಿ ತೆರನೆಂಬೆನು ॥ ಹೊಡೆದರಾಗ ॥೩೦೯॥

**ವಾರ್ಧಕ**

ಕರಿಪಯೋಜಾಕರವ ಪರಶುಧರ ಖಳನೃಪರ ।
ಹರನೈದೆ ಮುಪ್ಪೊಳಲ ತರಣಿ ಕಗ್ಗತ್ತಲೆಯ ।
ಸುರವರಂಗಿರಿಕುಲವನರಿವು ಸಲೆ ಮೌಢ್ಯವಂ ದುರಿತಮಂ ಪುಣ್ಯರಾಶಿ ॥
ವರಯೋಗಿ ಷಡ್ರಿಪುವ ಶರಧಿಯಂ ಕುಂಭಜಂ ।
ಕರಿಘಟೆಯ ಹರಿಸೀಳ್ದ ತೆರದಿ ಸದೆಬಡಿದರಾ ।
ದುರುಳ ಭೂಪಾಲಕರ ನೆರವಿಯಂ ಯದುಕುಲಜರಿರುಳ ಕಡೆ ಜಾವದಲ್ಲಿ ॥೩೧೦॥

**ಭಾಮಿನಿ**

ಧರಣಿಪತಿ ಕೇಳಾ ಸಮಯದೊಳು ।
ಹರಿವ ಕತ್ತಲೆಯೊಡನೆ ಮಾರ್ಬಲ ।
ಹರೆದುದವನೀಶ್ವರರು ವಿಪಿನೇಶ್ವರನಿಸೆ ಮಿಕ್ಕ ॥
ಕರಿತುರಗಗಳಿಗೊಡೆಯರಿಲ್ಲನಿ ।
ತರೊಳು ಬಲನಡಹಾಯ್ದು ಮಗಧಂ ।
ಗೆರಗಲಸ್ತ್ರಾಭರಣ ವಿರಹಿತನೆಂದನುರೆ ಮುಳಿದು ॥೩೧೧॥

**ರಾಗ ಭೈರವಿ ಅಷ್ಟತಾಳ**

ಧೀರುರೆ ಮಝು ಗೋವಳ । ನಿಮ್ಮೊಳು ಧರ್ಮ । ಸಾರವಿದೇನೋ ಕಳ್ಳ ।
ಆರೆಲೊ ಗುರು ನಿನ । ಗೀ ರಹಸ್ಯಕೆ ಮುಂದೆ । ದಾರಿ ಯಾವುದು ಪೇಳೆಲೋ ॥೩೧೨॥

ಪಾತಕಿ ನಿಷ್ಕಾರಣ । ಯಾದವರನು । ಘಾತಿಸಿ ಬಂದಡಿನ್ನಾ ।
ಯಾತುಧಾನಾಂಶರ । ವ್ರಾತವ ಸವರುವ । ಡೀ ತೆರನೆಲೋ ಸಾಧನ ॥೩೧೩॥

ತನುಜೆಯರಿಗೆ ವೈಧವ್ಯ । ಬರಿಸಿ ಕಂಸ । ನನು ಸಂಹರಿಸಿ ಹಗೆಯ ।
ಕನಲಿ ತೀರಿಸಬಂದೆ । ಜನಪರೊಡನೆ ಸುಮ್ಮ । ನೆನಬೇಡ ಮೋಸಗಾರ ॥೩೧೪॥

ವೀರನೆ ಬಲ್ಲಿದನು । ನೀನಾಗೆ ಕು । ಮಾರಿಯರಿನೆಯನನು ।
ಭೂರಿ ಯಾದವಪರಿ । ವಾರ ಕಟ್ಟುಳುಯಿಡೆ । ಬಾರಿಸದಿರ್ದೆಯೇನು ॥೩೧೫॥

ಸಾಕೆಲವೋ ವಿಚಾರ | ಧುರದಿ ನಿನ್ನ | ನಾ ಕಾರಿಸುವೆ ಕನ್ನೀರ |
ಜೋಕೆಯೊಳ್ಳೈದು ಪಿಂ | ದೇಕುದ್ದುರುಟುತನ | ಪೋಕನೀ ಬಿಡು ಕಪಟ ||೨೧೬||

**ರಾಗ ಸಾಂಗತ್ಯ ರೂಪಕತಾಳ**

ಎಂದೆನುತಲೆ ಮುಷ್ಟಿಯಿಂದ ಮಾಗಧನು ಕಾ | ಳಿಂದೀ ಭೇದನನ ತಿವಿಯಲು ||
ಕುಂದದೆ ನೇಗಿಲ ತಿರುಹಿಡಲಾ ಜರಾ | ಸಂಧನು ಬಳಲಿ ಕಂಗೆಟ್ಟು ||೨೧೭||

ಹರಣದಾಸೆಯೊಳೋಡಿ ಹಳುವವ ಹೊಕ್ಕನು | ಬಿರುದಾವಳಿಯನೆಲ್ಲ ಬಿಸುಟು ||
ಅರಸುತ್ತಲಿರೆ ಮಂತ್ರಿಗಳು ವೇಣು ನೃಪವರ್ಗ | ಬರಿಗಾಲೊಳಡವಿ ಮಧ್ಯದಲಿ ||೨೧೮||

ಹರಿ ರಾಮರಾ ವೈರಿ ಬಲದ ಬೊಕ್ಕಸ ರತ್ನಾ | ಭರಣಾದಿ ಧನ ಸಂಚಯವನು ||
ಹೊರಿಸುತ್ತ ಯಾದವರೊಡನೈದೆ ಮಧುರೆಗೆ | ಅರಸ ಕೇಳಿತ್ತಲಾದದನು ||೨೧೯||

**ರಾಗ ಭೈರವಿ ಝಂಪೆತಾಳ**

ಇಳೆಯಧಿಪ ತನಗಾದ | ಬಲುಭಂಗವನು ನೆನೆದು |
ಕಳವಳಿಸಿ ಮರುಗುತ್ತ | ನಿಳಯವನು ಹೊಗದೆ ||೨೨೦||

ಎಂತಿವರ ಸಂಹರಿಸಿ | ಪಂಥ ಜೈಸುವೆನೆನುತ |
ಚಿಂತಿಸುತ್ತಖಿಳ ಭೂ | ಕಾಂತರೊಡಗೂಡಿ ||೨೨೧||

ಕಾನನದಿ ತೊಳಲುತೀ | ಶಾನನನು ಸ್ಮರಿಸುತ್ತ |
ತಾ ನಡೆದ ವಹಿಲದಿಂ | ಶೋಣಿತಾಪುರಕೆ ||೨೨೨||

**ವಾರ್ಧಕ**

ನರಪೌತ್ರ ಕೇಳುತ್ತ ಶೋಣಿತಾಪುರದಿ ಬಲಿ |
ತರಳ ಬಾಣಾಸುರಂ ಮುನ್ನ ಹರನಂ ತಪದಿ |
ಹರುಷಗೊಳಿಸಿ ಸಹಸ್ರ ಭುಜಗಳಂ ಪಡೆದು ಗೌರೀಶನಂ ಸತತ ತನ್ನ ||
ಅರಮನೆಯೊಳಗೆ ನಿಲಿಸುತಧಿಕ ವೈಭವದಿಂದ |
ಸುರವೈರಿ ಸಂಕುಲದ ಚಕ್ರವರ್ತಿತ್ವದಿಂ
ದಿರುತಿರಲು ಸಚಿವ ಸಾಮಂತಾಪ್ತರಿಂದೊಂದು ದಿವಸವೊಡ್ಡೋಲಗದೊಳು ||೨೨೩||

**ಭಾಮಿನಿ**

ಭೂತಳಾಧಿಪ ಮಾಗಧೇಂದ್ರನು |
ಸೋತು ದುಗುಡದಿ ಬಂದ ವಾರ್ತೆಯ |
ದೂತರೊಡೆಯಂಗೆರಗಿ ಬಿನ್ನೈಸಲ್ಕೆ ಲಾಲಿಸುತ ||

ಪ್ರೀತಿಯಿಂ ಮಂತ್ರಿ ಪ್ರಮುಖರಿಂ ।
ದಾತನಂ ಮನ್ನಿಸುತ ಕರೆತಂ ।
ದೀ ತೆರದಿ ಬೆಸಗೊಂಡನರ್ಧಾಸನದಿ ಕುಳ್ಳಿರಿಸಿ ॥೩೧೪॥

**ರಾಗ ತುಜಾವಂತು ಝುಂಪೆತಾಳ**

ಕ್ಷೇಮವೇನೈ ಮಗಧ । ಗೋಮಿನಿಪ ನಿನಗೆ ।
ಕಾಮಿನೀ ಸುತರು ಪರಿ । ಣಾಮದಿಂದಿಹರೆ । ಕ್ಷೇಮವೇನೈ ॥ ಪಲ್ಲವಿ ॥

ಪರಿಜನರು ಮನ್ನೆಯರು ಪೌರಜನ ಪದುಳಿಗರೆ ।
ಪುರಹರನ ದಯೆಗೀಗ । ಕೊರತೆಯಿಲ್ಲೈಸೆ ॥
ಧರಣಿಪರು ನಿನ್ನಾಜ್ಞೆ । ಗೆರಡೆಣಿಸದಿಹರೆ ಹೊಸ ।
ಬರವೇನು ಮೊಗದ ಸಿರಿ । ಹಿಂಗಿತೇಕಯ್ಯ ॥ ಕ್ಷೇಮವೇ ॥೩೧೫॥

ದಿತಿಜೇಂದ್ರ ಕೇಳು ಸತಿ । ಸುತ ಪೌರತತಿ ಭೂತ ।
ಪತಿಯ ಕರುಣೆಯೊಳನಕ । ಸುಖದೊಳಿಹುದೀಗ ॥
ಅತುಲ ಬಲಶಾಲಿ ದು । ಸ್ಥಿತಿಯ ಪೇಳುವುದೇನು ।
ಗತಿಹೀನನಾದೆ ನಾ । ನೊಂದು ಕತದಿಂದ ॥ ಕ್ಷೇಮ ॥೩೨೬॥

ಮಾನನಿಧಿ ನಿರವಿಸಪ । ಮಾನಗಳ ಬಗೆಯೆಲ್ಲ ।
ಪ್ರಾಣಪ್ತರೆಮ್ಮೊಳಗೆ । ನ್ಯೂನತೆಯು ಸಲ್ಲ ॥
ಕ್ಷೋಣಿಹದಿ ನಾಲ್ಕೆನ್ನ । ತ್ರಾಣ ಪರಿಕಿಸಬರಲು ।
ತ್ರೈನಯನನೊಲ್ಮೆಯಿಂ । ಗಣಿಸೆನನಲೆಂದ ॥೩೧೭॥

ಬಲಕೃಷ್ಣರೆಂಬ ಗೋ । ವಳರ ಧರ್ಮದಿ ನೃಪರ ।
ಕಲಹದೊಳು ಪರಿಭವಿಸಿ । ಸರ್ವಸಾಧನವ ॥
ಚೆಲುವ ಹಯರಥದಂತಿ । ಕುಲವ ಕೋಶಂಗಳನು ।
ಸುಲಭದಿಂ ದೋಳೆದೊಯ್ದ । ರಳುಕದವರಿಂದು ॥೩೧೮॥

**ಉತ್ಪಲ ಮಾಲಾವೃತ್ತ**

ಶ್ರೀ ವಧುವಾನನಾಬ್ಜ ದಿವಸೇಶ್ವರನಾವನಮೋಘ ಯೋಗಿಹೃ ।
ದ್ಭಾವ ಮಯೂರ ನೀರದನದಾವನಮರ್ತ್ಯಕದಂಬ ಪಾಲಕಂ ॥
ಆವನನೇಕ ಗೋಪಯುವತೀಜನ ಕೈರವ ಚಂದ್ರನಾವನಾ ।
ದೇವ ಮುಕುಂದ ನಾವಗಮೊರಲ್ದೆ ಮಗೀಗೆ ನಿತಾಂತ ಸೌಖ್ಯಮಂ ॥೧॥

**ರಾಗ ನಾಟಿ ರೂಪಕತಾಳ**

ಜಯ ಶಿವತನಯ ಗಜಾನನ । ಜಯ ಪಾವನ ಫಣಿಭೂಷಣ ।
ಜಯ ಜಂಬೂ ಫಲ ಭಕ್ಷಣ । ಜಯ ಸುರನುತ ಚರಣ ॥ ಜಯ ॥ ಪಲ್ಲವಿ ॥

ನಡುವಿಗೆ ಬಲಿದಹಿ ಶೇಷಗೆ । ಪಡಿಯೆನೆ ಸುರಿವ ಮದಾಂಬುಗೆ ।
ಎಡೆವಿಡದೆರಗುವ ತುಂಬಿಯ । ಪಡೆ ಪೋಲ್ತಿರೆ ಮುಗಿಲ ॥
ನಡೆವಿನ ಶಶಿಗಳ ಮೈಸಿರಿ । ಗುಡೆ ಮಕುಟವು ಮೇಣ್ ನಿಗ್ಗವ ।
ಜಡಧಿಯ ಮಥಿಸಿದ ಮಂದರ । ಕೆಡೆಯಹ ಗಣಪಾಲ ॥ ಜಯ ॥೨॥

ದುರ್ಗಾಹೃದಯೋತ್ಸವಕರ । ನಿರ್ಗತ ಭವಬಂಧನ ಖಳ ।
ವರ್ಗಾಹಿತ ಶರಣೆಂಬೆನು । ದೀರ್ಘೋದರ ಗುಣಧೀ ॥
ನಿರ್ಗತಿಕ ಶರಣ್ಯನೆ ಸ । ದ್ವರ್ಗದ ಕೆಳೆಕೊಡು ಕೃತಿಗಹ ।
ದುರ್ಘಟನೆಗಳಂ ತೊಲಗಿಸೆ । ಡರ್ಗೇಡಿಯೆ ದಯದಿ ॥ ಜಯ ॥೩॥

ದಿವ್ಯಾಷ್ಟೈಶ್ವರ್ಯಂಗಳ । ನವ್ಯಾಹತವೀವನೆ ಸ ।
ದ್ದ್ರವ್ಯಾಷ್ಟಕಯುತವಪ್ಪಾ । ಹವ್ಯವ ನಿನಗೀವೆ ॥
ಕಾವ್ಯಂ ಬುಧ ಸಮಿತಿಗೆ ಸು । ಶ್ರಾವ್ಯಮಿದಪ್ಪಂತೆನಗೊ ।
ಲ್ದವ್ಯಯ ಮನಮಾಡೈಕ । ರ್ತವ್ಯವ ನಾಗೈವೆ ॥ ಜಯ ॥೪॥

**ವಾರ್ಧಕ**

ಕಮಲ ಲೋಚನ ಮಿತ್ರ ಕಮಲ ನಿರ್ಮಲ ಗಾತ್ರ ।
ಕಮಲವನರಿಪು ಚೂಡ ಕಮಲಾನುಜ ವಿಭಾಡ ।
ಕಮಲ ಭವನುತ ಗೌರಿ ಕಮಲ ಮುಖತಿಮಿರಾರಿ ಕಮಲ ಸಾಯಕವಿದಾರಿ ॥
ಕಮಲಭಿದಜಿನವಾಸ ಕಮಲಾಪ್ತ ಶತಭಾಸ ।
ಕಮಲಾಕ್ಷಕೀನಾಶ ಕಮಲಬಂಧುಜನಾಶ ।
ಕಮಲನಾಮ ಸುಕೇತ ಜಗದೀಶ ಉದನೇಶ ಶರಣು ಸಲಹೆನ್ನನನಿಶ

**ದ್ವಿಪದಿ**

ಇಂತಿಷ್ಟದೇವತಾ ಪ್ರಾರ್ಥನೆಯ ಗೈದು ।
ಮುಂತಹ ಕಥಾಸಂಗ್ರಹವನೊರೆವೆನಿಂದು ॥೬॥

ಭಾಗವತ ಪೌರಾಣದೊಳು ಕಂಸವಧೆಯ ।
ನಾಗಶಯನನು ಗೈದು ಮಧುರೆಗಧಿಪತಿಯ ॥೭॥

ಯದುವೃದ್ಧನು ಗೈದ ಬಳಿಕ ಗೋವಿಂದ ।
ಮುದದೊಳಾಡಿದ ಲೀಲೆಯಹುದೀ ಪ್ರಬಂಧ ॥೮॥

ನರನಾಟಕರ್ಗೆ ವಸುದೇವನುಪನಯನ ।
ವಿರಚಿಸಲು ಗುರುಕುಲಕೆ ನಡೆದು ಗುರುವಚನ ॥೯॥

ವಾಲಿಸುತ ಗೋಕುಲದ ಜನರನುದ್ಧವನ ।
ಮೂಲಕದಿ ಸಂತೈಸಿ ಕಮಲದಳನಯನ ॥೧೦॥

ಶರಣವತ್ಸಲನೆನಿಸಲತ್ತ ಮಾಗಧನು ।
ತೆರಳಿ ಬರೆ ಸದೆಬಡಿದು ಸೆಳೆದು ದ್ರವ್ಯವನು ॥೧೧॥

ಲಕ್ಷ್ಮೀಶ ಬಾಣಸೈನ್ಯವ ತರಿದ ಕಥೆಯ ।
ಯಕ್ಷಗಾನದಿ ಪೇಳ್ವೆನಿದು ಪುಣ್ಯನಿಚಯ ॥೧೨॥

ರಾಗ ಯತಿ ತಾಳ ರಸಭಾವ ಮೊದಲಾದ ।
ಯೋಗಗಳನರಿಯೆ ತಿದ್ದುವುದು ಬುಧವೃಂದ ॥೧೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶ್ರೀಮದಮೃತಗಭಸ್ತಿ ವಂಶ । ವ್ಯೋಮ ದಿನಕರನಹ ಪರೀಕ್ಷಿತ ।
ಭೂಮಿಪಾಲಗೆ ಶುಕಮುನೀಂದ್ರನು । ಸಾಮದಿಂದ ॥೧೪॥

ಪೇಳುತಿರೆ ಭಾಗವತ ಕಥನವ । ಕೇಳಿದನು ನೃಪನೊಮ್ಮೆ ಶ್ರೀ ಗೋ ।
ಪಾಲ ಗೋಕುಲದಿಂದ ಗಾಂದಿನಿ । ಬಾಲನೊಡನೆ ॥೧೫॥

ಮಧುರೆಗೈತಂದಲ್ಲಿ ಕಂಸನ । ವಧಿಸಿ ತಂದೆಯ ಬಂಧನವ ಕಳ ।
ಚಿದ ಬಳಿಕಲೇಂ ಗೆಯ್ದನೆಂಬುದ । ಮುದದೊಳೆನಗೆ ॥೧೬॥

ಬಿತ್ತರಿಪುದೆಂದೆರಗೆ ಮುನಿ ಭೂ । ಪೋತ್ತಮನ ಪಿಡಿದೆತ್ತಿ ಹರಿಯನು ॥
ಚಿತ್ತದಲಿ ನೆಲೆಗೆಯ್ದು ಸಂತಸ । ವೆತ್ತು ನುಡಿದ ॥೧೭॥

**ಭಾಮಿನಿ**

ಕೇಳರಸ ಕಂಸಾಖ್ಯನುಪಟಳ ।
ತಾಳಲಾರದೆ ತೊಲಗಿದಾ ಯದು ।
ಜಾಲವನು ಬರಮಾಡಿ ಮುನ್ನಿನ ತೆರದಿ ಕುಲವೃದ್ಧ ॥
ತಾಳಿಪಟ್ಟವ ವಂಶದುನ್ನತಿ ।
ಮೇಳವಿಸಲೊಕ್ಕಟ್ಟ ಸಾಧಿಸಿ ।
ನೀಲಮೇಘ ಶ್ಯಾಮಜನ ಜಾಗೃತಿಯನೊದವಿಸಿದ ॥೧೮॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಇಂದು ಕುಲದ ಯಯಾತಿಯಾಜ್ಞೆಯ । ದಂದುಗವ ಪರಿಹರಿಸೆ ಹರಿಯಾ ।
ನಂದ ಮಾನಸನುಗ್ರಸೇನನು । ಹೊಂದಿ ಮಧುರೆಯ ಪಟ್ಟವ । ಕುಂದನುಳಿದು ॥೧೯॥

ಒಂದು ದಿನ ವಸುದೇವನೊಡನೆ ಮು । ಕುಂದನನು ಶ್ಲಾಘಿಸುತ ನುಡಿದನು ।
ಸಂದಮಲ್ಲರ ಕೆಡಹಿ ಕಂಸನ । ಕೊಂದನಮಮಾ ಕೃಷ್ಣನ । ಸತ್ವಕಿರಿದೇ ॥೨೦॥

ನರಕುಮಾರಕರಲ್ಲ ಬಲಕೃ । ಷ್ಣರು ಕಣಾ ಕಾರಣಿಕ ಪುರುಷರು ।
ದುರುಳ ತನದಿಂ ಮಡಿದನಕಟಾ । ಹರಿವಿರೋಧವ ಸಾಧಿಸಿ । ತರಳ ಕಂಸ ॥೨೧॥

ಮೇದಿನಿಯೊಳಿವರಾತ್ಮಜರು ನಿನ । ಗಾದರೆಂದೊಡೆ ಭಾಪು ಪುಣ್ಯವೆ ।
ಯಾದವರ ಪದ್ಧತಿಯ ಬಿಡದಿವ । ರಾದರಿಸಲುಪನಯನವಾ । ಮಾಳ್ಪುದೀಗ ॥೨೨॥

**ರಾಗ ಸಾಂಗತ್ಯ ರೂಪಕತಾಳ**

ಎಂದುಗ್ರಸೇನನ ನುಡಿಗೊಪ್ಪಿಯಾನಕ । ದುಂದುಭಿಗಾರ್ಗ್ಯರ ಕರೆಸಿ ॥
ಬಂಧುಗಳೊಡನೆ ಸುಲಗ್ನವ ಹುಡುಕಿ ಗೋ । ವಿಂದ ರಾಮರಿಗೆ ಸಂತಸದಿ ॥೨೩॥

ಕುಲಧರ್ಮದಂತೆ ಚೌಳಂಗೆಯ್ದು ಮಂಗಳ । ಕಲಶೋದಕದಿ ಸ್ನಾನಗೈಸಿ ॥
ಚೆಲುವಮೂರ್ತಿಗಳ ಸುಭಕ್ಷ್ಯ ಭೋಜ್ಯಗಳಿಂದ । ನಲವಾಂತು ದೇವಕಿಯುಣಿಸಿ ॥೨೪॥

ಪಟ್ಟಾವಳಿಯ ಮುಸುಕಿಟ್ಟುಪವೀತವ । ಮೆಟ್ಟಕ್ಕಿಯೇರಿಸಿ ತೊಡಿಸಿ ॥
ಹೃಷ್ಟಮಾನಸನಾಗಿ ಬ್ರಹ್ಮೋಪದೇಶವ । ಕೊಟ್ಟನು ವಸುದೇವನಾಗ ॥೨೫॥

ಸೆರೆಮನೆಯೊಳು ಮುನ್ನ ಜನಿಸಿದ ಶಿಶುವನು । ಪೊರೆವುಪಾಯವ ಮಾಡುವಾಗ ॥
ನೆರೆಸಂಕಲ್ಪಿಸಿದಂತೆ ಲಕ್ಷಗೋಧನವನು । ವರವಿಧಿಯಂತೆ ಸಿಂಗರಿಸಿ ॥೨೬॥

ಸಾಂಗವೇದಜ್ಞ ವಿಪ್ರರಿಗಿತ್ತು ಬಹುಧನ । ವಂಗಹೀನರಿಗೆ ತಾ ಕೊಡಲು ॥
ರಂಗರಾಮರಿಗೆ ಭಿಕ್ಷೆಯನಿಡೆ ದೇವಕಿ । ಯಂಗನಾನಿವಹ ಪಾಡಿದುದು ॥೨೭॥

**ರಾಗ ಬೇಗಡೆ ಅಷ್ಟತಾಳ**

ಭಿಕ್ಷೆಯ ನೀಡೆ ಸಖಿ । ಸಾರಸಮುಖಿ । ಭಿಕ್ಷೆಯ ನೀಡೆ ಸಖಿ ।
ಇಕ್ಷುಚಾಪನ ಪಿತ । ಪಕ್ಷಿವಾಹನ ಪರ ।
ಪಕ್ಷರಹಿತ ನಿತ್ಯ । ಲಕ್ಷ್ಮೀಕಾಂತಗೆ ಮುದದಿ ॥ ಭಿಕ್ಷೆಯ ॥೧೮॥

ಇಳೆಯು ದೂರಲು ದಯದಿ । ದೇವಕಿ ಗರ್ಭ । ದೊಳು ಬಂದು ಗೋಕುಲದಿ ।
ಬಳೆದು ಯಶೋದೆಗೆ । ನಲವಿತ್ತು ಪಾಲ್ಬೆಣ್ಣೆ ।
ಮೆಲುತ ಗೋವ್ಗಳ ಕಾಯ್ದು । ಚೆಲುವ ರಂಗಯ್ಯಗೆ ॥ ಭಿಕ್ಷೆಯ ॥೧೯॥

ಚರಣಘಾತದಿ ಶಕಟ । ಖಳನ ನಿಕ್ಕಿ । ಮರಣ ಪೂತನಿಗೆ ಕೊಟ್ಟ ।
ಗಿರಿಯನು ಕೊಡೆಗೆಯ್ದು । ಧುರಧೀರಮಲ್ಲರ ।
ತರಿದ ಕಂಸಾಂತಕ । ಹರಿಗೆ ನೀ ಹಿಡಿಯಕ್ಕಿ ॥ ಭಿಕ್ಷೆಯ ॥೨೦॥

ಜಗಕೆ ದುರ್ಮದ ದೈತ್ಯರ । ಭಾರವು ಹೆಚ್ಚೆ । ಹಗುರ ಮಾಡಲು ಸುರರು ।
ತಗಹಿನಿಂದವತಾರ । ಹೊಗುವ ನಿತ್ಯಾತುಮ
ನಿಗಮವೇದ್ಯಗೆ ಭಕ್ತಿ । ಮಿಗೆ ವಸ್ತ್ರಾಭರಣವ ॥ ಭಿಕ್ಷೆ ॥೨೧॥

**ವಾರ್ಧಕ್ಯ**

ಆದುದಿಂತತಿ ವಿಭವದಿಂದುಪನಯನ ಕರ್ಮ ।
ವೇದೋಕ್ತದಿಂ ಬಳಿಕ ವಸುದೇವನವದಿರಂ ।
ಭೂದಿವಿಜ ಸಾಂದಿಪನ ಬಳಿಗೆ ವಿದ್ಯಾಭ್ಯಾಸಕೆಂದೆನುತ ಕಳುಹಲವರು ॥
ಮೇದಿನಿಯ ನರರಿಂಗೆ ಗುರುಮುಖಂ ಹೊರತಾಗಿ ।
ತಾದೊರೆಯದಾತ್ಮ ವಿಜ್ಞಾನವೆಂದರಿಪುವಂ ।
ತಾದಿಮೂರ್ತಿಗಳಖಿಳ ವಿದ್ಯಾನಿಧಿಗಳೋಜನೆಡೆಗೆಯ್ದಿದರು ಕಾಶಿಗೆ ॥೨೨॥

**ರಾಗ ಸುರುಟಿ ಏಕತಾಳ**

ಲಾಲಿಸು ಭೂಕಾಂತ । ಗುಣಯುತ ।
ಪೇಳುವ ಹರಿಚರಿತ । ನೀಲಾಂಬರ ಗೋ । ಪಾಲರು ಗುರುವರ ।
ನಾಲಯ ಕೈದಿದ । ಮೇಲಾನಂದದಿ ॥ ಲಾಲಿಸು ॥೨೩॥

ಓದಿದರಾಚಾರ್ಯ । ಕಲಿಸಲು । ವೇದದ ಪದಗತಿಯ ॥
ಸಾಧಿಸಿದರು ಶಿ । ಕ್ಷಾದ್ಯಂಗಗಳನು ।
ಹಾದಿಯರಿತರಾ । ತೋದ್ಯ ಸಂಗೀತದ ॥ ಲಾಲಿಸು ॥೨೪॥

ಗರಡಿಯ ಸಾಧಕವ | ಖಡುಗದ | ಹರಿಗೆಯ ಸಂಗರವ ||
ಶರಚಾಪಂಗಳ | ಕರಕೌಶಲ್ಯವ |
ಪರುಠವಣೆಗೆ ಬಹ | ಹೊರಿಗೆಯನೆಲ್ಲವ || ಲಾಲಿಸು ||೩೫||

**ರಾಗ ಕೇದಾರಗೌಳ ಅಷ್ಟತಾಳ**

ಪರಮ ಪುರುಷರಿಂತು | ಹರುಷದಿ ಚೌಷಷ್ಠಿ | ಪರಿಗಣನೆಯ ವಿದ್ಯೆಯ |
ಅರವತ್ತು ನಾಲ್ದಿನ | ಹರಿವಷ್ಟರೊಳು ಕಲ್ತು | ಸರುವಜ್ಞರಾದುದನು ||೩೬||

ಆ ಗುರು ವೀಕ್ಷಿಸಿ ಮೂಗಿಲಿ ಬೆರಳಿಟ್ಟು | ತೂಗಿ ತಲೆಯನಿವರು ||
ಯೋಗ ಸಿದ್ಧರು ಹೊರ | ತಾ ಗಲ್ಲ ನರರೆಂದು | ಬೀಗಿದ ಹರುಷದೊಳು ||೩೭||

ಎತ್ತಲೀ ಶಿಶುಗಳು | ಹೊತ್ತು ಹೊತ್ತಿನೊಳರು | ವತ್ತ ನಾಲ್ಕೂ ವಿದ್ಯೆಯ |
ಗೊತ್ತು ಗೈದಿವರ ಸು | ಚಿತ್ತ ಶುದ್ಧಿಯದೆಂತೆ | ನುತ್ತ ಧನ್ಯತೆವಡೆದ ||೩೮||

**ಭಾಮಿನಿ**

ಭೂಪ ಕೇಳಚ್ಚರಿವಡೆಯೆ ಗುರು |
ವಾ ಪದುಮ ದೃಶರಾಮರಖಿಳ ಕ |
ಲಾಪರಿಣತಿ ಪ್ರಾಪ್ತಮಾನಸರಾಗಿ ಸಂತಸದಿ ||
ಚಾಪವಿದ್ಯಾನಿಪುಣರೋಜನ |
ತಾಪ ಪರಿಹಾರಕ್ಕೆಳಸಿ ಸಾಂ |
ದೀಪನಂಘ್ರಿಗೆ ಮಣಿದು ನುಡಿದರು ಮಧುರ ವಚನದಲಿ ||೩೯||

**ರಾಗ ಕಾಂಭೋಜಿ ಅಷ್ಟತಾಳ**

ಗುರುರಾಯ ಕೇಳೆಮ್ಮ ಮಾತ | ದಯವಿರಿಸಿ ಬಾಲರೊಳು ವಿಖ್ಯಾತ || || ಪಲ್ಲವಿ ||

ಕಲಿತುಕೊಂಡೆವು ನಿಮ್ಮ ದಯದಿ | ಸರ್ವ | ಕಲೆಗಳ ಚೌಷಷ್ಠಿ ದಿನದಿ |
ಸಲೆ ಸೌಖ್ಯ ಸಂಪದ | ಗಳು ನಮಗಪ್ಪಂತೆ |
ಒಲಿದು ದಕ್ಷಿಣೆಗಳನು ಸ್ವೀಕರಿ |
ಸಲಘು ಮಹಿಮನೆ ಕಳುಹು ನಮ್ಮನು || ಗುರು ||೪೦||

ಮನಸಿ ಗಂಟಿದ ಚಿಂತೆಯುಳಿದು | ಸೇವೆ | ಯನು ನಮ್ಮ ಶಕ್ತಿಯ ತಿಳಿದು ||
ಅನಘ ಮುದದಿ ಬೆಸ | ಸೆನಲು ಭಕ್ತಿಯ ಮನ |
ದಣಿಯೆ ಹೊಗಳುತ | ವನಿತೆಗೆಂದಡೆ |
ಘನ ಪತಿವ್ರತೆ | ಯಿನಿಯಗೆಂದಳು || ಗುರು ||೪೧||

**ಭಾಮಿನಿ**

ಪ್ರಾಣವಲ್ಲಭ ಕೇಳು ತ್ರಿಜಗ ।
ತ್ರಾಣಮೂರ್ತಿಗಳಲ್ಲದಿವರಳಿ ।
ಮಾನವರು ತಾವಾಗಲೊಲ್ಲರು ಬದ್ಧವದರಿಂದ ॥
ಕಾಣಿಕೆಗೆ ತೀರ್ಥದೊಳಳಿದ ಮ ।
ತ್ಸೂನುವನು ತರಲಾಜ್ಞೆಯಿತ್ತರೆ ।
ಕಾಣಿಸುವುದುತ್ಸವವು ನಮಗೆನಲೆಂದ ಶಿಷ್ಯರಿಗೆ ॥೪೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮೆಚ್ಚಿದನು ಬಾಲಕರೆ ನಿಮ್ಮಯ । ನಿಚ್ಚಳದ ಗುರುಭಕ್ತಿಗದರಿಂ ।
ದುಚ್ಚರಿಪೆ ಮತ್ತರುಣಿಯಳ ಮನ । ದಿಚ್ಛೆಯೊಂದ ॥೪೩॥

ಅಪ್ರತಿಮರಿರ ಕೇಳಿ ಪೂರ್ವದೊ । ಳಾ ಪ್ರಭಾಸದಿ ವರುಣನಿಂದ ಮ ।
ನಃ ಪ್ರಿಯಾತ್ಮಜನಳಿದನಾತನ । ಕ್ಷಿಪ್ರದಿಂದ ॥೪೪॥

ಪಡೆದು ತಂದರೆ ನಮಗೆ ಮುದವ । ಪ್ಪುದು ನಿಮಗೆ ಸತ್ಕೀರ್ತಿಯೆಂದೆನೆ ।
ಪದಕೆರಗಿ ಗುರುವರನ ಬೀಳ್ಕೊಂ । ಡಧಟರಾಗ ॥೪೫॥

ಮಣಿರಥವನೇರುತ ಪ್ರಭಾಸಾ । ವನಿಗೆ ನಡೆದಬ್ಜಾಕ್ಷರಾಮರು ।
ವನಧಿಯುನ್ನತ ವಿಭವವೀಕ್ಷಿಸಿ । ಮನದಣಿಯಲು ॥೪೬॥

**ಭಾಮಿನಿ**

ವಿಧುಕುಲಾಧಿಪ ಕೇಳು ಸಾಗರ ।
ನಿದನರಿತು ನವರತ್ನ ಕಾಣ್ಕೆಯೊ ।
ಳಿದಿರು ವಂದರ್ಚಿಸುತ ಜಯ ಜಯವೆಂದು ವಂದಿಸಲು ॥
ಮಧುಮಥನ ನಿಂತೆಂದ ನಿನ್ನೊಳ ।
ಳಿದ ಗುರುವಿನಾತ್ಮಜನ ನೀತೋ ।
ರ್ಪುದು ಬಳಿಕ ಉಪಚಾರವೆನಲಿಂತೆಂದನಬ್ಧಿಪತಿ ॥೪೭॥

**ರಾಗ ತೋಡಿ ಅಷ್ಟತಾಳ**

ಸ್ವಾಮಿ ಲಾಲಿಪುದೆನ್ನ ಮಾತ । ಭಕ್ತ । ಕಾಮಿತವೀವ ಶ್ರೀನಾಥ ॥ ಸ್ವಾಮಿ ॥ ಪಲ್ಲವಿ ॥

ಕೊಲ್ಲೆನು ಗುರು ತನೂಭವನ । ಮೇಣು । ಕೊಲ್ಲುವವರಿಗೆಡೆಗುಡೆ ನಾ ।
ಇಲ್ಲ ಸಂಶಯವೆನ್ನೊ । ಳುಳ್ಳ ಪಂಚಜನಾಖ್ಯ ।
ಖುಲ್ಲ ಶಂಖಾಸುರ । ನೆಲ್ಲಾ ಕೃತ್ಯಕೆ ಮೂಲ ॥ ಸ್ವಾಮಿ ॥೪೮॥

ಭೂಸುರನಾಗಿ ಬಂದೆನ್ನ । ಬೇಡಿ । ಮೋಸದಿಂದಿರ್ಪದಾನವನ ।
ನಾಶಗೈದಿಳೆಗೆ ನೀ । ಲೇಸಪಾಲಿಸು ಮಿಕ್ಕ ।
ವಾಸವಾದಿಗಳು ಶಂ । ಖಾಸುರ ಗೆಣೆಯಲ್ಲ ॥ ಸ್ವಾಮಿ ॥೪೯॥

**ಭಾಮಿನಿ**

ವರುಣನಿಂತೆನೆ ಹರಿನುಡಿದನಾ ।
ದುರುಳನಿರವನು ತೋರಿಸೀ ಕ್ಷಣ ।
ಪರಿಕಿಸುವೆನೆನೆ ಸನ್ನೆಯಲಿ ತೋರಿಸಲು ಸಿಂಧುಪತಿ ॥
ಮರಣರಹಿತರು ಶರಧಿಗಿಳಿದೈ ।
ತರಲು ಕಾಣುತ ಕೆರಳಿ ಶಂಖಾ ।
ಸುರನು ಘುಡುಘುಡಿಸುತ್ತಲಡ ಹಾಯ್ದೆಂದನವರೊಡನೆ ॥೫೦॥

**ರಾಗ ಶಂಕರಾಭರಣ, ಮಟ್ಟೆತಾಳ**

ಅರೆಲೋ ಮದಾಂಧರಾಗಿ । ವಾರಿಧಿಯೊಳು ಮುಳುಗುತೆದ್ದು ।
ಯಾರೆನಿಂತು ಹುಡುಕುವಿರಿ ಮೊ । ಗೇರರಂದದಿ ॥
ಚಾರು ಸುಂದರಾಂಗರಹಿರಿ । ನೀರಿನೊಳಗೆ ಕೆಲಸವೇನು ।
ಭೋರನೈದದಿರಲು ಮಾಳ್ಪೆ । ಪಾರಣೆಯನ್ನು ॥೫೧॥

ಕಳ್ಳರಂತೆ ಕಡಲ ಮಧ್ಯ । ದಲ್ಲಿ ಮನೆಯ ಮಾಡಿಕೊಂಡು ।
ಮೆಲ್ಲನಬ್ಧಿಗಿಳಿವ ಜನರ ಕೊಲ್ಲುತ್ತಧಮಾ ॥
ದೊಳ್ಳ ಬೆಳೆಸುತಾ ಪ್ರಭಾಸ । ದಲ್ಲಿ ಸೆಳೆದ ಸಾಂದಿಪಜನ ।
ನಿಲ್ಲದೀಗ ತೋರು ತೋರು । ಖುಲ್ಲದಾನವ ॥೫೨॥

ಇಷ್ಟು ಕೆಲಸಕಿಲ್ಲಿ ಬಂದು । ಕೆಟ್ಟುಪೋದಿರಕಟ ನಿಮ್ಮ ।
ಶಿಷ್ಟನಂದೇ । ಸಂದನೆನ್ನ । ಹೊಟ್ಟೆ ಹಸಿವಿಗೆ ॥
ಕಷ್ಟನಿಮ್ಮ ಪೂರ್ವಕರ್ಮ । ವಟ್ಟಿಕೊಂಡು ಬಂದುದಿಲ್ಲಿ ।
ಗಷ್ಟಮೂರ್ತಿ ದಯದೊಳೆನಗೆ । ಕೊಟ್ಟ ಹಿಟ್ಟನು ॥೫೩॥

ಖೂಳ ಹೆಚ್ಚುಗಳಹೆ ನಿನ್ನ । ನಾಲಿಗೆಯನು ತರಿವೆನೀಗ ।
ಸೀಳಿ ನಿನ್ನ ಬಸಿರ ನಳಿದ । ಬಾಲಗುರುಜನ ॥
ಮೇಲೆ ತೆಗೆದು ಪೋಪೆವೆನಲು । ತಾಳಿಕಿನಿಸ ತೆರೆದು ಬಾಯ ।
ಬೀಳಬರಲು ಖಳನ ತಿವಿದ । ತಾಳ ಕೇತನು ॥೫೪॥

**ರಾಗ ಭೈರವಿ ಏಕತಾಳ**

ಬಲನ ಹತಿಗೆ ನೊಂದೆಂದ । ನರ । ಕುಲ ಮೇಣ್ ಸುಮನಸವೃಂದ ।
ಸಲೆ ಕೇಳಲು ಮನ್ನಾಮ । ಭಯ । ದೊಳು ಮೈಗರೆದಪರಮಮ ॥೫೫॥

ಪುಸಿಯೊದರುವೆಯಾ ಮದಾಂಧ । ನಿಲೆ । ದೆಸೆಯಿಲ್ಲದೆ ಕ್ರವ್ಯಾದ ।
ಎಸೆವ ನೃಪರ ಭಯದಿಂದ । ನೀ । ವಸುಧೆಯ ಬಿಟ್ಟೈತಂದೆ ॥೫೬॥

ಏನೆಂದೆಯೊ ಹುಲುಗುವರ । ಕುರಿ । ಯಾನೆಗೆ ಸರಿಯೆ ವಿಚಾರ ।
ಮಾಣಿನ್ನೆಲೆಯೆಲೆ ಮರುಳೆ । ತವ । ಪ್ರಾಣಕಳೆವೆ ನಿಮಿಷದೊಳೆ ॥೫೭॥

ಎಂದೆನುತಲೆ ಮುಷ್ಟಿಯೊಳು । ಖಳ । ಬಂದರೆ ಹರಿಯನೆರಗಲು ।
ಮಂದರಧರ ಪಾದದೊಳು । ಬೀ । ಳೆಂದೊದೆಯಲು ಖಾತಿಯೊಳು ॥೫೮॥

**ಭಾಮಿನಿ**

ಬಿದ್ದನಮರಾರಾತಿ ನೆತ್ತರು ।
ಹಾಯ್ದುದಾಗಲೆ ಮುಖದಿ ಪದಹತಿ ।
ಬುದ್ಧಿಕಲಿಸಿತು ಖಳಗೆ ಹರಿಮಹಿಮೆಗಳ ನೇನೆಂಬೆ ॥
ಚೋದ್ಯವಿದು ದನುಜಂ ಬಳಿಕ ತ ।
ನ್ನುದ್ದುರುಟುತನವುಳಿದು ಹರಿಯನು ।
ಶ್ರದ್ಧೆಯಲಿ ಹೊಗಳುತ್ತ ಜಯಜಯವೆನುತ ವಂದಿಸಿದ ॥೫೯॥

**ರಾಗ ಬೇಗಡೆ ಅಷ್ಟತಾಳ**

ಪಾಲಿಸೈ ಗೋಪಾಲ ವನಮಾಲ । ದುರಿತಾಬ್ಧಿ ವಡಬ ಸು
ಶೀಲ ದೇವಕಿ ಬಾಲ ಶ್ರೀಲೋಲ ॥
ಬೀಳುಗೊಡು ಕೈವಲ್ಯಕವನಿಯ । ಮೇಲೆ ನಾನೀವೇಳೆಗೆಸಗಿದ ।
ಕೀಳು ಕರ್ಮವ ಕ್ಷಮಿಸು ಜನ್ಮಕೆ । ಬೀಳಿಸದಿರು ದ । ಯಾಳು ನರಹರಿ ॥ ಪಾಲಿಸೈ ॥೬೦॥

ಧರೆಯೊಳೆಂದೂ ಸ್ಮರಿಸುವಂತೆನ್ನ । ನೆಲೆಯಾಗಿಸು ಕಳೇ -
ಬರವ ಶುದ್ಧೀಕರಿಸಿ ಸಂಪನ್ನ ॥
ವಿರಚಿಸಸ್ಥಿಯ ಪರಮ ಶಂಖವ । ಕರದಿ ಪಿಡಿದದ । ಪೊರೆ ಕೃಪೆಯೊಳೆಂ ।
ದೆರಗಲಚ್ಯುತ ಕರುಣೆ ದೋರಲು । ತೆರಳಿದನು ಸದ್ಗತಿಗೆ ದಾನವ ॥ ಪಾಲಿಸೈ ॥೬೧॥

**ವಾರ್ಧಕ**

ಇಳೆಯಧಿಪ ಕೇಳು ಖಳನಂ ಸೀಳಿನೋಡಿದೊಡೆ ।
ಒಳಗೆ ಗುರುಸುತನಿಲ್ಲದಿರೆ ತದಸ್ಥಿಯನೆತ್ತಿ ।
ಒಲಿದು ವಾದ್ಯೋತ್ತಮವ ಪಾಂಚಜನ್ಯವ ರಚಿಸಿ ಬಲರಮಾಧವರು ಬಳಿಕ ॥
ಲಲಿತವಹ ಪಾಂಚಜನ್ಯವ ಪೂಜಿಸುವ ನರ ।

ರ್ಕಳ ದುರಿತಗಿರಿ ಜರಿಯಲೆಂದು ಕರುಣಿಸಿ ವರವ ।
ನಿಲದೆ ಶೈಮಿನಿಪುರಕೆ ತೆರಳಿ ಶಂಖನಿನಾದವಂ ಗೈದನಾ ಕೃಷ್ಣನು ॥೬೨॥

**ಕಂದ**

ಕೇಳುತ್ತಚ್ಚರಿಯಿಂದಾ ।
ಕಾಲಂ ನಡೆತಂದು ನೋಡಿ ಸಂತಸಗಡಲೊಳ್ ॥
ಓಲಾಡುತೆ ಮಣಿದಂಘ್ರಿಗೆ ।
ನೀಲಾಂಗನ ಭಕ್ತಿಯೊಳುರೆ ಸಂಸ್ತುತಿಗೆಯ್ದಂ ॥೬೩॥

**ವಾರ್ಧಕ**

ಜಯತು ಜಯ ಕರುಣಾಲವಾಲ ಮಾನುಷಲೀಲ ।
ಜಯತು ಜಲದ ನಿಭಾಂಗರಂಗ ಗೋಕುಲ ಸಂಗ ।
ಜಯ ಕಾಶ್ಯಪಾಪತ್ಯ ನಿತ್ಯ ಸಜ್ಜನ ಭೃತ್ಯ ಜಯತು ಸಂಹಾರ ದೈತ್ಯ ॥
ಜಯ ಕಮಲ ಭವತಾತದಾತ ಭರ್ಗ ಪ್ರೀತ ।
ಜಯ ಸಚ್ಚಿದಾನಂದ ನಂದಪಿತ ಮಾಕಂದ ।
ಜಯನುತ ಸಹಸ್ರಾಕ್ಷ ರಕ್ಷನರಹರ್ಯಕ್ಷ ಜಯತುಜಯ ಸಲಹೆಂದನು ॥೬೪॥

**ರಾಗ ಶಂಕರಾಭರಣ ತ್ರಿವುಡೆತಾಳ**

ಆವ ನೋಂಪಿಯೊ ನಿಮ್ಮ ದರ್ಶನ । ಕಾವ ಪುಣ್ಯ ಫಲಿಸಿತೊ ।
ಸೇವಕಗೆ ಬೆಸನೇನು ಕಜ್ಜಗ । ಳಾವುವೊಡೆಯ ॥೬೫॥

ಎನಲು ಕೇಶವನೆಂದ ಸಾಂದಿಪ । ತನುಜ ನಳಿದ ಕಡಲೊಳು ।
ದನುಜ ಶಂಖನೊಳಾತನಂ ತೋ । ರೆನೆ ನುಡಿದನು ॥೬೬॥

ಮೀರೆನಾಜ್ಞೆಯನೆಲ್ಲ ಜೀವರು । ಪ್ರಾರಬುಧದ ಕರ್ಮದಿ ।
ಸೇರುವರು ನರಕವನಿದಕೆ ಪರಿ । ಹಾರವುಂಟೆ ॥೬೭॥

ಮರುಳಲಾ ನಾನೊಲಿದ ಪ್ರಾಣಿಗೆ । ದುರಿತ ಬಾಧೆ ಇರ್ಪುದೆ ।
ಭರದೊಳೀಯೆನಲಿತ್ತನಂತಕ । ಗುರುತನಯನ ॥೬೮॥

**ವಾರ್ಧಕ**

ಹರಿಕುಲಜ ಕೇಳವನ ಹರಿಯಿತ್ತು ಸುಲಲಿತಲ ।
ಹರಿಯಡಿಗೆ ವಂದಿಸಲು ಹರಿಯವನ ಬೀಳ್ಕೊಂಡು ।
ಹರಿವೇಗದಿಂದಾಗ ಹರಿಲಿಂಗ ನಗರಕ್ಕೆ ಹರಿತಂದು ಗುರುವಿನಡಿಗೆ॥
ಹರಿಸದಿಂದೆರಗಿ ಬುಧ ಹರಿಸುತನನೀಯಲ್ಕೆ ।

ಹರಿಜಾನ್ವಯಂ ಪೊಗಳೆ ಹರಿಯದಾನಂದದಿಂ ।
ಹರಿತ ಪೀತಾಂಬರರ ಹರಸಿದಂ ಸಾಕ್ಷಾತ ಹರಿಯಂಶರೆಂದು ಬಗೆದು ॥೯॥

**ರಾಗ ಧನಾಸರಿ, ರೂಪಕತಾಳ**

ಧನ್ಯನಾದೆನ್ನೈ ಭಲಾ । ಜೀವಿತ ಸಫಲ ॥ ಧನ್ಯನಾದೆನ್ನೈ ಭಲಾ ॥ ಪಲ್ಲವಿ ॥

ಪುಣ್ಯ ಪುರುಷರೆನಗೆ ನೀವಾ । ಪನ್ನರಾದ ಬಳಿಕ ಜಗದಿ ॥ ಧನ್ಯನಾದೆನ್ನೈ ॥ ಅ.ಪ ॥

ತಿಳಿದು ಕೊಂಬುದೀ ರಹಸ್ಯ । ಖಳರಾದರೆ ನೃಪರಧರ್ಮ ।
ಬೆಳೆವುದವರೆ ಭೂಮಿಭಾರ । ಬೆಳೆಯಬೇಲಿ ಮೇವತೆರದಿ ॥ ಧನ್ಯ ॥೭೦॥

ಕ್ಷಿತಿಗಧೀಶರಾಗಿ ಸಾಧು । ತತಿಶರಣ್ಯರಾಗಿ ಕೀರ್ತಿ ।
ಯುತ ಮಹಾತ್ಮರಾಗಿರೆಂದು । ಶ್ರುತಿವಿದನಾಶೀರ್ವದಿಸಲು ॥ ಧನ್ಯನಾದೆನ್ನೈ ॥೭೧॥

**ವಾರ್ಧಕ**

ಗುರುವ ಬೀಳ್ಕೊಂಡು ಬಲಕೃಷ್ಣರೊಲವಿಂ ಬರಲು ।
ಹರುಷದಿಂ ಮಧುರಾಪುರದ ಜನರ್ಶಶಿಯಿದಿರ ।
ಶರಧಿಯಂತುಬ್ಬೆದ್ದು ಸಂಭ್ರಮದಿ ಕರೆತರಲು ರಥವನಿಳಿದತುಳ ಬಲರು ॥
ಹಿರಿಯರಿಗೆ ವಿಪ್ರರಿಗೆ ತಾಯ್ತಂದೆಗಳಿಗೆರಗು ।
ತರಮನೆಯ ಪೊಕ್ಕರತಿ ವಿಭವದಿಂದಾ ಮೇಲೆ ।
ಹರಿಯೊಲಿಯಲಾವುದರಿದಾಯ್ತಭ್ಯುದಯಕೆ ಮೊದಲಾಯದುಪ್ರವರ ಕುಲಕೆ ॥೭೨॥

**ಭಾಮಿನಿ**

ಇಂತು ಮಧುರಾಪುರದಿ ಬಲ ಮಾ ।
ಕಾಂತರಖಿಳ ಸುಬಾಂಧವರನ ।
ತ್ಯಂತ ಸುಖ ಸಾಮ್ರಾಜ್ಯದೊಳು ವಿಹರಿಸುವವೋಲೆಸಗಿ ॥
ಸಂತಸದೊಳಿರೆ ಕೃಷ್ಣನೊಂದಿನ ।
ಚಿಂತಿಸುತ ಗೋಕುಲವ ತನ್ನೇ ।
ಕಾಂತ ಭಕ್ತರ ದೇವನುದ್ಧವನನ್ನು ಕರೆದೆಂದ ॥೭೩॥

**ರಾಗ ಕಲ್ಯಾಣಿ ಝಂಪೆತಾಳ**

ಭಾಗವತ ಗಗನರವಿ । ಪೋಗು ಗೋಕುಲದಾ ವಿ ।
ಯೋಗಿಗಳ ಮನದ ತಮ । ನೀಗಿಸು ಕೃತಾತ್ಮ ॥ ಪಲ್ಲವಿ ॥

ದ್ತಂದೆ ತಾಯಿಗಳನ್ನು । ಬಂಧು ಬಳಗಂಗಳನು ।
ದಂದುಗವಗೊಳಿಸಿದೆನು । ಸಂದೇಹವೇನು ॥
ಸಂದ ಕಾರ್ಯಕ್ಕಾಗಿ ಬಂದೆನವರನು ತೊಲಗಿ ।
ಹಿಂದ್ಯೆದಲೆಂತು ನೀ । ನಿಂದರುಹು ಸುಗುಣಿ ॥೭೪॥

ಎನ್ನನೇ ನಂಬಿ ಮನವನ್ನಿರಿಸಿ ಗೋಪಿಜನ ।
ಚೆಣ್ಣಮನೆ ಕಾದಲರ । ಗಣ್ಯವಿಡದವರ ॥
ಸನ್ನುತೆಯರನು ಹರಣದನ್ನೆಯರ ವಂಚಿಪೆ ನಾ ।
ಗನ್ನಗತಕದೊಳೆಂತು ಅನ್ಯಾಯವಾಂತು ॥೭೫॥

ನೀನೆನ್ನ ನಚ್ಚಿನ ಸಮಾನ ಬಾಂಧವ ನಾ ಸ ।
ತೀನಿವಹ ಮೀನಾಂಕ ಬಾಣಹತಿಗನಕ ॥
ಹಾನಿಗೊಳದಿರೆ ಭಕ್ತ ಪ್ರಾಣ ತಾನೆಂದೆನುತ ।
ಜಾಣ ಪೇಳ್ದವರ ಸುಮ್ಮಾನದಿಂದಿರಿಸು ॥ ॥೭೬॥

**ಭಾಮಿನಿ**

ಹರಿಯ ವಚನವ ವೈಷ್ಣವೋತ್ತಮ ।
ಶಿರದೊಳಾಂತಡರುತೆ ವರೂಥವ ।
ತೆರಳಿ ಬರೆ ಗೋಕುಲಕೆ ರವಿ ಪಡುವೆಟ್ಟೆಡೆಯ ಸೇರೆ ॥
ಪರಿಕಿಸಲು ಕಾಲಾಖ್ಯ ವಣಿಜನು ।
ಧರೆಯ ಜನರಾಯುವನಳೆದು ಬದಿ ।
ಗಿರಿಸಿರುವ ಚೆಂಬೊನ್ನ ಬಳ್ಳದೊಲೆಸೆಯಲಿನಬಿಂಬ ॥೭೭॥

**ವಾರ್ಧಕ**

ಬರುತ ಕಂಡನು ಭಕ್ತ ಮುಂದೆಸೆವ ಗೋಕುಲವ ।
ನರಸ ನಿದ್ರಾಸಕ್ತನಯ್ಯಂ ಜಡಾಶ್ರಯಂ ।
ತರಳನ ಶರೀರನೊಡವುಟ್ಟಿದಂ ಕ್ಷಯರೋಗಿಯೆನುತರಮೆ ತನಗಿರಲ್ಕೆ ॥
ವರನಿಲಯಮಂ ಪುಡುಕುತಿಳೆಯೊಳೀ ವ್ರಜದಿ ಸು ।
ಸ್ಥಿರವಾಗಿ ನೆಲಸಿ ಹರಿಯವತರಿಸೆ ಪಾಲ್ಗೆ ಸ ।
ಕ್ಕರೆ ತೀವಿದಂತಾಗೆ ಮಧುರೆಗಿನನ್ಯೆದಲೊಡನ್ಯೆದದಿಹಳೆಂಬ ತೆರದಿ ॥೭೮॥

**ಕಂದ**

ತುರುವಿಂಡುಗಳಂ ಕರುಗಳ ।
ನೆರವಿಯ ಮನೆಮನೆಯ ದೇವ ಪೂಜೆಯ ಗೋಪೀ ॥

ಹರಿಕೀರ್ತನೆಗಳ ಸೊಬಗಂ ।
ನಿರುಕಿಸಿ ಕೈಜೋಡಿಸುತ್ತೆ ಗೋಕುಲವೊಕ್ಕಂ ॥೭೯॥

**ಭಾಮಿನಿ**

ಸ್ಯಂದನವನಿಳಿಯುತ್ತ ವಾತಕಿ ।
ನಂದಗೋಪನ ನಿಲಯ ಕೈದಲು ।
ಮುಂದೆ ಕಾಣುತ ಪೋದ ಹರಣವು ಮರಳಿ ಬಂದವೊಲು ॥
ನಂದ ಕರೆದೊಯ್ದರ್ಘ್ಯ ಪಾದ್ಯವ ।
ಬಂಧುವಿಂಗಿತ್ತುಪಚರಿಸುತಾ ।
ನಂದದಿಂ ಮಾರ್ಗಾಯಸವ ಕಳೆದುಣಿಸುಕೊಳ್ಳುಣಿಸ ॥೮೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕುಳ್ಳಿರಿಸಿ ಮಂಚದಲಿ ಮೃದುಪದ । ಪಲ್ಲವವನೊತ್ತುತ್ತ ಲಕ್ಷ್ಮೀ ।
ವಲ್ಲಭನ ಸಮವೆಣಿಸಿ ನಂದನು । ಸೊಲ್ಲಿಸಿದನು ॥೮೧॥

ಕುಶಲನೇ ವಸುದೇವ ದೇವಕಿ । ಯಸುರಹರ ಬಲರಿಹರೆ ಸೌಖ್ಯದೊ ।
ಳೆಸೆವ ನಮ್ಮಾಪ್ತರು ಸತೀಸುತ । ವಿಸರದೊಡನೆ ॥೮೨॥

ಚಿತ್ತವಿಭ್ರಮ ದೂರರೇ ಭು । ಕ್ತೋತ್ತಮರು ಪೊಸತೈಸೆಬಹುದು ಕೃ ।
ತಾರ್ಥನಾದೆನೆನುತ್ತ ನುಡಿದನು । ಮತ್ತೆ ನಂದ ॥೮೩॥

**ರಾಗ ಕೇತಾರಗೌಳ ಝಂಪೆತಾಳ**

ವೃಷ್ಣಿಕುಲವನ ಚಂದನಾ । ನೆನೆವನೇ । ಕೃಷ್ಣನೆಮ್ಮನು ದೀನನ ।
ತೃಷ್ಣೆಯನು ಪರಿಹರಿಸಲು । ಬಹನೆಂದು । ಜಿಷ್ಣು ವಾಹಾಭ ಪೇಳು ॥೮೪॥

ನಂದಗೋಕುಲವಮೇಣು । ಗೋಧನವ । ವೃಂದಾವನವ ತನ್ನನು ।
ಒಂದೆ ಭಾವದಿ ನಂಬಿಹ । ಗೋಪಿಯರ । ವೃಂದವನು ನೆನೆವನೇ ಹಾ ॥೮೫॥

ವಾತಾದಿ ಖಳರ ಕೊಂದ । ಅತಿವೃಷ್ಟಿ । ಪಾತಕಚಲವ ನೆತ್ತಿದ ।
ಘಾತಿಸಿದ ಕಾಳೀಯನ । ಕಾಳುರಿಯ । ಭೀತಿಯನು ತಣಿಸಿದವನ ॥೮೬॥

ನೀಲಗಾತ್ರನ ಮೋಹನ । ಮೂರುತಿಯ । ಬಾಲಲೀಲೆಗಳ ತೆರನ ।
ಪೇಳೆಷ್ಟು ದಿನಕೆ ಕಾಂಬೆ । ಹರಿತೋರ್ಪ । ಕಾಲವಿನ್ನಾವುದೆಂಬೆ ॥೮೭॥

**ಕಂದ**

ಇಂತಾನಂದಂ ಹರಿಗುಣ ।
ಚಿಂತನೆಯೊಳ್ ಮಿಗೆ ಸಮಾಧಿಗತನೆಂದೆಂಬೊಲ್ ॥
ಸ್ವಾಂತಾನಂದದೊಳುಸಿರದೆ ।
ನಿಂತಿರಲವನರಸಿಯುದ್ಧವಂಗಿಂತೆಂದಳ್ ॥೮೮॥

**ರಾಗ ಬೇಗಡೆ ತ್ರಿವುಡೆತಾಳ**

ಬಾಲನೆಂದಿಗೆ ಬಂದಪ । ಯದುಕುಲದೀಪ । ಬಾಲನೆಂದಿಗೆ ಬಂದಪ ॥ ಪಲ್ಲವಿ ॥

ಬಾಲನೆಂದಿಗೆ ಬರುವ ತುರುಗಳ । ಸಾಲ ಬೆಂಬಲಿ ಕೊಳಲನೂದುತ ।
ಮೇಳದಣುಗರ ಕೂಡೊಲಿದು ಗೋ । ಪಾಲ ಮಕ್ಕಳ ಮಾಲಿಕಾ ಮಣಿ ॥
ಬಾಲನೆಂದಿಗೆ ಬಂದಪ ॥  ॥ ಅನು ಪಲ್ಲವಿ ॥

ಚೆನ್ನಕೇಶವ ಮೊಸರ । ಹಾಲನು ಮೇಣು । ಬೆಣ್ಣೆಯ ಗೋಪಿಯರ ।
ಕಣ್ಣನೂ ಮರೆಗೆಯ್ದು ಕಳುತಲೆ । ಮಣ್ಣನೂ ಮೆಲುತಿರಲು ಕಂಡವ ।
ನಣ್ಣನೂ ಕರೆದೊಯ್ದು ತೋರಿದ । ಡೆನ್ನನೂ ನಾ ಕೇಳಲಿಲ್ಲೆಂ ।
ದೆನ್ನುತಲಿ ಪ್ರಾಮಾಣ್ಯಕಾಕಳಿ । ಪನ್ನಮಲ್ಲಿಳೆ । ಯನ್ನು ಕಂಡಾ ।
ಪನ್ನಳಾದರೆ ಚಿನ್ಮಯಾಂಗ ಪ್ರ । ಸನ್ನನಾಗುತ್ತೆನ್ನ ಪೊರೆದ ॥ ಬಾಲ ॥೮೯॥

ಮತ್ತೊಮ್ಮೆ ಮೊಲೆಗುಡಿದು । ದಣಿಯುವ ಮೊದ । ಲತ್ತ ಪೋದರೆ ನಾನಂದು ।
ಸುತ್ತಲೂ ಚೆಲ್ಲುತ್ತ ಮೊಸರನು । ಹತ್ತಲೂ ನೆರೆಮನೆಗೊಡನೆ ಬೆಂ
ಬತ್ತಲು । ನಗು ತೋಡುವನ ಬಲಿ । ದಿತ್ತಲೂ ನಾ ತಿರುಗಲೊರಳಿಳೆ ।
ಯುತ್ತ ಶ್ರೀಹರಿಕಿತ್ತಡಾಜುಗ । ಮತ್ತಿಗಳ ನಾವತ್ತಡಿರುತಲಿ ।
ನಿತ್ಯನಾಗಿ ಕೊಲುತ್ತ ಖಳರಗ । ವೆತ್ತಿ ಮಧುರೆಗೆ ಕೂರ್ತು ನಡೆದ ॥ ಬಾಲನೆಂದಿಗೆ ॥೯೦॥

**ಭಾಮಿನಿ**

ಅರಸ ಕೇಳ್ಕೈ ಹರಿಗುಣವ ನೀ ।
ತೆರದಿ ಹೊಗಳುತ ಹರುಷರಸದು ।
ಬ್ಬರದ ಪುಳಕದಿ ತನುವ ಮರೆತಿರಲಂಬುರುಹವದನೆ ॥
ಇರೆ ಯಶೋದಾನಂದರನು ವಿಭು ।
ವಿರಹ ಸಂತಪ್ತರನು ವೈಷ್ಣವ ।
ರೆರೆಯ ಕಂಡತಿ ಭಕ್ತಿಯಲಿ ಮಣಿದೆಂದನುದ್ಧವನು ॥೯೧॥

**ರಾಗ ಸುರುಟಿ ಅಷ್ಟತಾಳ**

ಶೋಕಿಪುದೇತಕೆ ಗೋಕುಲದೆರೆಯ । ನಾಕಾಣೆ ತವಪುಣ್ಯಾನೀಕಕೆ ದೊರೆಯ ॥
ಶೋಕಿಪು ॥ ಪಲ್ಲವಿ ॥

ಆರುಂಟು ನಿಮ್ಮಂತೆ । ಧಾರಿಣಿ ಮಧ್ಯದಿ । ಭೂರಿಭಾಗ್ಯರು ಮುನಿ । ವಾರ ಹೃತ್ಪಂಕಜ ।
ದೂರ ಶ್ರೀ ಕೃಷ್ಣನೊಳು । ಪುತ್ರಪ್ರೇಮ । ಬೇರುವರಿಯೆ ಕೃಪಾಳು ।
ನಿಮ್ಮೊಲು ಧನ್ಯ । ರಾರು ತ್ರೈಗುಣಗಳೊಳು ।
ತುಂಬಿದ ಮಾಯಾ । ನಾರಿಯಾವನ ಸೇವಿಪಳು ನಿತ್ಯಪೇಳು ॥ ಶೋಕಿಪು ॥೯೨॥

ಈ ವಸುಂಧರೆ ದೂರ । ಲಾ ವಿಶ್ವಂಭರ ವಾಸು । ದೇವಾಖ್ಯೆಯಲಿ ಬಂದ । ನಾವನ ನಾಮವ ।
ಜೀವಪೋಪಾವೇಳ್ಯದಿ । ಜಪಿಸಿದರೊಮ್ಮೆ । ಕೇವಲವಾ ಕೃತ್ಯದಿ ।
ಮುಕ್ತಿಯ ಕೊಡು । ವಾ ವೈಕುಂಠನು ನಿಜದಿ ।
ನಂದನನೆಂಬ । ಭಾವನೆಗೊಳಗಾದ ಮೇಲಿನ್ನು ಗುಣಧಿ ॥ ॥೯೩॥

ಅಂತಿಕದೊಳಗಿರ್ದ । ಚಿಂತ್ಯ ತೊಲಗಿದ ನಿ । ಮ್ಮಂತರಂಗ ವ್ಯಥೆ । ಗಂತರಾತ್ಮನು ಶ್ರೀ ।
ಕಾಂತನಲ್ಲವೆ ಯೋಚಿಸು। ನಿನ್ನೊಳು ಕಂಡ । ನಂತನ ಸುಖಿಯೆನಿಸು ।
ಸರ್ವಾತ್ಮನ । ಚಿಂತೆಯೊಳಾನಂದಿಸು ।
ಸುತಪಿತರೆಂಬ । ಭ್ರಾಂತಿ ಸಲ್ಲದು ತತ್ವವರಿಯಲು ಲೇಸು ॥ ॥೯೪॥

ಎರಡೊಂದು ಗುಣದೊಳು । ಭರಿತನೆನಿಸಿ ವಿಧಿ । ಹರಿಹರರೂಪದಿ । ಪೊರೆವನು ಜಗವನ್ನು
ಪರಂಜ್ಯೋತಿಯಂತ್ಯದಲಿ । ಏಕಾಂಗಿಯಾ । ಗಿರುವ ಚೆಲ್ಲೀಲೆಯಲಿ ।
ತಾ ತಿರುಗಿಳೆ । ತಿರುಗಿತೆಂಬಂದದಲಿ ।
ತೋರ್ಪನು ತಥ್ಯ ವರಿಯದ ಮೂಢರ್ಗೆ ನಿರ್ಗುಣನೆಂದು ತಿಳಿ ॥ ॥೯೫॥

**ಕಂದ**

ಇಂತೆನುತುದ್ಧವ ನಂದನ ।
ಸಂತೈಸುತಲಾತ್ಮ ವಿದ್ಯೆಯಂ ತಿಳಿಯುವವೊಲ್ ॥
ತಾಂ ತತ್ವನರುಹುತ ಬಳಿ ।
ಕಂ ತರುಣೀಮಣಿ ಯಶೋದೆಗೆಂದನು ನಯದಿಂ ॥೯೬॥

**ರಾಗ ನವರೋಜು ಆದಿತಾಳ**

ಲಾಲಿಸು ನಂದನ ಜಾಯೆ । ಶ್ರೀಲೋಲನ ಸಾಕಿದ ತಾಯೆ ।
ಪೇಳುವುದೇನು ವಿ । ಶಾಲಮತಿಯೆ ನಿನ್ನ ।
ಪೋಲುವ ಸತಿಯರು । ಮೂಲೋಕದಿ ನಹಿ ॥ ಲಾಲಿಸು ॥೯೭॥

ಚೆನ್ನಿಗಗೇ ಮೊಲೆಗೊಟ್ಟು । ಮೇಣು । ರನ್ನದೊಟ್ಟಿಲೊಳಿಟ್ಟು ।
ಕನ್ನೈದಿಲ ಮೈ । ಬಣ್ಣನ ಸಲಹಿದೆ ।
ಮನ್ನಣೆಯಲ್ಲಿದು । ಧನ್ಯಳು ನೀನಿಜ ॥ ಲಾಲಿಸು ॥೯೮॥

ಜಗದಯ್ಯ ಮಾಧವನು । ನಿನ್ನ । ಮಗನೆಂದೆಂಬರೆ ತಾನು ।
ಮಗನಾಗನೆ ಲೌ । ಕಿಗರೆಲ್ಲರಿಗಿದು ।
ನಿಗಮ ವಚನವೆನ । ಲಗಲದೆಂತಿರ್ಪನು ॥ ಲಾಲಿಸು ॥೯೯॥

ಇಳೆಯ ದುಷ್ಟರಕೊಂದು । ಸುರ । ಕುಲವ ರಕ್ಷಿಸ ಬಂದು ।
ಬಳೆದೀಯೆಡೆ ನಿಜ । ಕೆಲಸಕ್ಕೈದಿದ ಹರಿ ।
ಸಲಹುವೆ ಬಿಡಿಮನ । ದಳಲೆಂದುಸುರಿದ ॥ ಲಾಲಿಸು ॥೧೦೦॥

**ಭಾಮಿನಿ**

ಎಂದು ಭಕ್ತರ ದೇವನುದ್ಧವ ।
ತಂದ ಹರಿಯುಚಿತಗಳ ನಿತ್ತಾ ।
ನಂದ ಗೋಪಯಶೋದೆಯರ ಸುತವಿರಹ ಶೋಕಾಗ್ನಿ ॥
ನಂದುವಂದದಿ ಸೂಕ್ತಿಯಮೃತದ ।
ಬಿಂದುಗಳ ಸುರಿಸುತ್ತಲಿರೆ ನಿಶಿ ।
ಸಂದುದರೆಗಳಿಗೆಯವೊಲಾ ಗೋವಿಂದ ದಾಸರಿಗೆ ॥೧೦೧॥

**ವಾರ್ಧಕ**

ಪೂರ್ವದಿಕ್ಕಾಮಿನಿಯ ಮೊಗದ ಸೆಂದುರವೆಳಗೊ ।
ಶರ್ವರೀಕರ ಸಖಿಯ ಕೀಳ್ಗೈದು ಪದ್ಮಿನಿಯು ।
ಬೀರ್ವ ಹಾಸದ್ಯುತಿಯೊ ರವಿ ರಥಾಶ್ವಗಳ ಖುರಹತಿಗೆದ್ದ ಕೆಂದೂಳಿಯ ॥
ಪರ್ವುಗೆಯೊ ಪೇಳಲರಿದೆಂಬನಿತರೊಳ್ ಕೂಗ ।
ಉರ್ವರೆಯನೆಚ್ಚರಿಸೆ ಕುಕ್ಕುಟಂ ಖಳರೆದೆಯ ।
ಗುರ್ವಿಸಲು ಮರ್ಬುಗಿರಿ ಗುಹೆಯ ಪಥವಂ ಪಿಡಿಯಲರುಣೋದಯಂ ಮೆರೆದುದು ॥೧೦೨॥

**ರಾಗ ಸಾಂಗತ್ಯ ರೂಪಕತಾಳ**

ಅರಸ ಕೇಳಾ ಸಮಯದೊಳೆದ್ದು ಗೋಪಿಕೆ । ಯರು ಸುಸ್ವರದಿ ಮನವೊಲಿದು ॥
ಹರಿಲೀಲೆಗಳ ಭಕ್ತಿ । ಭರದಿ ಪಾಡುತಲಿ ಮೊ । ಸರ ಕಡೆವುತ್ತಿದ್ದರಂದು ॥೧೦೩॥

ದುರುಳರ ತರಿದೆ ಕಾ । ಳುರಿಯ ನಂದಿಸಿದೆ ಶ್ರೀ । ವರನೆ ಮೈದೋರುದೋರೆನುತ ॥
ಸ್ಮರಿಸಲು ಪರಿಯೆ ತಿಮಿರ ಹರಿಭಜನೆಯಿಂ । ದುರಿತ ಹಿಂಗುವ ತೆರದಿಂದ ॥೧೦೪॥

ನೀರೆಯರುದಯದೊಳಾ ರಾಜಗೇಹದ । ದ್ವಾರದೊಳಿಹ ದಿವ್ಯರಥವಾ ॥
ವಾರುವಗಳ ಕಂಡು । ಭೂರಿ ಚೋದಿಗಗೊಂಡು । ಯಾರೋ ಬಂದಿಹರೆಂದು ನೆನೆಸಿ ॥೧೦೫॥

**ವಾರ್ಧಕ**

ವಾರಿಜಾಕ್ಷಿಯರು ನಿಜವರಿಯದೋರೋರ್ವರೆ ವಿ ।
ಚಾರಿಸಲು ರಥದೆಡೆಗೆ ಬಂದು ನೆರೆಯಲ್ಕಿತ್ತ ।
ವೀರವೈಷ್ಣವನುದ್ಧವಂ ಸೂರ್ಯನುದಯದೊಳು ನಿತ್ಯಕರ್ಮಗಳನೆಸಗಿ ॥
ನಾರಿಯರನೀಕ್ಷಿಸಲ್ಕಾ ಸ್ಥಳಕೆ ಬರುತಿರಲ್ ।
ದೂರದಿಂ ಸತಿಯರಾತನ ನೋಡಿ ಮನದೊಳಿವ ।
ನಾರಹನೆನುತ್ತೋರ್ವರೋರ್ವರಂ ಕುರಿತು ಪ್ರಸ್ತಾಪವೆತ್ತುತ ನುಡಿದರು ॥೧೦೬॥

**ರಾಗ ಯಮುನಾ ಕಲ್ಯಾಣಿ ಅಷ್ಟತಾಳ**

ಯಾರಿವನಮಮ ಸುಂದರಗಾತ್ರ । ಮದನ
ವೀರನ ಪಳಿವುತಿಹನು ಚಿತ್ರ ॥ ಯಾರಿವ ॥ ಪಲ್ಲವಿ ॥

ಅರಳುಗಂಗಳ ನಗೆಮೊಗ ನೋಡೆ । ಕೊಂಕು -
ಗುರುಳದಂತದಸಾಲ ಮನಮಾಡೆ ।
ಕೊರಳೊಳಗಿಹ ತುಲಸಿಯ ದಂಡೆ । ಮೇಣು -
ನೆರಿದುಟ್ಟ ಪೀತಾಂಬರದ ಪಾಡೆ ॥ ಯಾರಿವ ॥೧೦೭॥

ಅಚ್ಚಗನ್ನಡಿಯ ಪೋಲುವ ಕೆನ್ನೆ । ಮತ್ತೀ -
ಸಚ್ಚರಿತನ ರೂಪವೆಲೆ ಕನ್ನೆ ।
ಅಚ್ಯುತನಿಗೆ ಸಮವಹುದಲ್ಲೇ । ಇವನ
ನೊಚ್ಚತದಿಂ ನುಡಿಸುವ ಕೇಳೆ ॥೧೦೮॥

**ಭಾಮಿನಿ**

ಯೋಷಿತೆಯರಿಂತುದ್ಧವನ ಶ್ರೀ ।
ವೇಷಭೂಷಣದಿಂದ ಕೃಷ್ಣನ ।
ದಾಸನೆಂದೂಹಿಸುತಲಧಿಕ ಮನೋನುರಾಗದಲಿ ॥
ಆಸೆವಟ್ಟಚ್ಯುತನು ನುಡಿದಿಹ ।
ಭಾಷಿತವ ನೆನೆದುತ್ಸವದಿ ಪರಿ ।
ವೇಷದಂತಿರೆ ಬಳಸಿ ಕೇಳಿದರುದ್ಧವಂಗೆರಗಿ ॥೧೦೯॥

**ರಾಗ ತೋಡಿ ಆದಿತಾಳ**

ಆರೆಂಬುದರುಹು ತಂದೆ । ನೀನಿಲ್ಲಿ ಬಂದು । ದಾರ ಸಂದೇಶದಿಂದೆ ।
ಆರ ಬಾಂಧವ ನೀನು । ಕಾರ್ಯಸಂಗತಿ ಏನು ।
ಶ್ರೀರಮೆಯರಸನ । ಚಾರುಸೊಬಗು ನಿನ ।
ಗಾರಾಜಿಸುವರೆ । ಕಾರಣವೇನು ॥ ಆರೆಂಬು ॥೧೧೦॥

ಯಾದವರೊಳಗೊಬ್ಬನು । ನಾ ಭಾಗವತರ । ಪಾದಪಂಕಜಭೃಂಗನು ।
ಆ ದಯಾಂಬುಧಿ ನಿಮ್ಮೊ । ಳಾದ ವಿಯೋಗದ ।
ಭೇದಗಳೆದುಸ । ಮ್ಮೋದದೊಳಿರಿಸಲು ।
ಮಾಧವನಪ್ಪಣೆ । ಗೈದಡೆ ಬಂದೆನು ॥ ಆರೆಂಬು ॥೧೧೧॥

ಹರುಷದಿಂದುದ್ಧವನ । ಸತ್ಕರಿಸುತೆಂ । ದರು ಕೃಷ್ಣನೊಳು ದೂಷಣ ।
ಹೊರಿಸಬಹುದೆ ಹೆತ್ತ । ವರಿಗೆ ಯೋಗಕ್ಷೇಮ ।
ವರುಹಲು ನಿನ್ನನು ಕರೆದಟ್ಟಿದನ್ನೈ ।
ಮರೆಯೆ ವಯೋಧಿಕ । ರಿರುವರೆ ಸೌಖ್ಯದಿ ॥ ಆರೆಂಬು ॥೧೧೨॥

ಜನನೀಜನಕರೊಳಗೆ । ಇರುವಂಥ ಪ್ರೇಮ । ಘನತರವೆಲ್ಲರಿಗೆ ।
ಮನೆವಾರ್ತೆಯನು ಬಿಟ್ಟ । ಮುನಿಗೆ ಸಹಿತಲಿನ್ನು ।
ವನಜಾಕ್ಷಗೆ ಕೆಳೆ । ತನವಾರೊಡನಿ ।
ಲ್ಲನಿತರ ಕೂರ್ಮೆಯ । ಜನರಾರಿರ್ಪರು ॥ ಯಾರೆಂಬು ॥೧೧೩॥

**ಭಾಮಿನಿ**

ಮಿಕ್ಕವರ ಕೆಳೆ ಬಳೆದಪುದು ಕಾ ।
ರ್ಯಕ್ಕೆ ತತ್ಸಿದ್ಧಿಯಲಿ ನಿಷ್ಫಲ ।
ವಕ್ಕುಭ್ರಮರಕೆ ಕುಸುಮನಿಕರದ ಮೈತ್ರಿಯಂದದಲಿ ॥
ಸಿಕ್ಕಿಹುದು ಸ್ವಾರ್ಥತೆಯೊಳೀಜಗ ।
ವಕ್ಕರಾರೊಡನಾರಿಗೆನುತಲೆ ।
ದುಃಖದಲಿ ತರುಣಿಯರು ಹರಿಯನು ದೂರುತಳಲಿದರು ॥೧೧೪॥

**ರಾಗ ಯದುಕುಲ ಕಾಂಭೋಜಿ ಏಕತಾಳ**

ಆರು ಕೃಷ್ಣನಿಗೆ । ನಾವೆಮಗವ । ನಾರು ವ್ಯಥೆ ಸುಮ್ಮಗೆ ॥ ಆರು ॥ ಪಲ್ಲವಿ ॥

ಸೇರೆ ಸಾಮ್ರಾಜ್ಯವು । ವೈರಿಗಳೆಲ್ಲ । ತೀರೆ ಬಲು ಸುಖವು ।
ನೀರಜನಯನಗಿ । ನ್ನಾರ ಹಂಗೆಮ್ಮ ಸಂ ।
ಸಾರವೀ ಚಿಂತೆಯಿಂದ ಸೇರಿರುವಂದ ॥೧೧೫॥

ಓತ ಮನೆಮಕ್ಕಳ । ಬಿಡುತ ಗೆಯ್ದ । ಪ್ರೀತಿಗಿದೆ ಸುಫಲ ।
ಬೀತ ಮರವ ಪಕ್ಷಿ । ಜಾತ ಸಾರ್ವುದೆ ಹರಿ ।
ಗೇತರದೆಮ್ಮ ನಂಟು । ಕನಸಿನ ಗಂಟು ॥೧೧೬॥

ಎಚ್ಚರಿಂದಲ್ಲದೆ । ಸ್ವಪ್ನದೊಳು ಯ । ದೃಚ್ಛೆ ನೆನಪಹುದೆ ।
ಅಚ್ಯುತಗೆಮ್ಮೊಳ । ಗಿಚ್ಛೆಯೇನ್ನೈ ನಮ್ಮ ।
ಹುಚ್ಚುಮಾತಿದು ಮೋಹಕೆ । ಮುಪ್ಪಿನಿತಿರ್ಕೆ ॥ ಆರು ॥೧೧೭॥

**ವಾರ್ಧಕ**

ಪಣವಧುಗಳರ್ಥ ಹೀನನ ಭ್ರಷ್ಟನೃಪನ ಪರಿ ।
ಜನವು ಮವಗತ ವಿದ್ಯರೋದಿಸಿದ ಗುರುವ ದ ।
ಕ್ಷಿಣೆ ಬರಲ್ ಋತ್ವಿಜರು ಯಜಮಾನನಂ ಪುಲ್ಗೆ ಬಗೆದಪರೆ ಲೋಕದಲ್ಲಿ ॥
ಎನುತ ಸತಿಯರು ಮುನ್ನ ಕೃಷ್ಣನೊಡನಾಡಿರ್ದ ।
ವನ ಕೇಳಿ ವಸ್ತ್ರಾಪಹರಣರಾಸಕ್ರೀಡೆ ।
ಯನುಭವವ ನೆನೆದು ಪರಮಾನಂದ ಪರವಶೆಯರಿದ್ದರುದ್ಧವನ ಮುಂದೆ ॥೧೧೮॥

**ರಾಗ ಶಂಕರಾಭರಣ ಏಕತಾಳ**

ಅರಸ ಲಾಲಿಸೀ ಪರಿಯೊಳು । ತರುಣಿಯರು ರಮಾರಮಣನ ।
ವಿರಹದಿಂದ ಬೆಂದು ಕರಗು । ತಿರೆ ಮೈಗಂಪಿಗೆ ॥
ಎರಗಲಳಿ ಮೃಣಾಳದಂತೆ । ಮೆರೆವತೋಳ್ಗಳಿಂದ ತಡೆದು ।
ಪರಮೆವರಿಗೆ ನುಡಿದಳಾಗ । ಹರಿಣಲೋಚನೆ ॥೧೧೯॥

ಆರಡಿಯೆ ನಿದಾನಿಸಸುರ । ವೈರಿ ನಿನ್ನ ಬಣ್ಣವೆನುತ ।
ಮೀರಿ ಗರ್ವದಿಂದ ಬಳಿಗೆ । ಬಾರದಿರು ಖಳ ॥
ನೀರನಸಿಯರೆಮ್ಮ ಸವತಿ । ವಾರವಿಟ್ಟ ಕುಚದ ಗಂಧ ।
ಸಾರದಳೆದೆ ಮುಟ್ಟಿದೆಮ್ಮ । ದೂರಪೋಗೆಲ ॥೧೨೦॥

ಚರಣಕೆರಗಿ ಬೇಡುವೆ ನಾ । ವರಿತೆವವನ ಕೃತ್ಯವ ನಾ ।
ಗರಿಕ ಸತಿಯರೊದಗಲೀಗ । ಮರೆತ ನಮ್ಮನು ॥
ಪರಮ ಕಪಟಿಯಿವಗೆ ಸೋತ । ತೆರನದೆಂತೊ ಲಕ್ಷ್ಮಿವೇದ ।
ವೊರಲೆ ನಮ್ಮ ಹಾಗೆ ಮುಗ್ಧೆ । ಮರುಳುಗೊಂಡಳು ॥೧೨೧॥

**ವಾರ್ಧಕ**

ಕೊಲುವನೇ ಧರ್ಮಾತ್ಮನಾಗೆ ಭೃಗುಪತ್ನಿಯಂ ।
ಬಿಲಕಟ್ಟುವನೆ ದಾನವಿತ್ತ ಬಲಿಯಂ ಲಲನೆ ।
ಯೊಲಿದು ಬರೆ ಮುಳಿದು ಮೊಲೆ ಮೂಗನರಿವನೆ ಕಾಮಿಯಲ್ಲ ದಿರ್ದೊಡೆ ಕುಬ್ಜೆಯ ॥
ಕಳೆವರವ ಸಸಿನೆ ಗೈವನೆ ಸಾಕು ಗಿರಿಧರನ ।
ಕಳೆತನಂ ಲುಬ್ಧಕನ ನುಡಿಗೆ ಮರುಳಾದ ಮೃಗ ।
ಗಳ ತೆರದೆ ಕೆಟ್ಟೆವಾವೀಲಾಭವೊಂದೆ ಹರಿ ಕರದಕ್ಷತಂ ಕುಚಕ್ಕೆ ॥೧೨೨॥

**ರಾಗ ಕೇತಾರಗೌಳ ಅಷ್ಟತಾಳ**

ದಂತಿಪುರೇಶ ಕೇ | ಳಿಂತು ಹಲುಬಿ ಮತ್ತೆ | ಕಾಂತೆಯರುದ್ಧವನಾ ॥
ತಿಂಥಿಣಿಯಿಂ ಕೇಳ್ದ | ರೆಂತು ಕಾಂಬೆವು ಕೃಷ್ಣ | ನಂ ತಾವು ಪೇಳೆನುತ ॥೧೨೩॥

ಸಂಧಿಯ ಮಾಡೆ ನೀ | ಬಂದುದಾದರೆ ಬಹೆ | ವಿಂದೆಲ್ಲವನು ಮರೆತು ॥
ಸಿಂಧುಜೆಯುರದೊಳು ನಿಂದಿರೆ ಹರಿಯತೋ | ರ್ಪಂದವೆಂತಯ್ಯ ನೀನು ॥೧೨೪॥

ಚಿತ್ತವಲ್ಲಭಗೆ ನೀ | ಭೃತ್ಯನಲ್ಲವೆ ನಮು | ಗತ್ಯಂತ ಮಾನ್ಯನಯ್ಯ ॥
ಕೃತ್ಯವೇನೆಮಗೆಂದ | ದೈತ್ಯಾರಿ ಪೇಳೆಂದು | ಮತ್ತೆ ಹಂಬಲಿಸಿದರು ॥೧೨೫॥

**ಭಾಮಿನಿ**

ಕಂಡ ವಸ್ತುಗಳೆಲ್ಲವನು ಮುಂ |
ಕೊಂಡು ಕೃಷ್ಣನೆನುತ್ತ ವಿಭ್ರಮೆ |
ಗೊಂಡು ಮಣಿಯುತ್ತಚ್ಯುತನ ಭೂತಾವಳಿಯೊಳಿಂತು ॥
ಪುಂಡರೀಕಾಕ್ಷಿಯರು ಕಲ್ಪಿಪ |
ಚಂಡಭಕ್ತಿಯನೀಕ್ಷಿಸುತ ನಿಜ |
ಮಂಡೆಯಲಿ ಕರಯುಗವ ಜೋಡಿಸುತೆಂದನುದ್ಧವನು ॥೧೨೬॥

**ರಾಗ ಘಂಟಾರವ ಏಕತಾಳ**

ಕೇಳಿರೊಂದು ಮಾತು | ಮನಸಿತ್ತು | ಕೇಳಿರೊಂದು ಮಾತು  ॥ ಪಲ್ಲವಿ ॥

ಕೇಳಿರಿ ತಾಯ್ಗಳಿ | ರಾ ಲಕ್ಷ್ಮೀ ವರ | ನೂಳಿಗವನು ನಾ | ಪೇಳುವೆ ಮತ್ತೆ ॥ ಅ.ಪ ॥

ಧನ್ಯರಾದರು ನಿಮ್ಮ | ಪೋಲುವ | ಪುಣ್ಯವಂತರಮ್ಮ |
ಮೂಜಗ | ವನ್ನು ಹುಡುಕಲಮಮ ॥
ದೊರೆಯರ | ನನ್ಯ ವಿಧದ ಪ್ರೇಮ |
ಇರಿಸುತ | ಚೆನ್ನಿಗರಾಯಗೆ | ತನ್ನ ಸಮರ್ಪಿಸಿ |
ಮುನ್ನಸಂಗ ಸುಖ | ವನ್ನು ಪಡೆದಿರೌ ॥ ಕೇಳಿ ॥೧೨೭॥

ನೇಮನಿಷ್ಠೆಗಳಲಿ | ಜ್ಯೋತಿ | ಷ್ಠೋಮಾದಿಕಗಳಲಿ |
ಮೇಣಿದ್ದಾಮತಪಂಗಳಲಿ |
ಸಿದ್ಧಿಯನಾಮ ವಿರಳ ಕೇಳಿ |
ಭಕ್ತಿಯೊಳಾಮಹಿತನ ಪದ | ತಾಮರಸವನೆನೆ ॥
ದಾಮನುಜನವರ | ಕಾಮಿತವಹುದು ॥ ಕೇಳಿ ॥೧೨೮॥

ದಣಿಯನವನು ಹೊಗಳಿ । ನಿಮ್ಮನು । ತನು ಕೇವಲವಲ್ಲಿ ॥
ಕೃಷ್ಣನ । ಮನವೀವ್ರಜದಲ್ಲಿ । ಕರಗುವ । ನನಿಶ ನಿಮ್ಮನಗಲಿ ।
ತಡೆಯದೆ । ಮನಸಿಜಪಿತನ । ನ್ನನು ಕಳುಹಿರ್ಪನು ।
ಮನದೊಲ್ಮೆಯ ನಿ । ಮ್ಮನು ಸಂತೈಸಲು ॥ ಕೇಳಿರೊಂದು ಮಾತು ॥೧೨೯॥

**ರಾಗ ಸಾಂಗತ್ಯ ರೂಪಕತಾಳ**

ಎಂದೆನೆ ಗೋಪಿಕಾ । ವೃಂದವಿಂತೆಂದುದು । ತಂದೆ ನೀನ್ಯೆತಂದ ಕತದಿ ॥
ಇಂದಿರಾವರನ ಗೋ । ವಿಂದ ದರ್ಶನಭಾಗ್ಯ । ವಿಂದೆಮಗಾಯ್ತು ಕೇಳ್ಸುಮತಿ ॥೧೩೦॥

ಎಂತು ನೆನೆವ ಪೌರ । ಕಾಂತಾಮೋಹಿತನೆಮ್ಮ । ಸಂತೈಸಲೆಂದ ಮಾತೇನು ॥
ಸಂತಸದಿಂದೆಮ್ಮೊ । ಳಾಂತ ರಾಸಕ್ರೀಡೆ । ಮುಂತಾದ ಲೀಲೆಗಳನ್ನು ॥೧೩೧॥

ನೆನೆವನೇ ದಾಸಿಯ । ರನು ಮೇಣುನಿಜಗುಣ । ವೆನಿಪಸಂಗೀತದ ಸೊಬಗ ॥
ಅನುಪಮ ಪ್ರೇಮದೊ । ಳನಘನಾಡಿದವೃಂದಾ । ವನ ಕೇಳಿಗಳ ವಿನೋದಗಳ ॥೧೩೨॥

**ವಾರ್ಧಕ**

ಎಂದು ಮೈದೋರುವನೊ ಹರಿ ವಿರಹ ತಾಪದಲಿ ।
ನೊಂದರ್ಗೆ ಸೂಕ್ತಿಸುಧೆ ಸುರಿಸಲೇನಾಸೆಯೀ ।
ನಂದಗೋಕುಲದ ಕಜ್ಜಂ ತೀರ್ದುದೆಮ್ಮನುಳಿದವಗೆ ದಿನಪೋಗಲಂತೆ ॥
ಮುಂದೆ ನಮಗಾಗೆ ಸಾಕಬಲೆಯರ ಕಷ್ಟಮಂ ।
ಬಂದೊಮ್ಮೆ ದಯದಿ ಪರಿಹರಿಸೆಂಬ ಕಡುಭಕ್ತಿ ।
ಯಂದಮಂ ಕಂಡು ತಲೆದೂಗಿ ವೈಷ್ಣವರೆರೆಯ ಕೈಮುಗಿವುತಿಂತೆಂದನು ॥೧೩೩॥

**ರಾಗ ಮಧ್ಯಮಾವತಿ ಏಕತಾಳ**

ಚಿತ್ತವಿಪುದು ನಾಥನೆಂದ ಸೂಕ್ತಿಯನು ।
ಚಿತ್ತದಜ್ಞಾನಾಂಧಕಾರ ದೀಪ್ತಿಯನು ॥ ಪಲ್ಲವಿ ॥

ಅಗಲುವನೆಂತು ನಿಮ್ಮನು ಜೀವಾವಳಿಯ ।
ಬಗೆಗೆ ಚೇತನ ರೂಪನಹ ಕೃಷ್ಣರಾಯ ।
ಗಗನಾಂಬು ಭೂಮ್ಯಾದಿ ಭೂತಪಂಚಕದಿ ।
ಮಿಗೆ ಸೇರಿ ಭೂತಭೌತಿಕರೂಪ ನಿಜದಿ ॥ ॥೧೩೪॥

ತನ್ನ ಮಾಯೆಯೊಳು ಸೃಷ್ಟಿಸ್ಥಿತಿಲಯವು ।
ಭಿನ್ನವೆಂದೆನಿಪವಭಿನ್ನ ಮೂಜಗವು ॥
ಮುನ್ನೀರ ತೆರೆಗಳಂತೊಂದಹವಿದನು ।
ನನ್ನಿಯೆಂದರಿತು ಸುಖಿಸಿರೆಂದನವನು ॥೧೩೫॥

ಮೂರು ಗುಣದಿ ತೋರ್ಪಮತಿಯವಸ್ಥೆಯಲಿ ।
ಚಾರು ಶುದ್ಧಜ್ಞಾನ ತತ್ವನಾಗುತಲಿ ।
ಬೇರೊಂದು ನಿಜವುಂಟೆಂಬುದನು ತೋರಿಸುತ ।
ಮೀರಿ ತುರೀಯವನಹೆ ತುರ್ಯಾತೀತ ॥ ॥೧೩೬॥

ಮನದ ವಿಕಾರದಿ ಬೇರೆಂದು ತೋರ್ಕು ।
ಕನಸಿನೊಲ್ ಜಗವೊಂದೆಂದರಿತರೆ ಸಾಕು ।
ದಣಿದು ನಾ ಬಿಡೆ ತೋರಲರಿದೀ ಸೃಷ್ಟಿಯನು ।
ಎಣಿಕೆ ಬೇಡೋರ್ಗುಡಿಸೆನು ನಾ ಚಿತ್ಸುಖನು ॥ ॥೧೩೭॥

ಇತ್ತೆನು ನಿಮಗಗಲಿಕೆಯ ನಿಮ್ಮಗಳ ।
ಚಿತ್ತವೆನ್ನೊಳೆ ನಾಂಟಲೆಂದನಿಗಾಲ ।
ಮುಕ್ತಿಗೆನ್ನಯ ಧ್ಯಾನವಲ್ಲದೆ ಸಲ್ಲ ।
ಮತ್ತೀ ಜಡಾಂಗ ಸಂಗದಿ ಹುರುಳಿಲ್ಲ ॥ ॥೧೩೮॥

ನಲ್ಲನೊಂದಿಗೆ ಸತಿಯಿರಲವನಲ್ಲಿ ।
ನಿಲ್ಲದೆರಕೆ ಮಿಕ್ಕು ದೂರದೇಶದಲಿ ।
ವಲ್ಲಭನಿರೆ ತಾತ್ಪರ್ಯದಿ ನೆನೆವಂತೆ ।
ಬಲ್ಲೆ ನಿಮ್ಮೊಳವನು ಬಿಡಿರೆನ್ನ ಚಿಂತೆ ॥ ॥೧೩೯॥

ತೊರೆದಿರಿ ಸರ್ವಸ್ವವೆನ್ನ ನೇಹಕ್ಕೆ ।
ಮರೆವೆನೆ ನಿಮ್ಮ ನಾ ಯುಗಯುಗಾಂತರಕೆ ।
ನೆರೆಹಂಗಿಗನ ಮೇಲೆ ತಪ್ಪೆಣಿಸದಿರಿ ।
ನಿರತ ಭಕ್ತರ ಭಾರ ತನಗೆಂದ ಶೌರಿ ॥ ॥೧೪೦॥

**ಭಾಮಿನಿ**

ಕೇಳಿ ನಿಜನಾಥೋಕ್ತಿಗಳನಾ ।
ಬಾಲೆಯರು ತಾವಂತರಾತ್ಮನ ।
ನೀಲಗಾತ್ರನ ತತ್ವವರಿತುಳಿದರು ಮನೋವ್ಯಥೆಯ ॥
ಮೇಲೆ ಕೃಷ್ಣನು ಕಳುಹಿರುವ ವನ ।
ಮಾಲೆ ಮೃಗಮದ ಗಂಧಗಳ ನಿ ।
ತ್ತಾಲಲನೆಯರ ಸಂತವಿಟ್ಟನು ಮುದದೊಳುದ್ಧವನು ॥೧೪೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೂಪ ಕುಲಮಣಿ ಕೇಳು ಮತ್ತಾ । ಗೋಪಿಯರು ನಿಜವರಿತು ಮಿಗೆ ಸಂ ।
ತಾಪಗಳೆದಾನಂದದಿಂದ ರ । ಮಾಪತಿಯನು ॥೧೪೨॥

ಶ್ರದ್ಧೆಯಲಿ ಕೀರ್ತಿಸುತ ತತ್ಪದ । ಬದ್ಧಪ್ರೇಮದಿ ವೈಷ್ಣವೋತ್ತಮ ।
ನುದ್ಧವನ ವರಸಾಧುಸಂಗದೊ । ಳಿದ್ದರಂದು ॥೧೪೩॥

ಯದುಕುಲಗೆ ತೋರಿಸಿದರೊಲವಿಂ । ಮಧುಹರನ ನಾಟ್ಯಸ್ಥಳವ ದು ।
ರ್ಮದ ವೃಷಭಧೇನುಕ ಬಕಾದ್ಯರ । ವಧಿಸಿದೆಡೆಯ ॥೧೪೪॥

ಪರಮ ಗೋವರ್ಧನ ಗಿರಿಯ ತಾ । ನಿರುಕಿಸುತಲುದ್ಧವ ಮುದದಿ ಮನ ।
ಕರಗಿ ಧನ್ಯತೆವಡೆಯೆ ನಿಂದನು । ಹರುಷದಿಂದ ॥೧೪೫॥

ಬಂಧುಗಳಿಗುಚಿತಗಳ ರಾಮ ಮು । ಕುಂದರಿಗೆ ಮಿಗಲೀಯೆ ಕೊಂಡಾ ।
ನಂದದಿಂ ಬೀಳ್ಕೊಂಡು ಮಧುರೆಗೆ । ಬಂದ ಭಕ್ತ ॥೧೪೬॥

**ಭಾಮಿನಿ**

ಬಂದು ರಥದಿಂದಿಳಿದು ಶ್ರೀಶನ ।
ಮಂದಿರಕೆ ನಡೆದಿತ್ತು ಕಾಣ್ಕೆಯ ।
ವಂದಿಸುತಲುದ್ಧವನು ಕೈಗಳ ಮುಗಿದು ಗೋಕುಲದ ॥
ಮಂದಿಯನುರಾಗವನು ಬಿನ್ನಹ ।
ವೆಂದು ವಿಸ್ತರಿಸುತ್ತಲಿತ್ತನು ।
ನಂದಮುಖ್ಯರು ಕೊಟ್ಟ ವಸ್ತುವ ಪ್ರಕರದುಡುಗೊರೆಯ ॥೧೪೭॥

**ರಾಗ ಕಾಂಭೋಜಿ ಝಂಪೆತಾಳ**

ಲಾಲಿಸುತ್ತರೆಯಣುಗ । ಕೇಳಿ ಹೆತ್ತವರ ನಾ । ಮೇಲೆ ಗೋಪೀಜನದ ಕುಶಲ ॥
ತಾಳಿ ಸಮ್ಮದವ ಕರು । ಣಾಳು ಹೊಂಪುಳಿವೋದ । ಪೇಳಲೇನವನ ವಾತ್ಸಲ್ಯ ॥೧೪೮॥

ಭಕ್ತರನುರಾಗವನು । ಚಿತ್ತದೊಳು ನೆನೆದಶ್ರು । ವೊತ್ತಿಪುಳಕದಲಿ ಮೈನೆನೆದ ॥
ಮತ್ತೆ ನಂದನು ಬಂಧು । ಮೊತ್ತಕಿತ್ತುಡುಗೊರೆಯ । ನಿತ್ತನುದ್ಧವನು ನಲವಿಂದ ॥೧೪೯॥

ಮುಂದೆ ನೆಮ್ಮದಿಯೊಳಿ । ದ್ದೊಂದು ದಿನ ಗೋಪಾಲ । ಹಿಂದೆ ಸೈರಂಧ್ರಿಗೊರೆದಂತೆ ॥
ಸುಂದರಿಯ ಮನೆಗೆಯ್ದಿ । ಸಂದ ಭಕ್ತಾಧೀನ । ನೆಂದೆಂಬ ಬಿರುದ ಪೋಷಿಸಿದ ॥೧೫೦॥

**ವಾರ್ಧಕ**

ನರಸುತಾತ್ಮಜಕೇಳು ಪೆರತೊಂದು ದಿನ ರಮಾ ।
ವರಗಾಂದಿನೀಸುತನ ಮನೆಗೆ ಬಿಜಯಂಗೆಯ್ದು ।
ಹರುಷದಿಂ ಭಕ್ತವರನೆಸಗಿದುಪಚಾರಗಳ ಕೈಕೊಂಡು ವರವನಿತ್ತು ॥
ನೆರೆ ಕೃತಾರ್ಥನಗೆಯ್ದು ಮತ್ತವನ ಹಸ್ತಿನಾ ।

ಪುರಕೆ ಕಳುಹಿಸಿ ಪಾಂಡುಸುತರ ಕುಶಲವನರಿತು ।
ಚರಣ ಭಜಕರ ಕಾಂಕ್ಷಿಗಳನೊದಗಿಸುತ ಮಧುರೆಯೊಳಗಿರ್ದ ನಿತ್ಯಾತ್ಮನು ॥೧೫೧॥

**ಪ್ರಥಮ ಸಂಧಿ ಸಂಪೂರ್ಣ**

**ದ್ವಿತೀಯ ಸಂಧಿ**

**ವಾರ್ಧಕ**

ಭೂರಮಣ ಕೇಳ್ಮುನ್ನ ಮಗಧನಭವನನೊಲಿಸಿ ।
ಭೇರಿತ್ರಯವ ಪಡೆದು ಭುಜಗರ್ವದಿಂ ನೃಪರ ।
ಸೂರೆಗೊಂಡಾ ಚೈದ್ಯ ಬಾಣಾಸುರರ ಕೆಳೆಯ ಗಳಿಸಿ ಸಮ್ರಾಟನೆನಿಸಿ ॥
ಭೂರಿ ಮಾರ್ಬಲ ಸಹಿತ ಸುಖದಿಂ ಗಿರಿವ್ರಜದಿ ।
ಪೌರಸಚಿವಾಪ್ತರಿಂದೋಲಗದೊಳೊಂದು ದಿನ
ಧೀರನಿರೆ ವೈಧವ್ಯ ಶೋಕವಿಹ್ವಲೆಯರಣುಗೆಯರೈದಿ ಮಣಿದೆಂದರು ॥೧೫೨॥

**ರಾಗ ಸಾವೇರಿ ಆದಿತಾಳ**

ಜನಕನೆ ನೋಡಿದೆಯ । ನಿನ್ನಯ ಮುದ್ದು । ತನುಜಾತೆಯರ ವಿಧಿಯ ।
ಮನದೆರೆಯನ ವಧಿಸಿ । ಶತ್ರುಗಳೀ ಭ । ವಣೆಯಿತ್ತರೆಮಗೆ ಸಾಸಿ ॥ ಜನಕನೆ ॥೧೫೩॥

ಏತಕೆಮ್ಮಯ ಬದುಕು । ಕೊಡಿಸು ಪ್ರಾಣ । ಘಾತಕೊಂದಾಜ್ಞೆ ಸಾಕು ।
ತಾತ ಮುತ್ತೈದೆ ಭಾಗ್ಯ । ತಪ್ಪಿದ ಘೋರ । ಪಾತಕಿಗಳಿವೆ ಯೋಗ್ಯ ॥ ಜನಕನೆ ॥೧೫೪॥

ಶರ್ವನನೊಲಿಸಿ ನೃಪ । ವರ್ಗವ ಜೈಸಿ । ಸಾರ್ವಭೌಮಕನಿಪ ।
ಗರ್ವಬಿಸುಡು ಕಂಸನ । ದುರ್ಮರಣದಿ । ಸರ್ವವಿಖ್ಯಾತಿ ಶೂನ್ಯ ॥ ಜನಕನೆ ॥೧೫೫॥

**ರಾಗ ಮಾರವಿ ಏಕತಾಳ**

ಕೇಳುತಲಚ್ಚರಿ । ದಾಳುತ ಮಗಧನೃ । ಪಾಲಕ ತಲೆದೂಗಿ ॥
ಕಾಲಗತಿಯೆ ಮೃಗ । ಜಾಲ ಕೇಸರಿಯನು । ಸೀಳಿತೆ ಶಿವಯೆಂದ ॥೧೫೬॥

ಹಾ ಯದುವಂಶ ವಿ । ಹಾಯಸಭಾನು ಸ । ಹಾಯವ ತೊರೆದೆಮ್ಮ ॥
ಕಾಯವ ಬಿಸುಟೈ । ಕಾಯೆ ಜಸವ ನಮ । ಗಾಯಿತು ದುಷ್ಕೀರ್ತಿ ॥೧೫೭॥

ಬಂದ ಭವಣೆಗಿ । ನ್ನೆಂದರೆ ಫಲವೇ । ನೆಂದಿಗು ಬಿಡೆಹಗೆಯ ॥
ಕೊಂದವರುಸುರನು । ನಂದಿಸಿ ವಿರಮಿಪೆ । ನಿಂದುಧರನೆ ಸಾಕ್ಷಿ ॥೧೫೮॥

ತರಳೆಯರಿರ ನಿ । ಮ್ಮರಸನಿಕ್ಕಿದ । ವರು ವಿಧಿಹರಿಹರರ ॥
ಮರೆಹೊಕ್ಕರು ಸಂ । ಹರಿಸುವೆ ಬೆದರದಿ । ರರುಹಿ ನಡೆದ ಪರಿಯ ॥೧೫೯॥

**ರಾಗ ಕೇತಾರಗೌಳ ಅಷ್ಟತಾಳ**

ತಾತ ಕೇಳ್ನಿನ್ನ ಜಾ । ಮಾತನು ನಂದ ಸಂ । ಜಾತರ ಬಲಕೃಷ್ಣರ ॥
ಓತು ಕರೆಸಲು ಬಿ । ಲ್ಲೌತಣ ಕೈತಂದು । ಖ್ಯಾತರು ಮಧುರೆಯೊಳು ॥೧೬೦॥

ತರಿದು ರಜಕನನ್ನು । ಪೊರೆದು ಕುಬ್ಜೆಯ ಮದ । ಕರಿಯ ಮರ್ದಿಸಿ ಮಲ್ಲರ ॥
ಮುರಿದು ಕಾಂತನ ಸುರ । ಪುರಕಟ್ಟಿ ನಮ್ಮನೀ । ಪರಿಭವಕಡೆಗೆಯ್ದರು ॥೧೬೧॥

ವಿಗ್ರಹಕಪ್ಪ ಸ । ಮಗ್ರರು ವ್ರಜದಲ್ಲೆ । ನಿಗ್ರಹಕೊಳಗಾಗಿರೆ ॥
ಉಗ್ರಸೇನಗೆ ಪಟ್ಟ । ವಾಗ್ರಹದಿಂ ಕೊಟ್ಟ । ವ್ಯಗ್ರದೊಳೆಲ್ಲ ಕೂಡಿ ॥೧೬೩॥

**ಭಾಮಿನಿ**

ಕಾಂತೆ ಸಹ ವಸುದೇವನನು ಬಿಡಿ ।
ಸಿಂತು ಯದು ಕುಲಜರು ಸ್ವರಾಜ್ಯವ ।
ಪಂಥದಿಂ ಕಟ್ಟಿಯೆ ನಿನಗೆ ಮಲೆತಿರ್ಪರೆನೆ ಕೇಳಿ ॥
ಅಂತಕನ ಹೆತ್ತಯ್ಯನೋ ಕ ।
ಲ್ಪಾಂತ ರುದ್ರನೊ ಮಗಧ ಧರಣೀ ।
ಕಾಂತನೋಯೆನೆ ಮುಳಿದು ಗದ್ದುಗೆ ಹೊಯ್ದುತಿಂತೆಂದ ॥೧೬೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಾಕಕಟ ಸುರನರ ಭುಜಂಗಮ । ಭೀಕರನ ಕೊಂದವರು ತುರುಗಳ ।
ಸಾಕುವವರೇ ನಮ್ಮ ಮೋರೆಗೆ । ಕಾಕಬಳಿದು ॥೧೬೫॥

ಗುಟ್ಟುರಿತೆ ವಸುದೇವ ಕುವರನ । ಹಟ್ಟಿಯೊಳು ಮರೆಸಿಟ್ಟು ಕಂಸನ ।
ಕುಟ್ಟಿಸಿದ ಮಝು ಬಚ್ಚಲುರಿಮನೆ । ಸುಟ್ಟಹಾಗೆ ॥೧೬೬॥

ಕಾಲಗತಿ ಕೆಣಕಿದುದು ಯದುಕುಲ । ಜ್ವಾಲೆಯಂ ಶಲಭಗಳವೊಲು ಗೋ ।
ಪಾಲ ಬಾಲರ ನಂಬಿ ರಿಪುಗಣ । ಕಾಲನೆನ್ನ ॥೧೬೭॥

ಹರನೊಲುಮೆ ಮೇಣಬ್ಧಿ ಮುದ್ರಿತ । ಧರಣಿಪರ ಬಲವಿರಲು ಗೋವಳ ।
ಕುರಿಗಳೆನಗೀಡಹರೆ ಸಮರದೊ । ಳರಿಯಬಹುದು ॥೧೬೮॥

ತೋರಿದಪೆನೀ ಕ್ಷಣದಿ ಪ್ರಳಯದ । ಭೈರವನ ಮಾಮಸಕವನು ನೃಪ ।
ವಾರ ನೆರೆಯಲೆನುತ್ತ ಗದೆಯನು । ವೀರ ತಿರುಹಿ ॥೧೬೯॥

ಬಿಡಿರಿ ಚಿಂತೆಯ ಮಕ್ಕಳಿರ ದಿಟ । ಹಿಡಿಯಿರೌ ನಂಬುಗೆಯ ದೂತರು ।
ನಡೆಯಿರೈ ಬರಹೇಳಿ ಚೇದಿಯ । ಪೊಡವಿಪತಿಯ ॥೧೭೦॥

**ಭಾಮಿನಿ**

ರಸೆಯಧಿಪ ಕೇಳ್ಪೆದಿ ಚಾರಕ ।
ರಸಮಬಲ ಶಿಶುಪಾಲಗರುಹಲು ।
ಕುಶಲದಿಂದೈತರೆ ಗಿರಿವ್ರಜನಿದಿರುಗೊಂಡವನ ॥
ಎಸೆವ ವಿಭವದಿ ಸತ್ಕರಿಸಿ ನೃಪ ।
ಬೆಸಗೊಳಲು ವಾರ್ತೆಗಳ ಚೈದ್ಯನು ।
ಪೊಸತಿದೇನ್ನೈ ಕಾರ್ಯ ಸಂಗತಿಯೆನುತಲಿಂತೆಂದ ॥೧೭೧॥

**ರಾಗ ಕಾಂಭೋಜಿ ಝಂಪೆತಾಳ**

ರಾಯ ಪಡೆವಳ ಮಗಧ । ನಾಯಕನೆ ಕೇಳರಿನಿ । ಕಾಯಾಬ್ಜ ಸರಸಿ ದ್ವಿಪೇಂದ್ರ ॥
ಆಯಿತೇನಿಂದು ಪೂ । ರಾಯ ವಿಕ್ರಮ ನಿನ್ನ । ತೋಯಜಾಸ್ಯದಿ ಮಸಗೆ ರೌದ್ರ ॥೧೭೨॥

ಸಾಗರ ಪರೀತನೆಲ । ದಾಗರುವ ಕ್ಷತ್ರಕುಲ । ವೀಗ ನಿನ್ನಾಜ್ಞೆಗೆರಡೆಣಿಸಿ ॥
ಸಾಗಿಸದೆ ಕಾಣಿಕೆಯ । ಕೂಗುವುದೆ ಹಮ್ಮೆರಿ । ಬೇಗನುಡಿ ನುಡಿ ಬಂದ ಭವಣೆ ॥೧೭೩॥

ಕೇಳಯ್ಯ ದಮಘೋಷ । ಬಾಲ ಸಖ ಮೌಳಿಮಣಿ । ಫಾಲನೇತ್ರನ ದಯದಿ ನೃಪರು ॥
ಕೇಳಿ ನಡೆವರು ಮಾತ । ಪೇಳಲೇನೊದಗಿರ್ಪ । ಮೂಲಸಂಗತಿಯ ಚಿತ್ತೈಸು ॥೧೭೪॥

ಯಾದವಾಭ್ರದ್ಯುಮಣಿ । ಯಾದ ಕಂಸನ ರಾಮ । ಮಾಧವರೆನಿಪ್ಪ ಗೋವಳರು ॥
ಕಾದಿ ಮಡುಹಿದರಂತೆ । ವೈಧವ್ಯವಣುಗೆಯರ । ಬಾಧಿಸಿದರೆನಗೆ ದೂರಿದರು ॥೧೭೫॥

ಕುರಿಗಳಂತಿಹ ಯಾದ । ವರಿಗಿನಿತು ಬಲುಹಾಗೆ । ದೊರೆಗಳಾವಿರ್ದು ಫಲವೇನು ॥
ಮುರಿಯಬೇಕೆಂದವರ । ಕರೆಸಿದೆನು ನಿನ್ನ ಮನ । ದಿರವ ತಿಳಿಸೆನಲೆಂದನವನು ॥೧೭೬॥

**ರಾಗ ಭೈರವಿ ಏಕತಾಳ**

ಗೋವಳರೇಂ ಮಡುಹಿದರೇ । ಮಧು । ರಾವಲ್ಲಭನನು ಮಝುರೆ ।
ಈ ವಿಧಯಾದವರೆಸಗೆ । ಬದ । ಲಾವುದು ದುರ್ಯಶವೆಮಗೆ ॥೧೭೭॥

ಅಂಜದಿರಂಜದಿರರಸ । ರವಿಯಂಜರೆವುದೆ ಬಲು ತಮಸ ।
ನಂಜುಗೊರಲ ಬರಲಿಂದೆ । ರಿಪು ಭಂಜನವೆಸಗುವೆ ಬಿಡದೆ ॥೧೭೮॥

ವೀಳೆಯವನು ಕೊಡು ಧುರಕೆ । ಯದು ಜಾಲದೊಡನೆ ತಡವೇಕೆ ?
ಬೀಳಹೊಡೆದು ಹರಿಬಲರ । ಬಹೆವೇಳು ಕರೆಸು ಭೂವರರ ॥೧೭೯॥

**ಭಾಮಿನಿ**

ಪೊಡವಿಪತಿ ಕೇಳಿಂತು ಚೇದಿಪ ।
ನುಡಿಯೆ ಹಿಗ್ಗಿ ಗಿರಿವ್ರಜನು ತಾ ।
ಪಡೆಯನಿರದಿಪ್ಪತ್ತಮೂರಕ್ಷೋಹಿಣಿಯನಧಟ ॥
ಬಿಡದೆ ಕೂಡಿಸಿ ಯಾದವರ ಪಂ ।
ಗಡವ ನಿರ್ಮೂಲಿಸಲು ಶರನಿಧಿ ।
ಗಡಿಯ ಮಿಕ್ಕೈತಹವೊಲ್ಯೆದಿದ ಮಧುರೆಗಿದಿರಾಗಿ ॥೧೮೦॥

**ರಾಗ ಭೈರವಿ ತ್ರಿವುಡೆತಾಳ**

ನಡೆದುದಾಗ । ಮಧುರೆಗೆ । ಪಡೆಯು ಬೇಗ  ॥ ಪಲ್ಲವಿ ॥

ಅಡಿಯಿಡುವ ಹತಿಗಿಳೆ ನಡುಗೆ ಕಂ । ಗೆಡಲು ದೆಸೆಧೂಳಿಯೊಳು ಲಗ್ಗೆಯ ।
ಗಡಿಬಿಡಿಗೆ ರವಿರಥತುರಗತತಿ । ಗೆಡೆ ಸುಚಾಮರ ಸಿಂಧಸೀಗುರಿ ।
ಕೊಡೆಗಳಲಿ ನಡೆವಖಿಳ ಭೂಮಿಪ । ಗಡಣ ಸಹಿತಲೆ ಚೈದ್ಯಮಾಗಧ ।
ರಡಸಿ ಕೋಟೆಯ ಮುತ್ತಿದರು ಭೋ । ರಿಡುವ ಭೇರೀಪಟಹ ರಭಸದಿ ॥ ॥೧೮೧॥

ಕನಕತೋರಣ ಹರ್ಮ್ಯ ಕೃತ್ರಿಮ । ವನವ ಮುರಿದು ಭಟಾಳಿ ಸಿಂಹ ।
ಧ್ವನಿಯನೆಸಗಲು ಮಗಧಪತಿಯ । ಪ್ಪಣೆಯೊಳತಿ ಬಲದಂತವಕ್ರನು
ಜನಪ ಸಾಲ್ವವಿಡೂರಥಾದಿಗ । ಳಿನ ದೆಸೆಯ ಪೌಂಡ್ರಕವಿರಾಟರು ।
ಕನಲಿ ಬಾಹ್ಲಿಕ ಮುಖ್ಯರಾ ತೆಂ । ಕಣದೆಸೆಯ ಮುತ್ತಿದರು ಬಿಡದೆ ॥ ॥೧೮೨॥

ಶಲ್ಯಭೂರಿಶ್ರವಯುಧಾಮ । ನ್ಯೂಲ್ಲಸಿತ ಬೃಹಕ್ಷತ್ರ ಶಬರರ ।
ವಲ್ಲಭನೆನಿಪ್ಪೇಕಲವ್ಯಕ । ರೆಲ್ಲಪಡುವಲೊಳುತ್ತರದಿ ರಣ ।
ಮಲ್ಲ ಚೈದ್ಯಕಳಿಂಗ ಸಾಹಸ । ವುಳ್ಳ ಸೈಂಧವ ಶಕುನಿ ಮುಖ್ಯರು ।
ಬಲ್ಲಿದರು ವರಸೋಮದತ್ತಕ । ರಲ್ಲಿ ಮಾಗಧ ಸಹಿತ ಮುತ್ತುತ ॥ ॥೧೮೩॥

**ಕಂದ**

ಕ್ಷೋಣಿಪ ಕೇಳೀ ತೆರನಂ ।
ಕಾಣುತ್ತಾ ಪೊಳಲಕಾಪಿನವರತಿ ಭಯದಿಂ ।
ದಾನವ ಹರನೆಡೆಗೆಯ್ದುತ ।
ಮಾಣದೆ ಪದಕೆರಗಿ ಬಿನ್ನವಿಸಿದರು ಹದನಂ ॥೧೮೪॥

**ರಾಗ ಸಾರಂಗ ಅಷ್ಟತಾಳ**

ಪಾಲಿಸು ಶ್ರೀ ಗೋಪಾಲ । ವೃಂದಾವನ । ಲೀಲ ಕೃಪಾಲವಾಲ ।
ಲಾಲಿಪುದೆಮ್ಮ ಸು । ಶೀಲ ಬಿನ್ನಪವ ಭೂ ।

ಲೋಲ ಮಗಧನೀಗ | ಕಾಳೆಗಕೈತಂದ || ಪಾಲಿಸು ||
ಕಂಸನ ಕೊಂದವನ | ತೋರೆನ್ನುತ | ತ್ರಿಂಶದ್ಧರೇಶ ಜನ |
ಧ್ವಂಸಗೆಯ್ವೆವು ಯದು | ವಂಶವನೆನುತ ಸು |
ರಾಂಶ ಬೊಬ್ಬಿರಿದು ನಿ | ಸ್ತ್ರಿಂಶವ ಜಡಿವುದು || ಪಾಲಿಸು ||೧೮೫||

ಕೋಟೆಯ ನಾಲ್ದಿಕ್ಕಿನ | ದ್ವಾರಕೆ ನಾಲ್ಕು | ಕೂಟದಿ ಬಂದರಿನ್ನಾ |
ಘೋಟಕ ಪದಚರ | ಮೀಟಾದ ಕರಿರಥ |
ಕೀಟಲೆಗೆಯ್ವವೀ | ಮಾಟ ನಿಲ್ಲಿಸು ದೇವ || ಪಾಲಿಸು ||೧೮೬||

**ಭಾಮಿನಿ**

ಧರಣಿಪತಿ ಕೇಳಿಂತು ಪೇಳಿದ |
ಚರರಿಗಭಯವನಿತ್ತು ಲಕ್ಷ್ಮೀ |
ವರನು ಮನದಲಿ ನಸುನಗುತ ಯೋಚಿಸಿದ ತನ್ನೊಳಗೆ ||
ಹರುಷವಾದುದು ಮದ್ದುವಳ್ಳಿಯ |
ನರಸುತಿಹ ಮಾನವಗೆ ತಾನೇ |
ಚರಣಕೆಡಗಿದೊಲೊದಗಿ ಬಂತೆಂದೆನುತಲಿಂತೆಂದ ||೧೮೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದನೇ ಸಮಯಕ್ಕೆ ಮಗಧನು | ತಂದನೇ ತಾನಾಗಿ ಕಲಹವ |
ಚಂದವಾಯಿತು ಭೂಮಿಭಾರವ | ಕುಂದಿಸಲ್ಕೆ ||೧೮೮||

ಎಲ್ಲರಂದದೊಳಿವನ ಮೊದಲೇ | ಕೊಲ್ಲಲಾಗದು ದುರ್ಮದಾಂಧರ |
ವಲ್ಲಭನಲಾ ಮಗಧನೀತನ | ಭುಲ್ಲವಣೆಗೆ ||೧೮೯||

ಕುಂಭಿನಿಯೊಳಿಹ ಭೂಭುಜರ ನಿಕು | ರುಂಬ ವೈತಂದಪುದು ನಿಲ್ಲದೆ |
ಬೆಂಬಲಕೆ ಬರೆ ಕೊಂದು ಯಮಪುರ | ತುಂಬಲಕ್ಕು ||೧೯೦||

ದುರಿತವಿದರಿಂದಿಲ್ಲ ಸುಜನರ | ಪೊರೆವುದೇ ಕರ್ತವ್ಯವೆನಗೆಂ |
ದರಿತು ಕರುಣಾಶರಧಿಯಗ್ರಜ | ಗೊರೆದ ಬಂದು ||೧೯೧||

**ರಾಗ ಕೇತಾರಗೌಳ ಝಂಪೆತಾಳ**

ಅಣ್ಣ ಚಿತ್ತೈಸು ನುಡಿಯ | ಮಾತುಳನ | ಮಣ್ಣಕೂಡಿಸಿದ ಹಗೆಯ |
ಕನ್ನೆಯರು ದೂರೆ ಕೇಳಿ | ಬಂದಿರ್ಪ | ನನ್ಯಾಯಿ ಮಗಧ ಕೆರಳಿ ||೧೯೨||

ಧರೆಯ ಬಾಹುಜರೆಲ್ಲರ | ನೆರಹಿರ್ಪ | ತರಿಯಲೆಮ್ಮನ ದುರ್ಧರ |
ಪೊರೆವುದೆಂತೀ ಮಧುರೆಯ | ಪೇಳೆನ | ಲ್ಕರುಹಿದ ಪ್ರಲಂಬವಗೆಯ ||೧೯೩||

ಬಂದುದೇ ಲೇಸು ತಮ್ಮ । ಧರಣೀಶ । ವೃಂದ ರಣಕೆಮ್ಮೊಳಮಮ ।
ಮಂದೆ ಮಾರಿಯ ಗುಡಿಯನು । ಪೊಕ್ಕಂತೆ । ಕೊಂದು ದಿಗ್ಬಲಿಗೊಡುವೆನು ॥೧೯೪॥

ಮಾವನನು ಕೊಂದ ಹಗೆಗೆ । ಬಂದಡಿ । ನ್ನಾವಿಗಡ ಮಾಗಧಂಗೆ ।
ಸಾವಲ್ಲದುಂಟೆ ಬೇರೆ । ಗತಿ ಯಮನ । ಠಾವ ತೋರಿಸುವೆ ಮಝುರೆ ॥೧೯೫॥

ಅದಕಾಗಿ ಯದುಬಲವನು । ನೆರಹೀಗ । ಬದಲೆಣಿಸದಧಮರನ್ನು ।
ಕದನದೊಳು ಹೊಡೆದು ಜಯವ । ತರುವ ಪೇಳ್ । ಮುದದಿ ಮುಂದಣ ಕಜ್ಜವ ॥೧೯೬॥

**ವಾರ್ಧಕ**

ಇನಿತು ಮಾತಾಡುತಿರಲಭ್ರದಿಂದುಲ್ಕೆಯೊಲ್ ।
ಕನಕ ರಥಯುಗ ನಿಖಿಲಶಸ್ತ್ರಾಸ್ತ್ರಗಳು ಸೂತ ।
ರಿನ ಸುಪ್ರಭೆಯೊಳಚ್ಯುತನ ಶಾರ್ಙ್ಗಚಕ್ರಾಸಿಗದೆಗಳ ಕ್ಷಯನಿಷಂಗ ॥
ವಿನುತ ಸುಗ್ರೀವ ಸೈನ್ಯಕ ಬಲಾಹಕ ಮೇಘೊ ।
ಡನೆ ಮೇಘ ಪುಷ್ಪಕಗಳೆಂಬಶ್ವಗಳು ನಾಲ್ಕು ।
ಗಣನೆಗಳವೆನಿಸಿ ರಾಮಗೆ ಮುಸಲ ಹಲಗಳುಂ ಧರೆಗಿಳಿಯೆ ಹರಿ ನುಡಿದನು ॥೧೯೭॥

**ರಾಗ ಸೌರಾಷ್ಟ್ರ ಅಷ್ಟತಾಳ**

ಕಾಲೋಚಿತದ ಕೃತ್ಯ । ವಾಲೋಚಿಸುವುದೀಗ ॥ ಅಣ್ಣದೇವ ॥ ಸುರ
ಜಾಲವಟ್ಟಿರುವ ಶ । ಸ್ತ್ರಾಳಿಯ ನೋಡಿದ ಅಣ್ಣದೇವ ॥೧೯೮॥

ಆಡಲೇನೊದಗಿದೆ । ಕೇಡು ನಮ್ಮವರಿಗೆ ॥ ಅಣ್ಣದೇವ ॥ ಬಲ
ಕೂಡಿದೆ ಸುತ್ತ ಕೈ । ಮಾಡೀ ಕೈದುಗಳಿಂದ । ಅಣ್ಣದೇವ ॥೧೯೯॥

ಜನನ ಶೂನ್ಯರು ನಾವ । ವನಿಗಿಳಿದಿಹ ಕಾರ್ಯ । ಅಣ್ಣದೇವ ॥ ಸಾಧು
ಜನರು ಸುಮನಸರ ರ । ಕ್ಷಣ ಮುಖ್ಯ ಬೇಗ ಮಾ । ಡಣ್ಣ ದೇವ ॥೨೦೦॥

**ಭಾಮಿನಿ**

ಏಕೆ ತಮ್ಮ ವಿಳಂಬ ಡಂಗುರ ।
ಹಾಕಿಸೀ ಕ್ಷಣ ಚಾತುರಂಗವು ।
ನಾಕು ಬಾಗಿಲಿಗಿರದೆ ನಡೆಯಲಿ ವೈರಿಗಳ ಸದೆದು ॥
ಶಾಕಿನೀ ಗಣಕೌತಣಂಗಳ ।
ನಾಕೊಡದೆ ಬಿಡೆಹರನೆ ತಡೆದರು ।
ನಾಕಿಗಳು ಪರಿಕಿಸಲಿ ಮದ್ಭುಜ ವಿಕ್ರಮವನೆಂದ ॥೨೦೧॥

**ರಾಗ ಮಾರವಿ ಏಕತಾಳ**

ಎನಲು ರಮಾಧವ । ಕನಕರಥವನೇ । ರ್ದನುವರಕಾಯದು । ಘನಬಲದೊಳು ಶ ।
ಕ್ರನ ದೆಸೆಗೆ ಸುಧಾ । ಮನ ಮೇಣ್ ಕೃತವ । ರ್ಮನನುದ್ಧವ ಸಹಿ । ತನಘರನಟ್ಟುತ ॥ ॥೧೦೧॥

ಪೃಥುವಿಪೃಥರ ಯದು । ಪತಿಯ ಪ್ರಸೇನನ । ಪಿತೃವರ ಕಾಷ್ಠೆಗೆ । ಅತಿಬಲಗಾಂದಿನಿ ।
ಸುತ ಸಾತ್ಯಕಿಗದ । ರತಿರಥರನ್ನ । ಪ್ರತಿ ದಿಕ್ಕಿಗೆ ಕಳು । ಹುತ ಸಂಗರಕೆ ॥ ॥೧೦೩॥

ಉತ್ತರದ್ವಾರಕೆ ಮತ್ತೆ ಬಲನ ಪುರುಷೋತ್ತಮ ತಾ ಕೂ । ಡುತ್ತಲಮಿತ್ರರ ।
ಮೊತ್ತವ ಕೆಡಹುತ್ತೊತ್ತಿದರಾಕ್ಷಣ । ತಳ್ತುದು ಮಧುರೆಯ ಸುತ್ತಲು ಸಮರ ॥ ॥೧೦೪॥

**ವಾರ್ಧಕ**

ನೆರೆದುದಾ ಯುದ್ಧಮಂ ನೋಡಲಂಬರದೊಳಗೆ ।
ಸುರಸಿದ್ಧ ಗಂಧರ್ವ ಯಕ್ಷಕಿಂಪುರುಷ ಕಿ ।
ನ್ನರ ಗರುಡ ಮನು ಮುನಿಗಳೊಂದೆಸೆಗೆ ಸಂಗರದಿ ಧೃತಿಗೆಡದೆ ಕಾದಿಮಡಿದ ॥
ಧುರ ಪರಾಕ್ರಮಿಗಳಂ ವರಿಸಲೆಂದಪ್ಸರೆಯ ।
ರರಳ ಸರಮಂ ಕೆಯ್ಯೊಳಾಂತುಮತ್ತೊಂದೆಸೆಗೆ ।
ಗಿರಿಧರನ ಕೀರ್ತಿಸುತ ದಿಕ್ಪತಿಗಳೊಡನೆ ವಿಬುಧೇಶ್ವರಂ ನಭದೊಳಿರ್ದ ॥೧೦೫॥

**ಭಾಮಿನಿ**

ಆದುದಿತ್ತಲು ಬಳಿಕ ನಾಲ್ವರು ।
ಯಾದವೋತ್ತಮ ಭಟರಿಗಷ್ಟ ಧ ।
ರಾಧಿಪರೊಳಾಹವವು ಬಾಗಿಲು ಮೂರರೊಳು ಬಿಡದೆ ॥
ಕಾದಿದರು ನೃಪರಸ್ತ್ರ ಘಾತಿಗೆ ।
ಭೇದಿತಾಂಗರು ವಿಷ್ಣುಭಕ್ತರು ।
ಯಾದಸಾಂಪತಿ ದಿಶೆಯೊಳಘಟಿತವಾಯ್ತು ಸಂಗ್ರಾಮ ॥೧೦೬॥

**ರಾಗ ಶಂಕರಾಭರಣ ಮಟ್ಟೆತಾಳ**

ಧರಣಿಪಾಲ ಕೇಳು ಮುಂದು । ವರಿದುವುಭಯ ಬಲವು ಸೆಣಸೆ ।
ಪರಿಯೆ ರಕುತ ಹೊನಲು ಹೆಣನ । ಗಿರಿಯು ಬೀಳಲು ॥
ಹರಿಯ ಮನದಿ ಭಜಿಸಿ ಯಾದ । ವರು ನಿಶಾತಶರಗಳಿಂದ ।
ದುರುಳ ಪಡೆಯ ಬೀಳಗೆಡಹೆ । ಪರಿಕಿಸುತ್ತಲಿ ॥೧೦೭॥

ಓಡುತಿಹರ ಜರೆದು ನಿಲಿಸಿ । ಬೇಡರೊಡೆಯನೇಕಲವ್ಯ ।
ದೂಡಿರಥವ ಮುಂದೆತಿರುವ । ತೀಡಿ ಬಾಣವ ॥
ಗಾಢದಿಂದಲೆಚ್ಚು ಘಾಸಿ । ಮಾಡೆಯದು ಬಲವಶಿನೇಯ ।
ಕೂಡೆ ರಥವ ಚಾಚೆ ಶಬರ । ನೋಡಿ ನುಡಿದನು ॥೧೦೮॥

**ರಾಗ ಭೈರವಿ ಅಷ್ಟತಾಳ**

ಆರು ನೀನೆಲೊ ಹುಡುಗ | ನಿನ್ನಯ ತಂದೆ | ಯಾರು ಪೇಳೆಲೊ ಧಡಿಗ |
ಸಾರತ್ತಗೋಪಕು | ಮಾರರ ನುಡಿಗೇಳಿ | ಮಾರ ಬೇಡೆಲೊ ತಲೆಯ ||೧೦೯||

ಖೂಳ ಗೋವಳನೆನ್ನಲು | ರೌರವದೊಳು | ಬೀಳುವೆ ಲೋಕಗಳು |
ಕೇಳಾವನೊಲುಮೆಯಿಂ | ಬಾಳಿಹವಾಹರಿ | ಯಾಳು ಸಾತ್ಯಕಿಯಹೆನು ||೧೧೦||

ಕುರುಬರು ಬಿದ್ದಿರುವ | ದಾರಿಯಕಲ್ಲು | ಹರಳ ಮಾಣಿಕವೆನ್ನುವ |
ತೆರದೊಳಾ ಕೃಷ್ಣನ | ಪರಬೊಮ್ಮ ವೆನಿಸಿ ಕೆ | ಟ್ಟರಿ ಯಾದವರು ನಿಶ್ಚಯ ||೧೧೧||

ಅಂತಕನಾಳುಗಳು | ಕೊಂಡೊಯ್ಯೆ ಜ | ನ್ಮಾಂತರ ಸುಕೃತದೊಳು |
ಬಂತೆನೆ ನಾಮ ಭ | ವಾಂತವಾಗುವುದವ | ನಂತಸ್ಥವೇನರಿವೆ ? ||೧೧೨||

ಕೊಂಡುದಾನವರಸುವ | ಬಾಲ್ಯದಿ ಗರ್ವ | ಗೊಂಡು ಕಂಸನ ಕೊಂದವ |
ಮಂಡೆಯ ಬಲವ ಕ | ಲ್ಗುಂಡಿಗೆ ತೋರಿದ | ಪುಂಡುತನವ ಬಲ್ಲೆನು ||೧೧೩||

ಮಾವನ ತಾನೆಕೊಂದ | ಅಟ್ಟಿದ ನಿನ್ನ | ಜೀವ ಹೀರಲು ಗೋವಿಂದ |
ಕೇವಲ ಖಳರಿಗೆ | ಸಾವಿತ್ತು ಸುಜನರ | ಕಾವ ಶ್ರೀ ಹರಿ ಮುಕುಂದ ||೧೧೪||

**ರಾಗ ಮಾರವಿ ಏಕತಾಳ**

ನುಡಿಯನು ಕೇಳುತ | ತಡೆಯದೆ ವನಚರ | ರೊಡೆಯನು ಮುಳಿದೆಂದ ||
ಸಡಗರವನು ಬಿಡು | ತೊಡು ಕೂರ್ಗಣೆಗಳ | ಫಡಫಡಯೆನುತೆಚ್ಚ ||೧೧೫||

ತರಿದಾಶರಗಳ | ನೊರೆದನು ಸಾತ್ಯಕಿ | ಪರಿಪರಿ ಮೃಗಗಳನು ||
ಅರಸುತ ಕಾಡೊಳು | ತಿರುಗುವ ಬೇಡಗೆ | ಧುರವೇಕೆಂದೆಚ್ಚ ||೧೧೬||

ಖಂಡಿಸಿ ಶಬರನು | ಕುಂಡಲಿಶರವನು | ಕೊಂಡೆಸೆಯಲು ಕಡಿದ ||
ಅಂಡಜನಿಂದದ | ಕಂಡಗ್ನಿಯ ಬಿಡೆ | ತುಂಡರಿಸಿದವರುಣ ||೧೧೭||

ರೋಷದಿ ತಿಮಿರಾ | ದ್ರೀಷುಗಳನು ಬಿಡ | ಲಾ ಶಬರನು ಮುಳಿದು ||
ಶ್ರೀಶನ ದಾಸ ದಿ | ನೇಶಪವಿಗಳಿಂ | ನಾಶಗೊಳಿಸೆ ಕಂಡು ||೧೧೮||

ತವೆ ಕೋಪದಿ ಬಿಡೆ | ಕವಲಂಬನು ಕೋ | ಲಿವನಿಸುವನಿತರೊಳು ||
ಕವಿದಾ ಸತ್ಯಕ | ಕುವರನ ಕೋದಂ | ಡವ ಮುರಿದೆಡೆ ತಾನು ||೧೧೯||

ಧನು ಮತ್ತೊಂದನು | ಶಿನಿಸುತ ಕೊಂಡಹಿತನ ರಥಹಯಗಳನು ||
ಡೊಣೆಬಿಲ್ ಸವಗಗ | ಳನು ಭೇದಿಸಿ ವಿರ | ಥನ ಮಾಡಲ್ಕವನು ||೧೨೦||

**ಕಂದ**

ಕೈರಾತಾಧಿಪ ಲಜ್ಜಸಿ ।
ಜಾರಲು ಹಿಂದಕೆ ಶಿನೇಯನಧಟಂ ಕಂಡಾ ॥
ಭೂರಿಶ್ರವಚಾಪಕೆ ತೆ ।
ಬ್ಬೇರಿಸಿ ಕಣೆ ಮಳೆಗರೆವುತಲಡ ಹಾಯ್ದೆಂದಂ ॥೧೧೧॥

**ರಾಗ ಪಂಚಗತಿ ಮಟ್ಟೆತಾಳ**

ಘಡಘಡೆಲವೊ ಸತ್ಯಕಾಖ್ಯ । ಹುಡುಗ ನಿಲ್ಲೆಲ ।
ಅಡವಿ ಚರರ ಪತಿಯ ಗೆಲಿದ । ಕಡುಹ ತೋರೆಲ ॥
ಹೊಡೆದು ನಿನ್ನ ಭೂತಗಣಕೆ । ಕೊಡುವೆ ನೌತಣ ॥
ಕೆಡದೆಬಾಗಿಲನ್ನು ಬಿಟ್ಟು । ನಡೆ ತತುಕ್ಷಣ ॥೧೧೧॥
ದುರುಳ ಶಬರನಿರವ ನೋಡಿ । ಬರುವುದೊಳ್ಳಿತು ।
ಧುರಕೆ ಜವನ ಪುರದದ್ವಾರ । ತೆರೆದುದಾಯಿತು ॥
ತ್ವರಿತದಿಂದ ಕಳುಹಿದಪೆನು । ಶರದಿ ನೋಡಿಕೊ ।
ಬರಿದೆಗಳಹಿ ಹರಣ ಬಿಡುವ । ತೆರನಿದೇತಕೋ ॥೧೧೩॥

ಎಂದ ಮಾತಕೇಳಿ ಕೋಪ । ದಿಂದ ನುಡಿದನು ॥
ಬಂದುದಂತ್ಯ ಯಾದವರ್ಗೆ । ಮುಂದೆ ತಿಳಿ ನೀನು ॥
ಸೊಂದಿಗೋಡಗಗಳು ಕರಿಯ । ವೃಂದಕೆರಗಿದ ।
ಒಂದು ರೀತಿಯಂತೆಗೆಯ್ಯೆ । ಬಂದ ಮಾಗಧ ॥೧೧೪॥

ಎಲವೊ ಹುಲು ನೃಪಾಲಗಜದ । ಬಳಗ ದುರುಬೆಯ ।
ಗಳಿಗೆಯರ್ಧದೊಳು ಮೃಗೇಂದ್ರ । ನಿಲಿಪಕೇಳಯ್ಯ ॥
ಖಳ ನರೇಂದ್ರ ದಂತಿ ಸಿಂಹ । ಜಲಜ ನಾಭನು ।
ತಿಳಿದು ರಣಕೆ ನಿಲ್ಲುಕೊಂದು । ಕಳೆವೆ ನಿನ್ನನು ॥೧೧೫॥

ಅನಕ ಭೂರಿಶ್ರವನು ಮುಳಿದು । ಕಣೆಯ ಮಳೆಯನು ।
ಅನಘನೆದೆಗೆ ಕರೆಯೆ ತರಿದು । ಧನುವ ಕಡಿದನು ॥
ಬಿನುಗೆ ನಿಲ್ಲೆನುತ್ತ ಸಾತ್ಯ । ಕನುಕಳಂಬವ ।
ಎಣಿಕೆಯಿಲ್ಲದೆಸಲು ಧರೆಗೆ । ಜನಪನೊರಗಿದ ॥೧೧೬॥

**ವಾರ್ಧಕ**

ಧರಣಿಪತಿ ಕೇಳಿಂತು ವರಸತ್ಯಕಾತ್ಮಜಂ ।
ಧುರವಿಜಯರೀರ್ವರಂ ಜೈಸಲುಳಿದರಯಾದ ।
ವರು ಬಡಿದು ಬೆನ್ನಟ್ಟಿ ಕಂಜನಾಭನ ದಯದಿ ವಿಜಯಾಂಗನೆಯ ಪಡೆಯಲು ॥

ಶರಹತಿಗೆ ಮಡಿದಶ್ವಮದಗಜ ಪದಾತಿಗಳ ।
ನರಿ ಹದ್ದು ಕಾಗೆ ಶಾಕಿನಿ ಡಾಕಿನಿಯರೈದ ।
ಹರುಷದಿಂ ಮೆದ್ದು ಕೆನ್ನೀರ್ಗುಡಿದು ಕುಣಿಯಲಾ ಕಣ ಭಯಂಕರವಾದುದು ॥೧೧೭॥

**ಭಾಮಿನಿ**

ಅತ್ತಲಸುರಾರಾತಿಗಳು ಪುರ ।
ದುತ್ತರದ್ವಾರದಿ ಸಪತ್ನರ ।
ಮೊತ್ತವನು ಪೊಕ್ಕೊದರಿಸಲು ಬಿಲ್ಲನು ತೊಲಗೆ ಸೇನೆ ॥
ಒತ್ತಿ ಬರೆ ಮಗಧೇಶ ನೋಡಿ ನ ।
ಗುತ್ತಲಿವರೇ ರಾಮಕೃಷ್ಣರು ।
ಸತ್ವಪರಿಕಿಪೆನೆನುತ ಕೃಷ್ಣನ ಮೂದಲಿಸಿ ನುಡಿದ ॥೧೧೮॥

**ರಾಗ ಕಾಂಭೋಜಿ ಝಂಪೆತಾಳ**

ದುಷ್ಟ ನೀನೇನೆಲವೊ । ಕಿಟ್ಟನೆಂಬವ ನಮ್ಮ । ಕೊಟ್ಟ ಮಗಳಂದಿರೆರೆಯನನು ॥
ಕುಟ್ಟಿ ಕಳೆದೆಯದೇಕೆ । ಬಟ್ಟೆ ಮುಂದೇನು ಪರ । ಪುಟ್ಟನಿನಗಸುವ ಪಿಡಿದಿರಲು ॥೧೧೯॥

ನುಡಿಯಲಂಜುವೆನಜ್ಞ । ಮಡುಹಿದೆನು ಮಾವನನು । ಬಿಡಿಸೆ ಹೆತ್ತವರ ಬಂಧನವ ॥
ಕಡುವಿರೋಧದಿ ನೀವು । ನಡೆತರಲು ಪಥವೇನು । ಕೊಡುವೆ ನಾಪನಿತು ಕಾಳಗವ ॥೧೨೦॥

ಸೆಣಸುವೆಯ ಧಣುಧಣುರೆ । ನಿನಗಾರು ನಿಜವಾದ । ಜನಕರೀ ಶೌರಿನಂದರೊಳು ॥
ಜನಕರಿಬ್ಬರವೊಲು ರ । ಸನೆಯೆರಡೆನಿಸಿ ನಮ್ಮ । ದಣಿಸಿಯೋಡದಿರು ವಂಚಿಸುತ ॥೧೨೧॥

ಹೆತ್ತಯ್ಯ ವಸುದೇವ । ಮತ್ತೆನ್ನ ಸಾಕಿದ ನಿ । ವೃತ್ತಿಯಿಲ್ಲದೆ ನಂದಗೋಪ ॥
ಮೃತ್ಯುವಿನ ನೆರದೊಳು । ನ್ಮತ್ತ ಕಂಸನು ಕಷ್ಟ । ವಿತ್ತಡವರೇಂ ಗೆಯ್ಯಲಹುದು ॥೧೨೧॥

ಕೋಗಿಲೆಯ ಮರಿಯನ್ನು । ಕಾಗೆಯಿಕ್ಕೆಯೊಳಿಟ್ಟು । ಪೋಗುವಂದದಿ ಶೌರಿ ನಿನ್ನ ॥
ಸಾಗಿ ಪಲ್ಲಟಿಸೆ ಕಾ । ರಾಗಾರ ಹೆಚ್ಚಲ್ಲ । ಹೇಗೆ ತಪ್ಪಿದನು ಭೋಜನೃಪ ॥೧೨೩॥

ಹಗೆ ಮಾವಗಾನು ಮು । ನ್ನೊಗೆದಾರಣುಗರ ಸು । ಮ್ಮಗೆ ಕೊಂದು ತಾಯಿಗಿತ್ತನಲಾ ॥
ದುಗುಡವಂ ಸಹಜನ ಬ । ಲಿಗೆ ಪಡೆದಳೇ ಜನನಿ । ಮಿಗೆ ಜೀವಕಧಿಕರಹ ಸುತರ ॥೧೨೪॥

ಶತ್ರು ಮುಂದುದಿಸಲಿಹ । ಕ್ಷೇತ್ರದೊಳಗೊಗೆದವರು । ಮಿತ್ರರಹರೇ ಮೊದಲೆ ಶೌರಿ ॥
ಪುತ್ರರನು ಕೊಟ್ಟಹ ಚ । ರಿತ್ರೆಯರಿಯೆಯ ನೀನು । ಕ್ಷತ್ರಿಯಾಧಮನೆ ತೊಲಗಾಚೆ ॥೧೨೫॥

ಸ್ತ್ರೀ ಹತ್ಯವನು ತಡೆಯ । ಲೀಹದನ ಪಿತನೆಂದ । ಡಾ ಹಸುಳೆಗಳ ಕೊಂದ ಬಂಧು ।
ದ್ರೋಹಿ ಗುರುಗೋದ್ವಿಜ । ದ್ರೋಹಿಯಹ ಖಳ ಕಂಸ । ಬೇಹವನು ನಿನಗುತ್ತಮನಲಾ ॥೧೨೬॥

ಆರರಿಯರೆಲೊ ನಿನ್ನ । ಚಾರುವೃತ್ತಗಳ ಬಡಿ । ವಾರ ಸಾಕೆಲವೊ ದನಗಾಹಿ ॥
ಜಾರ ಪಾಲ್ಬೆಣ್ಣೆಗಳ । ಚೋರ ನಿಲುನಿಲ್ಲೆಂದ । ವೀರ ಮಾರ್ಬಲಕೆ ಕೈವೀಸೆ ॥೨೩೭॥

**ವಾರ್ಧಕ**

ಗರುಡ ತಾಳಧ್ವಜದ ಕುರುಹ ಕಂಡಹಿತರ ।
ಬ್ಬರಿಸಿ ಕವಿತರೆ ರವಿಯ ಮುಸುಕುವಭ್ರಗಳಂತೆ ।
ಪರಿಭವಂ ಯದುವರರಿಗಾದುದಕಟಕಟೆನುತ ಪುರದ ಹರ್ಮ್ಯಾಗ್ರದಿಂದ ॥
ನಿರುಕಿಸುತ ಸುದತಿಯರು ಹಾಯೆನುತ್ತಿರೆ ಬಲೋ ।
ತ್ತರವ ನಿಶಿತಾಸ್ತ್ರದಿಂ ಸಂಹರಿಸಿ ಶಂಖವಂ ।
ಭರದೊಳೂದಲು ಕೇಳಿಪೌರತತಿ ಮುದವಾಂತುದಮರಚಯ ಜಯವೆನ್ನಲು ॥೨೩೮॥

**ರಾಗ ಅಹೇರಿ ಮಟ್ಟೆತಾಳ**

ಏನನೆಂಬೆ ಹರಿಯ ಸಾಹಸ  ॥ ಪಲ್ಲವಿ ॥

ಬಾಣವರ್ಷದಿಂದಲಹಿತ । ಕಾನನವನು ಸವರಿ ನಡೆದ ॥ ಏನನೆಂಬೆ ॥ ಅ. ಪ ॥

ಕಂಡು ಸೈನ್ಯವಧಿಕರೋಷ । ಗೊಂಡು ಗಣನೆಯಿಲ್ಲದಂತೆ ।
ಕಾಂಡಗಳನು ಸುರಿಸೆ ತನ್ನ । ತಂಡ ಹೊರಳುತಿರಲು ಕೆರಳಿ ।
ಪುಂಡರೀಕ ನೇತ್ರ ನಿಜಕೋ । ದಂಡಕೇರಿಸುತ ಕೋಲ ।
ದಿಂಡುರುಳ್ಚಿ ಮಾರ್ಬಲವನು । ಹಿಂಡಿಹಿಳಿದನಾಗ ಭರದೊ ॥ ಳೇನನೆಂಬೆ ॥೨೩೯॥

ಕರವು ಹರಿದು ಚರಣವುಡಿದು । ಕರುಳು ಸೂಸಿ ವರಪದಾತಿ ।
ಧರಣಿ ಗೊರಗಿತಾಗ ನಿಶಿತ । ಶರವಿಘಾತಿಗಶ್ವ ನಿಚಯ ।
ಹೊರಳೆ ಸೊಂಡಲುಡಿದು ಕರಿಗ । ಳುರುಳೆ ಜವನ ಪುರವು ನೆರೆಯೆ ।
ಬರತುದಾಗ ವೈರಿಜಲಧಿ । ಹರಿಕಳಂಬ ಕುಲನಿದಾಘ । ಕೇನನೆಂಬೆ ॥೨೪೦॥

ಧಾರಿಣೀಶ ಕಟಕ ಬೆನ್ನ । ತೋರಿ ಗಾರುಗೆಟ್ಟು ಹಿಂದೆ ।
ಜಾರುತಿರಲು ಬಳಿಕ ದ್ವಾರ । ಮೂರ ಮುತ್ತಿಗೆಗಳು ತೆಗೆದು ।
ಸೇರಿತೊಂದು ಬಡಗದೆಸೆಯ । ತೋರು ತೋರು ಹರಿಯನೆನುತ ।
ಮೀರಿ ಬರಲು ಮತ್ತೆ ಕೃಷ್ಣ । ನೇರಿಸಿದನು ತಿರುವಿಗಂಬ ॥ ನೇನನೆಂನೆ ॥೨೪೧॥

**ಭಾಮಿನಿ**

ತುರಗ ತತಿಯೊಳು ಕೃಷ್ಣ ರಥಿಕರ ।
ನೆರವಿಯೆಡೆಯೊಳು ಕೃಷ್ಣ ಕರಿಘಟೆ ।
ಹೊರಳಿಯೊಳು ಕೃಷ್ಣಂ ಪದಾತಿಗಳೊಳಗೆ ಕೃಷ್ಣಮಯ ॥
ಇರಿದನೆಚ್ಚನು ಕೊಚ್ಚಿದನು ಸಂ ।

ಹರಿಸಿದನು ರಿಪುಬಲವ ಮಗಧನ ।
ಜರೆಯತೋಡೆ ಪದಾತಿ ಚೈದ್ಯನು ಹರಿಯ ತಡೆದೆಂದ ॥೧೪೧॥

**ರಾಗ ಭೈರವಿ ಏಕತಾಳ**

ಎಲವೋ ಗೋಪಕುಮಾರ । ಸಾ । ಕೆಲೊ ಹುಲು ಬಲಸಂಹಾರ ।
ಗೆಲವೆಂಬಡವಿ ಕುಠಾರ । ಎ । ನ್ನೊಳು ನಿನ್ನಳವನು ತೋರ ॥೧೪೩॥

ಕುಶಲವೆ ಭಾವಂದಿರ್ಗೆ । ಇದು । ಪೊಸತು ಸಮಾಗಮವೆಮಗೆ ।
ಒಸೆ ಗೌರವಿಸಲು ತಪ್ಪೆ । ಹೊಸ । ಮಸೆಯಂಬಿನೊಳುಪಚರಿಪೆ ॥೧೪೪॥

ದನಗಾಹಿಗೆ ದೊರೆಗಳಲಿ । ನಂ । ಟನುವಪ್ಪುದೆ ವ್ರಜದಲ್ಲಿ ।
ಘನಬಲ ಕೇಶಿಬಕಾದಿ । ದಿತಿ । ತನುಜರ ವಧಿಸುತ ಬೆಳೆದಿ ॥೧೪೫॥

ಮೊರೆವಿಡಿದಾಡಲು ಪಳಿವೆ । ದೈ । ತ್ಯರ ಕೊಲೆಗೆನ್ನೊಳು ಮುಳಿವೆ ॥
ದುರುಳರ ನಿನ್ನಂತಹರ । ನಾ । ತರಿದು ಕಳೆದೆ ಭೂಭಾರ ॥೧೪೬॥

ಕ್ಷೀರದಧಿಗಳನು ಸುಲಿದು । ದಯ । ದೋರದೆ ಮಾವನನಿರಿದು ।
ತೋರಿದೆ ಸೌಜನ್ಯಗಳ । ಭೂ । ಭಾರಕರಾರೆಲೊ ಕಳ್ಳ ॥೧೪೭॥

ಮಾವನು ನಿನಗೆನ್ನಯ್ಯ । ನೀ । ನೇವಿಧ ಬಿಡಿಸಿದೆ ಸೆರೆಯ ।
ಗೋವಿಪ್ರ ಸುಬಂಧುಗಳು । ಭೋ । ಜಾವನಿಪಗೆ ಶತ್ರುಗಳು ॥೧೪೮॥

**ರಾಗ ಶಂಕರಾಭರಣ ಮಟ್ಟೆತಾಳ**

ತೊಲಗು ಸಾಕು ಬಗುಳಬೇಡ । ಕೊಳಲ ದನಿಗೆ ಮರುಳುಗೊಂಡ ।
ಲಲನೆಯರೊಳು ನೆರೆದು ಗೋವು । ಗಳನು ಮೇಯಿಸಿ ॥
ಬೆಳೆದ ಚಪಳತನವು ಸಲ್ಲ । ಬಲುಹತೋರು ನಿನ್ನ ಭೂತ ।
ಬಳಗ ಕುಣಿಸಿ ಬಿಡುವ ಗರಳ । ಗಳನೆ ತಡೆದರು ॥೧೪೯॥

ಬಾಯ ಹೆಗ್ಗಳಿಕೆಯೊ ಭಟನಿ । ಕಾಯ ದುರವಣಿಕೆಯೊ ಫಡ ಪ ।
ಲಾಯನಕ್ಕೆ ದೊರಕದೆಡೆಯು । ತಾಯ ಬಸಿರೊಳು ।
ಆಯತಿಕೆಯ ಪರಿಕಿಸೆಂದ । ಜೇಯನಾರ್ದು ಹೊಡೆ ಯೆ ಪೂ ।
ರಾಯ ಸತ್ವದಿಂದ ಕಂಡು । ಹಾಯೆನಬ್ಬಲ ॥೧೫೦॥

ಎಚ್ಚಶರವ ಕಡಿದು ಚೈದ್ಯ । ನುಚ್ಚರಿಸಿದ ಭಾಪು ಮಝರೆ ।
ಮೆಚ್ಚಬೇಕು ಚಳಕಕೆನುತ । ಲೆಚ್ಚಹಯವನು ॥
ಅಚ್ಚಮಸೆಯ ನಾಲ್ಕು ಶರದಿ । ಬಿಚ್ಚಲೆದೆಯ ಸೂತನೋಯ ।
ಲಚ್ಯುತನನು ಹತ್ತರಿಂದ । ಹೆಚ್ಚಿಹೊಡೆದನು ॥೧೫೧॥

ಲೇಸುಗೈದೆ ವೀರ ನೀನ | ಭ್ಯಾಸಿಯಹುದು ಧುರದಿ ಶರವಿ |
ನ್ಯಾಸವೊಳ್ಳಿತೀಕ್ಷಿಸೆನ್ನ | ಕೌಶಲಂಗಳ ||
ಮೈಸಿರಿಯನೆನುತ್ತ ಮಾರ್ಗ | ಣಾಸನವನು ಮಿಡಿದು ದಾಮ |
ಘೋಷ ನಂಗಕೆಚ್ಚು ಬಾಣ | ಘಾಸಿಮಾಡಲು || ||೨೫೨||

ಜಾರೆ ಹಿಂದೆ ಚೇದಿಯರಸ | ಭೂರಿಬಲವ ಕವಿಸಿ ತ್ರಿಂಶ |
ದ್ಧಾರಿಣೀಶ ನಿಕರತರುಬೆ | ವಾರಿಜಾಕ್ಷನು ||
ತೇರ ಮುರಿದು ಧನುವ ಕಡಿದು | ಮೂರು ಮೂರು ಶರದಿ ಹೊಡೆಯ |
ಲೋರೋರ್ವರಸರನ್ನು ವೈರಿ | ವಾರ ಬೆದರಿತು ||೨೫೩||

**ವಾರ್ಧಕ**

ಕೆಟ್ಟೋಡಿದರ್ ಕೆಲರ್ ಸಂಗರಕೆ ಭಯದಿ ಬೆಂ |
ಗೊಟ್ಟೋಡಿದರ್ ಕೆಲರ್ ಪಿಡಿದಸ್ತ್ರಶಸ್ತ್ರ ಬಿ |
ಸುಟ್ಟೋಡಿದರ್ ಕೆಲರ್ ಕಡಿವಡೆದುರುಳ್ದು ಬೆಟ್ಟಾಗಿರ್ದ ಪೆಣರಾಸಿಯ ||
ಮೆಟ್ಟೋಡಿದರ್ ಕೆಲರ್ ಸುರಿವ ಕಣೆಮಳೆಗೆ ಕಂ |
ಗೆಟ್ಟೋಡಿದರ್ ಕೆಲರ್ ಪಥಗಾಣದಿರೆ ಮೊರೆಯ |
ನಿಟ್ಟೋಡಿದರ್ ಕೆಲರ್ ಹರಿಯಂಬಿನುಗ್ರದಿಂ ಬಟ್ಟೆ ಬಯಲಾಗಿ ನೃಪರು ||೨೫೪||

**ಕಂದ**

ಇಂದುಕುಲಾಧಿಪ ಕೇಳು ಮು |
ಕುಂದಂ ಭೂಪರ ದೆಸೆಗೆಡಿಸುತ ಸೂರಿಯೊಳಂ ||
ಸ್ಯಂದನವಂ ಹಾರಿಸಿ ಬಳಿ |
ಸಂದಸ್ತ್ರವ ಸುರಿದುಸುರಿದ ಚೈದ್ಯನೊಳಾಗಳ್ ||೨೫೫||

**ರಾಗ ಕಾಂಭೋಜಿ ತ್ವರಿತ ಝಂಪೆತಾಳ**

ನಿಲ್ಲು ನಿಲ್ಲೆಲೊ ಧರಣಿ | ವಲ್ಲಭರ ನಿದಿರಿಕ್ಕಿ | ಕಳ್ಳನಂತೈದುವೆಯ ಚೈದ್ಯ ||
ಬಿಲ್ಲ ತೊಡು ತೊಡು ನಿನ್ನ | ಹಲ್ಲ ಕಳಚುವೆನೀಗ | ಲಲ್ಲದಡೆ ಶರಚಾಪವಿಳುಹು ||೨೫೬||

ಏನನೊದರಿದೆ ಕುಹಕಿ | ತ್ರಾಣಶೂನ್ಯನೆ ಚೈದ್ಯ | ನಾನೆ ಕುರಿಗೆರಗಿ ಬಾಳುವುದೆ ||
ಕ್ಷೋಣಿಯೊಳು ಯಾದವರು | ಹೀನದೊರೆತನರೆಮ್ಮ | ಮಾನನಿಧಿಗಳಿಗೆ ಸರಿಯಹರೆ ||೨೫೭||

ಯಾದವರ ಪಾತಿತ್ಯ | ವಾದರಿಸಿ ವರಿಸೆ ಮಮ | ಸೋದರತ್ತೆಯನು ದಮಘೋಷ ||
ಹೇ ಧೂರ್ತ ನೀ ಜನಿಸಿ | ಬೈದೆ ತಾಯ್ವನೆಯ ಕೆಡು | ಹಾದಿದುಳಿದೆಯಲ ಕಡುಪಾಪಿ ||೨೫೮||

ದುಷ್ಟ ದುಶ್ಚರಿತ ನೀ | ಹುಟ್ಟೆ ನಿನ್ನನು ನಂಬಿ | ಕಷ್ಟಕೊಳಗಾಯ್ತು ಯದುವಂಶ ||
ಭ್ರಷ್ಟ ನಿನ್ನನು ಮೊದಲು ಕುಟ್ಟಿಕೊಂದೆಮ್ಮೊಳೊ | ಕ್ಕಟ್ಟಿ ಬಳೆಸುವೆ ಬಳಿಕ ನೋಡು ||೨೫೯||

ಕೆಲಸ ಸರಿ ಮಾಗಧಂ | ಗಳಿಯನಾಗುತೆ ಕಂಸ | ಬಲು ಬನ್ನವಿತ್ತ ಬಳಗಕ್ಕೆ ||
ಕುಲವಿರೋಧಿಯನವನ | ಕಳೆದೆ ನಿಮ್ಮನು ತರಿದು | ಇಳೆಯ ಸುಜನರಿಗೆ ಸುಖವೀವೆ ||೧೬೦||

ವೈರಿ ನೀನೊಬ್ಬನೆ ವಿ | ಚಾರಿಸಲು ನಿಮಗಿಲ್ಲ | ವೈರಯಾದವರೊಳದರಿಂದ ||
ಸೈರಿಸಿದೆವೀತನಕ | ತೋರುವೆನು ಕಡೆಗಾಲ | ವೀರಣಾಗ್ರದೊಳು ನೋಡೆಂದ ||೧೬೧||

## ೩. ರುಗ್ಮಿಣೀ ಸ್ವಯಂವರ - ಪಾತ್ರಗಳು

ದೇವಕಿ
ಚಂದ್ರಾನನೆ
ರುಗ್ಮಿಣಿ
ಸಖಿಯರು
ಭೀಷ್ಮಕ
ರುಗ್ಮ
ಮಂತ್ರಿ
ಶಿಶುಪಾಲ
ಮಾಗಧ
ವಸುದೇವ
ಬಲರಾಮ
ಕೃಷ್ಣ
ಬ್ರಾಹ್ಮಣ
ಸೈನಿಕರು

**ರಾಗ ನಾಟಿ, ಝಂಪೆತಾಳ**

ಶ್ರೀ ಗಣಪ ಗಜವದನ | ಸುರನಿಕರನುತಚರಣ |
ನಾಗನಿಚಯಾಭರಣ | ನತಜನೋದ್ಧರಣಾ ||
ಯೋಗಿಜನಹೃದಿನಿಲಯ | ನಾಗಭೂಷಣತನಯ |
ರೋಗಾದಿದೋಷಹರ | ರಂಜಿತಾಕಾರಾ ||೧||

ಪರಮಪಾವನಚರಿತ | ಸರಸ ಸದ್ಗುಣಭರಿತ |
ತರುಣಾರ್ಕಸಂಕಾಶ | ದುರಿತೌಘನಾಶಾ ||
ಶರಧಿಸಮ ಗಂಭೀರ | ಸಕಲ ವಿದ್ಯಾಧಾರ |
ನಿರತಗಾನವಿಲೋಲ | ನಿರ್ಮಲಸುಶೀಲಾ ||೨||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಶರಣು ಶಂಕರ ತ್ರಿಪುರನಾಶನ | ಶರಣು ನುತಜನಪೋಷಣಾ ||
ಶರಣು ಗಿರಿಜಾನಾಥ ಸ್ಮರಹರ | ಶರಣು ಪರಶಿವ ಪಾಹಿ ಮಾಂ ||೩||

ನೀಲಕಂಧರ ನಿರ್ಮಲಾತ್ಮಕ | ಕಾಲಕರ್ಮ ವಿವರ್ಜಿತಾ ||
ವ್ಯಾಳಭೂಷ ಕಪಾಲಧರ ಗಣ | ಜಾಲವಂದಿತ ಪಾಹಿ ಮಾಂ ||೪||

ದಕ್ಷ ಮಖಸಂಹರಣ ಸುರಮುನಿ | ಯಕ್ಷ ಕಿನ್ನರಪೂಜಿತಾ ||
ಪಕ್ಷಿವಾಹನಮಿತ್ರ ಭವಹರ | ತ್ರ್ಯಕ್ಷ ಮಾಂ ಪರಿಪಾಲಯಾ ||೫||

**ರಾಗ ಮಾರವಿ, ಏಕತಾಳ**

ಅಂಬಾ ಮಾಂ ಪಾಹಿ ಶ್ರೀ | ಅಂಬುಜವದನೇ ||
ಬಿಂಬೋಷ್ಠೆ ಭಕ್ತ ವಾ | ಲಂಬೆ ಶಿವಸದನೇ ||೬||

ಕಲಕೀರವಾಣಿ ಕೋ | ಮಲೆ ಕಂಜಪಾಣೀ ||
ಅಳಿನೀಳಾಳಕಶ್ರೇಣಿ | ದೇವಿ ಶರ್ವಾಣೀ ||೭||

ಲಲನಾಮಣಿ ನೀಲೋ | ತ್ಪಲ ದಳನಯನೇ ||
ಸುಲಲಿತ ಸುಮವರ | ಮಾಲೆ ಸುಶೀಲೇ ||೮||

ಶರಜನ್ಮಜನನೀ ರು | ದ್ರಾಣಿ ಕಲ್ಯಾಣೀ ||
ಸುರಗಣ ಮಣಿಮಕು | ಟೋಜ್ವಲ ಚರಣೇ ||೯||

ಸುರುಚಿರ ರತ್ನಾಂ | ಬರೆ ವಿಮಲಚರಣೇ ||
ಕರುಣಾಸಾಗರೆ ಕಂಬು | ಕಂಠಿ ಸುಭರಣೇ ||೧೦||

ನಿರತ ನೀ ಪಾಲಿಸೆ | ಸುಜನರ ಬೇಗಾ ||
ವರ ಕುಟಚಾದಿಸ್ಥಿರ | ವಾಸೆ ಮುಕಾಂಬೇ ||೧೧||

**ದ್ವಿಪದಿ**

ಪರಮ ಸತ್ಕವಿ ಶುಕನ ಚರಣಾಬ್ಜಯುಗವ |
ಭರದಿ ಧ್ಯಾನಿಸಿ ಪಡೆವೆ ಜ್ಞಾನಸಂಪದವ ||೧೨||

ಸುರನಿಕರಕಭಿನಮಿಸಿ ಮುನಿನಿಕರಕೆರಗೀ |
ಸರಸಕವಿಗಳ ನೆನೆದು ಭಕ್ತಿಯುತನಾಗಿ ||೧೩||

ಭಾಗವತ ಪೌರಾಣದೊಳಗೆ ರುಗ್ಮಿಣಿಯ |
ಭೋಗಿಶಯನನು ವರಿಸಿ ಮೆರೆದ ಸಂಗತಿಯಾ ||೧೪||

ಪೇಳುವೆನು ಶ್ರೀಮುಕಾಂಬಿಕೆಯ ಕರುಣದಲಿ |
ಪಾಲಿಸಿದ ವಾಕ್ಯವನು ಯಕ್ಷಗಾನದಲಿ ||೧೫||

ಎನಿತು ತಪ್ಪಿರ್ದಡದ ಕೋವಿದರು ಮುದದಿ |
ವಿನಯದಿಂ ತಿದ್ದಿ ಮೆರೆಸುವುದು ಮೂಜಗದಿ ||೧೬||

**ವಚನ**

ಇಂತು ದೇವಗುರುಪ್ರಾರ್ಥನೆಯ ಮಾಡಿ ಸತ್ಕಥಾಪ್ರಸಂಗಮಂ ಪೇಳ್ವೆನದೆಂತೆನೆ -

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಸೋಮವಂಶೋದ್ಭವ ಪರೀಕ್ಷಿತ | ಭೂಮಿಪತಿ ಶುಕಯೋಗಿನಾಥನ |
ಕೋಮಲಾಂಘ್ರಿಗೆ ನಮಿಸಿ ಕೇಳ್ದನು | ಪ್ರೇಮದಿಂದಾ ||೧೭||

ವರಮಹಾ ಮುನಿ ಕೇಳು ತವ ಮುಖ | ಸರಸಿಜದೊಳುದಿಸಿರ್ದ ಲಕ್ಷ್ಮೀ |
ವರನ ಲೀಲಾ ಚರಿತವನು ಅತಿ | ಹರುಷದಿಂದ ||೧೮||

ಸವಿಯೆ ಕರ್ಣಕೆ ತೃಪ್ತಿಪಡಿಸದೆ | ಸವಿಯದೆಂತುಟೊ ಕಾಣೆ ಕಮಲಾ |
ಧವನು ರುಗ್ಮಿಣಿಗೊಲಿದ ಪರಿಯನು | ವಿವರಿಸೆನಗೆ ||೧೯||

ಎಂದು ಪೃಥ್ವೀಶ್ವರನು ಪುನರಪಿ | ವಂದಿಸಲು ಪಿಡಿದೆತ್ತಿ ಕರುಣಾ |
ಸಿಂಧು ಮುನಿಪತಿ ನಗುತ ಪೇಳ್ದನು | ಚಂದದಿಂದ ||೨೦||

ಅರಸ ಕೇಳ್ಳೈ ನಿನ್ನ ಭಕ್ತಿಗೆ | ಸರಿಯೆ ಬೇರಿನಿತಿಲ್ಲ ಜಗದೊಳು |
ಮುರಹರನ ಮಹಿಮೆಯನು ಪೇಳ್ವೆನು | ಕರುಣೆಯಿಂದ ||೨೧||

**ರಾಗ ಶಂಕರಾಭರಣ ಮಟ್ಟೆತಾಳ**

ಧರಣಿಪತಿಯೆ ಲಾಲಿಸಯ್ಯ | ವರ ವಿದರ್ಭದೇಶದೊಳಗೆ |
ಮೆರೆವ ಕುಂಡಿನಾಖ್ಯಪುರದ | ಸಿರಿಯ ಸೊಬಗನೂ ||೨೨||

ಉರಗಪತಿಗೆ ಪೇಳಲರಿದು | ಸುರಪನಾಳ್ವ ನಗರವನ್ನು |
ಜರೆವ ತೆರದಿ ಪರಮಸೌಖ್ಯ | ತೆರದೊಳುಲಿವುತಾ ||೨೩||

ದ್ವಾರ ನಾಲ್ಕು ಪುರದ ನಡುವೆ | ತೋರುತಿರ್ಪುದಖಿಳಜನಕೆ |
ಕೇರಿ ಕೇರಿಯೊಳಗೆ ಮಕರ | ತೋರಣಂಗಳೂ ||೨೪||

ಎಲ್ಲಿ ನೋಡೆ ವಾಜಿ ಗಜಗ | ಳೆಲ್ಲಿ ನೋಡೆ ದಿವ್ಯರಥಗ |
ಳಲ್ಲಿ ಸುಭಟವಾರ ಮೆರೆವು | ತಲ್ಲಿ ತೋರ್ಪುದೂ ||೨೫||

ಎಲ್ಲಿ ನೋಡೆ ನೃತ್ಯಗೀತ । ಎಲ್ಲಿ ನೋಡೆ ವಾದ್ಯಘೋಷ ।
ಎಲ್ಲಿ ನೋಡೆ ಸಕಲ ವಿಭವ । ದಲ್ಲಿ ಮೆರೆದುದೂ ॥೩೬॥

**ಭಾಮಿನಿ**

ಈ ಪರಿಯ ಸೌಭಾಗ್ಯ ಸುಖಕರ ।
ವಾಪ ಮೆರೆಯುವ ದಿವ್ಯನಗರದಿ ।
ರೂಪ ಯೌವನ ಗುಣದಿ ಶೋಭಿತಳಾದ ಸತಿ ಸಹಿತಾ ॥
ಚಾಪವಿದ್ಯಾನಿಪುಣ ಸದ್ಗುಣ ।
ದಾಪ ಕೀರ್ತಿಕಲಾಪವೆನಿಸುವ ।
ಭೂಪ ಭೀಷ್ಮಕರಾಯನಿದ್ದನು ರಾಜತೇಜದಲೀ ॥೧೭॥

**ರಾಗ ಮಧುಮಾಧವಿ, ತ್ರಿವುಡೆತಾಳ**

ಇಂತು ವಿಭವದಿ ರಾಯಭೀಷ್ಮಕ । ಸಂತಸದೊಳಿರಲಮಿತ ಸದ್ಗುಣ ।
ವಂತರುದಿಸಿದರಧಿಕತೇಜದಿ । ಕಂತುರೂಪದೊಳೈವರು ॥೧೮॥

ರುಗ್ಮ ಹಿರಿಯನು ರುಗ್ಮಿ ಕಿರಿಯನು । ರುಗ್ಮಬಾಹು ಸುರುಗ್ಮಕೇತನು ।
ರುಗ್ಮಭೂಷಣ ಗಾತ್ರನೆನಿಸುವ । ರುಗ್ಮನಾಮದೊಳೈವರು ॥೧೯॥

ಸುತರು ರಾಜ್ಯಕೆ ಪತಿಗಳಾದರು । ಸುತೆಯು ತನಗಿಲ್ಲೆನುತ ರಾಯನ ।
ಸತಿಯು ಚಿಂತಿಸುತಿರಲು ಲಕ್ಷ್ಮೀ । ಪತಿಯ ವ್ರತಮಂ ತಾಳ್ದಳು ॥೨೦॥

ಧರೆಯ ಭಾರವ ಕಳೆಯಲೋಸುಗ । ಧರೆಯೊಳವತರಿಸಿದನು ಪತಿ ಎಂ ।
ದರಿತು ತಾನುದಿಸುವೆನು ಭೀಷ್ಮಕ । ನರಸಿಯುದರದಿ ಮುದದೊಳು ॥೨೧॥

ಎನುತ ರಮೆಯತಿಕರುಣದಿಂದಲಿ । ವನಿತೆ ಚಂದ್ರಾನನೆಯ ಗರ್ಭದಿ ।
ವಿನಯದಿಂದಲೆ ವಾಸವಾಗಲು । ಮನದಿ ಸಂತಸಗೊಂಡಳು ॥೨೨॥

**ರಾಗ ಸಾಂಗತ್ಯ ರೂಪಕತಾಳ**

ಸಿರಿದೇವಿ ಜಠರದಿಂ ಕರುಣದೊಳೈಲೆಸೆ ಭೂ । ವರನ ರಾಣಿಗೆ ಗರ್ಭದೇಳ್ಗೆ ॥
ಕುರುಹುದೋರಿತು ಸರ್ವ ಗಾತ್ರದೊಳ್ಮುಖಪದ್ಮ । ಪರಿಶೋಭಿಸಿತು ಶುಭ್ರವಾಗಿ ॥೨೩॥

ಭುವನಾಧಿಪತಿ ಕೇಳು ಕುವಲಯನೇತ್ರೆಗೆ । ನವಮಾಸ ತುಂಬಲಾ ಕ್ಷಣದಿ ॥
ಭವಣೆಗೊಳ್ಳುತ ಮಂಚವನೆ ಸಾರ್ದು ಮನದಲ್ಲಿ । ಶಿವನೇ ರಕ್ಷಿಸು ಎಂದಳಬಲೆ ॥೨೪॥

**ರಾಗ ನೀಲಾಂಬರಿ ಆದಿತಾಳ**

ತಾಳಲಾರೆನು  ॥ ಪಲ್ಲವಿ ॥

ಎನ್ನಂಗದ ವ್ಯಥೆಯ | ತಾಳಲಾರೆನು  || ಅ.ಪ ||

ಘಳಿಗೆ ಘಳಿಗೆಗೊಂದೊಂದು |
ಅಲಗು ನೆಟ್ಟಂತಹುದು || ||೩೫||

ಉಂಡರುಬ್ಬಸ ಹೆಚ್ಚಿ |
ಗುಂಡು ಕಲ್ಲಿಟ್ಟಂತೆದೆಯೊಳ್ | ||೩೬||

ಅಡಿ ಇಡಲಳವಲ್ಲ |
ನುಡಿವರೆ ಮನಸಿಲ್ಲ || ||೩೭||

ಶ್ರೀಶ ಸದಾನಂದ |
ಕೇಶವ ದಯದಿಂದ || ತಾಳಲಾ ||೩೮||

ಪೋಷಿಸಬೇಕೆನ್ನನು |
ಕೈ ಮುಗಿವೆನು || ತಾಳಲಾರೆನು ||೩೯||

**ಕಂದ**

ಇಂತಿರಲಾ ಸಮಯದಿ ವರ |
ಕಂತುಜನನಿಯಾ ಭೂಮೀಶನ ನಿಜ ಪಟ್ಟದ ||
ಕಾಂತೆಜಠರದಿಂ ಧರೆಗೆ |
ತಾಂ ತವಕದಿ ಅವತರಿಸಿದಳತಿ ವೈಭವದಿಂ ||೪೦||

**ದ್ವಿಪದಿ**

ಯುವತಿ ಚಂದ್ರಾನನೆಗೆ ಮಜ್ಜನವ ಗೈದು |
ನವದುಕೂಲವನುಡಿಸಿ ಭೂಷಣ ತೊಡಿಸೀ ||೪೧||

ಧರಣೇಶ ಭೀಷ್ಮಕಗೆ ಪೇಳಲಾ ಕ್ಷಣದಿ |
ಧರಣಿ ಯಮರರು ಸಹಿತ ಬಂದರಾ ಕ್ಷಣದಿ ||೪೨||

ನಾಮಕರಣವ ಮಾಳ್ಪುದೆನೆ ಶಿಶುವ ನೋಡಿ |
ಪ್ರೇಮದಿಂ ಭೂಸುರೋತ್ತಮರ್ಗಣಿತ ಮಾಡಿ ||೪೩||

ರುಗ್ಮವರ್ಣದೊಳೆಸೆವ ಸುಕುಮಾರಿಗಾಗ |
ರುಗ್ಮಿಣಿಯು ಎಂದು ಘನ ಪೆಸರಿಸಲು ಬೇಗ ||೪೪||

**ರಾಗ ಕೇತಾರ, ಝಂಪೆತಾಳ**

ಮೃದುತರದ ಹಾಸು ಹಾಸೀ । ತಾಮರಸ ।
ಸದನೆಯನು ಶಯನಗೈಸೀ ॥
ವದನಾಬ್ಜವನು ನೋಡುತಾ । ಅರ್ತಿಯಲಿ ।
ಸುದತಿ ಚಂದ್ರಾನನೆಯು ॥೪೫॥

ಪಕ್ಷಿವಾಹನನೆ ದಯದೀ । ಈ ಶಿಶುವ ।
ರಕ್ಷಿಸೈ ಎಂದು ಮುದದೀ ॥
ರಕ್ಷೆ ಕಟ್ಟುತಲೆ ಪಾಡೀ । ಬಳಿಕ ಕಮ ।
ಲಾಕ್ಷಿಯರು ತೂಗೆ ಕೂಡೀ ॥೪೬॥

**ರಾಗ ಜೋಗುಳ, ಆದಿತಾಳ**

ಜೋಜೋ ಜೋ ಫಣಿವೇಣಿ ಕಲ್ಯಾಣೀ ।
ಜೋಜೋ ಕಲಕೀರವಾಣಿ ಕಟ್ವಾಣೀ ॥
ಜೋಜೋ ವಿಕಸಿತಕುವಲಯನೇತ್ರೇ ।
ಜೋಜೋ ಮೋಹನ ಕೋಮಲಗಾತ್ರೆ ॥ ಜೋಜೋ ॥೪೭॥

ಜೋಜೋ ಅಳಿನೀಲಕುಂತಳ ಜೋಜೋ ।
ಜೋಜೋ ಸುಲಲಿತ ಕನಕಾಂಗಿ ಜೋಜೋ ॥
ಜೋಜೋ ತಿಲಸುಮನಾಸಿಕೆ ಜೋಜೋ ।
ಜೋಜೋ ವರಕಂಬುಕಂಧರೆ ಜೋಜೋ ॥ ಜೋಜೋ ॥೪೮॥

ಶರದೇಂದುನಿಭಮುಖಿ ಶಿರಿದೇವಿ ಜೋಜೋ ।
ತರುಣಾರ್ಕ ನಿಭಕೋಟಿಸಂಕಾಶೆ ಜೋಜೋ ॥
ಧರಣೀಶ ಭೀಷ್ಮಕತನುಜಾತೆ ಜೋಜೋ ।
ಕರುಣಾಕರೆ ಗುಣಸಾಗರೆ ಜೋಜೋ ॥ ಜೋಜೋ ॥೪೯॥

**ಭಾಮಿನಿ**

ಇಂತು ವಿಭವದಿ ಪುರದ ವಧುಗಳ ।
ನಂತರಾಗದಿ ಪಾಡಿ ತೂಗುತ ।
ಸಂತಸದೀ ವೀಳೆಯವನಿತ್ತುಪಚರಿಸೆ ಮನೆಗಳಿಗೇ ॥
ಕಾಂತೆಯರ ಬೀಳ್ಕೊಟ್ಟು ಶಿಶುರೂ ।
ಪಾಂತ ಶ್ರೀದೇವಿಯನು ಧರಣೀ ।
ಕಾಂತನರಸಿಯು ನೋಡುತಿದ್ದಳು ಪರಮಹರುಷದಲೀ ॥೫೦॥

**ವಾರ್ಧಕ**

ಧರಣೀಶನರ್ಧಾಂಗಿ ಹರಿಣಾಕ್ಷಿ ಸ್ನೇಹದಿಂ ।
ಶಿರಿದೇವಿಯಂ ಸಲಹುತಿರಲೊಂದು ದಿನದಿ ಶ್ರೀ ।
ವರನಿರ್ಪ ದ್ವಾರಕಾಪುರದಿಂದ ನಾಯಕರು ಭರದೊಳೈತಂದು ಮುದದೀ ॥
ಧೊರೆಯ ಸನ್ಮುಖದಲ್ಲಿ ಪರಮಪಾವನಚರಿತ ।
ಮುರಹರನ ಮಹಿಮೆಯಂ ಪರಿಪರಿಯ ರಾಗದಿಂ ।
ಸರಸವಾಡುತ ಪೇಳೆತರಳೆರುಗ್ಮಿಣಿ ಕೇಳಿ ಪರಿತೋಷಮಂ ತಾಳ್ದಳೂ ॥೫೧॥

**ರಾಗ ಮಧುಮಾಧವಿ, ತ್ರಿವುಡೆತಾಳ**

ರಾಯ ಹಿಮಕರಕುಲಜ ಲಾಲಿಸು । ಗಾಯಕರ ಮುಖದಿಂದ ಪಂಕೇ ।
ಜಾಯತಾಕ್ಷನ ಗುಣಗಣಂಗಳ । ಕಾಯಸಂಭವಜನನಿಯು ॥೫೨॥

ಕೇಳಿ ತನ್ನೊಳು ತಾನೆ ಹಿಗ್ಗುತ । ನೀಲಮೇಘಶ್ಯಾಮ ಕೃಷ್ಣನ ।
ಮೇಲೆ ಚಿತ್ತವನಿಟ್ಟು ಮನದಲಿ । ಬಾಲೆ ಧ್ಯಾನಿಸುತಿದ್ದಳು ॥೫೩॥

ಕಾಮಪಿತ ಕಮಲಾಕ್ಷನೀರಜ । ಶ್ಯಾಮ ಸದ್ಗುಣಧಾಮ ರಿಪುನಿ ।
ರ್ನಾಮ ತವಪದತಾಮರಸವನು । ಪ್ರೇಮದಿಂ ತೋರೆನುತಲಿ ॥೫೪॥

ರಾಜಿಸುವ ನವಸ್ವರ್ಣಪ್ರತಿಮೆಯ । ಮೂಜಗತ್ಪತಿ ಕೃಷ್ಣನೆಂದತಿ ।
ಪೂಜಿಸುವಳವಳರ್ತಿಸುವಳು ಸ । ರೋಜನಾಭನ ನೆನೆವುತ ॥೫೫॥

ಮಾರನಯ್ಯನ ಮನದಿ ನೆನೆವುತ । ಮಾರನಸ್ತ್ರಕೆ ಮೈಯನೊಡ್ಡುತ ।
ಮಾರಮಣ ಮೈದೋರಿಸೆನುತಲಿ । ಮಾರಮಣಿ ನುತಿಗೈದಳು ॥೫೬॥

**ಭಾಮಿನಿ**

ಪತಿ ತನಗೆ ಶ್ರೀಕೃಷ್ಣನೆನುತಲಿ ।
ಹಿತದಿ ಭಾವಿಪ ತನ್ನ ಮೋಹದ ।
ಸುತೆಯ ಮತಮಂ ತಿಳಿದು ವಿಸ್ಮಿತನಾಗುತಡಿಗಡಿಗೇ ॥
ಕ್ಷಿತಿಗೊಡೆಯ ಭೀಷ್ಮಕನು ಬಾಂಧವ ।
ತತಿಯ ಸಂತಸಬಡಿಸಿ ದಾನವ ।
ಮಥನಗೀ ಬಾಲಕಿಯ ನೀವುದು ಹಿತಗಳೆನುತಿದ್ದಾ ॥೫೭॥

**ರಾಗ ಭೈರವಿ, ಝಂಪೆತಾಳ**

ಕ್ಷಿತಿಪ ಭೀಷ್ಮಕರಾಯ । ಸುತೆಯ ಶ್ರೀದೇವಕಿಯ ।
ಸುತಗೆ ತಾ ಕೊಡುವೆನೆನು । ತತಿ ಹಿತದೊಳಿರಲು ॥೫೮॥

ಕೇಳಿ ದೂತರು ಬಂದು । ಪೇಳಲಾ ಕ್ಷಣ ರುಗ್ಮ ।
ನಾಲಿಸುತ ಕೋಪಮಂ । ತಾಳಿ ಕಿಡಿಗೆದರಿ ॥೫೯॥

ಹುಡುಗಿಯನು ಗೋವಳಗೆ । ಕೊಡುವೆನೆಂಬವನ ಹಲು ।
ಹೊಡೆವೆನೆಂದೆನುತಾಗ । ಘುಡು ಘುಡಿಸಿ ಭರದಿ ॥೬೦॥

ತಂದೆ ಇದ್ದೆಡೆಗೆ ನಡೆ । ತಂದು ನಿಲ್ಲಲು ತಿಳಿದು ।
ಕಂದ ಬಾರೈ ಕುಳ್ಳಿ । ರೆಂದ ಭೀಷ್ಮಕನು ॥೬೧॥

ಮಗನೆ ನಿನ್ನಯ ಮುದ್ದು । ಮೊಗದಿ ದುಗುಡವಿದೇನು ।
ಬಗೆಯನೆನಗರುಹೆನುತ । ನಗುತ ಕೇಳಿದನು ॥೬೨॥

**ರಾಗ ಸೌರಾಷ್ಟ್ರ ಅಷ್ಟತಾಳ**

ತಾತ ಕೇಳೈ ಗೋಪಾಲಂಗೆ । ಓತು ಮಗಳನೀವೆನೆಂಬ ।
ಮಾತ ಕೇಳ್ದು ನಾನು ಬಂದೆ । ನೀತಿಯೇನಯ್ಯಾ ॥೬೩॥

ಪಾತಾಳ ಭೂವ್ಯೋಮಕೆಲ್ಲ । ನಾಥಕಾಣೈ ಕೃಷ್ಣರಾಯ ।
ಏತಕಿಂಥ ಬುದ್ಧಿ ನಿನಗೆ । ನೀತಿಯೇನಯ್ಯಾ ॥೬೪॥

ತೆಗೆತೆಗೆ ಜಾರ ಚೋರನ । ಬಗೆಯನೆಲ್ಲ ಬಲ್ಲೆ ನಾನು ।
ಜಗದೊಳು ಜಾತಿಹೀನಂಗೆ । ಮಗಳೀಯಬೇಡಾ ॥೬೫॥

ಮಗನೆ ಕೇಳ್ನಾನೆಂದ ಮಾತು । ನಿಗಮ ಸಿದ್ಧವಾದ ವಾಕ್ಯ ।
ಪೊಗಳಿಕೆ ಇದಲ್ಲ ಬೇರೆ । ನಗೆಯ ಮಾತಲ್ಲಾ ॥೬೬॥

ಗೊಲ್ಲರ ಗೃಹದೊಳಿದ್ದು । ಕಳ್ಳಿಯನ್ನ ಉಂಡು ಗೋವ ।
ನೆಲ್ಲ ಕಾಯ್ವುತನ ಪೊಗಳಿ । ಜಳ್ಳಾಗಬೇಡಾ ॥೬೭॥

ಬಲ್ಲೆನೆಂದಾಡಿದೆ ಮಗನೆ । ನಿಲ್ಲದೆ ಸರ್ವರ ಹೃದಯ ।
ದಲ್ಲಿ ವಾಸವಾಗಿರ್ಪಾತ । ಗೆಲ್ಲಿಯ ಭೇದಾ ॥೬೮॥

ವೃದ್ಧರಯ್ಯ ತಾತ ನಿಮ್ಮ । ಬುದ್ಧಿಯು ಹಾಗಿರಲಿ ನಮ್ಮ ।
ಮುದ್ದು ಮೊಗದ ಶಿಶುಪಾಲಂಗೆ । ಸಿದ್ಧಮಾಡಯ್ಯಾ ॥೬೯॥

ಬುದ್ಧಿವಂತನುಹುದು ಸುಪ್ರ । ಸಿದ್ಧನಾದ ಶಿಶುಪಾಲಾನ ।
ಇದ್ದ ನಾಲ್ಕು ಕರದೊಳೆರಡ । ಕದ್ದಾತನಾರೈ ॥೭೦॥

**ರಾಗ ಶಂಕರಾಭರಣ, ಮಟ್ಟೆತಾಳ**

ಕೇಳು ತಾತ ನಿಮ್ಮ ಮಾತ ಮೀರಬಾರದೂ ।
ಪೇಳಲೇನು ರಾಜ ಕಾರ್ಯ ಮುಂದೆ ಬಪ್ಪುದೂ ॥
ಶೂಲಧರನ ವರದಿ ರಾಜ್ಯ ಆಳ್ವ ಮಗಧನೂ ।
ನೀಲವರ್ಣಗಿತ್ತರೆಯು ಕಾಳುಮಾಳ್ಪನೂ ॥೭೧॥

ಕದನದಲ್ಲಿ ಸೋತ ಕೃಷ್ಣ ಜಲಧಿ ಮಧ್ಯದೀ ।
ಸದನವನ್ನು ಮಾಡಿದುದ ಬಲ್ಲೆ ಶೀಘ್ರದೀ ॥
ಚದುರ ಚೈದ್ಯಭೂಪನಿಗೆ ಮಗಧ ಮಿತ್ರನೂ ।
ಮುದದೊಳಾತನಿರಲು ನಮಗೆ ರಿಪುವ ಕಾಣೆನೂ ॥೭೨॥

ಉರಗಶಯನ ವೈರಿ ನಮಗೆ ದೈವ ಪಶುಪತೀ ।
ಧರಣಿಯೊಳಗೆ ಸುಪ್ರತಾಪಿ ಮಗಧಭೂಪತೀ ॥
ಬರಿಯ ಮಾತಿನಿಂದಲೇನು ತಂಗಿವರಿಸಲೀ ।
ಕರೆಸು ಚೈದ್ಯಭೂಪನಿಂಗೆ ಮದುವೆಯಾಗಲೀ ॥೭೩॥

**ರಾಗ ಶಂಕರಾಭರಣ ತ್ರಿವುಡೆತಾಳ**

ಮಗನೆ ನಿನಗಿನ್ನೇನ ಪೇಳಲಿ । ಜಗದ ಭಾರವ ಕಳೆಯಲೋಸುಗ ।
ನಗಧರನು ತಾನುದಿಸಿದನು ಕೇ । ಳ್ಮಗಳು ಮಾಯೇ ॥೭೪॥

ಮಿಗುವಡರಿದೀ ಮಗಧ ಚೈದ್ಯರು । ಪಗೆತನದೆ ಪಾಳಾಗಿ ಪೋಪರು ।
ನಗೆಗೆ ನಮ್ಮೆಡೆಮಾಡಬೇಡೈ । ಸುಗುಣ ನೀನೂ ॥೭೫॥

ಕೇಡು ಬಪ್ಪುದು ಈಗ ಜಗದೊಳು । ಆಡಿಕೊಂಬರು ಬೈದು ನೆಂಟನು ।
ಬೇಡ ಹಗೆತನ ಕೃಷ್ಣರಾಯನ । ಕೂಡೆ ನಿನಗೇ ॥೭೬॥

**ರಾಗ ಭೈರವಿ ಏಕತಾಳ**

ಬಂದುದು ಬರಲಿ ಎನಗೇ । ಮನ । ದಿಂದೀವೆನು ಚೈದ್ಯನಿಗೇ ॥
ಬಂಧುಗಳಿಂದೇನಹುದೂ । ಗೋ । ವಿಂದಗೆ ಕೊಡೆ ತಾನೆಂದೂ ॥೭೭॥

ನಡೆನಡೆ ನೀನೆಂದೆನುತಾ । ತನ । ಕುಡಿಮೀಸೆಯ ತಿರುಹುತ್ತಾ ॥
ಕಡುಹಿಲಿ ಭುಜಗಳ ತಟ್ಟೀ । ಬಲು । ಕಿಡಿಗೆದರಿದ ಜಗಜಟ್ಟೀ ॥೭೮॥

ತರಳೆಯ ಚೈದ್ಯನಿಗೀಗಾ । ತಾ । ಕರೆಸಿ ಕೊಡುವೆನತಿ ಬೇಗಾ ॥
ಬರಬೇಕೆಲ್ಲಾ ಜಗದಾ । ಸರಿ । ದೊರೆಗಳು ಸಹಿತಲೆ ಮಗಧಾ ॥೭೯॥

ಎಂದಾ ಕ್ಷಣ ಮನಮುಟ್ಟೀ । ಸಾ । ನಂದದೊಳು ಡುಗೊರೆ ಕಟ್ಟೀ ॥
ಚಂದದಿ ಕರಣಿಕರೊಡನೇ । ಆ । ನಂದದಿ ಬರೆಸಿದ ತಾನೇ ॥೮೦॥

ಬರೆದಿಹ ಓಲೆಯ ನೋಡೀ । ಅನು । ಚರರಿಂಗದನು ತಾ ನೀಡೀ ॥
ತ್ವರಿತದೊಳುಡುಗೊರೆ ಸಹಿತಾ । ಘನ । ಹರುಷದಿ ಕಳುಹಿದನಾತಾ ॥೮೧॥

**ಭಾಮಿನಿ**

ಧರಣಿಪನ ಬೀಳ್ಕೊಡಲು ನಿಲ್ಲದೆ ।
ಭರದಿ ದೂತರು ಬಂದು ಮಾಗಧ ।
ದೊರೆಗೆ ಹದನವ ತಿಳುಹಿ ಚೈದ್ಯನೃಪಾಲನಿದ್ದೆಡೆಗೇ ॥
ಹರುಷದಿಂ ನಡೆತಂದು ರಾಯನ ।
ಚರಣಕಾನತರಾಗಿ ವಸ್ತ್ರಾ ।
ಭರಣ ಲೇಖನವಿತ್ತು ಬಿನ್ನೈಸಿದರು ವಿನಯದಲೀ ॥೮೨॥

**ರಾಗ ಸಾರಂಗ, ಅಷ್ಟತಾಳ**

ಕೇಳಯ್ಯ ಚೈದ್ಯಭೂಪಾ । ಸತ್ಕುಲದೀಪ । ಕೇಳಯ್ಯ ಚೈದ್ಯಭೂಪಾ ॥ ಪಲ್ಲವಿ ॥

ಜನಪ ಭೀಷ್ಮಕರಾಯನೂ । ತನ್ನಯ ಮುದ್ದು । ತನುಜೆ ವೈದರ್ಭಿಯನ್ನೂ ॥
ವನಜನಾಭನಿಗೀವೆ । ನೆನುತ ಯೋಚಿಸೆ ರುಗ್ಮ । ಘನರೋಷವನು ತಾಳಿ । ನಿನಗೆ ನಿಶ್ಚೈಸಿದ ॥೮೩॥

ಬರೆದ ಲೇಖನವ ನೋಡೀ । ಬಂಧುಗಳನ್ನು । ನೆರಹಿ ಭೂಭುಜರ ಕೂಡೀ ॥
ಭರದೊಳಲ್ಲಿಗೆ ಬಂದು । ಹರುಷದಿ ಧಾರೆಯ । ನೆರೆದುಕೊಳ್ಳುವುದೆಂದು । ಧರಣೀಶ ಪೇಳಿದ ॥೮೪॥

ತಂಗಿಯ ನಿನಗೀವೆನೂ । ಗೋಕುಲದ ಶ್ರೀ । ರಂಗ ಬಂದರೆ ಗೆಲ್ವೆನೂ ॥
ತುಂಗವಿಕ್ರಮನಂತ । ರಂಗ ನಿನ್ನೊಳು ಕೋಮ । ಲಾಂಗಿ ರುಗ್ಮಿಣಿ ಬೆಡ । ಗಿಂದರಂಜಿಪಳಯ್ಯ ॥೮೫॥

**ರಾಗ ಶಂಕರಾಭರಣ, ಮಟ್ಟೆತಾಳ**

ಚರರು ಪೇಳ್ದ ನುಡಿಯ ಕೇಳಿ । ಭರದಿ ಹರುಷವನ್ನು ತಾಳಿ ।
ಸಿರಿಯುಸೇರ್ದಳೆನಗೆ ಇನ್ನು । ಸರಿಯದಾವನೂ ॥೮೬॥

ಕೇಳು ಮಂತ್ರಿ ರುಗ್ಮಭೂಪ । ಶೀಲಭಾಗ್ಯನಿಧಿಯು ತಾನು ।
ಬಾಲಸ್ನೇಹದಿಂದಲೆನ್ನ । ಮೇಲೆ ದಯದಲೀ ॥೮೭॥

ಶೀಲಗುಣವಿಶಾಲಳಾದ । ಶ್ರೀಲತಾಂಗಿಯನ್ನು ಎನಗೆ ।
ನಾಳೆ ಕೊಡುವೆ ಬಪ್ಪುದೆಂದು । ಓಲೆ ಬರೆದಿಹಾ ॥೮೮॥

ಒಡನೆ ಬಪ್ಪೆ ನೀನು ರುಗ್ಮ । ನೆಡೆಗೆ ಪೋಗಿ ವಹಿಲದಲ್ಲಿ ।
ನುಡಿವುದಾತನಿರವ ತಿಳಿದು । ಮಡದಿರನ್ನೆಗೇ ॥೮೯॥

ತೊಡುವದುಡುವ ಮುಡಿವದಿಡುವ । ಪಿಡಿದು ನೋಳ್ಪ ದಿವ್ಯ ವಸ್ತು ।
ಒಡವೆಗಳನು ಕೊಡಿಸು ಬಂದ । ಗಡಣ ತಿಳಿಯಲೀ ‖೯೦‖

ಎನುತಲಿನಿತು ವಸ್ತುಗಳನು । ಕ್ಷಣದಿ ತರಿಸಿ ಕೊಡಿಸಿ ನೋಡಿ ।
ದಣಿದ ತೆರದ ದೂತರಿಂಗೆ । ಕನಕವಸನವಾ ‖೯೧‖

ವಿನಯದಿಂದಲಿತ್ತು ಕಳುಹೆ । ಅನಿಲವೇಗದಲ್ಲಿ ಮಂತ್ರಿ ।
ಜನಪ ರುಗ್ಮನೆಡೆಗೆ ಬಂದ । ಜನಸಮೂಹದೀ ‖೯೨‖

**ರಾಗ ಭೈರವಿ, ಝಂಪೆತಾಳ**

ಬಂದ ವಾರ್ತೆಯ ಕೇಳಿ । ಮಂದಿರಕೆ ಕರೆತಂದು ।
ಅಂದದಿಂದುಪಚರಿಸು । ತೆಂದ ವಿನಯದಲೀ ‖೯೩‖

ಕೇಳಯ್ಯ ಮಂತ್ರಿ ಶಿಶು । ಪಾಲಕ್ಷೇಮವೆ ಪ್ರಜೆಯ ।
ಪಾಲಿಪನೆ ಮಗಧಭೂ । ಪಾಲ ಹಿತಕರನೇ ‖೯೪‖

ಎಡಬಲದ ಭೂಮಿಪರು । ಕೊಡುತಿಹರೆ ಕಪ್ಪವನು ।
ಒಡನೆ ಬಂಧುಗಳು ಸುಖ । ಪಡುವರೇನಯ್ಯಾ ‖೯೫‖

**ವಚನ**

ಇಂತೆಂದ ರುಗ್ಮನೊಡನೆ ಮಂತ್ರಿಯು ಏನೆನುತಿರ್ದನು ಎಂದರೆ -
**ರಾಗ ಮಾರವಿ, ಅಷ್ಟತಾಳ**

ಕೇಳಯ್ಯ ರುಗ್ಮಭೂಪಾಲ ಗುಣಶೀಲಾ ।
ಸ್ಥೂಲರಿಪುಜಾಲಕಾಲಾಗ್ನಿರೂಪಾ ‖ ಪಲ್ಲವಿ ‖

ಧರಣೀಶ ಶಿಶುಪಾಲ ಕ್ಷೇಮವಾಗಿಹನಯ್ಯಾ ।
ಸರಿರಾಯರೆಲ್ಲ ಕಪ್ಪವನೀವರಯ್ಯಾ ‖
ಪರಿವಾರ ಪ್ರಜೆ ಎಲ್ಲ ಸುಖದಿಂದಲಿಹರು ।
ನೆರೆಬಂಧುಗಳು ಸುಖದಿಂದ ಬಾಳಿಹರು ‖೯೬‖

ಮಗಧಪೃಥ್ವೀಶನು ಸ್ನೇಹದಿ ನಡೆವ ।
ಮಿಗೆ ನೀವು ತನಗೆ ಬಂಧುಗಳೆಂದು ನುಡಿವ ‖
ಅಗಜೆನಾಥನ ಪಾದಯುಗವ ಧ್ಯಾನಿಸುವ ।
ಪಗೆ ಎಂದು ಪೇಳುವ ಖಗಯಾನನಿರವ ‖೯೭‖

ನಿಮ್ಮ ಓಲೆಯ ನೋಡಿಕೊಂಡು ತೋಷದಲಿ ।
ಸುಮ್ಮಾನವನು ತಾಳಿ ಪ್ರೀತಿಭಾವದಲಿ ॥
ನಮ್ಮ ಕಳುಹಿದರಿಂ ಬಂದೆ ನಾವಿಲ್ಲಿ ।
ಸಂಬಂಧ ಒಳ್ಳಿತೈ ಬಂಧುವರ್ಗದಲಿ ॥೯೮॥

**ಭಾಮಿನಿ**

ಮತ್ತೆ ಕೇಳೈ ಭೂಪ ನಮ್ಮ ನೃ ।
ಪೋತ್ತಮನು ಮನದೊಳಗೆ ಸಂತಸ ।
ವೆತ್ತು ಕಳುಹಿದ ಸಕಲ ಆಭರಣಾದಿ ವಸನಗಳಾ ॥
ಇತ್ತು ಬಪ್ಪುದು ನಿಮಗೆ ನಿಮ್ಮಯ ।
ಚಿತ್ತದೊಲವನು ತಿಳಿದು ಲಲನೆಗೆ ।
ಪೆತ್ತವರ್ಗನುತೀಯೆ ಕಳುಹಿದ ಕೊಳ್ಳು ನೀನೆಂದಾ ॥೯೯॥

**ರಾಗ ಕೇತಾರಗೌಳ ಅಷ್ಟತಾಳ**

ಎಂದ ಮಾತನು ಕೇಳಿದಾ । ಭೂಪತಿ ಸಾ । ನಂದದಿಂದಲಿ ನೋಡಿದಾ ॥
ಮಂದಗಮನೆ ಬಳಿಗೇ । ತಾನೇ ಕಳುಹುವೆ । ತಂದೆ ಭೀಷ್ಮಕನೆಡೆಗೇ ॥೧೦೦॥

ಅತಿ ಬೇಗದಲಿ ಪೋಗಯ್ಯಾ । ಮಂತ್ರೀಶ ನೀ । ಮತಿಯುತನಹುದಯ್ಯಾ ॥
ಕ್ಷಿತಿನಾಥ ಶಿಶುಪಾಲನೂ । ಇತ್ತುದನೆಲ್ಲ । ಹಿತದಿಂದ ಕೊಡಿಸು ನೀನೂ ॥೧೦೧॥

**ವಾರ್ಧಕ**

ಇನಿತು ಪೇಳಿದ ವಾಕ್ಯವನು ಕೇಳ್ದು ಮಂತ್ರೀಶ ।
ಘನಬೇಗದಿಂ ಬರಲು ಗುಣನಿಧಿಯು ಕಾಣುತರ ।
ಮನೆಯ ಬಾಗಿಲ ಚರರು ಜನಪಂಗೆ ಬಿನ್ನವಿಸೆ ಅನುಮಾನವಂ ತಾಳ್ದನೂ ॥
ವಿನಯದಿಂ ಕರೆಸೆ ಪದವನಜಯುಗ್ಮಕೆ ನಮಿಸಿ ।
ನಿನಗೆ ಕಳುಹಿದ ಚೈದ್ಯನೆನುತಾಗ ಮುದದಿ ನೂ ।
ತನ ವಸನ ಗಜ ವಾಜಿ ಕನಕ ಭೂಷಣಗಳನು ಮನವೊಲಿಯೆ ತಾನಿತ್ತನೂ ॥೧೦೨॥

**ರಾಗ ಘಂಟಾರವ, ಏಕತಾಳ**

ಬಂದ ಮಂತ್ರೀಶಗಾಸನವಿತ್ತು ವಿನಯದಿಂ । ತಂದ ವಾಹನ ವಸ್ತುಗಳ ನೋಡಿ ಮುದದೀ ॥
ಇಂದು ನಿಮ್ಮೊಡೆಯನೇತಕೆ ಇದನು ಕಳುಹಿದನೆ । ಮ್ಮಿಂದಲಾಗುವುದೇನು ಪೇಳಯ್ಯ
ಮಂತ್ರೀ ॥೧೦೩॥

**ರಾಗ ಸಾಂಗತ್ಯ, ಮಟ್ಟೆತಾಳ**

ಧರಣೀಶ ಕೇಳ್ನಿಮ್ಮ ತನುಜಾತಿಯನು ನಮ್ಮ
ದೊರೆ ಚೈದ್ಯಭೂಪನಿಗೊಲಿದೂ ॥
ಕರುಣದಿಂದೀಯಬೇಕೆನುತ ಕೇಳಲು ಬಂದೆ ।
ಮರೆಯ ಮಾತಲ್ಲ ಭೂಪಾಲ ॥೧೦೪॥

**ರಾಗ ಪಂತುವರಾಳಿ ಏಕತಾಳ**

ಪೆಣ್ಣಿದ್ದ ಬಳಿಯಲ್ಲಿ ಕೇಳುವುದುಚಿತ ಸಂ ।
ಪನ್ನನಹುದು ಶಿಶುಪಾಲ ಭೂಲೋಲಾ ॥
ಕನ್ನೆಯ ಪಣೆಯಲ್ಲಿ ವಿಧಿ ತಾನು ಬರೆದಿರ್ಪು ।
ದನ್ನು ಮೀರುವರ್‍ಯಾರು ಕೇಳಯ್ಯ ಮಂತ್ರೀ ॥೧೦೫॥

**ರಾಗ ಸಾವೇರಿ, ಆದಿತಾಳ**

ಏನ ಮಾಡಲಿ ರಾಯ । ಯತ್ನವ ಮಾಡಯ್ಯ । ಸಾನುಕೂಲವು ದೈವಾಧೀನಾ ॥
ಮಾನವಧೀಶ (ನಿನ್ನ) ಮಗನ । ಮಾನ್ಯನೆನಿಸುತ ಪ್ರ । ವೀಣ ನಿನಗೇಕನುಮಾನಾ ॥೧೦೬॥

**ರಾಗ ಸಾಂಗತ್ಯ, ಮಟ್ಟೆತಾಳ**

ಇಂತು ಪೇಳುತ ಬೀಳುಗೊಂಡು ಮಂತ್ರೀಶ ತಾ । ಸಂತೋಷದಲಿ ರುಗ್ಮನೆಡೆಗೇ ॥
ಅಂತಸ್ಥ ಹೀಗೆಂದು ಅರುಹಲ್ಕೆ ಕೋಪದಿ । ತಾಂ ತಳುವದೆ ರುಗ್ಮನೆಂದಾ ॥೧೦೭॥

**ಭಾಮಿನಿ**

ಕೇಳು ಮಂತ್ರಿಯೆ ತಾತ ವೃದ್ಧನು ।
ಪೇಳಿದುದು ನಿಜವಾಗಿ ತೋರ್ಪುದು ।
ಮೇಲೆ ನಡೆಸುವ ಭಾರ ನಮ್ಮದು ಚಿಂತೆ ಏಕಿದಕೇ ॥
ನಾಳೆ ಲಗ್ನವು ಬರಲಿ ಬಾಂಧವ ।
ಜಾಲಸಹಿತಲೆ ಚೈದ್ಯ ಧರಣೀ ।
ಪಾಲನೆನುತಲಿ ಕಳುಹಿದನು ಸುಪ್ರೇಮಭಾವದಲೀ ॥೧೦೮॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಅತ್ತ ಚೈದ್ಯನ ಬಳಿಗೆ ಸಂತಸ । ವೆತ್ತು ಸಚಿವನು ಪೋಗೆ ರುಗ್ಮನು ।
ಸುತ್ತಣವರನು ಕರೆಸಿಕೊಂಬೆನೆ । ನುತ್ತಲಾಗಾ ॥೧೦೯॥

ಧರಣಿಪರಿಗುಡುಗೊರೆಯ ಓಲೆಯ । ಚರರ ಕೈಯಲಿ ಕೊಟ್ಟು ಕಳುಹಲು ।
ಬರುತಲಿದ್ದರು ಭೂಮಿಯಗಲಕೆ । ಹರುಷದಿಂದಾ ॥೧೧೦॥

ದಿಟ್ಟರುಗ್ಮನು ಚೈದ್ಯನೃಪ ಮನ । ಮುಟ್ಟಿ ಕಳುಹಿದ ಸಕಲ ವಸ್ತುವ ।
ಬಟ್ಟೆಕುಚೆಯರ ಕೈಯ ತಂಗಿಗೆ । ಕೊಟ್ಟನಾಗಾ ॥೧೧೧॥

ಫುಲ್ಲನಯನೆಯರೊಳ್ಳಿತೆನುತಲಿ । ಸಲ್ಲಲಿತ ಸಭೆಯೊಳಗೆ ಒಪ್ಪುವ ।
ಫುಲ್ಲನೇತ್ರೆಯ ಬಳಿಯೊಳಿರಿಸುತ । ಸೊಲ್ಲಿಸಿದರೂ ॥೧೧೨॥

**ರಾಗ ಕಾಂಭೋಜಿ ಝಂಪೆತಾಳ**

ಕೇಳು ಲಲಿತಾಂಗಿ ಗುಣ । ಶೀಲೆ ಚೈದ್ಯನು ನಿಮ್ಮ । ಮೇಲೆ ಮನಸಿಟ್ಟು ಸಂಭ್ರಮದೀ ॥
ಭೂಲೋಲ ಹರುಷವಂ । ತಾಳಿ ನಿಮ್ಮಣ್ಣನಿಗೆ । ಓಲೆಯ ಬರೆದು ವೇಗದಲೀ ॥೧೧೩॥

ಕನಕ ರತ್ನಾಭರಣ । ವನು ಕಳುಹೆ ನಿನಗೀವು । ದೆನುತಿತ್ತ ರುಗ್ಮ ನಮ್ಮುವನೇ ॥
ಮನದೊಳಗೆ ಮತ್ತೊಂದು । ನೆನೆಯದೆಲ್ಲವ ನೋಡಿ । ವಿನಯದಿಂ ನಲಿದಾಡು ತಾಯೇ ॥೧೧೪॥

ಕುಲದೊಳುತ್ತಮ ಭೂಪ । ರೊಳಗಧಿಕ ವೆಗ್ಗಳನು । ಮಲೆತ ರಿಪುಸಂಹಾರಿಧೀರಾ ॥
ಇಳೆಯೊಳಗೆ ಇಂತಿಪ್ಪ । ಚೆಲುವ ಪುರುಷನ ಕಾಣೆ । ನಳಿನಾಕ್ಷಿ ನೀನಾಲಿಸಮ್ಮಾ ॥೧೧೫॥

ಆತನೊಲಿದರೆ ನಿನಗೆ । ಭೂತಳಾಧಿಪರೆಲ್ಲ । ದೂತರಾಗಿಹರಮ್ಮ ನಿರತಾ ॥
ನೀ ತಿಳಿಯದವಳೆ ಮ । ತ್ತೇನು ಶಿಶುಪಾಲ ಭೂ । ನಾಥನೈತಹ ನಾಳೆ ನೋಡೂ ॥೧೧೬॥

ಇಂತು ಪೇಳುತಲಿಪ್ಪ । ಕಾಂತೆಯರ ನುಡಿ ಕೇಳಿ । ಸಂತಾಪವನು ತಾಳ್ದು ಮನದೀ ॥
ಅಂತರಂಗದಲಿ ಶ್ರೀ । ಕಾಂತನನು ನೆನೆದು ಗುಣ । ವಂತೆ ನುಡಿದಳು ದೈನ್ಯದಿಂದಾ ॥೧೧೭॥

**ಭಾಮಿನಿ**

ಲಲನೆಯರ ನೀವೇಕೆ ಪೇಳ್ವಿರಿ ।
ಕೆಲರ ಸುದ್ದಿಯ ನಮ್ಮ ರುಗ್ಮನು ।
ಕಳುಹಿದೊಡವೆಯನಿತ್ತು ಪೋಪುದು ಬಂದ ಮಾರ್ಗದಲೀ ॥
ಜಲಜಸಂಭವ ಬರೆದ ಬರೆಹದ ।
ನೆಲೆಯ ಕಂಡವರಾರು ದಾನವ ।
ಕುಲವಿರೋಧಿಯೆ ಬಲ್ಲನೆಂದಳು ಸುಯ್ದು ಲಲಿತಾಂಗೀ ॥೧೧೮॥

**ರಾಗ ಮಾರವಿ ಝಂಪೆತಾಳ**

ಎನಲು ಕೇಳುತಲಾಗ । ವನಿತೆಯರು ದುಗುಡದಿಂ ।
ಜನಪನಲಿ ಬರಲಾಗ । ಮನದಿ ರುಗ್ಮಿಣಿಯೂ ॥೧೧೯॥

ಅಣ್ಣನೆಂಬುವನೆನಗೆ । ಹಣ್ಣಿದನು ಮೃತ್ಯುವನು ।
ಇನ್ನಾರು ಗತಿ ಎನುತ । ಕಣ್ಣೀರಗರೆದೂ ॥೧೨೦॥

ಮರುಗಿದಳು ಶೋಕಾಗ್ನಿ । ಯುರವಣಿಸಿ ತನುಗುಂದಿ ।
ಪೊರಳಿದಳು ಧರಣಿಯೊಳು । ಹರಿಯ ನೆನೆನೆನೆದೂ ॥೧೨೧॥

ಸಾಟಿಯಲ್ಲದವಂಗೆ । ಕೊಡುವನೆನ್ನನು ಚಂದ್ರ ।
ಜೂಟನರ್ಧಾಂಗಿ ಸಲಹೆನುತಾ ॥೧೨೨॥

ಊಟವಂ ಮಾಡದಾ । ದಳು ಮಾತನಾಡಳೈ ।
ನೋಟವಂ ನೀಗಿ ಅನ್ಯರಲೀ ॥೧೨೩॥

ಏಕೆ ಪುಟ್ಟಿದೆನಯ್ಯೊ । ಪೆಣ್ಣಾಗಿ ಧರೆಯೊಳು ವಿ ।
ವೇಕವಿಲ್ಲದ ಜ್ಯೇಷ್ಠನೊಡನೇ ॥೧೨೪॥

ಸಾಕು ಸಾಕೀ ತನುವ । ತ್ಯಜಿಸಿ ಜನ್ಮಾಂತರದೊ ।
ಳ್ನಾ ಕಾಂಬೆ । ಹರಿಪದಾಂಬುಜವಾ ॥೧೨೫॥

ಯಾತುಧಾನನು ಎನ್ನ । ಮೋತಿಪ್ಪ ಪಾಪಾತ್ಮ ।
ನಾತನಾ ಕೈಯಾರೆ ಕೊಲಲೀ ॥೧೨೬॥

ಮಾತೆ ಎಂಬಳು ಕಾಳ । ಕೂಟವನೆ ಕೊಡಲೀಗ ।
ಭರ್ತೃವೇ ಮೃತ್ಯುರೂಪಕನೂ ॥೧೨೭॥

ಎಂದೆನುತ ಮೂರ್ಛೆಯೊಳು । ಬೀಳಲಾ ದಾಸಿಯರು ।
ತಂದು ಪನ್ನೀರ ಗಿಂಡಿಯಲೀ ॥೧೨೮॥

ಕಂದಿದಾನನವನ್ನು । ತೊಳೆದಾಗ ಬೀಸಣಿಗೆ ।
ಯಿಂದ ಬೀಸಿದರು ಬೇಗದಲೀ ॥೧೨೯॥

ಗಾಳಿ ಸೋಕಲು ಗಾತ್ರ । ಕಣ್ತೆಳಕು ಪಾರುತ್ತ ।
ಕಾಳಾಹಿವೇಣಿ ರುಗ್ಮಿಣಿಯೂ ॥೧೩೦॥

ಲೋಲಾಕ್ಷಿಯರ ನೋಡಿ । ಕೊರಳಪ್ಪಿ ದುಗುಡದಿಂ ।
ಬಾಲೆ ತಾ ನುಡಿದಳೀ ತೆರದೀ ॥೧೩೧॥

**ರಾಗ ಶಂಕರಾಭರಣ ಅಷ್ಟತಾಳ**

ಏನ ಪೇಳೆಲಿನ್ನೂ । ನಾ ಪಡೆದುದ । ಕ್ಕೇನು ಮಾಡಲಿನ್ನೂ ॥ ಪಲ್ಲವಿ ॥

ತಂದೆಯಾದಿಯೊಳೂ । ಮಾತೆಯು ಸಾ । ನಂದದಿ ಬಂಧುಗಳೂ ॥
ನಂದ ನಂದನಗೀವೆ । ನೆಂದು ಯೋಚಿಸೆ ರುಗ್ಮ । ಬಂದು ಕೇಳಿದನೂ । ವಾರ್ತೆಯನೂ ॥೧೩೨॥

ಪರಮಾಪ್ತ ಚೈದ್ಯನೆಂದೂ । ಸಿದ್ಧವ ಮಾಡಿ । ಬರೆಸಿ ಓಲೆಯ ತಾನಿಂದೂ ॥
ಬರಲಿ ತಾನೆನುತೀಗ । ಚರರ ಕೈಯಲಿ ಕೊಟ್ಟು । ಭರದೊಳಟ್ಟಿರ್ದನಂತೇ । ತಾನಂತೇ ॥೧೩೩॥

ನಾಳೆ ಲಗ್ನವಂತೇ । ಚೈದ್ಯನೆಂಬ । ಖೂಳಬರುವನಂತೇ ॥
ಪಾಲೊಳಗೆರೆದನು । ಕಾಲಕೂಟವ ತಾನು । ಕಾಳುಮಾಡಿದನೆನ್ನನೂ । ಇನ್ನೇನೂ ॥೧೩೪॥

**ಭಾಮಿನಿ**

ಪಿಂತೆ ಮಾಡಿದ ಕರ್ಮವಿದು ತನ ।
ಗಿಂತು ತೋರ್ಪುದೆನುತ್ತ ಮರುಗುವ ।
ಕಂತುಜನನಿಯ ಪರಿಯ ಕಾಣುತ ತೀವ್ರಗಮನದಲೀ ॥
ಕಾಂತೆಯೋರ್ವಳು ಬಂದು ಧರಣೀ ।
ಕಾಂತನರಸಿಗೆ ಪೇಳಲಾಕ್ಷಣ ।
ಚಿಂತಿಸುತ ನಡೆತಂದು ಪೇಳ್ದಳು ಸುತೆಗೆ ಸೈರಣೆಯಾ ॥೧೩೫॥

**ರಾಗ ಸೌರಾಷ್ಟ್ರ, ಅಷ್ಟತಾಳ**

ಮಗಳೆ ನಿನ್ನಯ ಮುದ್ದು । ಮೊಗವೇಕೆ ಕಂದಿತು । ಸುಗುಣೆ ಪೇಳೇ ॥ ಈಗ ।
ದೃಗುಯುಗದಲಿ ವಾರಿ । ಸುರಿವ ಕಾರಣವೇನು । ಮಗಳೆ ಪೇಳೆ ॥೧೩೬॥

ದುಗುಡವಿದೇನವ್ವ । ತೆಗೆಯೆ ಗಲ್ಲದ ಕೈಯ । ನಾಗವೇಣೀ ॥ ಆವ ।
ಬಗೆಯೊಳರುಹು ಇಂಥ । ಹಗರಣ ಬೇಡ ಕೇಳ್ । ಕೀರವಾಣೀ ॥೧೩೭॥

**ರಾಗ ಭೈರವಿ ರೂಪಕತಾಳ**

ಪೇಳಲೇನವ್ವಾ । ತಾಯೆ । ಪೇಳಲೇನವ್ವಾ ॥ ಪಲ್ಲ ॥

ಪೇಳಿ ಮಾಳ್ಪುದೇನು ನಿಮ್ಮ । ಬಾಲರುಗ್ಮ ಚೈದ್ಯನೆಂಬ ।
ಖೂಳನಿಂಗೆ ಕೊಡುವನೆನ್ನ । ನಾಳೆ ನಡೆವ ದಿವಸದೀ ॥ ಪೇಳಲೇನವ್ವಾ ॥೧೩೮॥

ಕಾಲನಾದನಣ್ಣನೆನಗೆ । ಬಾಳಲಾರೆ ನಾನು ಜಗದಿ ।
ನೀಲವರ್ಣ ಬಿಟ್ಟನೆನ್ನ । ಮೇಲೆ ದಯವ ಮಾಡದೇ ॥ ಪೇಳಲೇನವ್ವಾ ॥೧೩೯॥

**ರಾಗ ಕಲ್ಯಾಣಿ ಝಂಪೆತಾಳ**

ಸೈರಿಸಲು ಬೇಕವ್ವ । ಸಿರಿದೇವಿ ನೀನೀಗ ।
ವೈರಿಗಳು ತಮ್ಮಿಂದ । ತಾವೆ ಅಳಿಯುವರೂ ॥೧೪೦॥

ಜನನಕಾಲದಿ ಲಗ್ನ । ವನು ನೋಡಿ ಜೋಯಿಸರು ।
ಗುಣಿಸಿ ಪೇಳ್ದರು ಲೋಕ । ಜನನಿ ಎಂದೂ ॥೧೪೧॥

ನಿನಗೆ ಸಂಶಯ ಬೇಡ | ಅನಿಮಿಷರು ಪೂಮಳೆಯ |
ವಿನಯದಿಂ ಕರೆಯಲದು | ಘನಮಹಿಮೆಯ್ಯೆಸೇ ||೧೪೨||

ಇಳೆಯ ಭಾರವನೆಲ್ಲ | ಕಳೆಯಬೇಕೆನುತೀಗ |
ಕಲಹವನು ಹಣ್ಣಿದನು | ಕಮಲನಾಭಾ ||೧೪೩||

ತಿಳಿದು ನೋಡವ್ವ ನಿ | ನ್ನೊಳಗೆ ನೀನೀ ಪರಿಯ |
ಬಳಲದಿರು ನಿನಗಾತ | ನೊಲಿವ ನಿಶ್ಚಯವೂ ||೧೪೪||

**ವಚನ**

ಈ ಪ್ರಕಾರದಿಂ ಸುತೆಗೆ ಸೈರಣೆ ಪೇಳ್ದಂತಃಪುರಕಂ ಪೋಗಲಿತ್ತಲು ಕಾಂತೆಯರು ರುಗ್ಮನೆಡೆಗೈತಂದೇನೆನುತಿರ್ದರದೆಂತೆನೆ --

**ರಾಗ ಮಾರವಿ, ಅಷ್ಟತಾಳ**

ಕೇಳಯ್ಯ ರುಗ್ಮಭೂಪಾ | ಮನ್ಮಥರೂಪ || ಕೇಳಯ್ಯ || ಪಲ್ಲ ||

ತರಳೆ ರುಗ್ಮಿಣಿಗೆ ನೀವೂ | ಇತ್ತುದನೆಲ್ಲ | ಭರದಿಂದ ಪೋಗಿ ನಾವೂ ||
ಚರಣ ಕಾನತರಾಗಿ | ಪರಿಪರಿ ವಿಧದಿಂದ |
ಒರೆದು ಮುದ್ದಿಡಲಾಗ | ಹರುಷಗೊಳ್ಳದೆ ಪೇಳ್ದಳ್ ||೧೪೫||

ಬದಲು ಮಾತೇತಕಿಂದೂ | ಅಣ್ಣಯ್ಯ ಕೊ | ಟ್ಟುದನಿತ್ತು ಪೋಪುದೆಂದೂ ||
ವಿಧಿಯ ಕಟ್ಟಳೆ ಏನುಂ | ಟದ ಬಲ್ಲ ಹರಿ ಎಂದು |
ಹೃದಯ ಬೇರಾಗಿದೆಂ | ಬುದು ಪುಸಿಯಲ್ಲ ಸಿದ್ಧ ||೧೪೬||

**ದ್ವಿಪದಿ**

ಎಂದು ಪೇಳ್ದುದ ರುಗ್ಮ ಯೋಚಿಸುತ ಮನದೀ |
ನೊಂದು ಮಂತ್ರಿಯನು ಕರೆದೆಂದ ಸಂಶಯದೀ ||೧೪೭||

ಅನುಜೆಯನು ಶಿಶುಪಾಲಭೂಪನಿಗೆ ತಾನೂ |
ವಿನಯದಿಂದಲಿ ಕೊಡುವೆ ನಗರವನು ನೀನೂ ||೧೪೮||

ಭರದಿ ಶೃಂಗರಿಸೆನಲು ಕೇಳಿ ಕೈಮುಗಿದೂ |
ತರಿಸಿದನು ಪರಿಪರಿಯ ವಸ್ತುಗಳನೊಲಿದೂ ||೧೪೯||

ಚಪ್ಪರಂಗಳ ಸೊಬಗಿನಿಂದ ವಿರಚಿಸಿದಾ |
ಒಪ್ಪುವಂದದಿ ಮೇಲು ಕಟ್ಟು ಕಟ್ಟಿಸಿದಾ ||೧೫೦||

ಗೊನೆಸಹಿತ ರಂಜಿಸುವ ಸಾಲುಕದಳಿಗಳೂ ।
ಮನೆ ಮನೆಯ ಮುಂದೆ ಬಣ್ಣದ ಪತಾಕೆಗಳೂ ॥೧೫೧॥

**ರಾಗ ಕೇತಾರಗೌಳ ಅಷ್ಟತಾಳ**

ಕೇರಿಕೇರಿಗಳೊಳಗೊಪ್ಪಿತು ಕುಂಕುಮ । ಸಾರಣೆ ಕಸ್ತೂರಿಯಾ ॥
ತೋರ ಮುತ್ತಿನ ರಂಗೋಲೆಯು ಸೊಬಗಿಂದ । ತೋರಿತು ಬೀದಿಯೊಳೂ ॥೧೫೨॥

ನವರತ್ನಖಚಿತದಿಂ ಧಾರೆಮಂಟಪ ರಾಜ । ಭವನಂಗಳೆಸೆವುತಲೀ ॥
ನವಖಂಡ ಪೃಥ್ವೀಶರಿಂಗಿಹ ಸ್ಥಾನವು । ವಿವಿಧದಿಂದೊಪ್ಪಿತಲ್ಲೀ ॥೧೫೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅತ್ತಲಾ ಮಂತ್ರೀಶ ಚೈದ್ಯನೃ । ಪೋತ್ತಮನ ಬಳಿಗೈದಿ ರುಗ್ಮನ ।
ಚಿತ್ತದುತ್ಸಹಗಳನು ಸಭೆಯೊಳು । ಬಿತ್ತರಿಸಿದಾ ॥೧೫೪॥

ನಾಳೆ ಲಗ್ನವು ಬರಲಿ ಬಾಂಧವ । ಜಾಲ ಸಹಿತದಿ ನಿಮಗೆ ಪಂಕಜ ।
ಲೋಲನೇತ್ರೆಯ ಕೊಡುವೆನೆಂದನು । ಭೂಲಲಾಮಾ ॥೧೫೫॥

ತಡವಮಾಡುವ ಕಾರ್ಯವಲ್ಲಿದು । ನಡೆಯಲೀ ಕ್ಷಣ ಸಕಲಸೇನೆಯು ।
ಪೊಡವಿಪರ ಕರೆಸೆಂದು ಮಂತ್ರಿಗೆ । ನುಡಿದ ಬೇಗಾ ॥೧೫೬॥

**ರಾಗ ಮುಖಾರಿ ಆದಿತಾಳ**

ಇಂತು ಸಚಿವಗಾಜ್ಞೆಯಿತ್ತು । ಚೈದ್ಯನಾಗಾ ॥ ಭೂಮಿ ।
ಕಾಂತ ಜರೆಯ ಸುತರ ಕೂಡಿ । ಕೊಂಡು ಬೇಗಾ ॥೧೫೭॥

ಭರದಿ ಮಗಧರಾಯನಿಂದ । ಕೇಳಿಕೊಂಡೂ ॥ ಚೈದ್ಯ ।
ಹರುಷದಿಂದ ದೇವಕಾರ್ಯ । ಮಾಡಿಕೊಂಡೂ ॥೧೫೮॥

ಚಾರುತರ ಬಾಸಿಗವ ಕಟ್ಟಿ । ನಲವಿನಿಂದಾ ॥ ಸರ್ವ ।
ಧಾರಿಣೀಶರನ್ನು ಕೂಡಿ । ಪೊರಟುಬಂದಾ ॥೧೫೯॥

**ರಾಗ ಸೌರಾಷ್ಟ್ರ ಅಷ್ಟತಾಳ**

ಬರಲಾಗ ವಾಜಿ ಕಣ್ಣೀರ ಸುರಿಸಿತು ದಿವ್ಯ ।
ಕರಿಯು ತೂರಿತು ಮಣ್ಣ ಶಿರದೊಳಾಕ್ಷಣದೀ ॥೧೬೦॥

ತೂಗಿತು ಭೂಮಿಯು ಬೀಸಿತು ಬಿರುಗಾಳಿ ।
ಭೋಗಿಯು ಕಾಣಿಸಿಕೊಂಡವಲ್ಲಲ್ಲೀ ॥೧೬೧॥

ಕೂಗಿತು ಪಳ್ಳು ಮಾರ್ಜಾಲ ಒಡ್ಯಾಡಿತು ।
ಕಾಗೆಗಟ್ಟಿತು ಪಾರ್ವನೋರ್ವನೈತಂದಾ ॥೧೬೨॥

ನೋಡಿ ನೋಡದೆ ಬಂದ । ರವಶಕುನವನೆಲ್ಲ ।
ಮೂಢಾತ್ಮ ಮಾಗಧರಾಯನಾಜ್ಞೆಯಲೀ ॥೧೬೩॥

ಕೂಡಿ ದಿಬ್ಬಣ ಬಂದುದೆಂಬ ವಾರ್ತೆಯ ಕೇಳಿ ।
ಗಾಢದಿ ರುಗ್ಮಭೂಪಾಲನಿದಿರ್ಗೊಂಡಾ ॥೧೬೪॥

**ರಾಗ ಭೈರವಿ ಝಂಪೆತಾಳ**

ತಂದೆ ಭೀಷ್ಮಕರಾಯ । ತಾಯಿ ಚಂದ್ರಾನನೆಯು ।
ಬಂಧುಗಳು ನಿಜಪುರೋ । ಹಿತರು ಜೋಯಿಸರೂ ॥
ಮುಂದೆ ಕನ್ನಡಿ ಕಲಶ । ವೃಂದಸೀಮಂತಿನೀ ।
ವೃಂದಸಹಿತಲೆ ನಡೆ । ತಂದು ದಿಬ್ಬಣದೀ ॥೧೬೫॥

**ಭಾಮಿನಿ**

ಧರಣಿಪರು ನಡೆತಂದ ಕಾರ್ಯವ ।
ತರುಣಿ ರುಕ್ಮಿಣಿ ತಿಳಿದು ಮನದಲಿ ।
ಮರುಗಿ ತನ್ನೊಳು ತಾನೆ ನೆನೆದಳು ತಕ್ಕುಪಾಯವನೂ ॥
ಮುರಹರನ ಸನ್ನಿಧಿಗೆ ಓಲೆಯ ।
ಬರೆದು ನೋಳ್ಪೆನು ತಾನೆನುತ್ತಲಿ ।
ಕರೆಸೆ ದ್ವಿಜಕುಲ ವರನು ಬಂದನು ಬಹಳ ಹರುಷದಲೀ ॥೧೬೬॥

**ರಾಗ ಶಂಕರಾಭರಣ ಆದಿತಾಳ**

ಕರೆದ ಕೆಲಸವೇನು ಪೇಳೆ । ಶ್ರೀಲತಾಂಗೀ ॥ ಪುಣ್ಯ ।
ಚರಿತೆ ಭಾಗ್ಯವಂತೆ ನೀನು । ಶ್ರೀಲತಾಂಗೀ ॥೧೬೭॥

ಏನು ನಿಮ್ಮ ಮನೆಯೊಳಿಂದು । ಶ್ರೀ ಲತಾಂಗೀ ॥ ಈಗ ।
ಸ್ನಾನವನ್ನು ಮಾಡಿ ಬಂದೆ । ಶ್ರೀಲತಾಂಗೀ ॥೧೬೮॥

ನೀನು ಲೋಕಮಾತೆಯೈಸೆ । ಶ್ರೀಲತಾಂಗೀ ॥ ಯಾವ ।
ದಾನವೇನು ದಯಮಾಡಮ್ಮ । ಶ್ರೀಲತಾಂಗೀ ॥೧೬೯॥

**ರಾಗ ಆರಭಿ ರೂಪಕತಾಳ**

ಕೇಳು ಭೂಮಿದೇವ ನಾನು ಪೇಳ್ವ ಮಾತನೂ । ಆ ।
ನೀಲವರ್ಣ ಶತ್ರುವೆನುತ ಅಣ್ಣ ರುಗ್ಮನೂ ॥
ಖೂಳ ಚೈದ್ಯನಿಂಗೆ ನಾಳೆ ಕೊಡುವನೆನ್ನನೂ । ಭೂ ।
ಪಾಲರನ್ನು ಈಗ ತಾನು ಕರೆಸಿಕೊಂಡನೂ ॥೧೭೦॥

ತಂದೆ ಪೇಳ್ದ ಮಾತನೆಲ್ಲ ಕೇಳಲಿಲ್ಲಯ್ಯಾ । ಮುಂದೆ ।
ಬಂದುದೆಲ್ಲ ಬರಲಿ ನೋಳ್ಪೆ ಕೇಳಯ್ಯಾ ॥
ಮಂದಭಾಗ್ಯನೊಡನೆ ಬಾಳಲಾರೆ ನಾನಯ್ಯಾ । ಗೋ ।
ವಿಂದನಲ್ಲದನ್ಯರಿಂಗೆ ಒಲಿಯೆ ತಾನಯ್ಯಾ ॥೧೭೧॥

ಮರುಳ ರುಗ್ಮ ಮಾಡಿದ ವೃತ್ತಾಂತವನ್ನೂ । ನಾನು ।
ಬರೆದು ಕೊಡವೆನಯ್ಯ ನಿನಗೆ ಲಿಖಿತವನ್ನೂ ॥
ಹರಿಯ ಚರಣದೆಡೆಗೆ ಪೋಗಿ ಇತ್ತು ಬೇಗಾ । ಎನ್ನ ।
ಪರಿಯ ತಿಳುಹಿ ಕರೆದುತಾರಯ್ಯ ಈಗಾ ॥೧೭೨॥

ಎನಗೆ ಹಿತನು ನೀನೆಂದು ಒರೆದೆ ನಿನ್ನೊಳೂ । ದುಷ್ಟ ।
ಜನರು ಓರ್ವರರಿಯದಂತೆ ಪೋಗು ಭರದೊಳೂ ॥
ಎನುತ ಪೇಳಿ ಲಿಖಿತವೀಯೆ ವಿಪ್ರ ಮನದೊಳೂ । ಹರಿಯ ।
ಗುಣವ ನೆನೆದ ತಾನೆ ಬಂದನವನು ಮುದದೊಳೂ ॥೧೭೩॥

**ರಾಗ ಸಾಂಗತ್ಯ ರೂಪಕತಾಳ**

ಘನವೇಗದಲಿ ವಿಪ್ರ ಮನದಲ್ಲಿ ಶ್ರೀಕೃಷ್ಣ । ವನಜನಾಭನೆ ರಕ್ಷಿಸೆನುತಾ ॥
ನೆನೆದು ಕೀರ್ತನೆಗಳ ಪಾಡುತ್ತ ಬರೆ ಕಂಡ । ವನಧಿ ರಂಜಿಸುತಿಪ್ಪ ಪರಿಯಾ ॥೧೭೪॥

ಒಡೆದು ಚಿಪ್ಪುಗಳನ್ನು ಪಿಡಿವ ಮುತ್ತುಗಳ ಸರಿ । ಗಡಣವೋಲೆಂಬ ಶೀರ್‌ವರಿಯಾ ॥
ಕಡು ಪರಾಕ್ರಮದಿಂದ ಪೊಡವಿಯೊಳು ಸೂಸುವ । ಬೆಡಗುಗಳ್ ಕಣ್ಗೆ ರಂಜಿಸಿತೂ ॥೧೭೫॥

ಇಂತಿರುವಬ್ಧಿರಾಜನ ನೋಡಿ ಮನದಲ್ಲಿ । ಸಂತಸದಿಂದಲೆ ದ್ವಿಜನೂ ॥
ತಾಂ ತಳುವದೆ ದಾಟಿ । ಬರಲಾಗ ಕಂಡ ಶ್ರೀ । ಕಾಂತನಾಳುವ ರಾಜಸಿರಿಯಾ ॥೧೭೬॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಟ್ಟೆಗಳ ನೋಡುತ್ತಲಿರೆ ಅರ । ವಟ್ಟಿಗೆಗಳಲ್ಲಲ್ಲಿ ಸ್ವರ್ಣದ ।
ಪುಟ್ಟ ಕಲಶದಿ ಪರಿಮಳಾಂಬುವ । ಕುಡಿದನಂದೂ ॥೧೭೭॥

ಸಾಲು ಸಾಲುಗಳಾಗಿ ರಂಜಿಪ । ತಾಳ ಚಂಪಕ ಬಕುಳ ಪಾದರಿ ।
ನಾಳಿಕೇರ ಕದಂಬ ಚಮರಕ । ಚೂತ ವನಸಾ ॥೧೭೮॥

ಚಾಲ ಚಂದನ ಕ್ರಮುಕ ಕುರವಕ | ಬಾಳೆ ಮಲ್ಲಿಗೆ ಜಾಜಿ ಕುಂದ ಲ |
ತಾದಿ ತರುಗುಲ್ಮಗಳ ಸೊಬಗನು | ಕಂಡನವನೂ ||೧೭೯||

**ವಾರ್ಧಕ**

ಬಗೆಬಗೆಯ ತರುಗುಲ್ಮ ಚಿಗುರಿದ್ದ ವನಗಳಂ |
ಸೊಗಸಾದ ಪಣ್ಗಳಿಂದೋರೆಸೆವ ಧಾರೆಯಂ |
ಮಿಗೆ ಮುತ್ತುತಿಹ ಭ್ರಮರ ಮಘಮಘಿಪ ಸುಮಗಳಂ ಖಗನಿಕರ ಮೃಗತಲೆಯನೂ ||
ನೆಗೆನೆಗೆದು ಶಾಖೆಶಾಖೆಗೆ ಹಾರ್ವಕಪಿಗಳಂ |
ನಗೆಯೊಳ್ಕೈತಹ ಜನರು ಮೊಗೆದು ನೀರ್ಗುಡಿವುದಂ |
ದೃಗುಯುಗದಿ ನೋಡುತ್ತ ಪೊಗಳುತ್ತ ಭೂಸುರಂ ನಗರದೆಡೆಗೈತಂದನೂ ||೧೮೦||

**ರಾಗ ಕೇತಾರಗೌಳ ಅಷ್ಟತಾಳ**

ಒಳಪೊಕ್ಕು ನಗರದ ಮೆರೆವ ಗೋಪುರಗಳ | ಕಲಶಕೋಟಿಯ ಕಾಣುತ್ತಾ ||
ಗೆಲವಿನಿಂದಲಿ ಕೈಯ ಮುಗಿದು ಮುಂದಡಿಯಿಟ್ಟು | ಚೆಲುವಾದ ಬೀದಿಯೊಳೂ ||೧೮೧||

ಬತ್ತೀಸಾಯುಧದಿ ಸಮರ್ಥರಾಗಿರುತಿಹ | ಉತ್ತಮ ಕ್ಷತ್ರಿಯರಾ ||
ಮೊತ್ತ ರಾಜಿಸುತಿಪ್ಪ ಮಂದಿರಂಗಳನು ನೋ | ಡುತ್ತ ತಾ ನಡೆತಂದನೂ ||೧೮೨||

ದ್ವಿಜರಾದಿ ಷಟ್ಕರ್ಮಂಗಳನು ಮಾಡುವ ಭೂರಿ | ದ್ವಿಜರ ಮಂದಿರಗಳನೂ ||
ಭಜಿಸಲೋಸುಗ ಬರ್ಪ ಬ್ರಹ್ಮಾದಿ ದೇವ | ವ್ರಜವ ನೋಡುತ ಬಂದನೂ ||೧೮೩||

**ರಾಗ ಕಾಂಭೋಜಿ ಝಂಪೆತಾಳ**

ಕಾರ್ಯ ಸಂಗತಿಗಳನು ದ್ವಾರಪಾಲರಿಗರುಹಿ | ಧೈರ್ಯಮಂ ತಾಳಿ ಒಳಹೊಕ್ಕೂ ||
ಸೂರ್ಯತೇಜವ ಪೋಲ್ವ ಸದ್ಧರ್ಮಸಭೆಯೊಳಿಹ | ಶೌರಿಯನು ಕಂಡ ಬ್ರಾಹ್ಮಣನೂ ||೧೮೪||

**ರಾಗ ಕೇದಾರಗೌಳ ಅಷ್ಟತಾಳ**

ಚರಣಾಬ್ಜಯುಗವನ್ನು ಪೂಜಿಸುತಾಗ ಮ | ತ್ತಿರದೆ ಮಜ್ಜನವ ಗೈಸೀ ||
ಪರಮಾನ್ನಭಕ್ಷ್ಯ ಶಾಲ್ಯೋಗರಾದಿಗಳಿಂದ | ಹರಿಯು ಭುಕ್ತವ ಮಾಡಿಸೀ ||೧೮೫||

ಕಡೆಗೆ ದಕ್ಷಿಣೆ ವೀಳ್ಯವನ್ನಿತ್ತು ನಮ್ರತೆಲಿ | ನುಡಿದನು ತೋಷದಲೀ ||
ಕಡುಭಾಗ್ಯರಾವಾದೆವೆಂದೆನುತಲಿ ಕೈಯ | ಪಿಡಿದೆಂದನಾ ಹರಿಯೂ ||೧೮೬||

ಎಲ್ಲಿಂದೆಲ್ಲಿಗೆ ಬಂದಿರಿ ಯಾವ ದೇಶ ನ | ಮ್ಮಲ್ಲಿ ಕಾರ್ಯವೇನೂ ||
ಸೊಲ್ಲಿಸಬೇಕೆಂದು ನಮಿಸುತ್ತ ದಾನವ | ದಲ್ಲಣ ಬೆಸಗೊಂಡನೂ ||೧೮೭||

ಎಂದ ಮಾತನು ಕೇಳಿ ಭೂದೇವನು ಭಕ್ತಿ | ಯಿಂದ ಪೀಠವನಿಳಿದೂ ||
ಇಂದಿರೇಶನ ನೋಡಿ ಸ್ತುತಿಮಾಡಿ ಓಲೆಯ | ಮುಂದಿಟ್ಟು ಕೈಮುಗಿದಾ ||೧೮೮||

ಕರದಿ ಪತ್ರಿಕೆಯನ್ನು ಪಿಡಿದು ಗೋವಳರಾಯ | ಪರಮ ಆನಂದದಲೀ ||
ತರಳೆ ರುಗ್ಮಿಣಿ ಬರೆದುದನೆಲ್ಲವನತಿ | ಕರುಣದಿಂದಲಿ ನೋಡಿದಾ ||೧೮೯||

**ರಾಗ ಕಾಂಭೋಜಿ ಝಂಪೆತಾಳ**

ಶ್ರೀರಮಣಿಯರಸ ಸುವಿ | ಚಾರಿ ಸನ್ನುತತೋಷ | ಮಾರನಯ್ಯನೆ ನಿನ್ನ ಪದಕೇ ||
ಭೂರಮಣ ಭೀಷ್ಮಕಕು | ಮಾರಿ ರುಗ್ಮಿಣಿ ಎಂಬ | ನಾರಿ ಮಾಡುವ ಬಿನ್ನಹವನೂ ||೧೯೦||

ಲಾಲಿಸು ಕೃಪಾಂಬುನಿಧಿ | ಬಾಲತನದಲಿ ನಾನು | ಶೀಲಗುಣಗಳ ಕೇಳಿ ನಿನ್ನಾ ||
ಮೇಲೆ ಮನವಿರಿಸಿಯನು | ಕೂಲೆಯಾಗಿರಲಣ್ಣ | ಖೂಳತನದಲಿ ನೆನೆದನೊಂದಾ ||೧೯೧||

ತಂದೆತಾಯಿಗಳು ನೆರೆ | ಬಂಧುಗಳು ನಿನಗೀವೆ | ವೆಂದು ನಿಶ್ಚಯಮಾಡೆ ಕೇಳೀ ||
ಮಂದಮತಿಯಲಿ ಚೈದ್ಯ | ನಿಂಗೀವೆನೆನುತ ಭರ | ದಿಂದ ಕರೆಸಿದನು ಭೂಮಿಪರಾ ||೧೯೨||

ಕೊಡುವ ನಾಳಿನಲಿ ಕಂ | ಗೆಡಿಕೆ ಬಂದಿದೆ ಜೀವ | ಬಿಡುತಿಹೆನು ಬಹಳ ಮಾತೇನೂ ||
ಒಡೆಯ ನೀನಿಹೆ ಎಂದು | ಪಿಡಿದಿಹೆನು ಜೀವವನು | ತಡೆಯದೈ ತರಬೇಕು ಜವದೀ ||೧೯೩||

ಗಿರಿಜೆಯನು ಪೂಜಿಪಡೆ | ಪುರಬಾಹ್ಯಗೈತಹೆನು | ಭರದೊಳಲ್ಲಿಗೆ ಬಂದು ಎನ್ನಾ ||
ಕರಗ್ರಹಣವನು ಮಾಡಿ | ದುರುಳರನು ಸದೆದು ನಿಜ | ಚರಣದಾಸಳ ಪಾಲಿಸುವುದೂ ||೧೯೪||

ಮುನ್ನ ತವ ಪಾದಾಬ್ಜವನ್ನು ನಾ ಭಜಿಸಿದ್ದ | ಡಿನ್ನು ನೀ ಕರುಣದಿಂದೊಲಿದೂ ||
ಮನ್ನಿಸುವಡಭಿಮಾನ | ನಿನ್ನದೈ ಸಲೆ ಸುಗುಣ | ರನ್ನ ಚಿತ್ತೈಸು ಬಿನ್ನಪವಾ ||೧೯೫||

**ರಾಗ ಶಂಕರಾಭರಣ ತ್ರಿವುಡೆತಾಳ**

ಇಂತು ರುಗ್ಮಿಣಿ ಬರೆದುದೆಲ್ಲವ | ಅಂತರಂಗದಿ ನೋಡುತಲೆ ನಯ |
ನಾಂತರದಿ ನೀರೇದುತಲೆ ಶ್ರೀ | ಕಾಂತನಾಗಾ ||೧೯೬||

ಎನ್ನನೀಕ್ಷಿಸಲೇಕೆ ನಿನಗಾ | ಕನ್ನೆ ರನ್ನಳೆಯನ್ನು ಕರುಣದಿ |
ಮನ್ನಿಸೈ ಶ್ರೀಕಾಂತ ಸದ್ಗುಣ | ದನ್ನ ನೀನೂ ||೧೯೭||

ಎಂದು ನುಡಿದಂದವನು ಶ್ರೀಗೋ | ವಿಂದ ಲಾಲಿಸಿ ಅಣ್ಣ ರಾಮಗೆ |
ವಂದಿಸುತ ಮುದದಿಂದ ಪೇಳಿದ | ನೊಂದು ಮಾತಾ ||೧೯೮||

**ರಾಗ ಕಾಪಿ ಅಷ್ಟತಾಳ**

ಕ್ಷಿಪ್ರದಿ ಕಳುಹಿಸಿಕೊಡು ಎನ್ನಾ । ಈ ।
ವಿಪ್ರನು ಕರೆಯಲು ಬಂದ ಕಾಣಣ್ಣಾ ॥೧೯೯॥

ಕುಂಡಿನಪುರದ ಅರಸನ ಮಗಳೂ । ಭೂ ।
ಮಂಡಲದೊಳ ಗತಿ ಚೆಲುವೆ ಕೋವಿದಳೂ ॥
ಕಂಡು ಎನ್ನರಿಯಳು ಸಣ್ಣವಳೂ । ನಾ ।
ಗಂಡನೆನುತ ಓಲೆ ಬರೆದಿಹಳೂ ॥೨೦೦॥

ಹಗೆತನವನು ರುಗ್ಮ ಎಣಿಸಿದನೂ । ಚೈದ್ಯ ।
ನಿಗೆ ನಿಶ್ಚಯವ ತಾ ನಡೆಸಿದನೂ ॥
ಮಗಧಮುಖ್ಯರನೆಲ್ಲ ಕರೆಸಿದನೂ । ಬಲು ।
ಹಗರಣವಾಗಿದೆ ಪೋಗಬೇಕೆನ್ನೂ ॥೨೦೧॥

ಎನ್ನಯ ಬರವ ಹಾರೈಸುವಳೂ । ಆ ।
ಕನ್ನೆಯ ಬಿಡುವುದುಚಿತವಲ್ಲ ಕೇಳೂ ॥
ಮನ್ನಿಸಿ ಕರೆತಹೆ ಶೀಘ್ರದೊಳೂ । ಸಂ ।
ಪನ್ನ ಪಟ್ಟಣದ ರಕ್ಷೆಗೆ ನಿಲ್ಲು ನೀನೂ ॥೨೦೨॥

**ವಚನ**

ಎಂದ ನುಡಿಯನು ಕೇಳುತ ಬಲಭದ್ರ ಶ್ರೀಕೃಷ್ಣನೊಳು ಏನೆಂದನು ಎಂದರೆ -

**ರಾಗ ಸಾವೇರಿ ಅಷ್ಟತಾಳ**

ಕೇಳಯ್ಯ ನಾ ಪೇಳ್ವುದೊಂದಾ । ಲೋಕ । ಪಾಲ ಶ್ರೀಲೋಲ ಮುಕುಂದಾ ॥
ಬಾಳಲೋಚನಮಿತ್ರ । ಪಂಕಜಾಯತನೇತ್ರ । ಲೋಲಾಳಿನಿಭಕೇಶ । ರವಿಸುಪ್ರಕಾಶ ॥೨೦೩॥

ದುರುಳ ಮಾಗಧಮುಖ್ಯರೆಲ್ಲಾ । ಅಲ್ಲಿ । ನೆರಹಿಕೊಂಡಿಹರು ಸುಳ್ಳಲ್ಲಾ ॥
ಪುರಕೇನು ಭಯವಿಲ್ಲ । ಪರಿವಾರ ಸಹಿತ ನಾ । ಬರುವೆನು ಭರದಲ್ಲಿ । ತೆರಳಯ್ಯ ನೀ ಮುಂದೆ ॥೨೦೪॥

**ರಾಗ ಶಂಕರಾಭರಣ ಮಟ್ಟೆತಾಳ**

ಎಂದ ಮಾತ ಕೇಳಿ ಕೃಷ್ಣ ಮಂದಹಾಸದೀ । ತಂದೆ ತಾಯಿಗೆರಗಿ ರಾಮಪದಕೆ ಶೀಘ್ರದಿ ॥
ವಂದಿಸುತ್ತ ರಥವನೇರಿ ವಿಪ್ರಸಹಿತಲೇ । ಒಂದು ನಿಮಿಷದಲ್ಲಿ ಬಂದ ಗಗನಪಥದಲೀ ॥೨೦೫॥

ಪುರದ ಬಾಹ್ಯೆಯಲ್ಲಿ ನಿಂತು ಕರೆದು ವಿಪ್ರನಾ । ಹರುಷದಿಂದ ಪೇಳ್ದನಾಗ ದುರುಳಮರ್ದನಾ ॥
ಧರೆಯ ದಿವಿಜ ಕೇಳು ನೀನು ಪುರಕೆ ಪೋಗಯ್ಯಾ । ತರಳೆಯೊಡನೆ ಬಂದೆನೆಂದು ಭರದಿ ]
ಪೇಳಯ್ಯಾ ॥೨೦೬॥

**ರಾಗ ಮಾರವಿ ಏಕತಾಳ**

ಮುರಹರನಾಡಿನ ಮಧುರೋಕ್ತಿಯ ದ್ವಿಜ । ವರನಾಲಿಸಿ ಮುದದೀ ॥
ಕರುಣಾಕರನಡಿಗೆರಗುತ ಪೇಳ್ದನು । ಪರಮಾನಂದದಲೀ ॥೧೦೭॥

ಮಂದರಧರ ನೀನೆಂದ ನುಡಿ ಅರ । ವಿಂದನಯನೆಯೊಡನೇ ॥
ಕುಂದದೆ ಪೇಳುವೆ ಹಿಂದುಗಳೆಯದಿರು । ಇಂದೀ ಕಾರ್ಯದಲೀ ॥೧೦೮॥

ಮದುವೆಯ ಮಾಳ್ಪರು ಮದಮುಖಚೈದ್ಯಗೆ । ಪದುಮದಳಾಕ್ಷಿಯನೂ ॥
ಒದಗಿಲಿ ಕೈಪಿಡಿವುದು ತಡೆಯದೆ ಸದೆ । ವುದು ನೀ ರಿಪುಗಳನೂ ॥೧೦೯॥

ಬಡವನ ನುಡಿಯನು ನಡೆಸದೆಪೋದರೆ । ಕೆಡುವುದು ಬಹುಕೆಲಸಾ ॥
ದೃಢವುಂಟಾದರೆ ಕೊಡು ಎನಗಭಯವ । ತಡೆಯದೆ ಪೋಗುವೆನೂ ॥೧೧೦॥

**ವಚನ**

ಧರಣೀಶನರ್ಧಾಂಗಿ ಹರಿಣಾಕ್ಷಿ ಸ್ನೇಹದಿಂ ।

**ರಾಗ ಸಾವೇರಿ ಏಕತಾಳ**

ಧರಣಿದೇವನೆ ಕೇಳು । ತರುಣಿಗೋಸ್ಕರ ಬಂದು ।
ಬರಿದೆ ಪೋಗುವ ನಲ್ಲ । ದೃಢನಂಬುಗೆ ಸೊಲ್ಲ ॥೧೧೧॥

ಬಾಲೆ ವಿದರ್ಭೆಯ । ಮೇಲೆ ನಾ ಮನವಿಟ್ಟು ।
ಬೀಳುಗೊಂಡುದು ರಾತ್ರೆ । ನಿದ್ರೆಯು ನನಗೆ ॥೧೧೨॥

ಆಲಸ್ಯವನು ಬಿಟ್ಟು । ಪೇಳ್ಕೈ ನೀ ಪೋಗಿ ।
ಕಾಳಾಹಿವೇಣಿಗೆ । ಸಲೆ ದೃಢವಾಗಿ ॥೧೧೩॥

**ಭಾಮಿನಿ**

ಪದುಮನಾಭನು ಪೇಳ್ದ ವಾಕ್ಯದ ।
ಮಧುರತೆಯ ಸೇವಿಸುತ ವಿಪ್ರನು ।
ಒದಗಿನಲಿ ಬರಲಿತ್ತಲತ್ತಲು ಪುರದ ಭೂಸುರರೂ ॥
ಮದುವೆ ಇಂದಿನೊಳೆಂದು ದಕ್ಷಿಣೆ ।
ಗೊದಗಿ ಬರುವುದ ಕಂಡು ರುಗ್ಮಿಣಿ ।
ಬೆದರಿ ಬಸವಳಿಯುತ್ತ ಹಲುಬಿದಳ್ ಬಹಳ ಶೋಕದಲೀ ॥೧೧೪॥

**ರಾಗ ಆನಂದ ಭೈರವಿ ರೂಪಕತಾಳ**

ಪೋದ ವಿಪ್ರನೇಕೆ ಬಾರ । ದಾದ ಮುದದಲೀ ॥
ಮಾಧವಂಗೆ ಲಿಖಿತವೀಯೆ । ಓದಿ ಭರದಲೀ ॥೧೦೫॥

ತರುಣಿ ತಾನು ಬರೆದಳೆಂದು । ಹರಿಯು ಹಾಸ್ಯದೀ ॥
ಜರೆದು ನುಡಿಯೆ ಕೇಳಿ ವಿಪ್ರ । ಮರುಗಿ ಖೇದದೀ ॥೧೦೬॥

ಇತ್ತ ಬರಲು ನಾಚಿಕೊಂಡು । ಎತ್ತ ಪೊದನೋ ॥
ಚಿತ್ತಜನಕ ಬಾರದಿರಲು । ಹೊತ್ತುಗಳೆವನೋ ॥೧೦೭॥

ದಾನವಾರಿ ಕಾಯದುಳಿಯ । ಮಾನವೊಂದನೂ ॥
ಏನು ಮಾಡಲಿನ್ನು ಪುಣ್ಯ । ಹೀನೆಯಾದೆನೂ ॥೧೦೮॥

ಮಾತೆ ಪೇಳ್ದ ಮಾತಿದೆಲ್ಲ । ಪುಸಿಯೆಂದಾಯಿತೂ ॥
ತಾತ ನೆನೆದ ಕಾರ್ಯವೆಲ್ಲ । ನೀತಿತಪ್ಪಿತೂ ॥೧೦೯॥

ಯಾರಿಗುಸುರಲಿನ್ನು ಮುಂದೆ । ಪಾರಗಾಣೆನೂ ॥
ದಾರಿ ತೋರಲಿಲ್ಲ ಇಂದು । ಗೌರಿ ತನ್ನನೂ ॥೧೧೦॥

ಕೆಟ್ಟೆನಕಟ ಕೃಷ್ಣ ಕೈಯ । ಬಿಟ್ಟನೆನ್ನನೂ ॥
ಪುಟ್ಟಿ ವ್ಯರ್ಥವಾದೆ ತನುವ । ಇಟ್ಟುಕೊಳ್ಳೆನೂ ॥೧೧೧॥

ಎಂದು ಮರುಗೆ ವಾಮನಯನ । ಸ್ಪಂದವಾದುದೂ ॥
ಮಂದಗಮನೆ ಪೇಳೆ ಸಖಿಯು । ನಿಂದು ಪೇಳ್ದಳೂ ॥೧೧೨॥

**ರಾಗ ಕಾಂಭೋಜಿ ಆದಿತಾಳ**

ಇಂದಿರೆ ನಿನ್ನ ವಾಮಾಂಗ । ಸ್ಪಂದವೇನಮ್ಮಾ ॥ ಕೇ ।
ಳಿಂದು ಬಂದು ನಮ್ಮಾ ॥ ಲೋಕ । ದೊಡೆಯನನು
ತಂದು ತೋರ್ಪ । ವಿಪ್ರನಮ್ಮಾ ॥೧೧೩॥

ಇಂತು ಪೇಳುತಿರಲು ಲಕ್ಷ್ಮೀ । ಕಾಂತನೆಡೆಯಿಂದಾ ॥ ಶ್ರೀ ।
ಕಾಂತೆ ಬಳಿಗೆ ವಿಪ್ರ ಹರುಷ । ವಾಂತು ಬಂದಾ ॥೧೧೪॥

**ರಾಗ ಭೈರವಿ ಝಂಪೆತಾಳ**

ಬರುವ ವಿಪ್ರನ ಕಂಡು । ತರಳೆ ರುಗ್ಮಿಣಿ ಮನದಿ ।
ಅರಿತಳಿಂಗಿತದಿಂದ । ಹರಿ ಬಂದನೆಂದೂ ॥೧೧೫॥

ಗದ್ದುಗೆಯನಿಳಿದು ತಾ । ನೆದ್ದು ನಿಲ್ಲಲು ಸುಪ್ರ ।
ಸಿದ್ಧದ್ವಿಜ ನಡೆತಂದು । ಹೊದ್ದಿದನು ಸಿರಿಯಾ ॥೧೧೬॥

ನೀಲವರ್ಣನ ಕರುಣ । ದೇಳಿಗೆಯ ಸಂಗ್ರಾಮ ।
ಪೇಳಿದನು ನಲಿನಲಿದು । ಶ್ರೀಲತಾಂಗಿಯೊಳೂ ॥೧೧೭॥

**ರಾಗ ಕಾಪಿ ಏಕತಾಳ**

ಕೇಳು ಭೀಷ್ಮಕಜಾತೇ । ಸದ್ಗುಣ । ಶೀಲೆ ಮನ್ಮಥಮಾತೇ ॥
ಮೂಲೋರ್ಕಾರ್ಚಿತೆ । ಮುನಿಜನಸನ್ನುತೆ । ಲೋಲನಯನೆ ಹರಿ । ಬಾಲೆ ಸುಶೀಲೆ ॥೧೧೮॥

ಬರೆದ ಓಲೆಯ ನೋಡೀ । ಮುರ । ಹರನು ಪ್ರೀತಿಯ ಮಾಡೀ ॥
ಶರದಲಿ ದುರುಳರ । ಶಿರಗಳ ತರಿದತಿ । ಭರದೊಳು ನಿನ್ನನು । ಕರೆದೊಯ್ವೆನೆಂದ ॥೧೧೯॥

ಬಲರಾಮಗರುಹಿದನೂ । ನಿಜ । ಲಲನೆ ನೀನೆಂಬುದನೂ ॥
ತಳುವದೆ ಕಳುಹಿಸಿ । ಕೊಳುತಲೆ ಗೆಲವಿಲಿ । ಪೊಳಲ ಬಳಿಗೆ ಬಂದ । ಅಳಲದಿರವ್ವ ॥೧೨೦॥

ನಿನ್ನ ಪುಣ್ಯದ ಕಣಿಯೂ । ಗುಣ । ದನ್ನೆ ಭಾಗ್ಯದ ಕಣಿಯೂ ॥
ನಿನ್ನ ಇರುಳಿನೊಳು । ಕಣ್ಣಿಗೆ ನಿದ್ರೆಯು । ಹಣ್ಣದೆ ಉದಯದಿ । ಮಿಣ್ಣನೆ ಬಂದ ॥೧೨೧॥

**ದ್ವಿಪದಿ**

ಇಂತೆಂದುದನು ಲಾಲಿಸುತ್ತ ರುಗ್ಮಿಣಿಯೂ ॥
ಸಂತೋಷವನು ತಾಳ್ದು ಪೇಳ್ದಳತಿ ಭರದೀ ॥೧೨೧॥

ಬಂದನೇ ಮುರಹರನು ಬಳಲಿದಿರಿ ನೀವೂ ।
ಬಂದುದೈ ಸಲೆ ನಿಮ್ಮ ದಯದಿ ಸಂಪದವೂ ॥೧೨೨॥

ಬಳಲಿಸಿದೆ ನಿಮ್ಮಡಿಯ ಹಲವು ಮಾತೇನೂ ।
ಛಲವನುದ್ಧರಿಸಿದಿರಿ ಮರೆವೆನೇ ನಾನೂ ॥೧೨೪॥

ಚರಣಕೆರಗಿದ ಸಿರಿಯ ಪಿಡಿದೆತ್ತಿ ಪರಸೀ ।
ಹರಿ ಒಲಿಯಲೆಂದು ಕರವೆತ್ತಿ ಸಂತೈಸೀ ॥೧೨೫॥

ಇಂತೆನುತ ನುಡಿದು ಭೂಸುರನು ವಹಿಲದಲೀ ।
ಕಂತುಪಿತನಂ ಭಜಿಸಿ ಪೋದ ಹರುಷದಲೀ ॥೧೨೬॥

ಇತ್ತಲಾ ರುಗ್ಮಿಣಿಯು ಘನ ಹರುಷದಿಂದಾ ।
ಚಿತ್ತದಲಿ ಹರಿಯ ಭಜಿಸುತ್ತಿರ್ದಳೆಂದಾ ॥೧೨೭॥

**ಭಾಮಿನಿ**

ಧರಣಿಪತಿ ಕೇಳಿತ್ತ ಹಲಧರ ।
ಕರಿ ತುರಗ ರಥ ಪತ್ತಿಸಂಕುಲ ।
ವೆರಸಿ ನಾನಾ ಘೋಷದಿಂ ನಗರವನು ಪೊರಮಟ್ಟಾ ॥
ವರವರೂಥವನೇರಿ ಭರದಲಿ ।
ಬರುತ ಭೀಷ್ಮಕನಾಳ್ವ ಕುಂಡಿನ ।
ಪುರದ ಬಾಹ್ಯೆಯೊಳಿಪ್ಪ ಹರಿಯನು ಕಂಡು ಬೆಸಗೊಂಡಾ ॥೧೩೮॥

**ರಾಗ ಪಂತುವರಾಳಿ ಏಕತಾಳ**

ಏನಯ್ಯ ರಂಗ । ನೀಲನಿಭಾಂಗ  ॥ ಪಲ್ಲವಿ ॥

ಬಾಲೆಗೋಸ್ಕರ ಬಂದು ಸುಮ್ಮನೆ । ವೇಳೆಕಳೆವುದು ನೀತಿಯೇ  ॥ ಅನುಪಲ್ಲವಿ ॥
ಧರಣಿಪಾಲರು ನೆರೆದುಕೊಂಡಿಹರಿಂದು ।
ತರುಣಿರನ್ನೆಯ ದುರುಳಚೈದ್ಯಗೆ ।
ಭರದಿ ಮದುವೆಯ ಮಾಳ್ಪರೂ ॥೧೩೯॥

ಬರಿದೆ ಪೋಗುವ ತೆರನಾಗುವುದು ನಾವು ।
ಪುರಕೆ ಬೇಗದಿ ತರಳೆಯನು ಕರೆ ।
ತರುವುದೊಳ್ಳಿತು ನೋಡಿಕೋ ॥೧೪೦॥

**ರಾಗ ಸೌರಾಷ್ಟ್ರ ಅಷ್ಟತಾಳ**

ಇಂತೆಂದು ನೀಲಾಂಬರಸಹಿತಲೆ ದಾನ ।
ವಾಂತಕನ್ನೆತರೆ ಕೇಳಿ ಭೀಷ್ಮಕನೂ ॥
ಸಂತೋಷದಿಂದಿದಿರ್ಗೊಂಡು ಪಾದಾಕ್ರಾಂತ ।
ನಾಗುತ್ತ ಬಲು ಭಕ್ತಿಯಿಂದ ಇಂತೆಂದಾ ॥೧೪೧॥

**ರಾಗ ಮಾರವಿ ಏಕತಾಳ**

ಹರಿಯೇ ಲಾಲಿಸು ನಿನ್ನ । ಸಿರಿಪಾದವನು ಕಂಡು ।
ಹರಿದುಪೋದುದು ಎನ್ನ । ದುರಿತವನೇಕಾ ॥೧೪೨॥

ಸರಿಯಾರು ಕಾಣೆ ಈ । ಧರಣೀಭಾರವನೆನ್ನ ।
ತರಳಗೆ ಇತ್ತೆನು ಎನ್ನ । ಗೃಹಕೆ ದಯಮಾಡೀ ॥೧೪೩॥

**ವಚನ**

ಇಂತೆಂದ ಭೀಷ್ಮಕನೊಡನೆ ಬಲಭದ್ರ ಮುರಾಂತಕರ್ರೈತರುತಿರ್ದರದೆಂತೆನೆ -

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಾಮಕೃಷ್ಣರ ಕರೆದು ಭೀಷ್ಮಕ । ಪ್ರೇಮದಿಂದುಪಚರಿಸಿ ಹರಿಪದ ।
ತಾಮರಸಕೊಂದಿಸುತ ಪೇಳ್ದನು । ಕಾಮಿತವ ಸಲಿಸೆನ್ನುತಾ ॥೧೪೪॥

ಸುತನ ಮತ ಚೈದ್ಯಂಗೆನುತ್ತಲಿ । ಸುತೆಯು ನಿನ್ನನೆ ಬಯಸಿಹಳು ಮ ।
ನ್ಮತವು ಸುತೆಯಭಿಮತವು ನೀನೇ । ಪತಿಕರಿಸಿ ಪೊರೆ ಎಂದನೂ ॥೧೪೫॥

**ರಾಗ ಮಾರವಿ ಅಷ್ಟತಾಳ**

ಧರಣೀಶ ಕೇಳೆನ್ನ ಮಾತಾ । ನಿನಗೆ ।
ಸರಿಯಾರ ಕಾಣೆನು ಲೋಕ ಪ್ರಖ್ಯಾತಾ ॥೧೪೬॥

ಇಷ್ಟುಪಚಾರವೇಕಯ್ಯಾ । ಇನ್ನು ।
ಕಷ್ಟ ಎಳ್ಳನಿತಿಲ್ಲ ಲೇಸಹುದಯ್ಯಾ ॥
ಇಷ್ಟಾರ್ಥ ಸಿದ್ಧಿಸಲಯ್ಯಾ । ರಾಜ ।
ಶ್ರೇಷ್ಠ ನಿನ್ನಯ ಮನವರಿತೆ ಕೇಳಯ್ಯಾ ॥೧೪೭॥

**ವಚನ**

ಇಂತೆಂದು ಭೀಷ್ಮಕನೊಡನೆ ಕೃಷ್ಣನು ಮಾತಾಡುತಿರೆ ಭೂಪರು ಮಾಗಧನೊಳು ಏನೆನುತಿರ್ದರು ಎಂದರೆ -

**ರಾಗ ಮುಖಾರಿ ಆದಿತಾಳ**

ಮಗಧೇಶ ಕೇಳೆಮ್ಮಯ ಮಾತ । ಲೋಕ ಪ್ರಖ್ಯಾತಾ ॥ ಪಲ್ಲ ॥

ಜಗವು ಮೂರೊಂದಾಗಿ ಬಂದೂ । ನಮ್ಮ ಮೇಲಿಂದು ।
ಮಗುಚಿದರಳುಕೆವಾವಿಂದೂ ॥ ಅನುಪಲ್ಲ ॥

ತಡವೇಕೆ ಚೈದ್ಯಭೂಪನಿಗೇ । ವೈದರ್ಭಿಯನು ।
ಕೊಡಹೇಳು ರುಗ್ಮನೊಳ್ ಬೇಗಾ ॥
ಕಡಲೊಳು ತಾ ಮು । ನ್ನಡಗಿದ ಗೋವಳ ।
ಹುಡುಗರು ಬಂದೀ । ಹುಡುಗಿಯನೊಯ್ಯುವ ।
ಬೆಡಗಿನೊಳಿಹರಾ । ವೆಡೆಯೊಳು ನೋಡೈ ॥೧೪೮॥

**ರಾಗ ಭೈರವಿ ಝುಂಪೆತಾಳ**

ಇಂತು ಪೇಳಿದ ಭಟರ । ಸಂತವಿಡುತಲೆ ಧೈರ್ಯ ।
ಮುಂ ತಾಳುತೆಂದ ಭೂ । ಕಾಂತ ಮಾಗಧನೂ ॥೧೪೯॥

ಆದುದಾಗಲಿ ನೋಡು । ಯಾದವರ ಪಾಡೇನು ।
ಸಾದರದಿ ಲಗ್ನವದು । ಸಾಧಿಸುವೆನೆನುತಾ ॥೨೫೦॥

ಕರೆಸಿ ಭೀಷ್ಮಕನನ್ನು । ಭರದಿ ಬಂದಿದೆ ಲಗ್ನ ।
ಬರಿಸು ತನುಜೆಯ ಧಾರೆ । ಎರೆಕ್ಷಿಪ್ರದಿಂದಾ ॥೨೫೧॥

**ರಾಗ ಕೇತಾರಗೌಳ ಝಂಪೆತಾಳ**

ಎಲೆ ಮಗಧಭೂಪ ಕೇಳೂ । ರುಗ್ಮಿಣಿಯು । ಕುಲದೇವಿಯನ್ನು ಮೊದಲೂ ॥
ಒಲಿದು ಪೂಜೆಯ ಮಾಡಲೀ । ಬಳಿಕ ಶುಭ । ಕೆಲಸವನು ಕೈಗೊಳ್ಳಲೀ ॥೨೫೨॥

ಎಂದು ಭೀಷ್ಮಕ ಪೇಳಲೂ । ಲೇಸು ಲೇ । ಸೆಂದೆನುತ ಅತಿ ಭರದೊಳೂ ॥
ಮಂದಮತಿ ರುಗ್ಮನಾಗಾ । ಭಟ ವಾಜಿ । ವೃಂದ ಕಳುಹಿಸಿದ ಬೇಗಾ ॥೨೫೩॥

ವಿಪ್ರ ಪತ್ನಿಯರವೆರಸೀ । ಅಕ್ಷತೆಯ । ಕ್ಷಿಪ್ರದಿಂದಿಟ್ಟು ಹರಸೀ ॥
ಅಪ್ರತಿಮೆಯನ್ನು ನೋಡೀ । ಕಳುಹಲ್ಕೆ । ಸುಪ್ರೌಢೆಯರನು ಕೂಡೀ ॥೨೫೪॥

ಮಂದಗಮನೆಯು ಬಂದಳೂ । ಮೆರೆವ ಕಾ । ಲಂದುಗೆ ಝಣರೆನ್ನಲೂ ॥
ವೃಂದಾರಕರು ಪೊಗಳಲೂ । ಶುಭಶಕುನ । ಸಂದೋಹಮಂ ಕಂಡಳೂ ॥೨೫೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮನದಿ ಕೃಷ್ಣನ ಧ್ಯಾನಿಸುತ ಮಿಗೆ । ಗೆಣತಿಯರ ಪೊಂಗೊಡೆಯ ನೆಳಲಲಿ ।
ವನಿತೆಯರ ಮೇಳದಲಿ ಮನ್ಮಥ । ಜನನಿಯಾಗಾ ॥೨೫೬॥

ಪರಿಪರಿಯ ಘನವಾದ್ಯ ಮೊಳಗಲು । ತರುಣಿ ಮೌನದಿ ಬಂದು ತನ್ನಯ ।
ಚರಣಯುಗವನು ತೊಳೆದು ಸಾರ್ದಳು । ಗಿರಿಜೆಯೆಡೆಗೇ ॥೨೫೭॥

ಬಂದು ಸದ್ಭಕ್ತಿಯಲಿ ಚರಣಕೆ । ವಂದನೆಯ ಗೈವುತ್ತ ಜಯಜಯ ।
ಎಂದು ನುತಿಸುತ ಪೂಜಿಸಿದಳಾ । ನಂದದಿಂದಾ ॥೨೫೮॥

**ರಾಗ ಧವಳಾರ ಆದಿತಾಳ**

ಗಿರಿಜಾತೆಗೆ ಗಜಮುಖಮಾತೆಗೆ ।
ಶರಣಾಗತಜನವತ್ಸಲೆಗೆ ।
ಕರುಣಾ ಸಾಗರೆಗೆ । ಶ್ರೀಗೌರಿಗೆ ॥
ಶ್ರೀಗೌರಿಗೆ ಸಿಂಹವಾಹಿನಿಗೆ ।
ಸರಸಿಜಾಂಬಕಿಗೆ । ಜಯಜಯ ॥೨೫೯॥

**ರಾಗ ಮಾರವಿ ಏಕತಾಳ**

ಪಾಲಿಸೆ ಪಾರ್ವತಿ ಇಷ್ಟಾರ್ಥವನ್ನು ।
ಬಾಲೇಂದುಧಾರಿಣಿ ಭಾಗ್ಯಪ್ರದಾಯಿನಿ ॥೨೬೦॥

ನೀಲಕುಂತಳೆ ನೀರಜಪತ್ರನೇತ್ರೆ ।
ಫಾಲಲೋಚನೆ ಭರ್ಗಭುವನಪವಿತ್ರೆ ॥೨೬೧॥

ಶೈಲೇಶತನುಜಾತೆ ಶಾಂಭವಿ ಗುಹಮಾತೆ ।
ಶ್ರೀಲೋಲ ವರಿಪಂತೆ ಚಾರುಚರಿತ್ರೆ ॥೨೬೨॥

**ರಾಗ ಕಾಂಭೋಜಿ ಝುಂಪೆತಾಳ**

ಕುಡಿಮೊಲೆಯ ಭಾರದಲಿ । ನಡು ಬಳುಕೆ ಅಧರನೊ ।
ಪ್ಪಿಡುತೀ ಜಗದಿ ಪೊಸತೆನಲೂ ॥
ಪಡೆಯೆಲ್ಲ ಪಲ್ಲಟಿಸಿ । ನೋಡತಿರಲಡಿಗಡಿಗೆ ।
ನಡೆತಂದಳಾಗ ಲಲಿತಾಂಗೀ ॥೨೬೩॥

ಮೆಲ್ಲಮೆಲ್ಲನೆ ಬರುತ । ಅಲ್ಲಲ್ಲಿ ನೋಡುತ್ತ ।
ನಿಲ್ಲುನಿಲ್ಲುತ ಬರಲು ಕಂಡೂ ॥
ಸಲ್ಲಲಿತ ಸತ್ತಿಗೆಯ । ಪಲ್ಲವಿಸಿ ರಥವ ತಂ ।
ದುಲ್ಲಸದಿ ಭಟರು ಪೇಳಿದರೂ ॥೨೬೪॥

ತಾಯೆ ತೆರಳೆಂದೆನಲು । ತೋಯಜಾಂಬಕಿ ಮಹಾ ।
ದಾಯಸದಿ ಹರಿಯ ಧ್ಯಾನಿಸುತಾ ॥
ಬಾಯ ಬಿಡುತೊರಲುತಿರೆ । ಕಾಯಜೋಪಮಪಿತಗೆ ।
ರೋಹಿಣಿಯ ಜಾತನಿಂತೆಂದಾ ॥೨೬೫॥

ಇದು ಸಮಯ ಕೃಷ್ಣ ಕೇಳ್ । ಪದುಮದಳಲೋಚನೆಯ ।
ಒದಗಿನಲಿ ಕೈವಿಡಿದು ನೀನೂ ॥
ಮುದದಿ ನಡೆ ದ್ವಾರಕಿಗೆ । ಮದಮುಖರ ಸದೆದು ಜಯ ।
ವಧುವನೊಡಗೊಂಡು ನಾ ಬಹೆನೂ ॥೨೬೬॥

**ರಾಗ ಭೈರವಿ ಏಕತಾಳ**

ಹಲಧರ ಪೇಳಿದ । ಸುಲಲಿತ ವಾಕ್ಯವ । ಜಲರುಹಲೋಚನ । ತಿಳಿದತಿರಮ್ಯದಿ ।
ಬೆಳಗುವ ರಥವೇ । ರ್ದಲಸದೆ ನಡೆತಂ । ದಳಲುವ ತರಳೆಯ ಬಳಿಯಲಿನಿಂದಾ ।
ಕೇಳುರಾಯ ॥೨೬೭॥

ಸುತ್ತಲು ಬಿಗುಹಿನೊಳ್ । ಮುತ್ತುವ ಸುಭಟರ । ನೆತ್ತಿಯ ಬಡೆದರ । ಹುತ್ತಿರೆ ರೋಷದಿ ।
ಮತ್ತಗಜಾಶ್ವದ ಮೊತ್ತವ ಭೇದಿಸಿ । ವೃತ್ತಕುಚೆಯ ಪಿಡಿ । ದೆತ್ತಿದ ಮುದದೀ ॥  ವಾಸುದೇವ ॥೨೬೮॥

ಕನ್ನೆಯ ಕರುಣದಿ | ತನ್ನಯ ರಥದಲಿ | ಮನ್ನಿಸೆ ಮಾನಿನಿ | ಸನ್ನುತಿಗೈವುತ |
ಉನ್ನತ ಹರುಷದಿ | ಮುನ್ನಿನ ದುಃಖಗ | ಳನ್ನೆ ಮರೆತು ಜಯವೆನ್ನುತಲಿರಲೂ ||
ಕಂಡರೆಲ್ಲ ||೧೭೯||

ಅಂಗರಕ್ಷೆಗೆ ಯದು | ಪುಂಗವರೆಲ್ಲರು | ಬೆಂಗಡೆಯಲಿ | ಬರೆ | ರಂಗನು ಹರುಷದಿ |
ಪೊಂಗಲಶಂಖವ | ಹಿಂಗದೆ ನಾದಿಸೆ | ಅಂಗನೆಸಹಿತಲಿ | ಬೆಡಗಿನೊಳ್ ಭರದೀ ||
ಬಂದರೆಲ್ಲ ||೧೭೦||

**ರಾಗ ಭೈರವಿ ತ್ರಿವುಡೆತಾಳ**

ಪೊಡವಿಪತಿ ಮಗಧೇಶನೀಕ್ಷಿಸಿ | ಕಿಡಿಗಳನೆ ಕಂಗಳಲಿ ಸೂಸುತ |
ನಡೆದ ಶರಧನು ಹಿಡಿದು ಯಾದವ | ಪಡೆಯನೆಲ್ಲವ ಪಿಡಿದು ಕೆಡವುತ ||೧೭೧||

ಹುಡುಗಿಯನು ಕದ್ದೊಯ್ದ ಗೊಲ್ಲರ | ಹುಡುಗನನು ಪಿಡಿತನ್ನಿರೆನ್ನುತ |
ಘುಡಿಘುಡಿಸಿ ಕೋಪದಲಿ ಮುರಹರ | ನೆಡೆಗೆ ಬರಲೊಡನೊಡನೆ ಸುಭಟರು ||
ಬಂದರಾಗ | ಸಮರಕ್ಕೆ | ತಂದರಾಗ ||೧೭೨||

**ರಾಗ ಶಂಕರಾಭರಣ ಮಟ್ಟೆತಾಳ**

ಉರುತರಾಸ್ತ್ರ ಶಸ್ತ್ರ ಶೂಲ | ಪರಶು ಮುದ್ಗರಾ ||
ಮೆರೆವ ಕುಂತ ಖಡ್ಗ ಸಹಿತ | ಬಂದನಾಸುರಾ ||೧೭೩||

ಧುರಕೆ ಯಾದವರನು ಕರೆದು | ಬೆರಸಿ ಹೊಯ್ಯುತಾ ||
ತರುಣಿಯನ್ನು ಕದ್ದ ಚೋರ | ನಿಲ್ಲು ಎನ್ನುತ್ತಾ ||೧೭೪||

ಮುತ್ತಿ ಬರುವ ಭಟರ ಕಾಣು | ತ್ತಿತ್ತ ಯದುಗಳೂ ||
ಮೊತ್ತಗಜರಥಾಶ್ವಗಳನು | ಒತ್ತಿ ಭರದೊಳೂ ||೧೭೫||

**ಭಾಮಿನಿ**

ಚಂಡಭುಜಬಲ ಕೃಷ್ಣ ರಿಪುಗಳ |
ತಂಡವನು ಸದೆಬಡಿಯುತಿರಲದ |
ಕಂಡು ಮಣಿರಥವೇರಿ ತಾನೈತಂದ ರೇವತಿಯಾ ||
ಗಂಡ ನುಡಿದನು ರುಗ್ಮಿಣಿಯ ಕರ |
ಕೊಂಡು ನೀ ನಡೆ ವೈರಿನಿಕರವ |
ದಿಂಡುಗೆಡಹುವೆನೆನುತ ರೋಷದಿ ಸಮರಕಿದಿರಾದಾ ||೧೭೬||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಬಲನು ರೋಷದಿ ದಿವ್ಯಹಲದೊಳೂ | ದೈತ್ಯ | ಬಲವೆಲ್ಲ ಬೀಳುವ ತೆರದೊಳೂ ||
ಚಳಕದಿ ಹೊಯ್ದೊರಗಿಸಿದನೂ | ಖಳ | ರಲಸದೆ ಹೊಡೆದರು ಬಲನನೂ ||೧೭೭||

ಕನ್ನೆಯ ಕದ್ದೊಯ್ದು ಖೂಳನೇ | ಶಿರ | ವನ್ನರಿಯುವೆ ನೋಡು ಚೋರನೇ ||
ಮುನ್ನ ನೀ ಗೆಲಿದಹಂಕೃತಿಯನೇ | ಬಿಡು | ಉನ್ನತಿಕೆಯ ಬಡ ಗೊಲ್ಲನೇ ||೧೭೮||

ತರುಣಿಯ ದೆಸೆಯಿಂದ ಪ್ರಾಣವಾ | ನೀವು | ತೆರುವುದೇತಕೆ ಬಂದ ಮಾರ್ಗವಾ ||
ಪರಿಕಿಪುದೊಳ್ಳಿತು ನೋಡೂ | ಗೊಲ್ಲ | ತರಳರೊಳ್ ಯುದ್ಧ ಸರ್ವಥಾ ಬೇಡಾ ||೧೭೯||

ಎನುತ ಹಲಾಯುಧದಿಂದಲೀ | ಬಂದ ಬಿನುಗು ದೈತ್ಯರಿಗೆಚ್ಚ ಭರದಲೀ ||
ತನುವ ನೀಗದೆ ಓಡಿಪೋದರೂ | ನೊಂದು | ಜನಪ ದೈತ್ಯೇಶನೊಳೊರೆದರೂ ||೧೮೦||

ಬಂದ ಕಾರ್ಯವು ವ್ಯರ್ಥವಾಯಿತೂ | ಭಟ | ವೃಂದವೆಲ್ಲವು ಕಾದಿ ಬಳಲಿತೂ ||
ಇಂದೆಲ್ಲ ಊರಿಗೆ ಪೋಗುವಾ | ನಾಳೆ | ಒಂದಾಗಿ ಬಂದು ಕೈಮಾಡುವಾ ||೧೮೧||

ಇಂತೆಂದು ಸಾಲ್ವ ಜರಾಸುತಾ | ಬಂದು | ಸಂತೈಸುತಿರೆ ಚೈದ್ಯ ಕೇಳುತಾ ||
ಬಂತೆಮಗವಮಾನವೆನುತಲೀ | ಶೋಕ | ವಾಂತುಸುರಿದನತಿ ವ್ಯಥೆಯಲೀ ||೧೮೨||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರಹರೆನಗೀ ಪರಿಯ ದುರ್ದಶೆ | ದೊರಕಿದುದೆ ಹಾಯೆನುತ ತನ್ನಯ |
ಶಿರದೊಳಿಹ ಬಾಶಿಗವ ತಾ ತೆಗೆ | ದಿರಿಸಿ ಭರದೀ ||೧೮೩||

ಮುಂಗಡೆಯೊಳಿರಿಸಿದ್ದ ಚೆಲುವಿನ | ಪೊಂಗಲಶ ಕನ್ನಡಿಯ ಕಾಣುತ |
ಕಂಗಳಲಿ ಕಿಡಿಗೆದರಿ ಬಿಸುಟನು | ಅಂಗಳದಲೀ ||೧೮೪||

ಇಟ್ಟುಕೊಂಡಿಹುದೆಲ್ಲವನು ತೆಗೆ | ದಿಟ್ಟು ಬೀದಿಗೆ ಬಂದು ಭ್ರಮೆಯಲಿ |
ಬಿಟ್ಟಮಂಡೆಯೊಳಾಗ ತಿರುಗಿದ | ಬಟ್ಟೆವಿಡಿದೂ ||೧೮೫||

**ಭಾಮಿನಿ**

ಇತ್ತ ರುಗ್ಮನು ಕಾಣುತಲಿ ಬೆಂ |
ಬೊತ್ತಿದನು ಮುರಹರನನಾ ಕ್ಷಣ |
ಮತ್ತಗಜಗಾಮಿನಿಯ ತಾರದೆ ಪುರವ ಪೊಗೆನೆಂದೂ ||
ಸುತ್ತ ಶಸ್ತ್ರಾಸ್ತ್ರಗಳ ಮಳೆಗೆರೆ |
ವುತ್ತ ಭೀಕರ ಸಿಂಹನಾದದಿ |
ಹತ್ತಿರಕೆ ನಡೆತಂದು ನುಡಿದನು ಬಹಳ ರೋಷದಲೀ ||೧೮೬||

**ರಾಗ ಭೈರವಿ ಅಷ್ಟತಾಳ**

ನಿಲ್ಲುನಿಲ್ಲೆಲೊ ಬಡ ಗೊಲ್ಲನೇ । ಇಂಥ । ಕಳ್ಳತನಗಳೇಕೆ ಖುಲ್ಲನೇ ॥
ಒಳ್ಳೆ ಮಾತಿನೊಳೆಮ್ಮ ಅನುಜೆಯಾ । ಬಿಟ್ಟು । ನಿಲ್ಲದೆ ನಡೆ ಬಂದ ದಾರಿಯಾ ॥೨೮೭॥

ಬಿಟ್ಟುಪೋಗೆಂಬುವ ನುಡಿ ಏನೂ । ಗಂಟು । ಕಟ್ಟಿಕೊಟ್ಟವರಾರು ಹೆಣ್ಣನೂ ॥
ದಿಟ್ಟತನವು ಸಾಕು ಸುಮ್ಮನೇ । ನಿನ್ನ । ಗುಟ್ಟುಳುಹಿಕೊಕಡುಭಂಡನೇ ॥೨೮೮॥

ಭಂಡನಲ್ಲದೊಡಿಂಥ ಪರಿಯನೂ । ಕೈ । ಗೊಂಡವನೇನಯ್ಯ ಪ್ರೌಢನೂ ॥
ತುಂಡರಿಸುವೆ ಬಿಡದಿರೆ ನಿನ್ನಾ । ಎಂದು । ಕುಂಡಲಿಶರವನೆಚ್ಚನು ಮುನ್ನಾ ॥೨೮೯॥

ಗರುಡಾಸ್ತ್ರದಿಂದದ ತರಿದನೂ । ದಿವ್ಯ । ತರಮಂತ್ರಾಸ್ತ್ರಗಳ ತಾನೆಸೆದನೂ ॥
ಹಿರಿಯ ಭಾವಯ್ಯ ಕೇಳ್ತಂಗಿಯಾ । ದಯ । ವಿರಿಸಿ ಮಾಡೆನಗೀಗ ಪರಿಣಯಾ ॥೨೯೦॥

ಎಂದು ಸುರಿದ ನುಡಿಯನು ಕೇಳೀ । ನಂದ । ಕಂದಗೆಂದನು ರುಗ್ಮ ಖಾತಿ ತಾಳೀ ॥
ಬಂದು ಚೋರತ್ವದೊಳೊಯ್ದೆಯಾ । ಮನ । ಬಂದಂತೆ ನೀನೀಗ ಬಗುಳ್ವೆಯಾ ॥೨೯೧॥

**ರಾಗ ಶಂಕರಾಭರಣ ಮಟ್ಟೆತಾಳ**

ಚೋರ ನಾನಹೇ । ಧೀರ ನೀನಹೇ ॥
ಚೋರತನವನೂ । ತೋರಬಂದೆಯಾ ॥೨೯೧॥

ಬಗುಳಬೇಡವೋ । ಬಾಲೆಯನು ಬಿಡೂ ॥
ಬಿಗುವ ಕಳುಹುವೇ । ಹಗೆಯ ತೀರ್ಚುವೇ ॥೨೯೨॥

ಜರೆದು ನುಡಿವುದಾ । ಹರಿಯು ಕೇಳಿದಾ ॥
ಭರದಿ ನೋಡಿದಾ । ಸರಸವಾಡಿದಾ ॥೨೯೩॥

**ರಾಗ ಶಂಕರಾಭರಣ ರೂಪಕತಾಳ**

ಎಲವೊ ಕೃಷ್ಣ ಮಗಧನೊಡನೆ । ನಿಲಲಸಾಧ್ಯವಾಗಿ ಬೆದರಿ ।
ನೆಲನ ಬಿಟ್ಟು ಪೋಗಿ ಪಿಂತೆ । ಜಲದ ಮಧ್ಯದೊಳ್ ॥
ನಿಳೆಯವನ್ನು ರಚಿಸಿಕೊಂಡು । ಬಳಗಸಹಿತಲಿದ್ದುಕೊಂಡು ।
ಲಲನೆಗಾಗಿ ಬಂದು ನಿನ್ನ । ತಲೆಯ ಕೊಡುವೆಯಾ ॥೨೯೪॥

ಬರಿದೆ ಸಾಯಬೇಡವೀಗ । ತರಳೆಯನ್ನು ಬಿಟ್ಟು ನಮ್ಮ ।
ಚರಣಕೆರಗಿ ಬೇಡಿಕೊಳಲು । ಕೊರಳ ಕಾಯ್ವೆನು ॥
ಧುರವು ಸದರವಲ್ಲ ಕೇಳು । ಪಿರಿದು ಶೌರ್ಯವಿದ್ದಡೀಗ ।
ವರಮಹಾಸ್ತ್ರವನ್ನು ತೆಗೆದು । ಭರದಿ ಎಸೆಯಲಾ ॥೨೯೫॥

ವಾರಿಜಾಕ್ಷ ನಗುತ ಪೇಳ್ದ । ಧೀರನೈಸೆ ನಿನ್ನ ಪೋಲ್ವ ।
ವೀರರಿಲ್ಲ ನಾವು ಬರಿದೆ । ನಾರಿಗೋಸುಗಾ ॥
ಚೋರತನದಿ ಬಂದುದಹುದು । ತೋರು ಬಲುಹನೆನುತಲೆಚ್ಚ ।
ತೇರು ಕುದುರೆ ಸಹಿತವಾಗಿ । ಆರು ಶರದಲೀ ॥೧೯೩॥

ಘಾಸಿಯಾದ ರಥವನಿಳಿದು । ಸೀಸಕವಚ ಬಲಿದು ರುಗ್ಮ ।
ಮೀಸೆಯನ್ನು ತಿರುಹುತೆಂದ । ವಾಸಿಯಿಂದಲೀ ॥
ಈಶ ತಾನೆ ಬರಲಿ ಕೇಳು । ವಾಸುದೇವ ನಿನ್ನ ತಲೆಯ ।
ನಾಶಮಾಡದುಳಿಯೆ ನೋಡು । ಈ ಶರೌಘದೀ ॥೧೯೭॥

ಎನುತಲೈದು ಶರವ ತೆಗೆದು । ಧನುವಿಗೊಡ್ಡಿ ಹೂಡಿ ಸಿಂಹ ।
ಸ್ವನವ ಗೈದು ಬರಲು ಕಂಡು । ದನುಜವೈರಿಯೂ ॥
ಕ್ಷಣದೊಳನಿತು ಶರವ ಕಡಿದು । ವಿನಯರಸದೊಳೊಂದು ದಿವ್ಯ ।
ಕಣೆಯ ಕಳುಹುತವನ ಚಾಪ । ವನು ಸಗಾಢದೀ ॥೧೯೮॥

ಕಡಿಯೆ ಕಂಡು ಭರದಿ ರುಗ್ಮ । ಕಡುಹಿನಿಂದ ಶೂಲವನ್ನೆ ।
ಪಿಡಿದು ಬೊಬ್ಬೆಗೈವುತಾಗ । ನುಡಿದ ಕೋಪದೀ ॥
ಕಡು ಸಮರ್ಥನಹುದೊ ಗೊಲ್ಲ । ರೊಡೆಯ ಕೇಳು ನಿನ್ನ ತಲೆಯ ।
ಹೊಡೆವೆನೀಗ ನೋಡೆನುತ್ತ । ಬಿಡಲು ಶೂಲವಾ ॥೧೯೯॥

ಶೂಲ ಬರುತಲಿರಲು ಕಂಡು । ಲೋಲನೇತ್ರ ಕೋಪಗೊಂಡು ।
ಕೋಲಿನಿಂದ ಕಡಿಯೆ ರುಗ್ಮ । ತಾಳಿ ಕೋಪದೀ ॥
ಆಲಿ ಹಲಗೆ ಕತ್ತಿ ಪಿಂಡಿ । ವಾಳ ಮುದ್ಗರಂಗಳಿಂದ ।
ಬೀಳೆನುತ್ತ ಹೊಯ್ಯುತಿರಲು । ಶ್ರೀಲಲಾಮನೂ ॥೨೦೦॥

ಕಂಡು ಕರದಿ ಖಡ್ಗವನ್ನು । ತುಂಡುಮಾಡಿ ಭರದೊಳವನ ।
ಚಂಡಿಕೆಯನು ಹೊಡೆದು ಕೆಡಹಿ । ಕೊಂಡು ಕೋಪದೀ ॥
ಖಂಡೆಯವನು ಚಾಚಿ ಕೊರಳ । ಖಂಡಿಸುವೆನೆಂದಿರಲು ಕಂಡು ।
ಪುಂಡರೀಕವದನೆ ಬೇಡಿ । ಕೊಂಡಳಾಕ್ಷಣ ॥೨೦೧॥

**ರಾಗ ರೇಗುಪ್ತಿ ಅಷ್ಟತಾಳ**

ಕೊಲ್ಲಬೇಡವೀಗಾ । ನಮ್ಮಣ್ಣನ । ಕೊಲ್ಲಬೇಡವೀಗಾ ॥
ಕೊಲ್ಲಬೇಡೀಗ ಶ್ರೀ । ವಲ್ಲಭಕೃಷ್ಣ । ಫುಲ್ಲಲೋಚನ ಕೋಪದೀ ॥ ನಿರ್ದಯದೀ ॥೨೦೨॥

ಕಾವ ದೇವನೆ ನೀನೂ । ಕಾಯದೆ ಕೊಲ್ವ । ದಾವ ನೀತಿಯೇ ನೀನೂ ॥
ಭಾವನಿಂತೆಂಬುದ । ಭಾವಿಸದಾದೆಯ । ಜೀವಕ್ಕೆ ಮುನಿದೆಯಲ್ಲಾ ॥ ಏನಲ್ಲಾ ॥೨೦೩॥

ಕೊರಳನೆ ಕೊಯ್ಯಬೇಡಾ । ರಕ್ಷಿಸು ಬೇಗ । ಕರುಣಾ ಸಾಗರ ಗಾಥಾ ॥
ದುರುಳಾತ್ಮನಾ ದರ್ಪ । ಮುರಿದುಪೋದುದು ಸಾಕು । ಚರಣಾಬ್ಜಯುಗಕೆ ನಾನೂ ॥
ಶಿರಬಾಗುವೆನೂ ॥೩೦೪॥

**ರಾಗ ಬೇಗಡೆ ಆದಿತಾಳ**

ಇಂದಿರೇ । ಇವ । ನಿಂದ ನೀ ನೊಂದೆಯೇ ।
ಚಂದಿರಮುಖಿ ಅರ । ವಿಂದನಯನೆಯೆ ॥ ಇಂದಿರೇ ॥ ಪಲ್ಲ ॥
ತಂದೆ ತಾಯಿಗಳನು । ನಿಂದಿಸಿ ನಮ್ಮನು ।
ಕುಂದ ನುಡಿದ ಕಡು । ಮಂದಮತಿಯೆ ಕೇಳ್ ॥ ಇಂದಿರೇ ॥೩೦೫॥

ಮಂದಮತಿಯು ಬ । ಲ್ಪಿಂದ ನಮ್ಮೊಳು ಜಯ ।
ಪೊಂದದೆ ಸಿಲುಕಿದ । ಕೊಂದಪೆನೀತನ ॥ ಇಂದಿರೇ ॥೩೦೬॥

ಆಗದಾಗದು ತಲೆ । ವಾಗಿ ಬೇಡುವೆ ಛಲ ।
ನೀಗಿ ಸಲಹು ಅಣ್ಣ । ನಾಗಿ ಬಾಳಿರಲಿವ ॥೩೦೭॥

ಕನ್ಯಾಮಣಿಯೆ ಸಂ । ಪನ್ನೆ ಸುಗುಣೆ ಕೇಳ್ ।
ನಿನ್ನ ನುಡಿಯ ತಾ । ಮನ್ನಿಸುವೆನು ಕೇಳ್ ॥ ಇಂದಿರೇ ॥೩೦೮॥

**ರಾಗ ಭೈರವಿ ಝಂಪೆತಾಳ**

ಇಂತೆಂದು ರುಗ್ಮಿಣಿಯ । ಸಂತಸದಿ ತಕ್ಕೈಸಿ ।
ಕಂತುಜನಕನು ತನ್ನ । ಪಂಥ ಸಲಲೆಂದೂ ॥೩೦೯॥

ಕಿರುನಗೆಯ ಸೂಸುತ್ತ । ಭರದಿ ರುಗ್ಮನ ಶಿಖಿಯ ।
ಕರದ ಖಡ್ಗದೊಳು ಕ । ತ್ತರಿಸಿದನು ಜವದೀ ॥೩೧೦॥

ಹೆಡೆ ಮುಡಿಯ ಕಟ್ಟಿ ಮು । ನ್ನೆಡೆಯ ಕಂಭಕೆ ಬಿಗಿದು ।
ಬಿಡಿಸುವರ ತೋರೆಂದು । ನುಡಿಯುತಿರೆ ಹರಿಯೂ ॥೩೧೧॥

ಮಂಡಲೇಶನ ಸುತನೆ । ಮಂಡೆಬೋಳಾದುದೇ ।
ಕಂಡು ರಕ್ಷಿಪರ ತೋ । ರೆಂದ ಬಲರಾಮಾ ॥೩೧೨॥

**ರಾಗ ಭೈರವಿ ಅಷ್ಟತಾಳ**

ಏನಯ್ಯ । ರಂಗ । ಏನಯ್ಯ ॥
ಏನಯ್ಯ ನೀನೀ ಮಾನವೇಂದ್ರನ । ಮಾನಹಾನಿಯ ಮಾಳ್ಪಂಥ ।
ಹೀನ ಬುದ್ಧಿಗಳಿಂದೂ ॥೩೧೩॥

ಭಾವೆರುಗ್ಮಿಣಿ ಕ್ಲೇಶಬಡುತಿಹಳಲ್ಲಾ । ಭಾವಂಗೆ ಮರ್ಯಾದೆ ಮಾಡಿದೆಯಲ್ಲಾ ।
ಯಾವಾಗಲು ಚಿಕ್ಕ ಬುದ್ಧಿಯು ಸಲ್ಲಾ । ಮೋಹವೆಂಬುದು ನಿನಗೆಳ್ಳಿನಿತಿಲ್ಲಾ ॥
ಏನಯ್ಯ । ರಂಗ । ಏನಯ್ಯ ॥೨೧೪॥

**ರಾಗ ಭೈರವಿ ಆದಿತಾಳ**

ಈ ಪರಿಯೊಳು ಹಲಧರನೂ । ಸುಮ । ಚಾಪಪಿತಗೆ ಹೇಳಿದನೂ ॥
ಭೂವನ ಕೈ ಬಿಡಿಸಿದನೂ । ಸಂ । ತಾಪವ ತಾ ನಿಲಿಸಿದನೂ ॥೨೧೫॥

ಅರಿಯದೆ ಎಸಗಿದ ಪರಿಗೇ । ನೀ । ಮರುಗದಿರ್ರೈ ಮನದೊಳಗೇ ॥
ಪಿರಿಯವನಲ್ಲವೆ ನೀನೂ । ನ । ಮ್ಮರಸನೆ ಬಿಡು ದುಗುಡವನೂ ॥೨೧೬॥

ಹರಿಯಗ್ರಜ ಪೇಳ್ದುದನೂ । ಭೂ । ವರ ಕೇಳುತ ಖೇದದಲೀ ॥
ಹರನ ಚರಣಧ್ಯಾನದಲೀ । ನಿಜ । ಪುರದಿಂದತಿ ವಹಿಲದಲೀ ॥೨೧೭॥

ಭೋಜಕಟಕಪುರದಲ್ಲೀ । ನೀ । ವ್ಯಾಜದೊಳಿರೆ ತಪದಲ್ಲೀ ॥
ಮೂಜಗದೊಡೆಯನು ನಗುತಾ । ಅಂ । ಭೋಜದಳಾಕ್ಷಿಯ ಸಹಿತಾ ॥೨೧೮॥

ಯದುಬಲ ಹಲಧರ ಕೂಡೀ । ನ । ರ್ಮದೆಯನು ದಾಟಲು ನೋಡೀ ॥
ತ್ರಿದಶರು ಪೂಮಳೆಗರೆಯೇ । ಸ । ಮ್ಮದದೊಳು ಪಾಠಕರುಲಿಯೇ ॥೨೧೯॥

**ದ್ವಿಪದಿ**

ಮಂದಿರಕೆ ನಡೆತಂದು ಮಾಧವನು ಸಹಿತ ।
ತಂದೆತಾಯ್ಗಳ ಪಾದಕೆರಗಿ ತೋಷಿಸುತ ॥೨೨೦॥

ಇರಲು ಶೂರಾತ್ಮಜರ ಪರಸಿ ತೋಷದಲಿ ।
ಹರಿಯ ವದನವ ನೋಡಿ ಪೇಳ್ದರೊಲವಿನಲಿ ॥೨೨೧॥

ತರಳ ಕೇಳೈ ನೀನು ಪರಿಣಯಕೆ ಬರಲಿ ।
ಧರಣೀಶ ಭೀಷ್ಮಕನ ಕರೆತರಿಸು ಇಲ್ಲಿ ॥೨೨೨॥

ಬಂಧುಗಳ ಸಮ್ಮತದಿ ಮಾಳ್ಪುದುತ್ಸವವ ।
ಎಂದೆನಲು ಶ್ರೀಕೃಷ್ಣ ತಾಳ್ದು ಕೌತುಕವ ॥೨೨೩॥

**ರಾಗ ಭೈರವಿ ಝಂಪೆತಾಳ**

ಭರದೊಳುದ್ಧವನನ್ನು । ಕರೆದು ಪೇಳಿದ ಶೌರಿ ।
ಧರಣೀಶ ಭೀಷ್ಮಕನ । ಕರೆದುತಾರೆನುತಾ ॥೨೨೪॥

ಉಡುಗೊರೆಯನಿತ್ತು ಮ | ತ್ತೊಡನೆ ಓಲೆಯ ಬರೆದು |
ಕೊಡಲು ಕುಂಡಿನಪುರಕೆ | ನಡೆತಂದನವನೂ ||೩೧೫||

ಬಂದು ರಾಯನ ಕಂಡು | ತಂದ ವಸ್ತ್ರಾಭರಣ |
ಮುಂದಿರಿಸಿ ಪೇಳಿದನು | ಮಂದಹಾಸದಲೀ ||೩೩೬||

ಸಿರಿಯ ಪರಿಣಯಕೆಂದು | ಧೊರೆ ಶೂರಸುತ ನಿಮ್ಮ
ಕರೆಯ ಕಳುಹಲು ಬಂದೆ | ತೆರಳಿ ನೀವಿಗಾ ||೩೧೭||

ಎನಲು ಓಲೆಯ ನೋಡಿ ಮನದಿ ಹರುಷವತಾಳಿ |
ಘವೇಗದಲಿ ಪೊರಟ | ವನಿತೆ ಸಹವಾಗೀ ||೩೧೮||

**ರಾಗ ಮಾರವಿ ತ್ರಿವುಡೆತಾಳ**

ವರ ಕುಮಾರರು ಪರಿಜನಂಗಳು |
ಪುರಜನಂಗಳವೆರಸಿ ಭೀಷ್ಮಕ |
ಬರುತಿರಲು ವಸುದೇವ ನಾನಾ |
ಧರಣಿಪಾಲರ ಕರೆಸಿದಾ || ಬಂದರಾಗ ||೩೧೯||

ಕಂಡು ಶೂರಾತ್ಮಜನು ರಾಯರ |
ತಂಡವನು ಒಡಗೊಂಡು ಬಂದಾ |
ಕುಂಡಿನಾಪುರದರಸನನು ಇದಿ |
ರ್ಗೊಂಡನಾ ಕ್ಷಣ ವಿಭವದೀ || ಘೋಷದಿಂದಾ ||೩೨೦||

**ಭಾಮಿನಿ**

ಬಂದ ಭೂಮಿಪರನ್ನು ಮನ್ನಿಸಿ |
ಮಂದಹಾಸದಿ ಶೂರಸುತನರ |
ವಿಂದನಯನೆಯ ಕರೆದು ತಿಳುಹಿದ ಭೀಷ್ಮಕನ ಬರವಾ ||
ಇಂದಿರೆಯು ಕಳುಹಲ್ಕೆ ಲಲನಾ |
ವೃಂದದಲಿ ನಡೆತಂದು ನಸುನಗೆ |
ಯಿಂದ ಮಾತೆಗೆ ನಮಿಸಿ ಜನಕಗೆ ಮಣಿದು ಭಕ್ತಿಯಲೀ ||೩೩೦||

**ರಾಗ ಮಾರವಿ ಏಕತಾಳ**

ಜನನಿಯ ಬಳಿಯಲಿ | ಕನಕಲತಾಂಗಿಯು | ವಿನಯದೊಳಿರಲತ್ತಾ ||
ವನರುಹನೇತ್ರನ | ಜನಕನು ಬಾಂಧವ | ಜನಸಹಿತಾ ಕ್ಷಣದೀ ||೩೩೧||

ಲಲನೆಯ ಕೇಳಲು । ಫಲವಾಹಿನಿ ಬಳಿ । ಗೆಲವಿನಿಂದ್ಯೆತರಲೂ ॥
ಘಳಿಲನೆ ಭೀಷ್ಮಕ । ನಲಿವುತದಿರ್ಗೊಳ । ಉಲಿವುತ ನಡೆತಂದೂ ॥೩೩೩॥

ವಿಪುಳಮತಿಯು ತಾ । ನಿಪುಣತೆಯಲಿ ಯದು । ನೃಪಕುಲಮೌಳಿಯನೂ ॥
ಉಪಚರಿಸಲು ಕಂಡು । ಪಾವನತರದಿಂ । ಸುಫಲವನಿತ್ತಾಗಾ ॥೩೩೪॥

ಪರಿತೋಷದೊಳ್ಯದು । ವರವಸುದೇವನು । ಸಿರಿಯರಸನ ಮತದೀ ॥
ಸಿರಿಯನು ಬೇಡಿದ । ಕರುಣಾರ್ಣವನಿಗೆ । ಧರಣಿಪನೊಳು ಮುದದೀ ॥೩೩೫॥

ಲೇಸಾದುದು ನ । ಮ್ಮೀ ಶಶಿವದನೆಯ । ವಾಸುದೇವಗೆ ಕೊಡುವೇ ॥
ದೋಷರಹಿತ ಜಗ । ದೀಶ ಶ್ರೀಕೃಷ್ಣನ । ದಾಸತ್ವವ ಪಡೆವೇ ॥೩೩೬॥

**ಭಾಮಿನಿ**

ಸಕಲ ಜನ ಕೊಂಡಾಡೆ ನಿರ್ಜರ ।
ನಿಕರ ನಲಿನಲಿದಾಡೆ ಕೋಮಲ ।
ವಿಕಸಿತಾಮಲಪಾದಪಂಕಜ ಪದ್ಮಭವಜನಕಾ ॥
ಭಕುತಜನಪರಿಪಾಲ ಭವಹರ ।
ಮುಕುತಿದಾಯಕ ನರಮುರಾಂತಕ ।
ಭಕುತಿದಾಯಕ ನೀನೆ ಸಲಹೆಂದಿತ್ತ ರುಗ್ಮಿಣಿಯಾ ॥೩೩೭॥

**ರಾಗ ಘಂಟಾರವ ಝುಂಪೆತಾಳ**

ದುಂದುಭಿಯು ಮೊಳಗೆ ದ್ವಿಜ । ವೃಂದ ಸಹಿತಲೆ ಗಾರ್ಗ್ಯ ।
ಚಂದದಿಂ ಧಾರೆಯನ್ನೆರೆಸೆ ನಲವಿಂದಾ ॥
ಮಂದಗಮನೆಯರು ನಡೆ । ತಂದು ಸತಿಪತಿಗಳಿಗೆ ।
ಕುಂದಣಾರತಿಯ ಬೆಳಗಿದರು ಮುದದಿಂದಾ ॥೩೩೮॥

**ರಾಗ ಕೇತಾರಗೌಳ ಅಷ್ಟತಾಳ**

ಈ ರೀತಿಯಲಿ ಬಹು । ವಿಭವವಾಗಲು ಸರ್ವ । ನಾರಿಯರುತ್ಸವದೀ ॥
ಬೀರುತ್ತ ಹಸೆಯ ಶೃಂ । ಗಾರವನೆಸಗುತ್ತ । ಶೌರಿಯ ಕರೆದರಾಗಾ ॥೩೩೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ದ್ವಾರಕಿಯಲ್ಲಿ ನೀಲಾ । ಕಾಂತೆ ರುಗ್ಮಿಣಿ ಸಹಿತ ಕೃಷ್ಣನ ।
ಚಿಂತಿಸುವ ಭಕ್ತರಿಗೆ ಕೊಡುತಿಹ । ಸಂತಸವನೂ ॥೩೪೦॥

ಪರಮ ವಿಭವದೊಳಿದ್ದನೆನುತಲೆ | ದೊರೆ ಪರೀಕ್ಷಿತಗೊಲಿದು ಶುಕಮುನಿ |
ವರನು ಪೇಳ್ದೀ ಕಥೆಯನೆಲ್ಲವ | ಹರುಷದಿಂದಾ ||೩೪೦||

ಧರಣಿಯೊಳಗರಿತವರು ಕನ್ನಡ | ವರಮಹಾಕಾವ್ಯವನು ಮನ್ನಿಸಿ |
ಇರಲು ತಪ್ಪುಗಳನ್ನು ತಿದ್ದುತ | ಕರುಣಿಸುವುದೂ ||೩೪೧||

**ರಾಗ ಕಾಂಭೋಜಿ ಝಂಪೆತಾಳ**

ಸುರನಿಕರವಂದಿತಗೆ | ಸೂರ್ಯಸಂಕಾಶನಿಗೆ |
ಕರುಣಾಪಯೋನಿಧಿಗೆ ಕಲ್ಯಾಣಿಗೇ ||
ಶರದೇಂದುನಿಭಮುಖಿಗೆ | ಸೌಂದರ್ಯರೂಪಿಣಿಗೆ |
ಪರಮಪಾವನೆಗೆ ಪಂಕಜನೇತ್ರೆಗೇ || ಮಂಗಲಂ ಶುಭ ಮಂಗಲಂ ||೩೪೩||
**ಯಕ್ಷಗಾನ ರುಗ್ಮಿಣೀಸ್ವಯಂವರ ಮುಗಿದುದು**

# ೪. ಶ್ರೀಕೃಷ್ಣವಿವಾಹ - ಪಾತ್ರಗಳು

ಭೀಷ್ಮಕರಾಯ
ಮಂತ್ರಿ
ರುಕ್ಮ
ಬ್ರಾಹ್ಮಣ
ಶ್ರೀಕೃಷ್ಣ
ಶಿಶುಪಾಲ
ನಾರಿಯರು
ರುಕ್ಮಿಣಿ
ಮಾಗಧ
ಬಲರಾಮ
ಗಾರ್ಗ್ಯ
ಸತ್ರಾಜಿತ
ಕಿರಾತರು
ಪ್ರಸೇನ
ಸಿಂಹ
ಜಾಂಬವಂತ
ನಾರದ
ಕೃತವರ್ಮ
ಜಾಂಬವತಿ

ಸತ್ಯಭಾಮ

ದೇವದೂತ

ಮುರ

ನರಕ

ಸಖಿಯರು

ಚಾರಕರು

ಭೂದೇವಿ

ಭಗದತ್ತ

ವಿಂದಾನುವಿಂದರು

ಮಿತ್ರವಿಂದೆ

೧೬ ಸಾವಿರ ನಾರಿಯರು

ಸೈನಿಕರು ಇತ್ಯಾದಿ

**ರಾಗ ಕೇದಾರಗೌಳ ಅಷ್ಟತಾಳ**

ಬಲ್ಲೆನೈ ಮುನಿಪತಿ ಸತಿಯರ ತಂದಿಹು । ದೆಲ್ಲವು ವಿಹಿತವೆಂದೆ ॥
ಖುಲ್ಲರೊಡನೆ ಕಲಹವ ಗೆಯ್ಯೆ ನಿಷ್ಠುರ । ವಲ್ಲವೆಂದನು ರಾಮನು ॥೧೭೧॥

ಹಲಧರ ಲಾಲಿಸು ನಿನ್ನನುಜನ ಗುಣ । ತಿಳಿಯದು ನನಗೀಗಳು ॥
ಇಳೆಯೆಲ್ಲ ತುಂಬಿಹುದೊಂದಪವಾದವ । ಗಳಿಸಿದ ಶ್ರೀಕೃಷ್ಣನು ॥೧೭೨॥

ಉರುತರ ತಪವನಾಚರಿಸಿ ಸತ್ರಾರ್ಜಿತ । ತರಣಿಯೊಳ್ ಪಡೆದಿರುವ ॥
ವರಸ್ಯಮಂತಕ ತನಗೀಯೆನೆ ಲೋಭದಿ । ಕರುಣಿಸದಿರಲವನು ॥೧೭೩॥

ಧರಿಸಿ ಕಂಠದೊಳವನನುಜ ಪ್ರಸೇನನು । ತೆರಳಿರೆ ಮೃಗಬೇಟೆಗೆ ॥
ತಿರುಗಿ ಬಾರದೆ ಪೋದ ಮರುಗಿ ಸತ್ರಾಜಿತ । ನರಿತು ತನ್ನಯ ಮನದಿ ॥೧೭೪॥

ಪುಂಡರೀಕಾಕ್ಷನು ಮೂರ್ಖತೆಯೊಳಗೀಗ । ಚೆಂಡರಿದನುಜಾತನ ॥
ಕೊಂಡಿಹ ರತ್ನವನೆನುತ ಪೇಳುವನಯ್ಯ । ಖಂಡಿತದಪವಾದವ ॥೧೭೫॥

**ರಾಗ ಕೇದಾರಗೌಳ ಝಂಪೆತಾಳ**

ಬಂಧುಜನರೊಳು ಕೃಷ್ಣನು । ನಿಷ್ಠುರವ । ತಂದುಕೊಂಬುದೆ ಪ್ರಾಜ್ಞನು ॥
ಚಂದದೊಳು ಬೆಸಸೆನ್ನುತ । ಮುನಿ ನಡೆಯ । ಲಂದು ಬಲಖತಿತಾಳುತ ॥೧೭೬॥

ಇರಲನಕ ಗೋವಿಂದನು । ಸಂತಸದಿ । ಬರೆ ಕಂಡು ಬಲರಾಮನು ॥
ಪರಿಕಿಸದೆ ಕಿಡಿಸೂಸುತ । ಕುಳ್ಳಿರಲು । ಸರಸಿಜಾಂಬಕ ನಮಿಸುತ ॥೧೭೭॥

ಅರುಹಬೇಹುದು ದಯೆಯಲಿ । ಖತಿಯ ತಳೆ । ದಿರುವ ಕಾರಣ ತ್ವರೆಯಲಿ ॥
ಚರಣಸೇವಕನೆನ್ನುತ । ಕೈಮುಗಿಯ । ತಿರುವ ಶ್ರೀಶನ ಕಾಣುತ ॥೧೭೮॥

**ರಾಗ ಮಾರವಿ ಏಕತಾಳ**

ಬರದಿರು ಎನ್ನಿದಿರೆಲೆಲೇ ಕೃಷ್ಣನೆ । ಪರಿಕಿಸೆ ಮೋರೆಯನು ॥
ದುರುಳತ್ವವ ಕೈಗೊಂಡೆಲೊ ಮಾನವ । ತೊರೆದೆಯೊ ನಿಶ್ಚಯವು ॥೧೭೯॥

ಪುಟ್ಟಿದೆಯೇಕೆಮ್ಮನ್ವಯದೊಳು ಕಡು । ದುಷ್ಟನು ನಂಟರಲಿ ॥
ಕಟ್ಟಿದೆ ದ್ವೇಷವ ಅಪಹಾಸ್ಯವು ಮಹ । ನಿಷ್ಠುರವಾಯಿತೆಲಾ ॥೧೮೦॥

ತೋರುವುದೆಂತೈ ಬಾಂಧವಜನರೊಳು । ಮೋರೆಯ ನಾನೀಗ ॥
ಜಾರಚೋರತ್ವಗಳಲ್ಲದೆ ದುರಹಂ । ಕಾರವ ನೀ ತಳೆದೆ ॥೧೮೧॥

ಬಲನನುಜನ ದೆಸೆಯಿಂದಲಿ ತಮ್ಮಯ । ಕುಲವಳಿದುದುಯೆನುತ ॥
ಹಲವರು ನಿಂದೆಸೆ ಬಾಳುವೆನೆಂತೈ । ಗಳಿಸಿದೆ ಕೀರ್ತಿಯನು ॥೧೮೨॥

ಏಕೆ ಸತ್ರಾಜಿತನನುಜನ ಮಡುಹಿದೆ । ಯೇಕೆ ಸ್ಯಮಂತಕವು ॥
ಏಕೆಲೊ ಪಾತಕಗೆಯ್ದಿಹೆ ಖಳರಂ । ತೀ ಕೆಲಸವು ನಿನಗೆ ॥೧೮೩॥

ನಡೆವೆನು ಭೂಸಂಚರಣೆಗೆ ನಾ ನಿ । ನ್ನೊಡನಿರೆನೀಕ್ಷಣದಿ ॥
ಪಡೆದೆನು ದುಷ್ಕೀರ್ತಿಗಳುರೆ ಲೋಕದಿ । ಒಡನುದ್ಭವಿಸಿದಕೆ ॥೧೮೪॥

**ರಾಗ ಜಂಜೂಟಿ ಅಷ್ಟತಾಳ**

ಅರಿಯೆ ಪ್ರಸೇನ ಪೋದುದನು । ಅಪ । ಹರಿಸಲಿಲ್ಲವನ ರತ್ನವನು ॥
ಬರಿದೇತಕಪವಾದಪೇಳ್ವೆಯೆನ್ನೊಳು ದೋಷ ।
ವಿರದು ಕೋಪವಿದೇತಕಗ್ರಜ । ಸರಿಯೆ ನೀನೀಪರಿಯ ಗೆಯ್ವುದು ॥೧೮೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಣಿಯ ಸತ್ರಾರ್ಜಿತನೊಳೇತಕೆ । ತನಗೆ ಕೊಡಬೇಕೆನುತ ಕೇಳ್ದೆಯ ।
ಹನನಗೆಯ್ದೆ ಪ್ರಸೇನನನು ದಿಟ । ವೆನುವೆನೀಗ ॥೧೮೬॥

**ರಾಗ ಜಂಜೂಟಿ ಅಷ್ಟತಾಳ**

ಪರಮಪಾವನರತ್ನವಿದನು । ಯದು । ವರನುಗ್ರಸೇನಾಖ್ಯಗಾನು ॥
ಹರುಷದೊಳೀವರೆ ಕೇಳ್ದೆ ಲೋಭದೊಳಾತ ।
ಕರುಣಿಸದೆ ತಾನಿರಿಸಿ ಕೊಂಡಿಹ । ನರಿಯೆ ಮುಂದಣ ಸ್ಥಿತಿಯನಗ್ರಜ ॥೧೮೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಜಾರ ಚೋರತ್ವಗಳು ನಿನ್ನೊಳು । ಮಾರಿಹುದು ಕಪಟಂಗಳರಿವೆನು ।
ಯಾರೊಳೀಪರಿ ನುಡಿವೆ ಮಣಿಯಪ । ಹಾರಗೆಯ್ದೆ ॥೧೮೮॥

**ರಾಗ ಜಂಜೂಟಿ ಅಷ್ಟತಾಳ**
ಜನನಿ ಜನಕರಾಣೆ ಕೇಳು । ಆ । ಮಣಿಯು ಪ್ರಸೇನನ್ವಾರ್ತೆಗಳು ॥
ಎನಗೆ ಗೋಚರವಿಲ್ಲ ದುರುಳ ಕೃತ್ಯಂಗಳಿಗೆ ।
ಮನವ ಗೊಡೆ ನಾನೆಂದಿಗಾದರು ಎಣಿಸಬೇಡನುಮಾನವಗ್ರಜ ॥೧೮೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇರದಿರಲು ವಂಚನೆಯು ನಿನ್ನೊಳು । ತೆರಳಿ ಬೇಗ ಪ್ರಸೇನನಿರವನು ।
ಅರಿತು ಬಾ ಸತ್ರಾಜಿತಾಖ್ಯನ । ಹರುಷಗೊಳಿಸೈ ॥೧೯೦॥

**ಭಾಮಿನಿ**

ಪ್ರೀತಿಯೊಳು ಬಲಭದ್ರಗೊಂದಿಸಿ ।
ಮಾತುಳಾಂತಕನೆಂದನಗ್ರಜ ।
ಭೂತಳದೊಳೆಲ್ಲಿರಲಿ ಸತ್ರಾಜಿತನ ಸಹಭವನ ॥
ಈತತೂಕ್ಷಣವಯ್ದಿ ಜೀವದೊ ।
ಳಾತನಿರೆ ಕರೆತಹೆನು ಅಳಿದಿರೆ ।
ರೀತಿಯರಿದಯ್ತಂದು ಬಿನ್ನಹ ಮಾಳ್ಪೆನೆಂದೆನುತ ॥೧೯೧॥

**ವಾರ್ಧಕ**

ಹರುಷದೊಳಗಪ್ಪಣೆಯ ಪಡೆದು ಪೊರಮಟ್ಟಾಗ ।
ಹರಿಯು ತಾನೇಕಾಂಗಿಯಾಗಿಯರಸಲು ಪೋಗೆ ।
ತೊರೆದಿರಲ್ಕಸುವ ಸತ್ರಾಜಿತನ ಸಹಭವಂ ಮಣಿಯ ನೆವದೊಳು ಕೃಷ್ಣನು ॥
ಶಿರವರಿದನೆಂದಪಖ್ಯಾತಿ ತಪ್ಪದೆನುತ್ತ ।
ಕರೆದು ಕೃತವರ್ಮಸುಜ್ಯೋತಿಸಾತ್ಯಕಿಯರಂ ।
ಭರದಿ ಜತೆಗೊಂಡಾಗ ವಿಂಧ್ಯಾದ್ರಿಯುಪವನದಿ ಚರಿಸುತಲ್ಲಲ್ಲರಸುತ ॥೧೯೨॥

**ರಾಗ ಕಾಂಭೋಜಿ ಝಂಪೆತಾಳ**

ತುರಗಪಾದದ ಚಿಹ್ನೆಯರಸುತಯ್ದಿದನೊಂದು ।
ಸರಸಿಯಡೆಯೊಳು ರಕ್ತ ಸುರಿದಿಹುದ ಕಂಡು ॥
ಧುರಗೆಯ್ದು ಕೇಸರಿಯ ನಖದಿ ಕರುಳುಗಿದಸುವ ।
ತೊರೆದು ಬಿದ್ದ ಪ್ರಸೇನನಿರವ ಕಂಡಾಗ ॥೧೯೩॥

ನೋಡಿದಿರೆ ಯಾದವರು ಕೇಸರಿಯ ದೆಸೆಯಿಂದ ।
ರೂಢಿಯೊಳು ಬಿದ್ದಿಹನು ಮಣಿಯನುರೆ ಕೊಂಡು ॥
ಓಡಿಹುದು ಸಿಂಹನಿದನರಸಿ ಮರ್ದಿಪೆನೆನುತ ।
ಗಾಢದಿಂದಲೆ ಮುಂದಕಯ್ದೆ ನರಹರಿಯು ॥೧೯೪॥

ಭರಿತವಾಗಿಹ ತರುಲತೆಯ ಮಧ್ಯದೊಳಗರುಣ ।
ಕಿರಣದಂದದಿ ರಂಗಭೂಮಿ ಭೀಕರದಿ ॥
ಪರಿಶೋಭಿಸುತ್ತಿರುವ ಬಳಿಗಾಗಿ ಶ್ರೀಹರಿಯು ।
ತೆರಳಿ ಧುರಗೆಯ್ದರಾರಿಲ್ಲೆನುತಲಾಗ ॥೧೯೫॥

ಕರುಳುಗಿದ ಕೇಸರಿಯ ಡಿಂಬ ಭಾಸುರಮಾಗಿ ।
ಸುರಿವ ಶೋಣಿತದಿಂದಲೊರಗಿರುವ ಸ್ಥಳದಿ ॥
ಪರಿಶೋಭಿಸುತ್ತಿರುವ ಭಲ್ಲೂಕ ಪದಚಿಹ್ನೆ ।
ಧರೆಯೊಳಿರೆ ಕೃತವರ್ಮಮುಖ್ಯರಿಗೆ ತೋರ್ದ ॥೧೯೬॥

**ಭಾಮಿನಿ**

ನೋಡಿದಿರೆ ಭಲ್ಲೂಕವೀಯೆಡೆ ।
ಮಾಡಿಹುದು ಹರ್ಯಕ್ಷನೊಳು ಧುರ ।
ರೂಢಿಜರ್ಝರಮಾಗಿ ಧೂಸರವೆದ್ದು ಶೋಣಿತದಿ ॥
ಕೂಡಿ ಕೆಸರಾಗಿಹುದು ಹನನವ ।
ಮಾಡಿ ಸಿಂಹನ ಮಣಿಯನುರೆ ಕೊಂ ।
ಡೋಡಿಹುದು ಪಥವಿಡಿದು ಕರಡಿಯನರಸಬೇಕೆನುತ ॥೧೯೭॥

**ರಾಗ ಕೇದಾರಗೌಳ ಝಂಪೆತಾಳ**

ಭಲ್ಲುಕನ ಪದಚಿಹ್ನೆಯ । ಪಿಡಿದು ಯದು । ವಲ್ಲಭನು ವನವೀಥಿಯ ॥
ಮೆಲ್ಲನರಸುತ ಪೋಗಲು । ಮುಂದೆ ಮುಂ । ದಲ್ಲಿ ಗುಹೆಯೊಂದೆಸೆಯಲು ॥೧೯೮॥

ಕಂಡಿರೇ ಋಕ್ಷಗುಹೆಯ । ಮಣಿಯ ಸೆಳೆ । ಕೊಂಡಿದರೊಳಿರ್ಪ ಬಗೆಯ ॥
ಕಂಡು ನಾನೀ ಕ್ಷಣದಲಿ । ಮೃಗನಸುವ । ಪಿಂಡಿ ಬಹೆನತಿ ತ್ವರೆಯಲಿ ॥೧೯೯॥

ಬರುವನಕವೀ ದ್ವಾರದಿ । ಕುಳ್ಳಿರೆಂ । ದರುಹಿ ನಗಧರ ವೇಗದಿ ॥
ತೆರಳಿ ಗುಹೆಯೊಳಗಾಗಲು । ಅರ್ಕಶತ । ಕಿರಣ ಮುಂದೆಸೆ ಪೊಳೆಯಲು ॥೨೦೦॥

ವರಸ್ಯಮಂತಕರತ್ನವು । ಖಂಡಿತದೊ । ಳಿರುತಿರ್ಪುದಾ ತೇಜವು ॥
ಮಿರುಗುತಿದೆಯೆಂದರಿಯುತ । ಹರಿ ಮುಂದೆ । ತೆರಳೆ ತನ್ನೊಳು ನಲಿಯುತ ॥೨೦೧॥

**ವಾರ್ಧಕ**

ಶರದಋತು ಪೂರ್ಣಿಮೆಯೊಳುದಯಚಂದಿರಕಾಂತಿ ।
ಸುರುಚಿರಾನನದಿಂದ ಶೋಭಿಸುತ ವಿಭವದಿಂ ।
ತರುಣಿಯೊರ್ವಳೆ ಕುಳಿತು ಬಾಲಕನ ತೊಟ್ಟಿಲಂ ಹರುಷದಿಂದಲೆ ತೂಗುತ ॥
ಗಿರಿಜೆರಮೆವಾಣಿಯರ ಚೆಲ್ವಿಕೆಗೆ ಮಿಗಿಲೆನಿಸಿ ।
ಸರಸಿಜಾಂಬಕಿ ಮೆರೆವ ಸೌಂದರ್ಯವಿಭ್ರಮಕೆ ।
ಬೆರಗಾಗಿ ಹರಿಯೊಂದು ಶಿಲೆಯ ಮರೆಯಾಗಿರಲ್ ಪಾಡಿ ತೂಗುತಲಾಗಳು ॥೧೦೧॥

**ಜೋಗುಳ ಪದ**

ಜೋ ಜೋ ಜೋ ಜೋ ಜೋ ಸುಕುಮಾರ ।
ಜೋ ಜೋ ಸದ್ಗುಣಧೀರ ಶೃಂಗಾರ ॥
ಜೋ ಜೋ ಜಾಂಬವ ತರಳ ಪ್ರವೀರ ।
ಜೋ ಜೋ ಭಲ್ಲೂಕರಾಜಾಧಿರಾಜ । ಜೋ ಜೋ ॥ ಪಲ್ಲ ॥

ತಂದೆಯಾಗಿಹ ಜಾಂಬವಂತ ಕೇಸರಿಯ ।
ಕೊಂದು ತಂದಿಹ ಸ್ಯಮಂತಕಮಣಿಯ ॥
ಚಂದದೊಳದ ನಿನ್ನ ತೊಟ್ಟಿಲ ಬಳಿಯ ।
ಬಂಧಿಸಿಹನು ನೋಡು ಭಾಗ್ಯಾಂಭೋನಿಧಿಯ । ಜೋ ಜೋ ॥೧೦೨॥

ಇಷ್ಟಾರ್ಥಗಳನೆಲ್ಲ ಕೊಡುವುದು ನೋಡು ।
ಹೃಷ್ಟಮಾನಸನಾಗಿ ಪಿಡಿದು ನೀನಾಡು ॥
ಸೃಷ್ಟಿಯೊಳಿದಕೆ ಸಮಾನತೆ ಜೋಡು ।
ಇಷ್ಟಾದರಿಲ್ಲ ನೀ ಪಿಡಿದು ಮುದ್ದಾಡು । ಜೋ ಜೋ ॥೧೦೪॥

**ಭಾಮಿನಿ**

ಪರಮಸಂತೋಷದಲಿ ಪಾಡುತ ।
ತರಳನನು ತೂಗುತ್ತಲಿರಲದ ।
ನರಿತು ಶ್ರೀಹರಿ ಪಾಂಚಜನ್ಯವನಾಗ ಮೊಳಗಿಸಲು ॥
ಅರರೆ ಪಿತ ನಾ ಕೆಟ್ಟೆ ಬಾ ಬಾ ।
ಪರಮಭೀಕರಮೇನಿದೆನ್ನಲು ।
ಕೆರಳಿಯಾರ್ಭಟಿಸುತ್ತ ಜಾಂಬವ ಬಂದು ಪರಿಕಿಸುತ ॥೧೦೫॥

**ರಾಗ ಘಂಟಾರವ ಅಷ್ಟತಾಳ**

ಆರೋ ಎನ್ನಯ ಗುಹೆಯ ಸ್ವತಂತ್ರಿಸಿ ।
ಸೇರಿದೆಯ ಪೆಸರೇನು ಬಂದಿಹ । ಕಾರಣಂಗಳಿದೇನಿದು ॥೧೦೬॥

**ರಾಗ ಕೇದಾರಗೌಳ ಝಂಪೆತಾಳ**

ವಸುದೇವನಾತ್ಮಭವನು | ದ್ವಾರಕೆಯೊಳ್ | ವಸತಿಯಂ ಗೆಯ್ದಿರ್ಪನು ||
ಪೆಸರು ಕೇಳೆನ್ನ ಜಗದಿ | ಕೃಷ್ಣನೆಂ | ದುಸಿರುವರು ಪ್ರಖ್ಯಾತದಿ ||೨೦೭||

**ರಾಗ ಘಂಟಾರವ ಅಷ್ಟತಾಳ**

ಅರರೆ ಬಾಲೆಯ ಬೆದರಿಸಿದಂದಗ |
ಳರುಹದಿರೆ ಶಿರವರಿದು ಶ್ರೋಣಿತ | ಧರೆಗೆ ಚೆಲ್ಲುವೆ ನೋಡೆಲಾ ||೨೦೮||

**ರಾಗ ಕೇದಾರಗೌಳ ಝಂಪೆತಾಳ**

ವರ ಸ್ಯಮಂತಕಮಣಿಯನು | ಎನ್ನ ಸಖ | ಧರಿಸಿ ಬಂದಿರಲದರನು ||
ಬರಸೆಳೆದು ನೀನೀಗಳು | ತಂದುದ | ನ್ನರಿತು ಬಂದಿಹೆನೊಯ್ಯಲು ||೨೦೯||

**ರಾಗ ಘಂಟಾರವ ಅಷ್ಟತಾಳ**

ಎನ್ನ ಬಾಹುವಿಕ್ರಮದೊಳು ಹರ್ಯಕ್ಷ |
ನನ್ನು ಮಡುಹಿ ಸ್ಯಮಂತಕದ ಮಣಿ | ಯನ್ನು ನಾ ತಂದಿರ್ಪೆನು ||೨೧೦||

**ರಾಗ ಕೇದಾರಗೌಳ ಝಂಪೆತಾಳ**

ವಿಹಿತದಿಂದಲೆ ಮಣಿಯನು | ಕೊಡುಯೆನ್ನೊ | ಳಹಿತಬೇಡ್ವೆ ಛಲವನು ||
ಕುಹಕಿಯಂದದಿ ಗೆಯ್ಯಲು | ಪೋಪೆ ನೀ | ಮಿಹಿರಸುತನೆಡೆಗೀಗಳು ||೨೧೧||

**ರಾಗ ಘಂಟಾರವ ಅಷ್ಟತಾಳ**

ಅಲ್ಲ ನಾ ಬಡಮೃಗವು ತ್ರೇತಾಯುಗ |
ದಲ್ಲಿ ಪುಟ್ಟಿಹ ದ್ವಾಪರೋದ್ಭವ | ಜಳ್ಳುಮಾನವ ನಿನಗೆಲಾ ||೨೧೨||

**ರಾಗ ಮಾರವಿ ಏಕತಾಳ**

ಒದರುವುದೇತಕರಣ್ಯದಿ ಜನಿಸಿದ | ಮದಗಜ ಮಾನವಗೆ ||
ವಿಧಿಯೊಳು ವಶವಹುದೆಲೆ ಭಲ್ಲೂಕನೆ | ನಿಧನವ ಗೆಯ್ಯುವೆನು ||೨೧೩||

ಖುಲ್ಲನೆ ತಿರ್ಯಕ್ ಪ್ರಾಣಿಯೊಳ್ ಜನಿಸಿಹ | ಭಲ್ಲುಕನೆಂದರಿತೆ ||
ಅಲ್ಲೆಲೊ ನಾ ಪರಮೇಷ್ಠಿ ಯಾಕಳಿಕೆಯೊ | ಳಲ್ಲುದಿಸಿಹೆ ಕೇಳು ||೨೧೪||

ಸೃಷ್ಟಿಯೊಳಿಹ ಭೂತಾತ್ಮಗಳಾ ಪರ | ಮೇಷ್ಠಿಯೊಳೊಗೆದಿಹುದು ||
ತಟ್ಟನೆ ಪೇಳಹಂಕರಿಸದೆ ನೀ ಗೆ | ಯ್ದಿಷ್ಟಾರ್ಥಗಳೇನು ||೨೧೫||

ವಾರಿಜಸಖನೊಳು ಶಪಥವ ಗೆಯ್ಯುತ | ಮೇರು ಮಹೀಧರವ ||
ಸಾರುತಲೊಂದಿನವೇಕೋವಿಂಶತಿ | ವಾರದಿ ಸುತ್ತಿಹೆನು ||೧೦೬||

ಅಳೆದಿಹೆನೊಂದೇ ಪದದೊಳಗೆಲೆ ಮೃಗ | ನಿಳೆಯೆಲ್ಲವ ನಾನು ||
ಬಲಪೌರುಷವಿನ್ನೇನೆಸಗಿಹೆ ನೀ | ತಿಳುಹೆನಗೀಕ್ಷಣದಿ ||೧೦೭||

ತ್ರೇತಾಯುಗದಿ ದಶ್ಯಾಸ್ಯನ ಸೇನಾ | ವ್ರಾತದ ದರ್ಪದಲಿ ||
ಘಾತಿಸಿದೆನು ತೃಣದಂದದಿ ಮನುಜನೆ | ಖ್ಯಾತಿಯ ನೀನರಿಯೆ ||೧೦೮||

ತೋರೆಲೊ ವಿಕ್ರಮ ಮುದಿ ಭಲ್ಲೂಕನೆ | ಮಾರಾಂತೆನ್ನೊಡನೆ ||
ಯಾರೊಳು ಪೌರುಷ ನುಡಿವೆಯಯಮಪುರ | ದಾರಿಯ ಪಿಡಿಸುವೆನು ||೧೦೯||

**ರಾಗ ಶಂಕರಾಭರಣ ಮಟ್ಟೆತಾಳ**

ಅರರೆ ಪೋರನೆನ್ನ ಕೆಣಕಿ | ಬರಿದೆ ಪ್ರಾಣ ನೀಗಿಕೊಂಬೆ |
ಪರಿಯ ನೋಡೆನುತ್ತ ತರುವ | ಮುರಿದು ಬಡಿದನು ||೧೧೦||

ಭರಕೆ ತಪ್ಪುತಾಗ ಶ್ರೀಶ | ನೊರೆದನೆಲವೊ ಮಣಿಯ ಕೊಡಲು |
ಪೊರೆವೆ ನಿನ್ನ ಸಾರಿ ಪೇಳ್ದೆ | ಕಲಹ ಬೇಡವೊ ||೧೧೦||

ಕ್ರೂರಕೋಪದಿಂದಲಾಗ | ಭಾರಿಗಿರಿಯ ಕಿತ್ತು ವೇಗ |
ಪೋರ ತಾಳೆನುತ್ತ ಜಾಂಬ | ವಂತನೆಸೆದನು ||೧೧೧||

ತಿರುಹೆ ಗದೆಯ ಸರಸಿಜಾಕ್ಷ | ಗಿರಿಯ ಚೂರ್ಣಗೆಯ್ಯಲಾಗ |
ಕೆರಳಿ ಜಾಂಬವಂತ ಸಿಂಹ | ನಾದ ಗೆಯ್ಯುತ ||೧೧೩||

ಪೊಡೆದ ಸಾಮಾನ್ಯ ಗಿರಿಯ | ನೊಡೆದೆಯೆಲವೊ ಮೇರುಶ್ಶೈಲ |
ಪಿಡಿದು ನೆಗಹಿಬಿಡುವೆ ನೋಡೆ | ನುತ್ತ ಗಜರಿದ ||೧೧೪||

**ರಾಗ ಭೈರವಿ ಅಷ್ಟತಾಳ**

ಕಿರಿಬೆಟ್ಟನೊಳಗೆ ನಾನು | ಗೋವರ್ಧನ | ಗಿರಿಯನ್ನು ನೆಗಹಿರ್ಪೆನು ||
ವರಮಹಮೇರುಪರ್ವತಕಂಜೆ ನಿನಗಂಥ | ಗಿರಿಯ ಕೀಳಲು ಸಾಧ್ಯವೆ ||೧೧೫||

ಶರಧಿಗೆ ಸೇತುವನ್ನು | ಬಂಧನಗೆಯ್ಯು | ತ್ತಿರೆ ರಜತಾದ್ರಿಯನ್ನು ||
ಧರೆಯಿಂದ ನೆಗಹೆ ಭರ್ಗನು ಬಂದು ಎನ್ನೊಳು | ಪರಮ ಸಖ್ಯವ ಗೆಯ್ದನು ||೧೩೬||

ದುರುಳ ಹಿರಣ್ಯಾಕ್ಷನು | ಪಾತಾಳಕ್ಕೆ | ಧರೆಯನ್ನು ಒಯ್ದಿರ್ಪನು ||
ತೆರಳಿ ನಾನಾತನ ವಧಿಸಿ ತಂದಿಹೆ ವಸುಂ | ಧರೆಯ ನೀನದ ಬಲ್ಲೆಯ ||೧೧೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲ್ಲಿ ವರಹನು ನಿನಗು ತತ್ಸಂ । ಬಂಧವೆಲ್ಲಿಹುದಲ್ಪ ಮಾನವ ।
ಬಲ್ಲಿದರ ಪೆಸರಿಡಿದು ಜೀವಿಪೆ । ಯಲ್ಲ ಮರುಳೆ ॥೧೧೮॥

ಮರೆಯೆ ಪಿಂದಿನ ಭವದ ಜ್ಞಾನಗ । ಳಿರುವರೆಲೆ ತಿರ್ಯಕ್ಕು ಜೀವನ ।
ಧರಿಸಿರುವ ಮೃಗ ನಿನಗೆ ಪೂರ್ವ । ಸ್ಮರಣೆಯಿಹುದೆ ॥೧೧೯॥

ಇರುತಿಹರು ವಂಚಕರು ಮಿಥ್ಯವ । ನರುಹಿ ಜೀವಿಪರೈಸೆ ಭುವನದೊಳ್ ।
ಮೆರೆವನೊರ್ವನು ದಾಶರಥಿ ಮಹ । ಧುರಸಮರ್ಥ ॥೧೨೦॥

ಜ್ಞಾನಹೀನಗೆ ಕನಕಪರ್ವತ । ಮೇಣು ಮೃಣ್ಮಯ ಮಾಗಿ ತೋರ್ಪುದು ।
ನೀನು ಮೃಗನದರಿಂದ ಶೂನ್ಯ । ಜ್ಞಾನಿ ದಿಟವು ॥೧೨೧॥

ನರನ ನೀ ಷಡ್ವೈರಿಬಾಧೆಯೊ । ಳಿರುವೆ ಜ್ಞಾನವಿಹೀನನಾಗಿಹೆ ।
ಕರಿಯು ತಿರ್ಯಗ್ಜಂತು ಮೋಕ್ಷಕೆ । ತೆರಳಿತೆಂತು ॥೧೨೨॥

**ರಾಗ ಭೈರವಿ ಏಕತಾಳ**

ಹಿಂದಿನ ಭವಸುಕೃತಗಳು । ಒಲ । ವಿಂದಲೆ ಸುಜ್ಞಾನಗಳು ॥
ಬಂದಾತ್ಮಗೆ ಪರಗತಿಯ । ತಾ । ಹೊಂದಿಪುದರಿತುಕೊ ಸ್ಥಿತಿಯ ॥೧೨೩॥

ಚರಿಸಿದ ಪುಣ್ಯದ ಫಲದಿ । ನಾ । ಧರಣಿಜೆಯರಸನ ಮುದದಿ ॥
ಸ್ಮರಿಸುವ ಕಿಂಕರನಹೆನು । ಗೆಲ । ಲರಿಯದು ತೆರಳೈ ನೀನು ॥೧೨೪॥

ಒದರಿದಿರೆಲೊ ಪೌರುಷವ । ಎಲೆ । ಮುದಿಮೃಗ ಬಲಸಾಹಸವ ॥
ಕದನದಿ ತೋರಿಸು ಬೇಗ । ನಿನ । ಗೊದಗಿತು ಮೃತಿ ನೋಡೀಗ ॥೧೨೫॥

ಘಳಿಲನೆ ಕಿಡಿ ಸೂಸುತ್ತ । ಮಹ । ಶಿಲೆಯನು ಮೇಲ್ನೆಗಹುತ್ತ ॥
ಜಲಜಾಕ್ಷನಿಗಿಡಲಾಗ । ಪದ । ಚಲಿಸುತ ತಪ್ಪಿದ ಬೇಗ ॥೧೨೬॥

**ರಾಗ ಶಂಕರಾಭರಣ ಮಟ್ಟೆತಾಳ**

ಮುಷ್ಟಿಯನ್ನು ಬಲಿದು ಕ್ರೋಧಾ । ವಿಷ್ಟನಾಗಿ ಜಾಂಬವಂತ ।
ತಟ್ಟನೆರಗೆ ಕೃಷ್ಣ ಕಂ । ಗೆಟ್ಟು ಛಲದಲಿ ॥೧೨೭॥

ಅರರೆ ಭಲ್ಲೂಕ ನಿನ್ನ । ಶಿರವ ಚೂರ್ಣಗೆಯ್ವೆನೆನುತ ।
ಭರದಿ ಮುಷ್ಟಿಯಿಂದಲೆರಗೆ । ಕೆರಳಿ ಜಾಂಬವ ॥೧೨೮॥

ಕಡು ಬಲಾಢ್ಯನೆನುತಲರಿತು । ಝಡಿದು ಭುಜದಿ ಭುಜವ ತಿವಿಯೆ ।
ಜಡಜನಾಭ ಮತ್ತೆ ಮುಷ್ಟಿ । ಯಿಂದಲೆರಗಿದ ॥೧೩೯॥

ಅರರೆ ಎನ್ನೊಳಿಷ್ಟು ಛಲದಿ । ಧುರವಗೆಯ್ದರಿಲ್ಲ ವಿಶ್ವಂ ।
ಬರೆಯ ಸೃಜಿಸಿದಂಥ ಮಹಾ । ಪುರುಷ ನೀನೆಲಾ ॥೧೪೦॥

ಆರು ನಾನಾದರೇನು । ತೋರು ನಿನ್ನ ಸಹಸವೆನುತ ।
ವಾರಿಜಾಕ್ಷನಾಗ ಕ್ರೋಧ । ವೇರಿ ನಿಂದಿರೆ ॥೧೪೧॥

ಸ್ಥಿರಚರಾದಿ ಸಕಲಭೂತ । ಭರಿತಬ್ರಹ್ಮಾಂಡ ನಿನ್ನೊ ।
ಳಿರುವುದೆಂದೆ ತಿಳಿದೆ ನಿಜವ । ನರುಹಬೇಹುದಾ ॥೧೪೨॥

**ಭಾಮಿನಿ**

ಶರಣನಿಂತೆನಲಾಗ ಶ್ರೀಹರಿ ।
ಕರುಣದೊಳು ಕ್ಷಮೆಯಾಂತು ವೇಗದಿ ।
ಧರಿಸಿದನು ಶ್ರೀರಾಮರೂಪವನತಿ ವಿಲಾಸದಲಿ ॥
ಪರಿಕಿಸುತ ಜಾಂಬವನು ನೇತ್ರದಿ ।
ಸುರಿಸುತಾನಂದಾಶ್ರುವನು ಥರ ।
ಥರಿಸಿ ಬಂದಡಿಗೆರಗಿ ಕರಗಳ ಮುಗಿದು ದೈನ್ಯದಲಿ ॥೧೪೩॥

**ರಾಗ ಮೋಹನ ಆದಿತಾಳ**

ರಾಮ ರಾಘವ ದಶರಥಬಾಲ । ಜಯ । ಸೀತಾಲೋಲ ॥ ಪಲ್ಲ ॥

ರಾಮ ದಶಾಸ್ಯವಿಮರ್ದನ ಜಯ ಜಯ ।
ರಾಮ ರಾಮ ಮಾಂ ಪಾಹಿ ಗುಣಾಕರ ॥ ಅ.ಪ ॥

ಹರನಾ ಚಾಪವ ನೆಗಹಿದ ಧೀರ । ಧರಣಿಜೆಪತಿ ಶೂರ ।
ವರಜಾಮದಗ್ನಿಮದಹರ । ದುರುಳರ ಸಂಹಾರ ॥ ವರಪಿತನಾಜ್ಞಾನುಸಾರ ।
ತೆರಳಿ ವಿಪಿನದೊಳು ದುರುಳ ವಿರಾಧನ ।
ತರಿದು ಮುನೀಶರ ಪೊರೆದಿಹ ಮಹಿಮನೆ ॥ ರಾಮ ॥೧೪೪॥

ಧೀರ ವಾಲಿಯ ಮಡುಹಿದ ಲೋಲ । ಸೂರ್ಯಜಪರಿಪಾಲ ।
ಸೇರಿಸಿ ಕರಡಿಕಪಿಜಾಲ । ವಾರಿಧಿವಿಶಾಲ । ಮೀರೀಯುಬ್ಬುವ ಕಲ್ಲೋಲ ॥
ಭಾರಿಯ ಗಿರಿಸಮ್ಮೇಳನಸೇತುವ ।
ನೀರಜಾಕ್ಷ ನೀ ಗೆಯ್ದಿಹೆ ಸುಲಭದಿ ॥ ರಾಮ ॥೧೪೫॥

ದುರುಳ ರಾವಣನ ನೀ ಸಂಹರಿಸಿ । ಶರಣನ ಪತಿಕರಿಸಿ ।
ಧರಣಿಜೆಯ ಭರದಿಕರೆಸಿ । ಉರಿಯೊಳು ನೀ ಪೊಗಿಸಿ ॥ ಪರಮಪಾವನೆಯವಳೆಂದೆನಿಸಿ । ಹರುಷದಿ ಸತಿಯೊಡಗೂಡುತಯೋಧ್ಯಾ ।
ಪುರಕಯ್ದುತ ಸಿಂಹಾಸನವೇರಿಹ ॥ ರಾಮ ॥೨೪೬॥

**ಕಂದ**

ಚರಣಕೆ ವಂದಿಸಿ ನುತಿಸುವ ।
ಶರಣನ ಕಾಣುತ ಶ್ರೀಹರಿಯೆನ್ನೀತೆರದೊಳ್ ॥
ಪರಿಪರಿ ನುತಿಸುವುದೇತಕೆ ।
ಕೊರತೆಗಳೇನಿದೆ ಮನದೊಳಗರುಹೆನಲಾಗಳ್ ॥೨೪೭॥

**ರಾಗ ಮೋಹನ ಅಷ್ಟತಾಳ**

ದುಷ್ಟಮರ್ದನ ರಕ್ಷಿಸೊ । ನಿನ್ನೊಳು ಧುರ । ಗೊಟ್ಟಿಹೆನದ ಕ್ಷಮಿಸೊ ॥ ಪ ॥

ಕೆಟ್ಟಹಂಕಾರಪಥಕೆ ಎನ್ನಯ ಮನ । ಗೊಟ್ಟೆನು ದಯವಿರಿಸೊ । ಹೇ ದೇವ  ॥ ಅ ಪ ॥

ಸತಿಸುತರಾಸೆಯೊಳು । ಸಂಸಾರದ । ವ್ಯಥೆಯಾದ ನರಕದೊಳು ॥
ಹಿತವೆಂದು ಪೊರಳುವ ಜನ್ಮ ನಿನ್ನಯ ನಾಮ । ಸ್ತುತಿಸದು ಅವಧರಿಸು । ಶ್ರೀರಾಮ ॥೨೪೮॥

ಏತಕಜ್ಞಾನವನ್ನು । ಕೊಟ್ಟಿಹೆಯೆನ । ಗೇತಕೀ ಜನ್ಮವನ್ನು ॥
ಸೀತಾವಲ್ಲಭ ತವ ಮಾಯೆಯೊಳೆನ್ನನು । ನೀ ತಳುಕಿಕ್ಕಿಹೆಯ । ಶ್ರೀದೇವ ॥೨೪೯॥

**ಭಾಮಿನಿ**

ಅರಿಯೆ ನೀನಖಿಳಾತ್ಮನೆಂಬುದ ।
ಧುರಕೆ ನಿಂದಿಹೆ ಸ್ವಾಮಿ ಮನದೊಳ ।
ಗಿರಿಸದೌದಾಸಿನವ ಸಲಹೆಂದೆರಗಲಾಕ್ಷಣದಿ ॥
ಶರಣ ಬಾ ಬಾರೆನುತ ಶ್ರೀಹರಿ ।
ಭರದೊಳಾಲಿಂಗಿಸುತ ಮೋದದಿ ।
ಜರಡುಮೃಗ ನೀನಲ್ಲವಿಂಗಿತವರಿತು ಬಂದಿಹೆನು ॥೨೫೦॥

**ರಾಗ ಸುರುಟಿ ಏಕತಾಳ**

ಶರಣನೆಯವಧರಿಸು । ಪಿಂದಕೆ । ಒರೆದಿಹೆನದ ಸ್ಮರಿಸು ॥
ದರುಶನವೀಯುವೆ ಮುಂದಿನ ಯುಗದೊಳ । ಗಿರು ನೀನಾವರೆಗೆಂಬುದ ಮರೆತಿಹೆ ॥೨೫೧॥

ವರವಿತ್ತಿಹ ತೆರದಿ । ಬಂದಿಹೆ । ಶರಣನೆ ನೀ ಮುದದಿ ॥
ಸ್ಮರಿಸುತಲನುದಿನ ಕಲ್ಪಾಂತ್ಯದವರೆ । ಗಿರಲಾನಂತರ ಮೋಕ್ಷವನೀವೆನು ॥೨೫೨॥

ಕರುಣಿಸು ರತ್ನವನು । ಪೊಂದಿಹೆ । ಬರಿದಪಕೀರ್ತಿಯನು ॥
ತೆರಳುವೆ ನಾನನಲಾಕ್ಷಣ ಜಾಂಬವ । ಹರಿಪದಕಭಿನಮಿಸುತಲಿಂತೆಂದನು ॥೧೫೩॥

**ವಾರ್ಧಕ**

ಆದಿದೇವರ ದೇವ ನಿನ್ನೊಡನೆ ಮುಳಿದು ನಾ ।
ಕಾದಿದಪರಾಧಪರಿಹಾರಕೆನ್ನಯ ಸುತೆಯ ।
ಮೋದದಿಂದೀಯುವೆನು ಜಾಂಬವತಿಯೆಂಬಿವಳ ಸಾದರದಿ ಸ್ವೀಕರಿಪುದು ॥
ಪಾದದರ್ಶನದಿಂದ ಧನ್ಯ ತಾನೆಂದೆನುತ ।
ಶ್ರೀಧವಂಗಾತ್ಮಜೆಯ ಮಣಿಸಹಿತಲರ್ಪಿಸಲ್ ।
ಖೇದವಡದಿರು ಸುಖದಿ ಬಾಳೆನುತ ಶ್ರೀಹರಿಯು ಪೊರಟು ಗುಹೆಯಂ ವೇಗದಿ ॥೧೫೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪರಿಕಿಸಲು ದ್ವಾರದಲಿ ನಿಂದಿಹ । ರಿರದಿರಲು ಕೃತವರ್ಮಮುಖ್ಯರು ।
ತೆರಳಿದರು ಪುರಕೆನುತ ಶ್ರೀಹರಿ । ಯರಿತು ಮನದಿ ॥೧೫೫॥

ಪೊರಟು ವೇಗದೊಳಾಗ ನಗರಿಗೆ । ತರುಣಿಸಹಿತಯ್ತಂದು ಹಲಧರ ।
ಗೆರಗಿ ಪೇಳ್ದ ಪ್ರಸೇನನಳಿದಿಹ । ಹರಿಯ ಕೆಣಕಿ ॥೧೫೬।

ಕೊಂದು ಹರ್ಯಕ್ಷನನು ಜಾಂಬವ । ತಂದ ಮಣಿಯನು ಬಿಲದೊಳಿರಿಸಿರೆ ।
ಸಂಧಿಸಿತು ಧುರ ಗೆಲಿದು ರತ್ನವ । ತಂದೆನೀಗ ॥೧೫೭॥

ತರಳೆಯನ್ನೊಲಿದಿತ್ತನಾತನು । ಪರಮ ಭಾಗವತಾಖ್ಯನೆನ್ನಲು ।
ಹರುಷದೊಳು ಹಲಧರನು ಪೇಳ್ದನು । ಹರಿಯೊಳಾಗ ॥೧೫೮॥

ಬಿಲವ ಪೊಕ್ಕಿಹ ಕೃಷ್ಣನೆತ್ತಲು । ಚಲಿಸಿದನೊ ನಾವರಿಯೆವೆನ್ನುತ ।
ಕಳಕಳಿಸಿ ಕೃತವರ್ಮ ಪೇಳ್ದುದ । ಕಳಲುತಿರ್ದೆ ॥೧೫೯॥

**ಭಾಮಿನಿ**

ತೆರಳಿಬಂದೆಯ ಕ್ಷೇಮದಲಿ ಬಹು ।
ಹರುಷವೆಂದಾಕ್ಷಣದಿ ಚಾರರ ।
ತೆರಳಿಸುತ ಸತ್ರಾಜಿತಾಖ್ಯನ ಕರೆಸಿ ಹಲಧರನು ॥
ಭರದೊಳಾತನಿಗಾ ಸ್ಯಮಂತಕ ।
ವರಮಹಾರತ್ನವನು ಕರುಣಿಸಿ ।
ಯೊರೆದನಾತನನುಜನಳಿದಿಹ ಚರಿತೆ ಸಾಂಗದಲಿ ॥೧೬೦॥

**ರಾಗ ಸಾಂಗತ್ಯ ರೂಪಕತಾಳ**

ಮರುಗಿ ಹಮ್ಮೈಯ್ಸುತ್ತಲಾಗ ಸತ್ರಾಜಿತ । ಹರಿಯೆ ನಿನ್ನೊಳು ದ್ರೋಹವೆಣಿಸಿ ॥
ಬರಿಯಪವಾದವ ಪೇಳ್ದುದ ಕ್ಷಮಿಸೆಂದು । ಎರಗಿದನಶ್ರುಪೂರಿತದಿ ॥೨೯೧॥

ಕರೆಸಿ ತನ್ನಯ ಸುತೆ ಸತ್ಯಭಾಮೆಯನಾಗ । ಬರಿಯಪವಾದ ಪೇಳ್ದುದಕೆ ॥
ಹರಿಯೆ ನೀನೀಕೆಯ ವರಿಸೆಂದು ಪ್ರೇಮದಿ । ಕರುಣಿಸಿದನು ಮಣಿಸಹಿತ ॥೨೯೨॥

ಹರುಷದಿ ಅಘಹರನೆಂದು ನಿನ್ನೊಳು ಮಣಿ । ಯಿರಿಸಿ ಕೊಂಡಿಹುದು ಸೌಖ್ಯದಲಿ ॥
ವರಿಸುವೆ ಸತ್ಯಭಾಮೆಯನೆಂದು ರತ್ನವ । ತಿರುಗಿ ಸತ್ರಾಜಿತಂಗಿತ್ತ ॥೨೯೩॥

ಪರಿಣಯಕಾಲಕ್ಕೆ ಬಹುದು ನೀನೆನ್ನುತ್ತ । ಪರಿ ಪರಿ ಮನ್ನಿಸಿ ಕಳುಹಿ ॥
ಪರಮಾತ್ಮನಿರೆ ಸೌಖ್ಯದೊಳು ದೇವದೂತನು । ಭರದಿ ಬಂದೆರಗುತ್ತಲೆಂದ ॥೨೯೪॥

**ರಾಗ ಮುಖಾರಿ ಏಕತಾಳ**

ಶರಣರಕ್ಷಕ ದೇವರ ದೇವ । ಲಾಲಿಸು ಜೀಯ । ಶರಣರಕ್ಷಕ ದೇವರ ದೇವ ॥ ಪ ॥

ನರಕನೆಂಬುವನೋರ್ವ ಖಳನು । ಸೇನಾಧಿಪಾಲ । ಮುರನೆಂಬ ದನುಜಸಹಿತಲವನು ॥
ವರತುಹಿನಾಚಲದೊಳು ಪ್ರಾಗ್ಜ್ಯೋತಿಷ । ಪುರದೊಳು ವಾಸಿಪ ರಾತ್ರಿಂಚರರೊಳು ।
ತೆರಳಿಬಂದೊಂದಿನ ಸುರಪನುಚ್ಚೈಶ್ರವ । ವರಕಲ್ಪದ್ರುಮಧೇನುನೊಯ್ದನು ॥೨೯೫॥

ಸುರನಾರಿಯರನು ಪಿಡಿದು ಖಳನು । ಎಳೆದೊಯ್ದು ತನ್ನ । ತರುಣಿಯರ್ಸೇವೆಗೆಯ್ಸುತಿಹನು ।
ಬರಸೆಳದದಿತಿಯ ಕುಂಡಲದ್ವಯವನು । ತೆರಳಿಹನಿದ ಬಿನ್ನಯಿಸಲು ಸುರಪತಿ ।
ಹರಿ ನಿನ್ನೆಡೆಗೀಗೆನ್ನನು ಕಳುಹಿದ । ತರಿದವನನು ಸುಖವೀವುದು ದಯೆಯಲಿ ॥೨೯೬॥

**ರಾಗ ಕೇದಾರಗೌಳ ಝಂಪೆತಾಳ**

ದೇವದೂತನ ನುಡಿಯನು । ಕೇಳಿ ವಸು । ದೇವಜಾತನು ನಿಮ್ಮನು ॥
ಕಾವುದಕೆ ಜನಿಸಿರ್ಪೆನು । ಖಳಕುಲವ । ನಾವುದುಳಿಸದೆ ಕೊಲುವೆನು ॥೨೯೭॥

ಸುರಪನಿಂಗರುಹು ನೀನು । ಪೋಗಿ ನಾ । ಮುರನರಕರಸುವಳಿವೆನು ॥
ತೆರಳೆಂದು ಕಳುಹುತಾಗ । ನೆನೆಯೆ ಬಂ । ದೆರಗಿದನು ಗರುಡ ಬೇಗ ॥೨೯೮॥

ವರರತ್ನಮಯ ಮುಕುಟವ । ನರಹರಿಯು । ಧರಿಸಿ ಕಸ್ತುರಿತಿಲಕವ ॥
ಕೊರಳ ಕೌಸ್ತುಭಹಾರದಿ । ದೇದೀಪ್ಯ । ಕರದಿ ಪೊರಡುತ ಶೀಘ್ರದಿ ॥೨೯೯॥

ವಿಹಗರಾಜನ ಪೆಗಲೊಳು । ಮಂಡಿಸುತ । ಮಹಿಳೆ ಭಾಮೆಯ ಜೊತೆಯೊಳು ॥
ತುಹಿನಶೈಲವನಡರುತ । ಸುರರಾಜ । ನಹಿತನಗರವ ಕಾಣುತ ॥೩೦೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಒಂದುಸುತ್ತಿನ ಕೋಟೆ ಜಲದೊಳ । ಗೊಂದು ಪಾವಕಮಯದ ಭಿತ್ತಿಗ ।
ಲೊಂದು ಪ್ರಾಕಾರದೊಳು ಶಸ್ತ್ರವ । ಸಂಧಿಸಿಹುದ ॥೨೭೧॥

ಪರಿಕಿಸುತ ದುರ್ಘಟದ ದುರ್ಗದಿ । ಪುರವ ಗೆಯ್ದಿಹನರರೆ ದಾನವ ।
ನುರು ಪರಾಕ್ರಮಿಯೆನುತ ಶ್ರೀಹರಿ । ಯರಿತು ಮನದಿ ॥೨೭೨॥

ಚಕ್ರದಲಿ ಭೇದಿಸುತ ಜಲತರಿ । ದಿಕ್ಕಿ ವಾರುಣದಿಂದಲಗ್ನಿಯ ।
ಕುಕ್ಕಿ ಶಸ್ತ್ರಾವಳಿಯ ಗದೆಯೊಳು । ಪೊಕ್ಕು ಪುರವ ॥೨೭೩॥

ಸಿಡಿಲಿನಬ್ಬರಣೆಯೊಳು ಖಳರೆದೆ । ಯೊಡೆಯುವಂದದಿ ಪಾಂಚಜನ್ಯವ ।
ಕಡುಭಯಂಕರಮಾಗಿ ನಾದಿಸೆ । ಜಡಜನೇತ್ರ ॥೨೭೪॥

**ಭಾಮಿನಿ**

ಏನಿದೇನುತ್ಪಾತ ಪುರದೊಳ ।
ಗೇನು ಭೀಕರವೆನುತ ನರಕನ ।
ಸೇನೆಯಧಿಪತಿಯಾದ ಮುರನೆಂಬವನು ಭೋರ್ಗುಡಿಸಿ ॥
ಭಾನುಕೋಟಿವಿರಾಜಮಾನದಿ ।
ವೈನತೇಯನ ಭುಜದಿ ಸುಂದರ ।
ಮಾನಿನಿಯ ಸಹಿತಾಗಿ ಕುಳಿತಯ್ತುಹನ ಕಾಣುತ್ತ ॥೨೭೫॥

**ರಾಗ ಮಾರವಿ ಏಕತಾಳ**

ಆರೆಲೊ ದುರ್ಗವ ಭೇದಿಸಿ ಪುರದೊಳ । ಸಾರಿ ಬಂದಿಹೆ ಭಳಿರೆ ॥
ಕಾರಣವೇನೆಲೊ ನಿನ್ನಸು ತೊಲಗಿಸಿ । ಹೀರುವೆ ರುಧಿರವನು ॥೨೭೬॥

ಧುರದೊಳು ಕಂಸನ ತರಿದಿಹ ಕೃಷ್ಣನ । ನರಿಯೆಯ ವಾರ್ತೆಯನು ॥
ನರಕ ಮುರಾಸುರರೊಧಿಸಲು ಬಂದಿಹೆ । ನರುಹು ನೀನಾರೆಲವೊ ॥೨೭೭॥

ಖಳಕುಲದ್ರೋಹಿ ನಿನ್ನುಳಿಸೆನು ಜೀವದಿ । ಹಳಚೆನ್ನೊಡನೀಗ ॥
ಬಲವಿಕ್ರಮಿ ಮುರನೆಂಬನೆ ನಾನೆಲ । ಗಳವನು ಖಂಡಿಸುವೆ ॥೨೭೮॥

ಹರನಂದದಿ ಶಿರವಯ್ದಿದೆ ನಿನಗೆಲೊ । ಧುರಮಲ್ಲನುಯೆನುತ ॥
ಅರಿತಯ್ತುಂದಿಹೆ ನಿನ್ನಸುವಳಿದರೆ । ಧರಿಪೆನು ಕೀರ್ತಿಯನು ॥೨೭೯॥

**ರಾಗ ಭೈರವಿ ಏಕತಾಳ**

ನರ ನೀ ವ್ಯರ್ಥದಿ ಬಂದು । ಈ । ಧುರಕನುವಾಗುವ ನಿಂದು ॥
ತೊರೆದಪೆಯಸುವೆಂದೆನುತ । ಮು । ದ್ಗರದೊಳು ಬಡೆದ ಘರ್ಜಿಸುತ ॥೨೮೦॥

ತ್ವರಿತದಿ ಹರಿ ಮುದ್ಗರವ । ತುಂ । ಡರಿಯುತ ನಿಂದಿರಲೊಲವ ॥
ನರಿತಾ ಖಳ ಶೂಲವನು । ಬಿಡೆ । ಗುರಿಯೊಳು ಖಂಡಿಸಲದನು ॥೨೮೧॥

ಭೋರಿಡುತಾಕ್ಷಣ ಖಳನು । ಎಲೆ । ಪೋರನೆ ಸಹಸಿಯ್ಯೆ ನೀನು ॥
ತೋರುಪರಾಕ್ರಮವೆನುತ । ಶರ । ವಾರವ ಬಿಡೆ ಗುರಿಯಿಡುತ ॥೨೮೨॥

ತುಂಡಿಸಿ ಬಹ ಶರಗಳನು । ಧನು । ಖಂಡಿಸಿ ನಿಲೆ ಮಾಧವನು ॥
ಚೆಂಡರಿವೆನು ಶಿರವೆನುತ । ದೋ । ರ್ದಂಡನು ಬರೆ ಗಜರುತ್ತ ॥೨೮೩॥

**ಭಾಮಿನಿ**

ಎರಡು ಕೈಗಳೊಳಾಗ ಶ್ರೀಶನ ।
ಭರದಿ ಬಿಗಿಹಿಡಿಯಲ್ಕೆ ಚಕ್ರವ ।
ತಿರುಹಿ ಬಿಡೆ ಶಿರವಯ್ದು ಖಂಡಿಸಿ ಬೀಳೆ ಧಾರಿಣಿಗೆ ॥
ಸುರರು ತೋಷದಿ ಸುರಗಿಸಂಪಗೆ ।
ಯರಳುಗಳನರ್ಪಿಸಲು ದುಂದುಭಿ ।
ಮೊರೆಯೆ ಚರರಯ್ತಂದು ನರಕಾಸುರನ ಪದಕೆರಗಿ ॥೨೮೪॥

**ರಾಗ ಸಾರಂಗ ಅಷ್ಟತಾಳ**

ಕೇಳು ಕೇಳಯ್ಯ ಜೀಯ । ದೈತ್ಯೇಂದ್ರ ನಾ । ಪೇಳುವ ನಿಜ ವಾರ್ತೆಯ ॥
ಬಾಲನೊರ್ವನು ಪಕ್ಷಿಮೇಲೇರಿ ದುರ್ಗವ । ಸಾಲುಸಾಲಿನೊಳ್ ಮುರಿದು ।
ಮೇಲ್ವಾಯ್ದು ॥೨೮೫॥

ಭೂರಿವಿಕ್ರಮದಿಂದಲಿ । ನಮ್ಮಯ ಸೇನಾ । ಜಾಲವ ಕದನದಲಿ ॥
ಗಾರುಗೆಡಿಸಿ ಮುರದೈತ್ಯನ ಶಿರವನ್ನು । ಧಾರಿಣಿಗಿಳುಹಿದನು । ನಿಂದಿರ್ಪನು ॥೨೮೬॥

ಅಸಮವಿಕ್ರಮಿಯವನು । ಮಾನವರೊಳು । ವಸುಧೆಯೊಳೆಣೆಗಾಣೆನು ॥
ಪೆಸರಿನೊಳ್ ಕೃಷ್ಣನು ಕಂಸಾದಿಮಹಶೂರ । ರಸುರ ಸಂಹಾರನಂತೆ । ಕೇಳಿಂತೆ ॥೨೮೭॥

**ರಾಗ ಕೇದಾರಗೌಳ ಝಂಪೆತಾಳ**

ಚರನ ನುಡಿಯಂ ಕೇಳುತ । ಭೋರ್ಗುಡಿಸಿ । ನರಕದೈತ್ಯನು ಗಜರುತ ॥
ಅರರೆ ಪೋರನ ವಾರ್ತೆಯ । ಪಿಂದೆ ನಾ । ನರಿತಿರ್ಪೆ ಕುಟಿಲೋಕ್ತಿಯ ॥೨೮೮॥

ಬಂದನೇಯೆಮ್ಮ ಪುರಿಗೆ । ಸಖ ಮುರನ । ಕೊಂದನೇ ಕದನದೊಳಗೆ ॥
ಇಂದೆನ್ನ ಭುಜಬಲದಲಿ । ಆಯುಷ್ಯ । ಸಂದಿತವನಿಗೆ ತ್ವರೆಯಲಿ ॥೨೮೯॥

ಕರಿರೆಮ್ಮ ತಾಮ್ರಾಕ್ಷನ । ಸಚಿವನಾ । ಗಿರುತಿರ್ಪ ಕ್ಷುರದಂಷ್ಟನ ॥
ಬರಲಿ ಮದಗಜವೀಕ್ಷಣ । ಏರಿ ನಾ । ತೆರಳಿ ನೋಳ್ಪೆನು ಬಾಲನ ॥೧೯೦॥

ಎಂದು ಮಹಪೌರುಷದಲಿ । ಸೇನೆಗಳ । ಸಂದಣಿಯ ಕೂಡುತ್ತಲಿ ॥
ಬಂದುಗಜವನ್ನಡರುತ । ನರಕ ರಣ । ಕೆಂದು ಧನುಶರ ಪಿಡಿಯುತ ॥೧೯೧॥

ಕರದಿ ಚಕ್ರಾಬ್ಜಗದೆಯ । ಶಂಖವನು । ಧರಿಸಿರುವ ವನಮಾಲೆಯ ॥
ಮೆರೆವ ಕಸ್ತುರಿತಿಲಕದಿ । ಕೃಷ್ಣ ನಲಿ । ದಿರೆ ವಿಹಂಗಮಭುಜದಲಿ ॥೧೯೨॥

ನರಕ ಕಿಡಿಕಿಡಿಸೂಸುತ । ಕೋಟೆಗಳ । ಮುರಿದೆಮ್ಮ ಪುರಿಸಾರುತ ॥
ಮುರನಕೊಂದ ಮದಾಂಧನೆ । ಎನ್ನ ಗೆಲ । ಲರಿದು ಸಾರೆಲೊ ಪೋರನೆ ॥೧೯೩॥

**ರಾಗ ಮಾರವಿ ಏಕತಾಳ**

ಬಂದುದಾಶ್ಚರ್ಯವೆ ನಿನ್ನಯ ನಗರಿಗೆ । ಕೊಂದಿಹೆ ಮರೆತವನ ॥
ಪಿಂದಕೆ ನಿನ್ನಿಂದಧಿಕರ ನಾಮವ । ನಂದಿಸಿ ಮೆರೆದಿಹೆನು ॥೧೯೪॥

ಏನು ವಿರೋಧಗಳೆಮ್ಮೊಳು ಕದನಗ । ಳೇನು ನಿಮಿತ್ತಗಳು ॥
ದಾನವರಧಿಪತಿ ಭೂಸುತನರಕನ । ನೀನರಿಯೆಯ ಧುರದಿ ॥೧೯೫॥

ಸುರಪತಿಯುಚ್ಚೈಶ್ರವ ಚಿಂತಾಮಣಿ । ಕರಿತರು ಮೊದಲಾಗಿ ॥
ಸುರಮಾತೆಯ ಕುಂಡಲಗಳ ಕೊಡದಿರೆ । ಕೊರಳರಿವೆನು ದಿಟವು ॥೧೯೬॥

ಕೊಡೆನೆಂದಿಗು ನಾ ತಂದಿಹ ವಸ್ತುವ । ಹುಡುಗನೆ ಗೆಲಿದೆನ್ನ ॥
ಒಡವೆಯ ಸುರಪತಿಗೀವೆಯ ವ್ಯರ್ಥದ । ನುಡಿಗಳ ನಾಡದಿರು ॥೧೯೭॥

ಖಳರೊಳು ಧುರವೆಂದೆನುತಲೆ ಮಲೆತಿಹ । ಕಲಿಗಂಜದ ಕೃಷ್ಣ ॥
ಗೆಲದಪಜಯಮಂ ಪೊಂದಿಹುದಿಲ್ಲವೊ । ಛಲವೇತಕೊ ದುರುಳ ॥೧೯೮॥

**ರಾಗ ಶಂಕರಾಭರಣ ಮಟ್ಟೆತಾಳ**

ಭಳಿರೆ ಭಳಿರೆ ಬಾಲನೆನ್ನೊಳ್ । ಮಲೆತು ನಿಂದೆಯಹುದೊ ಮಝರೆ ।
ಕೊಲುವೆನೆನುತ ಖಡ್ಗವನ್ನು । ಸೆಳೆದು ಪೊಯ್ದನು ॥೧೯೯॥

ದಿವಿಜವೈರಿ ನೋಡು ದಿವ್ಯ । ಪವಿಸಹಸ್ರಾರಚಕ್ರ ।
ಭುವಿಯೊಳಸಿಯ ಚೂರ್ಣಗೆಯ್ದು । ಕವಲುಗೊಳಿಸಿತು ॥೨೦೦॥

ಪೋರ ಭಾಪು ಕಡಿದೆ ಖಡ್ಗ । ಘೋರಶಕ್ತಿ ತಾಳೆನುತ್ತ ।
ಕ್ರೂರ ಕೋಪದಿಂದಲೆಸೆದ । ವಾರಿಜಾಕ್ಷಗೆ ॥೨೦೧॥

ನರಕದೈತ್ಯ ನೋಡು ನಿನ್ನ । ಪರಮಶಕ್ತಿ ಧರೆಯೊಳೀತ ।
ಕುರುಳುತಿಹುದೆನುತ್ತ ಕೃಷ್ಣ । ಕೊರೆದು ಕೆಡಹಿದ ॥೨೦೨॥

**ರಾಗ ಭೈರವಿ ಅಷ್ಟತಾಳ**

ಮೂರುಲೋಕದೊಳೆನ್ನನು । ಗೆಲ್ಲುವ ಶೂರ । ರಾರನ್ನು ಕಾಣೆನಾನು ॥
ಜಾರ ಗೋವಳನೆ ಸಾಮಾನ್ಯ ಶಸ್ತ್ರವ ಬಿಡೆ । ಭೋರನೆ ತರಿದಿಹೆಯ ॥೨೦೩॥

ಪೊಗಳಿಕೊಂಬುವುದೇತಕೊ । ಮಹಾಸ್ತ್ರವ । ನೆಗಳೀಗ ಬೆದರೆ ಸಾಕೊ ॥
ಮಘವನ ವಸ್ತುವಾಹನವಿತ್ತು ಮರೆಯನ್ನು । ಪೊಗಲೀಗ ರಕ್ಷಿಸುವೆ ॥೨೦೪॥

ಪರಿಕಿಸು ಮುದ್ಗರವ । ನಿನ್ನಂಗ ಜ । ಜ್ಝರಿಸುವ ಶಸ್ತ್ರಾರವ ॥
ಶರಣುಪೊಂದಿಸಿಕೊಂಬೆನೆನುತ ಕೃಷ್ಣನಿಗೆಚ್ಚು । ನರಕ ಬೊಬ್ಬಿರಿದು ನಿಂದ ॥೨೦೫॥

ಕೆರಳಿ ಶ್ರೀಕೃಷ್ಣನಾಗ । ಖಂಡಿಸುತಾ ಮು । ದ್ಗರವನ್ನು ಕೆಡಹಿಬೇಗ ॥
ಗುರಿಯೊಳು ಚಕ್ರವ ಬಿಡಲು ದೈತ್ಯನ ಶಿರ । ಧರೆಯೊಳಗುರುಳಿಸಿತು ॥೨೦೬॥

**ಭಾಮಿನಿ**

ಸುರಿಸಿ ಸುಮಮಳೆಗಳನು ನಿರ್ಜರ ।
ತರುಣಿಯರು ನರ್ತಿಸುತಲಿರೆ ಹರಿ ।
ಹರುಷದಿಂದಿರುತಿರಲು ಧಾರಿಣಿದೇವಿಯಯ್ತುಂದು ॥
ಸುರಿವ ನೇತ್ರೋದಕದಿ ನರಕನ ।
ತರಳ ಭಗದತ್ತನನು ಶ್ರೀಶನ ।
ಚರಣದೊಳು ತಂದಿಕ್ಕಿ ಕರಮುಗಿಯುತ್ತ ಪೇಳಿದಳು ॥೨೦೭॥

**ರಾಗ ಅಹೇರಿ ಆದಿತಾಳ**

ದೇವದೇವನೆ ಜಯತು । ಪದ್ಮಾಕ್ಷ ವಾಸು । ದೇವ ಶ್ರೀಹರೆ ಜಯತು ॥ ಪ ॥
ಪಾವನಾತ್ಮಕ ವಿಶ್ವವಂದ್ಯ । ವಿಶ್ವಾತ್ಮಕ । ರಾವಣಾರಿಯೆ ರಾ । ಜೀವನಾಭನೆ ಜಯ ॥ ಅ.ಪ ॥
ಧರೆಜಲತೇಜಂಗಳು । ವಾಯ್ವಾಕಾಶ । ಸುರನರರುರಗಂಗಳು ॥
ಸ್ಥಿರಚರಮನಸ್ಸಹಂಕಾರತತ್ತ್ವಂಗಳು । ಹರಿ ನಿನ್ನೊಳೈಕ್ಯ ಬೇರಿರುವುದೇನಿದೆ ಸ್ವಾಮಿ ॥೨೦೮॥

ತರಳನೆನ್ನಯ ಮೊಮ್ಮನು । ಭಗದತ್ತನೀತ । ನರಕನ ಸುಕುಮಾರನು ॥
ಭರಿತ ಭಯದೊಳ್ ನಿನ್ನ । ಚರಣದಿ ಮಣಿ ನಿಕರ ॥
ತಂದಿಹೆನಿದಕೊ । ನರಕನೆನ್ನಯ ಕುವರ ॥
ಬರಸೆಳೆದಿಹ ದೇವಮಾತೆಕುಂಡಲವಿದು ।
ಚರಣದೊಳಿರಿಸಿಹೆ ಪರಿಗ್ರಹಿಪುದು ದೇವ ॥೨೦೯॥

**ವಾರ್ಧಕ**

ಹರಿಯು ಸಂತೋಷದಿಂ ಧರಣಿಯಂ ಸಂತಯಿಸಿ ।
ನರಕ ಸುತಗಭಯ ಮನ್ನಿತ್ತು ಪ್ರಾಗ್ಜ್ಯೋತಿಷದ ।
ಪುರಕೆ ಪಟ್ಟವ ಕಟ್ಟಿ ಖಳನ ಕಾರಾಗೃಹದಿ ಸೆರೆಯಸಿಕ್ಕಿಹ ಸತಿಯರ ॥
ಪೊರಡಿಸುತ ಷೋಡಶಸಹಸ್ರಸಂಖ್ಯಾಕರಂ ।
ತೆರಳಿ ನಿಮ್ಮಯ ನಗರಕೆನಲಾಗ ಕೈಮುಗಿದು ।
ಸರಸಿಜಾಕ್ಷನೆಯೆಮ್ಮ ವರಿಸು ನೀನೆಂದೆನುತಲೆರಗಿ ಸನ್ನುತಿಗೆಯ್ಯಲು ॥೩೧೦॥

**ಭಾಮಿನಿ**

ನಿಂದಿರುವ ಕಮಲಾಕ್ಷಿಯರ ಮನ ।
ದಂದವರಿದಸ್ತೆನುತ ಜತೆಯೊಳ ।
ಗಂದಣಗಳೇರಿಸುತ ನಿಜಪುರಕಯ್ದಿ ಶ್ರೀಹರಿಯು ॥
ಸುಂದರಾಂಗಿಯರೆಲ್ಲರನು ತಾ ।
ನೊಂದೆಕಾಲದೊಳೊರಿಪೆನೆನ್ನುತ ।
ಚಂದದೊಳಗರಮನೆಯೊಳವರೊಡನಿರ್ದನಖಿಳೇಶ ॥೩೧೧॥

**ರಾಗ ಕೇದಾರಗೌಳ ಅಷ್ಟತಾಳ**

ಅತ್ತಲವಂತಿಯ ನಗರದೊಳೊಂದಿನ । ಪೃಥ್ವಿಪ ಶೃತದೇವನ ॥
ಪುತ್ರರುವಿಂದಾನುವಿಂದರೋಲಗದೊಳ । ಗರ್ತಿಯೊಳ್ ಮಂಡಿಸುತ ॥೩೧೨॥

ಘನವೇಗ ಸಭೆಯನೀಕ್ಷಿಸುತ ವಿಂದನು ತ । ನ್ನನುಜಾತನೊಡನೆಂದನು ॥
ಜನಪರನೆರಹೆಮ್ಮ ಭಗಿನಿಸ್ವಯಂವರ । ವನು ನೆಗಳಿರಲಾಗಳು ॥೩೧೩॥

ದೃಷ್ಟಿಗೋಚರಿಸದೆ ಮಿತ್ರವಿಂದೆಯನಾರು । ದುಷ್ಟರು ಸೆಳೆದೊಯ್ಯಲು ॥
ತಟ್ಟನೆ ಕುರುಹ ನೀವರಿತು ಬನ್ನಿರಿಯೆನ್ನು । ತಟ್ಟಿಹೆ ಚಾರರನ್ನು ॥೩೧೪॥

ಎತ್ತ ಪೋದರೂ ಕಾಣೆಯನುಜೆಯೆಲ್ಲಿರ್ಪಳೊ । ಗೊತ್ತ ಕಂಡರುಹದಿರೆ ॥
ಧೂರ್ತರಿವರ ಜೀವವಿರಿಸೆ ತಾನೆನುತಿರ । ಳರ್ತಿಯೊಳೊರ್ವ ಬಂದು ॥೩೧೫॥

ಚರಣಕೆ ಪೊಡಮಟ್ಟು ಕೈಗಳ ಮುಗಿಯುತ್ತ । ಉರುತರ ಭೀತಿಯಿಂದ ॥
ದೊರೆಯೆ ತಮ್ಮಯ ಬೇಹಿನನುಚರ ತಾನೆನ । ಲರುಹು ವಾರ್ತೆಗಳೆಂದನು ॥೩೧೬॥

**ಲಾವಣಿ**

ದೊರೆರಾಯ ಚಿತ್ತಾವಧಾನ । ಪದ । ಕೆರಗುವೆ ರಿಪುಗಜಸಿಂಹ ಸಮಾನ ॥ ಪ ॥

ತಿರುಗಿದೆ ದೇಶದೇಶವನು । ಅ । ಲ್ಲಿರುವರಸರ ಮನೆ ಮನೆಗಳೆಲ್ಲವನು ॥
ಕುರುಹ ಮರೆಸಿ ಪುಡುಕಿದೆನು । ಆ । ಸರಸಿಜಾನನೆ ಮಿತ್ರವಿಂದೆಯೆಂಬಳನು ॥೨೦೭॥

ತೆರಳಿ ನಾ ದ್ವಾರಕಾಪುರದಿ । ಕೃಷ್ಣ । ನರಮನೆ ಸಜ್ಜೆಯನೆಲ್ಲ ನಾ ಮುದದಿ ॥
ಪರಿಕಿಸಿ ನೋಡಲು ಭರದಿ । ಅ । ಲ್ಲಿರುವಳು ನಿನ್ನಯ ಭಗಿನಿ ಸಂತಸದಿ ॥೨೦೮॥

ಜಾರಚೋರನು ಕೃಷ್ಣನವನು । ಮಹ । ಶೂರನುದಾರಸಾಹಸಿಕನಾಗಿಹನು ॥
ನಾರಿಯನೊಯ್ದಿರ್ಪನವನು । ಧುರ । ಧೀರನ ತರಿದು ತಾರೀಗ ತಂಗಿಯನು ॥೨೦೯॥

**ರಾಗ ಮಾರವಿ ಏಕತಾಳ**

ಚರನಿಂತೆನೆ ಭೋರ್ಗುಡಿಸುತ ವಿಂದನು । ಕರೆದನುಜಾತನನು ॥
ಅರಿತೆಯ ಗೋವಳನೆಸಗಿದ ತಂತ್ರವ । ಶಿರವರಿಯುವೆ ನಾನು ॥೨೧೦॥

ನೆರೆದಿಹ ನೃಪರ ಸಮೂಹದ ಮಧ್ಯದೊ । ಳಿರುತಿಹ ಸುದತಿಯನು ॥
ತರಳನು ತಂತ್ರದೊಳೊಯ್ದನೆ ಸಕಲರು । ಕುರುಡರೆ ಕುಳಿತವರು ॥೨೧೧॥

ಕೊಡು ಕೊಡು ಸತಿಯನು ಸೋದರಿಕೆಯ ನಾ । ಬಿಡೆನೆನ್ನುತ ಪಿಂದೆ ॥
ಕಡುಜಾರನು ಎನ್ನೊಡನವ ಕೇಳ್ದರೆ । ಕೊಡೆನೆಂದರುಹಿದೆನು ॥೨೧೨॥

ಚೋರತ್ವದಿ ಸೆಳೆದೊಯ್ದನೆ ಭಾಪುರೆ । ಭೋರನೆ ಶಿರವರಿದು ॥
ನಾರಿಯ ತಹೆ ಪುನರಪಿ ಭೂಪಾಲರ । ಸೇರಿಪೆ ಪರಿಣಯಕೆ ॥೨೧೩॥

ಕರಿತುರಗವ ರಥಪತ್ತಿಯ ನೆರೆಹುತ । ಪೊರಡನುವಿಂದಕನೆ ॥
ತೆರಳಲಿ ಮಾರ್ಬಲ ಧುರದೊಳು ಕೃಷ್ಣನ । ಶಿರ ಚೆಂಡಾಡುವೆನು ॥೨೧೪॥

**ಭಾಮಿನಿ**

ಭೋರಿಸುವ ಕಹಳಾದಿ ರವದೊಳು ।
ಧಾರಿಣಿಯ ಬಿರಿವಂತೆ ಸೇನಾ ।
ವಾರಿಧಿಯನೊಡಗೂಡಿ ದ್ವಾರಾವತಿಗೆ ವೇಗದಲಿ ॥
ಸಾರಿ ತನ್ನಯ ಚರನೊಳ್ ವಿಂದನು ।
ಚೋರಕೃಷ್ಣನಿಗುಸಿರು ಸುದತಿಯ ।
ಭೋರನೊಪ್ಪಿಸದಿರಲು ಧುರಗೊಡಲೆನುತ ಕಳುಹಿದನು ॥೨೧೫॥

**ಕಂದ**

ಚರನಾಕ್ಷಣದೊಳ್ ಗಮಿಸುತ ।
ತರುಣೀಗಣಪರಿವೇಷ್ಟಿತನಾಗುತೆ ಕುಳಿತಿಹ ॥

ಹರಿಯಂ ಕಾಣುತಲಾಗಳ್ ।
ಕರಮಂ ಜೋಡಿಸಿ ವಿನಯದಿ ಮಗುಳಿಂತೆಂದಂ ॥೩೩೬॥

**ವಾರ್ಧಕ**

ಅರುಹುವೆನು ಕೇಳ್ ಕೃಷ್ಣ ನೀನವಂತಿಪುರೇಶ ।
ತರಳೆಯಾಗಿಹ ಮಿತ್ರವಿಂದೆಯನ್ನಪಹರಿಸಿ ।
ಪುರಿಗೆ ಕರೆತಂದಿರ್ಪೆಯವಳಗ್ರಭವರೀರ್ವರರಿತು ಮಾರ್ಬಲಸಹಿತಲಿ ॥
ತೆರಳಿಬಂದೀನಗರದುಪವನದಿ ನೆಲಸಿಹರು ।
ತ್ವರಿತದಿಂದವಳ ತಂದೊಪ್ಪಿಸದಿರಲ್ಕೀಗ ।
ಧುರಕೆ ಬಹುದೆಂದೆನಲ್ ನಸುನಗುತ ಮುರಹರಂ ಚರನ ಮನ್ನಿಸುತೆಂದನು ॥೩೧೭॥

**ರಾಗ ಕೇದಾರಗೌಳ ಝಂಪೆತಾಳ**

ಅತ್ತೆ ರಾಜಾದೇವಿಯು । ಎನಗಾಗಿ । ಪೆತ್ತಿರ್ಪ ಸುಕುಮಾರಿಯು ॥
ಮಿತ್ರವಿಂದೆಯುಯೆನ್ನನು । ಬಿಡದೆ ನೆನೆ । ಯುತ್ತಿರಲು ತಂದಿರ್ಪೆನು ॥೩೧೮॥

ಧುರಕೆ ಬಹೆನೀಕ್ಷಣದಲಿ । ಬಾಲಿಕೆಯ । ತೊರೆಯೆ ನಾ ಸಾಮಗಳಲಿ ॥
ಪರಿಕಿಸಲಿ ಕರಲಾಘವ । ಭಾವಂದಿ । ರರಿತು ತೆರಳಲಿ ಸತ್ತ್ವವ ॥೩೧೯॥

ಪೇಳು ಪೋಗೆಂದೆನುತಲಿ । ಚಾರಕನ । ಬೀಳುಗೊಂಡುರೆ ಮುದದಲಿ ॥
ವ್ಯಾಳಶಯನನು ವೇಗದಿ । ಧುರಕೆನುತ । ಪಾಳೆಯವ ಕೂಡಿ ಮುದದಿ ॥೩೩೦॥

ಬಂದು ಹಲಧರಗೊಂದಿಸಿ । ವಿಂದಾನು । ವಿಂದರಾನೀಕವೆರಸಿ ॥
ನಿಂದಿಹರು ಹೊರದ್ವಾರದಿ । ದೂತಮುಖ । ದಿಂದಲರಿತಿಹೆ ವೇಗದಿ ॥೩೩೧॥

ಮಿತ್ರವಿಂದೆಯನೊಪ್ಪಿಸಿ । ತಮ್ಮೊಡನೆ । ಮಿತ್ರತ್ವವನುವರ್ತಿಸಿ ॥
ಸ್ವಸ್ಥದಿಂದಿಹುದೆನ್ನುತ । ಬೆಸಸೆನುತ । ಭೃತ್ಯನಟ್ಟಿರ್ಪನಾತ ॥೩೩೧॥

ತರುಣಿಯಂ ಬಿಡೆಸಾಮದಿ । ಸಂಗರವೆ । ಸರಿಯೆಂದು ನಾ ಕ್ಷಿಪ್ರದಿ ॥
ಒರೆದು ಕಳುಹಿದೆ ಚರನನು । ಮುಂದಾವ । ಪರಿಯೆಂದನಾ ಕೃಷ್ಣನು ॥೩೩೩॥

**ಭಾಮಿನಿ**

ಪರಿಕಿಸುತ ಪಲ್ಮೊರೆದು ಮಗಧನು ।
ಕರದಿ ಚಾಪವ ಕೊಂಡುಗೋಪರ ।
ತರಳ ಬಾರೆಂದೆನುತ ಮಾರ್ಮಲೆಯಲ್ಕೆ ಹಲಧರನು ॥
ಶಿರವರಿವೆ ನಿಲ್ಲೆನುತ ಘರ್ಜಿಸಿ ।

ಬರಲನಕ ಚೇತರಿಸಿ ಚೈದ್ಯನು ।
ಭರದೊಳಾರ್ಭಟಿಸುತ್ತ ಬರೆ ಮಗಧೇಂದ್ರ ಸಂತಯಿಸಿ ॥೯೦॥

**ಕಂದ**

ಪರಿಕಿಸು ಗೋವಳನೀತನ ।
ಧುರದೊಳಗಸುವಂ ತೀರ್ಚಿಪೆ ತಾಳೀಕ್ಷಣದೊಳ್ ॥
ತರುಣಿಯರ ತಂದುರೆ ನಿನಗಂ ।
ಪರಿಣಯಗೆಯ್ಸುವೆನೆನ್ನುತೆ ಹಲಧರಗೆಂದಂ ॥೯೧॥

**ರಾಗ ಭೈರವಿ ಅಷ್ಟತಾಳ**

ಎಲೆಲೆ ಚಾಣೂರನನ್ನು । ಕೊಂದಿಹ ಶೌರ್ಯ । ದೊಲವೆನ್ನೊಳ್ ತೋರಿಸಿನ್ನು ॥
ಗಳವ ಖಂಡಿಪೆ ಚೈದ್ಯಗೊಲಿವ ಬಾಲೆಯನಿತ್ತು । ಫಳಿಲನೆ ಪೋಗೆಂದನು ॥೯೨॥

ಪರಿಕಿಸು ಮುಸಲವನ್ನು । ಮಾಗಧ ಕೇಳೀ । ದುರುಳನಿಗಾಗಿ ನೀನು ॥
ಬರಿದೆ ಪ್ರಾಣವ ನೀಗುವಂಥಾ ಕಾಲವೆಯೆನ್ನ । ಧುರವು ಸಂಘಟಿಸಿತೀಗ ॥೯೩॥

ಹದಿನೇಳು ಬಾರಿಯೊಳು । ಗೋವಳಕೃಷ್ಣ । ನೊದಗಿ ಕಾಲ್ದೆಗೆದಾಗಳು ॥
ಬೆದರಿವೋಡಿಹ ಭಂಡರುಭಯರ ಕ್ಷಣದೊಳು । ನಿಧನ ಮಾಳ್ಪೆನು ತಾಳೆಲ ॥೯೪॥

ಕಾಲಭೇದಗಳಿಹುದು । ಮಾಗಧ ಜಯ । ಕಾಲಕರ್ಮದಿ ಬಹುದು ॥
ಕಾಲಯವನ ಕಂಸ ಮುಷ್ಟಿಕಾದ್ಯರ ವಿಧಿ । ಯೋಲೋಚಿಸೆಲೊ ಧೂರ್ತನೆ ॥೯೫॥

**ರಾಗ ಭೈರವಿ ಏಕತಾಳ**

ಕೆರಳುತ ಮಾಗಧನಾಗ । ಬಿರು । ಸರಳನೆ ಕೀಲಿಸಿ ಬೇಗ ॥
ತರಳನೆ ತಾಳೆಂದೆನುತ । ಪಲ್ । ಮೊರೆಯುತ ಬಿಡೆ ಘರ್ಜಿಸುತ ॥೯೬॥

ಹರಿನಾದದಿ ಹಲಧರನು । ಬಹ । ಶರಗಳ ತರಿದೊಟ್ಟಿದನು ॥
ಕರಲಾಘವ ತೋರೆನುತ । ಹೂಂ । ಕರಿಸುತಲಿರೆ ಕಾಣುತ್ತ ॥೯೭॥

ಕೊರೆಯುವೆ ಕಂಠವನೆನುತ । ಅಸಿ । ತಿರುಹುತ ಬರೆ ಗಜರುತ್ತ ॥
ಮುರಿದಿಕ್ಕುತ ಹಲಧರನು । ನಿಂ । ದಿರುವನ ಕಾಣುತಲವನು ॥೯೮॥

ಭಾರಿಯ ಗದೆ ತೂಗುತ್ತ । ಖತಿ । ಯೇರಿಯೆ ಗುರಿನೋಡುತ್ತ ॥
ಭೋರನೆ ಮಾಗಧ ಬಡಿದ । ಹೂಂ । ಕಾರದಿ ಬಲನದ ಮುರಿದ ॥೯೯॥

ಮುಷ್ಟಿಯೊಳೆರಗಲ್ಕಾಗ । ಜಗ । ಜಟ್ಟಿಯು ಹಲದೊಳು ಬೇಗ ॥
ಕುಟ್ಟಲು ಶಿರಕಂಪಿಸುತ । ಧೃತಿ । ಗೆಟ್ಟುರೆ ಚೇತನಗೊಳುತ ॥೧೦೦॥

**ಭಾಮಿನಿ**

ಭರದಿ ಮಾಗಧನಾಗ ಚೈದ್ಯನ ।
ಕರೆದು ಪೇಳಿದನಿಂದು ಸಮರದಿ ।
ಧುರದಿ ಜಯಮಿಲ್ಲೆಮಗೆ ತರುಣಿಯೊಳಾಸೆ ಬೇಡೀಗ ॥
ತೆರಳುವುದು ಪುರಿಗೆನುತ ಬೇಗನೆ ।
ತಿರುಗೆ ಹಲಧರ ನಗುತ ಹೇಡಿಗ ।
ಳರರೆ ನಡಿರೆಂದೆನಲು ರುಕ್ಮನು ತರುಬಿ ಶ್ರೀಹರಿಯ ॥೧೦೧॥

**ರಾಗ ಶಂಕರಾಭರಣ ಮಟ್ಟೆತಾಳ**

ಅರರೆ ಜಾರ ಚೋರ ಕೃಷ್ಣ । ಧುರದಿ ನಿನ್ನ ಕೊಲದೆ ಪುರಿಗೆ ।
ತೆರಳುವಧಟನಲ್ಲ ಸತಿಯ । ಭರದೊಳೀಯೆಲಾ ॥೧೦೨॥

ಭಾವನೆನ್ನೊಳೇಕ ಮುನಿಸು । ಸಾವಧಾನದಿಂದ ಸತಿಯ ।
ನೀವುದುಚಿತ ಕ್ರೋಧ ಧರಿಪು । ದಾವನೀತಿಯು ॥೧೦೩॥

ಅರಿವೆ ನಿನ್ನ ಜಿಹ್ವೆಯನ್ನು । ಕರೆವುದೇತಕಿನಿತು ಭಾವ ।
ನಿರುವನೆಲ್ಲಿ ತೋರು ಸತಿಯ । ನಿತ್ತು ತೆರಳೆಲಾ ॥೧೦೪॥

ಬೇಡ ಸಾರಿಪೇಳ್ದೆ ರುಕ್ಮ । ಕೇಡ ಬಯಸಬೇಡ ತೆರಳು ।
ಮೂಢ ನೀನು ಬರಿದೆ ಕಲಹ । ಮಾಡಿ ದಣಿವೆಯ ॥೧೦೫॥

ಬಲ್ಲೆ ನಿನ್ನ ಕಪಟಕೃತ್ಯ । ಬಿಲ್ಲಹಬ್ಬಕೆನುತ ಪೋಗಿ ।
ಕಳ್ಳ ನೀನು ಕಂಸನೊಧಿಸಿ । ದೆಲ್ಲರರಿವರು ॥೧೦೬॥

**ರಾಗ ಕೇದಾರಗೌಳ ಝಂಪೆತಾಳ**

ಬಿಲ್ಲ ಹಬ್ಬದ ನೆವದಲಿ । ಕರೆತಂದು । ಕೊಲ್ಲಲೆತ್ನಿಸಿದವನಲಿ ॥
ಸಲ್ಲಿಸಿಹೆ ತತ್ಫಲವನು । ಮೂರ್ಖತನ । ಸಲ್ಲದಾರಿಗು ಪೇಳ್ವೆನು ॥೧೦೭॥

ಮಾತೆಯಂದದಿ ಸ್ತನ್ಯವ । ಕೊಡೆಬಂದ । ಪೂತನಿಯ ನೀ ಕೊಂದವ ॥
ರೀತಿ ಬಲ್ಲೆನು ಕೃಷ್ಣನೆ । ನಿನ್ನ ಕೊಲ । ದೀ ತತೂಕ್ಷಣ ಬಿಡುವೆನೆ ॥೧೦೮॥

ಖಳಕುಲಾಂತಕನಾನಹೆ । ಶ್ರೇಷ್ಠಯದು । ಕುಲದಿ ಪಾವನನಾಗಿಹೆ ॥
ತಿಳಿದಿಹರು ಸಾತ್ತ್ವೀಕರು । ಎನ್ನ ಗುಣ । ದೊಲವರಿಯರೈ ಮೂರ್ಖರು ॥೧೦೯॥

ಕೇಳಿ ಬಲ್ಲೆ ಯಯಾತಿಯ । ಶಾಪಗಳ । ತಾಳಿ ಯದುವೀ ಧಾತ್ರಿಯ ॥
ಪಾಲನೆಯ ಕಳಕೊಂಡನು । ತದ್ವಂಶ । ಬಾಲ ನೀನೆಷ್ಪರವನು ॥೧೧೦॥

ಅರಿಯೆ ನೀನೆಲೊ ರುಕ್ಮನೆ । ಬ್ರಹ್ಮಾಂಡ । ವಿರುವುದೆನ್ನೊಳು ಮೂಢನೆ ॥
ಜರೆಯಬೇಡೆಲೊ ಭಗಿನಿಯ । ಇತ್ತೆನ್ನ । ಶರಣಪೊಂದಲು ಬಾಳ್ವೆಯ ॥೧೧೧॥

ಒದರಬೇಡೆಲೊಗೊಲ್ಲನೆ । ನಿನ್ನ ನಾ । ವಧಿಸಿ ಸಹಜೆಯ ಬೇಗನೆ ॥
ಮುದದಿ ಚೈದ್ಯನಿಗೀವೆನು । ಧುರಕೀಗ । ಲೊದಗಿ ಬಾ ಚೆಂಡರಿವೆನು ॥೧೧೨॥

**ರಾಗ ಮಾರವಿ ಏಕತಾಳ**

ತೋರೆಲೊ ನಿನ್ನಯ ವಿಕ್ರಮವೆನ್ನೊಳು । ಮಾರಾಂತೆಲೊ ರುಕ್ಮ ॥
ನಾರಿಯ ಬಿಡೆ ನಿನ್ನಸುವನೆ ತೊಲಗಿಸಿ । ಭೋರನೆ ಕರೆದೊಯ್ವೆ ॥೧೧೩॥

ಕಿಡಿಕಿಡಿಯಾಗುತ ರುಕ್ಮನು ಶರಗಳ । ಬಿಡಲದ ಪರಿಕಿಸುತ ॥
ಕಡಿದನು ಲೀಲಾಮಾತ್ರದಿ ನಗಧರ । ಘುಡುಘುಡಿಸುತಲಾಗ ॥೧೧೪॥

ಸ್ಮರಿಸುತ ಆಗ್ನೇಯಾಸ್ತ್ರವ ರುಕ್ಮನು । ಸಿರಿವರಗೆಸೆಯಲ್ಕೆ ॥
ಮುರಿದನು ವಾರುಣದಿಂದದ ಕ್ಷಣದಲಿ । ಕೆರಳುತ ಕೇಶವನು ॥೧೧೫॥

ಬಿಡಲಂಜನಶರವಕ್ಷಯದಿಂದದ । ತಡಿಗಡೆಯಲ್ಕಾಗ ॥
ಜಡಜಭವಾಸ್ತ್ರವ ಬಿಡೆ ವೈಷ್ಣವದೊಳು । ಜಡಜಾಂಬಕ ಮುರಿದ ॥೧೧೬॥

ತಿರುಹಿ ಬ್ರುಶುಂಡಿಯ ಬರಲಾ ರುಕ್ಮನು । ಭರದೊಳು ಕಸಿದವನ ॥
ಕರಗಳ ಬಂಧಿಸಿ ಶ್ರೀಶನು ಖಡುಗವ । ಗುರಿಯೊಳು ಗಳಕಿಡಲು ॥೧೧೭॥

**ರಾಗ ಮಾಧುಮಾಧವಿ ತ್ರಿವುಡೆತಾಳ**

ದೇವ ರಕ್ಷಿಸೆನುತ್ತ ರುಕ್ಮಿಣಿ । ದೇವದೇವನ ಕರವ ಪಿಡಿಯುತ ।
ಭಾವನನು ನೀ ಕೊಲುವೆಯೆಂತೈ । ಸಾವಧಾನದಿ ಯೋಚಿಸು ॥೧೧೮॥

ನಿನಗಿದಿರೆ ಹುಲುಮನುಜನೀತನು । ನೆನೆದಡಜಸುರರುದ್ರಕೋಟಿಗ ।
ಳೆನಿತು ಜನಿಪವು ನಿನ್ನ ದೇಹದೊಳ್ । ವನಜನಾಭನೆ ರಕ್ಷಿಸು ॥೧೧೯॥

ಕೆಟ್ಟನೆಂದಳುತಿರುವ ಸುದತಿಗೆ । ಕೊಟ್ಟನಾ ಮಧುವೈರಿಯಭಯವ ।
ದುಷ್ಟನಿವನಸುವಳಿಯೆನೆನುತಲಿ । ಜುಟ್ಟ ಖಂಡಿಸಲಾಕ್ಷಣ ॥೧೨೦॥

ಬಂದು ರಾಮನು ಪರಿಕಿಸುತ ಗೋ । ವಿಂದನೀಪರಿಗೆಯ್ದುದನುಚಿತ ।
ಕೊಂದೆ ನೀನವಮಾನ ಗೆಯ್ದುದ । ರಿಂದ ಮರಣವೆ ಸೌಖ್ಯವು ॥೧೨೧॥

ಬಂಧಿಸಲು ಬೇಡೆನುತ ಹಲಧರ । ಸಂಧಿಸಿದ ಕರ ಬಿಡಿಸಿ ವ್ಯಥಿಸದಿ ।
ರೆಂದು ರುಕ್ಮನ ಕಳುಹಿ ರುಕ್ಮಿಣಿ । ಗಂದು ಧೈರ್ಯವನರುಹಿದ ॥೧೨೨॥

**ಭಾಮಿನಿ**

ಪುಂಡರೀಕಾಂಬಕನ ಕೊಲ್ಲದೆ ।
ಕೊಂಡುಬಾರದೆ ತಂಗಿಯನು ತಾ ।
ಕುಂಡಿನವ ಪೊಗೆನೆಂದು ರುಕ್ಮನು ಭೋಜಕಟಕದಲಿ ॥
ಮೊಂಡತನದೊಳಗಿರಲು ಯಾದವ ।
ತಂಡದೊಳು ವೈದರ್ಭೆಯನು ಕರ ।
ಕೊಂಡು ದ್ವಾರಾವತಿಯ ಪೊಕ್ಕರು ಹಲಧರಚ್ಯುತರು ॥೧೨೩॥

**ರಾಗ ಕಾಂಭೋಜಿ ಝಂಪೆತಾಳ**

ತಂದೆಯಡಿಗಭಿನಮಿಸಿ ಚಂದಿರಾನನೆಯಳನು । ತಂದಪರಿಗಳ ನರುಹೆ ಮಂದಹಾಸದಲಿ ॥
ಚಂದವಾಯಿತು ಕೃಷ್ಣ ವರಿಸಿವಳ ವಿಧ್ಯುಕ್ತ । ದಿಂದ ಒಳಿತಹುದೆನುತ ಪರಸಿ ಬಿಗಿಯಪ್ಪೆ ॥೧೨೪॥

ಕರೆಸಿ ಸೃಂಜಯಕಾಶೀಶ್ವರರ ಭೀಷ್ಮಕಮುಖ್ಯ । ಪರಮ ಬಾಂಧವರನ್ನು ಮನ್ನಿಸುತ ಮುದದಿ ॥
ಪುರಜನರ ಪರಿಜನರ ಭೂಸುರರ ಕರೆಸುತ್ತ । ವರಪುರೋಹಿತಗಾರ್ಗ್ಯರನುಮತದೊಳಾಗ ॥೧೨೫॥

ಹರುಷದಿಂ ಪರಿಣಯದ ವಿಧಿಯಿಂದ ರುಕ್ಮಿಣಿಯ । ನರಹರಿಯು ಪರಿಗ್ರಹಿಸಿ ಭೂರಿದಕ್ಷಿಣೆಯ ॥
ಕರುಣಿಸುತ ವಿಬುಧರಿಗೆ ಮೃಷ್ಟಾನ್ನಭೋಜ್ಯದಿಂ । ಪರಿಪರಿಯ ಮನ್ನಿಸುತ ಕಳುಹಿ ಸಂತಸದಿ ॥೧೨೬॥

ಸರಸಸಲ್ಲಾಪದೊಳು ಸರಸಿಜಾಕ್ಷಿಯ ಕೂಡಿ । ಹರಿಯು ಸಂತೋಷದೊಳು ದ್ವಾರಕಾಪುರದಿ ॥
ಇರುತಿರಲು ಭೀಷ್ಮಕನು ಸಂತಸದಿ ತನ್ನ ಪುರ । ವರಕೆ ತೆರಳಿದ ನೃಪರ ಬಳಸಿ ವೈಭವದಿ ॥೧೨೭॥

**ಭಾಮಿನಿ**

ಅರಸ ಕೇಳ್ ಬೃಂದಾವನಾಖ್ಯದೊ ।
ಳಿರುವ ಸತ್ರಾಜಿತನು ವಿಭವದಿ
ತೆರಳಿ ಬಂದೋಲಗದಿ ಮಂಡಿಸಿರಲ್ಕೆ ಚಾರಕನು ॥
ಭರದಿ ನಡೆತಂದೆರಗುತಾಕ್ಷಣ ।
ಕರವ ಜೋಡಿಸುತಾಗ ದೈನ್ಯದೊ ।
ಳಿರಲು ಕಂಡಾ ನೃಪತಿ ಬಂದಿಹ ಕಾರ್ಯವೇನೆನಲು ॥೧೨೮॥

**ಲಾವಣಿ**

ಚಿತ್ತಾವಧಾನ ಭೂಪಾಲ । ನಾ । ವಿಸ್ತರಿವೆನು ಕೇಳು ಸದ್ಗುಣಶೀಲ ॥ ಚಿತ್ತಾವಧಾನ ಭೂಪಾಲ ॥ ಪ ॥

ಕರಡಿ ಕಾಡ್ಗೋಣ ಜಂಬುಕವು । ಮತ್ತೆ । ಶರಭ ಶಾರ್ದೂಲ ಕಾಡಾನೆ ಕಾಡ್ಗುರಿಯು ॥
ವರಹ ಚಮರಿ ಖಡ್ಗಮೃಗವು । ಮರ । ಮರಕೆ ಪಾರುವ ಕಪಿಗಡಣದಬ್ಬರವು ॥
ಚಿತ್ತಾವಧಾನ ॥೧೨೯॥

ಸುರಗಿ ತಮಾಲ ಮಾದಲವ । ಪಣ್ಣಾ । ಗಿರುತಿಹ ಪನಸಾಂಬ್ರ ಕದಳಿಯ ಫಲವ ॥
ಭರದಿ ಮೆಲ್ಲುತ ಮದೋತ್ಕರವ । ತೋರು । ತ್ತಿರುವುವು ಪರಿಕಿಸಬೇಕುದ್ಯಾನವ ॥
ಚಿತ್ತಾವಧಾನ ॥೧೩೦॥

**ರಾಗ ಕೇದಾರಗೌಳ ಝಂಪೆತಾಳ**

ಚರನ ನುಡಿಯಂ ಕೇಳುತ । ವನಕೀಗ । ತೆರಳಿ ಬೇಟೆಯನಾಡುತ ॥
ದುರುಳ ಮೃಗಪಕ್ಷಿಗಳನು । ಸಂಹರಿಸಿ । ಹರುಷಪಡುತಿಹೆನೆಂದನು ॥೧೩೧॥

ಕರೆಯೊ ಶಬರರ ವೇಗದಿ । ನಾಯ್ಗಳನು । ತರುಬುತೀಕ್ಷಣ ಗಮಕದಿ ॥
ಬರುವುದೆನೆವೊಳಿತೆನ್ನುತ । ಚಾರ ಕರೆ । ತರಲು ಬಂದವರೆರಗುತ ॥೧೩೨॥

**ರಾಗ ಮಾರವಿ ಏಕತಾಳ**

ಚರಣಕೆ ಬಿನ್ನಹ ಸ್ವಾಮಿಯೆಯೆಮ್ಮನು । ಕರೆಸಿದ ಕಾರಣವ ॥
ಅರುಹಲುಬೇಕೆನೆ ಪೊರಡಿರಿ ಬೇಟೆಗೆ । ತ್ವರಿತದೊಳೀಗೆನಲು ॥೧೩೩॥

ದಿಂಡೆ ಶಿಪಾಯ್ ಬಲ ಬಂದಿದೆ ಮೃಗಗಳ । ತಂಡವ ವಿಪಿನದೊಳು ॥
ಖಂಡಿಸಿ ಕೆಡಹುವೆವೀಕ್ಷಣ ಪರಿಕಿಸು । ಚಂಡಪರಾಕ್ರಮವ ॥೧೩೪॥

ಬಿಲ್ಲುಬ್ರುಶುಂಡಿಯು ತೋಮರ ಖಡುಗವು । ಸಳ್ಳು ಕಠಾರಿಯನು ॥
ಕೊಳ್ಳುತ ಹರುಷದಿ ಬಂದೆವು ನಾಯ್ಗಳ । ನೆಲ್ಲವ ತರುಬುತಲಿ ॥೧೩೫॥

**ಭಾಮಿನಿ**

ಹರುಷದೊಳು ಸತ್ರಾರ್ಜಿತಾಖ್ಯನು ।
ಕರುಣಿಸುತ ವೀಳೆಯವ ಬೇಟೆಗೆ ।
ಭರದಿ ಪೊರಮಡಲನುಜನಾದ ಪ್ರಸೇನ ಬಂದೆರಗಿ ॥
ತೆರಳುವೆನು ತಾನೆನುತ ಕಂಠದಿ ।
ದರಿಸುತಾಗ ಸ್ಯಮಂತಕವ ಪಡೆ ।
ವೆರಸಿ ವಿಪಿನವ ಪೊಕ್ಕು ಶರವಿಡುತಲ್ಲಿ ದಿಗ್ದೆಸೆಗೆ ॥೧೩೬॥

**ರಾಗ ಸೌರಾಷ್ಟ್ರ ಮಟ್ಟೆತಾಳ**

ಹರುಷದಿಂದ ಬೇಟೆಯಾಡುತ । ನಡೆದನಾ ಪ್ರಸೇನರಾಯ । ಹರುಷದಿಂದ ಬೇಟೆಯಾಡುತ ॥ಪ॥

ಹರಿಣ ಶಶಕ ಖಡ್ಗಿಚಮರಿಯ । ಕಂಠವರಿದು । ವರಹಶಾರ್ದೂಲವಿತತಿಯ ॥
ಕರಡಿ ಕಾಡ್ಗೋಣಗಳನು । ಉರವ ಬಗಿದು ರೋಷದಿಂದ ।

ಕರಿಯ ತಂಡಗಳನೆ ಕೆಡಹಿ । ಶಬರಸಾಲ್ವನಿಕರ ಸವರುತ ।
ಬಲೆಗಳೊಳಗೆ । ತರುಬಿ ಸದೆದು ತೋಷ ತಾಳುತ ॥೧೩೭॥

ತೊರೆದು ಸೇನೆಗಳನು ವೇಗದಿ । ಭೂಪ ಮುಂದೆ । ತೆರಳಲಾಗ ಘೋರ ವಿಪಿನದಿ ॥
ಪೊರಟು ಗುಹೆಯನೊಂದು ಸಿಂಹ । ವುರಿಯ ಸೂಸಿ ಘರ್ಜಿಸುತ್ತ ।
ಅರರೆ ದುರುಳನೇತಕೆನ್ನ । ಸರಿಸಕಯ್ತಂದೆ ನೀನೆಲ ।
ತಿಂಬೆನೀಗ । ಕೊರೆದು ಕಂಠ ಮೆರೆವೆ ನೋಡೆಲ ॥೧೩೮॥

**ರಾಗ ಘಂಟಾರವ ಅಷ್ಟತಾಳ**

ಕೆಟ್ಟ ಕಾನನಮೃಗವೆ ಜೀವದೊಳಾಶಾ ।
ಬಿಟ್ಟು ಮುಂದಕೆ ಬಾರೆನುತ್ತಲಿ । ಬಿಟ್ಟನಾಕ್ಷಣ ಶರಗಳ ॥೧೩೯॥

ಎರಡು ಕೈಯೊಳು ತಿಕ್ಕಿ ಚೂರ್ಣವ ಗೆಯ್ದು ।
ಶರವ ಖಂಡಿಸುತಾಗ । ಕೇಸರಿ । ದುರುಳ ತೋರೆಲೊ ಶೌರ್ಯವ ॥೧೪೦॥

ಕಡಿವೆ ಕಂಠವೆನುತ್ತ ಪ್ರಸೇನನು ।
ಖಡುಗವನು ತೂಗುತ್ತ ಬರೆ ಬಂ । ದೊಡನೆ ಕೇಸರಿ ಘರ್ಜಿಸಿ ॥೧೪೧॥

ಕೆರಳಿಯಾರ್ಭಟಿಸುತ್ತ ಖಡ್ಗವನಾಗ ।
ಕರಕರನೆ ದಂತದಲಿ ಚೂರ್ಣಿಸಿ । ಧರಣಿಗಿಕ್ಕಲು ಕಾಣುತ ॥೧೪೨॥

ಭರದಿ ಶೂಲವ ತಿರುಹಿ ಮುಂದರಿಯಲು ।
ಹರಿಯು ಪುಟನೆಗೆದಾಗ ಭೂಪನ । ಶಿರವ ಚೂರ್ಣಿಸಿ ರವದಲಿ ॥೧೪೩॥

**ಭಾಮಿನಿ**

ಭರಿತ ರೋಷಾವೇಷದಿಂದಲಿ ।
ನರಪತಿಯ ಶೋಣಿತವ ಪಾನಿಸಿ ।
ಕೊರಳೊಳಗೆ ರಂಜಿಸುವ ಮಣಿಯನು ಕೊಂಡು ವೇಗದಲಿ ॥
ತೆರಳುತಿರೆ ಬಿಲಕೆನುತ ಮಾರ್ಗದಿ ।
ತರುವ ತೂಗುತ ಜಾಂಬವಂತನು ।
ಭರದಿ ಬಂದಡಗಟ್ಟಿ ಮಣಿಯೆನಗಿತ್ತು ತೆರಳೆಂದ ॥೧೪೪॥

**ರಾಗ ಮಾರವಿ ಏಕತಾಳ**

ಅರರೆ ಧೂರ್ತನೆ ಶಿರ ಖಂಡಿಸುವೆನು । ತೆರಳೆನುತಾಕ್ಷಣದಿ ॥
ಉರಿಸೂಸುತ ಪಂಚಾಸ್ಯನು ಜಾಂಬವ । ಗೆರಗಿದ ಮುಷ್ಟಿಯಲಿ ॥೧೪೫॥

ಹರಿಹರರನು ನಾ ಲೆಕ್ಕಿಸೆ ಧುರದಲಿ । ಚರಣಕೆ ವಂದಿಸುತ ॥
ಭರದೊಳು ಮಣಿಯರ್ಪಿಸದಿರೆ ಜೀವದೊ । ಳಿರಿಸೆನು ನೋಡೆಂದ ॥೧೪೬॥

ನೋಡೆಲೊ ಎನ್ನಯ ದಂಷ್ಟ್ರವನಿದರೊಳು । ಗಾಢದಿ ಶಿರವರಿದು ॥
ಖೋಡಿಯೆ ಕೇಳ್ ನಾ ಸಾರುವೆ ಮಣಿಯಂ । ನೀಡೆನು ಭಲ್ಲುಕನೆ ॥೧೪೭॥

ಕೆರಳುತ ಜಾಂಬವ ಮುಷ್ಟಿಯ ಬಲಿಯುತ । ಶಿರಕೆರಗಲು ಭರದಿ ॥
ತೊರೆದಸುವನು ಪಂಚಾಸ್ಯನು ಧರೆಯೊಳ । ಗುರುಳಲು ಪಲ್ಕಿರಿದು ॥೧೪೮॥

**ಭಾಮಿನಿ**

ಪರಮಶೋಭೆಗಳಿಂದ ಜ್ವಲಿಸುವ ।
ವರಸ್ಯಮಂತಕಮಣಿಯ ಜಾಂಬವ ।
ಹರುಷದಿಂ ಕೊಂಡೊಯ್ದು ಗುಹೆಯನು ಪೊಕ್ಕು ವೇಗದಲಿ ॥
ತರಳನಾಡುವುದಕ್ಕೆ ತೊಟ್ಟಿಲ ।
ಹುರಿಗೆ ಬಂಧಿಸಿ ಸುಖದೊಳಿರುತಿರೆ ।
ಚರಿಸಿ ಸೇನೆಗಳಾ ಪ್ರಸೇನನ ಕಾಣದಡವಿಯೊಳು ॥೧೪೯॥

**ರಾಗ ನೀಲಾಂಬರಿ ರೂಪಕತಾಳ**

ಹುಡುಕುತ ಗಿರಿಗುಹೆ ಪೊದರೊಳು । ಗಿಡತರುಗುಲ್ಮಗಳೆಡೆಯೊಳು ॥
ಒಡೆಯನ ಕುರುಪನ್ನರಿಯದೆ । ನಡುಗುತ ಭೀತಿಯೊಳು ॥೧೫೦॥

ಘೋರಾರ್ಭಟೆಯೊಳು ಚರಿಸುವ । ಕ್ರೂರಮೃಗಂಗಳು ತಿಂದವೊ ॥
ಬಾರನೆ ಜೀವದೊಳಿರ್ದಡೆ । ತೋರದೆಯಡಗುವನೆ ॥೧೫೧॥

ಕಾನನಕಯ್ದನುಜಾತನು । ಏನಾಗಿಹನೆನುತೆಮ್ಮೊಳು ॥
ಕ್ಷೋಣಿಪ ಸತ್ರಾಜಿತ ಬೆಸಗೊಳ । ಲೇನೆಂಬೆವು ಶಿವನೆ ॥೧೫೨॥

ಮರುಗುತಲನುಚರರೀಪರಿ । ಪುರಕಯ್ತರೆ ಸತ್ರಾಜಿತ ॥
ನಿರುತಿರಲೊಡ್ಡೋಲಗದೊಳು । ಎರಗುತ ಪೇಳಿದರು ॥೧೫೩॥

**ರಾಗ ಪುನ್ನಾಗ ಅಷ್ಟತಾಳ**

ಕೇಳು ಸತ್ರಾಜಿತರಾಯ । ನಾನು । ಪೇಳುವ ನುಡಿಗಳ ಜೀಯ ॥
ಪಾಳಯ ಕೂಡಿ ನಿನ್ನನುಜ ಪ್ರಸೇನನು । ಲೀಲೆಯಿಂದಲಿ ಬೇಟೆಗೆನುತ ಪೋದನು ನಿನ್ನೆ ॥೧೫೪॥

ಧರಿಸಿ ಸ್ಯಮಂತಕಮಣಿಯ । ದಿವಾ । ಕರನಂತೆ ದೇದೀಪ್ಯತೆಯ ॥
ಕಿರಣದಿ ಪೊಳೆಯುತ್ತ ಚರಿಸಿ ಕಾಂತಾರದಿ । ತೆರಳಿದ ತಾನೊರ್ವನಗಲಿ ಸೇನೆಗಳನ್ನು ॥೧೫೫॥

ಅರಸಲು ವಿಪಿನವೆಲ್ಲವನು । ನೃಪ । ನಿರವ ಕಾಣೆವು ಪೇಳ್ವುದೇನು ॥
ದುರುಳ ಮೃಗಂಗಳಿಂದಳಿದನಲ್ಲದೆ ಜೀವ । ವಿರಲು ಗೋಚರಿಸನೆ ಒರೆಯಲರಿಯೆ
ಜೀಯ ॥೧೫೬॥

**ಕಂದ**

ಮರುಗುತ ಚಾರಕನೀ ಪರಿ ।
ಯರುಹಲ್ ತನ್ನನುಜಾತನ ಗುಣಮಂ ನೆನೆಯುತೆ ॥
ಧರೆಯೊಳಗುರುಳುತ ಜನಪಂ ।
ಶಿರಮಂ ನೆಗಹುತ ಮೋಹದಿ ಶೋಕಿಸುತಾಗಳ್ ॥೧೫೭॥

**ರಾಗ ನೀಲಾಂಬರಿ ರೂಪಕತಾಳ**

ತೆರಳಿದೆ ಯಾವೆಡೆ ಸಹಜನೆ । ದುರುಳ ಮೃಗಂಗಳು ತಿಂದವೊ ।
ಭರದೊಳು ಪೋದೆಯೊ ಬೇಟೆಗೆ । ತೊರೆದೆಯೊ ಜೀವವನು ॥೧೫೮॥

ವಿರಚಿಸಿ ತಪವನು ಪೂರ್ವದಿ । ತರಣಿಯ ಎನಗೊಲಿದಿತ್ತಿಹ ।
ಪರಮ ಸ್ಯಮಂತಕ ಮಣಿಯನು । ಧರಿಸಿದೆ ನೀನೇಕೆ ॥೧೫೯॥

ತನಗಿದು ಕೊಡಬೇಕೆನ್ನುತ । ಮಣಿಯನು ನಗಧರನೆನ್ನೊಳು ।
ದಿನದಿನ ಕೇಳುತಲಿರ್ದನು । ಘನತರದಾಸೆಯೊಳು ॥೧೬೦॥

ವನದೊಳು ಗುಪಿತದಿ ಕೃಷ್ಣನೆ । ಮಣಿಯನು ತಾನಪಹರಿಸಲು ।
ಹನನವ ಗೆಯ್ದುದೆ ನಿಶ್ಚಯ । ವೆನುತಲೆ ಶೋಕಿಸಿದ ॥೧೬೧॥

**ವಾರ್ಧಕ**

ಅನಿತರೊಳಗಂಬರದ ಪಥದಿಂದ ನಾರದಂ ।
ಚಿನುಮಯನ ನೆನೆವುತ್ತ ಬರಲಾಗ ಸತ್ಕರಿಸಿ ।
ಘನತರದ ಪೀಠದೊಳು ಕುಳ್ಳಿರಿಸುತಭಿನಮಿಸೆ ಶೋಕವೇನೆನಲೆಂದನು ॥
ತನುವ ಬಳಲಿಸಿ ತಪವ ಗೆಯ್ದುದಕೆ ಭಾಸ್ಕರಂ ।
ಮಣಿಯನಿತ್ತಿಹನದರ ಧರಿಸಿಯೆನ್ನನುಜಾತ ।
ವನಕೆ ಪೋಗಿರೆ ಕೃಷ್ಣನಪಹರಣಕೋಸುಗಂ ಹನನಗೆಯ್ದ ಪ್ರಸೇನನ ॥೧೬೨॥

**ಭಾಮಿನಿ**

ನಿರತ ಬಾಂಧವರಾಗಿ ಬಳಸಿನೊ ।
ಳಿರುವ ಕಾರಣ ದ್ರೋಹಗೆಯ್ದನು ।
ಪರಮಸತ್ಕುಲಜಾತರಿನಿತೆಸಗಲ್ಕೆ ನಾನಿವರ ॥

ನೆರೆಯೊಳಿಹುದನುಚಿತಗಳೆನ್ನಲು ।
ವರಮುನೀಂದ್ರನು ಪೇಳ್ದ ನಿಜಗಳ ।
ನರಿತು ಬಹೆ ತಾಳನಕವೆನ್ನುತ ಗಮಿಸೆ ವೇಗದೊಳು ॥೧೬೩॥

**ರಾಗ ಸಾಂಗತ್ಯ ರೂಪಕತಾಳ**

ಅನುಜನ ನೆನೆದು ಶೋಕಿಸುತ ಸತ್ರಾಜಿತ । ಜನಪನಿರಲು ಬೃಂದಾವನದಿ ॥
ಮುನಿಪ ನಾರದ ವೇಗದಿಂದ ವೀಣೆಯ ಪೊತ್ತು । ವನಜಾಕ್ಷ ನಾಮಕೀರ್ತನದಿ ॥೧೬೪॥

ತ್ವರಿತದಿ ದ್ವಾರಕಾಪುರಕೆ ಚಿತ್ತಯಿಸಲು । ಹರುಷದಿ ಹಲಧರನಂದು ॥
ವರರತ್ನಪೀಠದೊಳೊಪ್ಪಿರ ತೇಜ ವಿ । ಸ್ಫುರಿಸೆ ನೇತ್ರಾನಂದಮಾಗಿ ॥೧೬೫॥

ದೂರದೊಳಯ್ತಹ ವ್ರತಿಯ ಕಾಣುತ ರಾಮ । ಸಾರಿಬಂದಡಿಗಭಿನಮಿಸಿ ॥
ಭೂರಿ ತೋಷದಿ ಪೀಠವಿತ್ತು ಪೂಜಿಸುತಾಗ । ಸ್ವಾರಿಯಾಗಮನವೇನೆಂದ ॥೧೬೬॥

**ರಾಗ ಬೇಗಡೆ ಅಷ್ಟತಾಳ**

ಕೇಳು ಹಲಧರ ಪೇಳ್ವೆನರಿತುದನು । ಶ್ರೀಕೃಷ್ಣನೀ ಜಗ ।
ಪಾಲನೆಗೆಯವತಾರ ಗೆಯ್ದಿಹನು ॥
ಪೇಳಲಾರೆನು ಸರ್ವಜನರೊಳು । ತಾಳಿ ದ್ವೇಷವ ಬರಿದೆ ನಿಷ್ಠುರ ।
ವ್ಯಾಳಶಯನಗೆಯೋವೇ ನೀ । ಪೇಳು ಬುದ್ಧಿಗಳನ್ನು ದಯೆಯಲಿ ॥೧೬೭॥

ಅತ್ತೆಯಹ ರಾಜಾಧಿದೇವಿಯೊಳು । ಪುಟ್ಟಿರ್ದ ಕನ್ನೆಯ ।
ಮಿತ್ರವಿಂದೆಯ ಮೊನ್ನೆ ಕಲಹದೊಳು ।
ಎತ್ತಿತಂದಿಹನಗ್ರಭವರು । ನ್ಮತ್ತರಹ ವಿಂದಾನುವಿಂದನು ।
ಧೂರ್ತರಾಗಿಹರೇಕೆ ನಿಷ್ಠುರ । ವ್ಯರ್ಥ ಕೈಕೊಂಡಿರ್ಪನೀತನು ॥೧೬೮॥

ಕೋಸಲೇಶ್ವರ ನಗ್ನಜಿತುಸುತೆಯ । ವೃಷಭಂಗಳೇಳನು ।
ಕೇಶವನು ಬಂಧಿಸುತ ಬಾಲಿಕೆಯ ॥
ತೋಷದೊಳು ಲೀಲೆಯನು ತಂದಿಹ । ನೈಸೆ ಮಧುಸೂದನನು ಮಾದ್ರಾ ।
ಧೀಶಸುತೆ ಲಕ್ಷಣೆಯ ಪಡೆದಿಹ । ಘಾಸಿಮಾಡುತ ನೃಪರ ಬಲವನು ॥೧೬೯॥

ತೆರಳಿ ಕೇಕಯ ನೃಪನ ಬಾಲಿಕೆಯ । ತಂದಿರ್ಪ ಭದ್ರೆಯ ।
ಧರಣಿಪಾಲರ ಗೆಲಿದು ಮಾನಿನಿಯ ॥
ತರಣಿಸುತೆ ಕಾಳಿಂದಿಯೊಲಿಸಿಹ । ಸರಸಿಜಾಂಬಕಗೇತಕೀಪರಿ ।
ತರುಣಿಯರು ತಮ್ಮೊಳಗೆ ದಿನ ದಿನ । ಬರಿದೆ ಕಲಹವ ತಂದುಕೊಂಬರು ॥೧೭೦॥

**ಶಾರ್ದೂಲವಿಕ್ರೀಡಿತ**

ಶ್ರೀಲಕ್ಷ್ಮೀಪ್ರಿಯವಲ್ಲಭಂ ಮುರರಿಪುಂ ಬಾಲಾರ್ಕಕೋಟಿಪ್ರಭಂ
ಲೀಲಾಮಾನುಷವಿಗ್ರಹಂ ಗುಣನಿಧಿಂ ಬ್ರಹ್ಮಾಂಡಭಾಂಡೋದರಮ್ ।
ನೀಲೇಂದೀವರಭಾಸಸುಂದರವಪುಂ ಕ್ಷೀರಾಬ್ಧಿವಾಸಂ ಹರಿಂ
ಕಾಳೀಮರ್ದನಮಿಂದುಶೇಖರಪ್ರಿಯಂ ಶ್ರೀನಾರಸಿಂಹಂ ಭಜೇ ॥೧॥

**ರಾಗ ನಾಟಿ ಝಂಪೆತಾಳ**

ಕರಿವದನ ಗಣನಾಥ । ಪರಮೇಶಸುಪ್ರೀತ ।
ಸುರನರೋರಗ ನಮಿತ । ಪೊರೆಯನ್ನ ಸತತ ॥ ಜಯ ಜಯತು ಜಯತು ॥೨॥

ತರಣಿಕೋಟಿಪ್ರಕಾಶ । ದುರಿತಭವಭಯನಾಶ ।
ಕರದೊಳಂಕುಶಪಾಶ । ಮೆರೆವ ವಿಘ್ನೇಶ ॥ ಜಯ ಜಯತು ಜಯತು ॥೩॥

ಫಾಲಚಂದ್ರನೆಯೆನ್ನ । ಪಾಲಿಸನುದಿನ ನಿನ್ನ ।
ನೋಲಯಿಸಿ ಭಜಿಸುವೆನು । ಲೀಲವಿಗ್ರಹನೆ ॥ ಜಯ ಜಯತು ಜಯತು ॥೪॥

**ಭಾಮಿನಿ**

ಕಾಳಿ ಶ್ರೀಮತ್ತ್ರಿಪುರಸುಂದರಿ ।
ಕಾಲಕಾಲಾಂತಕಿ ಕಪರ್ದಿನಿ ।
ಶ್ರೀಲಲಿತೆ ರಾಜೇಶಿ ಭಗವತಿ ಚಂಡಿ ವಾರಾಹಿ ॥
ಶೂಲಧಾರಿಣಿ ರಕ್ತದಂತಿಕೆ ।
ಜ್ವಾಲಿನೀ ಹ್ರೀಂಕಾರಿ ಭ್ರಾಮರಿ ।
ನೀಲಕುಂತಳೆ ಮಹಿಷಮರ್ದಿನಿ ಜಯತು ಕೌಮಾರಿ ॥೫॥

**ದ್ವಿಪದಿ**

ಹರಿ ಹರ ವಿರಿಂಚಿ ಸಿರ ಗಿರಿಜೆ ಶಾರದೆಗೆ ।
ಚರಣಕಭಿನಮಿಸುವೆನು ಸದ್ಭಕ್ತಿಯೊಳಗೆ ॥೬॥

ಸುರಪ ಶಿಖಿ ಯಮ ನಿಋತಿ ವರುಣಮಾರುತರ ।
ಸ್ಮರಿಸುವೆನು ಧನಧನೀಶಾನದಿಗಧಿಪರ ॥೭॥

ತರಣಿ ಶಶಿಕುಜ ಸೌಮ್ಯ ಗುರು ಕವಿಗೆ ನಮಿಸಿ ।
ತರಣಿನಂದನ ರಾಹುಕೇತುಗಳ ಸ್ತುತಿಸಿ ॥೮॥

ವರಕಶ್ಯಪಾತ್ರಿಭರದ್ವಾಜಕೌಶಿಕರ ।
ಸ್ಮರಿಪೆ ಜಮದಗ್ನಿವಸಿಷ್ಠಗೌತಮರ ॥೯॥

ಜನನಿ ಜನಕಾದಿಗಳಿಗೆರಗಿ ವೈಭವದಿ ।
ನೆನೆದು ಗುರುಹಿರಿಯರನು ಕೃತಿಗೆಯ್ವೆ ಮುದದಿ ॥೧೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರುಷದೊಳು ಶುಕಮುನಿ ಪರೀಕ್ಷಿತ । ದೊರೆಗೆ ಭಾಗವತಾಖ್ಯಚರಿತೆಯ ।
ನೊರೆವುತಿರೆ ಹರಿಗೆನಿತು ರಮಣಿಯ । ರರುಹಿರೆನಲು ॥೧೧॥

ಕೇಳು ಕೇಳ್ನೈ ನೃಪತಿ ನಗಧರ । ಕಾಲಯವನನನೊಯ್ದು ಭೂಮೀ ।
ಪಾಲ ಮುಚುಕುಂದಾಖ್ಯನಕ್ಷಿಯ । ಜ್ವಾಲೆಯೊಳಗೆ ॥೧೨॥

ಉರುಹಿದಾನಂತರದಿ ಕುಂಡಿನ । ಪುರದ ಭೀಷ್ಮಕಸುತೆಯನಿತರರಿ ।
ಗರಿಯದೋಲಪಹರಿಸೆ ಪರಿಗಳ । ನರಿತು ಜವದಿ ॥೧೩॥

ಧುರಕೆ ಬಂದಿಹ ರುಕ್ಮಚೈದ್ಯರ । ತ್ವರಿತದೊಳು ಜಯಪೊಂದಿ ರುಕ್ಮಿಣಿ ।
ವರಿಸಿ ಭಾಮಾದ್ಯಷ್ಟಸತಿಯರ । ವರಿಸಿಕೊಂಡು ॥೧೪॥

ನರಕ ದೈತ್ಯನ ತರಿದು ಸೆರೆಯೊಳ । ಗಿರುತಿರುವ ಪದಿನಾರುಸಾಸಿರ ।
ತರುಣಿಯರ ಕೈವಿಡಿದು ದ್ವಾರಕೆ । ಯೊಳಗೆ ಮುದದಿ ॥೧೫॥

ಗಣನೆಯಲಿ ಪದಿನಾರು ಸಾಸಿರ । ವನಿತೆಯಷ್ಟಕವಾಗಿ ಶ್ರೀಹರಿ ।
ಚಿನುಮಯಾತ್ಮಕನಿರ್ದ ಮೋದದೊ । ಳೆಂದ ಮುನಿಪ ॥೧೬॥

**ಭಾಮಿನಿ**

ಇನಿತು ಪೇಳಿದ ಮುನಿಯ ಚರಣಕೆ ।
ಜನಪನಭಿವಂದಿಸುತ ಕೇಳ್ದನು ।
ಘನವೆ ಕ್ಷಾತ್ರಿಯನಿಂಗೆ ಸತಿಯಪಹರಣ ಖಳರಂತೆ ॥
ಚಿನುಮಯನು ರುಕ್ಮಿಣಿಯೆ ಮೊದಲಾ ।
ದೊನಿತೆಯರ ಪಡೆದಂದವೆಲ್ಲವ ।
ಮುನಿಪ ವಿಸ್ತರಿಸೆನಲು ಸಾಂಗದೊಳೆಂದ ನೃಪವರಗೆ ॥೧೭॥

**ರಾಗ ಕೇದಾರಗೌಳ ಅಷ್ಟತಾಳ**

ಧರೆಯೊಳು ವೈದರ್ಭದೇಶದಿ ಕುಂಡಿನ । ಪುರಪತಿ ಭೀಷ್ಮಕಗೆ ॥
ತರಳರೈವರು ಸುತೆಯೊರ್ವಳು ಜನಿಸಿರೆ । ಪರಿತೋಷದಿಂದಿರ್ದನು ॥೧೮॥

ಧಾರಿಣಿ ಪಾಲಕ ಸಚಿವ ಸಾಮಂತರ । ಮೇಳಯ್ಸಿಯೋಲಗದಿ ॥
ಭೂರಿ ವೈಭವದಿಂದಲಿರ್ದತರಂಗ ವಿ । ಚಾರವಮಾತ್ಯಗೆಂದ ॥೧೯॥

ಆದುದು ಷೋಡಶವರುಷ ರುಕ್ಮಿಣಿಗೀಗ । ಮೋದದಿ ಲಗ್ನಗೆಯ್ಯೆ ॥
ಮೇದಿನಿಯೊಳಗಿವಳಿಂಗೆ ತಕ್ಕವ ಕೃಷ್ಣ । ನಾದಿಕೇಶವನೆಂಬೆನು ॥೨೦॥

ಸರಸಿಜನೇತ್ರೆಗೆ ಹರಿಯ ಬಿಟ್ಟನ್ಯರು । ಪುರುಷರು ಸಲ್ಲರೆಂದು ॥
ಅರಿತಿಹೆ ನಿನ್ನಯ ಮನಗಳೇನೆನೆ ಮಂತ್ರಿ । ಕರಮುಗಿಯುತಲೆಂದನು ॥೨೧॥

**ರಾಗ ಸಾಂಗತ್ಯ ರೂಪಕತಾಳ**

ಧೊರೆರಾಯ ಕೇಳಯ್ಯ ನಿನ್ನಯ ಸುತ ರುಕ್ಮ । ನಿರುತಿರೆ ಪ್ರೌಢನಾಗೀಗ ॥
ಅರಿತವನಂತರಂಗವ ನೀನು ಮುದದಿಂದ । ವಿರಚಿಸಲೊಳಿತು ಕಾರ್ಯಗಳ ॥೨೨॥

ಕರೆಸು ವೇಗದಿ ರುಕ್ಮ ಬಲ್ಲಿದನಹುದೆನೆ । ತ್ವರೆಯಿಂದ ಸಚಿವನಯ್ತಂದು ॥
ಕರವ ಜೋಡಿಸಿ ಪಿತನಾಜ್ಞೆಯ ಬೆಸಸಲು । ಹರಿತಂದನಾಸ್ಥಾನದೆಡೆಗೆ ॥೨೩॥

ಅರುಹಬೇಹುದು ಎನ್ನ ಕರೆಸಿದಂದಗಳೇನು । ಕೊರತೆಗಳನು ತ್ವರ್ಯದಿಂದ ॥
ಅರಿಗಳಾಗಮನವೊ ರಾಷ್ಟ್ರಾಧಿಪತ್ಯದೊ । ಳಿರುವ ಕುಂದಕವೇನೆಂದೆನಲು ॥೨೪॥

**ಭಾಮಿನಿ**

ತರಳ ಕೇಳ್ ರುಕ್ಮಿಣಿಗೆ ಷೋಡಶ ।
ವರುಷಮಾದುದು ಪರಿಣಯಕೆ ವರ ।
ನಿರುವನೊರ್ವನೆ ಕೃಷ್ಣನೀಕೆಗೆ ಪೋಲ್ವನೆಂದೆನುತ ॥
ಅರಿತಿಹೆನು ಮನ್ಮನದಿ ಹರಿಯನು ।
ಕರೆಸಿ ಬಿಸಜಾಂಬಕಿಯ ವರಿಪರೆ ।
ಹರುಷದಿಂ ಪ್ರಾರ್ಥಿಸಲು ನೀನೇನೆಂಬೆಯೆನೆ ಕೆರಳಿ ॥೨೫॥

**ರಾಗ ಮಾರವಿ ಏಕತಾಳ**

ಜನಕನೆ ಭಳಿಭಳಿರೇನೆಂಬೆನು ತವ । ಮನಕೀ ನೆಂಟತೆಯು ॥
ಘನವಾದುದೆ ಕುಲ ಪರಿಕಿಸೆ ಗೋವಳ । ಮನುಜನು ಹೇಸಿಕೆಯು ॥೨೬॥

ನಡತೆಗಳಂತೈ ಸೋದರಮಾವನ । ಮಡುಹಿದ ಖಳರಂತೆ ॥
ಕಡುಜಾರನು ಗೋಪಾಂಗನೆಯರ ಕ್ಷಣ । ಬಿಡನಿವ ಗೋಕುಲದಿ ॥೨೭॥

ಬೆಕ್ಕಿನ ತೆರದೊಳು ಪಾಲ್ಮೊಸರೆಲ್ಲವ । ನೆಕ್ಕುವ ಶೀಲಗಳು ॥
ಪೊಕ್ಕತಿ ಲೂಟಿಯ ಗೆಯ್ಯುತ ಮನೆಮನೆ । ಸೊಕ್ಕಿಹ ಮದದಿಂದ ॥೨೮॥

ಧೀರಾಗ್ರೇಸರ ಚೈದ್ಯಧರಾಧಿಪ । ಶೂರನು ಶಿಶುಪಾಲ ॥
ವೀರಕ್ಷಾತ್ರಿಯನವನಿಗೆ ನಿನ್ನ ಕು । ಮಾರಿಯ ಕೊಡು ಮುದದಿ ॥೧೯॥

ಮೆರೆಯದು ಗೊಲ್ಲರ ನೆಂಟತೆಯೆಂದಿಗು । ಅರಸಕುಮಾರರಿಗೆ ॥
ಬರೆಸೀಕ್ಷಣ ಪತ್ರಿಕೆಯನು ಚೈದ್ಯಗೆ । ಪರಿಣಯಕೆಂದೆನುತ ॥೨೦॥

**ರಾಗ ಕೇದಾರಗೌಳ ಝಂಪೆತಾಳ**

ತರಳನೊಳಿನಿತಭಿಮತವನು । ಚೈದ್ಯನಿಗೆ । ಬರೆಸು ನೀ ಲೇಖನವನು ॥
ಅರಿತರೀಪರಿ ಕೃಷ್ಣನು । ಕಾರ್ಯ ಮುಂ । ದರಿಸೆ ವಿಘ್ನವ ಗೆಯ್ವನು ॥೨೧॥

ಬಿಡು ಬಿಡೆನ್ನಯ ಜನಕನೆ । ಕೃಷ್ಣನೆ । ನ್ನೊಡನೆ ಕಪಟವ ತೋರ್ಪನೆ ॥
ಒಡನೆ ಕರಬಿಗಿದಾತನ । ಸೆರೆಮನೆಯೊ । ಳಿಡುವೆ ಪಾಮರ ಗೋಪನ ॥೨೨॥

ಎನುತ ಪೌರುಷವಾಡುತ । ಚೈದ್ಯನಿಗೆ । ಘನದಿ ದಿಬ್ಬಣಗೂಡುತ ॥
ಅನುವಿನಿಂ ಬಹುದೆನ್ನುತ । ಪತ್ರಿಕೆಯ । ಜನಪನಂದನ ಬರೆಸುತ ॥೨೩॥

ಚರರೊಡನೆ ಕಳುಹಿ ಬೇಗ । ತನ್ನ ಪುರ । ವರವಲಂಕರಿಸುತಾಗ ॥
ಬರುವ ಸಪ್ತಮಿದಿನದೊಳು । ಪರಿಣಯವ । ವಿರಚಿಸುವೆನೆನುತಾಗಳು ॥೨೪॥

ಇರೆರುಕ್ಮನಿತ್ತ ಮುದದಿ । ದ್ವಾರಕೆಯೊಳ್ । ಹರಿಯು ಬಹಳಾನಂದದಿ ॥
ವಿರಚಿಸಿರೆ ಓಲಗವನು । ದ್ವಿಜನೊರ್ವ । ಬರಲು ದೂರದಿ ಕಂಡನು ॥೨೫॥

**ರಾಗ ಶಂಕರಾಭರಣ ತ್ರಿವುಡೆತಾಳ**

ಪರಮತೇಜೋರಾಶಿ ಭೂಸುರ । ವರರೆ ಬನ್ನಿರಿ ಮೋದದಿ ॥
ದರುಶನವೆಯಪರೂಪವಾಸನ । ವಿರಿಸಿಹೆನು ಕುಳಿರೆನ್ನುತ ॥೨೬॥

ಕುಶಲವೇ ತವ ಸತಿಸುತಾದ್ಯರು । ಪಶುನಿಕರ ಬಾಂಧವ್ಯಕೆ ॥
ಬೆಸಸಿರಾಗಮನಂಗಳೇನಿದು । ಪೊಸತು ದರ್ಶನವೆಂದನು ॥೨೭॥

ಹರಿಯೆ ಕೇಳು ವಿದರ್ಭನಗರದೊ । ಳರಸ ಭೀಷ್ಮಕರಾಯನ ॥
ತರಳೆ ರುಕ್ಮಿಣಿಯಿತ್ತ ಪತ್ರವ । ಹರುಷದಿಂಕೊಳ್ಳೆನುತಲಿ ॥೨೮॥

ಕೊಡಲು ಮಧುಸೂದನನು ಮೋದದಿ । ಬಿಡಿಸಿಯೊಕ್ಕಣಿ ವಿವರವ ॥
ಒಡನೆ ಪರಿಕಿಪೆನೆನುತಲಾಕ್ಷಣ । ಸಡಗರದಿ ವಾಚಿಸಿದನು ॥೨೯॥

**ರಾಗ ಕೇದಾರಗೌಳ ಅಷ್ಟತಾಳ**

ಸ್ವಸ್ತಿ ಶ್ರೀ ಬ್ರಹ್ಮಾಂಡಗರ್ಭ ಚರಾಚರ | ವಸ್ತು ಸಮ್ಮೇಳನಾಂಗ ||
ಚಿತ್ತಜಾರಿಯ ಸಖ ಕೇಶವ ಶ್ರೀಪುರು | ಷೋತ್ತಮ ನರಹರಿಗೆ ||೪೦||

ಚರಣಕಿಂಕರಿ ಕುಂಡಿನಾಪುರ ಭೀಷ್ಮಕ | ತರಳೆ ರುಕ್ಮಿಣಿ ಬಿನ್ನಹ ||
ನಿರತಸೌಖ್ಯವು ತಮ್ಮ ಕುಶಲವ ದಯೆಯಿಂದ | ಬರೆಸಬೇಹುದು ಸಾಂಪ್ರತ ||೪೧||

ದುರುಳ ಚೈದ್ಯನಿಗೆನ್ನ ಪರಿಣಯಗೆಯ್ವರೆ | ಬರುವ ಸಪ್ತಮಿದಿನದಿ ||
ಬರೆಸಿಹ ಪತ್ರವನೆನ್ನಗ್ರಭವ ರುಕ್ಮ | ನಿರದೆನ್ನ ಮನಸಿನೊಳು ||೪೨||

ಬರುವೆನಾದಿನ ಸಂಧ್ಯಾಕಾಲದೊಳೆಮ್ಮಯ | ಪುರದುಪವನದುರ್ಗೆಯ ||
ಪರಿಪೂಜಿಸಲು ಬರೆ ದಯದಿಂದಲಯ್ತಂದು | ಕರೆದೊಯ್ದು ವೇಗದೊಳು ||೪೩||

ವರಿಸಿಕೊಂಬುದು ಎನ್ನ ತೊರೆದರೆ ಜೀವದೊ | ಳಿರೆನು ನಿಶ್ಚಯಗಳಿದು ||
ತರುಣಿ ಹತ್ಯಾದೋಷ ಬಹುದು ನಂಬಿಹೆ ಸ್ವಾಮಿ | ಚರಣಕ್ಕೆ ಬಿನ್ನಹವು ||೪೪||

**ರಾಗ ಸುರುಟಿ ಏಕತಾಳ**

ಬರೆದಿಹ ಪತ್ರವನು | ಓದುತ | ಹರಿ ಮುದತಾಳಿದನು ||
ಬರುವೆನು ಖಂಡಿತವಾದಿನವೆನ್ನುತೆ | ಬರೆದುತ್ತರವನು ಭೂಸುರಗೀಯುತ ||೪೫||

ಚಿತಯಿಸುವುದೆನುತ | ಉಡುಗೊರೆ | ಯಿತ್ತತಿ ಮನ್ನಿಸುತ ||
ಪೃಥ್ವಿಸುರನ ಕಳುಹುತ್ತಲೆ ನರಹರಿ | ಚಿತ್ತದಿ ತೋಷವ ತಳೆದಿರಲತ್ತಲು ||೪೬||

ಹರುಷದೊಳೋಲಗದಿ | ಚೈದ್ಯನು | ಇರೆ ಸಿಂಹಾಸನದಿ ||
ಎರಗುತ ಕುಂಡಿನಿ ನಗರದ ಚಾರನು | ಭರದೊಳು ಪತ್ರವ ಕೊಡಲದನೋದಿದ ||೪೭||

**ರಾಗ ಕಾಂಭೋಜಿ ಝಂಪೆತಾಳ**

ಸ್ವಸ್ತಿ ಶ್ರೀಚೇದಿನೃಪ ವೈರಿಗಜಪಂಚಾಸ್ಯ |
ನುತ್ತಮೋತ್ತಮ ಕೀರ್ತಿವಂತ ಗುಣಸಾಂದ್ರ ||
ಮಿತ್ರಶಿಶುಪಾಲಾಖ್ಯನಿಂಗೆ ವೈದರ್ಭನೃಪ |
ಪುತ್ರ ರುಕ್ಮನು ಬರೆದ ಬಿನ್ನಹದ ಲಿಖಿತ ||೪೮||

ಅನುಜೆ ರುಕ್ಮಿಣಿಯನ್ನು ಚಿನುಮಯನಿಗೀಯುವರೆ |
ಜನಕನೆಣ್ಣಿರಲಿದಕೆ ಮನವ ಕೊಡದಾನು ||
ನಿನಗೆ ಪರಿಣಯದಿಂದ ಬರುವ ಸಪ್ತಮಿದಿನದಿ |
ವನಜಾಕ್ಷಿಯಳನೀವೆನೆನುತ ನಿಶ್ಚಯಿಸಿ ||೪೯||

ಹವಣಿಸಿಹೆನದಕಾಗಿ ಬಂಧುಬಾಂಧವರೊಡನೆ ।
ತವಕದಿಂ ದಿಬ್ಬಣವ ನೆರಹಿ ದಯೆಯಿಂದ ॥
ಜವದಿಂದಲಯ್ತಂದು ವೈವಾಹವಿಧಿಯಿಂದ ।
ಯುವತಿಯನು ಪರಿಗ್ರಹಿಸಬೇಕು ಬಿನ್ನಹವು ॥೫೦॥

**ರಾಗ ಮಾರವಿ ಏಕತಾಳ**

ಭಳಿರೆನ್ನಯ ಸಖ ರುಕ್ಮನ ಪೋಲುವ । ರಿಳೆಯೊಳಗಾರಿಹರು ॥
ಒಲಿಪರೆಯೆನ್ನನು ರುಕ್ಮಿಣಿ ಸುಕೃತವ । ಫಳಿಸಿದಲ್ಲೈ ದಿಟವು ॥೫೧॥

ತುರುಗಳ ಕಾವನಿಗನುಜೆಯನಿತ್ತರೆ । ಧರೆಯೊಳಗಪಹಾಸ್ಯ ॥
ಸರಿಯಲ್ಲೆನುತಲೆ ಎನ್ನಯ ಕೀರ್ತಿಯ । ನರಿತಿವ ಬರೆದಿಹನು ॥೫೨॥

ಪರಮ ಕ್ಷತ್ರಿಯಕುಲದೊಳು ಜನಿಸಿಹೆ । ಸರಿಯಹರಾರೆನಗೆ ॥
ಪರಿಪಾಲಿಪೆ ಧರೆ ಭುಜಬಲದರ್ಪದೊಳ್ । ಸುರರಾಜನ ತೆರದಿ ॥೫೩॥

ತೆರಳೆಲೊ ಚಾರಕನೀಕ್ಷಣ ಮಗಧನ । ಬರಹೇಳೆಂದೆನುತ ॥
ಪೊರಡಿಸಿ ದಿಬ್ಬಣನೆರಹುತ ವಿಭವದೊ । ಳಿರುತಿರೆ ಶಿಶಪಾಲ ॥
**ರಾಗ ಮಧುಮಾಧವಿ ತ್ರಿವುಡೆತಾಳ**

ಅರಸ ಕೇಳೈ ರುಕ್ಮನಿತ್ತಲು । ಕರೆಸಿ ವಿಬುಧರ ವರ ಸುನರ್ತಕ ।
ತರುಣಿಯರ ಗಾಯಕರ ವಿಭವದಿ । ಪರಿಣಯೋತ್ಸವಕೆನ್ನುತ ॥೫೪॥

ಹೊಳೆವ ಕನ್ನಡಿ ಕಲಶದೀಪಾ । ವಳಿ ಹರಿದ್ರಾಕ್ಷತೆ ಸುಗಂಧವ ।
ಫಲಕುಸುಮ ವಿಡಿದನುಜೆಯನು ಮಂ । ಗಲದಿ ಕರೆತಹುದೆನ್ನುತ ॥೫೫॥

ತರುಣಿಯರ ಕಳುಹಿಸಲು ಬಂದವ । ರೆರಗಿ ರುಕ್ಮಿಣಿಗರುಹೆ ಕೇಳುತ ।
ತೆರಳಿಬರಲಿಲ್ಲೇಕೆ ಭೂಸುರ । ಹರಿಯ ಕಂಡನೊ ಕಾಣನೊ ॥೫೬॥

ಬಾರನಾನತಬಂಧುಕೃಷ್ಣನು । ದಾರಗುಣನಿಧಿಯೇಕೆ ಎನಗಿ ।
ನ್ನಾರು ಹಿತಕಾರಿಗಳು ಚೈದ್ಯನ । ಮೋರೆ ನಾನೆಂತೀಕ್ಷಿಪೆ ॥೫೭॥

ನಿರತ ನಾ ನಿರ್ಭಾಗ್ಯೆಯಲ್ಲದ । ಡಿರದು ತನ್ನೊಡಹುಟ್ಟಿದಣ್ಣನೆ ।
ಕೊರಳ ಕೊಯ್ವನೆಯೆನುತ ಮರುಗು । ತ್ತಿರಲು ನಡೆತಂದ್ವಿಬುಧನು ॥೫೮॥

**ಭಾಮಿನಿ**

ಮಾನಿನೀಮಣಿ ಕೇಳು ಭಾಗ್ಯಮ ।
ಹಾನಿಧಿಯು ನೀನಹುದು ಕೃಷ್ಣನು ।

ದೀನರಕ್ಷಕ ಬಹನು ದುರ್ಗಾದೇವಿಯಾಲಯಕೆ ||
ಮಾನಸಿಕ ಚಿಂತೆಗಳ ನೀನನು |
ಮಾನಿಸದೆ ಬಿಡುಯೆನುತ ಭೂಸುರ |
ತಾ ನಡೆಯೆ ರುಕ್ಮಿಣಿಯು ಸಂತಸದಿಂದಲಾಕ್ಷಣದಿ ||೫೯||

**ವಾರ್ಧಕ**

ತರುಣಿಯರ ಜತೆಯೊಳಯ್ತುಂದು ಮಂಗಲಸ್ನಾನ |
ವಿರಚಿಸುತ ಸಿಂಗರದಿ ಸಾರೆ ಮಂಟಪದೆಡೆಗೆ |
ಪರಮವಿಪ್ರೋತ್ತಮರು ಗ್ರಹಶಾಂತಿ ಕರ್ಮಗಳನೆಸಗುತಿರಲಾನಂದದಿ ||
ಅರಸ ಕೇಳತ್ತಲಾ ಮಗಧ ಪೌಂಡ್ರಕ ನೃಪರು |
ಬರಲಿದಿರ್ಗೊಂಡು ಶಿಶುಪಾಲನೊಸಗೆಯನರುಹಿ |
ಹರುಷದೊಳ್ ದಿಬ್ಬಣವ ಕೂಡಿ ಕುಂಡಿನಪುರಿಗೆ ಬರಲು ಬಾಂಧವನಿಕರದಿ ||೬೦||

**ರಾಗ ಜಂಜೂಟಿ ಅಷ್ಟತಾಳ**

ತವಕದಿ ರುಕ್ಮನಾಕ್ಷಣದಿ | ಬಾಂ | ಧವರೊಡಗೂಡಿ ಸಂಭ್ರಮದಿ ||
ಯುವತಿಯರ್ ಕಳಸಗನ್ನಡಿ ಲಾಜಾಕ್ಷತೆ ವಾದ್ಯ |
ರವದೊಳಯ್ತುಂದಿದಿರುಗೊಳ್ಳುತ | ಭುವನಪತಿ ಶಿಶುಪಾಲರಾಯನ ||೬೧||

ಬಂದಿರೆ ಕುಶಲಿಗಳೆನುತ | ಮುದ | ದಿಂದಾತನುಪಚರಿಸುತ್ತ |
ಚಂದದಿ ಕರೆತಂದು ಬಿಡದಿಯೊಳಿಳುಹುತ್ತ |
ಚಂದಿರಾನನೆ ಭಾಗ್ಯದೊಳು ಗುಣ | ಸಿಂಧು ವರ ನೀನಾದೆಯೆನ್ನುತ ||೬೩||

ಪರಿಪರಿ ಮನ್ನಿಸುತಾಗ | ನೃಪ | ತರಳನು ಸತಿಯರೊಳ್ ಬೇಗ ||
ಗಿರಿಜೆಯಾಲಯಕೆ ರುಕ್ಮಿಣಿಯನ್ನು ಕರೆದೊಯ್ದು |
ವಿರಚಿಪುದು ಪೂಜೆಗಳನೆನ್ನುತ | ಭರದಿ ಕಳುಹಿಸೆ ನಡೆದರಾಕ್ಷಣ ||೬೪||

ಪರಮ ಸದ್ಭಕ್ತಿಭಾವದೊಳು | ನೃಪ | ತರಳೆ ರುಕ್ಮಿಣಿ ಸಂಪ್ರೀತಿಯೊಳು ||
ಗಿರಿಜೆ ಕಾತ್ಯಾಯಿನಿ ಚಂಡಿ ಶಾಂಭವಿಯೆನ್ನ |
ಹರಿಯೆ ಕೈವಿಡಿವಂತೆ ಪೊರೆಯೆಂ | ದೆರಗಿ ಸ್ತುತಿಸುತಲಿರ್ದಳಾಗಲು ||೬೫||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳ್ ದ್ವಾರಕೆಯೊಳೊಂದಿನ | ಹರುಷದೊಳಗೋಲಗದಿ ಹಲಧರ |
ನಿರಲು ಶ್ರೀಹರಿ ಬಂದು ನಮಿಸಲು | ತ್ವರಿತದಿಂದ ||೬೬||

ಕುಳಿತುಕೊಳ್ಳೈ ಕೃಷ್ಣ ತವ ಮನ | ದೊಳಗೆ ಹರುಷಗಳೇನು ಪೇಳೆನೆ |
ಸುಲಲಿತಾಂಗಿಯು ಬರೆದ ಲಿಖಿತವ | ತಿಳುಹಲಾಗ ||೬೭||

ಪೊರಡು ತಡವೇಕಿಂದು ಸಪ್ತಮಿ । ಪರಿಣಯೋತ್ಸವಕಯ್ದಿ ಚೈದ್ಯನ ।
ಧುರದಿ ದರ್ಪವ ಮುರಿದು ಸುದತಿಯ । ತರಲುಬೇಕೈ ॥೬೮॥

ಏಳೆನುತ ಹಲಧರನು ಪೊರಮಡೆ । ವ್ಯಾಳಶಯನನು ಸಕಲ ಯಾದವ ।
ಜಾಲದೊಳು ರಥವೇರಲತಿ ಮುದ । ತಾಳುತಾಗ ॥೬೯॥

**ರಾಗ ಕೇದಾರಗೌಳ ಝಂಪೆತಾಳ**

ಬರಲು ಕುಂಡಿನನಗರಿಗೆ । ಕೃಷ್ಣ ಹಲ । ಧರರು ಸಂತೋಷದೊಳಗೆ ॥
ಪರಿಕಿಸುತ ಧರಣೀಶನು । ಬಂದೆರಗಿ । ಪರಿಪರಿಯ ಮನ್ನಿಸಿದನು ॥೭೦॥

ಆಸನವನಿತ್ತು ಮುದದಿ । ಬಂದುದತಿ । ತೋಷವೆನ್ನುತ್ತ ಭರದಿ ।
ಶೇಷಶಯನನ ಸ್ತುತಿಸುತ । ಭೀಷ್ಮಕ ವಿ । ಲಾಸದಿಂದುಪಚರಿಸುತ ॥೭೧॥

ಕರೆಸು ಸುತೆಯನು ವೇಗದಿ । ಧಾರಿಣಿಪ । ವರಮೂಹೂರ್ತವು ಕ್ಷಿಪ್ರದಿ ॥
ತೆರಳುತಿದೆ ಎಂದ್ವಿಬುಧರು । ಪೇಳುತಿರ । ಲರಿತು ಕರೆತರೆ ಸತಿಯರು ॥೭೨॥

ಗಿರಿಜೆಯಾಲಯಕಯ್ದಲು । ಶಿಶುಪಾಲ । ಹರುಷಗೊಳ್ಳುತ ಮನದೊಳು ॥
ತೆರಳಿ ಮಂಟಪಮಧ್ಯದಿ । ಕುಳ್ಳಿರ್ದ । ನರಿತು ಶ್ರೀಹರಿ ವೇಗದಿ ॥೭೩॥

**ಭಾಮಿನಿ**

ಭರದಿ ಸ್ಯಂದನವಡರಿ ಕೃಷ್ಣನು ।
ತೆರಳಿ ಗಿರಿಜಾಲಯನ ಪೊರಡುವ ।
ಧರಣಿಪಾತ್ಮಜೆಯಾದ ರುಕ್ಮಿಣಿಗಿತ್ತು ದರ್ಶನವ ॥
ಸರಸಿಜಾಕ್ಷಿಯನೆತ್ತಿಕೊಂಡ ।
ಬ್ಬರಣೆ ಮಸಗಲು ತನ್ನರಥದೊಳ ।
ಗಿರಿಸಿದನು ಸಂಸಾರಪತಿತರನೆತ್ತು ವಂದದಲಿ ॥೭೪॥

**ವಾರ್ಧಕ**

ಕರೆತರಲು ಪೋಗಿರ್ದ ಸತಿಯರೊಳಗೋರುವಳು ।
ಭರದೊಳಯ್ತಂದಾಗ ರುಕ್ಮನೊಡನುಸಿರಿದಳ್ ।
ಹರಿಣಾಕ್ಷಿರುಕ್ಮಿಣಿಯ ವಂಚಿಸುತ ಕರವಿಡಿದು ಎಳೆದು ಸ್ಯಂದನವಡರಸಿ ॥
ಹರಿಯು ತನ್ನಯ ಪುರಿಗೆ ಗಮಿಸುತಿಹನೀ ಕ್ಷಣವೆ ।
ತೆರಳು ನೀನೆಂದೆನಲ್ ಕಿಡಿಗೆದರಿ ಶರಚಾಪ ।
ಧರಿಸಿಯಾರ್ಭಟಿಸುತ್ತ ಪೊರಮಟ್ಟು ವೇಗದಿಂದರಿವೆ ಕಂಠವನೆನ್ನುತ ॥೭೫॥

**ರಾಗ ಘಂಟಾರವ ಅಷ್ಟತಾಳ**

ಅರರೆ ಗೋವಳಬಾಲನೆನ್ನುತ ರುಕ್ಮ ।
ಬರಲಿ ಸೇನೆಗಳೆಲ್ಲ ಸಚಿವನೆ । ತ್ವರಿತವೆನ್ನುತ ಖತಿಯಲಿ ॥೭೪॥

ಏನಿದೀಪರಿ ಕೃಷ್ಣ ಚೋರತ್ವದಿ ।
ಮಾನಿನೀಮಣಿಯಳನು ರಥದೊಳ । ಗೇನುಕಾರಣ ನೆಗಹಿದ ॥೭೭॥

ಬಾರೆಲೋ ಚೈದ್ಯನೇಕೆ ಮಂಟಪದೊಳು ।
ಸೇರಿಕೊಂಡಿಹೆ ನಾರಿಮಣಿಯಳ । ಪೋರನೊಯ್ವನು ಪರಿಕಿಸು ॥೭೮॥

ಎಲೆಲೆ ಮಾಗಧಮುಖ್ಯನೃಪಾಲರು ।
ನೆಲನ ನೋಡುವುದೇಕೆ ಬನ್ನಿರಿ । ಗಳವ ಖಂಡಿಸಿ ಕೃಷ್ಣನ ॥೭೯॥

**ಭಾಮಿನಿ**

ಎಂದು ವೀರಾವೇಶದೊಳು ನೃಪ ।
ನಂದನನು ಧನುಶರವ ಪಿಡಿಯುತ ।
ಮುಂದುವರಿಯಲು ಕೆರಳಿ ಚೈದ್ಯನು ತರುಬಿ ಮಾರ್ಮಲೆಯೆ ॥
ಅಂಧಕಾರಿಯ ತೆರದಿ ಹಲಧರ ।
ಬಂದು ಎನ್ನನು ಗೆಲಿದು ಕೃಷ್ಣನ ।
ಮುಂದೆ ಸಾರೆನುತಾಗ ಮುಸಲವ ತಿರುಹಿ ತಡೆಗಡಿದ ॥೮೦॥

**ರಾಗ ಭೈರವಿ ಝಂಪೆತಾಳ**

ಫಡ ಫಡೆಲೊ ಗೋವಳರ ಹುಡುಗತನಗಳ ಶೂರ । ರೊಡನೆ ತೋರುವಿರೈಸೆ ಭಳಿರೆ ॥
ಕಡುದುರುಳರಂತೆನ್ನ ವಂಚಿಸುತ ಕಳವಿನೊಳು । ಮಡದಿಯನ್ನಪಹರಿಸೆ ಬಿಡೆನು ॥೮೧॥

ದೊರಕಲಾಪುದೆ ಸುರಭಿ ತಿರುಕನಿಂಗೆಲೆ ಮರುಳೆ । ಹರಿಗೆ ಸಲುತಿಹಳಾದಿಲಕ್ಷ್ಮಿ ॥
ವರಿಸಲಾಪೆಯೊ ಮೂಢ ಸಭೆಗೆ ಮುಖ ತೋರದಿರು । ಪರಿಣಯೋತ್ಸವವಾಯ್ತು ನಿನಗೆ ॥೮೨॥

ಶಿರವರಿದು ನಿಮ್ಮುಭಯರನ್ನು ಹರಿಣಾಕ್ಷಿಯಳ । ವರಿಸಿ ಮಂಗಲಕರದಿ ಪುರಕೆ ॥
ತೆರಳುತಿಹ ಶಿಶುಪಾಲನನ್ನು ನಿರ್ಜರರೆಲ್ಲ । ಸರಿಯೆಂದು ನಭದಿ ಕೀರ್ತಿಪರು ॥೮೩॥

ತರಣಿಜಾತನ ಪುರಿಯೊಳಿರುವ ಮೃತಕನ್ನಿಕೆಯ । ವರಿಸುತಿಹೆ ನೀನು ಸಂತಸದಿ ॥
ಪರಮೇಷ್ಠಿ ಬರೆದಿಹನು ತಪ್ಪಲಾರದು ಎನ್ನ । ಧುರಕೆ ನೀ ಮಾರ್ಮಲೆಯಬಹುದೈ ॥೮೪॥

**ರಾಗ ಶಂಕರಾಭರಣ ಮಟ್ಟೆತಾಳ**

ತೋರು ನಿನ್ನ ಸಹಸವರರೆ । ಜಾರ ಗೋಪನೆನುತ ಚೈದ್ಯ ।
ಕ್ರೂರಶರಗಳೆಚ್ಚು ಹೂಂ । ಕಾರಗೆಯ್ದನು ॥೮೫॥

ಪುಡಿಯಗೆಯ್ದು ಕಾಮಪಾಲ | ಕಿಡಿಯ ಸೂಸಿ ಮುಸಲದಿಂದ |
ಬಡಿಯಲುರಕೆ ಬೇಗ ಕಂ | ಗೆಡುತ ಚೈದ್ಯನು ||೮೬||

ಕೆರಳಿ ವೀರವೇಷದಿಂದ | ಸ್ಮರಿಸಿಯಾದಿಶೇಷನನ್ನು |
ಗರಳಕಾರುತಿರ್ಪ ಸರ್ಪ | ಬಾಣವೆಸೆದನು ||೮೭||

ಪರಮಶೇಷಾಂಶಭೂತ | ಗರುಡಶರಗಳನ್ನು ಪೋಲ್ವ |
ಭರಿತಶ್ವಾಸದಿಂದಲುರಗ | ಶರವ ದಹಿಸಿದ ||೮೮||

ಭರದೊಳದ್ರಿಶರವ ಬಿಡಲು | ಕೆರಳಿ ಕುಲಿಶದಿಂದ ತರಿದು |
ಶಿರಕೆ ಮುಸಲದಿಂದಲೆರಗೆ | ಮೂರ್ಛೆ ತಳೆದನು ||೮೯||

**ರಾಗ ಸುರುಟಿ ಏಕತಾಳ**

ಧುರದೊಳಗಿರ್ವರನು | ದರ್ಪವ | ಮುರಿದುರೆ ಬಾಲೆಯನು ||
ವರಿಸಲು ವಿಕ್ರಮವಹುದೆಲೊ ಕೃಷ್ಣನೆ | ಬರುತಿಹೆ ನಾನೆನುತೆದ್ದನು ಹಲಧರ ||೨೨೪||

ಪೊರಡುತ ವೇಗದಲಿ | ದ್ವಾರದೊ | ಳಿರುವರ ದೂರದಲಿ ||
ಪರಿಕಿಸಿ ಮುರಹರ ಶಂಖವ ಮೊಳಗಿಸೆ | ಎರಗುತ ಚಾರಕ ವಿಂದನೊಳೆಂದನು ||೨೨೫||

ಹರಿಯೊಡನುಸಿರೆದೆನು | ಧುರವನೆ | ವಿರಚಿಪೆನೆಂದವನು ||
ಬರುತಿಹನಿದ ನೀ ಪರಿಕಿಸಬೇಕೆನೆ | ಕೆರಳುತಲಾಗನುವಿಂದನು ಮಲೆಯುತ ||೨೨೬||

**ರಾಗ ಮಾರವಿ ಏಕತಾಳ**

ಬಂದಿರೆ ಗೋವಳಬಾಲರೆ ಕದನಕೆ | ಸುಂದರಿಯನು ಬಿಡದೆ ||
ಮುಂದ್ವರಿದಿಹ ಫಲ ಕಾಂಬಿರಿ ಕ್ಷಣದೊಳ | ಗೆಂದನು ರೋಷದಲಿ ||೨೨೭||

ಧುರವಿಕ್ರಮಿರಾವಹುದೆಲೊ ಮೂಢನೆ | ಹರಿತಂದಿಹೆವೀಗ ||
ಕರುಳುಗಿಯುವೆ ಬಾರೆನ್ನುತ ಹಲಧರ | ಹರಿನಾದವ ಗೆಯ್ದು ||೨೨೮||

ಶೂರನು ನಿಜ ಗೋಮಂತಕಗಿರಿಯೊಳು | ಹೋರಿದ ಮಗಧನೊಳು ||
ಬಾರದೆ ಜಯವಲ್ಲದಗಿದೆ ಗುಹೆಯೊಳು | ಕಾರಣವೇನುಸಿರೊ ||೨೨೯||

ನಿರುಕಿಸಿ ಕಾಲವ ಮರ್ದಿಸ ಬೇಕೆಲೊ | ದುರುಳರನ್ಯುಕ್ತಿಯೊಳು ||
ಅರಿತದನಡಗಿದೆನೆನ್ನ ಕೈಚಳಕವ | ಪರಿಕಿಸು ನೀನೀಗ ||೨೪೦||

ಕುಲದೂಷಕ ನಿನ್ನಿರಿಸೆನು ಕಾಲವ | ನರಿತಯ್ತುಂದಿಹೆವು ||
ಎಲೆ ಗೋವಳ ನೀನೆನ್ನೊಳು ಸಮರದಿ | ಬಲ ಪೌರುಷ ತೋರೊ ||೨೪೧||

ಪೇಳೆಲೊ ಕುಲದೂಷಣಗಳ ಕೃತ್ಯವ । ಖೂಳನೆ ನುಡಿಯದಿರೆ ॥
ಸೀಳುವೆ ಜಿಹ್ವೆಯನೆನ್ನುತ ಕ್ರೋಧವ । ತಾಳೆ ಹಲಾಯುಧನು ॥೩೪೨॥

**ರಾಗ ಕೇದಾರಗೌಳ ಝಂಪೆತಾಳ**

ಹಿಂದೆ ರೈವತರಾಯನು । ಕೃತಯುಗದಿ । ನಂದನೆಯ ಪಡೆದಿರ್ಪನು ॥
ತಂದಿತ್ತ ನಿನಗವಳನು । ವರಿಸಿರ್ಪು । ದಂದವೇ ಪಿರಿಯವಳನು ॥೩೪೩॥

ಸರಸಿಜಾಸನನಾಜ್ಞೆಯ । ನಿತ್ತ ತೆರ । ವರಿಸಿರ್ಪೆನಾ ಕನ್ನೆಯ ॥
ದುರುಳ ನೀನದ ಬಲ್ಲೆಯ । ನಿಂದಿಸಲು । ಕರುಳುಗಿವೆ ನಾ ನಿಶ್ಚಯ ॥೩೪೪॥

ಹಲಧರನೆಯೆನ್ನಸ್ತ್ರದಿ । ಅಂತಕನ । ಪೊಳಲಿಗಯ್ದುವೆ ಶೀಘ್ರದಿ ॥
ಘಳಿಲನೊಪ್ಪಿಸು ಎನ್ನಯ । ಭಗಿನಿಯನು । ಕಲಹ ಬೇಡವೊ ನಿಶ್ಚಯ ॥೩೪೫॥

ಗತಿಸಿಹರು ಪೌರುಷದಲಿ । ಪಿಂದೆದು । ರ್ಮತಿಗಳೆಮ್ಮಯ ಶರದಲಿ ॥
ಸತಿಯ ಬಿಡುವವರಲ್ಲೆಲ । ಸಾರಿದೆನು । ಮತಿಗೇಡಿ ನೀ ಪೋಗೆಲ್ಲ ॥೩೪೬॥

**ರಾಗ ಶಂಕರಾಭರಣ ಮಟ್ಟೆತಾಳ**

ಬರಿದೆ ಪ್ರಳಯರುದ್ರನೆಂಬೆ । ತೆರಳಿತೆಲ್ಲ ಪಂಚಶಿರವು ।
ವರತ್ರಿಶೂಲವಿಲ್ಲ ಹಲವ । ಧರಿಸಿಕೊಂಡಿಹೆ ॥೩೪೭॥

ಪ್ರಳಯರುದ್ರತೇಜವೆನ್ನ । ಹಲದ ಮೊನೆಯೊಳಿಹುದು ನೋಡು ।
ಖಳನೆ ಯಾತಕೆಲೊ ತ್ರಿಶೂಲ । ಕೊಲುವೆ ನಿಶ್ಚಯ ॥೩೪೮॥

ಪರಮ ಕ್ಷಾತ್ರಿಕುಲಜನೆನ್ನ । ಶರದ ಮೊನೆಯ ತೇಜವನ್ನು ।
ಪರಿಕಿಸೆಲವೊ ಮೊದಲೆನ್ನುತ್ತ । ಗುರಿಯೊಳೆಚ್ಚನು ॥೩೪೯॥

ಖುಲ್ಲ ನಿನ್ನ ಶರವು ಭುವನ । ದಲ್ಲಿ ಚೂರ್ಣವಾಗಿ ತೇಜ ।
ವೆಲ್ಲ ಪೋಪುದೆನುತ ಶೌರ್ಯ । ದಲ್ಲಿ ಮುರಿದನು ॥೩೫೦॥

ಬಿಡುವೆನೀ ಮಹಾಸ್ತ್ರವೀಗ । ಕಡಿಯೆ ಗೋಪಕುವರ ನೀನು ।
ಕಡು ಬಲಾಢ್ಯನಹುದೆನುತ್ತ । ಪೊಡೆದನಾಕ್ಷಣ ॥೩೫೧॥

ಕೆರಳಿ ಕಾಮಪಾಲನದರ । ಮುರಿದು ಚಾಪ ಖಂಡಿಸಲ್ಕೆ ।
ತಿರುಹಿ ಖಡ್ಗದಿಂದ ಪೊಯ್ದು । ತ್ವರಿತದಿಂದಲಿ ॥೩೫೨॥

**ರಾಗ ಭೈರವಿ ಏಕತಾಳ**

ಖಂಡಿಸಲಸಿಯನು ಬೇಗ । ಗದೆ । ಗೊಂಡತಿಕೆರಳುತಲಾಗ ॥
ಚಂಡ ಪರಾಕ್ರಮದಿಂದ । ದೋ । ರ್ದಂಡನು ಬರಲನುವಿಂದ ॥೨೫೩॥

ಪ್ರತಿಗದೆ ಯೊಳಗದ ಬಡೆದು । ಬಲ । ಖತಿಯೊಳು ಭುವನಕೆ ಕೆಡೆದು ॥
ಹತಿಸುವೆ ಕ್ಷಣದೊಳಗೀಗ । ಬಾ । ರತಿ ಛಲದೊಳು ನೀ ಬೇಗ ॥೨೫೪॥

ಪರಿಕಿಸು ಭುಜಬಲವೆನುತ । ನರ । ಹರಿಯಂದದಿ ಬೊಬ್ಬಿಡುತ ॥
ಬರಲನುವಿಂದಕ ನಾಗ । ಶಿರ । ಕೆರಗಲು ಮೂರ್ಛಿಸೆ ಬೇಗ ॥೨೫೫॥

**ಭಾಮಿನಿ**

ಧರೆಯೊಳಾಕ್ಷಣ ಬಿದ್ದು ಚೇತನ ।
ವೆರಸಿಯನುವಿಂದಕನು ಕ್ರೋಧದಿ ।
ಶಿರವರಿವೆನೆಂದೆನುತ ಭೋರ್ಗುಡಿಸುತ್ತಲಯ್ತರಲು ॥
ಭರದಿ ನಡೆತಂದಾಗ ವಿಂದನು ।
ತೆರಳುವೆನು ನಾನೀಗ ಗೋವಳ ।
ತರಳರಸು ತೊಲಗಿಪೆನು ನಿಲ್ಲೆಂದವನ ಸಂತಯಿಸಿ ॥೨೫೬॥

**ವಾರ್ಧಕ**

ಕರದ ಧನುಠಂಕಾರದಿಂದ ಹೂಂಕರಿಸುತ್ತ ।
ಧುರಕೆ ಮುಂದೊತ್ತಿ ಬಹ ವಿಂದನಂ ಪರಿಕಿಸುತ ।
ಸರಸಿಜಾಂಬಕನಾಗಲಗ್ರಜನ ಸಂತಯಿಸಿ ಬರಲಾಗ ಮಾರ್ಮಲೆಯುತ ॥
ಕೆರಳಿ ವೀರಾವೇಶದಿಂದ ಕಿಡಿಸೂಸುತ್ತ ।
ಲರರೆ ಗೋವಳರೆಮ್ಮ ಧುರದೊಳಂತಕನೆಡೆಗೆ ।
ತೆರಳುವಿರಿ ಸಾರಿದೆನುಯೆನ್ನನುಜೆಯನ್ನಿತ್ತು ಶರಣುಪೊಂದಿರಿ ವೇಗದಿ ॥೨೫೭॥

**ರಾಗ ಮಾರವಿ ಏಕತಾಳ**

ದುರುಳನೆ ಕೇಳು ಚತುರ್ದಶಭುವನವೆ । ಶರಣೆನಗಾಗಿಹವು ॥
ಅರಿಯದು ಮದಮುಖ ನಿನಗೆಂದಿಗು ನಾ । ಧುರದೊಳಗಂಜುವೆನೆ ॥೨೫೮॥

ಮದಮುಖ ನೀನೆಲೊ ಚೈದ್ಯನ ವರಿಸುವ । ಸುದತಿಯು ರುಕ್ಮಿಣಿಯ ॥
ಒದಗ್ಯಪಹರಿಸಿಹುದೇತಕೊ ಪಾಮರ । ನೊದರದಿರೆನ್ನೊಡನೆ ॥೨೫೯॥

ಶರಣಾಗತಪರಿಪಾಲಕನೆಂಬುವ । ಬಿರುದನು ಪೊತ್ತಿರುವೆ ॥
ತರುಣಿಯು ಎನ್ನನು ಸ್ತುತಿಸುತಲಿರೆ ನಾ । ಕರೆತಂದೊರಿಸಿಹೆನು ॥೨೬೦॥

ಜಾರಕುವರ ನೀನಷ್ಟಾ ವಕ್ರದ । ನಾರಿಯು ಕುಬ್ಜೆಯನು ॥
ಘೋರನೆ ರಮಿಸಿದೆ ಹೇಸದೆ ಮನದೊಳು । ಯಾರಿದನೆಸಗುವರು ॥೩೯೦॥

ವರವನು ಕೊಟ್ಟಿಹೆ ಪಿಂದಿನ ಭವದೊಳು । ಕರುಣಿಸಿ ಯೌವನವ ।
ಪರಮ ಸೌಂದರ್ಯವನಿತ್ತು ನಾ ಬೆರೆದಿಹೆ । ದುರುಳನೆ ಬಲ್ಲಿಹೆಯ ॥೩೯೧॥

ತರುಣಿಯರಾ ಜಲಕ್ರೀಡೆಯೊಳೊಂದೆಡೆ । ಇರಿಸಿರೆ ವಸನವನು ॥
ಸ್ಮರಿಸಲು ಹೇಸಿಕೆ ಕೊಂಡೊಯ್ದುದ ನಾ । ನರಿತಿಹೆ ಕಾಮುಕನೆ ॥೩೯೩॥

ಪುರುಷನೊಳನುರಕ್ತತೆಯೊಳಗಿರುತಿಹ । ತರುಣಿಯರನುಸರಿಸಿ ॥
ಸರಸವಿಲಾಸದೊಳಾಹ್ಲಾದಿಪುದದು । ಎರೆಯನ ಸದ್ಗುಣವು ॥೩೯೪॥

**ರಾಗ ಭೈರವಿ ಅಷ್ಟತಾಳ**

ವರಿಸಲಯ್ತಂದಿರುವ । ಪಾರ್ಥಿವರು ಗೋ । ಚರಿಸದೆ ಕೃತ್ರಿಮವ ॥
ವಿರಚಿಸಿ ಭಗಿನಿಯಾಗಿಹ ಮಿತ್ರವಿಂದೆಯ । ತರಳ ನೀ ತಂದಿಹೆಯ ॥೩೯೫॥

ಎನ್ನೊಳು ಮನವಿರಿಸಿ । ಸಂಸ್ತುತಿಸುವ । ಕನ್ನೆಯ ಸ್ವೀಕರಿಸಿ ॥
ನಿನ್ನೊಳು ಸಖ್ಯದೊಳಿಹೆನೆಂದೆ ಧಿಕ್ಕಾರ । ವನ್ನೇಕೆ ಗೆಯ್ದೆ ಮೂರ್ಖ ॥೩೯೬॥

ಕಾಲ ಯವನಗಂಜುತ್ತ । ನಪುಂಸಕ । ನೋಲು ಗಹ್ವರ ಸುತ್ತುತ್ತ ॥
ಕೋಳು ಗೊಂಡೋಡಿದ ಲಂಡಿಗೆನ್ನನುಜೆಯ । ಪಾಲಿಪುದುಂಟೆ ಕೇಳ ॥೩೯೭॥

ದುರುಳ ಮರ್ದನಕೆ ನಾನು । ಉಪಾಯವ । ನರಿತು ಕಾಲ್ದೆಗೆದಿಹೆನು ॥
ಉರುಹಿದೆ ಮುಚುಕುಂದನಕ್ಷಿಘಾತದಿ ಮೃತ್ಯು । ವಿರುವುದ ತಿಳಿದಿಹೆನು ॥೩೯೮॥

ಅರಿಗಳ ಸಮ್ಮುಖದಿ । ನಿಂದವರೋಡ । ದಿರುವರ್ ಕ್ಷಾತ್ರಿಯವರ್ಗದಿ ॥
ಪರಿಕಿಸಬಹುದೆ ನಿನ್ನಾನನ ಗೋವಳ । ಗೊಳಿತಿಂಥಾ ಕೆಲಸಗಳು ॥೩೯೯॥

ಧುರದೊಳೆನ್ನಯ ಶೌರ್ಯವ । ಹಂಸಾದ್ಯರ । ನರಿತು ಬಾರೆಲೊ ದೇಹವ ॥
ಕೊರೆದು ಚೂರ್ಣಿಪೆ ಲಂಡಿ ಯಾರೆಂಬುದನು ಜಗ । ವರಿಯಲಿ ಕ್ಷಣದೊಳಗೆ ॥೩೭೦॥

**ರಾಗ ಮಾರವಿ ಮಟ್ಟೆತಾಳ**

ಮಾತಿದೇಕೆ ಕಳವಿನೊಳಗೆ । ತಂದ ಸತಿಯನು ॥
ನೀತಿಯಿಂದಲೀವು ದುಚಿತ । ಸಾರಿ ಪೇಳ್ದೆನು ॥೩೭೦॥

ತಿಳಿದು ಮಿತ್ರವಿಂದೆಮನವ । ಘಳಿಲನುಸಿರೆಲಾ ॥
ಖಳನೆ ನಾನಾಗಿ ಬಿಡೆನು । ಹಳಚು ನೀನೆಲ ॥೩೭೧॥

ಪತಿಯನೊರಿಸುವುದಕೆ ಸತಿ ಸ್ವ । ತಂತ್ರವಿಲ್ಲವೊ ॥
ಪಿತನುಭ್ರಾತೃಮನಗಳಂತೆ । ಚರಿಪ ಧರ್ಮವೊ ॥೩೭೩॥

ಧುರಕೆ ನಿಂದ ಮೇಲೆ ನೀತಿ । ಯೊರೆವುದೇತಕೊ ॥
ಶರವ ಬಿಡು ಬಿಡೀಗ ಶೌರ್ಯ । ದೊಲವ ನೋಡಿಕೊ ॥೩೭೪॥

ಪರಿಕಿಸೆನುತ ವಿಂದ ಕ್ರೂರ । ಶರವ ಪೂಡುತ ॥
ಗುರಿಯೊಳೆಚ್ಚು ನಿಲಲು ಕಂಡು । ಖತಿಯ ತಾಳುತ ॥೩೭೫॥

ಬರುವ ಶರವ ತರಿದು ಕೃಷ್ಣ । ಚೂರ್ಣಗೆಯ್ಯುತ ॥
ಧರೆಗೆ ಕೆಡೆದ ನಿಮಿಷಮಾತ್ರ । ದೊಳಗೆ ನಲಿಯುತ ॥೩೭೬॥

**ರಾಗ ಶಂಕರಾಭರಣ ಮಟ್ಟೆತಾಳ**

ಪ್ರಳಯಸಂವರ್ತಮೇಘ । ದೊಳು ಜಲಾರ್ಣವಾಗುವಂಥಾ ।
ವಲವ ನೋಡೆನುತ್ತ ಸಲಿಲ । ಬಾಣವೆಸೆದನು ॥೩೭೭॥

ಎಲೆಲೆ ಕಲ್ಪಾಂತ್ಯದೊಳಗೆ । ಸುಳಿವ ಜಂಝಾವಾತದಂತೆ ।
ಚಲಿಪ ಪವನಶರದೊಳಿದರ । ನಿಳೆಗೆ ಕೆಡಹಿದೆ ॥೩೭೮॥

ಅರರೆ ವಿಲಯದೊಳಗೆ ರುದ್ರ । ಮೆರೆದು ನರ್ತಿಸಲ್ಕೆ ಜಗದೊ ।
ಳೆರಗುವಂಥ ನಿಸಿತಮಾಸ್ತ್ರ । ಪರಿಕಿಸೆಂದನು ॥೩೭೯॥

ವಿಲಯಕಲ್ಪಾವಸಾನ । ದೊಳಗೆ ದ್ವಾದಶಾರ್ಕರುದಿಸಿ ।
ಜ್ವಲಿಪತೆರ ದಿವಾಕರಾಸ್ತ್ರ । ದೊಳಗೆ ಮುರಿದಿಹೆ ॥೩೮೦॥

**ರಾಗ ಭೈರವಿ ಏಕತಾಳ**

ಭಳಿಭಳಿರೆಲೊ ಗೋವಳನೆ । ಕೈ । ಚಳಕದಿ ಕಡುವಿಕ್ರಮನೆ ॥
ಒಲಿದುದು ಎನ್ನಯ ಮನವು । ನೀ । ಕಲಿಯಹೆ ಸಾಹಸಿ ದಿಟವು ॥೩೮೧॥

ನೊರಜೆಯೆ ನೀ ಪೊಗಳಿದರೆ । ಫಲ । ವಿರುವುದೆ ಬಿಡು ಶರವರರೆ ॥
ದುರುಳನೆ ಶಿರವರಿದೀಗ । ನಾ । ಮೆರೆವೆನು ಜಗದೊಳ್ ಬೇಗ ॥೩೮೧॥

ತಿರುಹಿ ಬುಶುಂಡಿಯ ಭರದಿ । ಸಿರಿ । ವರನಿಂಗೆಸೆಯಲ್ ರವದಿ ॥
ಧರೆಯೊಳ್ ಕೆಡಹಲ್ಕದನು । ಭೋ । ರ್ಮರೆಯುತ ಕ್ರೋಧದೊಳವನು ॥೩೮೨॥

ಹರಿವಾಹಿನಿ ಮೇಲಾಯ್ದು । ಅಸಿ । ತಿರುಹುತ ತುಂಡರಿದರಿದು ॥
ತಿರುಗಿದ ಚಕ್ರದ ತೆರದಿ । ಹರಿ । ಪರಿಕಿಸಿ ಬೆರಸುತ ಭರದಿ ॥೩೮೩॥

ಖಡುಗವನುರೆ ಖಂಡಿಸುತ । ಬಾ । ಧಡಿಗನೆ ಧುರಕೆನ್ನುತ್ತ ॥
ಕಿಡಿಸೂಸುತ ನಗಧರನು । ಸೆರೆ । ವಿಡಿಯುತ ಕೊಳೆ ಚಕ್ರವನು ॥೩೮೪॥

**ಭಾಮಿನಿ**

ಮರುಗಿ ಹಮ್ಮೈಯ್ಸುತ್ತಲಾಕ್ಷಣ ।
ಹರಿಗೆ ನಮಿಸುತ ಮಿತ್ರವಿಂದೆಯು ।
ಸರಸಿಜಾಕ್ಷನೆಯೆನ್ನ ಮೇಲಣ ಮಮತೆಯಿಂದೀಗ ॥
ಹರಿಸದಿರು ಮದ್ಭ್ರಾತೃ ಜೀವವ ।
ಕರುಣಿ ರಕ್ಷಿಸು ದೇಹಿಯೆಂದಡಿ ।
ಗೆರಗೆ ವಿಂದನ ತೆರಳು ಜೀವಿಸೆನುತ್ತ ನೂಕಿದನು ॥೩೮೫॥

**ರಾಗ ಮಧುಮಾಧವಿ ತ್ರಿವುಡೆತಾಳ**

ಭರದಿ ಬಂದಗ್ರಜನಿಗೆರಗುತ । ಕರವ ಜೋಡಿಸಿ ಮಿತ್ರವಿಂದೆಯು ।
ಧುರವಿದೇತಕೆಯೆನ್ನ ಪರಿಣಯ । ವಿರಚಿಪುದು ಶ್ರೀಕೃಷ್ಣಗೆ ॥೩೮೬॥

**ರಾಗ ಮಾರವಿ ಏಕತಾಳ**

ತೋರದಿರೆಲೆ ನಿನ್ನಾನನ ಧೂರ್ತಳೆ । ಚೋರನನನುಸರಿಸಿ ॥
ಸಾರೀಕ್ಷಣದೊಳು ಮಾತುಗಳೇತಕೆ । ಮಾರಿಯೆ ದಿಟ ನೀನು ॥೩೮೭॥

**ರಾಗ ಮಧುಮಾಧವಿ ತ್ರಿವುಡೆತಾಳ**

ತೆರೆದು ವದನವ ಬರುವ ಮಾರಿಯ । ತಿರುಗಿಸಿಹೆ ಪತಿಗೊರೆದು ಸಹ ಜನೆ ।
ಬರಿದೆ ನಿಂದಿಪೆಯೇಕೆ ಪ್ರಿಯನೊಳು ಪರಮಸಖ್ಯವ ಗೆಯ್ದುಕೊ ॥೩೮೮॥

**ರಾಗ ಮಾರವಿ ಏಕತಾಳ**

ವಿಧವತ್ವವು ನಿನಗೊದಗುವುದೆನ್ನುತ । ಕದನದಿ ಕೈತಡೆದೆ ॥
ಅದ ನಿನ್ನಯ ಮನದೊಳಗರಿಯದೆ ನೀ । ವಿಧದೊಳು ನಿಂದಿಪೆಯ ॥೩೮೯॥

**ರಾಗ ಮಧುಮಾಧವಿ ತ್ರಿವುಡೆತಾಳ**

ವಾರಿಜಾಕ್ಷನ ಕದನದಲಿ ಪಿಂ । ದಾರು ಜೀವಿಸಲಿಲ್ಲವರಿತಿಹೆ ।
ಶೂರ ನೀನುಳಿದುದಕೆ ಧನ್ಯನು । ಭೋರನೆನ್ನಿವಗೀಯೆಲೊ ॥೩೯೦॥

**ರಾಗ ಮಾರವಿ ಏಕತಾಳ**

ಕೊಡುತಿಹುದೇತಕೆ ಪರಿಣಯಗೆಯ್ದುಕೊ । ನಡೆವೆನು ಪುರಕೀಗ ॥
ಬಿಡೆ ಬಿಡೆನೀತನ ಹತಿಸುವೆ ಸೇನೆಗ । ಒಡನಯ್ತುಹೆ ಮತ್ತೆ ॥೩೯೧॥

**ಭಾಮಿನಿ**

ಗಹಗಹಿಸಿ ನಗಧರನು ಪೇಳ್ದನು ।
ಬಹುದು ವಾಹಿನಿಯೊಡನೆ ದುರುಳನೆ ।
ಸಹಸಿಗನು ಪೋಗೆನುತಲುಸಿರಲು ವಿಂದನಾಕ್ಷಣದಿ ॥
ಸಹಜನೊಡಗೂಡುತ್ತ ಕೃಷ್ಣನೊ ।
ಳಹಿತಗೊಂಡಯ್ದಿದನು ನಗರಿಗೆ ।
ಮಹಿಳೆಯಗ್ರಜರೊಡನೆ ತೆರಳಿದ ಹರಿಯು ನಿಜಗೃಹಕೆ ॥೩೯೨॥

**ಕಂದ**

ಹಲಧರನೆಣಿಸುತ ಮನದೊಳ್ ।
ಲಲನೆಯರೆಲ್ಲರ ತಂದಿಹನೀತಗೆ ವಿಭವದಿ ।
ಪರಿಣಯಗೆಯ್ಸುವೆನೆನ್ನುತ ।
ಕರೆಸುತಲಾಕ್ಷಣ ದಾರುಕನೊಡ ನಿಂತೆಂದಂ ॥೩೯೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕರೆಸು ವೇಗದೊಳ್ ವಿಶ್ವಕರ್ಮನ । ಪುರವಲಂಕೃತವಾಗಲೀಕ್ಷಣ ।
ವರರತುನಮಯ ತೋರಣಂಗಳು । ಕುರುಜುಗಳಲಿ ॥೩೯೪॥

ಅರಗಜವು ಕಸ್ತೂರಿ ಕೇಸರಿ । ಪರಿಮಳಿಪ ಪನ್ನೀರ ಚಳೆಯೊಳು ।
ಪುರದ ವೀಥಿಗಳೆಲ್ಲ ಲೇಪನ । ವೆರಸು ಬೇಗ ॥೩೯೫॥

ಕುಲಪುರೋಹಿತ ಗರ್ಗರನು ನೀ । ನೊಲವಿನೊಳು ಕರೆತಹುದು ಕ್ಷಿಪ್ರದಿ ।
ಪೊಳೆವ ನವರತ್ನದೊಳೆ ಮಂಟಪ । ಗೊಲಿಸಬೇಕೈ ॥೩೯೬॥

ಕರೆಸು ಸಕಲ ಋಷೀಶವರ್ಗವ । ನರಹರಿಗೆ ಪತ್ರಿಕೆಯ ಕಳುಹಿಸು ।
ಸುರಸತಿಯರಯ್ತುರಲಿ ನೃತ್ಯಕೆ । ಹರುಷದಿಂದ ॥೩೯೭॥

ತ್ವರಿತದೊಳು ಬರಲೀಗ ಗಾಯಕ । ಪರಮಸಂಗೀತಕರು ವಾದ್ಯಗ ।
ಳುರುತರದ ಕಹಳಾದಿ ವೈತಾ । ಳಿಕರ ಕರೆಸೈ ॥೩೯೮॥

**ಭಾಮಿನಿ**

ಒರೆದ ನೇಮಗಳಂತೆ ದಾರುಕ।
ಕರೆಸಲಯ್ತುಂದ್ವಿಶ್ವಕರ್ಮನು।
ಪುರವಲಂಕರಿಸಲ್ಕೆ ವೈಕುಂಠಕ್ಕೆ ಮಿಗಿಲೆನಿಸಿ॥
ತ್ವರಿತದೊಳು ಜನಪಾಲ ವರ್ಗವ।
ಕರೆಸಿ ಗರ್ಗಾಚಾರ್ಯರನು ಹಲ।
ಧರನ ಬಳಿಗಯ್ದಿಸಲು ಲಗ್ನವ ಗುಣಿಸಿ ಪೇಳೆಂದ॥೩೯೯॥

**ರಾಗ ಸುರುಟಿ ಏಕತಾಳ**

ಭೋರನೆ ಲಗ್ನವನು। ಗರ್ಗಾ। ಚಾರ್ಯನು ಪುಡುಕಿದನು॥
ನಾರಿಯರಿಗ್ಹದಿನಾರು ಸಾಸಿರಗಳು। ತೋರದು ತಾರಾಬಲವೆಂತುಸಿರಲಿ॥೪೦೦॥

ಪರಿಕಿಸಲೇಕಿದನು। ದಿವನಿಶಿ। ವರ ನಕ್ಷತ್ರವನು॥
ವರುಷವಯನ ತಿಥಿವಾಸರವಲ್ಲವು। ಪರಮಾತ್ಮನೊಳೈಕ್ಯಂಗಳೆ ಜಗದೊಳು॥೪೦೧॥

ವರಿಸುವ ಲಗ್ನಗಳು। ಮಂಗಲ। ಕರವತಿಶ್ರೇಷ್ಠಗಳು॥
ತರುಣಿಯರೀಪರಿಯೊಂದೇಕಾಲದೊ। ಳೊರಿಪರೆ ಧಾರೆಯ। ನೆರೆಯುವರಾರೈ॥೪೦೨॥

ಅರಿಯದುಯೆನಗಿನ್ನು। ಕೃಷ್ಣನ। ಪರಿಣಯವಿಧವನ್ನು॥
ಸ್ಮರಿಸಲು ಶ್ರುತಿಗನುಸರಿಸುವುದೆಂತೈ। ಮರುಳಾಗಿಹೆ ನಾನೆಂದನು ಗರ್ಗನು॥೪೦೩॥

ಗುರುವಿಗೆ ಗುರುವಿವನು। ನಾನೀ। ಪರಿಣಯಗೆಯ್ಸುವೆನು॥
ಪರಮಾತ್ಮಗೆ ಸಂಪ್ರೀತಿಗಳಾಗಲಿ। ಕರೆತಹುದೀಕ್ಷಣ ಮಂಟಪಕೆಂದನು॥೪೦೪॥

**ರಾಗ ಕಾಂಭೋಜಿ ಝಂಪೆತಾಳ**

ಹರುಷದೊಳು ಹಲಧರನು ಕರೆಸಿ ಸತ್ರಾಜಿತನ।
ತರಳೆ ಭಾಮೆಯ ಧಾರೆಯೆರೆಯಬೇಕೆಂದ॥
ಭರದಿ ಮಂಗಲಸ್ನಾನಗೆಯ್ಸಿ ಭಾವಕಿಯರನು।
ಕರಸಿ ಗೃಹಶಾಂತಿ ಸತ್ಕರ್ಮಗಳ ರಚಿಸಿ॥೪೦೫॥

ಕೊರಳ ಕೌಸ್ತುಭಹಾರ ನೂಪುರೊಡ್ಯಾಣದೊಳು।
ವರರತುನಮಯಕುಂಡಲಂಗಳಲಿ ನಲಿವ॥
ವರಚತುರ್ಭುಜ ಶಂಖಚಕ್ರಾಬ್ಜಗದೆವಿಡಿದ।
ಸರಸಿಜಾಂಬಕನ ಕರೆತಂದು ಹಲಧರನು॥೪೦೬॥

ಕಳಸಗನ್ನಡಿವಿಡಿದ ಜಲಜನೇತ್ರೆಯರೊಡನೆ।
ಹಲಧರನು ಮಂಟಪಕೆ ಪೊಗಿಸಿ ಶ್ರೀಹರಿಯ॥

ಒಲವಿನಿಂದಲೆ ಗರ್ಗನಾಜ್ಞೆಯೊಳು ಮಾಲಿಕೆಯ ।
ಲಲನೆಯರು ಹರಿಗಿಕ್ಕಿ ನಮಿಸೆ ಭಕ್ತಿಯೊಳು ॥೪೦೭॥

**ಭಾಮಿನಿ**

ಮಾರಮಣಗೀಪರಿಯ ಲಗ್ನವ ।
ಭೂರಿಹರುಷದಿ ಗೆಯ್ಸಲಾಕ್ಷಣ ।
ಭೇರಿಕಹಳಾರವವು ಭೋರ್ಘರೆದಿರಲು ನಭದೊಳಗೆ ॥
ವಾರಿಜೋದ್ಭವ ಮುಖ್ಯ ಸುಮನಸ ।
ವಾರ ಸುಮವೃಷ್ಟಿಗಳ ಸುರಿಸಲು ।
ನೀರಜಾಕ್ಷಿಯರಾಗಲಾರತಿಯೆತ್ತಿ ಬೆಳಗಿದರು ॥೪೦೮॥

**ರಾಗ ಕಾಂಭೋಜಿ ತ್ರಿವುಡೆತಾಳ**

ಮಂಗಲಾರತಿಯೆತ್ತಿರೆ । ಶ್ರೀಕೃಷ್ಣಗೆ । ಮಂಗಲಾರತಿಯೆತ್ತಿರೆ ॥ ಪ ॥

ಮಂಗಲಾಂಗ ಸುರೇಶಸೇವ್ಯೋ । ತ್ತುಂಗ ಖಳರಸುಭಂಗ ಹರಿ ಶ್ರೀ ।
ರಂಗನಾಥ ಮುರಾರಿ ಗರುಡತು । ರಂಗ ಸಚ್ಚಿದನಂದಮೂರ್ತಿಗೆ ॥ ಅ ॥
ವರ ಮತ್ಸ್ಯ ಕಮಠನಿಗೆ । ಸೂಕರ ನರ । ಹರಿಗೆ ವಾಮನಮೂರ್ತಿಗೆ ॥
ಉರಗ ವೇಣಿವಿದರ್ಭೆ ಜಾಂಬವ । ತರಳ ಸತ್ರಾಜಿತನ ತನುಭವೆ ।
ತರಣಿಸುತೆ ಕಾಳಿಂದಿ ಲಕ್ಷಣೆ । ಭದ್ರೆ ಲೀಲಾ ಮಿತ್ರವಿಂದೆಗೆ ॥೪೦೯॥

ಧೀರಪರಶುರಾಮಗೆ । ಕೌಸಲ್ಯಾಕು । ಮಾರಗೆ ಕೃಷ್ಣನಿಗೆ ॥
ನಾರಿಯರು ಪದಿನಾರು ಸಾಸಿರ । ಧಾರಿಣಿಪಸುಕುಮಾರಿವರ್ಗಕೆ ।
ಸಾರಸಾಂಬಕ ದೇವದೇವ ಮು । ರಾರಿ ನರಕಾಂತಕಗೆ ಜಯ ಜಯ ॥
ಮಂಗಳಾರತಿಯೆತ್ತಿರೆ ॥೪೧೦॥

**ವಾರ್ಧಿಕ**

ಪರಿಪರಿಯ ಸಂಸ್ತುತಿಸಿ ಕರ್ಪುರದ ವೀಳೆಯವ ।
ಹರುಷದೊಳಗರ್ಪಿಸುತಲಿರೆ ಹಲಾಯುಧನಾಗ ।
ಪರಿಜನರ ಮನ್ನಿಸುತ ವಿಭುಧರಿಗೆ ದಕ್ಷಿಣೆಯ ಕರುಣಿಸುತಲಾನಂದದಿ ॥
ಪರಮಷಡ್ರಸಭೋಜ್ಯದಿಂದಲುಪಚರಿಸುತ್ತ ।
ಲರಸರಿಂಗುಡುಗೊರೆಯಸಿತ್ತು ಕಳುಹಿಸಲಾಗ ।
ಹರಿಯು ಸಂತೋಷದಿಂ ಸರಸಿಜಾಕ್ಷಿಯರೊಡನೆ ಸುಖಿಸುತಿರ್ದ ವಿಲಾಸದಿ ॥೪೧೧॥

**ರಾಗ ಕೇದಾರಗೌಳ ಅಷ್ಟತಾಳ**

ಹರಿಯ ವೈವಾಹದ ಚರಿತೆ ಪರೀಕ್ಷಿತ | ಗೊರೆದನು ಶುಕಮುನಿಯು ||
ವಿರಚಿಸಿದೆನು ಯಕ್ಷಗಾನದೊಳಿದ ಕೇಳ್ದ | ನರರಿಂಗೆ ಮಂಗಲವು ||೪೧೨||

ಸರಸಿಜಾಕ್ಷನ ದಯದಿಂದಲಾಪುದು ದಿಟ | ವರಿತವರಿದನು ತಿದ್ದಿ ||
ಮೆರೆಸಲಿಯನುದಿನ ಶ್ರೀಶನ ಚರಣದೊ | ಳುರತರ ಭಕ್ತಿಯಿಂದ ||೪೧೩||

ವರುಷವಾನಂದ ಶ್ರಾವಣ ಕೃಷ್ಣ ನವಮಿಯು | ಸ್ಥಿರವಾರದೊಳಗಿದನು ||
ಪರಿಸಮಾಪ್ತಿಯ ಸನ್ಮಂಗಲಗೆಯ್ದಿಹೆ | ನರಹರಿಕರುಣದಿಂದ ||೪೧೪||

ಪನಸಾಖ್ಯ ಪುರದುರಗೇಂದ್ರಶಾಸ್ತ್ರಿಯ ಸುತ | ಮನುಜಕೇಸರಿಯೆನ್ನನು ||
ಚಿನುಮಯಾತ್ಮಕ ನಿತ್ಯಾನಂದನುದ್ಧರಿಸಲಿ | ಯನುದಿನ ಕಾರುಣ್ಯದಿ ||೪೧೫||

**ರಾಗ ಧವಳಾರ**

ಮಂಗಲಾರತಿಯನೆತ್ತಿರೆ ಪದ್ಮನಾಭಗೆ | ಜಯ | ಮಂಗಲಾರತಿಯನೆತ್ತಿರೆ ಪದ್ಮನಾಭಗೆ || ಪ ||

ಮಂಗಲಾರತಿಯನೆತ್ತಿ | ರಂಗನಾಥ ದುರಿತಹರ ವಿ |
ಹಂಗವಹನ ಯದುಕುಲೇಂದ್ರ | ಪುಂಗವಾದಿಕೇಶವಂಗೆ || ಮಂಗಲಾರತಿಯನೆತ್ತಿರೆ || ಅ ||

ಮುತ್ತು ಮಾಣಿಕ್ಯವಜ್ರ | ಕೆತ್ತಿ ಝುಗಝುಗಿಸುತಿರ್ಪ |
ರತ್ನದಾರತಿಯನೀಗ | ನಿತ್ಯಮಂಗಲರೂಪನಿಂಗೆ || ಮಂಗಲಾರತಿಯ ||೪೧೬||

ಕೊರಳ ವೈಜಯಂತಿಮಾಲಾ | ಶರಧಿಶಯನ ಗೋಪಾಲ |
ಕರದಿ ಶಂಖ ಚಕ್ರವಿಡಿದ | ಸರಸಿಜಾಕ್ಷದೇವ ಹರಿಗೆ || ಮಂಗಲಾರತಿಯನೆತ್ತಿರೆ ||೪೧೭||

ಪರಮಮತ್ಸ್ಯ ಕಮಠ ವರಹ | ನರಹರಿಗೆ ವಾಮನಂಗೆ |
ಪರಶುಧರಗೆ ರಾಮಕೃಷ್ಣ | ಬೌದ್ಧಕಲ್ಕ್ಯ ಮೂರುತಿಗೆ || ಮಂಗಲಾರತಿಯನೆತ್ತಿರೆ ||೪೧೮||

ಧರೆಯೊಳಘಹರಾಖ್ಯಪುರದಿ | ಹರುಷದಿಂದ ನೆಲಸಿ ಜಗವ |
ಪೊರೆವ ಗೋಪಾಲ ಕೃಷ್ಣ | ನರಕಕಂಸಹಂಸಹರಗೆ || ಮಂಗಲಾರತಿಯನೆತ್ತಿರೆ ||೪೧೯||

ತರಳ ಪ್ರಹ್ಲಾದಗೊಲಿದು | ಪೊರಟು ಸ್ತಂಭದಿಂದ ನಲಿದು |
ಶರಣಪಾಲನೆಂಬ ಬಿರುದ | ಧರಿಸಿ ಖಳನ ತರಿದ ಹರಿಗೆ || ಮಂಗಲಾರತಿಯನೆತ್ತಿರೆ ||೪೨೦||

***ಯಕ್ಷಗಾನ ಶ್ರೀಕೃಷ್ಣ ವಿವಾಹ ಸಂಪೂರ್ಣ***

# ೫. ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ - ಪಾತ್ರಗಳು

೧. ಸತ್ರಾಜಿತ
೨. ಸೂರ್ಯ
೩. ಶ್ರೀಕೃಷ್ಣ
೪. ಪ್ರಸೇನ
೫. ಜಾಂಬವ
೬. ರುಕ್ಮಿಣಿ
೭. ಮಾಗಧ
೮. ಸಾತ್ಯಕಿ
೯. ಜಾಂಬವತಿ
೧೦. ದೇವಕಿ
೧೧. ವಸುದೇವ
೧೨. ಸತ್ಯಭಾಮೆ
೧೩. ಶತಧನ್ವ
೧೪. ಮಂತ್ರಿ
ಯಾದವಜನವೃಂದ, ಚಾರಕರು, ವನಪಾಲಕರು, ಸಿಂಹ, ಗೋಪಸ್ತ್ರೀಯರು.

**ಭಾಮಿನಿ**

ಇಂತು ಪುರಜನ ಬಂಧುಜನ ಸಹಿ ।
ತಂತರಾತ್ಮಕನೋಲಗದಿ ನಲ ।
ವಾಂತು ಮಂಡಿಸೆ ಮೆರೆದುದಾ ಸಭೆ ಸುರಪನೋಲಗದ ॥
ಕಾಂತಿ ಶತಮಿಗಿಲಾಯ್ತು ಲಕ್ಷ್ಮೀ ।
ಕಾಂತ ಕುಳಿತಾ ಸಭೆಯ ಸಂಭ್ರಮ ।
ವೆಂತು ಪೊಗಳುವೆ ಶೇಷರಾಜಂಗರಿದು ವಿವರಿಸಲು ॥೧॥

**ರಾಗ ಭೈರವಿ ಝಂಪೆತಾಳ**

ಈ ಪರಿ ವೈಭವದಿ । ಶ್ರೀಪತಿಯೊಡ್ಡೋಲಗದಿ ।
ಆ ಪುರಜನರೆಲ್ಲ । ಭಾಪೆನುತಲಿ ॥೧॥

ಪರಮಸಂತಸದಿಂದ । ಮೆರೆವ ಯಾದವವೃಂದ ।
ಸರಸಿಜಾಪ್ತನ ಶರಣ । ನುರೆ ಮೌನದಿಂದ ॥೨॥

ಚಿಂತಿಸುತ ಇರಲಾತ । ಕಂತುಪಿತನೀಕ್ಷಿಸುತ ।
ಸಂತಯಿಸೆ ಪೇಳ್ದನಾ । ದ್ಯಂತ ವೃತ್ತಾಂತ ॥೩॥

**ರಾಗ ಕಾಂಬೋಜಿ ಝುಂಪೆತಾಳ**

ಕೇಳಯ್ಯ ಸತ್ರಾಜಿತಾಖ್ಯ ಮನವೊಲಿದು ।
ಬೀಳುಗೊಂಡು ಚಿಂತೆಯನು ತಾಳು ಧೈರ್ಯವನು ನೆನೆದು ॥ ಪಲ್ಲವಿ ॥
ತರಣಿ ದಯೆಗೈದಿರುವ ರತ್ನವನು ನಿನ್ನನುಜ ।
ಧರಿಸುತ್ತ ಮೃಗಬೇಟೆಗೆಂದೆನುತ ವನಕೆ ॥
ತೆರಳಿದಾದಿನ ಸಿಂಹ ತರಿಯೆಯೆನ್ನಯ ಮೇಲೆ ।
ನೆರೆಮನವನಿಟ್ಟಿರುವ ಪರಿಯ ಕಳೆವುದಕೆ ॥೧॥

ನಿನಗಾಗಿ ನಾ ಪೋಗಿ ಘನತರದ ಬಿಲಕಾಗಿ ।
ಸೆಣಸಿದನು ಎನ್ನೊಡನೆ ಜಾಂಬವನು ತಾನು ॥
ಅನುವರದಿ ಸೋತವನು ಕನಕಾಂಗಿಯೋರ್ವಳನು ।
ವಿನಯದೊಳಗೆನಗಿತ್ತ ದಿನಪಮಣಿಸಹಿತ ॥೨॥

ನಿನ್ನ ಮನದೊಳು ಶಂಕೆ ಎನ್ನ ಮೇಲಿರುವುದಕೆ ।
ಮುನ್ನ ಕಳೆಯಲು ಪೋಗೆ ಕನ್ನಿಕೆಯು ಎನಗೆ ॥
ಸನ್ನುತದಿ ದೊರಕಿದಳು ಇನ್ನು ಮಣಿಕೊಳ್ಳುವುದು ।
ನಿನ್ನ ಮಣಿ ನಿನಗಾಯ್ತು ಎನ್ನ ದೂರದಿರು ॥೩॥

ಎಂದ ಹರಿನುಡಿ ಕೇಳಿ ನೊಂದು ಲಜ್ಜೆಯ ತಾಳಿ ।
ಕುಂದುಮೊಗನಾಗಿ ಮುಸುಕಿಂದ ತಲೆವಾಗಿ ॥
ನಿಂದುಕೊಂಡವನತಿಯ ಮಂದಮತಿಯವ ನುಡಿಯ ।
ಕುಂದದಾಲೋಚಿಸುತಲೆಂದ ಮರುಗುತ್ತ ॥೪॥

**ರಾಗ ನೀಲಾಂಬರಿ ಆದಿತಾಳ**

ಹರ ಹರಾ ನಾನರಿಯದಾದೆ । ಪರಮಾತ್ಮ ನೀನೆಂದು ॥
ಪರಮಾತ್ಮನ ಮೇಲೆ ದೋಷ । ಹೊರಿಸಿ ಪೇಳ್ದೆ ನಿಂದೆ ॥೧॥

ಕುಕ್ಷಿಯೊಳೀರೇಳು ಜಗವ । ರಕ್ಷಿಸುವ ದೇವ ॥
ಪಕ್ಷಿವಾಹನನೆಂಬುದ । ಈಕ್ಷಿಸದೆ ಮದದ ॥೨॥

ಗರ್ವದಿಂದ ಮರೆತೆನಿಂದು । ಸರ್ವಾತ್ಮಕನೆಂದು ।
ಸರ್ವಥಾ ಪಾಪಿಯಾಗೀ । ಊರ್ವಿಯೊಳಗ್ಯಾಕೆ ॥೩॥

ಧರಣಿಯೊಳ್ ಬಾಳುವುದೆಂತು । ಹರಿಯೊಳ್ ಕಷ್ಟವಾಂತು ॥
ಕರುಣಾಳು ಎನ್ನ ತಪ್ಪ । ಮರೆದು ಕಾಯೊ ನೀನು ॥೪॥

**ಕಂದ**

ಈ ತೆರದೊಳ್ ಮರುಗುವುದಂ ।
ನೀತಿಯುತರ್ ಕಂಡು ಜರೆವುತ್ತಿರಲಾಗಳ್ ॥
ಆತನು ವಂದಿಸುತಿಂತೆಂ ।
ಬಾತನ ಮನ್ನಿಸಿ ಮುದದೊಳಗೀ ತೆರನೆಂದಂ ॥೧॥

**ರಾಗ ಮಧುಮಾಧವಿ ಅಷ್ಟತಾಳ**

ಮರುಗದಿರೈ ಸತ್ರಾಜಿತ ನೀನು ।
ಅರಿಯದೆ ಪೇಳ್ದರೆ ಕೊರತೆಯದೇನು ॥ ಪಲ್ಲವಿ ॥

ಹಿಂದೆ ನಾ ಕೇಳಿದ । ರಿಂದ ನೀ ಗ್ರಹಿಸುವ ।
ದಂದವಹುದುಯೆನು । ತಂದು ಮಾಧವ ನಲ ।
ವಿಂದ ಪೇಳಿದನಾತಗೆ । ವಿಧಿಲಿಖಿತಗ ।
ಳಿಂದಲಾದುದು ಈ ಬಗೆ । ಯೋಚಿಸದಿರಿ ।
ನ್ನೆಂದು ಮನ್ನಿಸಿ ದೀನ । ಬಂಧು ಸಂತಯಿಸಿದ ॥೧॥

ಹರಿಯ ವಾಕ್ಯವ ಕೇಳಿ । ಪರಿತೋಷವನು ತಾಳಿ ।
ಕೊರತೆ ಬಂದುದ ಪರ । ಹರಿಸಲೆನುತ ತನ್ನ ।
ಅರಮನೆಗಾಗಿ ಬಂದು । ಪುತ್ರಿಯ ಹರಿ ।
ಕರುಣಾಸಾಗರನಿಗಿಂದು । ಕೊಡುವೆನೆಂದು ।
ಪರಮ ಸಂತೋಷದಿ । ಪುರವ ಶೃಂಗರಿಸಿದ ॥೨॥

ತೋರಣ ಕುರುಜು ಮೇ । ರುವೆಯಿಂದ ಪುರವ ವಿ ।
ಸ್ತಾರದಿ ರಚಿಸುತ । ಲೀ ರೀತಿ ಸಕಲವನು । ಭೂಪಾಲನು ।
ಧಾರಿಣಿಯಮರರನು । ಬರಿಸಿ ಬೇಗ ।
ಚಾರು ಸುಲಗ್ನವನು । ಇರಿಸಿ ತಾನು ।
ವೀರರೊಂದುಳಿದೈವ । ತ್ತಾರು ದೇಶದವರಿಗೆ ॥೩॥

**ರಾಗ ಕಾಂಭೋಜಿ ಝಂಪೆತಾಳ**

ಚಾರಕರ ಮುಖದಿಂದ ಲೇಖನವ ಕಳುಹಿಸುತ ।
ಚಾರುತರ ಉಡುಗೊರೆಯು ಸಹಿತ ॥
ಧಾರಿಣೀಪತಿಗಳೆಡಗೀ ರೀತಿ ಕಳುಹಿಸುತ ।
ಭೂರಿಸಂತಸದಿಂದಲಾತ ॥೧॥

ಹೊತ್ತ ಕಡುದುರಿತವನು ಪರಿಹರಿಸಬೇಕೆಂದೆ ।
ನುತ್ತ ಭೂಪಾಲಕನು ಮನದಿ ॥

ಪತ್ತನವ ಪೊರಡುತ್ತೈತಂದು ಬಿನ್ನಯಿಸಿ ಪುರು ।
ಷೋತ್ತಮನೊಳೆಂದನತಿ ನಯದಿ ॥೨॥

ನಾನು ಸರ್ವಾಪರಾಧವ ಗೆಯ್ದೆನೆಂದು ಅನು ।
ಮಾನಿಸದೆ ದಯದೊಳಗೆ ಬಂದು ॥
ಸಾನುರಾಗದೊಳೆನ್ನ ಪುತ್ರಿಯನು ಕೈಕೊಂಡು ।
ನೀನೆನ್ನನುದ್ಧರಿಪುದಿಂದು ॥೩॥

**ಭಾಮಿನಿ**

ಎನುತ ಕರಗಳ ಮುಗಿದು ನಿಂದಿರೆ ।
ಚಿನುಮಯನು ಕಾಣುತ್ತಲೆಂದನು ।
ಕನಕ ಕನ್ನಿಕೆ ರತ್ನವಿತ್ತರೆ ಕೈಕೊಳದೆ ಬಿಡುವ ॥
ವಿನಯಹೀನರು ಇಹರೆ ಲೋಕದಿ ।
ಸನುಮತದೊಳೈತರುವೆ ತೆರಳೆಂ ।
ದೆನುತ ಕಳುಹಲು ಹರುಷದಿಂದೈತಂದ ಪುರವರಕೆ ॥೧॥

**ಕಂದ**

ಬಂದಾ ಭೂಪಂ ತನ್ನಯ ।
ನಂದನೆಯಹ ಸತ್ಯಭಾಮೆಯಂ ಕರೆದವಳೊಳ್ ॥
ಮಂದಸ್ಮಿತ ವಚನದೊಳಿಂ ।
ತೆಂದುಂ ತಕ್ಕಯಿಸುತ ನುಡಿದಂ ತಾನಾಗಂ ॥೧॥

**ರಾಗ ಕಲ್ಯಾಣಿ ಏಕತಾಳ**

ಇತ್ತ ಬಾರೌ ಮೋಹದ । ಪುತ್ರಿ ಸತ್ಯಭಾಮೆ ।
ಮತ್ತಗಜಯಾನೆ ಕೇಳೊಂ । ದುಕ್ತಿಯ ನಾ ಪೇಳ್ವೆ ॥
ಮತ್ತಕಾಶಿನಿ ಕನ್ನೆಯರ । ಉತ್ತಮ ಮಣಿಯೆ ।
ಚಿತ್ತಜನಯ್ಯಗೆ ನಿನ್ನ । ಅರ್ತಿಯಿಂದಲೀವೆ ॥೧॥

ಎಂದು ನಿಶ್ಚಯಗೈದಿರ್ಪೆ । ನಿಂದು ನಿನ್ನ ಮನದ ।
ಅಂದವೇನೆಂದೆಂಬ ಪಿತಗೆ । ವಂದಿಸುತ್ತ ನುಡಿದಳ್ ॥
ಸಿಂಧುವಿನುಲ್ಲಾಸದಿಂದ । ಚಂದವಾದುದೆನುತ ।
ಮಂದಹಾಸದಿ ತಾತನೊ । ಳೆಂದಳು ನಾಚುತ್ತ ॥೨॥

ಪುರಹರನಾಪ್ತನಿಗೆನ್ನ । ಕರುಣದಿಂದ ಧಾರೆ ।
ಎರೆಯಲು ಕೃತಾರ್ಥಳಾದೆ । ಸರಿಯಾರೆನಗೆ ಬೇರೆ ॥

ನೆರೆ ರೋಗಿ ವೈದ್ಯರ ಮತವು । ಇರದೆ ಒಂದಾಯ್ತೆಂದು ।
ಹರುಷಿಸುವ ಸುತೆಯ ರಾಯ । ಪರಸುತಿರ್ದನಂದು ॥೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಮದುವೆಗೆ ಸಕಲ ಸನ್ನಹ ।
ವಾಂತು ಹರುಷದೊಳಗಿರೆ ॥
ಕಾಂತೆ ಭಾಮೆಯ ವಿವಹಸಂಭ್ರಮ । ವೆಂತು ಒರೆವೆ ॥೧॥

ದೊರೆ ಕುಮಾರರು ಋಷಿವರರು ಸಹ ।
ಬರಲು ಭೂಪ ಸರ್ವರ ॥
ಪರಿಪರಿಯೊಳುಪಚರಿಸಿದನು ಕೇಳ್ । ಧರಣಿಯಧಿಪ ॥೨॥

ಪರಮವೈಭವದಿಂದಲಿಂತಿವ ।
ರಿರಲಿಕಾಗ ದ್ವಾರಕಾ ॥
ಪುರದೊಳಗೆ ವಸುದೇವದೇವಕಿ । ಗೆರಗೆ ಬೇಗ ॥೩॥

**ಕಂದ**

ಪಿಡಿದೆತ್ತುತ ತನಯನ ಮೆಯ್ ।
ದಡವುತಲತಿ ಸಂತೋಷದಿಂ ಪರಸುತಲಾಗಲ್ ॥
ನುಡಿದರಿದೇನೈ ಹರುಷದ ।
ಕಡಲೊಳಗಾಳುವೆಯೆನಲವರೊಡನಿಂತೆಂದಂ ॥೧॥

**ರಾಗ ಶಂಕರಾಭರಣ ಅಷ್ಟತಾಳ**

ತಾತ ಲಾಲಿಪುದೆನ್ನ ಮಾತ ನೀವ್ ಕರುಣದಿ ।
ಮಾತೆ ಸಹಿತ ಮುದದಿ ॥
ಪ್ರೀತಿಯಿಂ ಸತ್ರಾಜಿತಾಖ್ಯ ತನ್ನಯ ತನು ।
ಜಾತೆಯನೆನಗೀವೆನು । ಎಂದನು ತಾನು ॥೧॥

ತೆರಳಲು ಬೇಕು ದಿಬ್ಬಣ ಸಹ ಪುರಜನ ।
ಪರಿಜನರಾಪ್ತರೆಲ್ಲ ॥
ಕರೆದುಕೊಡುವ ಹೆಣ್ಣ ವರಿಸಿಕೊಂಬುದು ಬಣ್ಣ ।
ನೆರೆ ನಿಮ್ಮ ಚಿತ್ತ ಹ್ಯಾಗೆ । ಈ ಬಗೆಗೆ ॥೨॥

ಎಂದು ಮಾತಿಗೆ ವಸುದೇವದೇವಕಿ ತಮ್ಮ ।
ಕಂದನ ತಕ್ಕವಿಸಿ ॥

ಚಂದವಾದುದು ನಾವಾನಂದದಿ ಬರುವೆವು ।
ಇಂದಿನೊಳೀ ಲಗ್ನಕೆ । ಪೋಗುವ ಜೋಕೆ ॥೩॥

ಆಗಲೆ ಚಾರರೈತಂದು ಬಿನ್ನಯಿಸಿದರ್ ।
ಹೀಗೆಂದು ಕೃಷ್ಣನಿಗೆ ॥
ನೀಗಿ ಲಾಕ್ಷಾಗೃಹದಿಂದೇಕಚಕ್ರಕೆ ।
ಪೋಗಿ ಪಾಂಡವರ್ ಮುಂದಕೆ । ಪಾಂಚಾಲಕೆ ॥೪॥

**ರಾಗ ಕಲ್ಯಾಣಿ ಅಷ್ಟತಾಳ**

ಶಿವ ಶಿವ ಕುಂತಿಯಾತ್ಮಜರಿಗೀ ಪರಿಯ ।
ಭವಣೆಯು ದೊರಕಿತೆ ದುಷ್ಟನ ಕಯ್ಯ ॥
ಕವಳವಾದರು ಬಹುವಿಧದಿಂದಲೆನುತ ।
ತವಕದಿ ಪೊರಟನೀಕ್ಷಿಸಲು ಶ್ರೀನಾಥ ॥೧॥

**ವಾರ್ಧಕ**

ಭೂರಮಣ ಲಾಲಿಸೈ ಪಾಂಡವರನೀಕ್ಷಿಸಲ್ ।
ಮಾರಮಣನಿತ್ತ ತೆರಳಲು ಹೃದಿಕ ತನಯನ ।
ಕ್ರೂರನೆಂಬವಗಂತೆ ತಿರುಗೆ ಶತಧನ್ವನೀ ಪರಿಣಯದ ವಾರ್ತೆ ತಿಳಿದು ॥
ನಾರಿಯಂ ತನಗೀವೆನೆಂದು ವಂಚಿಸಿದನೀ ।
ಚೋರಗೋವಳಗಿತ್ತನಾ ದುರಾತ್ಮನ ಕಾಲ ।
ನೂರ ಪೊಗಿಸದೆ ಮಾಣೆನೆಂದು ರೋಷಿತನಾಗಿ ನಿಜಮಂತ್ರಿಗಿಂತೆಂದನು ॥೧॥

**ರಾಗ ಕಾಂಭೋಜಿ ಝಂಪೆತಾಳ**

ಹುಡುಗಿಯನು ತನಗೀವೆನೆಂದೆನುತ ಮಣಿಧರನು ।
ದೃಢದಿಂದ ಪೇಳಿ ನಿಜಸುತೆಯ ॥
ಹುಡುಗ ಗೋವಳಗೀವನಂತೆ ದಿಟ ಕುಹಕಿಯನು ।
ಬಿಡುವುದಿಂದುಚಿತವೇನಯ್ಯ ॥೧॥

ಸೃಷ್ಟಿಯಧಿಪತಿತನಕೆ ಯೋಗ್ಯವಾಗಿಹ ನೃಪರ ।
ಬಿಟ್ಟು ಗೊಲ್ಲರ ನಂದಸೂನು ॥
ಶ್ರೇಷ್ಠನೆಂದೆನುತೆನ್ನ ಬಿಟ್ಟು ಕನ್ನಿಕೆಯಿತ್ತು ।
ಕೆಟ್ಟ ಕೇಡೇನ ಪೇಳುವೆನು ॥೨॥

ಕರಿತುರಗ ರಥಪದಾತಿಯ ಬಲದ ಮೊತ್ತವನು ।
ನೆರಹು ಶೀಘ್ರದಿ ಕುಶಸ್ಥಳಿಯ ॥

ಪುರವ ಮುತ್ತುವ ತಡೆಯದೆಂದೆನಲು ಕೈಮುಗಿದು ।
ದೊರೆಗೆಂದ ರೋಷಕುಪಶಮೆಯ ॥೩॥

**ರಾಗ ಕಾಪಿ ಅಷ್ಟತಾಳ**

ರೋಷವ ಸೈರಿಸು ಜೀಯ । ಕ್ಷಮಾ ।
ರೂಪವ ಧರಿಸಲು ಗುಣವಿರ್ಪುದಯ್ಯ ॥ ಪಲ್ಲವಿ ॥

ದಿನಪನ ಭಜಕನಾಗಿಹನು । ತನ್ನ ।
ತನುಜೆಯ ಮಂದರಧರಗಿತ್ತಿರುವನು ॥
ವಿನತಜನಿಂಗಹಿ ಇದಿರೆ ಚಂದ್ರನ ಬಕ ।
ಮುನಿದು ನಿಂದಿಸಿದಂತೆ ಪೇಳುವರೆಲ್ಲ ॥೧॥

ಹರಿಶರಣಾಂಬರೀಷನಿಗೆ । ಮುನಿ ।
ವರ ದುರ್ವಾಸನು ಮುನಿದೇನಾದ ಕಡೆಗೆ ॥
ತರಳ ಧ್ರುವನ ಮತ್ಸರದಿಂದ ಮಲತಾಯಿ ।
ಸುರುಚಿ ಘಾತಿಸಿ ಕಡೆಗೇನಾದಳನರ್ಥದಿ ॥೨॥

ದೃಢಮನದಿಂದಲಿ ನೋಡು । ಜಗ ।
ದೊಡೆಯನಾಶ್ರಿತರನು ಕೆಣಕಲು ಕೇಡು ॥
ಹುಡುಗಿಯ ನೆವದಿಂದ ತಿಳಿದು ತಿಳಿದು ಪೋಗಿ ।
ಕೆಡಬೇಡ ನಿನಗೆ ಸಾರಿದೆ ಕಡ್ಡಿ ಮುರಿದು ॥೩॥

**ಭಾಮಿನಿ**

ಎನಲು ಸಚಿವನ ನುಡಿಯ ಕೇಳುತ ।
ಕನಲಿ ಗರ್ಜಿಸುತೆಂದನೆಲವೋ ।
ಬಿನುಗೆ ನೀನುತ್ತರವನೀವೆಯೊ ಸಲುಗೆಯಿಂದೀಗ ॥
ಘನ ಮದಾಂಧತೆಯಿಂದ ಗೋವಳ ।
ನನು ಮಹತ್ತ್ವವ ಮಾಡಿ ಪೊಗಳುವೆ ।
ರಣಕೆ ತೆರಳುವೆನೆನುತ ವೀರಾವೇಶದಲಿ ಪೊರಟ ॥೧॥

**ರಾಗ ಭೈರವಿ ಏಕತಾಳ**

ಬಂದನು ಗಜರಥ । ಮಂದಿ ಕುದುರೆಗಳ ।
ಸಂದಣಿ ಪಾತಕ । ರಂದು ಪೊಗಳಲೈ ।
ತಂದ ಭರಕೆ ನಾ । ಗೇಂದ್ರನಳುಕೆ ನಭ ।
ಕೆಂಧೂಳಿಯೊಳಿನ । ನಂದು ಮುಸುಕಲು ॥ ಕೇಳ್ಕೈ ಭೂಪ ॥೧॥

ಹುಡುಗೀಯದೆ ನುಡಿ । ಗೆಡರ ಗೈದವನವ ।
ನೊಡಲ ನೆಣನ ಭೂತ । ಗಡಣಗಳಿಗೆ ಉಣ ।
ಬಡಿಸುವೆನುತಲಿ । ಖಡುಗವ ಝಳಪಿಸಿ ।
ಕಡುಗಲಿಗಳು ಘುಡು । ಘುಡಿಸುತ್ತೈದಿದರು ॥ ಕೇಳ್ಳೈ ಭೂಪ ॥೨॥

ಪೃಥ್ವಿಯು ಶರಧಿಯ । ಸುತ್ತಿದ ತೆರದಿ ಕು ।
ಶಸ್ಥಳಿ ನಗರವ । ಮುತ್ತಲು ಚರರ್ ಕಾ ।
ಣುತ್ತ ಬೆದರಿ ನಡು । ಗುತ್ತ ತಮ್ಮೊಡೆಯಗೆ ।
ಬಿತ್ತರಿಸಿದರೀ । ವೃತ್ತಾಂತವನು ॥ ಕೇಳ್ಳೈ ಭೂಪ ॥೩॥

**ರಾಗ ಲಾವಣಿ ಆದಿತಾಳ**

ಬಿರ್ರನೆ ಬಂದೆವು ನಿನ್ನ ದರುಶನಕೆ । ಮಹರಾಜ ಸದನಕೆ ।
ಬಿರ್ರನೆ ಬಂದೆವು ನಿನ್ನ ದರುಶನಕೆ ॥ ಪಲ್ಲವಿ ॥
ಬಿರ್ರನೆ ಬಂದೆವು ನಿನ್ನ ಬಳಿಗೆ । ಅರ್ಯಮನಸ್ತಮಿಸಿದ ಮ್ಯಾಗೆ ।
ಸರ್ರನೆ ಬಂದು ಕವಿದಿಹರಂ ಪುರಕೆ । ವೈರಿಗಳ್ ಜೋಕೆ ।
ಸರ್ರನೆ ಬಂದು ಕವಿದಿಹರು ಪುರಕೆ ॥೧॥

**ಭಾಮಿನಿ**

ಎಂದ ಚಾರರ ನುಡಿಗೆ ಯೋಚಿಸು ।
ತೆಂದನಾತಗೆ ಹಿಂದೆ ಎನ್ನಯ ।
ನಂದನೆಯ ನಾ ಕೊಡುವೆನೆಂದಿಹೆನದರಿನಿಂದೀಗ ॥
ಬಂದನೇ ಬಲಸಹಿತ ಪುರಕೆಂ ।
ದಂದು ತಾನೇ ಕರದಿ ಧನುಶರ ।
ವಂ ಧರಿಸಿ ಮಾರಾಂತು ನುಡಿದನು ಹೃದಿಕತನಯನೊಳು ॥

**ರಾಗ ಮಾರವಿ ಆದಿತಾಳ**

ವೀರ ನೀನಹುದೊ ಖರೆ । ಚೋರರ ತೆರ । ವೀ ರಾತ್ರಿಯೊಳಗರರೆ ॥
ಭೂರಿಮಾರ್ಬಲ ನೆರೆ । ದೂರ ಮುತ್ತಿರುವರೆ ।
ಕಾರಣವೇನೆಂದೊರೆ ॥೧॥

ಸತ್ಯಧರ್ಮವ ಪೇಳುವೆ । ವಚನಭ್ರಷ್ಟ । ವ್ಯರ್ಥ ನಿನ್ನಯ ಬಾಳುವೆ ॥
ಪುತ್ರಿಯ ಕೊಡದಿರ್ದ । ಧೂರ್ತ ನಾಲಿಗೆ ಕೊಯ್ದು ।
ಶಸ್ತ್ರದೊಳುರ ಸೀಳುವೆ ॥೨॥

ದುರ್ಜನರೆರೆಯ ನೀನು । ಪೂರುವ ಪುಣ್ಯ । ವರ್ಜಿತನಾದವನು ॥
ಮೂರ್ಜಗಪತಿಗೆ ಸು । ತೆಯನಿತ್ತು ಪಾಪವಿ ।
ಸರ್ಜಿತನಾದೆ ನಾನು ॥೩॥

ಎನಲೆಂದ ಗರ್ಜಿಸುತ । ನಿನ್ನನು ಕಾವ । ಬಿನುಗುಳ್ಯಾರೆನುತ ॥
ನೆನೆದುಕೋ ಇಂದಿಗೆ । ಪಣೆಯ ಬರಹ ತೀರಿ ।
ತೆನುತೆಚ್ಚ ಬೊಬ್ಬಿಡುತ ॥೪॥

**ರಾಗ ಭೈರವಿ ಏಕತಾಳ**

ಪೊಡೆದಸ್ತ್ರವನುರೆ ಕಡಿದು । ಘುಡು । ಘುಡಿಸುತನಲಶರ ಪಿಡಿದು ॥
ಬಿಡಲು ಜಲಾಸ್ತ್ರದೊಳದನು । ಬಳಿ । ಕಡಗಿಸೆ ಕಾಣುತಲವನು ॥೧॥

ಉರಗಶರೌಘವನೆಸೆಯೆ । ಬಲು । ಬರದಿ ಭೂವರನನು ಕವಿಯೆ ॥
ಗರುಡ ಕಳಂಬದೊಳದನು । ಪರಿ । ಹರಿಸಲು ಶೈಲಾಸ್ತ್ರವನು ॥೨॥

ತೆಗೆದೆಸೆಯಲು ಕುಲಿಶದಲಿ । ಆದ । ಬಗೆಯದೆ ಕಡಿದ ಸತ್ತ್ವದಲಿ ॥
ಮಿಗೆ ಖಡ್ಗದಿ ಮಸ್ತಕವ । ಕಡಿ । ದೊಗೆದಿಳುಹಿದ ಶರಧನುವ ॥೩॥

**ಭಾಮಿನಿ**

ಎಲೆ ಧರಾಧಿಪ ಕೇಳು ಮಣಿಧರ ।
ಹಲವು ವಿಧದಲಿ ಹೆಣಗಲಾ ಜಯ ।
ಲಲನೆ ಶತಧನ್ವನಲಿ ನೆಲೆಸಲು ಕಂಡು ಬಲದವರು ॥
ಕೊಳುಗುಳವು ಲೇಸಲ್ಲವೆನ್ನುತ ।
ಕಳಕೆ ಬೆಂಗೊಟ್ಟೋಡುತಿರುವರ ।
ಛಲದಿ ಬೆರಸುತ ಮರಳಿ ತನ್ನಯ ಪುರಕೆ ತಿರುಗಿದನು ॥೧॥

**ಕಂದ**

ಪ್ರಾಣವ ತೊರೆದಿಹ ಪಿತನಂ ।
ಕಾಣುತಲಾ ಸತ್ಯಭಾಮೆಯತಿ ವೇಗದೊಳಂ ॥
ಗೋಣರಿಯಿಸುವೆ ಸುದರ್ಶನ ।
ಪಾಣಿಯೊಳೊರೆದವನನೆಂದರಸುತೈತಂದಳ್ ॥

**ಭಾಮಿನಿ**

ಕಂಡು ಶ್ರೀಹರಿ ಮನದೊಳಚ್ಚರಿ ।
ಗೊಂಡನೆರಗಿದ ಭಾಮೆಯಳ ಬೆಸ ।

ಗೊಂಡನೇನಿದು ಎಲ್ಲಿಗೈದುವುದಳುವುದೇಕೆನಲು ||
ಚಂಡಬಲ ಹೃದಿಕಜನು ಪಿತನಸು |
ಗೊಂಡನಿರುಳಲಿ ಅವನ ಕೊಲ್ವ ಪ್ರ |
ಚಂಡ ವಿಕ್ರಮಿ ನೀನೆನುತ್ತಿರೆ ಪುಂಡರೀಕಾಕ್ಷ ||೧||

**ರಾಗ ಸೌರಾಷ್ಟ್ರ ಆದಿತಾಳ**

ಏಳು ತಿಳಿದೆನು ನಡೆದ ಕಥೆಯೆಲ್ಲ | ಶತಧನ್ವನೆಂಬನ |
ಬಾಳಗೊಡೆ ನಾ ಕೊಲುವೆ ಸಟೆಯಲ್ಲ ||
ಖೂಳ ಕೌರವರಿಂದ ಪಾಂಡವ | ಬಾಲರರಗಿನ ಮನೆಯ ಕಷ್ಟವ |
ಬೀಳುಗೊಂಡುದ ಕೇಳಿ ಪೋದೆನು | ಲೀಲೆಯಿಂ ಸಂತೈಸಿ ಮರಳಿದೆ ||೧||

ತೆರಳು ನೀ ಪುರಕೀಗಲೀಕ್ಷಣದಿ | ಮಾತುಳನ ಕೊಂದಿಹ |
ದುರುಳನನು ಸಂಹರಿಸಿ ನಾ ರಣದಿ ||
ಬರುವೆ ನೋಡೆಂದರುಹಿ ರೋಷದಿ | ಗರುಡಗಮನನು ಪೊರಟು ಹೃದಿಕನ |
ತರಳನನು ಅರಸುತ್ತ ಬರುವುದ | ನರಿತನಾ ಶತಧನ್ವನಿತ್ತಲು ||೨||

**ಕಂದ**

ನಂದನ ಕಂದನನಿದಿರಿಸ |
ಲೆಂದಕ್ರೂರನ ಕೃತವರ್ಮರನುಂ ಕೇಳಲ್ ||
ಎಂದರು ತಮ್ಮಲಿ ಹರಿಯದಿ |
ದೆಂದಿಗು ಬರೆವೆನಲವರಂ ಧಿಕ್ಕರಿಸುತ್ತಂ ||೧||

**ವಾರ್ಧಕ**

ರಣಹೇಡಿಗಳ್ ನೀವೆನುತ್ತ ಪೊರಟಲ್ಲಿಂದ |
ಧನುಶರವ ಧರಿಸುತ್ತ ಬರುತಿರಲ್ ಕಂಡಾಗ |
ವನಜಾಕ್ಷನಾತನಂ ತಡೆದು ನುಡಿಸಿದನೆಲವೊ ಬಣಗೆ ನಿಲ್ನಿಲ್ಲೆನುತ್ತ ||
ಕಣುಗಳಲಿ ಕಿಡಿಯುಗುಳಿ ಧನುವಿಗಾ ಶತಧನ್ವ |
ಕಣೆಯ ಜೋಡಿಸಿ ನುಡಿದ ನಿನಗಿನ್ನು ಬಾಳಿರುವ |
ಋಣ ತೀರಿತೆಂದೆ ತಿಳಿ ಪೆಣಕೆ ಕಾಲನ ಕೂಡೆ ಸೆಣಸಾಟದೋಲಾಯ್ತುಲಾ ||೧||

**ರಾಗ ಮಾರವಿ ಝಂಪೆತಾಳ**

ಧರೆಯೊಳಗೆ ಬಾಳುವನೆ | ಇರುಳೊಳಾರರಿಯದಂ |
ತರಿದು ಕೊರಳನು ಕೊಂದ ದುರುಳ ||

ಧುರದೊಳಿದಿರಾದಡಾ । ನರಕವನು ತೋರ್ಪೆ ನೀ ।
ನರಿಯೆ ನೋಡೆಂದಿಟ್ಟ ಸರಳ ॥೧॥

ಮಾವನನು ಕೊಂದುದಕೆ । ಸಾವನೊದಗಿಪೆನೆಂದು ।
ಭಾವಿಸಿದೆಯಾ ನೀನು ಹಿಂದೆ ॥
ದೇವಕ್ಯಗ್ರಜನ ಕೊಂ । ದಾವ ನರಕವ ಕಂಡೆ ।
ಕಾವರಾರಿಲ್ಲಿನ್ನು ಮುಂದೆ ॥೨॥

ದುಷ್ಟ ಕಂಸನ ಗತಿಯು । ಇಷ್ಟವಾದರೆ ಯೇತ ।
ಕಿಷ್ಟು ಕಳವಳ ಪೋಗೆನುತ್ತ ॥
ವಿಷ್ಟರಶ್ರವನೆಸೆಯೆ । ನಷ್ಟಗೈದಾ ಶರವ ।
ಸೃಷ್ಟಿಯೊಳು ಕೆಡೆದು ಪ್ರತಿಯಿತ್ತ ॥೩॥

ತೊಟ್ಟ ಬಾಣಂಗಳನು । ತಟ್ಟನವ ಮುರಿದೆಸೆಯೆ ।
ಬಿಟ್ಟು ಮಾರ್ಗದೊಳು ಮಾರ್ಗಣವ ॥
ಕುಟ್ಟಿ ಈಡಾಡೆ ಬೇ । ರಿಟ್ಟಡವ ತರಿದು ತರಿ ।
ದೊಟ್ಟಲಿವ ಕೊನೆಗೆ ಕೋಲ್ಗಳನು ॥೪॥

ಕಡಿದು ಬಿಸುಡಲು ಧನುವ । ಹಿಡಿದು ಶತಧನ್ವನಾ ।
ಮೃಡನ ಸಖನಿದಿರು ಬರುತಿರಲು ॥
ಕಡೆಗಾಲ ಬಂತಿವನ । ಹಿಡಿದೊಯ್ವೆನೆಂದೆನುತ ॥
ಹೆಡತಲೆಯ ಮೃತ್ಯು ನಗುತಿರಲು ॥೫॥

ಜಡಜನಾಭನು ಕರದಿ । ಪಿಡಿದಿರುವ ಚಕ್ರ ಬಿಡೆ ।
ಕಿಡಿ ಸೂಸಿ ಬಂದು ನಿಂದಿರುವ ॥
ಕಡು ಪರಾಕ್ರಮಿಯ ಕೊರ । ಳೆಡೆಯ ಕತ್ತರಿಸಲಡ ।
ಗೆಡೆದ ಬೇರರಿದವೋಲ್ ತರುವ ॥೬॥

**ವಾರ್ಧಕ**

ಬಿದ್ದ ಖಳನಂ ಕಾಣುತಿದ್ದ ಮಿಕ್ಕಿನ ಭಟರು ।
ಬುದ್ಧಿಯಿಲ್ಲದೆ ಕದನಕೈತಂದೆವೀ ತಪ್ಪ ।
ತಿದ್ದಿ ಸಲಹಪ್ಪ ನೀನೆನುತ ಸಾಷ್ಟಾಂಗದಿಂದಿದ್ದು ಬೇಡುತ್ತಲಿರಲು ॥
ಹೊದ್ದಿದವರಂ ತಕ್ಕವಿಸಿ ಮನ್ನಿಸುತ ಬಳಿಕ ।
ಹದ್ದನೇರುತ ಬಂದು ಸತ್ಯಭಾಮೆಯು ಕರೆದು ।
ಯುದ್ಧವಾರ್ತೆಯನರುಹಿ ಸಕಲರಂ ನೆರಹಿಕೊಂಡಿರ್ದನತ್ತಲು ಸಭೆಯೊಳು ॥೧॥

**ಭಾಮಿನಿ**

ಸಪ್ತಋಷಿಗಳ ಮತದಿ ಗಾರ್ಗ್ಯನು ।
ಸ್ವಸ್ತಿ ಪುಣ್ಯಾರ್ಚನೆಯ ಗೈಯಲು ।
ರತ್ನಖಚಿತದ ಬಾಸಿಗವ ಸೂಡುತ್ತ ಶ್ರೀಹರಿಯು ॥
ಮತ್ತೆ ಮಾತಾಪಿತರ ಪದಯುಗ ।
ಕರ್ತಿಯಲಿ ಮಣಿಯಲ್ಕೆ ಮುಕುಟವ ।
ನೆತ್ತಿ ಪರಸಲು ಶುಭಮುಹೂರ್ತದಿ ದಿಬ್ಬಣವು ಪೊರಟು ॥೧॥

**ರಾಗ ಸಾರಂಗ ರೂಪಕತಾಳ**

ಈ ರೀತಿಯಲಿ ಬಂಧು । ವಾರ ಭೂಸುರವೃಂದ ।
ನಾರಿಯರೆಲ್ಲರು ಸಹಿತ ॥
ಚಾರು ಅಂದಣದಲ್ಲಿ । ನಾರಿ ದೇವಕಿಯರು ।
ವೀರ ಶೌರಿಯು ಬರಲಲ್ಲಿ ॥೧॥

ನಾನಾ ವಾದ್ಯಘೋಷದಿ । ಮಾನಿನಿಯರೆಲ್ಲ ಶೋ ।
ಭಾನವ ಪಾಡುತಲಿರಲು ॥
ಜಾಣಪಾಠಕರು ನಾ । ನಾ ವಿಧ ಪೊಗಳಲು ।
ದಾನವಾರಿಯ ಮಹಿಮೆಗಳ ॥೨॥

ಭೂಸುರರ್ಗಳ ವೇದ । ಘೋಷದೊಳಾಗ ಶ್ರೀ ।
ವಾಸುದೇವನ ಸಹೋದರಿಯು ।
ಸೇಸೆಯನಿಕ್ಕುತ । ಲೇಸಿನ ಹಸೆಗಾಗಿ ।
ತೋಷದಿ ಕರೆದಳು ವರನ ॥೩॥

**ರಾಗ ಧವಳಾರ ಆದಿತಾಳ**

ಅಂಬುಜನಾಭ ಮುರಾರಿ ಮುಕುಂದ ।
ಕುಂದುಕಂಧನಾಪ್ತ ಸದ್ಗುಣವೃಂದ ॥
ಜಾಂಬವತಿಯ ತಂದ ಧೀರ ದಂಪತಿಗಳ ।
ಅಂಬುಜವದನೆಯರು ಕರೆದರೆ ॥೧॥

ಕಂದರ್ಪಪಿತ ಸತ್ಯಭಾಮೆಯರಾಗ ।
ಚಂದದಿ ಹಸೆಯ ಮೇಲೊಪ್ಪಿದರೆ ಬೇಗ ॥
ಚಂದನಗಂಧಿಯರೊಂದಾಗಿ ನೆರೆವುತ ।
ತಂದರಾರತಿಯ ಮುದದಿಂದ ॥೨॥

ವಾರಣಗಮನದ ಚೆಲುವ । ಚಾರು ಚಂದಿರನಂತೆ ಹೊಳೆವ ॥
ಮೋರೆಯೊಳೆಸೆವ ಕಸ್ತೂರಿತಿಲಕವು ।

ಓರೆ ನೋಟದ ವಯ್ಯಾರಿಯರ್ ಮುದದಿ ।
ಭಾರ ಸ್ತನಕೆ ನಡು ಬಳುಕುತ ಸತಿಯರು ।
ಮೇರುವೆಯಾರತಿಯ ಬೆಳಗಿರೆ ॥೩॥

ಶಂಖ ಸುದರ್ಶನಧರೆಗೆ । ಪಂಕಜಾಕ್ಷಿಗೆ ಮುರಹರಗೆ ॥
ಶಂಕರಪ್ರಿಯ ಗರುಡಾಂಕವಾಹನಗೆ ।
ಕಿಂಕರಜನನುತ ವೇದಾಂತನಾದನಿಗೆ ।
ಪಂಕಜಮುಖಿ ಗಜಗಮನೆಗೆ ಶ್ರೀ ।
ವೇಂಕಟರಮಣಗೆ । ಕುಂಕುಮದಾರತಿಯ ಬೆಳಗಿರೆ ॥೪॥

ಮಂಗಳಮಹಿಮ ಶ್ರೀರಂಗನಾಯಕಗೆ ।
ಮಂಗಳ ಅಂಗನಾಕುಲಶಿರೋಮಣಿಗೆ ॥
ಮಂಗಳಗಂಗೆಯ ಪಡೆದ ಪಾವನಗೆ ।
ಮಂಗಳವರದ ಕುರಂಗಲೋಚನೆಗೆ ।
ಮಂಗಳ ಸತ್ಯಭಾವಕಿಗೆ ॥ ಶೋಭಾನೆ ॥೫॥

**ಯಕ್ಷಗಾನ ಜಾಂಬವತಿ ಕಲ್ಯಾಣ ಮುಗಿದುದು**

**ರಾಗ ಪಂಚಾಗತಿ ಮಟ್ಟೆತಾಳ**

ಯಾರೆಲೋ ಬಂದ ವೀರ । ನೆನ್ನ ಠಾವಿಗೆ ॥
ಮಾರಹರನಿಗೊಮ್ಮೆ ಬರಲು । ತೀರದಿಲ್ಲಿಗೆ ॥
ಚೋರ ನಿನ್ನ ಬಲದ ಮೀಟ । ತೋರಿಸೆನುತಲಿ ॥
ಕಾರಿ ಕೆಂಡಗಂಗಳಿಂದ । ಸಾರೆನುತ್ತಲಿ ॥೧೨೧॥

ಎಂದ ನುಡಿಯ ಕೇಳ್ದು ಹರಿಯು । ನಿಂದು ಪೇಳ್ದನು ॥
ಬಂದು ಚೋರತನದಿ ಮಣಿಯ । ತಂದ ವೀರನು ॥
ಕುಂದದಿದಿರು ನಿಲ್ಲೆನುತ್ತ । ಲೊಂದು ಶರವನು ॥
ಮಂದಹಾಸದಿಂದಲೆಸೆಯೆ । ತರಿವುತೆಂದನು ॥೧೨೨॥

ಸ್ಥಿರವು ಕಾಯವೆನಗೆ ಕೇಳು । ನರನೆ ನಿನ್ನಯ ॥
ಶರಗಳಿಂದಲಾಪುದೇನು । ಮರುಳೆ ತರಣಿಯ ॥
ತರುಣನಿರ್ಪ ಬಳಿಗೆ ನಿನ್ನ । ನಿರದೆ ನಿಮಿಷದಿ ॥
ತೆರಳಿಚುವೆನೆನುತ್ತ ಸರಳ । ಸುರಿದ ರೋಷದಿ ॥೧೨೩॥

ಬರುವ ಶರವ ತರಿವುತಾಗ । ಹರಿಯು ಪೇಳ್ದನು ॥
ಸರಸಿಜಾಪ್ತನಣುಗನಿರ್ಪ । ಪುರಕೆ ಯೋಗ್ಯನು ॥

ಕರಡಿ ನಿನ್ನ ಕಳುಹಿಸುವೆನೆ । ನುತ್ತ ಭರದಲಿ ॥
ಮುರವಿರೋಧಿಯೆನಲಿಕಿಟ್ಟ । ಭಾರಿ ಗದೆಯಲಿ ॥೧೨೪॥

**ರಾಗ ಭೈರವಿ ಭೋಗಷಟ್ಪದಿ**

ಇಟ್ಟ ಭಾರಿ ಗದೆಯ ತರಿದು ।
ದುಷ್ಟ ಜಾಂಬವಂತಗೆಂದ ।
ಗಟ್ಟಿಯೆನುತ ಶಿಲೆಗೆ ತಲೆಯ ಕುಟ್ಟಿದಂದದಿ ॥
ಸಿಟ್ಟಿನಿಂದ ಬಂದು ಕೆಣಕಿ ।
ಕೆಟ್ಟು ಹೋಗಬೇಡೆನುತ್ತ ।
ಸೃಷ್ಟಿಗೊಡೆಯ ಕ್ರೂರ ಶರವ ಬಿಟ್ಟನಾತಗೆ ॥೧೨೫॥

ನೀಲಗಾತ್ರ ಕೇಳು ನಿನ್ನ ।
ಕೋಲಿಗಾನು ಬೆದರ್ವುದುಂಟೆ ।
ತೋಳ ಬಲುಹ ನೋಡೆನುತ್ತ ಸೀಳಿ ಶರವನು ॥
ಬಾಲದಿಂದ ಬಡಿವೆ ನಿನ್ನ ।
ತಾಳಿಕೊಳ್ಳೆನುತ್ತ ಕಿನಿಸ ।
ತಾಳಿ ತರುವ ಮುರಿದು ಹರಿಯ ಮೇಲೆ ಹೊಡೆಯಲು ॥೧೨೬॥

ವೃದ್ಧ ಕೇಳೊ ತರುಗಳೆನ್ನ ।
ಹೊದ್ದಬಲ್ಲಿತೇನೊ ಮಲ್ಲ ।
ಯುದ್ಧದಲ್ಲಿ ನಿನ್ನ ಧರೆಗೆ ಹೊದ್ದಿಸುವೆನದು ॥
ಸಿದ್ಧವೆಂದ ಹರಿಯ ನುಡಿಯ ।
ಕೇಳ್ದು ಜಾಂಬವಂತನಾಗ
ಎದ್ದು ಮುಷ್ಟಿಯಿಂದಲವನು ಗುದ್ದೆ ಕೃಷ್ಣಗೆ ॥೧೨೭॥

**ರಾಗ ಘಂಟಾರವ ಅಷ್ಟತಾಳ**

ಚಿತ್ತವಿಸ್ಯೆ ಪರೀಕ್ಷಿತ ಭೂಪ । ನಿನ್ನ ।
ಪೆತ್ತಯ್ಯನ ಮಾತುಳ ಕೋಪ ॥
ವೆತ್ತು ಅದ್ರಿಗೆ ಸಿಡಿಲೆರಗಿದ । ತೆರ ।
ದೊಳ್ತಿವಿಯಲುಧರೆಗುರುಳಿದ ॥೧೨೮॥

ತರಹರಿಸುತಲೆದ್ದು ಜಾಂಬವ । ರೋಷ ।
ಧರಿಸಿ ಬರಲು ಕಂಡು ಮಾಧವ ॥
ಸರಿಯಾಗಿ ಮಲ್ಲಯುದ್ಧದಿ ನಿಂದು । ಕಾದೆ ।
ಸುರರಭ್ರದಲಿ ಪೊಗಳಿದರಂದು ॥೧೨೯॥

ಹೀಗೆ ಕಾದಲು ಅಷ್ಟವಿಶಂತಿ । ದಿನ ।
ಸಾಗಲು ಕೃಷ್ಣನ ಕರಹತಿ ॥
ಗಾಗ ಸೋಲುತ ಋಕ್ಷಾಧಿಪ । ತಾ ।
ನಾಗಲಿಂತೆಂದ ಮನದ ತಾಪ ॥೧೩೦॥

**ರಾಗ ಸಾಂಗತ್ಯ ರೂಪಕತಾಳ**

ಹರ ಹರ ತಾನಿಷ್ಟು ಯುಗ ಪರಿಯಂತವು ।
ಪರರ ಕಯ್ಯಲಿ ಸೋತುದಿಲ್ಲ ॥
ವರ ಸತ್ತ್ವ ತಗ್ಗಿತು ಭುಜಬಲ ಹಿಂಗಿತು ।
ನರರಂದದವನೀತನಲ್ಲ ॥೧೩೧॥

ತ್ರೇತಾಯುಗದೊಳೆನಗಿದಿರು ನಿಲ್ಲುವರನ್ನು ।
ಈ ತೆರದೊಳು ಕಾಣೆನಿಂದು ॥
ಸೋತೆ ನಾನೀ ಯುಗದೊಳಗಿವನ್ಯಾರೆಂದು ।
ನಾ ತಿಳಿಯೆನು ಅಕಟಕಟ ॥೧೩೨॥

ಜಾಣ ನೀನ್ಯಾರೆನ್ನ ಗೆಲಿದ ಧೀರನು ಲಕ್ಷ್ಮೀ ।
ಪ್ರಾಣೇಶನಾದ ಶ್ರೀಹರಿಯೊ ॥
ಸ್ಥಾಣುವೆನಿಪ ಮಹೇಶ್ವರನೊ ಪೇಳೆನ್ನೊಳು ।
ವಾಣಿಯರಸ ಕಮಲಜನೊ ॥೧೩೩॥

ಎಂದು ದುಃಖಿಸುತಲಿ ಜಾಂಬವ ಮನದೊಳು ।
ನೊಂದುಕೊಳ್ಳುತಲಾಗಳಂದು ॥
ಇಂದಿರೆಯರಸ ರಾಘವನಂದ ಕಾಣಿಸೆ ।
ನಿಂದೆರಗುತ ಸ್ತುತಿಸಿದನು ॥೧೩೪॥

**ವಾರ್ಧಕ**

ಜಯ ದಶರಥನ ಬಾಲ ಮುನಿಯಜ್ಞಪರಿಪಾಲ ।
ಜಯ ತಾಟಕೀಮಥನ ಜಯ ಅಹಲ್ಯೋದ್ಧರಣ ।
ಜಯ ಜನಕಜಾರಮಣ ವಿಮಳರತ್ನಾಭರಣ ಜಯ ತ್ರಿಶಿರಖರನಾಶನ ॥
ಜಯ ಶಬರಿಯಘನಾಶ ತರಣಿಯಾತ್ಮಜ ಪೋಷ ।
ಜಯ ಸುರಪಸುತಶಿಕ್ಷ ಭಕ್ತಜನಸಂರಕ್ಷ ।
ಜಯ ದೈತ್ಯಕುಲಕಾಲ ಜಯ ವಿಭೀಷಣಪಾಲ ಜಯ ಜಯೆಂದೆರಗಿರ್ದನು ॥೧೩೫॥

**ರಾಗ ಕೇದಾರಗೌಳ ಅಷ್ಟತಾಳ**

ಇಂತು ಸಂಸ್ತುತಿಸುವ ಕಮಲಜಸುತ ಜಾಂಬ | ವಂತನನೀಕ್ಷಿಸುತ ||
ಸಂತಸದಲಿ ಪಿಡಿದೆತ್ತಿ ಬೋಳೈಸುತ್ತ | ಲಿಂತೆಂದ ರಘುನಾಥನು ||೧೩೭||

ಇನಿತು ಕಾದಿದೆನೆಂದು ಮನದಿ ದುಃಖಿಸದಿರು | ಕಿನಿಸಿಲ್ಲ ಕೇಳು ನಾನು ||
ಸನುಮತದಲಿ ಬಂದ ಕಾರ್ಯವೇನುಸಿರಲಿ | ಮಣಿಯಿಂದ ಜನರೆನ್ನನು ||೧೩೭||

ದೂರುವರದರಿಂದಲೊಯ್ಯೆ ನಾನಿಲ್ಲಿಗೆ | ಘೋರನೈತಂದೆನೆಂಬ ||
ಚಾರು ಸುದರ್ಶನಧಾರಿಯ ನುಡಿ ಕೇಳಿ | ವೀರ ಜಾಂಬವನೆಂದನು ||೧೩೮||

**ರಾಗ ಆನಂದಭೈರವಿ ಏಕತಾಳ**

ಪಾಹಿ ಪಂಕಜನೇತ್ರ ಸುರಮುನಿಸ್ತೋತ್ರ |
ತ್ರಾಹಿ ಸಜ್ಜನಪೋಷ ರಮೆಯ ಪ್ರಾಣೇಶ || ಪಲ್ಲವಿ ||

ನಿನ್ನ ಮಹಿಮೆಯನ್ನು ಅರಿಯದೆ ನಾನು |
ಪನ್ನತಿಕೆಯೊಳಿಂದು ಕಾದಿದೆ ದಯಸಿಂಧು ||೧೩೯||

ಎನ್ನಪರಾಧವ ಕ್ಷಮಿಸಿಕೊ ದೇವ |
ಕನ್ಯಾರತ್ನನೊಂದನೀವೆ ಸಚ್ಚಿದಾನಂದ ||೧೪೦||

ಎಂದು ಜಾಂಬವ ತಾನು ಸಂಭವೆಯಳನು |
ಮಂದರಧರಗಿತ್ತ ಸುತೆ ರತ್ನಸಹಿತ ||೧೪೧||

**ಭಾಮಿನಿ**

ಉತ್ತರೆಯ ಸುತ ಕೇಳು ತನ್ನಯ |
ಪುತ್ರಿಯಹ ಜಾಂಬವತಿಯೆಂಬಳ |
ಇತ್ತನಾ ಶ್ರೀಹರಿಗೆ ಮಣಿ ಸಹ ವಿವಿಧ ವಸ್ತುಗಳ ||
ಮತ್ತೆ ಪೂಜಿಸಿದನು ಪರಾತ್ಪರ |
ವಸ್ತುವನು ಭಕ್ತಿಯಲಿ ಬಲಿಮುಖ |
ನತ್ತಲಾದುದ ಪೇಳ್ವೆ ಚಿತ್ತವಿಸೆಂದನಾ ಮುನಿಪ ||೧೪೨||

**ರಾಗ ಕಾಂಭೋಜಿ ರೂಪಕತಾಳ**

ಬಿಲದ ಬಾಗಿಲಲ್ಲೈದೆ | ನೆಲಸಿಕೊಂಡಿಹ ಯದು |
ಬಲವು ತಮ್ಮಯ ಮನದಿ | ಹಲವು ಯೋಚಿಸುತ ||
ಜಲಜದಳಾಕ್ಷ ಈ | ನೆಲಗ್ಯಾಕೆ ಬಾರದೆ |
ತಳುವಿದನೆಂಬುದ | ತಿಳಿಯೆವೆಂದೆನುತ ||೧೪೩||

ಎರಗಿ ನೋಡುತ ಹರಿ । ವಿರಹ ದುಃಖದಿ ಮನ ।
ಕರಗುತ ತಮ್ಮೊಡ । ನರುಹಿದಂದವಧಿ ॥
ಸರಿಯಾದುದಿಲ್ಲೇ ನಾ । ವಿರುವುದೇತಕೆ ಪೋಗ್ವ ।
ಪುರಕೆನೆ ಸಾತ್ಯಕಿ । ಅರುಹಿದ ನಯದಿ ॥೧೪೪॥

ಕೆಟ್ಟ ದ್ರೋಹಗಳಿವು । ದುಷ್ಟಮರ್ದನನನ್ನು ।
ಬಿಟ್ಟು ಪೋದರೆ ನಮ್ಮ । ಪಟ್ಟಣದೊಳಗೆ ॥
ಶ್ರೇಷ್ಠ ವಸುದೇವಗೆ । ಗುಟ್ಟೇನನೆಂಬಿರಿ ।
ಒಟ್ಟಾಗಿ ಸತಿಯರು । ಭೀಷ್ಮಕಸುತೆಗೆ ॥೧೪೫॥

ಹವಣಿಪುದಿರಲೀ ದೇ । ವಕಿ ಕಂಡು ತನ್ನಯ ।
ಕುವರನೆಲ್ಲಿಹನೆಂದು । ಕೇಳಲಾ ಸತಿಗೆ ॥
ಪವಣಿಪುದೇನೆನ್ನುತವರೆಲ್ಲ ಚಿಂತಿಸು ।
ತವಿಳಂಬದಿಂ ಬಂದ । ರಂದು ದ್ವಾರಕೆಗೆ ॥೧೪೬॥

**ಕಂದ**

ಅತಿ ದುಗುಡದಿ ಬಹ ಸಾತ್ಯಕಿಯಂ ।
ಸತಿಚಿಂತಾಮಣಿಯಹ ದೇವಕಿ ಕಾಣುತ್ತಂ ॥
ಸುತನಾವೆಡೆಗೈದಿದನೆ ।
ನ್ನುತೆ ಶೋಕಗೊಳುತ್ತ ಭಕುತಿಯಿಂದವನೊಡನೆಂದಳ್ ॥೧೪೭॥

**ರಾಗ ನೀಲಾಂಬರಿ ಏಕತಾಳ**

ಕಂದನಾವೆಡೆ ಪೇಳಯ್ಯ । ಸಾತ್ಯಕಿ ನಿನ ।
ಗಿಂದು ದುಗುಡವೇನಯ್ಯ ॥
ಮಂದರಧರ ಅರ । ವಿಂದನಾಭನ ಕಾಣ ।
ದಿಂದೆನ್ನ ಮನದೊಳು । ಹೊಂದಿರ್ಪುದತಿ ಕ್ಲೇಶ ॥೧೪೮॥

ಸುತಶಿರೋಮಣಿರನ್ನನು । ನಿಮ್ಮೆಲ್ಲರ ।
ಜತೆಗೂಡಿ ಪೋದವನು ॥
ಅತಿ ದಿನವಾಯ್ತೆನ್ನ । ರತುನವ ಕಾಣದೆ ।
ಪಥದೊಳಗಿಹನೆ ವಾ । ರತೆಯ ಪೇಳೆನಲೆಂದ ॥೧೪೯॥

**ರಾಗ ಸಾರಂಗ ಅಷ್ಟತಾಳ**

ಚಿತ್ತವಿಸಲು ಬೇಕಮ್ಮ । ನಾ ಪೇಳುವ ।
ವರ್ತಮಾನಗಳನು ನಿಮ್ಮ ॥

ಪುತ್ರನು ಯದುಬಲ । ಮೊತ್ತ ಸಹಿತ ಪೋಗಿ ।
ದೈತ್ಯ ತಡೆಯೆ ಪುರು । ಷೋತ್ತಮ ಜಯಿಸಿದ ॥೧೫೦॥

ನಡೆಯಲು ಪಥವಿಡಿದು । ವನದೊಳೊಂದು ।
ಕಡು ಘೋರ ಬಿಲ ತೋರ್ದುದು ॥
ಜಡಜಾಕ್ಷ ನಮ್ಮೊಳು । ನುಡಿದ ದ್ವಾದಶದಿನ ।
ನಡೆಯುವ ಮುನ್ನ ತಾ । ದೃಢದೊಳು ಬಹೆನೆಂದು ॥೧೫೧॥

**ಭಾಮಿನಿ**

ಮಂದಗಾಮಿನಿ ಕೇಳು ಶ್ರೀಗೋ ।
ವಿಂದನಾ ಗುಹೆಯೊಳಗೆ ಹೊಕ್ಕನು ।
ಸಂದುದಾಜ್ಞಾಪಿಸಿದ ದಿನವೈತಂದೆವಿಲ್ಲಿಗೆನೆ ॥
ನಿಂದವಳು ಸಿಡಿಲೆರಗಿದಂದದಿ ।
ನೊಂದು ಮೂರ್ಛಿತಳಾಗಿ ಬಹು ವಿಧ ।
ದಿಂದ ಮರುಗಿದಳಧಿಕ ಶೋಕಾತುರದಿ ಕಳವಳಿಸಿ ॥೧೫೨॥

**ರಾಗ ತೋಡಿ ಆದಿತಾಳ**

ಎಲ್ಲಿಗೈದಿದೆ ರಂಗಯ್ಯ । ನಿನ್ನ ಕಾಣದೆ ।
ತಲ್ಲಣಿಸುವುದು ಕಾಯ ॥
ಫುಲ್ಲಲೋಚನೆ ರುಗ್ಮಿಣಿ । ಕ್ಷಣಾರ್ಧ ಬಿಟ್ಟು ।
ನಿಲ್ಲಳು ನಾರೀಮಣಿ ॥೧೫೩॥

ಇಂದುಸಮಾನವದನ । ದಂತಪಂಕ್ತಿಗ ।
ಳಿಂದ ಶೋಭಿಪ ರದನ ॥
ಕುಂದದೆ ತೋರು ಬಂದು । ಎನ್ನಯ ಮುದ್ದು ।
ಕಂದ ಕಾರುಣ್ಯಸಿಂಧು ॥೧೫೪॥

ತರಳತನದಿ ಚಂದ್ರನ । ಪಿಡಿದ ಮೃದು ।
ಕರವನ್ನು ತೋರೋ ಚೆಣ್ಣ ॥
ದುರುಳೆ ಪೂತನಿಯಸುವ । ಹೀರಿದ ಬಾಯೊಳ್ ।
ಕರೆದು ತೋರಿಸೊ ಮೋಹನ್ನ ॥೧೫೫॥

ಯಾವಲ್ಲಿಗೈದಿದನೆಂದು । ಪೇಳುವರಿಲ್ಲ ।
ಈ ವಿಧಿಯಾಯಿತೆಂದು ॥
ಸಾವಿರ ಗುಣ ವರ್ಣಿಸಿ । ಮರುಗ ವಸು ।
ದೇವನದನು ಲಾಲಿಸಿ ॥೧೫೬॥

**ಭಾಮಿನಿ**

ವಲ್ಲಭೆಯ ಶೋಕವನು ಲಾಲಿಸಿ ।
ಬಲ್ಲಿದನು ವಸುದೇವ ತವಕದಿ ।
ನಿಲ್ಲದಾಕ್ಷಣ ಬಂದಿದೇನೆಂದೆನುತ ನೆಗಹುತಲಿ ॥
ಫುಲ್ಲನೇತ್ರೆಯ ನಯನವಾರಿಯ ।
ಸಲ್ಲಲಿತಕರದಿಂದಲೊರಸುತ ।
ಮೆಲ್ಲನುರೆ ಮೆಯ್ದಡವಿ ತಕ್ಕಯಿಸುತ್ತಲಿಂತೆಂದ ॥೧೫೭॥

**ರಾಗ ಮಾರವಿ ಏಕತಾಳ**

ತುಂಬೆಗುರುಳೆ ಪ್ರತಿ । ರಂಭೆ ನೀ ಕೇಳಲೆ । ಅಂಬುಜದಳನಯನೆ ॥
ಡೊಂಬಿಯಿದ್ಯಾತಕೆ । ಶಂಬರಾರಿಯ ಪಿತ । ನೆಂಬವನವ ನರನೆ ॥೧೫೮॥

ತೆಗೆ ತೆಗೆ ಶೋಕವ । ಸುಗುಣೆ ಕೇಳೀರೇಳು । ಜಗದೋದ್ಧಾರಕಗೆ ॥
ಮಿಗೆಯಿದಿರಹ ವೈ । ರಿಗಳಾರವನೊಳು । ಖಗವಾಹನನೆಲಗೆ ॥೧೫೯॥

ತರಳತನದೊಳಾ । ದುರುಳೆ ಪೂತನಿಯ । ಹರಣಗೊಂಡವನವನು ॥
ಧರೆಯ ಭಾರವ ಪರಿ । ಹರಿಸೆ ಜನಿಸಿರುವ । ನೆರೆ ಮರುಗದಿರಿನ್ನು ॥೧೬೦॥

**ರಾಗ ಸವಾಯ್ ಆದಿತಾಳ**

ಇಂತೆನುತ ವಸುದೇವನು ಕಾಂತೆಯ । ಸಂತಯಿಸಲು ಗೋಪ ॥
ಕಾಂತೆಯರೆಲ್ಲರು ನೆನೆವುತ ಕೃಷ್ಣನ । ಚಿಂತಿಸಿದರು ಕೇಳೈ ಭೂಪ ॥೧೬೧॥

**ರಾಗ ನೀಲಾಂಬರಿ ರೂಪಕತಾಳ**

ಲಲನೆ ನಾನೇನ ಮಾಡಲಿ । ಜಲಜಾಕ್ಷನ ಶ್ರೀಪದಯುಗ ।
ನಳಿನವನು ಬಿಟ್ಟೆಂತಾವ್ । ನಿಲುವುದು ಈ ಪುರದಿ ॥
ಬಲಿಮರ್ದನ ಪೋದವ ಈ । ನೆಲೆಗ್ಯಾತಕೆ ತಾ ಬಾರದೆ ।
ಕುಳಿತೆಲ್ಲಿಹನೆಂಬುವ ಪರಿ । ತಿಳಿದರುಹುವರಿಲ್ಲ ॥೧೬೨॥

ರಂಗನ ಸುಂದರ ವದನವು । ಕಂಗೊಳಿಸದೆಯಿಹ ಕಾರಣ ।
ಭಂಗದೊಳಗಜ ಶರಕೆ । ನ್ನಂಗವು ಕೇಳ್ ಸೂರೆ ॥
ತುಂಗಕುಚವ ಬಲ್ಪಿಡಿದಾ । ಲಿಂಗಿಸಿ ಸುರತ ಕಲಾಪವ ।
ಸಂಗವ ಮರೆತಿಹ ವ್ಯಥೆ । ಗಂಗಾಧರ ಬಲ್ಲ ॥೧೬೩॥

ಬೆಟ್ಟದ ಮರನೇರುತ ಕೈ । ಬಿಟ್ಟಂತಾದುದು ದ್ವಾರಕ ।
ಪಟ್ಟಣದಧಿಪತಿಯಾದ ಶ್ರೀ । ಕೃಷ್ಣನ ಬಿಟ್ಟೆಂತು ॥

ಸೃಷ್ಟಿಯೊಳಿಹೆ ಚೆಲುವೆಯೆ ನೀ । ತಟ್ಟನೆ ಪೇಳೆಂದೆನಲಿ ।
ಕೃಷ್ಣರೊಳೊರ್ವಳು ತನ್ನಯ । ಗುಟ್ಟನು ತಿಳುಹಿದಳು ॥೩॥

**ರಾಗ ಕಾಂಭೋಜಿ ಅಷ್ಟತಾಳ**

ಚೋದಿಗವೇನೆ ನೀನೆಂದ ಮಾತುಗಳು ।
ಆದಿಮೂರುತಿಯ ಕಾಣದೆ ಮನಸಿನೊಳು ॥ ಪಲ್ಲವಿ ॥

ಕಾಂತನ ಬರ ಹಾ । ರೈಸುತಲಿರುತಿರೆ ।
ವಾರಿಜಾಕ್ಷನು ತಾ ಬಂದು ॥೧॥

ಸರಸಗಳಾಡುತ ಬಲು । ಎರಕದೊಳೆನಗತಿ ।
ಹರುಷವ ತೋರುವ ಮುದದಿಂದ ॥೨॥

ಚೆಲುವನು ಕಾಮಿತ । ಫಲವನು ಸಲಿಸುತ ।
ನಿಲದೈದಿದ ಮುದದಿಂದ ॥೩॥

ನಿಶಿಯೊಳು ಶ್ರೀಹರಿ । ಬಂದಿಹನೆಂಬುದ ।
ಕೇಳುತ ಪೇಳ್ದಳು ಮುದದಿಂದ ॥೪॥

**ರಾಗ ಸಾವೇರಿ ಆದಿತಾಳ**

ಸಾಕು ಇದೇನು । ಬಡಿವಾರ ನೀರೆ । ಸಾಕು ಇದೇನು ॥
ಶ್ರೀಕರ ರಂಗ ನಿ । ನ್ನಾ ಕಡೆ ಬಂದನೆಂದು ॥ ಪಲ್ಲವಿ ॥

ನಿನ್ನೆ ರಾತ್ರೆಯೊಳು । ಪನ್ನಗಶಯನನೆಂ ।
ದೆನ್ನಯ ರಮಣನ । ಮನ್ನಿಸಿ ನೆರೆದೆನು ॥೧॥

ಕಡೆಗೆ ನೋಡೆ ಕೈ । ಪಿಡಿಯೆ ಕಾಂತನು ।
ಮಿಡುಕಿದೆ ಮನದೊಳು । ಕಡು ಭಯದಿಂದಲಿ ॥೨॥

ನೆನೆಸುವ ಕಾರಣ । ಕನಸಿಲಿ ತೋರುವ ।
ಮನಸಿಜಪಿತ ಕೇಳ್ । ವನಿತೆಯೆಂಬುದು ಸಾಕು ॥೩॥

**ವಾರ್ಧಕ**

ಭೂಪಾಲ ಲಾಲಿಸೀ ಪರಿಯಿಂದ ಶ್ರೀಹರಿಯ ।
ರೂಪುಗುಣಸಂಗಮಂ ಗೋಪವನಿತೆಯರು ಸಂ ।
ತಾಪದಿಂ ನೆನೆವುತಂ ತಾಪ ಮಯಣವ ಹೊತ್ತಿ ನೀರಾಗಿಸುವ ತೆರದೊಳು ॥
ಆ ಪೂಶರಂ ಬರೆದ ರೂಪು ಜಿತ ಸುರತಸ ।

ಲ್ಲಾಪ ಬೊಂಬೆಯ ತೆರದೊಳಾ ಚಪಲನೇತ್ರೆಯರ್ ।
ತಾಪಸರ ಮನದೊಳಿರಲಾ ಪತಿವ್ರತೆ ದೇವಕೀ ಪರಿಯೊಳವರ್ಗೆಂದಳು ॥೧॥

**ರಾಗ ನವರೋಜು ಆದಿತಾಳ**

ಕಾಂತೆಯರ್ ಪೇಳ್ವುದ ಕೇಳಿ । ಗುಣ ।
ವಂತೆಯರ್ ಧೈರ್ಯವ ತಾಳಿ ॥
ಚಿಂತಿಪುದ್ಯಾತಕೆ । ಸಂತಸದಲಿ ಕ್ಷಣ ।
ವಂತರಿಸದೆ ಬಹ । ನಂತಮಹಿಮನವ ॥೧॥

ತುರುವ ಕಾವುತ ವನದಿ । ಇರೆ ।
ವರ ಪೆರ್ಬಾವಿನ ತೆರದಿ ॥
ದುರುಳನಘಾಸುರ । ಭರದಿ ನುಂಗಿದಡವ ।
ನುರವ ಬಗಿದು ಕಾ । ಯ್ದುರು ಕೃಪಾಕರನು ॥೨॥

ತವಕದೊಳೆಲ್ಲರು ಪೋಗಿ । ಪರ ।
ಶಿವೆಯ ಪಾದಕೆ ಬಾಗಿ ॥
ನವವಿಧದಲಿ ಪೂ । ಜಿಸುವೆವು ನಾವೆಂ ।
ದವರೆಲ್ಲರನಾ । ಯುವತಿ ಸೈರಿಸಿದಳು ॥೩॥

**ಭಾಮಿನಿ**

ಕೇಳು ಭೂವರ ದೇವಕಿಯು ವರ ।
ಬಾಲೆಯರು ಪುರಜನರು ಸಹಿತಲಿ ।
ಶೈಲನಂದನೆಯಂಘ್ರಿಕಮಲವ ಪೂಜಿಸುವ ಮನದಿ ॥
ಲೀಲೆಯಿಂದಲಿ ಗಂಧ ಕುಂಕುಮ ।
ಮಾಲೆಯಕ್ಷತೆ ಸುಮಗಳಿಂದಲಿ ।
ಫಾಲನೇತ್ರನ ಸತಿಯು ಪೂಜಿಸುತೆರಗಿ ಪೇಳಿದರು ॥೧॥

**ರಾಗ ಢವಳಾರ ತ್ರಿವುಡೆತಾಳ**

ಪಾಲಿಸು ಪಾರ್ವತಿ ಪರಮೇಶ್ವರಿ ।
ಲೋಲಾಕ್ಷಿಯೆ ಗೀರ್ವಾಣವಿನುತೆ ಮುನಿ ।
ಜಾಲವಿನಮಿತೆ ಗಿರಿಜಾತೆ ॥ ಗಿರಿಜಾತೆ ಹರಿವಾಹಿನಿ ಭಕ್ತರು ।
ಪೇಳುವ ಬಿನ್ನಪವ ನವಧರಿಸು ॥೧॥

ಶುಂಭಾಂತಕಿ ತ್ರೈಜಗದ ಕು ।
ಟುಂಬಿನಿ ಮಮ ಶಂಕವಿನಾಶಿನಿ ।

ಕಂಬುಕಂಧರನ ಪ್ರಿಯೆ ಗೌರಿ ॥ ಪ್ರಿಯೆ ಗೌರಿ ರಕ್ಷಿಸು ಕೃಷ್ಣನ ।
ಬೆಂಬಿಡದಿಂದು ಕೃಪೆಯಿಂದ ॥೨॥

ತಾಯೆ ನೀ ಕರುಣಿಸದುಳಿದರೆ ।
ಕಾಯುವರನ್ಯರ ನಾವ್ ಕಾಣೆವು ।
ತೋಯಜಾಂಬಕಿಯೆ ಜಗನ್ಮಯೆ ॥ ಜಗನ್ಮಯೆ ಮರೆಹೊಕ್ಕೆವು ನಿನ್ನನು ।
ಕಾಯೆ ಶ್ರೀವರನ ದಯದಿಂದ ॥೩॥

**ರಾಗ ಕಾಪಿ ಅಷ್ಟತಾಳ**

ಈ ತೆರದೊಳು ಅಂಬಿಕೆಯೊಳು । ನಾನಾ ।
ರೀತಿಯಿಂದಲಿ ಬೇಡಿಕೊಳಲು ॥
ಭೂತಳದೊಳು ಜಗ । ನ್ಮಾತೆಯ ಪದಯುಗ ।
ಓತು ನಂಬಿದವರಿಗೆ । ಭೀತಿ ಬರುವುದುಂಟೆ ॥೧॥

ಗಿರಿರಾಜಸುತೆಯು ಪೂಜಿಸಿದ । ಫಲ ।
ಭರದಿ ತೋರುವ ತೆರದಿಂದ ॥
ಗರುಡವಾಹನನಾಗಿ । ಹರಿ ಜಾಂಬವತಿ ರತ್ನ ।
ವೆರಸಿ ಬಂದನು ಬೇಗ । ಪರಮ ದ್ವಾರಕೆಗಾಗ ॥೨॥

ಚಿತ್ತಜನಯ್ಯನ ಬರವ । ಕಾಣು ।
ತಿತ್ತ ತೋಷದಿ ವಸುದೇವ ॥
ಕೆತ್ತಿಗೆ ನವರತ್ನ । ಮುತ್ತಿನ ತೋರಣ ।
ವಿತ್ತಂಡಕೆಸೆಯಲು । ಅತ್ಯಾನಂದಗಳಿಂದ ॥೩॥

ಬಂಧುಸಂತತಿ ತಿಳುಕೊಂಡು । ಮುದ ।
ದಿಂದ ಕೃಷ್ಣನ ಇದಿರ್ಗೊಂಡು ॥
ಸಂದ ಜನ್ಮವ ನಾ । ವಿಂದು ಪಡೆದೆವೆಂದು ।
ಕುಂದದ ಹರುಷದಾ । ನಂದಭಾಷ್ಪಗಳಿಂದ ॥೪॥

ವಸುದೇವ ದೇವಕಿಗೆರಗಿ । ಅತಿ ।
ಕುಶಲದಿ ನಮಿಸಿದ ಬಲಗೆ ॥
ಎಸೆವ ಬಾಂಧವರ ಮ । ನ್ನಿಸೆ ಆರತಿಯ ತಂದು ।
ಶಶಿಮುಖಿಯರು ಮತ್ತೆ । ಬಿಸಜಾಕ್ಷ ಸಂತಯ್ಸೆ ॥೫॥

**ರಾಗ ಮುಖಾರಿ ಏಕತಾಳ**

ಬೇಟೆಗೆನುತ್ತ ನಡೆದನಂದು । ಆ ಪ್ರಸೇನ ।
ಬೇಟೆಗೆನುತ್ತ ನಡೆದನಂದು ॥ ಪಲ್ಲವಿ ॥

ಸಾಟಿಯಿಲ್ಲದ ಬಲು ಕಾಟಕಮಂದಿಯ ।
ಕೂಟದಿ ಘನತರ ಈಟಿಯವರು ಸಹ ॥ ಅ ॥

ಕಂಡೊಂದು ಅಡವಿಯ ಪೊಕ್ಕು । ಬಲೆಯನೊಡ್ಡಿ ।
ಕೊಂಡು ಮೃಗವ ಮದದ ಸೊಕ್ಕು ॥
ತಂಡತಂಡವಿಹ । ಹಿಂಡನೀಕ್ಷಿಸಿ ಈಟಿ ।
ಗೊಂಡಿರುವುತ ಮೃಗ । ದಿಂಡುದರಿವುತ ॥೫೯॥

ತರತರದಲಿ ಮೃಗವ ಕೊಂದು । ಪ್ರಸೇನನು ।
ಸರಸದಿ ಮುಂದೆ ಬರಲ್ಕಂದು ॥
ವರಕೇಸರಿ ಬರೆ । ಸರಳೆಸೆಯಲ್ಕೀ ।
ಕೆರಳಿ ಬಂದಿವನ । ಕೊರಳ ಮುರಿದುದು ॥೬೦॥

ಮೃಗರಾಜನಾ ಪ್ರಸೇನನನು । ಸಂಹರಿಸುತ್ತ ।
ಜಗಜಗಿಸುವ ರತ್ನವನು ॥
ಮಿಗೆ ಕೊಂಡೊಯ್ಯಲು । ವಿಗಡ ಋಕ್ಷಾಧಿಪ ।
ಮೃಗರಾಜನ ಕಂ । ಡೊಗುಮಿಗೆ ಮಣಿಯೆ ॥೬೧॥

**ಭಾಮಿನಿ**

ಅರಸ ಕೇಳಿಂತಾ ಪ್ರಸೇನನ ।
ಕೆರಳಿ ಕೊಂದಾ ಸಿಂಹನನು ಬಳಿ ।
ಕಿರದೆ ಜಾಂಬವ ತರಿದು ಮಣಿ ಸಹಿತೈದಿದನು ಬಿಲವ ॥
ಚರರು ಕಾಣದೆ ಆ ಪ್ರಸೇನನ ।
ಅರಸಿ ಕಂಡರು ಮರಣವಿಡಿದಾ ।
ಇರವ ಕಾಣುತ ಮರಳಿ ಪೂರ್ವಜನೆಡೆಗೆ ಅರುಹಿದರು ॥೬೨॥

**ರಾಗ ಮಧುಮಾಧವಿ ಅಷ್ಟತಾಳ**

ಲಾಲಿಸು ಸತ್ರಾಜಿತ ಭೂಪ । ಇಂದಿನ ವಾರ್ತೆ ।
ಜಾಲವಲ್ಲೈ ಕೀರ್ತಿ ಕಲಾಪ ॥
ಪೇಳುವುದೇನ್ ಗುಣ । ಶೀಲ ನಿನ್ನನುಜನು ।
ಲೀಲೆಯಿಂದಲಿ ಶಬ । ರಾಳಿಯ ಕೂಡುತ ।

ಮೇಲೆ ಬೇಟೆಗೆನು । ತಾಲೋಚಿಸುತಲಿ ।
ಪಾಳಯ ಸಹಿತಲಿ । ಕಾಲನ ತೆರದಿ ॥೬೩॥

ಅಡವಿಗೆ ಪೋಗಿ ಬೇಟೆಯ ವೇಳೆ । ಆ ದೆಸೆಯಲ್ಲಿ ।
ನಡೆದ ವೃತ್ತಾಂತಗಳನು ಪೇಳೆ ॥
ಒಡಲೊಳು ಕಡು ಭಯ । ಬಡುತಿದೆ ಅಭಯವ ।
ಕೊಡಿಸಲು ನುಡಿವೆ ಕೇಳ್ । ಬಿಡುತೆಮ್ಮನು ಮುಂ ।
ಗಡೆ ನಿನ್ನನುಜನು । ನಡೆಯಲು ಪರಿಕಿಸೆ ।
ಮಡಿದೊರಗಿಹನೈ । ಅಡವಿಯೊಳವನು ॥೬೪॥

**ಭಾಮಿನಿ**

ಚರರ ನುಡಿಯನು ಕೇಳಿದಾಕ್ಷಣ ।
ಅರಸ ಮೂರ್ಛಿತನಾಗಿ ಮಿಗೆ ಚೇ ।
ತರಿಸಿಕೊಂಡೆದ್ದಾಗಲನುಜನ ಶೀಲಗುಣಗಳನು ॥
ಮರೆತು ತಾನಿರುವಂದವೆಂತೈ ।
ಹರ ಮಹಾದೇವೆನುತ ಕರಗುತ ।
ಅರಸುತರಸುತ ಬಂದು ಕಂಡನು ವನದ ಮಧ್ಯದಲಿ ॥೬೫॥

**ಕಂದ**

ಮಡಿದನುಜನ ದೇಹವ ಕಂ ।
ಡೊಡನಾ ಸತ್ರಾಜಿತ ಭೂಪಾಲಕನಾಗಳ್ ॥
ಉಡುತತಿ ಧರೆಗುರುಳ್ವಂದದಿ ।
ಕೆಡೆದನುಜನ ಗುಣಗಳ ನೆನೆದು ಶೋಕಿಸಿದಂ ॥ ॥೬೬॥

**ರಾಗ ನೀಲಾಂಬರಿ ಏಕತಾಳ**

ಈ ರೀತಿಯ ಮರಣ ಬಂತೆ । ತಮ್ಮಾ ತಮ್ಮಾ ॥ ನಾನಿ ।
ನ್ನಾರ ಕೂಡೆ ಬಾಳಲಯ್ಯೊ । ತಮ್ಮಾ ತಮ್ಮಾ ॥
ಮಾರನ ಸ್ವರೂಪನಂತಾ । ತಮ್ಮಾ ತಮ್ಮಾ ॥ ಮೊಗ ।
ದೋರಿ ಮಾತನಾಡೆನ್ನೊಳು । ತಮ್ಮಾ ತಮ್ಮಾ ॥೬೭॥

ಯಾತಕಿನ್ನೊಳುರುಹದೆ ನೀ । ತಮ್ಮಾ ತಮ್ಮಾ ॥ ಬಂದೀ ।
ರೀತಿಯಲ್ಲಿ ಮಡಿದೆಯಲ್ಲೊ । ತಮ್ಮಾ ತಮ್ಮಾ ॥
ಈ ತೆರದಿ ಮೆಯ್ಯೊಳ್ ಗಾಯ । ತಮ್ಮಾ ತಮ್ಮಾ ॥ ಗೈದು ।
ಘಾತಿಸಿ ಪೋದವರ್ಯಾರು । ತಮ್ಮಾ ತಮ್ಮಾ ॥೬೮॥

ದಿನಪನಿತ್ತ ಮಣಿಯ ಧರಸಿ । ತಮ್ಮಾ ತಮ್ಮಾ ॥ ಬಂದೀ ।
ವನದ ಮಧ್ಯದಲ್ಲಿ ನಿನ್ನ । ತಮ್ಮಾ ತಮ್ಮಾ ॥
ತನುವ ಸೀಳಿದವರು ಯಾರು । ತಮ್ಮಾ ತಮ್ಮಾ ॥ ನಾನಿ ।
ನ್ನೆನುವುದೇನು ದೈವಗತಿಯೊ । ತಮ್ಮಾ ತಮ್ಮಾ ॥೬೯॥

**ರಾಗ ಕಾಂಭೋಜಿ ಝಂಪೆತಾಳ**

ಅಳಲಲ್ಯಾಕಿದಕಿನ್ನು ಸಹಜಾತಗಿಂದಿನಲಿ ।
ನೆಲನ ಋಣ ತೀರಿತಲ್ಲದಡೆ ।
ಇಳೆಯೊಳಗೆ ಈತನೊಳು ಕಲಹಗೈವರ ಕಾಣೆ ।
ತಿಳಿಯೆ ಮಾಧವನೆನ್ನ ಕೂಡೆ ॥೭೦॥

ಮಿತ್ರ ದಯಗೈದಿರುವ ರತ್ನವನು ಯದುರಾಜ ।
ಗಿತ್ತಡದು ಯೋಗ್ಯವೆಂದೆನುತ ॥
ಸುತ್ರಾಮವಂದಿತನು ಯತ್ನದಲಿ ಕೇಳಿಹನು ।
ಶತ್ರುವಾದನು ಅನುಜಗಾತ ॥೭೧॥

ಸಂದ ರತ್ನವು ಬಳಿಕ ಸಾಧ್ಯವಾಗುವ ಫಲವು ।
ಯೆಂದಿಗಾದರು ಇರಲು ತನಗೆ ॥
ಹೊಂದುವುದು ತನಗೆನುತ ಮನದಿ ನಿರ್ಧರಿಸಿ ನಡೆ ।
ತಂದ ಚಿಂತಿಸುತ ಅರಮನೆಗೆ ॥೭೨॥

**ಭಾಮಿನಿ**

ಧರಣಿಪಾಗ್ರಣಿ ವರಪರೀಕ್ಷಿತ ।
ದೊರೆಯೆ ಕೇಳ್ಳೈ ವರ ಸ್ಯಮಂತಕ ।
ಧರನು ಕೃಷ್ಣನ ಮೇಲೆ ಸಂಶಯಗೈದ ಭಾವವನು ॥
ಪರಮಪುರುಷನು ಅರಿತು ಮನದೊಳು ।
ತರುಣಿಯರ ಮೇಳದಲಿ ಇರುತಿರೆ ।
ಕಿರುನಗೆಯ ಸೂಸಲ್ಕೆ ರುಗ್ಮಿಣಿ ಕೇಳಿದಳು ಪತಿಯ ॥೭೩॥

**ರಾಗ ತೋಡಿ ಅಷ್ಟತಾಳ**

ಸರಸಿಜನಯನ ನೀ ಲಾಲಿಸಿಂದೀ ಪರಿ ।
ತರುಣಿಯರ್ ಮಧ್ಯದಲಿ ॥
ಕಿರುನಗೆ ಸೂಸುವ ಕಾರಣವೇನೆಂದು ।
ಅರುಹು ನೀ ಕರುಣದಲಿ ॥೭೪॥

ವಲ್ಲಭೆ ನಿನ್ನೊಳು ಪೇಳುವ ಕಾರ್ಯಗ ।
ಳಲ್ಲ ಕೇಳೆನಗೆ ನಾರಿ ॥
ಫುಲ್ಲಲೋಚನೆ ನಿನ್ನೊಳ್ ಸೊಲ್ಲಿಸಿದರೆ ಫಲ ।
ವಿಲ್ಲವೆಂದನು ಕಂಸಾರಿ ॥೭೫॥

ಹೇ ದಯಾಂಬುಧಿ ನಿನ್ನ ಮನದೊಳಗರಿತುದ ।
ಭೇದವಿಲ್ಲದೆ ಪೇಳಲು ॥
ಮೋದದೊಳರಿವೆಯೆಂಬರಸಿಗೆ ಪೇಳ್ದನು ।
ಮಾಧವ ಕರುಣದೊಳು ॥೭೬॥

**ರಾಗ ಬೇಗಡೆ ಆದಿತಾಳ**

ನಾರಿ ಕೇಳಿಂದಾದ ಪರಿಯನು । ಸತ್ರಾಜಿತಾಖ್ಯಗೆ ।
ವಾರಿಜಪ್ರಿಯನಿತ್ತ ರತ್ನವನು ॥
ಭೂರಿ ತೋಷದೊಳಾತನನುಜನು ।
ಚಾರು ರತ್ನವ ಕಂಧರದಿ ಮಿಗೆ ।
ಹಾರಧರಿಸಿ ವಯ್ಯಾರದಿಂದಲಿ ।
ಚಾರಕರ ಕೂಡುತ್ತ ಪೊರುಡುತ ॥೭೭॥

ಕಾನನದಿ ಮೃಗಬೇಟೆಯಾಡುತ । ಸಾನುರಾಗದಲಿ ॥ ಯಿರಲಾ
ಸ್ಥಾನಕೆ ಮೃಗರಾಜ ಬರಲು ಪ್ರ । ಸೇನ ಮನದಲಿ ॥ ಕೋಪಿಸಿ ।
ಬಾಣವೆಸೆಯಲ್ಕಾತನಸುವನು । ಹಾನಿಗೈವುತ್ತಲಿ ಕೇಸರಿ ।
ತಾನು ರತ್ನವನೊಯ್ಯುತಿರೆ ಮಿಗೆ ।
ಕಾಣುತಲಿ ಋಕ್ಷಾಧಿಪನು ಕಡು ।
ಜಾಣತನದಲಿ ಬಂದು ಸಿಂಹದ ।
ಗೋಣಮುರಿದಾ ರತ್ನವೊಯ್ದನು ॥೭೮॥

ಕೇಳುತಲಿ ಚರರಿಂದ ವಾರ್ತೆಯ । ತಾಳಿ ಮಮತೆಯನು । ಅನುಜನ ।
ಮೇಲೆ ಅರಸುತ ಕಾಣುತಾತನ । ಶೀಲ ಗುಣಗಳನು ॥ ವರ್ಣಿಸಿ ।
ಬಾಳ ಮರುಗುತ್ತಾಗ ಎನ್ನಯ । ಮೇಲೆ ಮನವನ್ನು ॥ ಶಂಕಿಪ ।
ಕೇಳಿದೆನು ಆ ರತ್ನವನು ಯದು ।
ಪಾಲಗೀವುದುಯೆಂದೆನುತ ಕೊಡ ।
ದಾಲಯಕೆ ಗಮಿಸಿರ್ಪನಂದಿಲಿ ।
ಜಾಲವಲ್ಲಿಂತೀಗ ಗ್ರಹಿಸಿದ ॥೭೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇರದೆ ಮಣಿಹೃತ ದೋಷವೆನ್ನಲಿ ।
ಬರಿದೆ ಪೇಳಿದನೆಂಬುದನು ನಾ ।
ನರಿತು ನಕ್ಕೆನು ಈ ವಿಷಯಕೆಲೆ । ಸರಸಿಜಾಕ್ಷಿ ॥೮೦॥

ಎಂದ ವಚನಕೆ ರುಗ್ಮಿಣಿಯು ತಾ ।
ನೆಂದಳೆಲೆ ಪ್ರಾಣೇಶ ನಿನ್ನಲಿ ।
ಬಂದುದ್ಯಾಕಪವಾದ ಮಾತುಗ । ಳಿಂದು ಪೇಳ್ಳೈ ॥೮೧॥

ರುದ್ರಸಖನಿಂತೆಂದ ಸತಿಯಲಿ ।
ಭಾದ್ರಪದ ಸಿತಪಕ್ಷ ನಾಲ್ಕನೆ ।
ಭದ್ರತಿಥಿ ದಿವಸದಲಿ ಕ್ಷೀರ ಸ । ಮುದ್ರಸುತ ॥೮೨॥

ನೋಡಿದುದರಿಂದೀ ಕೊರತೆ ನುಡಿ ।
ಮೂಡಿದುದು ತನಗೆನುತ ಮಡದಿಯ ।
ಕೊಡೆ ಸಂತಯಿಸಲ್ಕೆ ನುಡಿದಳು । ನೋಡಿ ಹರಿಯ ॥೮೩॥

ನಿಗಮಕೋಟಿಗೆ ನಿಲುಕದಿಹ ಬಲು ।
ಬಗೆಯ ಮಹಿಮನೆ ತವ ನಿಜವ ನಾ ।
ಲ್ಮೊಗ ಸುರಾದ್ಯರಿಗರಿಯಲರಿದೆನೆ । ನಗುತ ಹರಿಯು ॥೮೪॥

ಕರೆದು ಸಾತ್ಯಕಿಗೆಂದ ಯದುಬಲ ।
ವೆರಸಿ ದಿನಪನ ಭಜಕನನುಜನು ।
ಹರಣ ತೊರೆದಾ ವನಕೆ ತೆರಳಲು। ನೆರಹು ಗಾಢ ॥೮೫॥

ಎಂದ ಮಾತಿಗೆ ಸಾತ್ಯಕಿಯು ಯದು ।
ವೃಂದಗೂಡಿಸಿ ನಮಿಸಿತಿರೆ ಗೋ ।
ವಿಂದ ಗರುಡನನೇರಿ ಪೊರಟಾ । ನಂದದಿಂದ ॥೮೬॥

**ರಾಗ ಭೈರವಿ ತ್ರಿವುಡೆತಾಳ**

ಧಾರಿಣೀಪತಿ ಕೇಳು ಮುರಹರ । ಭೂರಿವೈಭವದಿಂದ ಯಾದವ ।
ವೀರ ಸುಭಟವೃಂದ ಸಹ ಗಂ । ಭೀರ ಭೇರಿನಾದದಲಿ ಕಹ ।
ಳಾರವದಿ ಮೆರೆವುತ್ತಲಿರುವ ನ । ಗಾರಿ ಘೋಷದಿ ಬರಲು ಮುಂಗಡೆ ।
ಚಾರುತರ ಪಾಠಕರು ಪೊಗಳಲು । ಸಾರಿ ಬ್ರಾಹ್ಮಣಮಧ್ಯದಲ್ಲಿ ಹರಿ ।
ಕಂಡನಾಗ । ಚೋದ್ಯವ । ಕಂಡನಾಗ ॥೮೭॥

**ವಾರ್ಧಕ**

ಪೊಡವಿಪಾಲಕ ಪರೀಕ್ಷಿತಭೂಪ ಲಾಲಿಸೈ ।
ಮಡಿದಿರುವ ಆ ಪ್ರಸೇನನ ಕಂಡು ಮುರಹರಂ ।
ಕಡು ಚೋದ್ಯಬಡುತ ಸಿಂಹದ ನಖದ ಗಾಯದಿಂ ಮರಣವಾಯ್ತೀತಗೆಂದು ॥
ಒಡನೆ ಹರಿ ಹಜ್ಜೆಯಂ ಕಾಣುತ್ತಲಾ ಹರಿಯು ।
ನಡೆದು ಮುಂದಕೆ ಬರಲ್ ಕರಡಿಯಿಂದಲಿ ಮರಣ ।
ಪಡೆದ ಮೃಗರಾಜನಂ ಕಂಡು ವಿಸ್ಮಿತನಾಗಿ ನುಡಿದನಸುರಾರಿ ನಗುತ ॥೮೮॥

**ರಾಗ ಕೇದಾರಗೌಳ ಝಂಪೆತಾಳ**

ಈಕ್ಷಿಸೀ ಬಗೆಯನೆಲ್ಲ । ಕೇಸರಿಯ । ಋಕ್ಷಪನು ಕೊಂದನಲ್ಲ ॥
ದಕ್ಷವಿಧ್ವಂಸಸಖನು । ಈ ವಿಧಿ ಪ । ರೀಕ್ಷಿಸುವೆನೆನುತ ತಾನು ॥೮೯॥

ಬರಲು ಸಂತಸದಾಳುತ । ಶ್ರೀಹರಿಯು । ಕರಡಿಹಜ್ಜೆಯ ನೋಡುತ ॥
ಭರದಿ ಯದುಬಲವ ಕೂಡಿ । ಋಕ್ಷಪನು । ತೆರಳಿರುವ ಪಥವ ನೋಡಿ ॥೯೦॥

**ಭಾಮಿನಿ**

ಬರುತಿರಲು ಮುಂದೆಸೆವ ಸರಸಿಯ ।
ಸರಸಿಜಾಕ್ಷನು ನೋಡಿ ಸೈನಿಕ ।
ವೆರಸಿ ಕಾಲ್ಮೊಗದೊಳೆದು ವಟುಕುಜದೆಡೆಯ ಕುಳಿತಿರಲು ॥
ದುರುಳ ಮಾರ್ಬಲವೆರಸಿ ವನವನು ।
ಚರಿಸುತಲ್ಲಿಗೆ ಬಂದನಾಕ್ಷಣ ।
ಜರೆಯ ಸುತ ಮಗಧೇಶ ಘೋರಾರ್ಭಟೆಯ ರಭಸದಲಿ ॥೯೧॥

**ಕಂದ**

ಬಂದಾ ದಾನವರೆರೆಯಂ ।
ನಿಂದೀಕ್ಷಿಸುತೈದೆ ಯಾದವಬಲಮಂ ॥
ತಿಂದೀ ಕ್ಷಣ ತೇಗುವೆನೆನು ।
ತೆಂದಾಲೋಚಿಸುತಾಗಲವನಿಂತೆಂದಂ ॥೯೨॥

**ರಾಗ ಭೈರವಿ ಅಷ್ಟತಾಳ**

ಆರೆಲೊ ಕಾಡೊಳು ಪರಿ । ವಾರ ಸಹಿತ ಕೂಡಿ ।
ಚೋರರಂತೆ ಕುಳಿತಿಪ್ಪ । ನ್ಯಾರು ನೋಡೀತ ॥೯೩॥

ನರರ ಮಾಂಸವ ತಿಂಬ । ಡರಸಿಕೊಳ್ಳೆನುತ್ತವನ ।
ಚರಿಸಲಿಂದು ಪಾರಣೆಗೆ । ದೊರೆಕಿತೆನ್ನುತ ॥೯೪॥

ಎಂದು ಆರ್ಭಟಿಸುತ್ತ । ಲಂದು ಕಾಣುತ್ತ ಇದಿ ।
ರ್ನಿಂದು ಸಾತ್ಯಕಿ ಪೇಳ್ದ । ಅಂದು ಕನಲುತ್ತ ॥೯೫॥

**ರಾಗ ಘಂಟಾರವ ಅಷ್ಟತಾಳ**

ಕೂಗಲ್ಯಾತಕೋ ಫಢ ಫಢ ದನುಜ ನಿ ।
ನ್ನಾಗಮವು ಎಮ್ಮೊಡನೆ ಸಲ್ಲದು । ಬೇಗ ಕೆಲಸಾರೆನ್ನುತ ॥೯೬॥

ಖುಲ್ಲ ಮಾನವ ನಿನಗಿಷ್ಟು ಗರ್ವವೆ ।
ಹಲ್ಲಮುರಿವೆನು ನಿಲ್ಲೆನುತ್ತಲಿ । ಬಿಲ್ಲನುರೆ ಝೇಗೈದನು ॥೯೭॥

ಎಂದ ಮಾತಿಗೆ ಕಿನಿಸಿನಿಂದ ಸಾತ್ಯಕಿ ।
ಒಂದು ಶರವೆಸೆಯಲ್ಕೆ ಕೌತುಕ । ವೆಂದನಾ ಮಗಧೇಶನು ॥೯೮॥

ಹಿಂದೆ ನಿನ್ನನು ಕೊಂದು ಬಿಡುವೆನೆನು ।
ತಂದು ಗದೆಯಲಿ ಬಡೆಯೆ ಸಾತ್ಯಕಿ । ನೊಂದು ಮೂರ್ಛೆಗೆ ಸಂದನು ॥೯೯॥

**ರಾಗ ಘಂಟಾರವ ಆದಿತಾಳ**

ಘೋರ ದೈತ್ಯಕರಹತಿಗೆ ಸಾತ್ಯಕಿ । ವೀರ ಮೂರ್ಛಿತನಾಗೆ ॥
ವಾರಿಜನಾಭನು ದನುಜನ ಗರ್ವವ । ತೀರಿಪೆನೀ ಗಳಿಗೆ ॥೧೦೦॥

ಎನುತಲಿ ಬಂದಾ ದನುಜನ ಸರಿಸದಿ । ಚಿನುಮಯನಿಂತೆಂದ ॥
ನೆಣಗೊಬ್ಬಿಲಿ ಬಂದಣಕದೊಳೆಮ್ಮನು । ಕೆಣಕದಿರೆನಲೆಂದ ॥೧೦೧॥

**ರಾಗ ಭೈರವಿ ಏಕತಾಳ**

ಫಡ ಗೋಪಾಲಕನೆ ಕೇಳು । ನಿನ್ನಯ ಶೌರ್ಯ ।
ಸುಡು ಬಲ್ಲೆ ಹಿಂದೆ ತಾಳು ॥
ಒಡಲಿನ ಭಯಕಾಗಿ ಗೋಮಂತ ಶೈಲವ ।
ಅಡರಿ ಪೋದವ ನೀನೆಲ್ಲೈ ॥೧೦೨॥

ಖಳರೊಳಗಧಮ ನಿನ್ನ । ಅಂಜಿಕೆಯಿಂದ ।
ತೊಲಗಿದುದಲ್ಲ ಮುನ್ನ ॥
ಸಲೆ ನಿರಾಯುಧನಾಗಿ ಸಿಲುಕಿದ ಕಾರಣ ।
ಅಲಸಿ ಪೋದವನೆಂದೆಲ್ಲೈ ॥೧೦೩॥

ಎಂಭತ್ತನಾಲ್ಕು ಬಾರಿ । ಸಂಗರಗೆಯ್ಯ ।
ಲಂಬಿಲ್ಲವೇನೊ ಹೋರಿ ॥

ಅಂಬುಧಿಯೊಳಗಡಗಿಹ ಹೇಡಿಯೆನಲಾಗ ।
ಲಂಬುಜಾಕ್ಷನು ಪೇಳ್ದನು ॥೧೦೪॥

ದುಷ್ಟ ನೀನಂದಿನೊಳು । ಬಂದೆಮ್ಮಯ ।
ಪಟ್ಟಣ ಮುತ್ತಿರಲು ॥
ಕೊಟ್ಟ ಸರ್ವಸ್ವವ ಬಿಟ್ಟು ರಣಾಗ್ರದಿ ।
ಬಿಟ್ಟು ಓಡಿದನ್ಯಾರಯ್ಯ ॥೧೦೫॥

ಭೂರಿ ಬಲವು ಸಹಿತ । ನಿದ್ರೆಯೊಳಿರೆ ।
ಚೋರ ನೀ ವಂಚಿಸುತ್ತ ॥
ಘೋರನೈತಂದು ನಿರಾಯುಧರೊಡವೆಯ ।
ಸೂರೆಗೊಂಡವನಹುದು ॥೧೦೬॥

ಖೂಳ ರುಗ್ಮನ ಬಲವ । ನೀ ತಂದಿಪ್ಪ ।
ತ್ತೇಳಕ್ಷೌಹಿಣಿ ಸೈನ್ಯವ ॥
ಕಾಳಗದೊಳಗೆನ್ನ ಕೋಲಿಗರ್ಪಿಸಿ ತಲೆ ।
ಬೋಳುಗೈದುದನರಿಯೆ ॥೧೦೭॥

ಎಂದ ಮಾತನು ಕೇಳುತ್ತ । ರೋಷದೊಳಕ್ಷಿ ।
ಯಿಂದ ಕಿಡಿಯ ಸೂಸುತ್ತ ॥
ಇಂದು ತಾನಳುಕಲು ಮುಂದಸ್ತ್ರಸಂನ್ಯಾಸ ।
ವೆಂದೆಚ್ಚ ಬೊಬ್ಬಿಡುತ ॥೧೦೮॥

ಅಮರಾರಿಯೆಸೆದಸ್ತ್ರವ । ಖಂಡಿಸುತಲಿ ।
ಅಮಿತಕೋಪದಿ ಮಾಧವ ॥
ಕುಮತಿ ನಿನ್ನಯ ಪರಾಕ್ರಮವ ತೋರಿಂದಿ ।
ಸಮರದೊಳೆನುತೆಚ್ಚನು ॥೧೦೯॥

**ರಾಗ ಭೈರವಿ ಅಷ್ಟತಾಳ**

ಎಸೆದಸ್ತ್ರವನುರೆ ತರಿದು । ಪಲ್ । ಮಸೆವುತಲಸ್ತ್ರವ ಸುರಿದು ॥
ಅಸುರಹರನ ಮೇಲೊಳಗೆ । ಪೊಸ । ವಿಶಿಖದಿ ತರಿದಾ ಖಳಗೆ ॥೧೧೦॥

ವಧೆ ಮರುತಜನಿಂದೆನುತ । ಹರಿ । ಮುದದೊಳನಿಲಶರ ತೊಡುತ ॥
ಅಧಮನ ಹಾರಿಸಿ ಪುರಕೆ । ಮಿಗೆ ತ್ರಿದಶರು ಹರುಷಿಸೆ ವನಕೆ ॥೧೧೧॥

ವರ ಸಾತ್ಯಕಿಯನು ಕರದಿ । ತಡ । ವರಿಸಲಿಕೆದ್ದನು ಭರದಿ ॥
ನೆರೆ ಸೈನಿಕವನು ಕೂಡಿ । ಆ । ಕರಡಿಯೆಯ್ದಿದ ಬಿಲ ನೋಡಿ ॥೧೧೨॥

ಚೋದಿಸುತೆಂದನು ಬಲಕೆ । ದಿನ । ದ್ವಾದಶವೀಕ್ಷಿಸಿ ಪುರಕೆ ॥
ಮೋದದಿ ತೆರಳುವುದೆನುತ । ಮಧು । ಸೂದನ ಪೇಳಿದ ನಗುತ ॥೧೧೩॥

**ಭಾಮಿನಿ**

ಇಂತು ನಿಜ ಪರಿವಾರಕೆನೆ ತದ ।
ನಂತರಾ ಬಿಲದೊಳಗೆ ಶಿಶುವು ಮ ।
ಹಾಂತ ಶೋಕಿಸೆ ಕಂಡು ತೊಟ್ಟಿಲ ತೂಗೆ ಜಾಂಬವತಿ ॥
ನಿಂತು ಪೇಳಿದಳಾಡಲಿಕ್ಕೆ ಸ್ಯ ।
ಮಂತಮಣಿ ನಿನ್ನಯ್ಯ ತಂದಿಹ ।
ಸಂತವಿರುವೆನಲಂದು ಶ್ರೀಹರಿ ಕೇಳುತಿಂತೆಂದ ॥೧೧೪॥

**ರಾಗ ದೇಶಿ ತ್ರಿವುಡೆತಾಳ**

ಲಾಲಿಸೀ ಬಿಲದೊಳಗಿರುತಿಹ ಹದನ ।
ಬಾಲನ ಸಂತೈಸಿ ಪೇಳುವ ಪದನ ॥
ಕೇಳಿದಿರೈಸೆ ನೀವಿದಕೆ ಸಾಕ್ಷಿಯನು ।
ನಾಳೆ ಪೇಳಲು ಬೇಕೆಂದ ಶ್ರೀವರನು ॥೧೧೫॥

ಅಪವಾದ ಕಳೆಯಲು ತಂದ ರತ್ನವನು ।
ಕೃಪೆಯಿಂದ ಕೊಡಲು ಸತ್ರಾಜಿತ ತಾನು ॥
ಅಪರ ಬುದ್ಧಿಕೆಯಿಂದ ಮೊದಲು ತಾನೊಯ್ದು ।
ವಿಪರೀತವಾಯ್ತೆಂದು ತಂದಿತ್ತನೊಲಿದು ॥೧೧೬॥

ಎಂಬುದ ತಿಳಿದಿರಿ ನೀವೆಂದು ಬಲವ ।
ಅಂಬುಜನಾಭ ನಿಲಿಸಿ ಪೊಕ್ಕು ಬಿಲವ ॥
ಮುಂಬಿಲಿ ಕತ್ತಲೆ ಪಥದಿ ಮುಂದಯ್ದಿ ।
ಜಾಂಬವಸುತನನೀಕ್ಷಿಸಿ ನಿಂದ ಮುದದಿ ॥೧೧೭॥

**ರಾಗ ಕೇದಾರಗೌಳ ಅಷ್ಟತಾಳ**

ಮುರಹರ ಬಂದು ತಾ ಕಂಡನು ಬಾಲನ ।
ಕರದೊಳು ರತ್ನವನು ॥
ಭರದಿ ಕೊಂಡೊಯ್ಯುವ ಪರಿಗಾಗಿ ಯೋಚಿಸು ।
ತಿರಲು ಕಾಣುತ ಬಾಲನು ॥೧೧೮॥

ಬೆದರಿ ಸಾರುತ ಮೊರೆಯಿಡೆ ಕೇಳ್ದು ಜಾಂಬವ ।
ಹದನವ ತಿಳಿವೆನೆಂದು ॥

ಒದಗಿ ರೋಷದಿ ಬಂದು ಮಧುಸೂದನನ ಕಂಡು |
ಬೆದರಿಸುತೆಂದನಿಂದು ||೧೧೯||

ಜಗದುದ್ಧಾರಕನೀತನೆಂಬುದನರಿಯದೆ |
ವಿಗಡ ಋಕ್ಷಾಧಿಪನು ||
ಪಗೆಯವನೆಂದು ತಾ ಗ್ರಹಿಸುತ್ತ ಮನದೊಳು |
ಹಗರಣಕನುವಾದನು ||೧೨೦||

**ಶಾರ್ದೂಲವಿಕ್ರೀಡಿತಂ**

ಶ್ರೀಲೋಲಂ ವನಮಾಲಕೌಸ್ತುಭಧರಂ ಪೀತಾಂಬರಾಲಂಕೃತಂ |
ಬಾಲಾರ್ಕಾಶತಕೋಟಿಭಾಸುರನಿಭಂ ಶ್ಶೈಲಾಧರಂ ಸುಂದರಮ್ |
ನೀಲಾಂಗಂ ಖಳಕಂಸವೀರ್ಯಮಥನಂ ಭೂತಾಧಿನಾಥಪ್ರಿಯಂ |
ತ್ರೈಲೋಕ್ಯಾದಿಮುನೀಂದ್ರದೇವವಿನುತಂ ದುಗ್ಧಾಪುರೇಶಂ ಭಜೇ ||

**ರಾಗ ನಾಟಿ ಝಂಪೆತಾಳ**

ಜಯತು ಪಾರ್ವತಿಪುತ್ರ | ಜಯತು ರತಿಪತಿಮಿತ್ರ |
ಜಯತು ಸುಂದರ ಗಾತ್ರ | ಜಯತು ಸುಚರಿತ್ರ ||
ಜಯತು ಜಯ ಜಯತು ||೧||

ಜಯತು ಮದಕರಿವದನ | ಜಯ ಸಕಲ ಅಘಹರಣ |
ಜಯತು ವಿಘ್ನವಿಹರಣ | ಜಯ ಉರಗಭರಣ ||
ಜಯ ಜಯತು ಜಯತು ||೨||

ರಜತಾದ್ರಿಗಿರಿವಾಸ | ಭುಜಗ ಭೂಷಣ ಈಶ |
ಗಜಚರ್ಮಧರ ದೇವ | ಭಜಕ ಸಂಜೀವ ||
ಜಯ ಜಯತು ಜಯತು ||೩||

ವಿಜಯಗಸ್ತ್ರವನಿತ್ತ | ತ್ರಿಜಗವಂದಿತ ಖ್ಯಾತ |
ಗಜವದನ ಗುಹತಾತ | ಸುಜನುತ ಪ್ರೀತ |
ಜಯತು ಜಯ ಜಯತು ||೪||

ಗಿರಿಜಾತೆ ಹರಿಪ್ರೀತೆ | ಹರಿಯನುಜೆ ದಿವಿಜನುತೆ |
ತರಣಿಕೋಟಿಪ್ರಕಾಶೆ ದುರುಳಖಳನಾಶೆ ||
ಜಯ ಜಯತು ಜಯತು ||೫||

ಶರಣನೆಂಬೀ ಪರಿಯ । ಕರುಣವಿಟ್ಟೀ ಕಥೆಯ ।
ವಿರಚಿಸುವ ಮತೀಗೀಗ । ಕರುಣಿಪುದು ಬೇಗ ॥
ಜಯತು ಜಯ ಜಯತು ॥೬॥

**ವಾರ್ಧಕ**

ಸರಸಿಜೋದ್ಭವನರಸಿ ಶಾರದೆಗೆ ವಂದಿಸುತ ।
ಸುರಪಮುಖ್ಯಾಮರರಿಗೆರಗುತ್ತ ಸಕಲ ಮುನಿ ।
ವರರಿಗಾನತನಾಗಿ ಮರುತಾತ್ಮಜನಿಗೆರಗಿ ಪರಮ ಸಂತೋಷದಿಂದ ॥
ಗುರುವಿನ ಪದಾಂಬುಜಕ್ಕೆರಗಿ ಹಿರಿಯರನು ಸ ।
ತ್ಕರಿಸಿ ಸನ್ನುತಗೈದು ಧರೆಯ ಕವಿಗಳ ನೆನೆದು ।
ಪರಮ ವೇದವ್ಯಾಸಮುನಿಪನಂ ಭಜಿಸುತ್ತಲೊರೆವೆನೀ ಸತ್ಕಥೆಯನು ॥೭॥

**ಭಾಮಿನಿ**

ವಲ್ಮೀಕದಿ ಆವಾಸಗೈದನ ।
ಬಲ್ಮೆಯಿಂದಾಭರಣ ಧರಿಸಿದ ।
ಸಾಲ್ಮೋಗದ ಮಹದೇವನರಸಿಯ ಪಿತನ ಪಕ್ಷವನು ।
ಪಲ್ಮೊರೆದು ತರಿದವನ ಸುತನಿಗೆ ।
ನಲ್ಮೆಯಿಂ ಸಾರಥಿಯಗೈದನ ।
ಒಲ್ಮೆಯಿಂದಲಿ ಪೇಳ್ವೆನೀ ಕಥೆ ಯಕ್ಷಗಾನದಲಿ ॥ ॥೮॥

**ದ್ವಿಪದಿ**

ವರ ಮಹಾಭಾಗವತಪೌರಾಣದೊಳಗೆ ।
ಹರಿ ಸತ್ಯಭಾಮೆಯೊಲಿಸಿದ ಕಥೆಯ ಧರೆಗೆ ॥೯॥

ವಿರಚಿಪೆನು ಕ್ಷೀರಪುರವರನ ಕರುಣದಲಿ ।
ಮೆರೆವಂತೆ ಕ್ಷಿತಿಯೊಳಗೆ ಯಕ್ಷಗಾನದಲಿ ॥೧೦॥

ಬಾಲಕನ ಕೃತಿಯೆಂದು ನಿಂದಿಸದೆ ಜಗದಿ ।
ಶೀಲರಾಲಿಸಿ ತಿದ್ದಿ ಮೆರೆಸುವುದು ಮುದದಿ ॥೧೧॥

ಪ್ರಾಸಂ ವಿಷಮಾಕ್ಷರಗಳೆಂಬುದನು ಅರಿಯೆ ।
ದೋಷವನು ಪರಿಹರಿಸಿ ಸಲಹು ಶ್ರೀಹರಿಯೆ ॥೧೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೂಮಿಪಾಲ ಪರೀಕ್ಷಿತಂಗೆ ಸ ।
ನಾಮ ಶುಕಮುನಿಯೊಲಿದು ಕರುಣದಿ ।
ಆ ಮಹಾಭಾಗವತಕಥೆಯನು । ಪ್ರೇಮದಿಂದ ॥೧೩॥

ಶ್ರುತಗೊಳಿಸುತಿರೆ ಕೇಳ್ದನಾ ಭೂ ।
ಪತಿಯು ವರ ಸತ್ರಾಜಿತಾಖ್ಯನು ।
ನುತಿಸಿ ತರಣಿಯ ಪಡೆದು ರತ್ನವ । ಸುತೆಯ ಮುದದಿ ॥೧೪॥

ನರಕವೈರಿಗೆಯಿತ್ತನೆಂತೀ ।
ಹರಿಯ ಕರುಣದಿ ಪೇಳೆನಲು ಭೂ ।
ವರನ ಪೊಗಳುತ ಪೇಳ್ದನಾ ಮುನಿ । ವರನು ದಯದಿ ॥೧೫॥

**ಭಾಮಿನಿ**

ಧರಣಿಪಾಲಕ ಕೇಳು ದ್ವಾರಕ ।
ಪುರದರಸು ವಸುದೇವನುದರದಿ ।
ಸಿರಿಯರಸ ಸಹ ಬಲರು ರಂಜಿಸುತಿರಲು ತತ್ಪುರದಿ ॥
ಇರುವನೈ ಸತ್ರಾಜಿತಾಖ್ಯನು ।
ಒರೆವೆ ಮುಂದಣ ಚರಿತೆಯಾಲಿಸು ।
ದುರಿತಫಣಿಸಂಕುಲಕೆ ವಿನತಾಸುತನವೋಲೆಂದ ॥೧೬॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಹರಿಕುಲಜ ಕೇಳ್ಳೈ ಕುಶಸ್ಥಳಿ । ಪುರವನಾಳುತ್ತಿರಲು ರಾಯನು ।
ತರುಣಿ ಕಾಂಚನಮಾಲಿನಿಯು ಸಹ । ಹರುಷದಿಂದಿರಲವಳಲಿ ॥೧೭॥

ಪೂರ್ವಗಿರಿ ಶಿಖರದಲಿ ರವಿ ಮೆಯ್ । ದೋರ್ವ ತೆರದಲಿ ಸುತೆಯು ಜನಿಸಲು ।
ಪಾರ್ವತೀಶನು ಒಲಿದನೆನುತಾ । ಊರ್ವಿಪತಿ ಸಂತಸದಲಿ ॥೧೮॥

ಸತ್ತ್ವ ರಜತಮ ಗುಣದಿ ವರ್ತಿಪ । ಸತ್ಯಭಾಮಾದೇವಿ ಸಹಿತಲಿ ।
ಅರ್ತಿಯಿಂದಿರುತಿರಲು ರಾಯನು । ಮತ್ತೆ ಯೋಚಿಸುತೆಂದನು ॥೧೯॥

ಇಂದುಧರನನು ಪೂರ್ವಜನ್ಮದಿ । ಚಂದದಿಂದರ್ಚಿಸದ ಕಾರಣ ।
ಮಂದಭಾಗ್ಯನು ಆದೆನೀ ಪರಿ । ಮುಂದುಗಾಣೆನೆನುತ್ತಲಿ ॥೨೦॥

ಹಲವನೆಣಿಸುತ ಧನವಿಹೀನತೆ । ಕಳೆವುಪಾಯಕೆ ನಳಿನಸಖನನು ।
ಒಲಿಸಿ ಮನದಿರ ಪಡೆವೆನೆನುತಲಿ । ತಿಳಿದು ತಾನತಿ ಭರದೊಳು ॥೨೧॥

ಬಂದು ನಿರ್ಮಲ ಜಲದೊಳಗೆ ನಲ । ವಿಂದ ಸ್ನಾನವ ರಚಿಸಿ ಶುಚಿಯಲಿ ।
ನಿಂದು ಮಿಗೆ ಅರವಿಂದಸಖನನು । ಒಂದೆ ಮನದಲ್ಲಿ ಭಜಿಸುತ ॥೨೨॥

**ರಾಗ ಮಾರವಿ ಆದಿತಾಳ**

ಬಿಡು ಬಿಡು ಚಿಂತೆಯ । ಪೊಡವಿಪ ನಿನ್ನಯ । ದೃಢಭಕುತಿಗೆ ನಾನು ॥
ಒಡಬಡುತಲಿ ನಿ । ನ್ನೆಡೆಗೈತಂದೆನು । ನುಡಿ ಮನದಿಷ್ಟವನು ॥೨೩॥

ತಡೆಯದೆನಲು ತಪ । ಬಿಡುತಕ್ಷಿಗಳನು । ಸಡಲಿಸುತಲಿ ತಪನ ॥
ಅಡಿದಾವರೆಯೊಳು । ಪೊಡಮಡುತೆಂದನು । ಕಡುಚಿಂತೆಯ ಹದನ ॥೨೪॥

ಎನ್ನುವುದೇನೈ । ನಿನ್ನ ಮನಕೆ ಶ್ರುತ । ವೆನ್ನಯ ಮನದಿರವು ॥
ಧನ್ಯನಾದೆ ಸಂ । ಪನ್ನ ಭಾಗ್ಯವಿ । ತ್ತೆನ್ನ ರಕ್ಷಿಸು ದೇವ ॥೨೫॥

ಇಂತೆನಲಾ ಭೂ । ಕಾಂತನಿಗೆ ವರ ಸ್ಯ । ಮಂತಕರತ್ನವನು ॥
ಸಂತಸದಲಿ ಕರು । ಣಾಂತಃಕರಣದಿ ಏ । ಕಾಂತ ಭಕ್ತನೊಳವನು ॥೨೬॥

ದಿನದಿನ ಅಷ್ಟಮ । ಭಾರ ಕನಕವನು । ಮಣಿ ಕೊಡುವುದು ನಿನಗೆ ॥
ಜನಿಸದು ದುರ್ಭಿ । ಕ್ಷಾದಿ ಭಯಂಗಳು । ಎನುತ ಭರದಿ ಪೋಗೆ ॥೨೭॥

**ವಾರ್ಧಕ**

ಇಂದುವಂಶಜ ಪರೀಕ್ಷಿತನ ಭೂಪ ಲಾಲಿಸಿಂ ।
ತೆಂದು ರತ್ನವನಿತ್ತು ದಿನಮಣಿಯು ತೆರಳೆ ನಲ ।
ವಿಂದ ಹರುಷಿತನಾಗಿ ವರ ಸ್ಯಮಂತಕಮಣಿಯ ಕೊಂಡು ನಿಜಪುರಕೆ ಬರಲು ॥
ಅಂದದಿಂದಾ ದ್ವಾರಕಾಪುರದೊಳಿರುವ ಜನ ।
ವೃಂದವೀಕ್ಷಿಸಿ ವಿಸ್ಮಯಂ ಬಡುತ ಬೆದರಿ ಗೋ ।
ವಿಂದ ರಕ್ಷಿಸು ನಮ್ಮನೆನುತ ಹರಿಗೊಂದಿಸುತಲೆಂದರೀ ಮಾತನಂದು ॥೨೮॥

**ರಾಗ ಮಾರವಿ ಆದಿತಾಳ**

ಸ್ವಾಮಿ ಲಾಲಿಸಿ ಕೇಳೆಮ್ಮ ಮಾತ ॥ ಪಲ್ಲವಿ ॥

ನಿನ್ನಯ ಕರುಣದಿ । ಚೆನ್ನಾಗಿ ಈ ಪುರದಿ ।
ಅನ್ಯ ಭಯಗಳಿಲ್ಲದಿರುತಿರ್ದೆವು ॥
ಪನ್ನಗಶಯನ ಕೇ । ಳಿನ್ನು ಪೇಳುವುದೇನು ।
ನಿನ್ನಯ ಬಳಿಗರ್ಕ ತಾನಾಗಿ ಬರುವನೈ ॥೨೯॥

ದೇವ ಎಮ್ಮಯ ದೃಷ್ಟಿ । ಸೀವುತಿಹುದು ಮುಟ್ಟಿ ।
ಕಾವುದು ಕರುಣದಿ ದಯವ ತೋರಿ ॥
ಕಾವುದೆಲ್ಲರನು ಕೃ । ಪಾವಲೋಕನದಿಂದ ।
ಶ್ರೀವರ ಸುಜನರ ಸಲಹುವನೆ ॥೨೦॥

ಎಂದು ಪೇಳಿದ ಮಾತಿ । ನಂದವ ಕೇಳುತ್ತ ।
ಸಿಂಧುಶಯನ ನಸುನಗುತಲಾಗ ॥
ಮಂದರಧರ ದೀನ । ಬಂಧು ಅಭಯಕರ ।
ದಿಂದ ನೆಗಹಿ ಪೇಳ್ದಾನಂದದಿಂದ ॥೨೧॥

**ರಾಗ ಬೇಗಡೆ ಏಕತಾಳ**

ಅಂಜಲ್ಯಾಕಿಂತು ನೀವೆಲ್ಲ । ನಾ ಪೇಳ್ವೆ ಕೇಳಿ ।
ಅಂಜಿಕೆಯ ಬಿಟ್ಟು ಈ ಸೊಲ್ಲ ॥
ಕಂಜಸಖನಲ್ಲಲ್ಲ ಬಾಲಕ । ರಂಜದಿರಿ ನೀವೀಗ ಧರೆಯೊಳು ।
ರಂಜಿಸುತ ಮೆರೆದಿಪ್ಪವರ ಗುರು । ಗುಂಜಿಯನು ಮಾಣಿಕ್ಯವೆಂಬರೆ ॥೨೨॥

ವಾರಿಜಾಪ್ತನಿತ್ತ ರತ್ನವನು । ಸತ್ರಜಿತಾಖ್ಯನು ।
ಭೂರಿತೋಷದಿ ಕೊಂಡು ಬರುತಿಹನು ॥
ಧಾರಿಣಿಗೆ ರವಿ ಬರ್ಪನೆಂಬೀ । ವಾರತೆಯು ಪುಸಿಯೆಂದು ಮಿಗೆ ಕಂ ।
ಸಾರಿ ಸುಜನೋದ್ಧಾರಿ ದುರಿತವಿ । ದೂರ ಸರ್ವರ ಸಂತವಿಟ್ಟನು ॥೨೩॥

**ಭಾಮಿನಿ**

ಎನುತ ಸಂತಯಿಸಲ್ಕೆ ಬಳಿಕಾ ।
ಜನನಿಕರ ತಮ್ಮನೆಗೆ ಹೊಕ್ಕಿರೆ ।
ಮಣಿಧರನು ನಿಜಗೃಹಕೆ ಬಂದ ಮಣಿಯ ಪೂಜಿಸಲು ॥
ದಿನದಿನದೊಳೆಂಟೆಂಟು ಬಾರದ ।
ಕನಕವನು ಮಣಿ ಕೊಡುವುದದರೊಳು ।
ಜನಿಸದಾ ದುರ್ವ್ಯಾಧಿ ದುರ್ಭಿಕ್ಷಾದಿ ಭಯವೆಂದ ॥೨೪॥

**ರಾಗ ಕಾಂಭೋಜಿ ಝಂಪೆತಾಳ**

ಧರಣಿಪಾಲಕ ಲಾಲಿಸಿಂತು ತರಣಿಯ ದಯದಿ ।
ಮೆರೆದನೈ ಬಹಳ ವೈಭವದಿ ॥
ವರ ಕುಬೇರನ ತೆರದಿ ಧನವಂತನಾಗಿಯತಿ ।
ಹರುಷದೊಳಗಿರ್ದ ತತ್ಪುರದಿ ॥೨೫॥

ಇತ್ತ ಶ್ರೀಹರಿಯು ಯದುರಾಜನಿಗೆ ಸ್ಯಮಂತಕದ ।
ರತ್ನವನು ಬರಿಸಬೇಕೆನುತ ॥
ಚಿತ್ತದಲಿ ಆಲೋಚಿಸುತ್ತಲೊಂದಿನ ಚರನ ।
ಹತ್ತಿರಕೆ ಕರೆದೆಂದನಾಗ ॥೩೬॥

ಚಾರಕನೆ ನೀ ಕೇಳು ನಾನೆಂಬ ವಚನವನು ।
ವೀರಭಾಸ್ಕರನ ಭಕ್ತನನು ॥
ಸಾರಿ ಕರೆತರಬೇಕು ತೆರಳೆಂದು ಕಳುಹಿದನು ।
ಮಾರಪಿತನಿರ್ದನಾಗಳಿಗೆ ॥೩೭॥

**ಭಾಮಿನಿ**

ವಾರಿಜಾಕ್ಷನ ನೇಮವನು ಮಿಗೆ ।
ಚಾರಕನು ಧರಿಸುತ್ತ ಶಿರದಲಿ ।
ಭೂರಿ ವೈಭವದಿಂದ ಮೆರೆಯುವ ಸಭೆಯ ಹೊರವಂಟು ॥
ಮಾರುತನ ಗತಿಯನ್ನೆ ಜರೆವುತ ।
ಭೋರನೈತಂದಾಗ ವಸತಿ ।
ದ್ವಾರವನು ಒಳಪೊಕ್ಕು ಪೇಳಿದನಂದು ಈ ಹದನ ॥೩೮॥

**ರಾಗ ಘಂಟಾರವ ಅಷ್ಟತಾಳ**

ಲಾಲಿಸೆನ್ನಯ ಮಾತ ಮಹಾಖ್ಯಾತ ।
ನೀಲಕಂಧರನಾಪ್ತನಾದ ಶ್ರೀ । ಲೋಲ ಕಳುಹಿದ ಪರಿಯನು ॥೩೯॥

ದಾನವಾರಿಯ ನೇಮವಾಯ್ತೆನಗೀಗ ।
ಭಾನುಭಕ್ತನ ಕರೆದು ತಾರೆನೆ । ಸಾನುರಾಗದಿ ಬಂದೆನು ॥೪೦॥

ತೆರಳಯ್ಯ ಸ್ವಾಮಿಯಿರುವ ಬಳಿಗೆ ಬೇಗ ।
ಕರುಣಸಾಗರಚರಣಯುಗಸಂ । ದರುಶನಾರ್ಥಿಗೆ ತವಕದಿ ॥೪೧॥

**ಕಂದ**

ಇನಿತೆಂದಾ ದೂತನನುಂ ।
ವಿನಯದಿ ಮನ್ನಣೆಯಿಂದ ಬೀಳ್ಕೊಡುತವನಾಗಳ್ ॥
ವನಜಾಕ್ಷನನೀಕ್ಷಿಪರೇಂ ।
ಘನಹರುಷದಿ ಪೊರಮಡುತ್ತೈತಂದಂ ಜವದಿಂ ॥೪೨॥

**ರಾಗ ಭೈರವಿ ತ್ರಿವುಡೆತಾಳ**

ಬಂದನಾಗ । ವಿನಯದೊ । ಳಂದು ಬೇಗ ॥ ಪಲ್ಲವಿ ॥

ಚಂದದಲಿ ಮನ । ದಂದು ಬಳಿಕರ । ವಿಂದಸಖನನು ಒಲಿಸಿದ ॥
ಕುಂದದವನಾ ನಂದದಿಂದಲಿ । ಬಂದು ಮಣಿ ತನಗಿತ್ತುದ ॥
ಮಂದಹಾಸದಿ ಧರಿಸಿ ತಾನದ । ರಂದವೀಕ್ಷಿಸಿ ಹರುಷದ ॥
ಚಂದದಿಂದಲಿ ಬಂದು ನುತಿಸಿ ಮು । ಕುಂದ ಜಯ ಜಯತೆಂದು ನಮಿಸಿದ ॥
ಭಕುತಿಯಿಂದ । ಬಲುತರ । ಭಕುತಿಯಿಂದ ॥೪೩॥

**ಕಂದ**

ನುತಿಸುತ ಚರಣದೊಳೆರಗಲ್ ।
ಅತಿ ಹರುಷದೊಳವನನು ಮನ್ನಿಸುತಿರಲಾಗಳ್ ॥
ರತಿಪತಿಪಿತನೊಳ್ ರಾಯಂ ।
ಅತಿ ಭಕುತಿಯೊಳಿಂತೆಂದನು ಕುಡ್ಮಲಕರದಿಂ ॥೪೪॥

**ರಾಗ ಸಾರಂಗ ಅಷ್ಟತಾಳ**

ದೇವ ಲಾಲಿಸು ಬಿನ್ನಪವನೊಂದ । ಪಾದ ।
ಸೇವಕನೆಂಬ ಕರುಣದಿಂದ ॥ ಪಲ್ಲವಿ ॥

ಕರುಣಾಸಾಗರ ನಿನ್ನ ಬಳಿಯಿಂದ । ಬಂದ ।
ಚರನೋರ್ವ ಪೇಳ್ದ ವಚನದಿಂದ ॥
ತೆರಳಿ ಬಂದೆನು ನಿನ್ನ ಬಳಿಗೀಗ । ಎನ್ನೊ ।
ಳರುಹುವ ಮಾತು ಪಾಲಿಸು ಬೇಗ ॥೪೫॥

ಎನಲೆಂದನಸುರಾರಿ ದಯದಿಂದ । ಭಾನು ।
ನಿನಗಿತ್ತ ವಿಮಲ ರತ್ನವನೊಂದ ॥
ಸನುಮತದಲಿ ಯದುರಾಜನಿಗೆ । ಈಯೆ ।
ಘನ ಪರಾಕ್ರಮಿ ಯೋಗ್ಯವಾತನಿಗೆ ॥೪೬॥

ಇಂತೆನಲಾಗಿ ಭೂಪಾಲನು । ದಾನ ।
ವಾಂತಕನೆಂದ ಮಾತಿಗೆ ತಾನು ॥
ಎಂತು ಕೊಡುವೆ ಧನದಾಶೆಗೆ । ಬಲು ।
ಚಿಂತೆಯೊಳೆಂದಘನಾಶಗೆ ॥೪೭॥

**ರಾಗ ಸಾವೇರಿ ಆದಿತಾಳ**

ಅಹಹಾ ಏ ಮುರಮಥನ । ನೀನೆಂಬುದು ।
ವಿಹಿತವೆ ಜಡಜಾಪ್ತನ ॥

ಬಹು ಸ್ತುತಿಸಿದಡನು । ಗ್ರಹಿಸಿದ ಮಣಿಯನು ।
ಅಹಿಶಯನನೆ ತವ । ಮಹಿಮೆಯ ನೋಡಲು ।
ಬಹು ಸ್ತುತಿದೂರನೆ । ಸಹಜವೆ ಕೇಳ್ವುದು ॥೪೮॥

ಮುನ್ನ ಸುದಾಮ ಮುಖ್ಯರ । ಚಿಂತಿತಾರ್ಥಗ ।
ಳನ್ನು ಪಾಲಿಸಿ ಸುರರ ॥
ಸನ್ನುತ ಬ್ರಹ್ಮಾಂಡ । ವನ್ನು ಗರ್ಭದೊಳಾಂತ ।
ಮನ್ಮಥಪಿತ ಕರು । ಣಾರ್ಣವ ನೀ ಮಣಿ ।
ಯನ್ನು ಕೇಳಲು ನಾ । ನಿನ್ನೆಂತೀವೆನು ॥೪೯॥

ಎಂದೆನಲಾ ನುಡಿಗೆ । ನಗುತಲರ ।
ವಿಂದನಾಭನು ಆತಗೆ ॥
ಎಂದನು ಮಧುರೋಕ್ತಿ । ಯಿಂದ ನಿನ್ನಯ ಮನ ।
ನೊಂದುಕೊಳ್ಳಲು ಬೇ । ಡಿಂದು ನಿನ್ನ ಮಣಿ ।
ಯಿಂದಹುದೇನದ । ನಿಂದೀಯದಿರ್ರೈ ॥೫೦॥

**ಭಾಮಿನಿ**

ಇಂದುವಂಶಜ ಕೇಳು ಬಳಿಕಾ ।
ಮಂದಮತಿ ಧನಲೋಭದಲಿ ಗೋ ।
ವಿಂದನಾಜ್ಞೆಯ ಮೀರಿ ಲೆಕ್ಕಿಸದಿರ್ದನುಬ್ಬಿನಲಿ ॥
ಒಂದು ದಿನ ಮೃಗಬಾಧೆಯಿಂದಲಿ ।
ಬಂದು ಭೂಪಾಲಕನ ಅನುಜನೊ ।
ಳೆಂದರಾ ವನಚಾರರೊಂದಿಸಿ ನೊಸಲ ಕೈಗಳಲಿ ॥೫೧॥

**ರಾಗ ಮುಖಾರಿ ಆದಿತಾಳ**

ತೆಕ್ಕೋ ಸಲಾಮು ಸರ್‍ರನೆ । ಪ್ರಸೇನಭೂಪ ।
ತೆಕ್ಕೋ ಸಲಾಮು ಸರ್‍ರನೆ ॥ ಪಲ್ಲವಿ ॥

ಅಡವಿಯೊಳಗೆ ಮಿರಗ । ಗಡಣ ಹೆಚ್ಚಿಕೊಂಡೀಗ ।
ಗಿಡಗಳ ಪುಡಿಗೈದವು । ಒಡೆಯ ಕೇಳ್ಕೈದವು ॥೫೨॥

ಜಂಬು ಬದರಿಗಿಡ । ಲಿಂಬೆ ಮೊದಲು ಬುಡ ।
ತುಂಬಿದ ಪುಷ್ಪವ ಕೂಡ । ಹಾಳಾದ ಕೇಡ ॥೫೩॥

ಪೇಳುವದೇನಿಂದು । ಪಾಳುಗೈದವು ಬಂದು ।
ಏಳಿರೆಂದೆನಲು ಬೇಗ । ಪೇಳಿದನಾಗ ॥೫೪॥

**ರಾಗ ಪಂಚಾಗತಿ ಮಟ್ಟೆತಾಳ**

ಯಾತಕಿದಕೆ ಚಿಂತೆ ಕೇಳಿ । ಮಾತನೊಂದನು ॥
ಬೀತಿರುವ ಮೃಗವ ನಾ । ಘಾತಿಸುವೆನು ॥
ಪೇತು ಮೃಗಂಗಳಿಗೆ ಬೆದರ್ವ । ಮಾತದೇತಕೆ ॥
ಸಾತಿಶಯದಿ ತೆರಳ್ವ ಹರಿಣ । ಜಾತಿಹಿಂಸಕೆ ॥೫೫॥

ಭರದಿ ಸರ್ವರಾಯುಧವನು । ಧರಿಸಿ ಕರದೊಳು ॥
ನೆರಹಿ ಆಟವಿಕ ಜನರ । ನಿರದೆ ಮುದದೊಳು ॥
ತೆರಳಬೇಕು ಕಾನನದೊಳು । ಕರಿಸಮೂಹವ ॥
ಕರಡಿ ಸಿಂಗ ವ್ಯಾಘ್ರಗಳನು । ತರಿದು ಕೆಡಹುವ ॥೫೬॥

ಎಂದ ಮಾತ ಕೇಳುತೆಲ್ಲ । ರೊಂದುಗೂಡುತ ॥
ಸಂದ ಧನುಶವರೌಘಗೊಂಡು । ನಿಂದರುಬ್ಬುತ ॥
ಬಂದು ನಮಿಸಿ ನಿಂದ ಶಬರ । ರಂದವೀಕ್ಷಿಸಿ ॥
ಚಂದದಿಂದ ವಾಜಿ ತರಿಸು । ತೆಂದ ಹರುಷಿಸಿ ॥೫೭॥

ತರಣಿಯಿತ್ತ ರತ್ನವನ್ನು । ಧರಿಸಿ ಕೊರಳಲಿ ॥
ಭರದ ದಟ್ಟಿ ಚಲ್ಲಣಗಳ । ನಿರದೆ ತೊಡುತಲಿ ॥
ತುರಗವೇರಿ ಪರಕೆಗೊಂಡು । ಆ ಪ್ರಸೇನನು ॥
ಚರರ ಕೂಡೆ ವನಕೆ ತೆರಳ್ದ । ಏನನೆಂಬೆನು ॥೫೮॥

## ೬. ರತಿಜನ್ಮ (ಶಂಬರಾಸುರ ಕಾಳಗ) - ಪಾತ್ರಗಳು

ಕೃಷ್ಣ
ರುಕ್ಮಿಣಿ
ಋಷಿಗಳು
ಘಂಟಾಕರ್ಣ
ಕಿರಾತರು
ಗಂಧರ್ವರು
ದೇವೇಂದ್ರ
ಈಶ್ವರ
ಪಾರ್ವತಿ
ನಾರದ
ಶಂಬರಾಸುರ

ಮನ್ಮಥ
ರತಿ
ಪೌಂಡ್ರಕ
ಮಂತ್ರಿ
ಸಾತ್ಯಕಿ
ಸಖಿಯರು
ಮಿನುಗಾರ

**ರಾಗ ಶಂಕರಾಭರಣ ಏಕತಾಳ**

ಅರರೆ ಬಲು ಬಲು ಶಭಾಸೈನಾ | ಮರುಳಾದೆ ಕೇಳ್ ಮೊದಲೆ
ನಿನಗಿಂನೊರವ ಕಾರ್ಯವೇನುಂಟು ಕೇಳ್ದರಿದೆ ಖಳರಾಯಾ ||೩೦೪||

ನಾರದನೀನೆಂದ ಮಾತ | ಮಿರೆಮರೆದುದಿಲ್ಲವೈಯ್ಯಾ
ಮಾರನ ತಿಂದಬ್ಧಿಯಲಿ ತೋರಿಸಿ ಬಂದೆ ||೩೦೫||

ಪರಿತೋಷವ್ಯಾತಿನ್ನೆನಂ ತತ್ಪುರದಿ ಪಾಕವನು ಮಾಳ್ಪ
ತರುಣಿಯ ಕ್ರೀಡಿಸುವಂತ ಪುರುಷನಾರೈಯ್ಯಾ ||೩೦೬||

ಮಿನಿನ ಗರ್ಭದಿ ಬಂದ | ಸೂನು ಯೆನ್ನಪ್ಪಣೆಯಿಂದಾ ||
ನಾರಿ ಮಣ್ಣಿಸುವಳನು ಮಾನವೇನಿದಕೆ ||೩೦೭||

ಪಗಲಿರುಳೆನ್ನದೆ ಸಂಪತಿಗೆ ಮೇಲ್ ದಂಪತಿಗಳಂತೆ |
ಮುಗುಳಂಬ ನಾಟ್ಯದೊಳ್ತತಿ ಸೊಬಗಿನಿಂದಿಹರೈ ||೩೦೮||

ಹರ ಹರ ಸಣ್ಣವರನೋಡಿ ಬರಿದಪವಾದಗಳನ್ನು
ಹೊರಿಸುವದಲ್ಲದೆ ಮುಂದೆತರುವ ಮಾತುಂಟೆ ||೩೦೯||

ಬಿಡು ಬಿಡು ಸಾಕಿನ್ನೇನೆಂಬೆ | ಹುಡುಗಿ ಹುಡುಗನ ಬಗೆಯಲ್ಲಾ |
ಕಿಡಿಯೇರುವುದೈ ಬಳಿಕ | ತಡಿಗೆ ಖಳರಾಯ ||೩೧೦||

**ರಾಗ ಮಾರವಿ ಏಕತಾಳ**

ಗರುಡಿಯ ಮನೆಯೊಳು ನಿನ್ನಲಿ ಸಾಧಕ | ವರಿತು ಪುರುಷನೊಡನೇ |
ಮರಣವಬಹುದೆಂದಗಜೇಶ್ವರ | ಪೇಳಿರುವದು ಮರತೆಯಲ್ಲಾ ||೩೧೧||

ನಿನ್ನಲಿ ಪಾಕವರಚಿಸುವಳೆ ರತಿ | ಕನ್ನೆಗೆ ಬೆರದಿರುವ ||
ಚನ್ನಾಂಗನ ಸ್ಮರದಂಪತಿಗಳನೀ | ಮನ್ನಿಸುವದು ಸಹಜ ||೩೧೨||

ಯೇಕೋಭಾವದೊಳೆಮ್ಮ ಪುರವೀಕ್ಷಿಸ । ಬೇಕೆನುತಿಹ ಜನಕೆ
ಯಾಕೆ ವಿರೋಧವ ಮಾಳ್ಪುದು ನಮ್ಮ ವಿ । ವೇಕವು ಹಿತವಲ್ಲಾ ॥೩೧೩॥

**ಕಂದ**

ಇನಿತೆಂದಾಕ್ಷಣ ಪೋಗಲ್
ಮುನಿ ವಚನವ ಕೇಳ್ದು ಮನಚೇತರಿಕೆಗೊಳುತಂ
ದನುಜಾಧಿಪ ಕಡುರೋಷಪೆತ್ತು
ಕೊನೆ ಮಿಸೆಯ ತಿರುವುತ ದೂತರಿಗೆಂದಂ ॥೩೧೪॥

**ರಾಗ ಕೇತಾರಗೌಳ ಝಂಪೆತಾಳ**

ಚರರು ಕೇಳ್ ಮಂದಿರದೊಳಿರುವ ಸಣ್ಣವನ
ಸಿರಿವರದ ನಮ್ಮೊಡನೆ ಬಂದೊರೆವುದೀಕ್ಷಣದೀ ॥೩೧೫॥

ಘನಪಾಕಗೃಹದೊಳೀ ವನಿತೆಯನು ಪಿಡಿದು
ಈಕ್ಷಣೆ ಸೆರೆಮನೆಯೊಳಿರಿಸೆನುತ ನೇಮಿಸಿದ ॥೩೧೬॥

**ಭಾಮಿನಿ**

ದುರುಳರೆಂದುದ ಕೇಳಿ ಕರ್ಕಶ ।
ಚರರು ಬಂದಾಕ್ಷಣದೊಳಂತಃ ।
ಪುರದ ರತಿಯೊಡನತಿ ವಿಲಾಸದೊಳಿರುವ ಮನ್ಮಥನಾ ॥
ಭರದಿ ತುಡುಕಲು ದೂತರನು ಸಂ ।
ಹರಿಸಿ ನಿಮ್ಮಯ ತಾತಗುಸುರೆಂ ।
ದೊರೆಯಲೋರ್ವನು ಖಳನ ಸನ್ನಿಧಿಗೈದು ಮಣಿದೆಂದಾ ॥೩೧೭॥

**ರಾಗ ಕೇದಾರಗೌಳ ಝಂಪೆತಾಳ**

ಬಿನ್ನವಿಸಲ್ಯಾಕೆ ಜೀಯಾ । ಲಾಲಿಪು । ಚೆನ್ನಾಯ್ತು ಕಾಯ್ದ ಕಾಯ ॥
ಇನ್ನೇನು ಹಾಡುಹಗಲೇ । ಮಲಗಿದಳು । ಸಣ್ಣವನ ಬದಿಯೊಳಬಲೆ ॥೩೧೮॥

ಮತ್ತವನ । ಧೀರತನಕೆಣೆ ಇಲ್ಲವಯ್ಯಾ
ಶೂರ ಕೇಳ್ ನಿಮ್ಮವರನೂ । ಕ್ಷಣದೊಳೆಮದನೂರಿಗಟ್ಟಿ । ತರಳನೂ ॥೩೧೯॥

**ವಾರ್ಧಕ**

ದೂತರೆಂದುದ ಕೇಳ್ದು ಧರೆಗಿಳಿದು ನಾರದನ ।
ಮಾತುಪುಸಿಯಲ್ಲೆನುತಖತಿವೆತ್ತು ನಿರ್ಜರಂ ।

ಭೂತಪತಿಯಂತೆ ಭೋರ್ಗರದು ಕೆಂಗಿಡಿಯನುಗುಳುತಾರ್ಭಟಿಸಿ ಮುಂದೆ ಬಂದೂ ॥
ಭೂತಳವೆ ನಡಗುವಂದದಿ ಮುತ್ತಿ ಗಜರಥ ಪ ।
ದಾತಿಗಳ್ವೆರದು ಖಳನೈತಂದು ನಿಜ ಮಕರ ।
ಕೇತನರ್ಕದಲ್ಲಿ ಮುದದಿ ಮೈಮರದಿರಲ್ ಕಂಡು ಮತ್ತಿಂತೆಂದರೂ ॥೩೧೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಹಹ ಮುನಿಯೆಂದುದನು ಮನದಲಿ । ಗ್ರಹಿಸಿ ನೋಡಲುಬೇಕೆನುತ ವಿ
ಗ್ರಹದಿ ಮೃತ್ಯುವ ತಂದು ಸೇರಿಸ । ಬಹುದೇ ಹೀಗೆ ॥೩೧೧॥

ಘನದುರಿತ ಭಯಕಂಜಿ ಮಗುವಿನ । ವನದಮಧ್ಯದಿ ಬಿಸುಟುಬಂದಿರು । ವೆನಗೆ
ಮೂಲ ವಿದಾತು ಮುಂದಿಂದೆ । ನುವದೇನೂ ॥೩೧೨॥

ಮಿನಿನಂದದಿಶಿರುವ ಶಿಶುವನು । ಮಾನುನಿಯವಶಕಿತ್ತು ದನುಚಿತ ।
ಯೇನನಾದರಿನ್ನೇನು ಬುದ್ಧಿ । ಹೀನನಾದೆ ॥೩೧೩॥

**ಭಾಮಿನಿ**

ಬಗೆಬಗೆಯ ಮೋಹದಲಿ ಸುಪ್ಪ ।
ತ್ತಿಗೆಯ ಮೇಲ್ ದಂಪತಿಗಳೀರ್ವರು ।
ಮೊಗಕೆ ಮೊಗವಿತ್ತಂದದಲಿ ಬಿಗಿಯಪ್ಪಿ ಮಲಗಿರಲು ॥
ಬಿಗಡರಕ್ಕಸರಾರ್ಭಟೆಗೆ ತ ।
ತ್ಸುಗಣೆತಾನೆಚ್ಚರ್ತಳಾಕ್ಷಣ ।
ಮುಗುದೆ ಮನ್ಮಥನುರಕೆಕುಚಗಳನಿತ್ತು ಪೇಳಿದಳೂ ॥೩೧೪॥

**ರಾಗ ಕಾಂಭೋಜಿ ತ್ರಿವುಡೆತಾಳ**

ಎನ್ನೊಳೇನಿದೆ ಮುನಿಸು । ಕೇಳಿನ್ಯಾವಕನ್ನೆಯೊಳಿಡೆ ಮನಸು ।
ಮಣ್ಣನೆಯಲ್ಲಿ ಮತ್ತನ್ಯರಾವೆರಸೀಗಾ ನಿನ್ನ ಬಿಟ್ಟಿರುವಳಲ್ಲಾ । ಏನಲ್ಲಾ ॥೩೧೫॥

ಚತುರನೆಂತುಸುರುವೆನು । ಮಹಾಬ್ಧಿಯೊಳ್ಮೊದಲೆನಾ ಮುಳುಗಿದೆನು ।
ಮದನಕೇಳಾಕ್ಷಣವೆನ್ನ ಬಲೆಯಾಗದಿದ್ದರೆ । ಬದುಕುವ ಬಗೆಯ ಕಾಣೆ । ನಿನ್ನಾಣೆ ॥೩೩೬॥

ಅನುದಿನ ಮನ್ಮಥನ । ನಿನ್ನಲಿ ಬಿಟ್ಟೆನ್ನನು ಕಂಗೆಡಿಸಿರುವಾ ।
ತನುವಿಗೆನ್ನಿಂದ ಮೃತನುವಿದಲ್ಲಿನ । ಕನಸಿನ ವೈದ್ಯವಹುದುದಲ್ಲಿ । ನಿನ್ನಲ್ಲಿ ॥೩೧೭॥

**ಕಂದ**

ಅತಿಸನ್ಮೋಹದಿ ಕಾಂತನ ।
ರತಿ ತನ್ನಯ ತೋಳ್ಗಳಿಂದ ತಕ್ಕೈಸುತಿರಲಿತ್ತ ।
ಸ್ಮಿತ ವದನೆಯ ಗಲ್ಲವನುಂ ।
ಪತಿಭಾವದಿಪಿಡಿದು ಮುದ್ದಿಸುತಿಂತೆಂದಂ ॥೨೧೮॥

**ರಾಗ ನೀಲಾಂಬರಿ ಏಕತಾಳ**

ಭಾವಕಿ ನಿನ್ನಗಳಿದರಿನ್ಯಾವ ಸುದತಿಯೆನಗೆಣೆಯೇ
ಕೇವಲ ಸಂಜೀವನ ಸನ್ಮೋಹದದರಗಿಣಿಯೇ ।
ಮಾವಿನಹಣ್ಣಿನ ರಸವು ಸೋಸುತಿಹ ಕೋಗಿಲೆಗೆ ।
ಬೇವಿನಫಲ ಸೊಗಸಹುದೆ ಕೋಗಿಲೆ ಪೇಳೆನಗೆ ॥೨೧೯॥

ಚಂದಿರನಂದಿರುವನಕನಂದಗಳಳಿಲ್ಲದೆ ಬರಿದೇ ।
ನಂದನದಿಲ್ಲಿ ಪುಷ್ಪಗಳೆಂದಿಗೂ ನೋಡುವುದೆ ।
ಆಂದಿಂದಿನ ಸಂಪ್ರೀತಿಗಳೆಂದಿಗೆ ಸಾಕೆನಿಸುವುದೇ ।
ಸುಂದರಿ ನಮ್ಮಿರ್ವರ ಸನ್ಮಂಗಳೆರಡಿಹುದೇ ॥೨೨೦॥

ತರುಣಿಮಣಿ ನಾರದನಿಗೆ ಭರವಸವಿತ್ತುದರಿಂದ ।
ಪರಿಪರಿ ಸೈನ್ಯ ಶಂಭರಕದನಕ್ಕೆ ನಡೆತಂದಾ ।
ಅರೆನಿಮಿಷ ದೈತ್ಯನ ಸಂಹರಿಸಿ ಸುಪಾದ್ಯರನು ।
ತರುಣಿ ನಿನ್ನಗಲದೆ ಸಾನಂದದೊಳಿರಿಸುವೆನೂ ॥೨೨೧॥

**ಭಾಮಿನಿ**

ಸರಸಿಜಾಕ್ಷಿಯನೊಡಂ ಬಡಿಸಿ ಪೂ ।
ಶರಮನೋರಂಗದಲಿ ಪ್ರೇಮಿಸಿ ।
ದರಸಿಯನ್ನೊಡಗೊಂಡು ರಣಕ್ಕೈತಂದು ಮುಂಬರಿದಾ ॥
ತುರಗಜರಥ ಸೈನ್ಯಗಳ ಸಂ ।
ಹರಿಸಿ ಸಂತೋಷದಲಿ ಬಾಣವ
ಸುರಿವುತೊಯ್ಯನೆ ಪೊಕ್ಕುದನುಜನೊಳೆಂದ ನಸುನಗುತ ॥೨೨೨॥

**ರಾಗ ಶಂಕರಾಭರಣ ಮಟ್ಟೆತಾಳ**

ಭಳಿರೆ ಧೈತ್ಯ ತರಳನೊಡನೆ ಸರಸವೇನಿದೆ ।
ಬರಿದೆ ದಳವ ತಂದ ಭೂತಳವ ತುಂಬಿದೆ ॥
ಚೆಲುವ ಮೋಹನಾಂಗಿಗಿತ್ತು ಸಲಹುಯೆನ್ನನೂ ।
ಚಲುವದಲ್ಲ ನಿನಗೆ ಈ ಚಲವ ಮನದೊಳು ॥೨೨೩॥

ಪೋರತನದ ಮಾತಿನಲಿ ಶರೀರದಾಶೆಯ ।
ಮಾರಬೇಡವೆನುತ ರೋಷವೇರಿ ಮಿಸೆಯಾ ।
ಪೋರತನುಜ ತಿರುಹುತಾ ಕಠೋರದಸ್ತ್ರದೀ ।
ಮಿರಿಡದ ಗರ್ಜಿಸುತ್ತ ಮಾರನುಗ್ರದೀ ॥೩೩೪॥

ಉರಿಯನುಗುಳ ಕೈಯ್ದು ಸರಳ ಮುರಿದು ಮನ್ಮಥ ।
ಭರದಿ ಪೇಳ್ದ ತನ್ನ ಪೊರೆದ ಹಿರಿಯನೆನ್ನುತ ॥
ಸ್ಮರಿಸಿನೋಳ್ದರಿಂತು ಬರಿದೆ ಶೌರ್ಯವ್ಯಾತಕೇ ।
ದುರುಳನೋಡೆನ್ನುತ್ತಲೆಚ್ಚ ದುರುಳನಂಗಕೆ ॥೩೩೫॥

ಶಿವನೆ ತನ್ನ ಮೈಯ ಕುಸಿವ ಕೋಪದೀ ।
ಕುಸುಮಬಾಣನೆಂಬ ನಿನ್ನ ಹೆಸರ ನಿಮಿಷದೀ ॥
ಮಸಣಿಸುವೆನೆಂದು ಧರಣಿ ಕುಸಿವ ತೆರದಲೀ ।
ಪೊಸಶರವುಗಳ ವೆಚ್ಚನಾರ್ಭಟಿಸಿರೌದ್ರದಿ ॥೩೩೬॥

ಒದಗಿ ಬರುವ ಶರವನರಿತು ಹರಿವ ಕೋಪದಿ ।
ತುದಿಯದೀಗಲೆನುತಲೆಚ್ಚಲದ್ಭುತಾಸ್ತ್ರದೀ ॥
ಮುದದಿ ಶಂಭರನ್ನ ನೋಡಿ ಮದನ ಹೊಡೆಯಲು ।
ಒದರಿ ಮೈಯ್ಯ ಮರೆದನಂದು ಕದನ ಕ್ಷಿತಿಯೊಳೂ ॥೩೩೭॥

**ವಾರ್ಧಕ**

ರಘುರಾಮ ರಾವಣರ ಸಮರಕಿಮ್ಮಡಿಯಾಯ್ತು ।
ಮಗುಳಂಬು ದೊಲವನೆಂ ತೊರೆವೆ ಶಂಬರನಾ ಸೈ ।
ನ್ಯಗಳಲ್ಲಿ ಗಜತುರಗ ಕಾಲಾಳುಗಳು ಸಾಲುಗಟ್ಟಿ ತಾಮಡಿವುತಿರಲೂ ॥
ಗಗನಸುರರಘೇಯೆಂದೆನುತಿರಲು ಖಳನು ಪ
ನ್ನಗನಂತೆ ಭೋರ್ಗರೆದು ಮದದಿ ಮೈ ಮುರಿದೆದ್ದು
ಮಿಗೆಮಹಾ ರೋಷದಲಿ । ಕೆಂಗಿಡಿಯನುಗುಳುತ್ತ ಮನ್ಮಥನಿಗಿಂತೆಂದನೂ ॥೩೩೮॥

**ರಾಗ ಭೈರವಿ ಏಕತಾಳ**

ಅಡಿಗೆಯ ಮನೆಯೊಳ್ನಲಿವಾ । ಆ । ಮಡದಿಯ ಮಾತಾಡಿಸುವಾ ।
ಬೆಡಗಲ್ಲ ನೋಡ್ ತರಳ । ಎಂದೊಡನೆಚ್ಚನು ಕಳಸರಳಾ ॥೩೩೯॥

ತನ್ನರಸಿಯನಾಳುವದೂ । ಕೇ । ಳೆನುತವೆ ಮೇಲ್ವರಿದು ।
ಅನ್ಯಾಂಗನೆಯರಗೊಲಿದು ಫಲ । ವೆನ್ನುತಲಾಸ್ತ್ರವಸುರಿದು ॥೩೪೦॥

ಬಣ್ಣದ ಸವಿಮಾತಿನಲಿ । ಯೆಲೆ ಹೆಣ್ಣುಗಳತಿ ಮೋಹದಲೀ ।
ಬಣ್ಣಿಪ ಸೊಗಸಲ್ಲೆಂದಾ । ಆ । ಚೆಣ್ಣನತುರಿದನಂದೂ ॥೩೪೧॥

ಅಂದಂದಿಗು ಮುನಿಗಳನೂ । ಸಾ । ನಂದದಿ ಸುರಪಾದ್ಯರನೂ ।
ಬಂಧಿಪ ಶೌರ್‍ಯನಿದಲ್ಲಾ । ನೋ । ಡೆಂದೆ ಸೆದನೂಕಬ್ಬಿಲ್ಲಾ ॥೩೪೨॥

ಪುರಹರ ಪಾಲಾಗ್ನಿಯಲೀ । ಬಿ । ದುರಿದುದು ನೋಡು ನಿಮಿಷದಲೀ ।
ಶಿರವರಿಯದೆ ನೋಡೆನುತ । ಖಳ । ಸುರಿದಸ್ತ್ರವ ಕೋಪಿಸುತಾ ॥೩೪೩॥

ಬರುವಸ್ತ್ರವ ಸಂಹರಿಸಿ । ಆ । ಸ್ಮರನತಿರೋಷವ ಧರಿಸಿ
ಉರುತರ ಬಾಣದಿ ಮದನ । ಕತ್ತರಿಸಿದ ಹಸ್ತಗಳಿವನ ॥೩೪೪॥

ಘೋರ್ಗರವುತ ಆರ್ಭಟಿಸೀ । ಆ । ಕೂರ್ಮನು ನಡುಗುವ ತೆರದಿ ।
ಮಾರ್ಮಲವ ಸುರಾಧಿಪನು । ನಿಜ । ಕಾರ್ಮುಕವನು ತುಡುಕಿದನೂ ॥೩೪೫॥

ಕಳನಿರವನು ಕಂಡಾಗ । ಮನುಮಥನಳುಕದೆ ತಾ ಬೇಗಾ
ಘಳಿಲನೆ ದೈತ್ಯನ ಶಿರವ । ಧರೆಗಿಳುಹಿದಾ ಬಾಣದೊಳಸುವ ॥೩೪೬॥

**ವಾರ್ಧಕ**

ಧರಣಿಪತಿ ಕೇಳಿಂತು ಶಂಭರನ ಮಸ್ತಕವು ।
ಧರಣಿಯೊಳ್ಕುಣಿವುದಂ ಕಂಡು ಸುರರಂಬರದಿ ।
ಹರುಷಾಬ್ಧಿಯೊಳಗಾಡಿ ಮದನರತಿಯರ ಮೇಲೆ ಪೂಮಳೆಯಗರೆಯೆ ಮುದದೀ ॥
ಮೆರೆವ ದುಂದುಭಿ ನಾದಮಂಗೈದು ಸುದತಿಯರ್ ।
ಮೆರೆದು ದಿವ್ಯಾರತಿಯನೆತ್ತಲು ಬಳಿಕ ಸುಮ ।
ಶರ ನಧಿಕತೋಷದಲಿ ನಿಜಸತಿಯೊಳಾನಂದವೆರೆದ ನಂತಃಪುರದೊಳೂ ॥೩೪೭॥

**ಕಂದ**

ನಾರದ ಮುನಿಯಿತ್ತಲಾ ।
ದ್ವಾರಕಿಗೈದು ಹರಿಯಮಂದಿರಗಾಗಳ್ ।
ನಾರಾಯಣ ಸಿಂಹಾಸನ ।
ವೇರಿವಿದಿಯೋಪಚಾರಗೈವುತಿಂತೆಂದಾ ॥೩೪೮॥

**ರಾಗ ಬೇಗಡೆ ಏಕತಾಳ**

ಎತ್ತಣಿಂದ ಬಂದುದು ಸಾರಿ । ಸಂತೋಷವಾಯ್ತು ।
ಚಿತ್ತದಿ ನಮ್ಮೇಲೆ ದಯದೋರಿ । ಸತ್ಯವಂತರ ಬೇಟಿನಮಗಿನ್ನೊತ್ತರಕಾರ್‍ಯ ಲೋಕದ
ವರ್ತಮಾನವೆಲ್ಲಾ । ಸಾಂಗ್ಯದಿ ವಿಸ್ತರಿಸಿ ಪೇಳಬೇಕೆನ್ನತ್ತಣಿಂದಾ ॥೩೪೯॥

ಅಷ್ಟಮೂರ್ತಿಮಹಿಮಸಾನಂದ। ನಾನೆಂದ ಮಾತಿಗೆ। ಮುಟ್ಟಿನಂದನನಿತ್ತ ನೋಡೆಂದಾ।
ತೊಟ್ಟಿಲೊಳಿಟ್ಟು। ಚಂದದಿಂದ ಮುದ್ದಿಟ್ಟು। ತೂಗುತ್ತಪಾಡಿ
ಕಣ್ಣಿಟ್ಟು ಸತಿಯರ್ಕಂದಿರಲು ಮಾಪುಟ್ಟಮಂಗಳ ಮಾಯವಾದುದು ॥೩೫೦॥

ಜೀವಭಯವಿಲ್ಲೆಂದು ರುಗ್ಮಿಣಿಗೆ। ನಾಪೇಳ್ದನಂತ। ಭರ್ಾವ ನಿಶ್ಚಯವಿಲ್ಲಾ ಭಾಮಿನಿಗೆ।
ಆವನಂಗೋಪಾಂಗ ಲಕ್ಷಣದವ ಭಾವವ ಚಿಂತಿಸುತಿಹ
ಭಾವಕಿಯ ಸಂತಾಪವನು ಮಹದೇವನೊಬ್ಬ ನೋಡಿ ॥೩೫೧॥

**ಭಾಮಿನಿ**

ಮುರಹರನ ನುಡಿ ಕೇಳಿ ನಾರದ।
ಹರುಷದಲಿ ನಸುನಗುತ ನಿನ್ನಯ।
ಪರಮಮಾಯಕ ಯೆನ್ನೊಡನೆ ಬೀರುವದು ತರವಲ್ಲಾ॥
ದುರಿತಹರ ನೀನರಿಯದಿದನೆಂ।
ದೊರವೆನ್ನೈ ನಾನೆಂದು ತಾಪಸವರನು।
ಸುರಲಾಕ್ಷಣದಿ ರುಕ್ಮಿಣಿ ಕೇಳ್ದಳೊಲವಿನಲೀ ॥೩೫೨॥

**ರಾಗ ತೋಡಿ ರೂಪಕತಾಳ**

ಕಾಣಲಿಲ್ಲವೆಯೆನ್ನ ಮಗುವಾ। ಇಂತ। ಜಾಣವಿದ್ಯಾತಕೆ ಶಿಶುವಾ
ವೇಣಾಂಕ ಶಂಕರನಾಣೆ ನಿನ್ನಯ ಮುಂದೆ। ಪ್ರಾಣಯಿವೆನು ಪಂಚ ಬಾಣನಸೋವಾ ॥೩೫೩॥

ಬರಿದೆ ಮೂಜಗವ ಸಂಚರಿಸಿ। ಅಲ್ಲಿ। ಸರಸದಿ ಚಾಡಿಯ ನಡಿಸಿ।
ಆರೆನಿಮುಷದಿ ಸತಿಪುರುಷಗೆ ಜಗಳವ। ತರಿಸಿ ನೋಡುವ ಮಹಾವರ ಮುನಿರಾಯ॥ ಕಾಣ ॥೩೫೪॥

ಕನಸಿನಗಂಟಿನಂತಾಯ್ತು। ಕೇಳೈರತಿಪತಿ ಪಿತನೆಂದ ಮಾತು
ವೆನುವದೇನಿದು ಕಂದರ್ಪನ ಬಾಲಲೀಲೆಯ। ಕ್ಷಣವಾಗಲಿ ಮನದಿ ಮುದ್ದಿಸಲಿಲ್ಲಾ ॥೩೫೫॥

ಗಂಡು ಸಾಕೆಂದೆಯುತಲ್ಲೆನುತವಾಗದೆ ಕಣ್ಣಿಕ್ಕಿ ಕಂಡೆನು ಮನವಾ॥
ಉಂಡುಂಡು ಮೋಜಿನೊಳ್ಪುಂಡರಿಕಾಂಬಕ। ಗಂಡುಳ್ಳಗರತಿಯ ತಂಡದೊಳಿಹುದಾಯ್ತು ॥೩೫೬॥

ಹೆಂಗರುಳಾದಕಾರಣದೀ। ಅಂತ ರಂಗದೊಳ್ಮರುಗುವೆ ಮನದಿ।
ಹೆಂಗಳಹಲುಬಿದ। ರಂಗಜವಿರವೆಂತು। ಕಂಗೊಳಿಪುದುಯೆನ್ನ ಅಂಗನೆಗುಸುರಿದಾ ॥೩೫೭॥

**ರಾಗ ಶಂಕರಾಭರಣ ಅಷ್ಟತಾಳ**

ಜಂಭರಾಳಕಿ ನಿನ್ನ ಸುತನ। ಖಳ ಶಂಭರಾಸುರ ಬಂದಂಗಜನ। ವೈರಿ
ಯೆಂಬಾ ಸಂಶಯದಿಂದ। ಸುರನ ನೋಡಿ ಬಹುಶ್ಯ ದೋಶಕನ। ತಂದು। ಅಂಬುಧಿನಿಡಲರಳಂಬುಜ ಮಿನೊಂದು ಸಂಭ್ರಮದಲಿ
ನುಂಗಿತಂಬುಜ ನಿಭಮುಖ ॥೩೫೮॥

ಮಿನಿನ ಗರ್ಭದಿ ನಿಂದು । ಸಾ । ನಂದದಿ ವಿವರಿಸಲೋರ್ವ ಬಂದೂ ।
ತನ್ಮಧ್ಯದೊ ಪಾಪವ ಬೀಳಲಿಂದು । ಆ ಮಿನು ಅದಕ್ಕೆ ಸಿಕ್ಕಲು ಬೇಗ ತಂದು ।
ಮುದದಿ ಶಂಭರಗೀಯಲಿದನು । ಚಂದವನೋಡಿ । ಸರಸದೊಳಿಹಗೆಮ್ಮ ಸುದತಿಯ
ಕರೆದೆಂದಾ ॥೩೫೯॥

ಭರದಿ ಪಾಕವ ಮಾಡೆಂದನಲು । ಕೊಂಡೊ । ಯರಿಯಲಾಕ್ಷಣ ಬಸುರಿನೊಳು ।
ಸಂದಸರಗಿಲೆ ಕಂಡು ಚಿತ್ತದೊಳು । ತನ್ನ ಪುರುಷನೆಂದರಿತ ನನ್ಯದೊಳು ।
ದಂಪತಿಗಳು ಬೆದರಲ್ಲಿ । ಶಂಭರನಪ । ಹರಿಸಿ ತತ್ಪುರದೊಳಗಿರುತಿಹರೊಂದಾಗೀ ॥೩೬೦॥

**ಶ್ಲೋಕ**

ಸತಿಚಿಂತಾಮಣಿ ನಿನ್ನ ಪುತ್ರನ ಪರಾಕ್ರಮದ ನಾನೆಂತುಸುರಲಿ ।
ದಿತಿಜದೀಶಾನ ಕೊಂದು ಮತ್ತವನಿ ಭಾರವ ನಿಳುಹಿ ಸತ್ಕೃಪೆಯಲಿ ।
ಶಶಿಯಾಗದ್ಯಾರನುದ್ಧರಿಸಿ ದಂಪತಿಗಳು ಮೊಹೊಲ್ಲಾಸದಿಂದಾಡುತಿಹರೆನಲೂ ।
ಮಾಧವನೆಂದ ಸಂತಸದಿ ॥೩೬೧॥

ಸ್ತನ್ಯ ಪಾನವನರಿಯದ ಶಿಶು ಪುಣ್ಯಜನ ಭೂಮಿ ಶಶಂಭರೆನುನ್ನತಹ ಕಿದರೆ ಚೋದ್ಯವಿದೀಗ ನಿನ್ನ ನುಡಿ ಸನ್ನುತ
ಸುಲಕ್ಷಣದಾರತಿಯನು ಮನ್ಮಥನ ಬೆದರಿಸಲು ದಿಟಿವೆ ಹಿರಣ್ಯ ಗರ್ಭನ
ಲಿಪಿಯ ಮಿರ್ದರ್‍ಯಾರು ಭೂವನದಲ್ಲಿ ॥೩೬೨॥

**ರಾಗ ಕಾಂಭೋಜಿ ಝಂಪೆತಾಳ**

ಇರಲಿತ್ತ ಕಂದರ್ಪ ಮಕರ ಕೇತನದಿಂದ । ಮೆರವ ಮಣಿರಥದಿ ಸತಿಸಹಿತ ॥
ಸರಸದಲಿ ಕಟೆಲಜಾಗಮದೆಡೆಗೆ ಪೂ । ಸರಳನೇರಿಸುತ ಸಂತಸದೀ ॥೩೬೩॥

ಅಂಗನೆಯ ಮೊಗವಲುಗಿ ಮುದ್ದಾಡುತಿರಲು ಮುನಿ ।
ಪುಂಗವಾರರನು ಮೋಹಿಸುತ ॥೩೬೪॥

ರತಿಮಹಾರತಿ ಸೊಬಗವನು ಯಿಕ್ಷಿಸುತ ಜನರು । ಮತಿಗೆಟ್ಟು ತಮ್ಮ ತಮ್ಮೊಡನೆ ।
ಕ್ಷಿತಿ ರಸಾತಳ ದೇವಲೋಕದೊಳಗೀರ್ದರಿಗೂ । ಜತೆಗಾಣೆ ಯೆನುತೀರ್ದರಾಗಾ ॥೩೬೫॥

**ವಾರ್ಧಿಕ**

ಇಂತೆಸೆವ ಸಂಭ್ರಮದಿ ಮಾರನೈ ತರುತ ಮಹಾ ।
ಕಾಂತ ನಾರದ ನುಡಿಯ ಲಾಲಿಸುತ ರುಕ್ಮಿಣಿಯು ।
ಚಿಂತೆಯ ಹರಿಸಿ ಸಂತಸದಿಮದಿರಲ್ ಮಿಂಚಿನಂದದಿ ಮೆರವುತ ॥
ಕಂತುವಿನ ರಥವರಂಜಿಸಿ ಬರುವದ ಕಂಡು ।
ಕಾಂತನಿಹೆನೆಂದು ಕೇಳಲೆ ತವಪುತ್ರ ।
ಕಾಂತೆಯ ನ್ನೊಡಗೊಂಡು ನಿನ್ನ ಸನ್ನಿಧಿಗೈದನೆಂದವರ ಮುನಿ ನುಡಿದನೂ ॥೩೬೬॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅನಿತರೊಳು ದಂಪತಿಗಳೀರ್ವರು | ಮಣಿಮಯದ ಪುಷ್ಪಕವ ನಿಲಿದಾ |
ಜನಕ ಜನನಿಯ ರಂಘ್ರಿ ಕಮಲವ | ಮಣಿವುತಿರಲೂ ||೩೯೭||

ನಂದತನಯನು ಜಾನುಭಾವಗಳಿಂದಳೀರ್ವರು ಅಪ್ಪಿ ಮುದ್ದಿಸಿ |
ದಂದದಿಂ ತೊಡೆವೆಣ್ಣೆಯೊಳಿರಿಸಿ ಇಂ | ತೆಂದ ಮುದದೀ ||೩೯೮||

ಗುರು ಹರಿಯರೆಲ್ಲರನು ವಂದಿಸಿ | ಸರಸಿಜಾಕ್ಷಿಯನರಸಿ ಪೋಪುದು |
ತರವೆ ಹೇಳೆಂದೆನಲು ಮನ್ಮಥ | ನೊರೆದನಾಗಾ ||೩೯೯||

**ರಾಗ ಶಂಕರಾಭರಣ ತ್ರಿವುಡೆತಾಳ**

ಬಾಲಕನೆನುವದು ಜಾಲವೊ ದಿಟವೊ ಲಾಲಿಸ್ಯೆ |
ನಾರದ ನೈತಂದು ನಾನಾ ಧರ್ಮದ ಪೇಳಿಘೋರ ದೈತ್ಯನ ಕಾಲನೂರ ಪೊಗಿಸಿದೆನ್ಯೆ ||೩೭೦||

ತರುಣಿಯೆಲ್ಲಿಹಳೆಂದು ತಿಳಿದವನಾನಲ್ಲ | ಮರೆಮೋಸದ ಆ ಮುನಿವರ ಬೋಧಿಸಿದನಾಗಾ ||೩೭೧||

ಮತಿಯಿಲ್ಲಾ ನಿನಗೆ ದಂಪತಿಗಳು ಮೊದಲೆ ನಿನ್ನದು
ರತಿಯೊಡನೆಂದು | ವೃತವತಾಳಿದನಂದೂ || ೩೭೨ ||

**ಕಂದ**

ಕಂದನವಚನವ ಕೇಳ್ದ ಬುಜಾಂಬಕ |
ಮುನಿಯ ನೋಡಿ ರತಿಯಂಗಜನಂ |
ಚಂದದಿ ಕೈಪಿಡಿದಾ ಕ್ಷಣ
ಮಂದಸ್ಮಿತ | ವಚನದಿಂದ ರುಕ್ಮಿಣಿಗೆಂದಂ ||೩೭೩||

**ಭಾಮಿನಿ**

ಸರಸಿಜಾಂಬಕಿ ನಿನ್ನೊಡನೆ ನಾ |
ನೊರೆದ ನುಡಿಗತಿಶಯದ ಫಲವಿ |
ರ್ವರನು ಸಂತೈಸೆನುತ ತತ್ಕರಕಮಲದಲಿ ಕೊಡಲು |
ಪರಮ ಸಂತೋಷದಲಿ ಮೈತಡ |
ವರಿಸಲಾಕ್ಷಣ ರುಕ್ಮಿಣಿಯ ಕುಚ |
ವೆರಡರೊಳು ಪಾಲ್ಕಡಲು ಸುರಿಯಿತು ಬಹು ವಿಚಿತ್ರದಲೀ ||೩೭೪||

**ವಾರ್ಧಕ**

ನಂದನನ ಬಾಲಲೀಲೆಯ ನೋಡಲಿಲ್ಲ ನಲ ।
ವಿಂದವರ ಕಲ್ಯಾಣ ಸಮಯದಲಿ ಚಿತ್ತಕಾ ।
ನಂದವಂ ಬೆಸಸಬೇಕೆಂದು ರುಕ್ಮಿಣಿಪೇಳ್ದ ನುಡಿಕೇಳಿತಾನಾಕ್ಷಣಾ ॥
ಕಂದರ್ಪಜನಕ ಮುದದಿಂದ ಮೂಲೋಕಜನ ।
ವೃಂದವನು ಬರಿಸೆ ತತ್ಪುರವಲಂಕರಿಸಿ ಬುಧ ।
ಸಂದಣಿಯರೊಡಗೂಡಿ ಶಾಸ್ತ್ರೋಕ್ತ ವಿಧದಿಂದ ಶೋಭಾನವನು ರಚಿಸುತಾ ॥ ॥೩೭೫॥

ಹರುಷದಿಂದಾಗ ಮದುಮಕ್ಕಳಂ ಬಳಿಕರೆದು ।
ಹರಸಿ ದಿವ್ಯಾಭರಣದಿಂದ ಶೃಂಗರಿಸಿ ಸು
ಸ್ವರದಿಂದ ಪಾಡುವ ಸುವನಿತೆಯರೊಳೊಗ್ಗಿನಲಿ ಕುಣಿಕೆಯರ ನರ್ತನದಲಿ
ತರತರದ ವಾದ್ಯ ತಂಬಟೆ ಭೇರಿ ಕಹಳೆವೋಂ
ಕರಿಸಿ ವೀಣಾನಾದ ಪರಮೋತ್ಸಹದಿ ಪಂಚ
ಶರನ ರತಿ ಹಸೆಮಣೆಯ ಮೇಲೆ ಕುಳ್ಳಿರಿಸಿ ಕರಗ್ರಹಣವನು ಮಾಡಿಸಿದರು ॥ ॥೩೭೬॥

**ರಾಗ ಧವಳಾರ**

ಅಂಬುಜಾಂಬಕ ಹಿಡಿಂಬಿಗೆ । ಪರಿ । ದುಂಬೆಗುರುಳಿನಾರಂಭೆಗೆ
ಕಂಬುನಗರದ ಮುಗುಳಂಬನಿಗೆ । ಅಂಬುಜಾವಾರತಿಯಾ ಬೆಳಗಿರೆ ॥೩೭೭॥

**ಮಂಗಳ ಪದ**

ವಸುದೇವ ತನಯನಿಗೆ । ವಾರುಧಿ ಸದನಗೆ । ವಸುಮತಿ ರಮಣನಿಗೆ ಮಂಗಳಂ ।
ವಸುದೆ । ಈರಡಿಮಾಡಿದ ಮಹಾತ್ಮಗೆ । ವಸುದೇವನಿಗೆ ಮಂಗಳಂ ॥೩೭೮॥

ಕಾಲಿಯ ಕೋಣೆಯಲಿ ಕಾಲಿನತಿಪುಟ್ಟಿ । ಕಾಲಲಿ ಕುಣಿದಾತನಿಗೆ । ಮಂಗಳಂ ।
ಬಾಲಗೋಪಿಯರ್ಕೂಡಿ ಬಾಲಲೀಲೆಯನಾಡಿ । ಬಾಲಕೃಷ್ಣಯ್ಯಗೆ ಮಂಗಲಂ ॥೩೭೯॥

ಮಂಗಳಶೀಲನಿಗೆ ಸಂಗೀತಲೋಲಗೆ । ಗಂಗಜನಕನಿಗೆ । ಮಂಗಳಂ ।
ಆಂಗಜಶತಕೋಟಿ ತುಂಗಲಾವಣ್ಯಗೆ । ತುಂಗವಿಠಲನಿಗೆ ಮಂಗಲಂ ॥೩೮೦॥

**ಯಕ್ಷಗಾನ ರತಿಜನ್ಮ (ಶಂಬರಾಸುರ ಕಾಳಗ) ಮುಗಿದುದು**

**ಭಾಮಿನಿ**

ವರಮಹೋತ್ಸವದಿಂದ ರನ್ನದ ।
ಮೆರೆವತೊಟ್ಟಿಲೊಳಿಟ್ಟು ರೇವತಿ ।
ಹರಿಹಲಾಯುಧ ದೇವಕಿಯೆ ಮೊದಲಾದ ನಾರಿಯರೂ ॥
ಪುರದಮುಪ್ಪಿನ ಸತಿಯರೆಲ್ಲರು ।

ಪರಿಪರಿಯ ಲಾಲಿಸುವ ಸಂತಸ।
ವೆರದು ನೋಡುತ ಮೋಹವಿಡಿತುವಳಿರ್ದನೊಲವಿನಲೀ ॥೨೩೨॥

**ವಾರ್ಧಕ**

ಧರಣಿಪತಿ ಕೇಳಿತ್ತ ಶಂಭರಾಸುರನೆಂಬ।
ದುರುಳ ಪೂರ್ವದಲಿ ಪರಶಿವನಲ್ಲಿ ತಪಗೈದು।
ನಿರುತ ಮಹಾಶೌರ್ಯಮಂಪಡೆದು ತನ್ನೊಡನೆ ಗರಡಿಯೊಳು ಸಾಧಕವನೂ ॥
ಅರಿತನೆಲೆ ಜಾಣನಿಂದವಸಾನಬರಲೆಂದು।
ವರವಿತ್ತು ಮಣಿಪುರವನಾಳುತ್ತ ಗರ್ವದಿಂಮುನಿಪದಿರಲೊಂದುದಿನ
ನಾರದಂ ನಡೆತಂದು ಪೇಳ್ದನವನೊಡನೆ ಇಂತು ॥ ॥೨೩೩॥

**ರಾಗ ಸಾಂಗತ್ಯ ರೂಪಕತಾಳ**

ಭರದಿ ಭೂಮಿಯ ಭಾರ। ಕಳೆಯಲೋಸುಗ ತನ್ನ। ತರಳೆಯಾ ಗಂಟಿಕ್ಕುವೆನೆಂದೂ ॥
ಕರದಿಕಂಡದಲಕ್ಷಮಾಲೆಯ ಧರಿಸಿ ಶ್ರೀ। ಹರಿನಾರಾಯಣ ಕೃಷ್ಣ ಯೆನುತಾ ॥೨೩೪॥

ತುಳಸಿಗೋಪಿಚಂದನ ಕಾವಿ ವಸ್ತ್ರವ। ನಳವಟ್ಟು ವೀಣನಂಗದಲೀ ॥
ಇಳೆಗೆ ಮಾರ್ತಾಂಡನೆಳ್ತರು ವಂತೆ ಬಂದು ನಿಂ। ದೊಲಿದಾ ತೇಜೊಸ್ಸುಂಜನಾಗಿ ॥೨೩೫॥

ನಾರದ ನೀಕ್ಷಿಸಿಶಂಭರನೆದ್ದು ಪಾ। ದಾರವಿಂದಕೆ ಕೈಯ್ಯಾಮುಗಿದೂ ॥
ಚಾರುಸಿಂಹಾಸನವೇರಿಸಿ ದಿವ್ಯವಿಚಾರವ ಗೈವುತಿಂತೆಂದಾ ॥೨೩೬॥

ಚರಣಾಬ್ಜದರುಶನದಿಂದೆರಗುತ್ತರೋ। ತ್ತರಕಾರ್ಯವೆಂದು ತೋರುತಿಹೆ ॥
ಬರಿದೆಚಿತ್ತೈಸುವರಲ್ಲ ನೀವೆನಲು ಶಂ। ಭರನೊಳಿಂತೆಂದನು ಮುನಿಪ ॥೩೨೭॥

**ರಾಗ ಕೇತಾರಗೌಳ ಅಷ್ಟತಾಳ**

ಪರಿತೋಷವಾಯ್ತು ಕೇಳ್ ಖಳರಾಯ ಬಹಳ ಸ। ತ್ಕರಿಸಿದೆ ಪ್ರೀತಿಯಿಂದಾ।
ಸುರನರೋರಗರಲ್ಲಿ ನಿನ್ನ ಸಂಪತ್ತಿಗೆ। ಸರಿಗಾಣೆ ಬಿಡುಶಾಭಾಸಯ್ಯಾ ॥೨೩೮॥

ಆದರಿನ್ನೊಂದುಂಟು ಪೇಳ್ವೆಯೇಕಾಂತದಿ। ಭೇದವಿಲ್ಲದೆ ಗ್ರಹಿಸು ॥
ಸಾಧಿಸಿದರೆ ಮುಂದೆ ಕೆಲಬಹುದೀಗನೀ। ವಾದಿಸಬೇಡವೈಯ್ಯಾ ॥೨೩೯॥

ಬಟ್ಟಿಸಿಕ್ಕಿದರೆ ಮೊದಲೆ ಪೇಳುವನಲ್ಲಾ। ಗುಟ್ಟಿನ ಕಾರ್ಯವಿದು ॥
ಗುಟ್ಟಿನೊಳ್ ಮಣಿದು ಕೂಗಿದರೆ ಶೀಘ್ರದಿಂದಾ। ಕೆಟ್ಟು ಪೋಗುವದು ಸಿದ್ಧಾ ॥೨೪೦॥

ಚಿತ್ತವಿಟ್ಟಿದನೀ ಲಾಲಿಸು ಪೋಗುವ। ಹೊತ್ತಾದುದಿಲ್ಲಗೈದು।
ಮತ್ತೇನಾಗದೆ ನೋಡೆಚ್ಚರಿಸಿರು ನಿನಗೊಂದು। ಮೃತ್ಯು ಬಂದೊದಗಿಹುದೂ ॥೨೪೧॥

ಮುರಹರನರ್ಧಾಂಗಿ ರುಕ್ಮಿಣಿಯಲಿ ಪಂಚ । ಶರನುದಿಸಿಹನು ಕೇಳ್ವೈ ॥
ಸ್ಮರ ನಿನ್ನ ವೈರಿಯೆಂಬುದ ನೀನು ಬಲ್ಲೆಯಾ । ಮರೆವುದುಚಿತವಲ್ಲವೈ ॥೨೪೨॥

ಉಗುರಿಂದಾಚಿಕುಟವ ತಳಿರೆಗೆ ಖಡ್ಗವಾ । ತೆಗೆದು ಕೊಂಬುದುಲೇಸಲ್ಲಾ
ಪಗೆವಯರಿರುಣ ರೋಗಗಳನು ಕಂಡಾದಿಯೊಳ್ । ಮುಗಿಸುವದತಿ ಸುಲಭಾ ॥೨೪೩॥

ನಾನೆ ಯತ್ನದಿ ಪೋಗಿ ಶಿಶುವ ತಂದೀಕ್ಷಣ । ಸೂನು ಯೆನ್ನಾ ಬೇಗದಿ ।
ಹಾನಿಯಗೈದರೆ ಮುಂದೆ ಕಂಟಕ ಹೋಯಿತು । ಮಾನಿಸಬೇಡವೈಯಾ ॥೨೪೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತೊರೆದ ನುಡಿಕೇಳಿ ಖಳ ತ । ನ್ನಂತರಂಗದಿ ನಂಬಿ ಧಿಟವೆ ।
ತಾಂತವಕದಿಂ ಬಂದು ಮನಸಿನೊಳ್ । ಚಿಂತೆಗೊಳುತಾ ॥೨೪೫॥

ಮರೆತು ಮಲಗಿಹ ಶಿಶುವನೆಬ್ಬಿಸಿ । ಭರದಿ ಪಾಲೆರದಂತೆ ನೀ ಬಂ
ದೊರದರೀ ವಾರ್ತೆಯನು ಕೇಳ್ವುದು ಮರೆವುದುಂಟೆ ॥೨೪೬॥

ಉಮೇರಮೆಯರಾಸ್ಥಾನವಾಗಲಿರೆ ನಿಮಿಷದಲಿ ನಾಪೊಕ್ಕು ತಂದೀ
ಕ್ರಮವ ನಡಸದ ಬಳಿಕ ಶಂಭರ ಪರಾ । ಕ್ರಮಿಯೆ ಜಗದೀ ॥೨೪೭॥

ಯೆಂದು ನಾರದ ಮುನಿಯ ಬೀಳ್ಕೊ । ಟ್ಟೊಂದುಚಿತ್ತದಿ ಯೋಚಿಸುತ ಖತಿ ।
ಯಿಂದ ತದ್ವಾರಕಿಗೆ ಪೊರಟೈ । ತಂದ ದಿತಿಜ ॥೨೪೮॥

ಮಾಯದಲಿ ಮಲಗಿರುವ ಶಿಶುವನು । ನೋಯಿಸದೆ ನು
ಶಿಯಂತೆ ಕರದೊಳು ಕಾಯಜನ ಕೊಂಡೊಯ್ದನಾ ಖಳ । ರಾಯನಂದೂ ॥೨೪೯॥

**ಭಾಮಿನಿ**

ಬರಬರುತ್ತಲಿ ಶಿಶುವನೋಡುತ ।
ತರಳ ತನ್ನಯ ವೈರಿಯೆಂಬುದ ।
ದುರುಳತಾ ನಾರದನ ನುಡಿ ಪುಸಿಯೆಂದು ನಿಶ್ಚಯಿಸಿ ॥
ಬರಿದೆನಾ ಶಿಶುಹತ್ಯವಂಗೀ ।
ಕರಿಸಲ್ಯಾತಕೆಯೆಂದು ಶಂಭರ ।
ಶರಧಿಯೊಳು ಬಿಸುಟಾಗ ಪೋಗುತ್ತೀರ್ದ ಗರ್ವದಲೀ ॥೨೫೦॥

**ಕಂದ**

ಇತ್ತಲು ದ್ವಾರಕಿಯೊಳಗಾ ।
ಚಿತ್ತಜನಯ್ಯನ ಶಿಶು ತೊಟ್ಟಿಲೊಳ್ ಕಾಣದಿರಲು ।

ಅತ್ಯಂತ ದುಗುಡದಿ ಸತಿಯ
ಮುರ್ತುತ ಈಕ್ಷಿಸದೆಲ್ಲರತಿ ಕವುತಕ ವಿಚಿತ್ರಂ ॥ ॥೨೫೧॥

**ರಾಗ ಕಾಂಭೋಜಿ ಅಷ್ಟತಾಳ**

ಏನಿದೇನಾಶ್ಚರ್ಯಮಗುವಿಲ್ಲ ತೊಟ್ಟಿಲೊಳ್ । ನೋಡಿ ನೋಡಿ ॥
ನಾನೀಗ ಪಾಲ್ಗೊಟ್ಟು ಬಾಗಿಡಿ ಬಂದೆದೆ । ನೋಡಿ ನೋಡಿ ॥
ಈ ನಮ್ಮ ಕೋಣೆಗೆ ಬರುವವರ್ಯಾರೆಂದು ಬೇಗ । ನೋಡಿ ನೋಡಿ ॥
ಮವುನದಿ ಮರನಂತೆ ನಿಲುವದ್ಯಾತಗೆ ಬೇಗಾ । ನೋಡಿ ನೋಡಿ ॥೨೫೨॥

ಅರೆಕ್ಷಣವಿಲ್ಲ ತೊಟ್ಟಿಲ ತೂಗಿನಾ ಬಂದು । ಯೇನಿರವ್ವಾ ।
ಸರಸದೊಳಗೆ ಕಣ್ದೆರದು ಆಡುತಲಿರ್ದ । ಯೇನಿರವ್ವಾ ॥
ಪುರುಷನ ಬಿಡಿಸಿ ಬರುವೆನೆಂದು ಮನೆಗೈಯದೆ । ಯೇನಿರವ್ವಾ ।
ತರುಣಿಗರುತುವಾಗಿ ಇಂದಿಲ್ಲಿ ಬರಲಿಲ್ಲಾ । ಯೇನಿರವ್ವಾ ॥೨೫೩॥

ಪಗಲಿರುಳಲಿ ಕಾದಿದ್ದವರಾದರು । ಕಂಡಿರೇನ್ನೈ ।
ಮಗುವುಮಂಗಳಮಾಯವಾಗುವದುಂಟೆ ಕೇಳ್ । ಕಡಿರೇನ್ನೈ ॥
ಬಗೆಬಗೆಯಲಿ ಸರ್ವರಕೂಡೆ ಯೆಂಬುವೋಲ್ । ಕಂಡಿರೇನ್ನೈ ।
ಜಗದೊಡೆಯನ ಸನ್ಮೊದ ಸುಕುಮಾರನ । ಕಂಡಿರೇನ್ನೈ ॥೨೫೪॥

**ಭಾಮಿನಿ**

ಇನಿತು ಗೋಳಿಡುತಿರುವ ಯದು ಪ
ಟ್ಟಣದಿ ಮಕ್ಕಳ ಪೆತ್ತ ಸತಿಯರು
ಮನೆ ಮನೆಯಪೊಕ್ಕಲ್ಲಿ ಕಾಣದೆ ಶಿಶುವನೀಕ್ಷಿಸುತಾ ॥
ಮನದೊಳಡರಿಗೊಳುತ್ತ ಸರ್ವರು
ಘನತರದ ಚಿಂತೆಯನು ತಾಳ್ದಿರ ।
ಲನಿತರೊಳೆದುಃಖಿಸಿದಳಾ ರುಕ್ಮಿಣಿಯು ಬಹು ವಿಧದೀ ॥೨೫೫॥

**ರಾಗ ಸಂಗೀತ ಏಕತಾಳ**

ಶಿಶುವೆಲ್ಲಿ ಪೋದುದವ್ವಾ । ಎನ್ನಂತ ಪಾಪಿ । ವಸುಧೆಯೊಳಿಹರೇನವ್ವಾ ।
ಬಸುರಾದುದ್ಯಾತಕಪ್ಪಾ । ಈ ಜನ್ಮದಿ ಜೀ । ವಿಸುವದಿನ್ನೆನು ತಯ್ಯಯ್ಯೊ ॥೨೫೬॥

ಅರ್ತಿಯೊಳ್ ನಲಿನಲಿದು । ಮುದ್ದಿಸಲಿಲ್ಲಾ । ಶಕ್ತಿಯೊಳಿಂತಾದುದೆ ॥
ಕೃತ್ತಿವಾಸನ ನುಡಿಯು । ಕಪಟಸಿದ್ದಾ । ಚಿತ್ತ ಜನಕವೈರಿಯೂ ॥೨೫೭॥

ಶಿವನೇನಾ ಪೇಳಿದನೊ । ನಮ್ಮನೆಯ । ಭವನೊಡನೆಂದುದರೊ ।
ಅವರವರೇನಬಲ್ಲರು । ನಾ ಬರಿದೆ । ಹೆತ್ತವನ ಇನ್ನಾರೊದರೋ ॥೨೫೮॥

**ಭಾಮಿನಿ**

ಅಳಲುತಳಲುತ ದುಃಖಿಸುತ ಈ ।
ಲಲನೆಯನು ಕಾಣುತ್ತ ದೇವಕಿ ।
ಹಲಧರನು ಹರಿಮುಖ್ಯ ಗೋಪಾಂಗನೆಯರೈತಂದೂ ।
ಹಲವು ಚಿತ್ರವಿಚಿತ್ರ ಸನ್ಮತ ।
ದಲಿ ವಡಂಬಡಿಸಿದರು ಮನಸಿನ ।
ಕಲಕು ನಿಲ್ಲದೆ ಮರಳಿ ಹಲುಬಿದಳಧಿಕ ಚಿಂತೆಯಲೀ ॥೨೫೯॥

**ರಾಗ ನಿಲಾಂಬರಿ ಆದಿತಾಳ**

ಎಲ್ಲಿರುವೆ ಯೆಲೊ ಕಂದಾ । ಯೇನಾದುದ್ಯೆ ಯಲೆ ಕಂದಾ ।
ಅಲ್ಲಲ್ಲಿ ಪೋಗುವದ್ಯಾಕೆ । ಆಗದು ಕೇಳ್ ಜೋಕೆ ॥೨೬೦॥

ಕುಣಿದಾಡುತ ಬಾರೊ । ಕರುಣದಿ ನೀ ಮೊಗದೋರೊ ।
ಸೆಣಸುವದ್ಯಾತಕೆನ್ನೊಡನೆ । ಚಿನ್ನ ಮೋಹದ ಮಗನೇ ॥೨೬೧॥

ತೊಟ್ಟಿಲ ತೂಗುವೆ ಮಗುವೆ ಬಾರೀಕ್ಷಣ
ತಟ್ಟನೇ ನೀಬಂದೆನ್ನ । ತೊಡೆಯೊಳು ಮಂಡಿಸು ಚಿಣ್ಣಾ ॥೨೬೨॥

**ಕಂದ ಪದ್ಯ**

ಉರುತರ ಬೆದದೊಳಿರಲಾ ।
ಗರುಡಧ್ವಜನರಿತುಯಿಪರಿಯ ಕರುಣವೆ ॥
ತ್ತು ರುಕ್ಮಿಣಿಯೆಡೆಗೊಂಪರಿ ತಂದತಿ ।
ಪೂರ್ಣತ್ಕರುಣದಿಂ ವಡಂಬಿಡಿಸಿದನಾಗ ಬಹುವಿಧದಿ ॥೨೬೩॥

**ರಾಗ ಸಾರಂಗ ರೂಪಕತಾಳ**

ಮರಿದುಂಬೆ ಗುರುಳೆಯೇನೆಂಬೆ । ನಾನೆಂಬೆ । ಮರಿದುಂಬೆಗುರುಳೆ ಏನೆಂಬೆ ॥ ಪ ॥

ತರುಣಿ ಚಂದ್ರಮರು ಸಂಚರಿಸದೆನಿಂದರು । ಹರಪೇಳ್ದ ನುಡಿ ಹುಸಿಬಾರದು ನೀನರಿಯೆ ॥೨೬೪॥

ಚಿಂತೆಯ ಬಿಡುಚದುರೆ । ನೀನೇನ ಬಲ್ಲೆ । ರಿಂತಿತ್ತ ಮಗನಲ್ಲಾವೇ ।
ನಿಂತುನಿಂತಲ್ಲಿಗೆ । ಭ್ರಾಂತಿಯೊಳ್ ಕುಣಿವಂತೆ । ಮಂತರಿಸುವಳಲ್ಲಾಗಂತರವಲ್ಲಾ ॥೨೬೫॥

ಒಲ್ಲದಯವನ ಸ್ಮರಾ । ತಮ್ಮೊಳು ರತಿಯಲ್ಲಿ ಮುನಿದು ಜನರ ।
ಬಿಲ್ಲ ತೋರಿಕ್ಷಣದಲಿ ವಲ್ಲಿಸುವಂತ ಫುಲ್ಲಾಧರೆಗೆ ಮೋಸಾವೆಲ್ಲಿ ಮಲ್ಲಿಗೆ ಗಂದಿ ॥೨೬೬॥

ಸರಸಿಜಾಕ್ಷಿಯರೊಡನೆ | ಮುಂದಾಗುವ | ದೊರೆಯಲ್ಯಾತಕೆ ಸುಮ್ಮನೇ
ತರುಣಿ ನಿನ್ನಾಣೆ | ಪೂಶರನೆಲ್ಲಿದ್ದರೂ ತಂದು | ಕರದುಕೊಡುವೆ ಸ್ಮರನರ ಗಿಣಿ ಹರುಷದಿ ||೧೭೭||

**ಭಾಮಿನಿ**

ಇನಿತು ನಾನಾ ವಿಧದಿ ನಂಬಿಸಿ |
ಮನದ ಚಿಂತೆಯ ಪರಿಹರಿಸಿ ಬ
ಲ್ಲೆನು ತಿರುವ ಕಣ್ಣೀರ ಕೈಯಿಂದೊರಸಿ ಮುಂಗುರುಳಾ ||
ವನಜಲೋಚನಸಿದ್ಧಿ ಸನ್ಮೋ
ಹನದಿಗಲ್ಲವ ಪಿಡಿದಲುಗಿ ಚುಂ
ಬನವಗೈದಾನಂದದಿಂದಲೇ ನೇಮಿಸಿದ ಸತಿಯಾ ||೧೭೮||

**ವಾರ್ಧಕ**

ಅಂದು ಶಿಶುವನು ದೈತ್ಯವಾರಿಯೊಳ್ ಬಿಸುಟಿರ |
ಲ್ಕೊಂದು ಮಿನದ ನುಂಗುತಿರಲಾಗ ಗರ್ಭದೊಳು |
ಕಂದರ್ಪ ಬೆಳವುತಿರಲಾಗ ಅಂಬಿಕನೋರ್ವನೈತಂದು ಬಲೆ ಬೀಸಲು ||
ಸಿಂಧುವಿನೊಳಗಿಹ ಜಂತುಗಳು ಪಿಡಿಯಲು ಮತ್ಸಾ |
ಬಂಧನಕೆ ಸಿಲುಕಲಾ ಸುಂದರವನೀಕ್ಷಿಸುತ |
ತಂದರಾರತಿಪತಿಯ ಶಿಶುರೂಪ ಶಂಭರನ ಮುಂದಿಟ್ಟು ಮಣಿದೆಂದರೂ ||೧೭೯||

**ರಾಗ ಕಾಪಿ ಅಷ್ಟತಾಳ**

ಖಳರಾಯಾ ಬಿನ್ನಹಮಾಡ್ತೆನೂ | ಸ್ವಾಮಿ | ವಳ್ಳೆಮಿನಾ ತಂದಿಲ್ಲಿ ಭಿಟ್ಟಿದೆ ಕಾಣ್ಕೆ | ನೀಕೊಡೆನಾದರೀಗ | ದರೆಯ
ನಾನತಾಡೆಯಾನಿತ್ತು ಹೋಯೆಕಂ ಬೇಗಾ |
ಬೇಕಿಲ್ಲಿ ಬರಬೇಕೆಂದೆಯಾ ಯೇ ಪರಾಕುಸಮುದ್ರದಿ ಕಚ್ಚಿಕೊಣ್ಡೊಡೆಯಾ ||೧೭೦||

**ಕಂದ**

ಶಂಭರಖಳ ಮಾಂಸಂಗಳ
ತುಂಬಿರುವ ಜಸವನ್ನು ನೋಡುತಾಶ್ಚರ್ಯ ಬಿಡುತ |
ಸಂಭ್ರಮದಿಂ
ದಲೆ ಮನ್ನಿಸಿಕಳುಹಿ ತೋಷದೊಳ ಗವನಿರ್ದಂ ||೧೭೧||

**ವಾರ್ಧಕ**

ಕ್ಷಿತಿಪಾಲಕೇಳೊಂದು ವಿಧಿಘಟನೆಯಂ ಪೇಳ್ವೆ |
ಚಿತಿಗಳನು ಗಣ್ಗೆಚ್ಚೆನ್ನಿಂದುರಿದು
ಮಥನುರಿದು ಪೋಗಿತದ ನಂತರದಿ ತತ್ಸತಿಯಲಿ ಬಹುದೇಶಗಳನು ತಿರುಗಿ |

ಪತಿಯನೆ ಧ್ಯಾನಿಸುತಾನಿರುತಿರಲ್ ದೈವ
ಗತಿಯಿಂದಲಾ ಶಂಭರಾಸುರನ ಸನ್ನಿಧಿಯೊ
ಳತಿಶಯದಿ ಪಾಕಮಂ ಗೈಯುತಿರಲಾಜಿಸವ ಕೊಟ್ಟುರತಿಯೊಡನೆಂದನೂ ॥೧೭೨॥

**ರಾಗ ಭೈರವಿ ಝಂಪೆತಾಳ**

ಆಹಾಹಾ ನೋಡುಮತ್ಸ್ಯ । ಬಹು ಚಿತ್ರವರ್ಣ ಇಂ ।
ದಿಹುದು ಕೇಳೀಕ್ಷಣದೊಳಹಿವೇಣಿ ಮುದದೀ ॥೧೭೩॥

ಪರಿ ಪರಿ ಪದಾರ್ಥಗಳ ವಿರಿಚಿಸಿ ಸದ್ಯೋಗ್ರುತದಿ
ಸುರಿದು ಹರಿ ಜಿಹ್ವೆಯೊಳು ಕರಗದಂದದಲೀ ॥೧೭೪॥

ಯೆನಲು ಮತ್ಸ್ಯನ ತಂದು ಘನವೇಗದಿಂ ಸೀಳಿ ।
ಅನುಪಮದ ಶಿಶುವಿರಲು । ಇಣಿಕಿ ನೋಡಿದಳು ॥೧೭೫॥

ಚೆಲುವ ಸನ್ಮೋಹನದೊಳಳುವ ಸುಕುಮಾರನ ಕಂಡು ।
ಲಲನೆ ಮನಬೆಚ್ಚುತೆಂದಳು । ತನ್ನೊಳಂದೂ ॥೧೭೬॥

**ರಾಗ ಏಕತಾಳ ಸವಾಯ್**

ಎಲೆ ಎಲೆ ಇದೇನು ವಿಚಿತ್ರವೈ ಶಿವಶಿವಾ ।
ಜಲಜಂತುವಿನಲಿ ಮಾನವನುದಿಸುವದು ।
ಚೆಲುವತನದಿ ನೊಡಯೆಣೆ ಇಲ್ಲಾ ಭುವನದಲ್ಲಿ ।
ಫಲವಿನ್ನೆಂತಿಹುದೊ ಶ್ರೀ ಹರಿಗೆ ಗೋಚರವು ॥೧೭೭॥

ಮಾಯಕದ ಶುಬೂತವೊ ವುತ್ಪಾತ ಧೈರ್ಯವೊ ।
ನಾ ಏನು ಮಾಡಲಿ ಮೊದಲೆ ದುಷ್ಕುತದೀ ।
ಪ್ರಿಯನ ಹರನಿತ್ತು ನಾನಾ ವ್ಯಥೆಗಳ ಬಿಟ್ಟು ।
ಈ ಅವಸ್ತೆಗೆ ಬಂದೆ ಹರಹರ ಶಿವನೇ ॥೧೭೮॥

ಪರಸೇವೆಯೆಂಬುದೆ ಸಾಕು ಮತ್ತದರೊಳು ।
ದುರುಳನೋಲಗವೆನುತ ವ್ಯರ್ಥವಾಯ್ತು ॥
ದೊರೆತನದೊಳಗಂತರಂಗವ ಸ್ಥಳವೆಲ್ಲಿ ।
ಪುರುಷನ ಬಚ್ಚಿಟ್ಟು ಸಂತೈಸುವದಕೆ ॥೧೭೯॥

**ಭಾಮಿನಿ**

ಅದುಭುತವೆಂದಾ ಮಾನಿಸಿ ವಿಧವಿಧದಿ ಚಿಂತಿಸಲ್ಕೆ ನಾರದ ನಂಬರದಿಂ ನೀಕ್ಷಿಸುತ ರತಿ ಪದ್ಮದೊಳೆರಗಿ ಮುದದಿಂಪೇಳ್ದಳ್ ॥೧೮೦॥

**ರಾಗ ರೇಗುಪ್ತಿ ಝಂಪೆತಾಳ**

ಸಾಕು ಬಿಡು ಮನೋವ್ಯಾಕುಲತೆ ಚದುರೆ ।
ಶ್ರೀಕಾಂತನೊಲಿದನಿನ್ಯಾಕೆ ಚಿಂತಿಸುವೆ ॥ ಪಲ್ಲ ॥

ರತಿಯೆನೊಳ್ತವಪತಿವ್ರತ ನಿರೀಕ್ಷಿಸಿದೆಯೆದೊಳೆತ್ತಿ ಸೊಬಗದಿಂದ ಮನುಮಥನ ಶಿವನೊಲಿದೂ । ಪ್ರತಿಗಾಗಿ ನಿನಗೆ ದಂಪತಿಗಳಾ
ನಂದದಲಿ । ಜೊತೆಯದಾರಿವನ್ನೇನು ಸತಿಶಿರೋಮಣಿಯೇ ॥೨೮೧॥

ಹರನ ಕಣ್ಣೆಚ್ಚೆ ನಿಂದುರಿದ ಕಂದರ್ಪ ಕೇಳ್ । ತರಳಾಕ್ಷಿ ತತ್ಪ್ರಾಣದರಸ ॥
ಹರಿತನುಜ ಮರಳಿ ರುಕ್ಮಿಣಿಯಲ್ಲಿ ತರಳನಾಗಿ ನಿ ನ್ನರಸು ತ್ಯೆದದಿ ವಿರಹವೆಗ್ಗಳಿಸಿ ॥೨೮೨॥

ಚೆಣ್ಣನವನೆಂದು ವಿಸ್ತನ್ಯ ಪಾನವ ಕೊಡದೆ । ಮನ್ನಿಸುವದಿನ್ನು ಗುಣರನ್ನೆ ಸನ್ಮತದೀ
ಅನ್ಯದುತ್ತರ ಕಾರ್ಯದುನ್ನತಿಯಂ ಪೇಳ್ವೆ । ನೆನ್ನುತ ನಡರ್ದನಭವನು ತಾಕ್ಷಣದೀ ॥೨೮೩॥

**ಭಾಮಿನಿ**

ಈಕಳಂಕಿನೊಳಹುದು ತರವ ।
ಖಳಲ್ಲಾ ಮುಂದಿಡುವನೆನ್ನುತ ।
ಲಾಕೆ ಸಂಭ್ರಮದಿಂದ ತೇಜೋಸ್ಪುಂಜದಿಂದೊಲಿದೂ ॥
ಲೋಕದೊಡೆಯನ ಕುವರನೊಡಗೊಂ ।
ಡಾ ಕಮಲದಲನಯನೆ ಮಾರನೊಳ್ ।
ಕೈಕತಾರಿಯ ತೆರದಿ ಬಂದಸುರೇಂದ್ರಗುಸರಿದಳೂ ॥೨೮೪॥

**ರಾಗ ಸುರಟಿ ಆದಿತಾಳ**

ಏನಿದು ದನುಜೇಂದ್ರ । ಜೋದ್ಯವಿ । ದೇನಿದು ಗುಣಸಾಂದ್ರಾ ॥
ನೀನೇಮಿಸಲಾ ಮತ್ಸ್ಯವನರಿಯಲು ಮಿನಿನ ಗರ್ಭದೊಳುದಿಸಿದ ನೋಡೇ ॥೨೮೫॥

ಸುರದಿತಿಜಾದ್ಯರಲೀ । ಯಿಂತ । ಪುರುಷರೀವನಿಯಲೀ ॥
ಸ್ಮರನೇ ಬಲು ಸುಂದರನೆಂಬವರ್ಕ್ಯೆ ಮರೆಸಿದನಿವ ಸುಮಶರನನು ಮಿರಿದಾ । ॥೨೮೬॥

**ಭಾಮಿನಿ**

ಸ್ಥಾವರಾದಿಗಳೊಲಿದು ಪುರುಷಗೆ ।
ಜೀವರನು ಮೋಹಿಸದೆ ಮನವಿ ।
ನ್ನಾವ ಲಾಭವ ನೋಡಿ ತನ್ನಂಗದೊಳು ಕುಳ್ಳಿರಿಸೀ ॥
ಆ ವಿದೂಚಿಯದೆಂತು ಸ್ತುತಿಸಿದಾ ।
ದೇವನೀನೆ ಬಲ್ಲೆಯೆನುತತಿ ।
ಸಾವಧಾನದೊಳಂದು ಶಂಭರ ರತಿಗೆ ಯಿಂತೆಂದಾ ॥೨೮೭॥

**ರಾಗ ಮಧುಮಾಧವಿ ತ್ರಿವುಡೆತಾಳ**

ಚಿಂತೆ ಯೇನಿದು ಚಲುವೆ ಕೇಳ್ ರಿಪು । ರಾಂತಕನು ನಮಗೊಲಿದ ಕರುಣದಿ ।
ಸಂತಸದೊಳಾ ಶಿಶುವ ಕೊಂಡ್ಶೈ । ದಂತರಂಗದಿ ಸಲಹಿಕೊ । ಚಂದವಾಗೀ ॥೨೮೮॥

ರನ್ನ ಮಾಣಿಕದುಡಿಗೆ ತೊಡಿಗೆಗ । ಳನ್ನು ತೊಡಿಸಿ ವಿನೋದದೊಳ್ ।
ಸಣ್ಣವಗೆ ಚವುಷಷ್ಟಿ ವಿದ್ಯವ । ಭಿನ್ನವಿಲ್ಲದೆ ಕಲಿಸುವೆ । ಚಂದವಾಗಿ ॥೨೮೯॥

ಗರುಡಿಯಾಲಯದಲ್ಲಿ ಸಾಧಕ । ವರುಹಿದರು ಸಂಧಾನಗಳ ನೀ
ಸರಳುಗಳಭವನೀಡಿಸಂಪತ್ರುಣದಿಂದಲಿ ಸಲಹಿಕೊ । ಚಂದವಾಗಿ ॥೨೯೦॥

**ಕಂದ**

ಇಂತಪ್ಪಣೆಕೊಡುತಲಾಕ್ಷಣ ।
ಚಿಂತಿತಫಲವಾವುದೆಂದು ರತಿಮುದದಿಂ ।
ಕಂತುವಿನೊಡಗೊಡ್ಶೈತಂದು ।
ಸಂತತದಲಿ ತತ್ಪುರವಾಸದೊಳಿರ್ದಳ್ ॥೨೯೧॥

**ವಾರ್ಧಕ**

ವನರುಹಾಂಬಕಿಯಿಂತು ನಿರ್ಭಯದಿ ಮನುಮಥನ ।
ನನುಪಮ ಸ್ನೇಹದಲಿ ಮನ್ನಿಸುತ ವಿಧವಿಧದಿ ।
ಉಣಬಡಿಸುತಸ್ತನ್ಯಪಾನಕೊಡದೇ ಶುಕ್ಲಶಶಿಯಂತೆ ಬೆಳೆವುತೀರ್ದಾ ॥
ದಿನದೊಳೀಕ್ಷಿಸುತಲವನೊಡನೆ ಮುದದಿಂದ ಕಾ ।
ಮನೆ ರತಿಗಳೊಂದಾದ ಸಂಭ್ರಮ ವಿಲಾಸ ಚುಂ ।
ಬನ ಸರಸದಾಲಿಂಗನಾದಿಗಳ ಮೋಹದಿಂದಾಡುತಿರಲತಿ ವಿರಹದೀ ॥ ॥೨೯೨॥

**ರಾಗ ಕಾಂತಾರವ ತ್ರಿವುಡೆತಾಳ**

ಇಂದೆನ್ನ ಮನೋರಥನಂದದೊಳಿವೆ ಕೇಳ್ । ಕಂದರ್ಪ ಕರುಣದಲಿ ।
ಅಂದಿಂದಿನಗಲಿದ ಸನ್ಮೋಹ ಸರಸವು । ಕೇಳೊಂದು ಪ್ರೀತಿಯಿಂದಾ ನೆರದಿಂದಾ ॥೨೯೩॥

ವರತಪಸಿಗಳಾದರೂ ನಿಜಂಕರಿಸಿ ಪೂ । ಸರಳು ಬೆಂಬಿಡದಾದುದು ।
ಪರುಶವೇರಿಸಿ ಸರ್ವತೆರದೆಂದು ಮಾಳ್ಪದ ತ್ಪುರುಷನ ಕೈಪಿಡಿದೂ ॥೨೯೪॥

ವಿರಹತಾಪವ ತಾಳಿರುವದೆನ್ನಯ ವಿಧಿ । ಬರಹವಲ್ಲದೆ ಬೇರೆ ನೊರೆಯಲ್ಯಾತಕೆ ಕಾಂತಾ ॥೨೯೫॥

**ಭಾಮಿನಿ**

ಇನಿತು ವಿರಹೇಕಾಂತದಲಿ ಮನು ।
ಮಥನನನುಪಮ ದಿವ್ಯಸಂಗ ।
ನನವರತ ಹಂಬಲಿಸುತಿರಲಾ ಮದನವರ್ಧಿಸುತಾ ॥
ಅನಿತರೊಳು ನಿಜ ಬಾಲಲೀಲೆಯ ।
ನನುಕರಿಸಿಚಿತ್ತದಲಿ ತನ್ನಯ ।
ಜನನಿ ಭಾವವ ತಿಳಿದಿರಲುಅವಳೆಂದಳತಿಭರದಿ ॥೧೯೬॥

**ರಾಗ ಕಾಂತಾರವ ಝಂಪೆತಾಳ**

ಅಹಹಾ ನೋಡು ಬಲು ಮೋಸವಹುದು ಕೇಳ್‌ನೀನೆನ್ನ । ವಿವ । ಸುವ ಮತ್ಪ್ರಾಣದರಸಾ ॥
ಗ್ರಹಿಸು ಪೂರ್ವದಲಿ ಹರನೇತ್ರದಿಂದದೀಗಾ । ಮಹಿಯೊಳುದಿಸಿದೆ ಕೃಷ್ಣನಲ್ಲಿ ॥೧೯೭॥

ನಾರತಿ ನಿನ್ನರಸಿ ಮಥಾನ ಕಾಯವನು । ಸಾರದಿಂದಲೆ ನೆಲಸಿಹೆವು ।
ನಾರದೈತರು ವನಕಾಗುಪ್ತದೊಳಿಹುದು ಮತ್ತಾರ ಭಯವಿಲ್ಲಾ ನಮ್ಮ ನಿನ್ನಾ ॥೧೯೮॥

**ವಾರ್ಧಕ**

ಸರಸದಿಂದಲೆ ಮದನವರ್ಧಿಸುತ ಸದ್ಗುಣದೊ ।
ಳಿರುವದ ನಿರೀಕ್ಷಿಸಿರನ್ನದುಡಿಗೆ ತೊಡಿಗೆಗಳಲಂ ।
ಕರಿಸಿ ಬಹು ವಿಧದ ವಿದ್ಯಂಗಳಂ ಸಲೆಕಲಿತು ಗರುಡಿಯೊಳ್ ದಿನ ದಿನದಲಿ ॥
ಪರಿಪರಿಯ ಪಾದಕದ ವರ್ಮಗಳ ನರುಹಿ ಸ ।
ತ್ಕರುಣದಿಂ ಕ್ಷಣಬಿಡದೆ ಮೋಹದಿಂದಿರುತಿರಲ ।
ಕವನೆಡೆಗೆ ನಭದಿಂದ ನಾರದ ಮುನೀಶ್ವರಂ ನಡೆತಂ ಪೇಳ್ದನೊಲಿದೂ ॥೧೯೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸ್ಮರನೆ ಕೇಳ್ದಂಪತಿಗಳಿರ್ವರು । ವೆರದು ರತಿಸಂತೋಷವಾಯಿತು ।
ಕೊರತೆವೊಂದಿಹುದೊರೆವೆ ನಂತ । ಷ್ಕರುಣದಿಂದಾ ॥೨೦೦॥

ದುರುಳ ಶಂಭರನಸುವನೀ ಸಂ । ಹರಿಸದಿರೆ ಪುರುಹೂತ ಮುಖ್ಯಾ ।
ಮರರ ಸಂಕಟವಡಗಿ ಹರುಷದೊ । ಳಿರುವದಿನ್ನೂ ॥೨೦೧॥

ಪೊಡವಿ ಭಾರವ ನಿಳುಹಬೇಕೈ । ಕಡು ಪರಾಕ್ರಮಿ ನಿನ್ನ ಖಳಬಂ
ದೊಡನೆ । ಕೆಣಕುವ ತೆರಳಿ ಯತ್ನವ । ನಡಿಸಿ ಬರುವೇ ॥೨೦೨॥

**ಭಾಮಿನಿ**

ಇಂತು ಕೇಳ್ದತಿ ಕರುಣದಿಂದ
ತ್ಯಂತ ಕರಸಂಧಾನಕೊದಗುವ ।

ಮಂತ್ರಿಗಳನುಪದೇಶವಿತ್ತರಿಗಳನು ಸಂಹರಿಸಿ ||
ಸಂತಸದೊಳಿಹುದೆಂದು ಪರಸುತ
ಕಂತುವಿನ ಬೀಳ್ಕೊಟ್ಟು ನಾರದ
ತಾಂತವಕದಿಂ ಬಂದು ದುರುಳನೊಳೆಂದ ನಸುನಗುತ ||೩೦೩||

**ರಾಗ ಶಂಕರಾಭರಣ**

ದುರುಳ ಕೇಳೆಲಾ | ದುಗುಡವೇನೆಲಾ |
ಕೊರಳಕಡಿವೆನೆನುತ ಕೂರ್ಗಣೆಗಳೆಸೆದನೂ ||೧೭೯||

ಕಡಿವುತಸ್ತ್ರವಾ | ಖಳನು ರೋಷವಾ
ವಡನೆ ತಾಳಿ ವರಶರೌಗವೆಚ್ಚನಾಕ್ಷಣ ||೧೮೦||

ಖಳನ ಶರವನೂ ಕಂಡು ರಾಮನೂ |
ಭಳಿರೆನುತ್ತಾ ಖಡ್ಗದಿಂದ ಬಡಿದದುಷ್ಟನಾ ||೧೮೧||

ಕಡುಗದಿರಿತದಿ | ಕಾಲನಂದದೀ |
ಪಡಪಡೆನುತ ಶೂಲವೆತ್ತಿ ಹೊಡೆದ ಖತಿಯಲಿ ||೧೮೨||

ಅಶಿಕಶೀಲನು | ಅಂದು ಖಳನನು |
ಮುಸುಲವೆತ್ತಿ ಪೊಡೆಯಲಾಗ ಮೂರ್ಛೆಗೈದನೂ ||೧೮೩||

**ಭಾಮಿನಿ**

ಧರಣಿಯಲಿ ಮುಂದೆರಡುದಿನಖುಣ |
ವಿರುವಕಾರಣದಿಂದ ಬದುಕಿದ |
ಹೊರತು ಮುಸುಲಾಯುಧದ ಗಾಯದಿ ಉಳಿದ ಜನರುಂಟೇ ||
ದುರುಳರತ್ಯಂತಾಯಸದಿ ಚೇ |
ತರಿಸಿಕೊಂಡೆಡಬಲವ ನೀಕ್ಷಿಸು
ತಿರಲು ಯದುಕುಲತುಡುಕಲಾ ಬಲರಾಮನಿಂತೆಂದಾ ||೧೮೪||

**ವಾರ್ಧಕ**

ಆಹ ಕೆಡಿಸುವಿರಿನ್ನು ಕಲಹ ಇಂದಿಗೆ ಸಾಕು |
ಸಹಜವಲ್ಲೀಗ ಘನ ಕಾರ್ಯವೊಂದುಂಟು ಮ |
ತ್ತಹಿತನಲ್ಲಿವನು ನಮ್ಮಣ್ಣನಾಗಿಹನ್ಯೆಸೆ ಕೃಷ್ಣ ಬರುವನಕನೀವು |
ಸಹನೆಯಿಂದೀ ಜೀವಮಾತ್ರವನ್ನುಳಿಸೆಂದು
ಬಹುವಿಧದಿ ಯಾದವರನೊಡಬಡಿಸಿ ನಿಜಸೈನ್ಯ |
ಸಹಿತ ಅಂತಃಪುರಕೆ ನಡೆತಂದ ಬಲರಾಮನತಿವಾದ್ಯ ಘೋಷದಿಂದಾ ||೧೮೫||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕ್ಷೋಣಿಪತಿ ಕೇಳ್ ಮೂರ್ಖರವಗುಣ । ಚೂಣಿಗಾಯ ದೊಳಡಗುವುದೆ ಕೇಳ್ ।
ಪ್ರಾಣಮಾತ್ರದಿ ಪವುಂಡ್ರಕನು ನಿಜರಾಣ್ಯ ಕೈದಾ ॥೧೭೩॥

ಮರುದಿವಸ ದುರ್ವಸನವನು ತಾ । ಳ್ದುರತರದಹಂಕಾರದಲಿ ದಳ ।
ವೆರಸಿಮುತ್ತಿದ ರಾತ್ರೆಯಲಿಂ ತು । ಮರಳಿಬಂದೂ ॥೧೭೭॥

ಧಾರುಣೀಯೊಳು ಚೋದ್ಯವೆನಿಸಿ ಕ । ಠೋರ ಕದನಗಳಾಗುತಿರೆ ಭರ
ವೇರಿಕಳಕಳವಾದುದಂತಿಪ್ಪ । ಊರಜನರೂ ॥೧೭೮॥

**ವಾರ್ಧಕ**

ಆರನೆಯದಿನದಿತ್ತ ಕಮಲಾಕ್ಷ ನಡೆತಂದು ।
ದ್ವಾರಕಿಗೆ ಬಂದು ವಸುದೇವ ಮುಖ್ಯರಿಗೆರಗಿ ।
ವೀರರಂ ಮನ್ನಿಸುತ ರುಕ್ಮಿಣೀ ಮೊದಲಾದ ಸತಿಯರಂ ಸಂತೈಸುತಾ ॥
ಆರೋಗಣೆಯಗೈದು ರತ್ನಸಿಂಹಾಸನವ ।
ನೇರಿ ಪವುಂಡ್ರಕನಿರವ ಕೇಳಿ ನಸುನಗುತಿರಲ್ ।
ಭೂರಿ ಬೇಗದಿ ಖಳನ ಬಳಿಯಿಂದ ಚರರೀರ್ವರೈತಂದು ಮಣಿದೆಂದರೂ ॥೧೭೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಂದನಂದನ ಲಾಲಿಸೊ । ನಾವೆಂಬುದ । ನಂದದಿಂದೋಲಾಲಿಸು ॥ ಪಲ್ಲ ॥

ಹಿಂದೆ ಕಾಶಿದೇಶದರಸನ । ಮಗಳಾಗೋ । ವಿಂದ ನಿಮ್ಮಯ್ಯ । ಕೈಪಿಡಿದ ಕಾರಣದಿಂದಾ ॥ ಅ.ಪ. ॥

ಆಪತಿವೃತೆಯೊಳಿಂದು । ಪವುಂಡ್ರಕನೆಂಬಾ । ಭೂಪ ಪುಟ್ಟಿದ ನೋಡಿಂದೂ ।
ಆ ಪರಾಕ್ರಮಿಯ ಪ್ರತಾಪಕಿನ್ನಿದಿರಿಲ್ಲಾ । ಗೋಪಾಂಗನೆಯರ ಸೊಲ್ಲಿಪದಂತಲ್ಲಾ ॥ ನಂದ ॥೧೮೦॥

ದುಮ್ಮಾನದಲ್ಲಿ ದಂಡೆತ್ತಿ । ಬರುವದು ಕೇಳ್ । ನಿಮ್ಮ ಪಟ್ಟಣವನೊತ್ತಿ ॥
ತಮ್ಮನೆಂಬಾಸೆ ಇಂದೊಮ್ಮೆ ಮುತ್ತುವದು । ಸದ್ದರ್ಮವಲ್ಲೆಂದು ಮತ್ತೆಮ್ಮ ನಟ್ಟಿದನಿಲ್ಲಿ ॥೧೮೧॥

ವಾಸು ಕೀರ್ತಿಸು ವಾಮನಾ । ಪೀತಾಂಬರ । ವಾಸುದೇವಾಭಿದಾನಾ ॥
ಈಶಂಕಚಕ್ರಬ್ಜ ಭೂಷಣ ಚತುರ್ಭುಜ । ಸಾಸಿರನಾಮವೆಲ್ಲಾ ಸಮರರ್ಗೆ ಯೋಗ್ಯಾ ॥೧೮೨॥

ಇನ್ನಾದರಿದನೆಲ್ಲನೂ । ತಂದೊಪ್ಪಿಸಿ । ಮನ್ನಿಸಿದರೆ ನಿಮ್ಮನೂ ।
ಭಿನ್ನವಿಲ್ಲದೆ ತನ್ನ ಬೆನ್ನಂತೆ ನೋಳ್ವನು । ನಿನ್ನನೆ ಕೈಮುಟ್ಟಿ ಸಂಪನ್ನಾ ಪೇಳಿರುವಾ ॥ ॥೧೮೩॥

**ಭಾಮಿನಿ**

ಇಂತು ಚರರೆಂದುದನು ಕೇಳುತ |
ಸಂತಸದಿ ಹರಿನಗುತಲೆಂದನೂ |
ಚಿಂತೆಯೇನಿದು ನಮಗೆ ಭಾದ್ಯಾರು ನಾವು ಬಾಲಕರೂ ||
ಪಂಥವೇತಕೆ ಹಿರಿಯರಲಿ ಬಲ |
ವಂತ ನಾಮೊದಲಿಲ್ಲಾ ಸಮರದಿ |
ತಂತು ಮಾತ್ರವ ತೋರಿಕೊಡುವೆ ಸಮಸ್ತ ಬಿರುದುಗಳಾ ||೧೮೪||

**ಕಂದ**

ಇಂತೆಂದು ದೂತರನುಂ |
ಕಂತುಪಿತನು ಬೀಳ್ಕೊಟ್ಟು ಪರಮಕರುಣಾರ್ಣವದೀ
ಸಂತೈಸುತನಿಜಸೈನ್ಯವ |
ಅಂತಕನೆದೆನಡುಗುವಂತೆ ನಡೆದನಾ ಹವಕಂ ||

**ರಾಗ ಪಂತುವರಾಳಿ ರೂಪಕತಾಳ**

ವಾರಿಜಾಕ್ಷ ನಡೆದ ಸಮರಕೆ | ಸಂತೋಷದಿಂದಾ | ಸರಸಿಜಾಕ್ಷ ನಡದ ಸಮರಕೆ || ಪಲ್ಲ ||

ತರತರದಲಿ ಛತ್ರಚಾಮರ ನಿಶಾನಿ ಸಾಲ್ಗೆ ಎರಡು ತಟ್ಟಿನಲಿ ವೀಲಾಸವೆರಡು ಹರಿ ನಿರೀಕ್ಷಿಸುತ್ತ ರೋಶದಿ ಘೀಂಕರಿಸಿ ಮೆರೆವುತಿಹ ನಗಾರಿ ಘೋಶದೀ ಇಂದಿರೇಶ ಭರದೊಳೈದಿ ಗರುಡನೇರಿದಾ | ಕರದ ಮೇಲ್ವರಿಯತೆರದಿ | ಇಂದಿರೇಶ ನಡದ ಸಮರಕೆ ||೧೮೫||

ಜಂಭವೈರಿ ಮುಖ್ಯ ಸುರಕದಂಭವೆಲ್ಲಾ ತಮ್ಮ ತಮ್ಮವರ |
ಕುಂಭಿಣಿಯರ ಕೂಡಿ ಗಗನತುಂಬಿ ಮುಸುಕುವಂತೆ ಕೇಳು |
ಅಂಬುಜಾಕ್ಷಪುರದ ಯಾದವಾದಿಗಳ ಕೂಡೆ |
ಸಂಭ್ರಮದಲಿ ಸರಸವಾಡುವಾಟ ರಚಿಸುತ ವಿ |
ಜ್ರುಂಭಮಾತ ಸೇರಿ ರಿಪುಗಳುಂಭಿನಿಂದಾ ಸವರುತಾಗಾ |
ಸರಸಿಜಾಕ್ಷ ನಡದ ಸಮರಕೆ | ||೧೮೬||

**ವಾರ್ಧಕ**

ಏನೆಂಬೆನದುಭುತವಸುರಿಯಾಹವದಿನೃಪಾ |
ಸೇನೆಗಳ್ ಬೆದರೆಹಿಮ್ಮೆಟ್ಟಲಾ ಖಳತನ್ನ
ವೈನತೇಯನಡರ್ದು ಕರಚತುಷ್ಟಯದಿಂದ ಧುರಕೈದಿ ಬಂದು ನಿಲಲು ||
ನಾನಾ ವಿಚಿತ್ರ ಬಿರುದುಗಳಿಂದ ವೀಕ್ಷಿಸುತ |
ದಾನವಾಂತಕ ಮಹೋಲ್ಲಾಸದಿಂ ಗಹಗಹಿಸಿ |
ಮಾನಕಂಜುವನಲ್ಲಾ ಎಂದು ನಿಶ್ಚೈಸಿ ಮತ್ತಿಂತೆಂದ ಖೂಳನೊಡನೇ ||೧೮೭||

**ಭಾಮಿನಿ**

ಅಣ್ಣನವರೇ ನಮ್ಮ ಗರುಡನ ।
ಬಣ್ಣ ಮಿಗಿಲಾಗಿಹುದು ಪುತ್ತಳಿ ।
ವರ್ಣದಂತಿದೆ ಮರವೊಮಣ್ಮರದಿಂದಲೊಪ್ಪುವದೊ ॥
ಮಿಣ್ಣಗಿಹುದೀ ಪಕ್ಷಿಮಹಿಮೆಯ ।
ಬಣ್ಣಿಸುವರೆನಗಳವೆ ನೀವದ ।
ಸಣ್ಣವನ ಮೇಲ್ದಯದಿ ಹಾರಿಸಿ ತೋರಬೇಕೆಂದಾ ॥೧೮೮॥

**ರಾಗ ಶಂಕರಭಾರಣ ಮಟ್ಟೆತಾಳ**

ಹರಿವಿನೋದವೆರದು ಪೇಳ್ದಾನುರುತರಾಗ್ರದೀ ।
ದುರುಳಬೋರ್ಗರವುತೆಂದ ದುರದ ಮಧ್ಯದೀ ॥
ತರಳನೆಂಬ ಮರದನುಡಿಯ ಮರಸಿಬಿಡುವೆನೊ ।
ಮರುಳೆ ಸಂಗರದಿ ಹಲ್ಲಾ ಮುರಿಸಿಕೊಡುವೆನೂ ॥೧೮೯॥

ನಿಲ್ಲಲೋ ವಿಚಾರವುಂಟು ಕಳ್ಳ ನೋಡಿಕೋ ।
ಸುಳ್ಳುಸಟೆಯಾನೆಲ್ಲ ಗೊಲ್ಲರಲ್ಲಿತೋರಿಕೋ ॥
ಬಲ್ಲೆ ನಿನ್ನಾ ಬಿರಿದುಗಳಿಗ್ಯಾಕೆ ಕಂಡಿತೂ ।
ಸಲ್ಲಾವಿನ್ನು ಬರಿಬೆಸವುರ್‍ಯಾವೆಲ್ಲಾನಿಗಿತ್ತು ॥೧೯೦॥

ಹಿಂಡು ಗೋವ್ಗಳನು ಕಾದಲಂಡತನದಲೀ ।
ಕಂಡಕಂಡವರ ಮನೆಯೊಳುಂಡು ಸುಖದಲೀ ।
ಮಿಂಡಿ ಪೆಣ್ಗಳೊಡನೆ ಕುಣಿವ ಭಂಡವೃತ್ತಿಯಾ ।
ಕಂಡಿಸೀಗಾ ತೋರ್ಪೆ ನಿನ್ನ ಪುಂಡಚೇಷ್ಟೆಯಾ ॥೧೯೧॥

ಯದುಕುಲಾಗ್ರಗಣ್ಯನಾದ ಉದರಭರಣಕೆ ।
ದಧಿಯ ಪಾಲ್ಬೆಣ್ಣೆ ಕದ್ದು ಮೆಲುವದ್ಯಾತಕೆ ॥
ಮುದುಕ ಸಹಿತಯನ್ನ ಬಳಿಗೆ ಮುದದಿ ಬಂದರೆ ।
ಸದೆಯದಿನ್ನು ಸಲಹಿಕೊಂಬೆ ಬೆದರಿನಿಂದರೇ ॥೧೯೨॥

ಮತಿವಿಹೀನ ಪುತ್ರರುದಿಸಿ ಸತತ ಕೀರ್ತಿಯಾ ।
ಕ್ಷಿತಿಯೊಳೆಲ್ಲಾ ತುಂಬಿಸಿದಿರಿ ಪಿತನ ಬಾಳ್ವೆಯಾ ।
ಅತಿಶಯವು ಚಂದವಾತು ಕೃತಕ ನಿನ್ನನೊ ।
ಹತವ ಮಾಳ್ಪೆನೆನುತ ಬಾಣಕತಿಯೊಳೆಸದನೂ ॥೧೯೩॥

**ವಾರ್ಧಕ**

ಧರಣಿಪತಿ ಕೇಳ್ಬಳಿಕ ಹರಿಯಕವುತುಕವ ನೆಂ ।
ತೊರವೆ ನಾಖಗಪತಿಗೆ ನಮಿಸಲವ ಬಂದೆರಗಿ ।

ಮೆರೆವ ಚಿನ್ನದಗರುಡ ನೂತನದಕರದ್ವಯದ ಆಭರಣ ಬಿರುದುಗಳನೂ ।
ಚರಣಚಂಚುಕ ಪುಟಗಳಿಂದ ತಂದಾಕ್ಷಣಂ ।
ಮುರಹರನ ಮುಂದಿಡುತಿರಲ್ ।
ದುರುಳ ತಲೆಕೆಳಗಾಗಿ ಬೀಳುತಿರೆ ಕಂಡು ಹರಿ ತಾನಗುತಲಿಂತೆಂದನೂ ॥೧೯೪॥

**ಭಾಮಿನಿ**

ಗರುಡವಾಹನವೆಲ್ಲಿ ನಿಮ್ಮಯ ।
ಕರಗಳೆರಡೇನಾಯ್ತು ಪೀತಾಂ ।
ಬರ ಸುದರ್ಶನ ದಿವ್ಯ ಮುಖ್ಯಾಭರಣ ಮೊದಲಿಲ್ಲಾ ॥
ಬರಿದೆ ಧರಣೀ ತಳದಿ ಪೊಗಳುವ ।
ಪರಿಯದೇನಾಶ್ಚರ್ಯ ಭೂತ ।
ಸ್ವರವೊ ಪೈಶಾಚಿಕವೊ ನೀಪೇಳೆಂದನಸುರಾರೀ ॥೧೯೫॥

**ರಾಗ ಶಂಕರಾಭರಣ ಮಟ್ಟೆತಾಳ**

ಮಾನಭಂಗವೆಸವುತಾ ಸುಮ್ಮಾನದಿಂದಾ ಜರೆಯ ಕೇಳುತಾ ।
ಆನರೇಂದ್ರನುರಿಯನುಗುಳುತಾಧಿಕ ರೋಷದೀ ॥
ಭಾನುಮುಸುಕುವಂತೆ ಶರವಿತಾನದಿಂದ ಯಾದವಾದಿ ।
ಸೇನೆಗಡಂ ಪೊಕ್ಕನಾರ್ಭಟಿಸಿ ರೋಷದೀ ॥೧೯೬॥

ದುರುಳನೆಚ್ಚ ಶರಗಳೆಲ್ಲಾ ತರಿದು ಫಡಧಡೆನುತನ್ನ
ಹಿರಿಯನೆಂದು । ತಡದರಿಂತು ಗರ್ವವೇನೆಲ್ಲಾ ।
ಶಿರವನರಿದು ॥ ಭೂತಗಣಕೆ ಹರುಷದಿಂದ ಉಣಿಸಿಬಿಡದೆ ।
ಧುರದಿನಿಲ್ಲು ನಿಲ್ಲೆನುತ ಸುರಿದ ಬಾಣವಾ ॥೧೯೭॥

ಚೋರ ಚೋರ ತನವ ಮಾಳ್ಪೆ ಪೋರಾನಿನಗೆಯೇನು ರಣವಿ
ಚಾರ ಬಲ್ಲೆ ನೋಡು ನೀನು ನಿಮುಶ ಮಾತ್ರದೀ ।
ಮಾರಬೇಡಾ ತೆಂಕದಿಕ್ಕು ನೂರಪೋಗಿಸಿ ತೋರ್ಪೆ
ನುತ ಭಾರಿಗದೆಯ ನೆತ್ತಿ ಹೊದಾ ಖಮ್ಮನಿರೋಶದೀ ॥ ॥೧೯೮॥

ವಗದಿಬರುವ ಗದೆಯ ಮುರಿದು ಪದುಮನಾಭ ನಿನ್ನದು
ರ್ಮದವ ನಿಲಿಸಿಕೊಡುವೆ ನೀಗ ಕದನ ಮಧ್ಯದೀ ।
ಸದರವಾಯ್ತು ಕದನ ನಿನಗೇ ತುದಿಯದೀಗ ಯೆನುತ ಕೂಳ ।
ನೆದೆಯಾ ತಿವಿಯೆ ಕುಂತದಿಂದ ಕುದಿವರೋಶದೀ ॥೧೯೯॥

ಉರು ಕಠೋರವಾದ ಕುಂತ । ಧುರಕೆ ಬೊಬ್ಬಿಡುತ್ತ ಧರಣಿ ।
ಬಿರಿವತೇರೊ ಳೊದರೆ ಭೋರ್ಮೆರವ ಖಡುಗದೀ ॥೨೦೦॥

ಭರದೊಳೆತ್ತಿ ತಿರುಹಿ ಮೇಲ್ವರಿದು ಪೊಡವುತಿರಲು । ಕಂಡು
ಕರಗಳೆರಡು ಕಡಿಯೆ ಶೌರಿತಾಳ್ದ ರೋಷದೀ ॥೨೦೧॥

ಭಳಿರೆ ಭಳಿರೆ ನೋಡು ಕಾಲುಗಳಿಗೆ ಮಾತ್ರವೆನುತ ಉ
ಮ್ಮಳಿಸಿ ಚಕ್ರ ಬಿಡಲು ಪಿಡಿದು ಮಿಂಚಿನಂದದಿ ।
ಮೊಳಗುತಾರ್ಭಟಿಸಿ ಬಂದು ಖಳನಶಿರವ ಭರದಿ ಭೂಮಿ
ಗಿಳುಹಿಮೆರೆದುದಾಗ ಹರಿಯ ಹಸ್ತದೀ ॥೨೦೨॥

**ಭಾಮಿನಿ**

ಅರಸಕೇಳ್ ಪೌವುಂಡ್ರಕನ ಶಿರವನು ।
ಪರಿಹರಿಸಿಯದು ಮೋಹರವೆರಸಿ ।
ಹರಿಯು ಪರಮಾನಂದದಲಿ ರಣಭೂಮಿ ಈಕ್ಷಿಸುತ ॥
ಮೆರೆವ ಭೇರಿ ಮೃದಂಗ ವಾದ್ಯಾ ।
ಸ್ವರದಿ ಪುರಕ್ಕೈತಂದು ನಿಜಮಂ ।
ದಿರವ ಪೊಕ್ಕ ಮಹಾನುಭಾವನು ಮೆರೆದನರ್ತಿಯಲೀ ॥೨೦೩॥

**ಕಂದ**

ಅತಿ ಹರುಷದೊಳ ಭುಜಾಂಬಕ
ಸುತನಾಗುವ । ವಾರ್ತೆಯು ರುಕ್ಮಿಣಿಗರುಹಲ್
ಸತಿಮುದದಿಂ । ದುತ್ತಮ
ಮತಿಯಂ ತಾಳುತ ದೂರಕೆಲಜ್ಜಿಸಿ ಸಾರ್ದಳ್ ॥೨೦೪॥

**ರಾಗ ಝಂಪೆತಾಳ**

ಸತಿ ಶಿರೋಮಣಿ ಪುಷ್ಪವತಿಯಾದಳು । ಮತಿವಂತೆ ಚಲುವಿಕೆಯ ನುತಿಸಲಳವೆಂಬಂತೆ ॥ ಪಲ್ಲ ॥

ಮೃಗಧರನ ಪೋಲ್ವನುಣ್ಮಾದಗ ಮುತ್ತುಗಳಂತೆ ।
ಸೊಗೆಯಿಸುವ ಪೊಡವೆಮ್ಮ ಸೊಗಸಿನಿಂದೊಲಿದು ।
ಮಿಗೆವರ್ಜಿ ದುರುಳಂಪತಿಗಳು ಮೆರವಂದದಲೀ ।
ನಗಧರನ ರಾಣಿ ನಸುನಗುತ ದುಮ್ಮಾನದಲ್ಲೀ । ॥೨೦೫॥

ತರುಣಿ ಮೊಗದಾವರೆಯೊಳಿರುವ ಮಧುರಸವುಂಡು
ಮರಿದುಂಬಿಗಳು ಕುಣಿವಂತೆ ರವಿಮುಂಗುರುಳಾ ॥
ಪರಿಶೋಭಿಸುತಂಬರ ಉಟ್ಟು ನೊಲವಿಂದೆಸೆರಗು ಮಾಸಿದೆವೆಂಬ
ಸರಸವಾಡುತ್ತಲಂದೂ ಸತಿ ಶಿರೋಮಣಿ ॥೨೦೬॥

ಜಲಜಾಕ್ಷ ಚಂದ್ರ ಮಂಡಲವ ಪಣಿತುಡುಕುತಿಹ ।
ವಲವನೀಕ್ಷಿಸಿ ಫಣೆಗೆ ತಿಲಕವಿಡಿದಿಹಳೂ ॥
ಚೆಲುವೆ ಚಂದ್ರುಟ್ಯಯಾದಲೊಪ್ಪಿನಿನ್ಯಾಕೆನುತ ।
ಲಲನೆ ಮುದದಿ ವೀಳ್ಯಕೊಳ್ಳುತ್ತ ॥೨೦೭॥

**ಕಂದ**

ಐನೀರನೆರಕೊಂಡು
ಇನನಲಂ । ಕಾರಭೂಷಿತವಾದಳ್
ಶ್ರೀ ನಾರಾಯಣ । ನೀಕ್ಷಿಸೆ
ಮಿನಾಂಕನ । ಬಲೆಸಿಲುಕಿ ವಿರಹತಾಳ್ದಳೂ ॥೨೦೮॥

**ವಾರ್ಧಕ**

ಮಗಮಗಿಪ ಸುಮಗಂಧ ಪರಿಮಳಾದಿಗಳಿಂದ ।
ಉಗುರೊತ್ತು ಸರಸಚುಂಬನ ವಿನೋದಗಳಿಂದ ।
ಸೊಗಸಿನಿಂದವ್ಯತಾಂಬೂಲ ಗುಟಿಕೆಗಳಿಂದ ನಿಲಲತ್ಯ ಭಾವದಿಂದಾ ॥
ಮೃಗಧರನ ತಲೆಯ ತೋರೆಂಬಸನ್ನೆಗಳಿಂದ ।
ಬಗೆಬಗೆಯ ಸತ್ಕರದಿ ಸರಸವಾದಿಗಳಿಂದ ।
ಮುಗುಳಂಬ ನಾಟಕ ವಿಚಿತ್ರ ರಾಸುಗಳಿಂದ ನೆರದ ಸರಸ ರತಿಯಿಂದಾ ॥೨೦೯॥

**ಭಾಮಿನಿ**

ಮನಸಿಜಾಗಮ ವಿಧಿಯೊಳೊಂದೇ ।
ಮನದಿ ರಾತ್ರೆಯ ನರೆನಿಮಿಷವೆಂ ।
ದೆನಿಸಿ ಸನ್ಮೋಹನದೊಳೀರ್ವರು ಬೆವರುಉದಿಸಿದರೂ ॥
ವನಿತೆ ಮೊಗದಂಜನಿತ ಬೇರೊಂ ।
ದನುಕರಿಸುತಿರೆ ಮುಚ್ಚಿಕಂಗಳು ।
ಗನುತಾರನಂದಲಿ ಗರ್ಭವತಾಳ್ದಳಬುಜಾಕ್ಷಿ ॥೨೧೦॥

**ರಾಗ ಕಾಂಭೋಜಿ ಆದಿತಾಳ**

ಅಹಹ ಯೇನುಸುರಲಿ ಪಿತಪತ್ರವು ತುಹಿನ ಕಿರಣದಂತೆ ।
ಬಹಳ ವಿಲಾಸದಿ ಗರ್ಭವ ಧರಿಸಿದಳ್ ಹರಿಶಯನನ ಕಾಂತೆ ॥೨೧೧॥

ತರುಣಿಲೋಚನೆ ಕಜ್ಜಳ ಸುಪಯೋಧರಧರನೆ ಈಕ್ಷಿಸುತಾ ॥
ಪರಿತಂದಿಹದನುವಂದದಿ ಮೆರದುದು ಗುರುಕುಚದಗ್ರದೊಳು ॥೨೧೨॥

ಲಲನೆಯ ಕುಮಾಳಿಯೆಂಬಹಿಕೆ ಇರಲು ಕಂಡತಿ ಭರದೀ ||
ವಳಸಂಪವಬಿಟ್ಟು ತಿಳುವಳಿಗಳು ವಳಪೊಕ್ಕಳತಿ ಭರದೀ ||೨೧೩||

**ಭಾಮಿನಿ**

ನಳಿನಗರ್ಭನ ಲಾಂಛನವು ಬೆಳೆ
ಬೆಳೆದು ಸತಿಮನದೊಳಗೆ ವಿಧವಿಧ
ಗಳನು ಬಯಸುತ ಮಧುರ ಮನದಲಿ ಮೆಲ್ಲಡಿಯನಿಡುತ ||
ಮಲಗಿ ಮಂಚದೊಳೆದ್ದು ಕುಳಿತಾ |
ಬಳಲಿ ಸಂಕಟಬಡುವ ಭಾವವ |
ಲಲನೆಯೋರ್ವಳು ತಿಳಿದು ಕೇಳಿದಳತಿ ವಿಚಿತ್ರದಲೀ ||೨೧೪||

**ರಾಗ ಸುರಟಿ ಆದಿತಾಳ**

ಚೆನ್ನರಚೆಲ್ಲು ನಿನ್ನಂಗ ದೇಹವು | ಬಣ್ಣಬೇರಾಗಿರಾಹುದೇನೆ |
ಧಿಟ್ಟತನದಿ ದಿವ್ಯ | ಕಸ್ತೂರಿ ಕದಡಿಯ | ಮುಟ್ಟಿನೊಳ್ನೆಲಸಿತ್ತು ಕಾಣೆ ||೨೧೫||

ತಳತಳಿಸುವ ನಗೆಮೊಗವು ಕರ್ಪೂರದಂತೆ | ಹೊಳೆವ ಕಾರಣವೇನು ಪೇಳೇ ||
ನಳಿನಾಕ್ಷಿ ಮುತ್ತಿನ ಮೂಗುತಿ | ಬೆಳಕು ಪ್ರಜ್ವಲಿಸುವದಲ್ಲದೆ ನೋಡೂ ||೨೧೬||

ಬಳಲಿ ಬಾಡುತ್ತ ಬಸವಳಿದು ವಿಳಂಬದಿ | ತಳಿರಡಿ ಇಡುವದಿದ್ಯಾಕೆ |
ಲಲನೆ ಕೇಳದೆ ನಿದ್ರೆಗೈದು ಬಂದುದರಿಂದ | ಕಳವಳವಾಗುವದಿಂದೂ ||೨೧೭||

ಕನ್ನೆಮಣಿಯೆ ಬಾಲೆ ಸುಳಿಯಂತೆ ತುಟಿಯು | ಉನ್ನತವಾಗಿಹುದೇನೆ |
ಕನ್ನೆ ಜಾಣೆ ನೀ ತಿಳಿದುಬಾರೇನೀರೆ | ಎನ್ನಾ ಮೂದಲಿಪುದಿದ್ಯಾಕೆ ||೨೧೮||

ಅರಿತೆ ನಾ ನಿನ್ನಂತರಂಗನಾಚುವದ್ಯಾಕೆ | ತರಳನಾಗುವನು ಶೀಘ್ರದಲೀ ||
ನೆರೆಜಾಣೆಯಹು ಸಾಕುಸಾಕ್ ಬಡಿವಾರ | ಬರಿದೆ ಬಡಿಸಬೇಡಾವೆನ್ನಾ ||೨೧೯||

**ಕಂದ**

ಇನಿತೆಂದುದ ಕೇಳ್ದಾಸಖ |
ಘನಬೇಗದೊಳೈ | ತಂದು ಮನದಿ ಸಂಭ್ರಮಬಡುತ |
ಮನುಮಥ ನರಗಿಣಿಯಂದದಿ
ಕನಕಾಂಬರನಂ | ಘ್ರಿಗೆರಗುತ್ತ ವಿನಯದೊಳೆಂದಳ್ ||೨೨೦||

**ರಾಗ ನವರೋಜು ಆದಿತಾಳ**

ಶ್ರೀ ಮಹಾವಲ್ಲಭೆ ಕೇಳು | ತಾಮಸವೇನಿದು ಪೇಳು |
ತಾಮರಸಾಂಬಕಿ ರುಕ್ಮಿಣಿ ಗರ್ಭವ ತಾಮುದದಿಂದಿರಿಸಿಹಳು ಪರಾಕೇ | ||೧೧೦||

ಪ್ರೀತಿಯ ವಸ್ತುವನ್ನಿತ್ತು | ಸವಿಮಾತನು ಕೇಳಿದೆ ಹೊತ್ತು |
ನೂತನಗರ್ಭಿಣಿಯಾದ ಕಾರಣದಿಂದ ತರುಣಿರನ್ನಳೆ ನಾಚುವಳೆಮ್ಮೊಡನೇ || ||೧೧೧||

ಶೀಮಂತಾದಿಗಳನ್ನು | ಸುಪ್ರೇಮದಲಕರಸಿನ್ನೂ |
ಸಾಮಾನ್ಯದ ಬಸುರಲ್ಲದಾ ನೋಡಲುತಾ ಮನೆಸಂಭವಿಸುವ ನಿನ್ನುದರದೀ | ||೧೧೨||

**ವಾರ್ಧಕ**

ತರುಣಿಯೆಂದುದ ಕೇಳಿ ಸಂತೋಷವೆರದು ಸ |
ತ್ಕರುಣದಿಂ ಬೇಡಿದ ಪದಾರ್ಥಗಳ ನೀವುದೆಂ |
ದೊರೆದು ವೈದಜ್ಯರಕರಸಿ ಲಗ್ನವನಿರಿಸಿ ಪುರವಲಂಕರಿಸಿ ಬಳಿಕಾ ||
ಧರೆಯೊಳಿಹ ನೆಂಟರಿಷ್ಟರ ಕರಸಿ ಬಳಿಕ ಭೂ
ಸುರರ ಸತಿಯರ ಸಮೂಹದಲಿ ಸತಿಯೊಡಗೊಂಡು |
ಮೆರೆವ ಹಸೆಮಣೆಯಲ್ಲಿ ಕುಳಿತು ಸೀಮಂತವಾರಂಭಿಸಿದರತಿ ವಿಭವದೀ ||೧೧೩||

**ರಾಗ ಢವಳಾರ**

ಚಿತ್ತಜನಯ್ಯ ರುಕ್ಮಿಣಿ ಸಹಿತ | ರತ್ನದ ಹಸೆಮೇಲೆ ಕುಳಿತು ರಂಜಿಸುತ |
ಅರ್ತಿಲಿ ಸರ್ವರು ಸಂತೋಷಿಸುತಾ | ಮುತ್ತೈದರೆಲ್ಲರು ಸ್ವರವೆತ್ತಿ ಪಾಡುತ್ತ |
ಉತ್ತಮ ರಾಗದಿ ಪೊಗಳುತಪಾಡುತ | ಮುತ್ತಿನಾರತಿಯಾ ಬೆಳಗಿರೇ || ಶೋಭಾನೆ ||೧೧೪||

ಬೇರಿನಗಾರಿಂಬಟಕುರಿಯದಿ | ಧಾರುಣಿಸುರರು ಪೇಳುವ ಮಂತ್ರಿಗಮನದಿ |
ಚಾರುತರಶ್ವರ ಸ್ತ್ರೀಯ ನೃತ್ಯದೀ | ಭೇರಿಸಹಿತ ಸದ್ಗುಣ ವಿಧಾನದಿ |
ವಾರಿಜಾಕ್ಷಿಯರು ಜೊಡೊಳೆದ್ದು | ಮುದದಿಂದ | ಮೇರುವೆಯಾರಾರತಿಯ ಬೆಳಗೀರೆ || ಶೋಭಾನೆ ||೧೧೫||

ಮಂಗಳಮಹಿಮ ಶ್ರೀರಂಗನಾಯಕಗೆ | ಭೃಂಗಕುಂತಳೆ ಶ್ರೀತುರಂಗಲೋಚನೆಗೆ |
ಗಂಗಜನಕನು ವಿಹಂಗವಾಹನಗೇ | ಸ್ರುಂಗತಾಂಗ ಮೊತ್ತಂಗಗಾಮಿನಿಗೇ |
ಸಂಗೀತಸ್ವರವೆತ್ತು ಶೋಭಾನವೆನ್ನುತ ಸನ್ಮಂಗಳಾರತಿಯಾ ಬೆಳಗೀರೆ || ಶೋಭಾನೆ ||೧೧೬||

**ವಾರ್ಧಕ**

ಪರಮಮಂಗಲ ಖಾದ್ಯವನು ವೈಗರಿಸಿ ಮತ್ತೆ |
ನೆರೆದ ಸಂದಣಿಗೆ ಭೊಜನ ಕನಕ ವೀಳ್ಯವನು |
ಪರಿಪರಿಯ ವಸ್ತ್ರಗಳನಿತ್ತು ಸತ್ಕರಿಸುತಾ ಮುರವೈರಿತೋಷದಿಂದಾ ||
ಇರಲಿತ್ತ ಭರದೊಳಂತಃಪುರದಿ ರುಕ್ಮಿಣಿಯು |

ಹರುಷದಿಂ ನವಮಾಸ ತುಂಬಿ ಸುಮುಹೂರ್ತದೊಳು ।
ಮೆರೆವ ಸತ್ಪುತ್ರನಂ ಪಡದಳೇನೆಂಬೆನಾತತ್ಸುತನ ಚಲುವಿಕೆಯನೂ ॥೧೧೭॥

**ಭಾಮಿನಿ**

ಜನನವನು ಕಾಣುತ್ತ ಕರುಣಾ ।
ವನಧಿ ಸಂತೋಷದಲಿ ನಾನಾ ।
ಜನರ ಭೀಷ್ಟವನಿತ್ತು ದೂರದಿ ಶಿಶುವ ನೀಕ್ಷಿಸುತಾ ॥
ಮನದಿ ಹಿಗ್ಗುತ ನಾಮಕರಣವ ।
ನನುಕರಿಸಿ ಯಂಗನೆಯರಣುಗನ ।
ಕನಕನಿರ್ಮಿತದ ತೊಟ್ಟಿಲೊಳಿಟ್ಟು ತೂಗಿದರೂ ॥೧೧೮॥

**ರಾಗ ಜೋಗುಳ ಪದ**

ಜೋಜೋ ನವಮೋಹನಾಂಗ ಕುಮಾರಾ । ಜೋಜೋ ರುಕ್ಮಿಣಿ ನಂದಕುಮಾರಾ ।
ಜೋಜೋ ಸಾರಸುರಪುತ್ರನೇತ್ರ ಜೋಜೋ ಪಾಸುದಾಕರವಕ್ತ್ರ ಜೋಜೋ ॥೧೧೯॥

ಚೆನ್ನರಚೆಲುವೆ ಮನ್ಮಥ ಪಂಕಜಬಾಣಾ । ಸನ್ನುತ ಸದ್ಗುಣ ಸಲೆಸುಪ್ರವೀಣಾ ।
ಚಿನ್ಮಯಚಾರಿತ ನಿರ್ಮಲನಂದಾ । ಪನ್ನಗಶಯನನ ಮೋಹನ ಕಂದಾ ॥ ಜೋಜೋ ॥೧೨೦॥

ಶ್ರೀಪತಿ ವದನಾಬ್ಜ ಷಡ್ಪದಕಾಮ । ಚಾರುಮಂಗಲ ರೂಪಾ ಪರಿಪೂರ್ಣ ಕಾಮ ।
ಪಾರವಾರ ಗಂಭೀರ ನಿಷ್ಕಳಂಕ । ಕಾರಣಮೂಲ ಕಂದರ್ಪ ಮೀನಾಂಕಾ ॥ ಜೋಜೋ ॥೧೨೧॥

**ರಾಗ ಭೈರವಿ ಅಷ್ಟತಾಳ**

ಲಾಲಿಸೈಯೆನ್ನ ಮಾತಾ ಸದಾನಂದಾ ॥
ನೀಲಮೇಘಶ್ಯಾಮ ಲಕ್ಷ್ಮೀಲೋಲ ಬಂದಿಹನಿಲ್ಲಿಗೇ । ॥ ಪಲ್ಲ ॥

ರಂಗನಾಯಕ ರಮಣೀಯ । ತುರಂಗಧರ ಮುಖ್ಯವೈನತೇಯಾ
ತುರಂಗ ಮೋಹನಾಂಗ ನಾ । ಲಾಲಿಸೈ ॥೮೯॥

ಮಂದಹಾಸ ಮುರಾರಿ ಮುಕುಂದಾ ಗೋವಿಂದಕರುಣಾಸಿಂಧು ।
ಶಕ್ರಂದನಾದಿ ಸುರವಂದ್ಯನಾ । ಲಾಲಿಸೈ ॥೯೦॥

**ದ್ವಿಪದಿ**

ಎನೆಕೇಳ್ದು ಪಾರ್ವತಿಯ ಮೊಗವನೀಕ್ಷಿಸುತಾ ।
ಘನತೋಷದಿಂದ ಧಿಮ್ಮನೆಯೆದ್ದು ನಗುತಾ ॥೯೧॥

ಹೇರಂಬ ಷಣ್ಮುಖಪ್ರಮಥ ಗಣವೆರದೂ
ಚಾರುಗಂಧರ್ವಗಾನದಲಿ ಮನವೊಲಿದೂ ॥೯೨॥

ಗಿರಿಜಾತೆಯೊಡೆಗೊಂಡು ಗಿರೀಶನ್ನೈತರಲೂ ॥
ಗರುಡವಾಹನವಿಳಿದು ಹರಿಯು ಶೀಘ್ರದೊಳೂ ॥೯೩॥

ಹರುಷ ಆಲಿಂಗನವ ಗೈಯೆ ಹರಿಹರರು ।
ಸುರಜಾಲ ಮುನಿಗಳೆಲ್ಲರು ಸ್ತುತಿಯಗೈದಿದರೂ ॥೯೪॥

ವೋಲಗಕೆ ಬಂದು ಸಿಂಹಾಸನವ ಪಡೆದು ।
ನೀಲಕಂಧರನೆಂದಸಂತೋಷವೆರದೂ ॥೯೫॥

**ರಾಗ ಮಾರವಿ ಏಕತಾಳ**

ಏನಿದು ವಿಚಿತ್ರ । ವಿಮಲಚಾರಿತ್ರಾ ।
ದಾನವಾರುಧಿ ಬಂದಕಾರಣವೇನಿದು ॥ ಏನಿದು ವಿಚಿತ್ರ ॥೯೬॥

ಕ್ಷೇಮವೆ ವಸುದೇವ ದೇವಕಿ ಕುಶಲವೆ ।
ಕಾಮಜನಕ ಪರಿಣಾಮವೇನಯ್ಯಾ ॥ ॥೯೭॥

ಆ ಮಹಾರುಕ್ಮಿಣೀ । ಅಷ್ಟಮಾಂಗನೆಯರು ।
ಪ್ರೇಮದೊಳಿಹರೇನ್ನೈ ಪಂಕಜಲೋಚನ ॥ ॥೯೮॥

ತವಸೋದರಿಯನೋಳ್ಪ ಪ್ರೀತಿಯಮನವೋ ।
ದೇವತೆಗಳ ಸಲಹುವಕಾರ್ಯವೇನಯ್ಯಾ ॥೯೯॥

ಭುವಿಯೊಳಧಿಕವಾದ ದ್ವಾರಕನಗರದಿ ।
ಯುವತಿಯರಾಮನೆಗೈವ । ದಾರಿತಪ್ಪಿತೊ ಕೃಷ್ಣ ॥ ಏನಿದು ವಿಚಿತ್ರ ॥೧೦೦॥

ಗರುಡವಾಹನನಾಗಿ । ಸುಂದರುಶನವಿತ್ತು ।
ಪರಿಣಾಮವಾದುದಿನ್ನೇನು ಇಂದಿನ ದಿವಸ ॥೧೦೧॥

ಪರಮರಜತಗಿರಿ । ಪಾವನವಾಯಿತೆಂದು ।
ಹರನು ಪೇಳಲು ಲಕ್ಷ್ಮೀವಲ್ಲಭನಿಂತೆಂದಾ ॥೧೦೨॥

**ರಾಗ ಮಧುಮಾಧವಿ ತ್ರಿವುಡೆತಾಳ**

ಯಾರಿಗಿಷ್ಟುಪಚಾರವ್ಯೆ । ಪಾರ್ವತೀಪತಿ । ಯಾರಿಗಿಷ್ಟುಪಚಾರವ್ಯೆ ।
ಭೂರಿನಿಗಮ ಪುರಾಣದೊಳ್ ನಿನಗೆನಗೆ ಭೇದವ ತೋರಿಸುವ ನೆರೆ
ಜಾಣರುಂಟೇ ಮೂರುಲೋಕದ ಜೀವರಾಶಿಯೊಳೂ ॥ ॥೧೦೩॥

ನಿನ್ನಂತರ್ಯವ ನಾಬಲ್ಲೇ ಯೆನ್ನಿರವ ಕೇಳ್ । ಚೆನ್ನಾಗಿಹುದು ನಿನ್ನಲ್ಲೇ ॥
ದೋಷವಿದೂರ ನ್ಯಾಯಮಥನವ ನಾನೊಲ್ಲೆ ಇನ್ನುಸುರಲೊಲ್ಲೆ ॥೧೦೪॥

ಅನ್ಯರೇನಿದ ತಿಳಿದರೊಂದೇ ಬಣ್ಣಚೆಣ್ಣದೊಳೆರಡು ಬೊಂಬೆಗಳನ್ನು
ನಿರ್ಮಿಸಿದಂದವಿದು ಕೇಳ್ ।
ಮನ್ನಿಸುವರೇ ನಮ್ಮ ನಿರ್ಮ್ಮೊಳ್ ॥ ॥೧೦೫॥

ಮೂವತ್ತೆರಡು ಹಂಗಳಾ । ಮಾಯಕೆ ಸೋತು । ಭಾವಜೆಯರ ಮಂಗಳಾ । ಶೀಲೆಯಮರವಾರ್ತೆ ಕೇಳೀ ಭುವನಂಗಳ
ವ್ಯಾಪಿಸುತ್ತಿರಲಾ
ಸಾವಧಾನದಿ ಮತ್ಸಹೋದರಿ ಯಾವ ರೀತಿಯೊಳಿಹಳೆಂಬ
ಸೋವನೋಡಲು ಬಂದೆನ್ನೈ ಮಹಾದೇವಾ ॥ ॥೧೦೬॥

ದಾರಿತಪ್ಪಿ ನಡೆವರೆ ಪುರುಷರು । ಭೋಗಕೊಲಿದು । ಭ್ರಮಿಸಿ ತರುಣಿರೂಪಿಗೆ ಸೋಲ್ವದು ।
ಚೋದ್ಯವೆ ನಾನಿನ್ನೊರೆಯಲ್ಯಾತಕೆ ಸಾಕಿದು । ನೀಕರುಣಿಸುವದು ಹರನೇ ।
ಕೇಳಾದಿಯಲಿ ಸುಮಶರತರಳತನದಿಂದುರಿದು ಪೋದನು ।
ಬರಿದೆ ಮನ್ಮಥ ಜನಕನೆಂಬ ಬಿರಿದೆನಗೆ ಬಿಡದೇನಮಾಡಲೀ ॥ ॥೧೦೭॥

ಆ ಸಂತಾನವ ಮುದದಿ । ಇತ್ತರೆ ಶಂಭ । ರಾಸುರ ನಾಹವದೀ ।
ಮನ್ಮಥಗೆಲ್ವ । ವಾಸವಾದ್ಯರು ಮುದದೀ ॥ ಸುಖದಿ ಬಾಳ್ವರು ಭರದೀ ॥೧೦೮॥

ಈಶ ಕೇಳ್ತವ ಪತ್ನಿ ರತಿಗೆ ವಿ । ಲಾಸವಹುದು ರುಕ್ಮಿಣಿಯು ಸಂ
ತೋಷಿಸುವಳೆನ್ನಿಂದ ಮನದಭಿ । ಲಾಷೆ ಕೈಸೇರುವದು ಪುರಹರ ॥ ॥೧೦೯॥

**ಭಾಮಿನಿ**

ಪರಮಮಾಯಾ ಪುಂಜವಾಗಿಹ ।
ಹರಿಯವಾಕ್ಯವ ಕೇಳ್ದು ನಗುತಾ ।
ತರುಣಿರುಕ್ಮಿಣಿಯಲ್ಲಿ ಜನಿಸುವ ಮದನ ಶೀಘ್ರದಲೀ ॥
ಭರವಸವಿದೀಗೆಂದು ಪೇಳಲು ।
ನಿರುಪಮಾನಂದದಲಿ ಮುರಹರ ।
ನೆರದಿರುವ ಸುರಪಾದಿ ಸಂದಣಿಗೆಂದನುಚಿತದಲೀ ॥೧೧೦॥

**ರಾಗ ಕೇತಾರಗೌಳ ಅಷ್ಟತಾಳ**

ಕೇಳಿ ನೀವೆಲ್ಲಾ ಕಿವಿಗೊಟ್ಟು ಮಾತಾ ।
ಪೇಳುವೆನಿದು ಸಿದ್ಧಾ ಸುರಮುನಿ ವ್ರಾತಾ ।
ಹರಿಯೆ ತಾ ಹರನಿಂದು । ಹರನು ಶ್ರೀಹರಿಯೆಂದು ।
ಮೆರವುತ್ತಲಿದೆ ಶೃತಿ ಪರಮಮಂತ್ರಗಳಿಂದಾ ॥೧೧೧॥

ಪರಿಭೇದವಿಲ್ಲಾರ್ಥ | ವಾದಿಪುರುಷ ರುದ್ರ ತಮ್ಮೊಳು ನಿರರ್ಥಾ |
ಸಂಶಯದಿಂದಾ ದುರಿತಾಕಾರವ | ಬರಿದೆ ಸಾಧಿಸುವರ್‍ೈ ಕೇಳಿ ನೀವೆಲ್ಲಾ ॥೧೧೨॥

ಶಿವನನೆಂದಿಸುವ ಮಾನವನೆನ್ನಾ ಬೈವಾ |
ಶಿವನನರ್ಚಿಸಿ ಮದ್ಭವನವ ಸೇರುವನೂ ॥೧೧೩॥

ಶಿವಶಕ್ತಾತ್ಮಕರು ನಾವು | ದರ್ಪಣದಿ ತೇಜದಂತಿಹೆವೂ |
ನಿಶ್ಚಯವಿದು ಭುವನವಪಾಲ ಪರದ್ವಯದಂತೆ ॥೧೧೪॥

**ಭಾಮಿನಿ**

ಹರಿಹರರ ಚಾರಿತ್ರಕೇಳುತ |
ಶಿರವ ಕಂನಗ್ಯೆವುತಾಕ್ಷಣ
ಸುರರು ಗಂಧರ್ವಾದಿ ಮುನಿಗಣ ಶಿವಶಿವಾಯೆನುತಾ ॥
ಕರವ ಮುಗಿದತ್ಯಂತ ಹರುಷದಿ |
ಪರಮ ಪುರುಷರು ನಿಮ್ಮ ಮಹಿಮೆಯ |
ನೊರೆಯಲಿಕ್ಕೆಮಗೀಗ ಸಾಧ್ಯವೆ ಎನುತ ನುತಿಸಿದರೂ ॥೧೧೫॥

**ವಾರ್ಧಕ**

ಜಯಜಯ ರಮಾರಮಣ ಜಯ ಪನ್ನಗಾಭರಣ |
ಜಯ ಸುಪರ್ಣತುರಂಗ ಜಯ ಭಸ್ಮಪೂತಾಂಗ
ಜಯ ಹರೇ ವೈಕುಂಠ ಜಯ ವಿಭುಶ್ರೀಕಂಠ ಜಯ ಸುಗುಣ ವರ್ಗ ಭರ್ಗಾ ॥
ಜಯ ಪುಷ್ಪಶರತಾತ ಜಯ ಭೂತಗಣವ್ರಾತ |
ಜಯ ಸರೋರುಹವದನ ಜಯ ರಜತಗಿರಿಸದನ |
ಜಯ ಮಹಾಲಂಕಾರ ಜಯ ಭೀಷಣಾಕಾರ ಜಯ ಮಹಾನಂತಶಾಂತಾ ॥೧೧೬॥

**ರಾಗ ಭೈರವಿ ಝುಂಪೆತಾಳ**

ಇಂತಖಿಳಸನ್ನುತಿಯ | ಸಂತಸದೊಳಾಲಿಸುತ
ಕಂತುಪಿತ ಹರನೆಲ್ಲ | ಯಾಂತರದೊಳಂದೂ ॥೧೧೭॥

ನೆರೆದ ಸಂದಣಿಗೂಡಿ | ಪರಿ ಪರಿಯ ದಿವ್ಯರಸ |
ಭರಿತ ಬೋಜ್ಯಗಳುಂಡು | ಮುರವೈರಿ ಮುದದೀ ॥೧೧೮॥

ಹರುಷದಲಿ ಬೀಳ್ಕೊಂಡು | ಗರುಡವಾಹನದಿಂದೈ |
ಪುರಕೈಯ್ಯಬೇಕೆಂದು | ಭರದಿ ನಡೆತಂದೂ ॥೧೧೯॥

ಪಥವಿಡಿದು ಬಂದು ಮಾ । ಪತಿ ಬದರಿಕಾವನದಿ ।
ಅತಿಮುದದಿ ತಾಪಸರ । ಜತೆಯೊಳಿರುತಿರ್ದಾ ॥೧೨೦॥

**ಕಂದ**

ಪೃಥ್ವಿಪತಿ ಲಾಲಿಸಿ ಕೆ ।
ಳಿತ್ತ ಪವುಂಡ್ರಕ ವಾಸುದೇವನ ಕಥೆಯ
ನತ್ಯಧಿಕನಂದದಿ ।
ವಿಸ್ತರಿಪೆನೆಂದು ಮುನಿಪ ತೊಡಗಿದನಾಗಳ್ ॥೧೨೧॥

**ವಾರ್ಧಕ**

ಹಿಂದೆ ಕಾಶೀದೇಶದರಸಂಗೆ ಸುತರಿಲ್ಲ ।
ವೆಂದು ನಿಜ ಪುತ್ರಿಯಂ ವಸುದೇವಗಿತ್ತು ನಲ
ವಿಂದ ಪಟ್ಟವಗಟ್ಟೆವನಕೈಯ್ಯಲಿತ್ತಲುಂ ತತ್ಸುತೆಗೆ ತೋಷದಿಂದಾ ॥
ಕಂದರ್ಪನಂದದೀ ಪವುಂಡ್ರಕಂ ಜನಿಸಲಾ ।
ನಂದದಿಂ ಆತ್ಮಜನ ಪಟ್ಟಣ ದೊಳಿರಿಸಿಗೋ ।
ವಿಂದಪಿತ ಮಧುರೆಗೈತಂದು ಸಂತಸದಿ ನಿಜಭೂಮಂಡಳವನಾಳುತ ॥೧೨೨॥

**ಭಾಮಿನಿ**

ಮರೆದು ತತ್ಸಂಗವನು ಕಂಸಾ ।
ಸುರನ ತಂಗಿಯ ಮದುವೆಯಾಗಿರು
ತಿರಲು ಮುರಹರ ಜನಿಸಿ ರಂಜಿಪ ವಾರ್ತೆಯಂ ಕೇಳ್ದು ॥
ಉರುತರದ ಮತ್ಸರದಿ ಕಾಶೀ ।
ಶ್ವರನು ಚರರಟ್ಟಲ್ಕೆ ಬಂದಾ
ಹರಿಯ ಮಹಿಮೆಯ ಬಿನ್ನವಿಸಿದರು ಚೆಂದದಿಂದಾಗ ॥೧೨೩॥

**ರಾಗ ಬೇಗಡೆ ಅಷ್ಟತಾಳ**

ಲಾಲಿಸೈ ಕಾಶಿದೇಶಾಧಿಪ ಮುದದಿ । ಪಾಲಿಸಬೇಕು ಕೋಪಿಸದೆ ನೀದಯದಿ ॥ ॥ಪ॥

ವಸುದೇವರೆಲ್ಲಿಹರೆಂದು ನಾವೆಲ್ಲಾ । ವಸುದೇವಂದಿಷ್ಟನ್ನು ಬಿಡಲಿಲ್ಲಾ ।
ದೆಸೆದೆಸೆ ಗೈದಿದೆವು ನಾನಾ ರಾಜ್ಯ । ಗಳನುಪರಿಸಿದೆವು । ಪುಸಿಯಲ್ಲ ಕೇಳಿದೆವು ॥೧೨೪॥

ದ್ವಾರಕ ಪಟ್ಟಣವೆಂಬುದೊಂದಿಹುದು । ಮೂರು ಲೋಕದೊಳಿಲ್ಲದಂತೆ ರಂಜಿಪುದೂ ।
ದ್ವಾರಕೆ ನೀಕ್ಷಿಸಲೆದೆಯು ಬಿಚ್ಚುವುದು । ವೀರಾಧಿವೀರರಾರ್ಭಟೆಗಳೆಂತಿಹುದೂ ॥೧೨೫॥

ನವರತ್ನಖಚಿತಸುವರ್ಣದಾಲಯವು | ರವಿಮಂಡಲವು ತುಡುಕುವದು ಗೋಪುರವು ||
ನವನೂತನದಿ ಶೋಭಿಸುವ ದುರ್ಗದೊಲವಾ | ಶಿವನೊಬ್ಬ ಬಲ್ಲನೈ ಪುರದ ಸಂಭ್ರಮವಾ ||೧೩೭||

ಹರುಷದೊಳ್ ನಿನ್ನಯ್ಯ ನಗರದೊಳಿರುವ | ದುರುಳ ಕಂಸನ ತಂಗಿ ಮದುವೆಯಾಗಿರುವಾ | ಪುರದಗೋಷ್ಠಿಯಬಿಟ್ಟು ಮೋಹದ ಸತಿಯಾ | ಹರುಷದೊಳಾಳುತ್ತ ಸಲಹುವ ಕ್ಷಿತಿಯಾ ||೧೨೭||

ಮಕ್ಕಳೀರ್ವರು ರಾಮಕೃಷ್ಣರೆಂಬವರು | ಚಿಕ್ಕಜವ್ವನದಿ ವಿರಾಜಿಸುತ್ತಿಹರೂ |
ಮಿಕ್ಕವರಂತಿರಲಿ ಕನಿಷ್ಠನಂದನನಾ | ಠಕ್ಕು ಕಾತಾಳಿಗಳೆಂತು ಪೇಳ್ವೆನೀ ಹದನಾ ||೧೨೮||

ಪಂಕಜಾಂಬಕಗೆ ಚತುರ್ಭುಜವಂತೆ | ಶಂಖಚಕ್ರಾ ಗದಾಪದ್ಮನಾಲ್ಕಂತೆ |
ಕುಂಕುಮ ಸಮಕಸ್ತೂರಿ ಬೊಟ್ಟಂತೆ | ಅಂಕದಿ ಭುಜಪರಾಕ್ರಮ ಧೀರನಂತೆ ||೧೨೯||

ಪಕ್ಕಚೋರ ನೆಂಟರಿಷ್ಟರ ಗೃಹವಾ | ಪೊಕ್ಕು ಪಾಲ್ಬೆಣ್ಣೆ ಮೊಸರನು ಮೆಲುವಾ |
ಕಕ್ಕಸ ಕುಚೆಯರ ಕೈಪಿಡಿದೆಳೆವಾ | ಹಕ್ಕಿಯ ಮೇಲೇರಿ ತನ್ನಿಚ್ಚೆಯೊಳ್‌ಮೆರೆವಾ ||೧೩೦||

ಶ್ರೀವಾಸುದೇವನಾತ್ಮಜನೆಂದು ಜನರು | ಭೂವಲಯದಿ ವಾಸುದೇವನೆನ್ನುವರೂ |
ಸಾವಿರ ನಾಮವುಂಟಂತೆ ಸತ್ಕುಲಜಾ | ಮಾವನ ಪೆಸರಡಗಿಸಿದ ನಿನ್ನನುಜಾ || ಲಾಲಿಸೈ ||೧೩೧||

**ಭಾಮಿನಿ**

ಚರರ ವಾಕ್ಯವ ಕೇಳ್ದು ಕೋಪದಿ |
ವುರಿಯನುಗುಳುತ ಹುಂಕರಿಸಿ ಕ |
ಣ್ಣೆರದು ಮಿಸೆಯ ತಿರುಹಿ ದೂತರ ಮೊಗವನೀಕ್ಷಿಸುತಾ ||
ಮರುಳುಗಳಿರಾ ನೀವು ನಮ್ಮಯ |
ಧುರಕೆ ನಿಲುವವರುಂಟೆ ತರಳನ |
ಬರಿದೆ ಪೊಗಳ್ದಿರಿಯೆನುತ ಘರ್ಜಿಸಿ ಮಂತ್ರಿಯೊಡನೆಂದಾ ||೧೩೨||

**ರಾಗ ಕಾಂಭೋಜಿ ಝುಂಪೆತಾಳ**

ಮನೆಯಳಿಯತನದಿ ಬಾಳುವೆನೆಂದು ಮೊದಲು ಮ | ಜ್ಜನಕಮಾ ಕಾಮಹಗೆಪೇಳಿ ||
ಸನುಮತದೊಳೆನ್ನ ಪೆತ್ತವಳ ಕೈವಿಡಿದು ವಂ | ಚನೆ ಗೈದನೀಗ ಕೇಳ್ಮಂತ್ರಿ ||೧೩೩||

ಪಟ್ಟದರಸಿಯನಗಲಿ ಜೇಷ್ಠಸುತನಾನಿರಲು | ಬಿಟ್ಟು ಮತ್ತೊಬ್ಬಳನು ಕೂಡಿ ||
ದಿಟ್ಟತನದಲಿ ಮೋಹವಿಟ್ಟು ಕೂಡಿಹನಂತೆ | ಕೆಟ್ಟನೈ ಮುದುಕತಾನಿಂದೂ ||೧೩೪||

ಯೆನ್ನ ಮಲತಾಯಿ ಪಡೆದಿಹಳಂತೆ ತತ್ಸು ತರ | ಇನ್ನೆಂತೊರವೆನವರಗುಣವಾ ||
ಮುಂನಿನವನೆಜಳ್ಳ ಮತ್ತೊಬ್ಬನೆಕುಳ್ಳ | ಚೆನ್ನಾ ತು ಮತ್ಪಿತನ ಯೋಗಾ ||೧೩೫||

ಕಿರಿಯಮಗ ಕೃಷ್ಣನೆಂಬವನು ಕೇಳ್ಕಳವುಹಾ | ದರದಿ ಬಹುಶೂರ ತರಳನಂತೆ ||
ತರಳರುದಿಸುವದೆಲ್ಲಾ ಪಿತನ ಪುಣ್ಯವೆ ಹೊರತು | ಬರಿದೆ ಸತ್ಪುತ್ರರಹರೆನ್ನೆ ||೧೩೬||

ಗರುಡವಾಹನ ಶಂಕಚಕ್ರಾಬ್ಜಧರದಿಂದ | ಮೆರವುತ್ತ ಭುಜವುನಾಲ್ಕಂತೆ ||
ವರಪೀತವಸನ ಮುಂತಾದ ಬಿರುದುಗಳಲಂ | ಕರಿಸಿದಿವನ್ಯಾರೆಂದು ಪೇಳ್ಕೈ ||೧೩೭||

ಮರುಳಾದನವಳಮಾಯಕೆ ಮುದುಕ ಮುಂದಿನ್ನು | ತರಳರೇ ದಾಯಾದ್ಯರೆನಗೇ ||
ಯೆರಡಾಗಿ ಸವತಿಯೊಳಗಿರುವದಾಯಿತು ಮಜ್ಜನನಿ | ಮರವುದುಚಿತವಲ್ಲನಾವು ||೧೩೮||

ವಸುದೇವತಾನರಸ ಪುತ್ರನಾಗಿರಲು ಕೈ | ವಶವಾದ ಹೆಂಗಳಾತ್ಮಜರೂ ||
ಕುಶಲಗುಣದೀಕ್ಷಿಸದೆ ವಾಸುದೇವಾನೆಂಬ | ಪೆಸರಿಡುವದುಚಿತವೇನ್ಕೈ ||೧೩೯||

**ಭಾಮಿನಿ**

ವರಸಚಿವ ಕೇಳ್ ಧುರಕೆ ಸನ್ನಹ |
ಸರಿಗೊಳಿಸು ದ್ವಾರಕಿಯ ಮುತ್ತುವ |
ತರಳಕೃಷ್ಣನ ಪಿಡಿವನಕ ಲೇಸಲ್ಲನಮಗಿನ್ನೂ ||
ಭರದಿ ಚಿನ್ನದ ಶಂಖ ಚಕ್ರಾಂ |
ಬುರುಹಗದೆಗರುಡಾದಿ ಗೋಪ |
ಸ್ಕರಗಳನು ಒದಗಿಸೆನೆ | ನೃಪತಿಗೆ ಪೇಳ್ದನುತ್ತರವಾ ||೧೪೦||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಕೇಳಯ್ಯ ಕಾಶಿಭೂಪಾಲಕ | ನಾನು | ಪೇಳುವೆ ವಸುದೇವ ಬಾಲಕ |
ತಾಳುವದುಚಿತವೆ ಕ್ರೋಧವ | ವನ | ಮಾಲಿಯೊಡನೆ ಬೇಡ ವ್ಯಾಜ್ಯವಾ ||೧೪೧||

ಮನುಜತಾನಲ್ಲ ನಿನ್ನನುಜಾತಾ | ಜಗ | ಜ್ಜನ | ವಲ್ಲಭವಾಣಿವರತಾತಾ ||
ಘನತರದುಷ್ಟನಿಗ್ರಹಕೆಂದು | ಕುಂ | ಭಿನಿಯೊಳು ಸಂಭವಿಸಿದನು ಬಂದೂ ||೧೪೨||

ಸೇರಿದ ಜನರ ಸಂತೈಸುವ | ತನ್ನ | ವೈರಿಯಾದವರ ಸಂಹರಿಸುವ |
ಧೀರತ್ವ ಬಾರದಾತನ ಮುಂದೆ | ಕೈ | ಸೇರುವನಲ್ಲಾ ನಿನ್ನಯ ತಂದೆ ||೧೪೩||

ಕ್ರೋಧವೆಂಬುದು ಶತ್ರು ಸರ್ವಥಾ | ಸಮಾ | ಧಾನವೆಂಬುದು ಸಕಲಸಮ್ಮತಾ |
ಮಾಧವನೊಡ ಗೆಲ್ಲುವ ಚಿಂತೆ | ಬೇಡ | ಸಾಧಿಸಿ ಮೃತ್ಯುವ ಕರದಂತೆ ||೧೪೪||

ದಶಕಂಠನಿರವ ನೀ ನೋಡಿಕೋ | ಆ | ಶಿಶುಪಾಲನೊಳು ಮಾತನಾಡಿಕೊ |
ಅಸುರ ಕಂಸನ ವರ್ತಮಾನವಾ ಈಗ | ಪುಸಿಯೋ ದಿಟವೋ ತಿಳಿ ಪೋಗುವಾ ||೧೪೫||

**ಭಾಮಿನಿ**

ಇನಿತು ಪೇಳ್ದುದ ಕೇಳಿ ಕೋಪದೊ ।
ಳೆನಗೆ ನೀನುತ್ತರವನೀಯಲು ।
ಧನಬಲವೊ ಮೈನೆಣವೊ ಸುಖದನ್ನಾಸುಸಂಪದವೊ ।
ಮನದಗರ್ವವೊ ಮರುಳೊ ಬೇಗದಿ ।
ರಣಕೆ ಸನ್ನಹಗಳನು ವದಗಿಸು ।
ಎನುತ ವೀರಾವೇಶದಲಿ ಹೊರವಂಟನಾಕ್ಷಣದೀ ॥೧೪೬॥

**ರಾಗ ಪಂತುವರಾಳಿ ತ್ರಿವುಡೆತಾಳ**

ದಂಡೆತ್ತಿ ನಡೆದನಂದೂ । ಪವುಂಡ್ರಕನಂದು । ದಂಡೆತ್ತಿಬಂದನಂದೂ ॥ ಪ ॥

ತಂಡತಂಡದಿ ಸುಪ್ರಚಂಡ ಮೋಹರವಾ ।
ಮುಂಕೊಂಡುಪವುಂಡ್ರಕ । ನುದ್ದಂಡತನದೊಳು ಬಂದೂ ॥೧೪೭॥

ವಸುದೇವನಾತ್ಮಜನಾದಕಾರಣದಿಂದೆಮ್ಮ । ಪೆಸರು ಪವುಂಡ್ರಕವಾಸುದೇವ ।
ಭೂಪತಿಯೆಂಬ ಪೆಸರುಚ್ಚರಿಸಿ ಪೊಗಳುವದೆಂದು ।
ತನ್ನ ಪೆಸರ ಕರೆಯಾನೇಮಿಸಿ ಡಂಗುರಹೊಸಿ ॥ ದಂಡೆತ್ತಿ ಬಂದನಂದೂ ॥೧೪೮॥

ಮೊಳಗುವ ಭೇರಿತಂಬಟೆಗಳು ನಾಲ್ದೆಸೆಯೊಳು ಕಂಪಿಸುವಂದದಿ ಸಂಗರದಿ ಪಲ್ಮೊರೆವುತ್ತೈದಲಭ್ರದಲೀ ಕೆಂಧೂಳಿಗಪ್ಪಿ ಸರಸಿ ತರಣಿಮಂಡಲ ತುಡುಕುವಂತೆ ॥೧೪೯॥

ಮುಂತೊತ್ತಿ ಪಾಲ್ಗಟ್ಟಿ ಪವುಜುಗಳೆಡೆಬಿಡದೆ । ಪೃಥ್ವಿಯೊಳೈತರುತ ಕಂಡಕಂಡವರನ್ನು
ಕತ್ತಿಯೊಳ್ ಕಡಿದಾಡುತ್ತ ವೀರಾವೇಶವೆತ್ತು ದ್ವಾರಕಿಯಾ ಸಮಿಪಕ್ಕೈದಿದರೆಲ್ಲಾ ॥ ॥೧೫೦॥

ಪರವ ನೀಕ್ಷಿಸುತ ಪವುಂಡ್ರಕನಿಂತೆಂದು । ಮುಂದರಿದ ಸೈನ್ಯಗಳೆಲ್ಲಾ । ಬರಲಿ ಕಳ್ಳನಪಿಡಿತರಲಿಂದು ಹೊತ್ತಲ್ಲಯೆನುತ ಸಮುದ್ರದ ಕರೆಯಲ್ಲಿ ನಿಂದು
ಸೂಳೆಯರಾಲಯದಲ್ಲಿ ॥ ಕೈಸೆರೆಯಾಸಿಕ್ಕುವನೆಂದು ॥೧೫೧॥

ಯತ್ನಗಳುಸುರುತ್ತಾ । ಉಚ್ಚೇರಿಸುತ ಕಾರ್ಮುಗಿಲ ಮುಸುಕುವಂತೆ ಸರಿರಾತ್ರೆಯಲಿ ಘರ್ಜಿಸುತಲೇ । ಬಂದೆರಗಿದುರ್ಗವ ಮುತ್ತುವದ್ಭುತವೇನೆಂಬೆ ॥೧೫೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧರಣಿಪತಿ ಕೇಳ್ ಬಾಗಿಲಲ್ಲಿಹ । ಚರರಗೋಳ್ಗುಟ್ಟಿಸುತಜನ ।
ವೆಚ್ಚರಿತು ಗಜಬಜವಾದುದಂತಃಪುರದೊಳಂದೂ ॥೧೫೩॥

ಜಗದೊಡೆಯ ಬಲರಾಮ ಸಾತ್ಯಕಿ । ಸುಗುಣ ಯಾದವ ಉಗ್ರಸೇನಾ
ದಿಗಳು ಒಡ್ಡೋಲಗವಗೊಟ್ಟರು । ದಿಗಿಲೆನುತ್ತಾ ॥೧೫೪॥

ಯೇನಿದೇನಾಶ್ಚರ್ಯಕರವಿದು | ಈ ನಗರಕೆ ರಾತ್ರೆಯಲಿ ಸಂ |
ಧಾನವಿಲ್ಲದೆ ಬಂದ ಸುಭಟರ | ಕಾಣಲಿಲ್ಲ | ||೧೫೫||

ಧೀರನವನಿನ್ನೇನು ಧೈರ್ಯದಿ | ಸೇರಿದನೊ ಮತ್ಪುರವನೆಂದು ವಿ |
ಚಾರಿಸುತಲಿರಲೋರ್ವ ಚಾರಕ | ದ್ವಾರದಿಂದಾ ||೧೫೬||

ಬಂದು ಹಲಧರನಡಿಯೊಳೆರಗುತ್ತ | ಬಂದವಾರ್ತೆಯನೆಲ್ಲ ಯಾದವ |
ವೃಂದಕುಸರಿದನಂದ ಕಾತುರ | ದಿಂದಲವನೂ ||೧೫೭||

**ಭಾಮಿನಿ**

ಜೀಯ ಕಾಶೀದೇಶನೃಪ ನಿ |
ನ್ನಯ್ಯನವರಸುಪತ್ರನಂತಿಹ |
ತೋಯಜಾಂಬಕನಣ್ಣ ಪವುಂಡ್ರಕ ವಾಸುದೇವಾಖ್ಯಾ ||
ದಾಯವಾದಿಯ ಮತ್ಸರದಿ ಸಮು |
ದಾಯವೆರದೈ ತಂದಿಹನು ಯದು
ರಾಯ ನಾನೆಂತೊರೆವೆ ಸೈನ್ಯವನೆಂದನತಿಭಯದಿ ||೧೫೮||

**ವಾರ್ಧಿಕ**

ಚರರೆಂದ ನುಡಿಕೇಳಿ ಕರಿರಥ ಪದಾತಿಗಳು |
ನೆರದು ಬಲರಾಮನೊಡನಕ್ರೂರ ಸಾಂಭಾದಿ |
ಧುರಧೀರ ಯಾದವರು ಕಡುರೋಷವೆತ್ತು ಭೂಮಂಡಲವ ನಡುಗುವಂತೆ ||
ಮೆರವುತಿಹ ಭೇರಿಕಹಳಾರವದೊಳೈತಂದು |
ಪರಬಲವ ಕಂಡು ಶಿಡಿಲೆರಗುವಂದದಿ ಪೊಕ್ಕು |
ತರತರದ ಬಾಣಗಳ ಸುರಿಯಲಿತ್ತಟ್ಟಿನೊಳ್ ಕೈಗಲಸಿತಾಕ್ಷಣದೊಳೂ ||೧೫೯||

**ರಾಗ ಭೈರವಿ ಯೇಕತಾಳ**

ಸಿಡಿಲಂದದಿ ಭೋರ್ಗರೆದು | ಕೆಂ | ಗಿಡಿವುಗುಳುತ ಮೇಲ್ವರಿದು
ತುಡುತುಡುಕುತ ಯಾದವರು | ಕಂಗೆದರಿದಶಕ್ತಿ ವಿಕ್ರಮರೂ ||೧೬೦||

ಮುಂಬಲತಾಸ್ತ್ರಗಳಿಡುತಾ | ಆ | ಸಾಂಭನಹಿಮ್ಮೆಟ್ಟಿಸುತ ||
ಕುಂಭಿನಿ ನಡುಗುವತೆರದೀ | ಬಹ | ಳಂಬುಗಳೆಚ್ಚನು ಭರದೀ ||೧೬೧||

ಹಿಂದೊತ್ತಿ ಸೈನ್ಯವನೂ | ತಾ | ನಿಂದೀಕ್ಷಿಸಿ ಪೌಂಡ್ರಕನೂ |
ಮುಂದರಿತವುಲಾಕ್ಷಣದೀ | ಇಂ | ತೆಂದನು ಸಾತ್ಯಕಿ ಧುರದೀ ||೧೬೨||

ಈ ದುರ್ಗವನೊ ಪೊಗಲೂ । ಪೇಳ್ದವರಾರು ನಿಮಿಷದೊಳು ।
ನೂದಿಸುವೆನು ನಿನ್ನೊಲವ । ಎನ । ಲಾದುರ್ಜನದಿಂದೊಲವಾ ॥೧೬೩॥

ಆದರೆ ನಿನಗೇನೋ ಈ ಧರೆಗಧಿಪತಿ ನಾನು ।
ಭೋರನೆ ಕೈಸೆರೆಪಿಡಿದು । ಮತ್ತಾರೆಂದೊರೆವೆನು ತಿಳಿದೂ ॥೧೬೪॥

ಸರಿರಾತ್ರೆಯ ವೇಳ್ಯದೊಳು । ಕಳ್ಳರೆ ಹೊರತೀ ಭೂಮಿಯೊಳು ।
ಪರರೈತಹರೆಂದೆನುತ । ಬಲು । ಶರವೆಚ್ಚನು ಕೋಪಿಸುತ ॥೧೬೫॥

ಯೆನಲಾಕಾಶೀಶ್ವರನು । ಆ । ಮನೆಮನೆ ಪಾಲ್ಬೆಣ್ಣೆಯನೂ ।
ಮೆಲುವಾತನ ತೋರೆಂದು । ಹೊಸ । ಕಣೆಗಳ ಕರದನಂದೂ ॥೧೬೬॥

ಬರುವ ಶರಂಗಳ ಮುರಿದು । ಆದುರುಳರ ಮಹಾಸ್ತ್ರವ ತೆಗೆದು ।
ವರ ಸಾತ್ಯಕಿಯುರಕಿಡಲು । ಮೈ । ಮರೆದಾಕ್ಷಣ ಭೂಮಿಯೊಳು ॥೧೬೭॥

**ಭಾಮಿನಿ**

ಆರೆನಿಮಿಷ ಸಾತ್ಯಕಿಯು ಮೈಮರೆ ।
ದಿರಲು ವೀರಾವೇಶದಲಿ ಹಲ ।
ಧರನು ಫಣಿಪತಿಯಂತೆ ಭೋರ್ಗರೆವುತ್ತ ಬಂದೆರಗೀ ॥
ಮರುಳೆ ಕೇಳ್ ಮತ್ಕುಲಜ ನೀನೆಂ ।
ದರಿತು ನೋಡಿದರಿಂತು ಗರ್ವವೆ ।
ಧುರದೊಲವ ತೋರಿಸುವೆನೆನುತಾಸ್ತ್ರಗಳ ಮಳೆಸುರಿದಾ ॥೧೬೮॥

**ಶಾರ್ದೂಲ ವಿಕ್ರೀಡಿತ ವೃತ್ತ**

ಕೃಷ್ಣಂ ಶ್ರೀಯದುವಂಶಮೌಕ್ತಿಕಮಣಿಂ । ಭೂಷ್ಣೋಃಪುರೇಶಾಂಬರೇ ।
ಕಾರ್ಷ್ಣೇಃ ಶ್ರೀರತಿಪಾಣಿಪೀಡನಕರಂ । ಸೋಷ್ಣೀಷಭೂಪಾದೃತಮ್ ॥
ಜಿಷ್ಣುಂ ಭೀಷ್ಮಸುತಾಖಿಲೇಷ್ಟವರದಂ । ಧೃಷ್ಣುಂ ಜಗತ್ಪಾಲಕಂ ॥
ಜಿಷ್ಣುಪ್ರೀತಿವರ್ಧನಂ ಸುಖತನುಂ । ವಿಷ್ಣುಂ ಭಜೇ ಸರ್ವದಾ ॥೧॥

**ವಾರ್ಧಕ**

ಕರಿವರದಮಿತ್ರನಂ ಕಾಳಿಕಾಕರ್ತ್ರನಂ ।
ವರಗುಣಕದಂಬನಂ ವಿನುತಹೇರಂಬನಂ ।
ನಿರುಪಮಾನಂದನ ನಿಖಿಳ ಮುನಿವೃಂದನಂ ಭೀಮನಂ ಸ್ಮರದಾಮನಂ ॥
ಕರುಣಾಲಪಾಲನಂ ಕಮನೀಯಶೀಲನಂ ।
ದುರಿತಸಂಹಾರನಂ ದುರ್ಜನವಿಧೂರನಂ ।
ಹರಿದಶ್ವಭಾಸನಂ ಹತ ಮಂದಹಾಸನಂ ವಂದಿಸುವೆ ಸೋಮೇಶನಂ ॥೨॥

**ರಾಗ ಸುರಟಿ ಆದಿತಾಳ**

ಪಾಲಿಸು ಸರ್ವಾಣೀ । ಮುಕುರಕ । ಪೋಲ ಕೀರವಾಣೀ ।
ಶೈಲ್ಯಾಧಿಪನ ಬಾಲಕಿ ಶಡ್ವಧಾ । ನಿರುರ ಕರುಣಾಲವಾಲ ಶಿವೆ ॥೩॥

ರಾಜ್ಯಲಕ್ಷ್ಮಿದಾತೇ । ಸುಗುಣೆ ಸ । ರೋಜವದನೆ ಮಾತೆ
ರಾಜೇಶ್ವರಿ ಮೃಗರಾಜಸುಮರ್ಧ್ಯೆ । ರಾಜರಾಪ್ತಕ ರಾಜಕರುಚಿರೆ ॥ ಪಾಲಿಸು ॥೪॥

ನಂದಜಾತಭಗಿನಿ । ಪರಮಾ । ನಂದಜಗಜ್ಜನನೀ ।
ವಾರಿಜದಳನೇತ್ರೇ । ನಿರ್ಜರ । ವಾರವಿನುತ ಪಾತ್ರೆ ॥ ಪಾಲಿಸು ॥೫॥

**ಭಾಮಿನಿ**

ಉಮೆ ಸರಸ್ವತಿ ಲಕ್ಷ್ಮಿಯರ ಪದ ।
ಕಮಲಕಭಿವಂದಿಸುತ ಸುರರಿಗೆ ।
ನಮಿಸಿ ಗುರು ಚರಣಾರವಿಂದಕೆ ಮಣಿದು ಭಕ್ತಿಯಲಿ ॥
ಅಮರಋಷಿ ಯೋಗಿಗಳ ಪದಯುಗ ।
ಕ್ರಮದಿ । ಸಂನುತಿಗೈದು ಸಂತತ ।
ಸುಮನಸರ । ಸಂದಣಿಯ ನೆನದತ್ಯಧಿಕ ಹರುಷದಲೀ ॥೬॥

**ದ್ವಿಪದಿ**

ಪರಮಭಾಗವತಾಖ್ಯ ಚಾರುಚರಿತೆಯಲೀ ।
ಹರಿತಂದ ಶಂಬರಾಸುರನ ಯುದ್ಧದಲಿ ॥
ಪರಿಹರಿಸಿ ರತಿಗೆ ವಲ್ಲಭನಾದ ಕಥೆಯಾ ।
ನೊರೆವೆನ್ನೈ ಯಕ್ಷಗಾನದಲಿ ಸಂಗತಿಯಾ ॥೭॥

ಕೇಳಿ ಕವಿಜನರು ತಪ್ಪಿರಲು ತಿದ್ದುವದೂ ।
ಶೀಲಗುಣದಿಂದ ಆದರಿಸಿ ಮೆರಸುವದೂ ॥೮॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ವರಪರೀಕ್ಷಿತರಾಯ ಶುಕಮುನಿ । ಚರಣಯುಗ್ಮಕೆ ವಂದಿಸು ತಪೂ ।
ಶರನು ಪುನರಪಿ ಜನಿಸಿ ಕೃಷ್ಣಗೆ । ತರಳನಾಗೀ ॥೯॥

ದುರುಳಶಂಬರನೆಂಬವನ ಪರಿ । ಹರಿಸಿ ಮತ್ತಾರತಿಯಭೀಷ್ಟವ ।
ಹರುಷದೇ ಪಾಲಿಸಿದ ಕಥನವ । ನೊರೆವುದೆಂದೂ ॥೧೦॥

ಬಿನ್ನವಿಸಲತ್ಯಧಿಕ ತೋಷಧಿ । ಮನ್ನಿಸುತಲಾರಂಭಿಸುವ ಮುನಿ ।
ಮನ್ಮಥನ ವಿಕ್ರಮದ ಗುಣ ಸಂಪನ್ನನೃಪಗೇ ॥೧೧॥

**ವಾರ್ಧಕ**

ವಸುಮತಿಯ ಭಾರಮಂ ತೆಗೆಯಲ್ಕೆ ಮಾರಮಣ ।
ವಸುಧೆಗುತ್ತಮವಾದ ದ್ವಾರಕಾಪುರದರಸ ।
ವಸುದೇವನುದರದಲಿ ಜನಿಸಿ ನರನಾಟಕದಿ ವರನಂದಗೋಕುಲದಲಿ ॥
ಎಸೆವ ಪೂತನಿಯಸುವಗೊಂಡು ರಾಧೆಯ ಮನವ ।
ಕುಸುಮಶರ ತಂತ್ರದಿಂದೊಲಿಸಿ ಕಂಸನ ಕೊಂದು ।
ಕುಶಲದಿಂ ಯಾದವರ ಮಂದಿರವ ಪೊಕ್ಕು ನವನೀತ ಪಾಲ್ಮೊಸರು ಮೆಲುತಾ ॥೧೨॥

ಸರಸದಿಂದಧಿಯ ಬಾಂಡವನೊಡೆದು ಲೂಟಿಯಂ ।
ವಿರಚಿಸುತ ತುರುಗಾವಲವರೊಡನೆ ಮೆರವುತ್ತ
ಮುರಲಿಯ ಧ್ವನಿಗೈವುತಾ ಗೋಪವನಿತೆಯರ ಚಿತ್ತವನು ಸೂರೆಗೊಳುತಾ ॥
ವರಜಲಕ್ರೀಡೆಯೊಳು ಕಡಹದಾಮರನೇರಿ ।
ತರುಣಿಯರ ವಸ್ತ್ರ ಮೇಲ್ಗಟ್ಟಿ ಬತ್ತಲೆ ನಿಲಿಸಿ ।
ನಿರುಪಮ ವಿಲಾಸಮಂ ತೋರಿಸುತ ವರ್ತಿಸಿದ ನವ ಮೋಹನಾಂಗನಾಗೀ ॥೧೩॥

ದುರುಳ ಶಿಶುಪಾಲನಂ ಮದಗೆಡಿಸಿ ರುಕ್ಮಿಣಿಗೆ ।
ವರನಾಗಿ ನಗರಕೈತಂದು ಸದ್ಧರ್ಮದಿಂ
ಧರೆಯನಾಳುತ್ತ ಯದುವರ್ಗ ಪರಿವಾರ ಸಹಿತ ಪ್ರಜೆಗಳನು ತೋಷದಲ್ಲಿ ॥
ಧರಿಸುತಲಿ ಹದಿನಾಲ್ಕು ಕರದಿ ಚಕ್ರವರಾಬ್ಜ
ಕರ ವಿಭೂಷಣದಿಂದ । ಮೆರೆವುತ್ತ ಕೌಸ್ತುಭ
ಧರಿಸಿ ಬಲರಾಮನಿಂ । ದೊಡಗೂಡಿ ದಾನವಧ್ವಂಸಿ ತಾ ಬಳಿಕ ಮುದದೀ ॥೧೪॥

**ರಾಗ ಕಾಂಭೋಜಿ ಝಂಪೆತಾಳ**

ತರಣಿ ಬಿಂಬವ ತುಡುಕುವಂತೆಸೆವ ಗೋಪುರದ । ಮಾವೈಭವದಿ ರಂಜಿಸುವಾ ॥
ನಿರುಪಮದ ದ್ವಾರಕಿಯ ವರ್ಣಿಸಲುವಾಸುಕಿಶ್ವರನಿಗಸದಳವುಸಿದ್ಧಾ ॥೧೫॥

ಕನಕಮಯ ಭಿತ್ತಿನವರತುನದಿಂ ನಿರ್ಮಿಸಿದ । ಘನತರಕವಾಟಂಗಳಿಂದಾ ॥
ಅನುಪಮ ಸುಮೌಕ್ತಿಕಾಲಂಕಾರದಿಂದ ಪ । ಟ್ಟಣವೆಸೆದುದತಿ ಸಂಭ್ರಮದೊಳೂ ॥೧೬॥

ಪಕ್ಷಿವಾಹನನಸತಿ ಲಕ್ಷ್ಮೀತಾನಾಗಿರಲು । ಚಿತ್ರವೇ ಮೆರದುದೀ ನಗರಾ ॥
ನೂತನದೋಲಗದೊಳಮರಾವತೀ ರಂಜಿಸಿತು ಶತ । ಪತ್ರಲೋಚನನಸಭೆಗೆ ಮಿಗಿಲು ॥೧೭॥

**ಕಂದ**

ಚಿಂತಿತ ತತ್ಫಲದಾಯಕ ।
ಸಂತೋಷದೊಳಿರಲೊಂದು ದಿನಂ
ಅಂತಃಪುರದಲಿ
ರುಕ್ಮಿಣಿಯು । ಸಂತತಿಯ ಬಯಸಿ ತನ್ನ ಪತಿಯೊಡನೆಂದಳ್ ॥೧೮॥

**ರಾಗ ಕೇದಾರಗೌಳ ಅಷ್ಟತಾಳ**

ವನರುಹಲೋಚನ ಲಾಲಿಸಿಂದಿರುಳಿನೊಳ್ । ಕನಸಕಂಡೆನು ಮುದದೀ ।
ವಿನಯದೊಳಾ ಸ್ವಪ್ನಫಲವಾ ನೀನೊರೆಯಬೇ । ಕೆನಲು ತಾನಿಂತೆಂದನೂ ॥೧೯॥

ಕಾಂತೆ ನೀ ಕೇಳಿಂಥ ಸ್ವಪ್ನವ ಪೇಳಲು । ಚಿಂತೆಯಾತಕೆ ಬರಿದೇ ।
ಸಂತಸದಿಂದುಸುರೆನಲಾಗ ನಾಚುತ್ತ । ಕಾಂತನಿಗಿಂತೆಂದಳೂ ॥೨೦॥

ಮುದ್ದುಮೊಗದ ಸುಕುಮಾರನ ತೊಡೆಯೊಳು । ಮುದ್ದಿಸುತಿರಲು ನಾನು ॥
ಸದ್ದಿಲ್ಲದಂತೆ ನೀ ಬಂದೆತ್ತಿಕೊಂಡುದ । ಬದ್ಧವಾಗಿಯೆ ಕಂಡೆನೂ ॥೨೧॥

ಎನಲು ತೋಷದಿ ನಸುನಗುತ ಇಂತೆಂದ ಕೇಳ್ । ವನಿತೆರನ್ನಳೆ ಕ್ಷಿಪ್ರದೀ ॥
ತನಯನ ಪಡೆವ ಸೂಚನೆಯುದೋರುತಲಿದೆ । ಕನಸಿನ ಫಲವೆಂದನೂ ॥೨೨॥

ರಂಜಿಪ ಯದುವಂಶ ಪ್ರಕಟಿಸದಿರಲೆನ್ನಾ । ಬಂಜೆಯೆಂಬರು ಲೋಕದೀ ।
ಮಂಜುಳಾಕರ ಪುತ್ರವತಿ ನಾನಾದರೆ ನಿ । ರಂಜನವಹುದೆಂದಳೂ ॥೨೩॥

ರಮಣಿ ನೀ ಮಂದಿರದಲ್ಲಿರು ಪಾರ್ವತಿ । ರಮಣನ ಪ್ರೀತಿಯಿಂದಾ ।
ಯಾತ್ಮಜನನ್ನು ಪಡೆಯದಿದ್ದರೆ ನಿನ್ನಾ । ರಮಣಿ ರಮಣನೆ ನಾನಲ್ಲವೆಂದೂ ॥೨೪॥

**ರಾಗ ಭೈರವಿ ಝಂಪೆತಾಳ**

ಚಿಂತೆಬೇಡೆಂದು ನಿಜ । ಕಾಂತೆಯ ಕರಾಬ್ಜವನು ।
ಸಂತೋಷದಲಿ ಮುಟ್ಟಿ । ಕಂತುಪಿತ ಬಳಿಕಾ ॥೨೫॥

ಭಾವಭಕ್ತಿಯಲಿ ವಸು । ದೇವ ಬಲರಾಮ ಗುರು ।
ದೇವಕಿಯರಡಿಗೆರಗಿ । ಗೋವಿಂದ ಮುದದೀ ॥೨೬॥

ಸ್ಮರಿಸುತಿರಲಾಕ್ಷಣದಿ । ಗರುಡನೈತಂದು ಪದ ।
ಸರಸಿಜಕೆ ಮಣಿದು ನಿಂ । ತಿರಲು ಸಂತಸದೀ ॥೨೭॥

ಮೆರೆವವಾದ್ಯ ಮೃದಂಗ । ವರಗೀತವಾಕ್ಷಣದಿ ।
ಹರಿಸುಪರ್ಣವನಡರಿ । ಭರದಿ ನಡೆತಂದಾ ॥೨೮॥

**ಕಂದ ಪದ್ಯ**

ಅನಿಲಗತಿಯ ಜರೆವಂದದಿ ।
ವಿನತಾಸುತನೂ (ಹಾರಲು ಗಗನಾಂಗಣಕೇ)
ವನಜಾಂಬಕ ನಾಪುರ
ಜನವಂ ಬೀಳ್ಕೊಟ್ಟು ಮೆರೆದನಂಬರ ಪಥದೊಳ್ ॥೧೯॥

**ವಾರ್ಧಕ**

ವರವೇದತರ್ಕವ್ಯಾಕರಣಾದಿ ಘೋಷದಿಂ ।
ಪರಮ ಮಂತ್ರೋಪದೇಶಿಸುವ । ಸಂತೋಷದಿಂ ।
ನಿರುತದಿವ್ಯಾತ್ಮನ ಧ್ಯಾನಿಪ ವಿಲಾಸದಿಂ । ಸಮಿಧಾಜ್ಯ ಕುಶಗಳಿಂದಾ ॥
ನಿರುಪಮ ಕಮಂಡಲಾಂಛಿತ ಭಸ್ಮಲೇಪದಿಂ ।
ತರತರದೊಳಗ್ನಿಕ್ರಿಯಾದಿ ಸುಕಲಾಪದಿಂ ।
ಸ್ಥಿರತಪವಗ್ರೈವ ಮುನಿನಿಕರ ಪ್ರತಾಪದಿಂ ಬದರಿಕಾಶ್ರಮವೆಸದುದೂ ॥೨೦॥

**ರಾಗ ಸಾಂಗತ್ಯ ರೂಪಕತಾಳ**

ಇಂತು ರಂಜಿಪ ಬದರಿಕಾಶ್ರಮದೆಡೆಗೆ ಶ್ರೀ । ಕಾಂತನತ್ಯಂತ ತೇಜದಲೀ ॥
ಸಂತೋಷವೆತ್ತು ಸುಪರ್ಣವಾಹನದೊಳ । ತ್ಯಂತ ಶೀಘ್ರದೊಳ್ ನಡೆತಂದಾ ॥೨೧॥

ಚಾರುಕಾಸರವ ಕಂಡಲ್ಲಿ ಮಿಂದು ಕಂ । ಸಾರಿ ಶುಚಿರ್ಭೂತನಾಗಿ ॥
ಗೌರಿವಲ್ಲಭನ ಧ್ಯಾನಿಸಬೇಕೆಂದಿರೆ ಮುನಿ । ವರ್ಯರು ತಮ್ಮೊಡನೆಂದರಾಗಾ ॥೨೨॥

ಅನುದಿನಾಹಾರವಬಿಟ್ಟು ಸಮಾಧಿಯ । ನನುಕರಿಸಿದರುಚಿತದಲಿ ॥
ನೆನೆಯಲಸಾಧ್ಯವಾಗಿಹ ವಿಷ್ಣುವೀವನಕೆ । ಬಂದುದು ವಿಚಿತ್ರವೆಂದೂ ॥೨೩॥

ಚಿನುಮಯಾತ್ಮಕನ ಮೂರ್ತಿಯ ನೋಡಿ ಸಾಧನ್ಯರಾದೆವೆನುತಲಾಕ್ಷಣದಿಂ ॥
ಸನ್ಮೋಹನಾಂಗನ ಸನ್ನುತಿ ಗೈದು ಸಂ । ಪೂರ್ಣರಂದವ ತಾಳ್ದರೆಲ್ಲಾ ॥೨೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ಕಮಲದಳಾಕ್ಷನಿರುತಿರೆ । ಅತ್ತ ಘಂಟಾಕರ್ಣನೆಂಬವ ।
ಕೃತ್ತಿವಾಸನ ಗಣದೊಳವನ । ತ್ಯಂತ ತನದೀ ॥೨೫॥

ವೀರಶೈವಶಿಖಾಮಣಿಯು ತಾ । ವಾರಿಜಾಕ್ಷನ ದಿವ್ಯನಾಮೋ ।
ಚ್ಚಾರಣೆಯ ಕಿವಿಗೊಟ್ಟು ಲಾಲಿಸ । ಬಾರದೆಂದೂ ॥೨೬॥

ಕರ್ಣಮೂಲದಿ ಕಟ್ಟಿ ಘಂಟೆಯ । ನನ್ಯ ದೈವವ ನೀಕ್ಷಿಸದೆ ಸಂ
ಪನ್ನ ಗರ್ವದೊಳಿರಲು ತಿಳಿದುಸು । ಪರ್ಣಚೇಲಾ ॥೨೭॥

ಮುರಿದು ದುಷ್ಟ ಕಿರಾತಚಯವನು | ಅನುಕರಿಸಿ ಭೂತಳದೊ | ಳಿಹುದೆಂ
ದೆನುತ ಶಾಪವ ಕೊಡಲು ಮತ್ತಾ | ಜನರು ಬೆರಗಾಗೇ ||೩೮||

ಅಪರಿಮಿತ ಕಿರಾತಸೈನ್ಯಕೆ | ನೃಪತಿತಾನೆಂದೆನಿಸಿ ನಾನಾ |
ವಿಪಿನದೊಳು ಸಂಚರಿಸುತೀರ್ದನು | ಕೃಪಣದಲಿ ಬಳಿಕಾ ||೩೯||

**ಭಾಮಿನಿ**

ದುರುಳವೃತ್ತಿಯೊಳಿಹುದರಿಂದಲಿ |
ಹರಣವುಳಿದರೆ ಸಾಕೆನುತ ಶಶಿ |
ಧರಗೆ ಬಿನ್ನೈಸಲ್ಕೆ ಹರಿಸನ್ನಿಧಿಯಾ ಪಡೆಯೆನಲೂ ||
ಮುರಹರನ ಕಾಂಬೋತ್ಸಹದಿ ಪಡೆ |
ವೆರಸಿ ತನ್ನನು | ಜಾತನೊಡಗೊಂ |
ಡುರುತರಾ ನಂದದಲಿ ಪೊರಟೈ ತಂದರಾವನಕೇ ||೪೦||

**ರಾಗ ಪಂತುರಾವಳಿ ಮಟ್ಟೆತಾಳ**

ಬಂದರು ಭರದಿ | ಬಹಳಾರವದಿ | ಬಂದಲ್ಲಿ ತಪತರವೇರಿ ಅಬ್ಬರ |
ದಿಂದಲಿ ಘೋರಾಕಾರದಿ ಮೃಗ ಹಿಂಸಕದೀ ||೪೧||

ಘೋರಾನನತೋರ್ದೆಡೆ ವಿಕಾರದ ರೂಪಿನಲಿ |
ಬೀರುತ ಕೆಂಗಣ್ಣ ಕಠೋರ ಧ್ವನಿಗಳಲೀ ||೪೨||

ಜೋಲ್ಮೂಗಿನ ಮಾಂಸಂಜೆಯ | ಕಾರದಿ ರಂಜಿಸುತ |
ಮೇಲೆಮೇಲ್ ಪುಲಿಕರಡಿಗೆ ಜೂಲ್ನಾಯಿಗಳ ಬಿಡುತ ||೪೩||

ಘುಡು ಘುಡಿಸುತ ಮುನಿಗಡಣ ಇದ್ದೆಡೆಯಲ್ಲಿ ಬಂದಾಗಾ |
ತುಡು ತುಡುಕುತ್ತ ಪಿಡಿದೆಳವುತ್ತ ತಮ್ಮೊಡನೆಂದರ್ಬೇಗಾ ||೪೪||

**ರಾಗ ಮಾರವಿ ಏಕತಾಳ**

ಎಲೆ ಎಲೆ ನೋಡ್ರ್ಯಾ ಕುಂತ್ರೈದಾರೇ | ಬಲ್ ಬಲ್ ಮುನಿ ಹಾರುವರೂ |
ಗಲಗಲವೆಂಬಾ ಬೆಂಕಿಯ ಬದಿಯಲಿ | ಪಿಲ್ ಪಿಲ್ ನೋಡೈತಾರೆ ||೪೫||

ಹೊಡೆಹೊಡೆಯಾ ಮುದಿ ಬ್ರಾಹ್ಮಣನೊಡಲನು | ಕಡಿದಾರಿಸು ಮೇಲ್ ಖಂಡಾ |
ಸಡಗರದಲಿ ಬಾಬಿಡುತಲಿ ಶಾಪವ | ಕೊಡುತಾ ನ್ಯಾರೀ ಪುಂಡಾ | ||೪೬||

ಕೊಳುಗಿನೊಬ್ಬುಳಿನುಟ್ಟು | ಬೆರಳ ಮೂಗಿನೊಳಿಟ್ಟು |
ಸುಳ್ಳಾಶಾಸ್ತ್ರವ ಮಿಡಿಮಿಡಿಯೆಂಬವ | ಕಳ್ಳರಾದ ವರ್ಮುಟ್ಟು ||೪೭||

ಯೇಟಾದರು ಬಡಹಾರುವಗಳ ಬಗೇ । ವೋಟೆ ಸರಿಕಾಣಣ್ಣಾ ।
ಕಾಟಕಮಂದಿ ಮೈವರ ಹರ । ರಾಟ ನಡೆಯದಣ್ಣಾ ॥೪೮॥

ಚನ್ನಾಗಿ ಮಾಂಸವ ಪಾಕಮಾಡಿ ಮನೆಯ ಸಾಮಿಗಿತ್ತು । ಗೆಣೆಯರೆಲ್ಲಾ ।
ಕೂಂತು ಮೋಜಿನಿಂದ ಉಣುವಾ ನಾವೀಹೊತ್ತು ॥೪೯॥

ಹರಿನಾರಾಯಣ ಗೋವಿಂದಚ್ಚುತ । ಮುರಹರ ಕೇಶವಯೆನುತಾ ।
ಕರೆದಾನಾಯ್ಗಳ ಥೂಥೂ ಎಂದ । ಬ್ಬರದಲಿ ಮುಂದಕೆ ಬಿಡುತ ॥೫೦॥

ಬಂಟಾರಾದವರೆಲ್ಲರು ವೈಕುಂಠಾ । ನಡೆಗೈತಂದೂ ।
ತುಂಟುತನವಮಾಡಲೆಮ್ಮಾ । ಘಂಟಾಕರ್ಣನಂದೂ ॥೫೧॥

ಬಿಡು ನೋಡಾಬಟೆಯಿಡಾರಿವನ । ಗೊಡವೆನಮಗ್ಯಾಕೆನುತ ।
ಬಡಮುನಿಗಳು ಕಂಗೆಡುತಾ ಮತ್ತವ । ರೆಂದರು ಬಾಬಿಡುತಾ ॥೫೨॥

**ರಾಗ ಸೌರಾಷ್ಟ್ರ ಅಷ್ಟತಾಳ**

ಹರಹರಾ ಇಂಥಾ ದುರಾತ್ಮರಾಶ್ರಮವೆಂದು ನಾವರಿಯದೆ ಬಂದೆವಿಲ್ಲಿ ।
ಸರಿರಾತ್ರೆಯಲಿ ದುಷ್ಟಜನರ ಕೈಯಲಿ ಸಿಕ್ಕಿ ದುರ್ಮರಣವು ದೊರಕಿತಲ್ಲಾ ॥೫೩॥

ಜಪತಪ ಸುಡಲಿನ್ನು ಜೀವುವೊಂದುಳಿದರೆ ತಪಸಿನ ಫಲವೆಮಗೆ ।
ವಿಪರೀತ ಸಮಿಧಾಜ್ಯ ಕುಶಗಳ ಬಿಟ್ಟಿನ್ನು ವಿಪಿನದೊಳಿರೆವೆನುತಾ ॥೫೪॥

ವೇದತರ್ಕ ಪುರಾಣಶಾಸ್ತ್ರಂಗಳ । ಸಾಧಿಸಿ ಗೆಲಬಹುದು ।
ಈ ದುಷ್ಟ ಜನರಿಗೆ ಮಂತ್ರಗಳಿದಿರೆಮ್ಮಾ । ಹಾದಿನೋಡುವೆವೆಂದರೂ ॥೫೫॥

**ವಾರ್ಧಕ**

ಮುರಹರನು ಮುನಿಗಳರ್ಥವ ಕಂಡು ನಗುತ ಸ ।
ತ್ಕರುಣದಿಂ ಹರಿಯ ಪೆಸರುಚ್ಚರಿಸೆ ನಾಯ್ಗಳಂ ।
ಕರದ ಬಗೆಯರಿತು ನಿಜಭೋಜ್ಯಮಂ ಸ್ವಾಮಿಗರ್ಪಿಸಿರೆ ಬಳಿಕ ತಾನು ಮುದದಿ ॥
ಪರಿಜನರು ಕೂಡಿ ಭುಕ್ತವಚರಿಸಬೇಕೆಂಬ ।
ದುರಿತಾತ್ಮರಂತರಂಗವ ತಿಳಿದು ಸಂತೋಷ ।
ವೆರೆದು ಘಂಟಾಕರ್ಣನೆಂಬ । ಪ್ರಮುಖನಂ ಕರೆದಾಗಲಿಂತೆಂದನೂ ॥೫೬॥

**ರಾಗ ಕಾಪಿ ಅಷ್ಟತಾಳ**

ಪೇಳಿ ನೀವ್ಯಾರೆಂಬುದೀಗಾ । ಇಂಥಾ । ಖೂಳಚರ್ಯಗಳು ಬೇಗಾ ।
ಹಾಲುಹಾಲಾಹಲಹವಣಿಸಿದಂತಿದೆ । ನಿಮ್ಮ । ಜಾಲವೇನಿದ ನಿಮ್ಮ ಜಾತಿಲಕ್ಷಣವೇನು ॥೫೭॥

ಭೂತಪಿಶಾಚಿಯಾಕಾರಾ । ಕಿ । ರಾತರುಚರಿಪ ವ್ಯಾಪಾರಾ ।
ಘಾತುಕರಲ್ಲ ನೀವತ್ಯಂತ ನಿಪುಣರು ವಿ । ಖ್ಯಾತರೆಂದೆನಿಸಿ ತೋರುತಲಿದೆ ಮಾಜದೆ ॥೫೮॥

ವರತಪಸಿಗಳವರೆಲ್ಲಾ । ಈ ದು । ಷ್ಕೃತಿಯು ತರವಲ್ಲಾ ॥
ಪರಲೋಕ ದೂರರಾಗುವಿರಿ ಬ್ರಹ್ಮ ದ್ವೇಷ ಬರಿದೆಪಾಪವು ಬೆನ್ನಟ್ಟಿಬರುವದಯ್ಯಾ ॥೫೯॥

ಶ್ರೀ ನಾರಾಯಣಕೃಷ್ಣಯೆನುತ ದಿವ್ಯ । ಜ್ಞಾನದಿ ಹರಿಯ ನುತಿಸುತ್ತಾ ।
ಶ್ವಾನನ ಕರದು ಭೋಜ್ಯವಮಾಡಿ ಮಾಂಸದಿ । ಯಾವ ದೇವತೆಗೆ ಅರ್ಪಿತವೊಯೆಂಬಂತೆ ॥೬೦॥

**ಕಂದ ಪದ್ಯ**

ಎಂದಾ ಹರಿ ಕೇಳುತಾ ಖಳ
ವೃಂದಾರ್ಭಟವೆತ್ತು ಹಿರಿದಾಗೆನಲು ।
ವಂದದಿ ಘಂಟಾಕರ್ಣನು ।
ಮಂದಿಯನೊಡಬಡಿಸೆ ಲಕ್ಷುಮಿ ವರನೊಳಿಂತೆಂದಂ ॥೬೧॥

**ರಾಗ ರೇಗುಪ್ತಿ ಝಂಪೆತಾಳ**

ಇಂತೆಮ್ಮಾ ನೀಕೇಳ್ವ । ಬಳಿಕ ನಾಪೇಳ್ವೆ । ಚಿಂತಿತಾರ್ಥವನೀವ ಚದುರನೀನಹುದೂ ॥ ಪಲ್ಲ ॥

ಖೂಳರೆಂದೆನ್ನದಿರು ತ್ರಿಪುರಾರಿಯ ಪ್ರಮಥ । ಪಾಳಯದಿ ಪ್ರಮುಖ ಘಂಟಾಕರ್ಣನೆನುವಾ ॥
ಶೀಲಸಂಪನ್ನನೆನ್ನನುಜನಿರ್ವನೋರ್ವನೆ । ಜಾಲಮಾತಲ್ಲಾ ನೆರೆ ಜಾಣದಿಟವಿದ ಕೊ ॥೬೨॥

ಹರನ ಸದ್ಭಕ್ತಾಗ್ರಗಣ್ಯರಂದೆನಿಸಿರಲು । ಒರೆಯಲೇನದು ಪೂರ್ವ ಜನ್ಮಾಂತರದ ಸುಕ್ರುತಾ ॥
ದುರುಳಮತಿಯನುಸರಿಸಿ ಹರಿಯ ನಾಮಸ್ಮರಣೆ । ಆರೆನಿಮಿಷ ಕಿವಿಗೊಳಿಸಬಾರದೆಂದೂ ॥೬೩॥

ಕೇಶವನ ಮುಖದೊಳಗೀಶರ್ತಬರಲು ಮ । ತ್ತೀಶನಂಘ್ರಿಯಲಿ ಪೊಡಮಡಲು ಹರನೂ ॥
ಆ ಶಂಖಧರನಿತ್ತ ನುಡಿತಪ್ಪದೀಗಾ ನ । ಮ್ಮಾಸೆಯನು ಬಿಟ್ಟು ವನಸೇರಿ ಬದುಕೆನಲು ॥೬೪॥

ಹರಿಯ ಕಾಂಬುತ್ಸಹದೊಳ್ಕೈ ತಂದೆವಿಲ್ಲಿ ಕೇಳ್ । ದುರುಳಮತಿಯನು ಮಾಳ್ಪುದೆಮ್ಮಕುಲಧರ್ಮಾ ॥
ಪರಮಾತ್ಮ ಸರ್ವಗಮ್ಯಕನೆಂದು ತಿಳಿದೆವು । ಪರಿಪರಿಯ ಮಾಂಸಗಳ ಮಾಪುಗೈಯ್ಯೋ ॥೬೫॥

**ರಾಗ ರೇಗುಪ್ತಿ ಆದಿತಾಳ**

ಪಾಲಿಸೊ ಪಾವನಚರಿತ ಮುಕುಂದಾ ।
ಜಾಲವ್ಯಾತಕೊ ಜಗನ್ನಾಯಕ ಗೋವಿಂದಾ ॥ ಪಲ್ಲ ॥

ನಗಧರ ನಿನ್ನನು ನೋಡಿದ ಬಳಿಕಿನ್ನು ।
ಜಗದಿ ನಾನೇ ಧನ್ಯ ಜ್ಞಾನದಿ ಪಿತಯನ್ನಾ । ಪಾಲಿಸೋ ॥೬೬॥

ದುರಿತಪಯೋಧಿಯ ದಾಟಿಸಿ ಮುಕ್ತಿಯ ।
ಕರುಣಿಸು ದೇವನೆ । ಕಾಮಜನಕ ನೀನೆ । ಪಾಲಿಸೊ ॥೬೭॥

ತಾರಕ ಬ್ರಹ್ಮನೆಂದು ತಿಳಿದೆನು ನಾನಿಂದು ।
ಕ್ರೂರವೆನ್ನೊಡನ್ಯಾಕೆ ಕೇಶವ ಪರಾಕೆ । ಪಾಲಿಸು ॥೬೮॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇನಿತು ಸನ್ನುತಿಗೈದು ಹರಿಪದ । ವನರುಹದಿ ಮಣಿದೆದ್ದುವುದ್ಧರಿ ।
ಸೆನಲು ಕರುಣಾವನಧಿ ಭಕ್ತನ । ಮನಕೆ ಮೆಚ್ಚಿ ವಿಲಾಸದಿ । ಚಂದದಿಂದಾ ॥೬೯॥

ದುರುಳನಲ್ಲಾ ಇನಿತು ಹರಿಕಿಂ । ಕರನುದೇಶ ಸುಶೀಲನೀನೆಂ ।
ದೊರೆದು ನಿಜ ಕರಕಮಲದಲಿ ಮೈ । ತಡವರಿಸಲಾಕ್ಷಣ । ನಿಮಿಷದಿ । ಚಂದದಿಂದಾ ॥೭೦॥

ಘೋರ ರೂಪುಗಳಡಗಿ ದಿವ್ಯಾ । ಕಾರದಲಿ ಗಂಧ । ರ್ವರಾಗಿಯೆ
ಶೌರಿಯಂಘ್ರಿಗೆ ವಂದಿಸುತ ಮುದ । ವೇರಿ ಹರುಷದಿ ಪೋದರು । ಚಂದದಿಂದಾ ॥೭೧॥

**ರಾಗ ಕೇತಾಳಗೌಳ ಆದಿತಾಳ**

ಹರಿಗಂಧರ್ವರ ಬೀಳ್ಕೊಟ್ಟು ಮುನಿವರರನು ಮೋಹಿಸುತಾ ।
ಇರುಳುಹಗಲಂಬರದಲ್ಲಿ ಭಾಸ್ಕರನು । ಮೆರದ ಮಹೋತ್ಸವದೀ ॥೭೨॥

ಮಾಧವನೀಕ್ಷಿಸೆ ಮಿಂದರ್ಘ್ಯಾದಿಸ್ಥಾನವದನುಕರಿಸೆ ।
ಆದುರ್ಜಟಿಯನು ನೋಡುವನೆಂಬವಿನೋದದಿ ಇರುತೀರ್ದಾ ॥೭೩॥

ಅತ್ತಲಮರ ಗಣ ಶಂಭರನೆಂಬಾ ದೈತ್ಯನ ಮುಖದಿಂದ ।
ಅತ್ಯುಪಟಳವೆತ್ತು ಸುರಪನಿಗೆ ವಿಸ್ತರಿಸಿದರಂದೂ ॥೭೪॥

**ರಾಗ ದೇಶಿ ಅಷ್ಟತಾಳ**

ಲಾಲಿಸಬೇಕು ದೇವೇಂದ್ರಾ । ಕೇಳು । ಜಾಲಮಾತಲ್ಲಿದು ಸದ್ಗುಣ ಸಾಂದ್ರಾ ॥ ಪಲ್ಲ ॥
ಶಂಭರಾಸುರನುಪಟಳದೀ । ನಮ್ಮ । ಹಂಬಲನ್ಯಾತಕೆ ಬಂದು ನೀದಯದೀ ।
ಕುಂಬಿನಿಭಾರವನಿಳುಹಿಸು ಕುಟುಂಬವ ರಕ್ಷಿಸು ಖಳನ ಸಂಹರಿಸಿ । ಲಾಲಿಸಬೇಕು ದೇವಾ ॥೭೫॥

ಭೃಂಗಾಳಕಿಯರ ಕೊಂಡೊದಾ । ನಮ್ಮ । ಶೃಂಗಾರ ತೋಟವ ಸಂಹಾರಗೈದಾ ।
ಹಿಂಗದೆಸೆರೆ ಇಟ್ಟನಲ್ಲಾ ನಾವು । ಭಂಗಬಟ್ಟಿರುವದು ಶಿವನೊಬ್ಬ ಬಲ್ಲಾ ॥೭೬॥

ಯಾಗಾದಿ ಷಟ್ಕರ್ಮವೆಲ್ಲಾ । ಮುಂದೆ । ಸಾಧಿಸಿಮದ್ಭಾಗರಿಲ್ಲಾ
ಬೇಗ ನಿನೇಳಬೇಕೆನುತ । ಪೇಳಲಾಗ ಪುರಂದರನಿಂತೆಂದನಗುತ ॥೭೭॥

**ರಾಗ ಚೂರ್ಣಿಕೆ**

ಎನ್ನಿಂದಾಗುವದೇನು ಬನ್ನಿ ಕಮಲಾಕಾಂತನಂಘ್ರಿಗೆ ಸೇರುವ
ಪನ್ನಗಾರಿವರ ಬದರಿಕಾಶ್ರಮದಲ್ಲಿ ಮೈದೋರುವಾ ॥೭೮॥

ಅನ್ಯಥಾಸ್ಪದವಿಲ್ಲವೆಂದಖಿಳರಿಂದೊಡಗೂಡಿ ಸಾನಂದದಿಂ
ಸಂಗೀತರನಿತರೋಳ್ ಬಂದು ಹರಿಗಂಬಿನ್ನೈಸಿದರ್ ಚಂದದಿಂ ॥೭೯॥

**ರಾಗ ಸಾರಂಗ ಆದಿತಾಳ**

ಚಿತ್ತಾವಧಾನ ಶ್ರೀ ವೈಕುಂಠ ಜೀಯಾ । ವೃತ್ತಾಂತವೆಲ್ಲಾನಂದದಿ ಲಾಲಿಸೈಯ್ಯಾ ।
ಖೂಳಶಂಬರ ದೈತ್ಯ ಬಂದೆಮ್ಮ ಪುರವಾ । ಧಾಳಿಯೊಡ್ಡಿ ಪುರವಾಗೋಳಿಡುತ ॥೮೦॥

ಲೋಲಾಕ್ಷಿಯರನೊದ ದಾಸಿಯರಂದದಲಿ । ಕೋಲಾಹಲವ ಮಾಳ್ಪ ಬಹಳಗರ್ವದಲೀ ॥
ಕನಸಿನೊಳಾದರು ಸುಖವಿನಿತಿಲ್ಲಾ । ದನುಜಾರಿಪತಿ ಸಾಂಬದೇವತಾ ಬಲ್ಲಾ ॥೮೧॥

**ಭಾಮಿನಿ**

ಸುರಪಕೇಳ್ ಶಿವನಲ್ಲಿ ಮನ್ಮಥ ।
ಹೊರತು ಕೊಲುವವರಿಲ್ಲವೆಂದೀ ।
ವರವ ಪಡೆದಿಹ ದೈತ್ಯ ತದ್ಬಲದಿಂದ ಬಾಧಿಸುವ ॥
ಭರದಿ ರುಕ್ಮಿಣಿಯುದರಲಿ ಪೂ ।
ಶರನುದಿಸಿ ತತ್ಫಳನ ಸಂ ।
ಹರಿಸುವನು ನಿಮ್ಮಿಷ್ಟವಾಹುದು ಬೆದರಲೇಕೆಂದಾ ॥೮೨॥

**ವಚನ**

ಈ ರೀತಿಯಿಂದಾ ಸುರಪತಿ ಸಂದಣಿ ಸಹಿತ ತೆರಳಿದರು ಗಗನ
ಪಥವಿಡಿದು ಅತಿ ಹರುಷದಿಂದಾ ॥೮೩॥

**ವಾರ್ಧಕ**

ಗರುಡ ಗಂಧರ್ವರ ವಿತಾನದಿಂ ಮಾನದಿಂ ।
ಪರಿಪರಿಯ ವಾದ್ಯಗಳ ಘೋಷದಿಂ ತೋಷದಿಂ ।
ಮೆರೆಯುತಿಹ ದಿವ್ಯಕಾಸಾರದಿಂ ತೀರದಿಂದುರುತರಾನಂದದಿಂದ ॥
ಪುರಹರನ ನೇತ್ರಾಗ್ನಿಯಿಂದ ಪೂರ್ವದಿ ಪಂಚ ।
ಶರನುದಹಿಸಲ್ಕಾಗ ತತ್ಪತ್ನಿ ರತಿಗುಮಾ ।
ವರನನುಗ್ರಹಿಸಲಾ ವನಿತೆ ಸಂತಸವೆತ್ತು ಇರುತಿರಲ್ಕತ್ತ ಬಳಿಕಾ ॥೮೪॥

ಅರುಹಲದನಿನ್ನೇನು ದೈವಸಂಘಟನೆಯೊಳ್ ।
ಹರಿಹರರ ಸಂಯೋಗವಾಗಿಹುದು ತತ್ಸಮಯ ।
ಒರೆಯಲೇನಂಗಜನಿದಿರ್ಬಂದು ಕಾಣಿಕೆಯನಿತ್ತಂತೆ ಗಿರಿಮೆರೆದುದೂ ॥
ಚರಿಸುವ ಗಣತ್ರಯದಿ ಮಧ್ಯವರ್ಗಾಕ್ಷರಗ ।
ಳೆರಡು ಮಿಥಿಲೇಶಸುತೆಯಭಿಧಾನದಗ್ರಮ ।
ತ್ತರವಿಂದನಾಭನ ಕರಾಭರಣದಿಂದ ಮತ್ತವನರ್ಧದೇಹಸತಿಯ ॥೮೫॥

ವರ ನಾಮದ ಪ್ರಥಮದೀ ತೆರದ ಸಂಜ್ಞೆಯೊಳ್ ।
ಮೆರೆಯುತಿಹ ಪಂಚವರ್ಣಗಳಿಂದ ಸರ್ವಜನ ।
ಗಿರಿಯ ಪೆಸರುಚ್ಚರಿಸಿ ಸರಸಿಜಾಂಬಕನೊಡನೆ ನಡೆತಂದರರ್ಥಿಯಿಂದ ॥
ಗಿರಿಸುತೆಯ ಮೊಗನೋಡಿ ಮುದದಿಂದ ಮದದಿಂದ ।
ಸರಸವಾಡುತ ಪಂಚಮುಖದಿಂದ ಸುಖದಿಂದ ।
ಕರಿಮುಖಗುಹಾದಿಗಳ ನಯದಿಂದ ಭಯದಿಂದ ಭರಿತ ವೈಭವಗಳಿಂದ ॥೮೬॥

ಪರಮಸಂಗೀತಸುಸ್ವರದಿಂದ ಭರದಿಂದ ।
ವರಗಳನು ಕರೆದೀವ ಮತಿಯಿಂದ ನುತಿಯಿಂದ ।
ನಿರುತ ನಿರ್ಮಲಸುಮಂಗಲದಿಂದ ನೊಲವಿಂದ ರಜತಾದ್ರಿ ಕಣ್ಗೆಸದುದೂ ॥೮೭॥

**ಕಂದ**

ಈತೆರನತ್ಯಾನಂದದಿ ।
ಭೂತಾಧಿಪ ನವರತ್ನ ಪೀಠದೊಳಿರಲಾಗಲೆ ।
ಪೀತಾಂಬರನೈತಂದಿಹ ।
ವಾರತೆಯಂ ದೂತನೋರ್ವನೈತಂದು ಹರಗಿಂತೆಂದಾ ॥೮೮॥

## ೭. ಪಾರಿಜಾತ ಪ್ರಸಂಗ (ನರಕಾಸುರ ಕಾಳಗ) - ಪಾತ್ರಗಳು

ಕೃಷ್ಣ
ರುಕ್ಮಿಣಿ
ನಾರದ
ಸತ್ಯಭಾಮ
ಸಖಿಯರು
ದೇವೇಂದ್ರ
ಮುರಕಾಸುರ
ಮುರಕಾಸುರಸುತ
ದೂತ

ನರಕಾಸುರ

ನರಕಾಸುರಸತಿ

ವನಪಾಲಕರು

ವರುಣ

ಅಗ್ನಿ

ವಾಯು

ಗರುಡ

ಈಶ್ವರ

**ಕಂದ**

ಕೆಲಬರ್ ಕಾಣುತ ಭಯಮಂ ।
ತಳೆದರ್ಜನ ಕಾಮಾತ್ತುರವನಿಕೇತನದಾ ॥
ಸ್ಥಳಮಂ ಸಾರಿರೆ ಶರ್ವಂ ।
ಘಳಿಲನೆ ನಡೆತಂದು ಸಮರಾಂ ಗಣಕಂ ॥೩೧೪॥

**ರಾಗ ಘಂಟಾರವ ಅಷ್ಟತಾಳ**

ಬಂದನೀಶಾನ । ನಂದು ಸಗಾಢದಿ ॥
ನಂದಗೋಪನ । ಕಂದನೊಳು ನಮ । ಗಿಂದು ಸಮರವೆನುತ್ತಲಿ ॥ಪ॥

ನಿಲ್ಲು ನಿಲ್ಲು ಕೃಷ್ಣ । ಎಲ್ಲಿಗೆ ಪೋಗುವೆ ॥
ಬಿಲ್ಲ ಹಿಡಿ ಹಿಡಿ । ಬಲ್ಲೆ ನಿನ್ನನು । ಬಲ್ಲಿದನು ನೀ ಕಳವಿಲಿ ॥
ಗೊಲ್ಲರಾಲಯ । ವಲ್ಲ ನಿರೀಕ್ಷಿಸು ॥
ಕಳ್ಳತನಗಳ । ನಿಲ್ಲಿ ತೋರ್ಪುದು । ಸಲ್ಲದೆನುತಲಿ ಸಮರಕೆ ॥೩೧೫॥

ಭೂತನಾಥ ನೀ । ನೇತಕೆಮ್ಮೊಡನಿಂತು ॥
ಮಾತನಾಡುವೆ । ನೀತಿಯಲ್ಲದೆ । ನೀ ತಿಳಿಯದಿರುವಾತನೆ ॥
ಖಾತಿ ಬೇಡ ಸಂ । ಪ್ರೀತಿಯಿಂದೊಯ್ವೆ ನಾ ।
ನೀ ತರುವ ಧರ । ಜೀತಳಕ್ಕೆನೆ । ಸಾತಿ ಶಯದಲಿ ಸಮರಕೆ ॥೩೧೬॥

ಹರಿಯೆ ಕೇಳ್ ನಿನ್ನ । ಪರಿಯನೆಲ್ಲವ ಬಲ್ಲೆ ॥
ಸುರರಭೀಷ್ಟದ । ತರುವ ನೀನಪ । ಹರಿಸಬೇಡವೆನುತ್ತಲಿ ॥
ಭರದಿ ಪೇಳಲು । ತೆರಳಿ ಬಂದೆನು ಮತ್ತೆ ।
ಮರೆಯದಿಲ್ಲಿಗೆ ತಿರುಗಿ ಕಳುಹೆಂ । ದೊರೆದು ತನ್ನುರುಸದನಕೆ ॥೩೧೭॥

**ಕಂದ**

ದಿಗಧಿಪರೆಲ್ಲರು ತಮ್ಮಯ ।
ನಗರಕ್ಕಂ ತೆರಳುತಿರಲು ಕಂಡಮರೇಂದ್ರಂ ॥
ನಗಧರ ನಿಲು ನಿಲ್ಲೆನುತಲಿ ।
ಮಿಗೆ ಕೋಪಾಟೋಪದಿಂದ ಹರಿಯೊಳ್ ನುಡಿದಂ ॥೨೧೮॥

**ರಾಗ ಕಾಂಭೋಜಿ ಏಕತಾಳ**

ನಿಲ್ಲು ನಿಲ್ಲು ವೃಕ್ಷವ ನೀ । ನೆಲ್ಲಿಗೊಯ್ವೆ ಪೇಳು ॥
ಎಲ್ಲಿಗೊಯ್ದರೇನು ನಮ್ಮ । ತಳ್ಳಿ ಬೇಡ ಕೇಳು ॥೨೧೯॥

ಕಳ್ಳತನವೆ ನಮ್ಮ ಕೂಡೆ । ಸಲ್ಲದೆಲವೊ ನಿನಗೆ ॥
ಸಲ್ಲದಂಥ ಕಾರ್ಯ ಮಾಳ್ಪ । ರಲ್ಲ ಕೇಳು ಬಿನುಗೆ ॥೨೨೦॥

ಒಡೆಯ ನಾನಾಗಿದ್ದು ನಮ್ಮ । ಒಡವೆಯೊಯ್ವುದೇನೊ ॥
ಒಡವೆ ವಸ್ತುಗಳಿಗೆ ನಾನೆ । ಒಡೆಯರೆಂಬರು ಕಾಣೊ ॥೨೨೧॥

ಬಿಡು ವಿರೋಧ ಸಾಕಿದಿಂತು । ನುಡಿವುಚಿತವಲ್ಲ ॥
ನುಡಿಯ ಕೇಳದಿರಲು ಕ್ಷಣದಿ । ಬಡಿವೆ ನಿಮ್ಮನ್ನೆಲ್ಲ ॥೨೨೧॥

ದಿಟ್ಟತನವೆ ಕಲ್ಪತರುವ । ಕೊಟ್ಟು ನಡೆಯೊ ನೀನು ॥
ಕೊಟ್ಟು ನಡೆವನಲ್ಲ ನಿನಗೆ । ಪೆಟ್ಟ ಕೊಡುವೆ ನಾನು ॥೨೨೩॥

ಬಿಟ್ಟು ಹೋಗೆಂದೆನುತ ಖತಿಯೊ । ಳಿಟ್ಟ ವಜ್ರವಾಗ ॥
ಇಟ್ಟ ವಜ್ರವನ್ನು ಪಿಡಿದ । ಕೃಷ್ಣ ನಗುತ ಬೇಗ ॥೨೨೪॥

**ಕಂದ**

ವರ ವಜ್ರಾಯುಧಮಂ ಮಿಗೆ ।
ಮುರಹರನಪಹರಿಸೆ ನಿರ್ಜರನಾಥಂ ॥
ಸಿರಿಯಭಿದಾನದೊಳೇಕಾ ।
ಕ್ಷರ ನಾಮವನಂದು ನೆನೆದು ಮರಳಿದನಾಗಳ್ ॥೨೨೫॥

ಶಿವ ಶಿವ ತಾನೇತಕ್ಕಾ ।
ಹವಕಿಂದ್ಯೆತಂದೆನೆಂದು ಮರುಗುತ ಸುರಪಂ ॥
ಭವನಕ್ಕಂ ಪೋಗುತ್ತಿರೆ ।
ಯುವತೀಮಣಿ ಸತ್ಯಭಾಮೆ ಜರೆದಳ್ ನಗುತಂ ॥೨೨೬॥

**ರಾಗ ಮಧುಮಾಧವಿ ಏಕತಾಳ**

ಯಾತಕೆ ಇಂದ್ರ ಪೋಗುವೆ ದೇವ ।
ನಾಥನಾಗಿಯೆ ಪಾರಿ । ಜಾತವಾಬಿಟ್ಟು ನೀ ॥ ಯಾತಕೆ ॥ಪ॥

ಎರಡೇಳುಲೋಕಕ್ಕೆ ಗಂಡನೆಂದೆನಿಸಿ ।
ಭರದಿ ದಿಕ್ಪಾಲಕರನಿಲ್ಲಿಗೆ ಬರಿಸಿ ॥
ಧುರಕನುವಾಗುತೆಲ್ಲರ ನೀನು ಕೊಲಿಸಿ ।
ವರ ಪರಾಕ್ರಮವನ್ನು ತೊರೆದೀಗ ಸಹಸಿ ॥ ಯಾತಕೆ ॥೩೩೭॥

ಈ ರೀತಿಯಲಿ ಮಾನ ನೀಗಿಸಿಕೊಂಡು ।
ಭಾರಿ ವಜ್ರಾಯುಧ ಹೋಗಾಡಿಕೊಂಡು ॥
ನಾರಿಗೆ ಮೋರೆಯ ತೋರಲು ಬಹುದೆ ।
ಪಾರಿಜಾತವವ ಕೊಂಡುಪೋಗದೆ ಬರಿದೆ ॥ ಯಾತಕೆ ॥೩೩೮॥

**ಕಂದ**

ಹರಿಯರಸಿಯ ನುಡಿಯನ್ನವ ।
ಧರಿಸುತಲತಿ ಕೋಪದಿಂದಲಾ ಪುರುಹೂತಂ ॥
ಭರದಿಂ ತಿರುಗಿಸಿ ಗಜಮಂ ।
ಸರಸಿಜಪತ್ರೇಭನೇತ್ರೆಯೊಡನಿಂತೆಂದಂ ॥೩೩೯॥

**ರಾಗ ಪೂರ್ವಿ ಅಷ್ಟತಾಳ**

ಹರಿಯ ಕೈಯ ಹಿಡಿದೆನೆಂಬ ಗರ್ವದಿಂದ । ನಮ್ಮ ।
ಜರೆದು ನುಡಿವರೇನ ಬಹಳ ಖಾತಿಯಿಂದ ॥
ಪರರೆ ನಾವೀ ಸರ್ವಲೋಕನಾಯಕಂಗೆ । ನೀನು ।
ಅರಿಯದಿಂತು ಪೇಳ್ವುದೊಳ್ಳಿತಲ್ಲ ಹೀಂಗೆ ॥೩೪೦॥

ತನಯರೊಂದು ತಪ್ಪುಮಾಡೆ ಮುನಿವದುಂಟೆ । ಜಗ ।
ಜ್ಜನಕನಯ್ಯಗೆಮ್ಮ ಮೇಲೆ ಕ್ರೋಧವುಂಟೆ ॥
ಜನನಿ ನೀನೆ ದನುಜೆಯಾಗಿಂತೆಂಬೆ ಯಾಕೆ । ನಿನ್ನ ।
ಗುಣವನೆಲ್ಲ ಕಂಡ ಮೇಲೆ ಪೇಳ್ವುದೇಕೆ ॥೩೪೧॥

ಸಾಕು ಹೆಚ್ಚು ಮಾತನಾಡಬೇಡವೆಂದು । ಸ್ವರ್ಗ ।
ಲೋಕನಾಥ ದಿವ್ಯ ಗಜವನಿಳಿದು ಬಂದು ॥
ಭೇಕವೈರಿತಲ್ಪನಂಘ್ರಿಗೆರಗಿ ಬೇಗ । ತಾ ।
ನೇಕಚಿತ್ತದಿಂದ ಭಜಿಸುತಿದ್ದನಾಗ ॥೩೪೨॥

**ರಾಗ ಶಂಕರಾಭರಣ ರೂಪಕತಾಳ**

ಜಯ ನಮೋ ಜಗನ್ನಿವಾಸ ಜಯ ಜನಾರ್ದನ ।
ಜಯ ನಮೋ ಗಜೇಂದ್ರವರದ ಗರುಡವಾಹನ ॥
ಜಯ ನಮೋ ಪವಿತ್ರಗಾತ್ರ ಪಾಪಮೋಚನ ।
ಜಯ ನಮೋ ಫಣೀಂದ್ರಶಯನ ಪದ್ಮಲೋಚನ ॥೩೪೩॥

ಭಾವಜಾತಜನಕ ಸಕಲ ಭಾಗ್ಯದಾಯಕ ।
ಶ್ರೀವಧೂಟಿಯರಸ ಸರ್ವಲೋಕನಾಯಕ ॥
ದೇವ ನೀನು ನೋಡು ಕರುಣದೃಷ್ಟಿಯಿಂದಲಿ ।
ಕಾವುದಭಯವೀವುದೆನಗೆ ವಿನಯದಿಂದಲಿ ॥೩೪೪॥

ಕನಕಮಯದ ಕಲ್ಪತರುವನವನಿ ಗೊಯ್ದುದೆ ।
ಅನಿಮಿಷರ್ಗೆ ಘನತೆಯಲ್ಲವೆನುತ ಸೆಣಸಿದೆ ॥
ಕ್ಷಣಿಕಚಿತ್ತರೆಮ್ಮ ದೋಷ ಮನಕೆ ತಾರದೆ ।
ಗುಣಸಮುದ್ರ ಕ್ಷಮಿಸಬೇಕು ಮುನಿಸದೋರದೆ ॥೩೪೫॥

ಕೊಡುವರ್ಯಾರು ಕೊಂಬರ್ಯಾರು ಒಡೆಯರ್ಯಾರೆಲೆ ।
ಒಡನೆ ಒಯ್ಯುದಿಹುದು ದಯದಿ ಪೊಡವಿಗೀಗಲೆ ॥
ಒಡವೆ ವಸ್ತುಗಳಿಗೆ ನೀನೆ ಒಡೆಯನೆನುತಲಿ ।
ಅಡಿಗೆ ಮುಡಿಯ ಚಾಚಿ ಸುರಪ ನುಡಿದ ಮುದದಲಿ ॥೩೪೬॥

**ರಾಗ ಭೈರವಿ ಝಂಪೆತಾಳ**

ಸಿರಯರಸ ನಸುನಗುತ । ಕರುಣದಿ ಪುರಂದರನ ।
ಶಿರವ ಪಿಡಿದೆತ್ತಿದನು । ಸುರರುಘೇಯೆನಲು ॥೩೪೭॥

ಬಾರಯ್ಯ ದಿವಿಜೇಂದ್ರ । ಬಾರೊ ಸದ್ಗುಣ ಸಾಂದ್ರ ।
ಬಾರೆನುತಲಪ್ಪಿದನು । ಭೂರಿನೇತ್ರನನು ॥೩೪೮॥

ಕರಚರಣದಿಂದಾದ । ಪರಿಭವಕೆ ನೋವುಂಟೆ ।
ಮರುಳಲಾ ನೀನಿದರ । ಪರಿಯ ಪೇಳೆನಗೆ ॥೩೪೯॥

ಕುಂದದಿರು ನಮ್ಮಾಜ್ಞೆ । ಯಿಂದಲೀ ತರು ಮರಳಿ ।
ಬಂದಪುದು ತವ ಪುರಕೆ । ಸಂದೇಹ ಬೇಡ ॥೩೫೦॥

ಎನುತ ವಜ್ರವನಿತ್ತು ವಿನಯದಲಿ ಸಂತಯ್ಸಿ ।
ವನಜಾಕ್ಷ ತನ್ನ ಪ । ಟಣಕೆ ನಡೆತಂದ ॥೩೫೧॥

**ಭಾಮಿನಿ**

ಸುರರು ದುಂದುಭಿ ಮೊಳಗೆ ಕರುಣಾ ।
ಕರನು ಸತಿಯೊಡಗೊಂಡು ನಿರ್ಜರ ।
ತರುಸಹಿತಲಯ್ತಂದ ತವಕದಿ ದ್ವಾರಕಾಪುರಕೆ ॥
ಬರವ ಕಾಣುತ ಪುರದ ಜನರತಿ ।
ಹರುಷದಲಿ ಬಂದಿದಿರುಗೊಳೆ ಖಗ ।
ವರನನಿಳಿದರು ವಾದ್ಯಘೋಷದಿ ಪೊಕ್ಕನರಮನೆಯ ॥೩೫೧॥

**ರಾಗ ಕಾಂಭೋಜಿ ಅಷ್ಟತಾಳ**

ಬಂದರೆಲ್ಲರು ಹರುಷದಲಿ । ಗೋ ।
ವಿಂದನಿದ್ದೆಡೆಗೆ ವೇಗದಲಿ ॥
ವೃಂದಾರಕವೃಕ್ಷ । ದಂದವ ನೋಡುವೆ ।
ವೆಂದು ಭಾಮಾದೇವಿ । ಮಂದಿರಕೆಲ್ಲರು ॥೩೫೩॥

ವಸುದೇವ ದೇವಕಿ ಬಲರು । ಶೋ ।
ಭಿಸುವ ರೇವತಿ ಸೌಭದ್ರೆಯರು ॥
ಮಿಸುನಿ ರತ್ನಗಳಿಂದ । ಲೆಸೆವ ಭೂರುಹವನು ।
ಬಿಸಜಾಂಬಕನು ತಂದ । ವಸಗೆಯ ಕೇಳುತ್ತ ॥೩೫೪॥

ವರ ಪುರೋಹಿತರು ಜೋಯಿಸರು । ಭೂ ।
ಸುರರು ತಾಪಸರು ಮಾಗಧರು ॥
ನೆರೆದ ಪೃಥ್ವೀಪಾಲ । ಕರು ಯಾದವರು ಬಾಂಧ ।
ವರು ಮುಖ್ಯ ಗೋಪರು । ಪುರದ ನಾರಿಯರು ॥೩೫೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತಂದೆತಾಯಿಗೆ ರಾಮನಿಗೆ ಸಾ । ನಂದದಲಿ ಮುನಿ ಗಾರ್ಗ್ಯನಿಗೆ ಗೋ ।
ವಿಂದೆನೆರಗಲು ಪರಸಿದರು ನಲ । ವಿಂದಲವರು ॥೩೫೬॥

ಕಂಗೊಳಿಪ ವೃಕ್ಷವನು ನೆಡಿಸಿದ । ನಂಗಜನ ಪಿತನಧಿಕ ಹರುಷದೊ ।
ಳಂಗನಾಮಣಿ ಸತ್ಯಭಾಮೆಯ । ಅಂಗಣದೊಳು ॥೩೫೭॥

ದೇವತರುವನು ಪೂಜಿಸೆನುತಲೆ । ದೇವದೇವನು ಬೆಸಸೆ ಭಾಮಾ ।
ದೇವಿ ಬಂದಳು ಭರದಿ ರುಗ್ಮಿಣಿ । ದೇವಿಯೆಡೆಗೆ ॥೩೫೮॥

**ಕಂದ**

ತಂಗಿಯ ಬರಮಂ ಕಾಣು ।
ತ್ತಂಗೋದ್ಭವಜನನಿ ತೋಷದಿಂದಾ ಕ್ಷಣದೊಳ್ ॥

ಭಂಗಾರಪೀಠವೀವುತೆ ।
ತುಂಗಸ್ತನೆಯೊಡನೆ ಕೇಳಿದನು ಕುಶಲಂಗಳಂ ॥೩೫೯॥

**ರಾಗ ದೇಶಿ ಏಕತಾಳ**

ಕ್ಷೇಮವೆ ಚಕೋರನೇತ್ರೆ । ಸತ್ಯಭಾವೆ ॥ ಪೂರ್ಣ
ಸೋಮವಕ್ತ್ರೆ ಹೇಮಗಾತ್ರೆ । ಸತ್ಯಭಾವೆ ॥
ಕಾಮಿನಿರತ್ನವೆ ಬಾರೆ । ಸತ್ಯಭಾವೆ ॥ ರಂಗ ।
ಧಾಮ ಪ್ರೀತಿಯಿಂದಲಿಹನೆ । ಸತ್ಯಭಾವೆ ॥೩೬೦॥

ಎಂದು ಇಲ್ಲದೆನ್ನ ಮನೆಗೆ । ಸತ್ಯಭಾವೆ ॥ ನೀನು
ಬಂದುದತಿ ಚೋದ್ಯವಮ್ಮ । ಸತ್ಯಭಾವೆ ॥
ಬಂದ ಕಾರ್ಯವೇನೆ ಪೇಳೆ । ಸತ್ಯಭಾವೆ ॥ ಎ ।
ನ್ನಿಂದಲಹುದೇನೆ ಸುಗುಣೆ । ಸತ್ಯಭಾವೆ ॥೩೬೧॥

ಬಿಸಜಗಂಧಿ ನಿನ್ನ ಮುಖದಿ । ಸತ್ಯಭಾವೆ ॥ ಹರುಷ ।
ರಸವು ತುಳುಕಿ ಶೋಭಿಸುತಿದೆ । ಸತ್ಯಭಾವೆ ॥
ವಸಗೆಯೇನು ಮನೆಯೊಳಿಂದು । ಸತ್ಯಭಾವೆ ॥ ಈಗ ।
ಪುಸಿಯದೆನ್ನೊಳುಸಿರೆ ನೀರೆ । ಸತ್ಯಭಾವೆ ॥೩೬೨॥

**ರಾಗ ನವರೋಜು ಏಕತಾಳ**

ಅಕ್ಕ ಕೇಳಹಿವೇಣಿ । ನೀ । ನಕ್ಕರದಿ ಗುಣಶ್ರೇಣಿ ॥
ರಕ್ಕಸದಲ್ಲಣನರ್ಧ ಶರೀರಿಣಿ । ಸಕ್ಕರೆ ಮಾತಿನ ಸರಸಿಜಪಾಣಿ ॥೩೬೩॥

ಖಳರುಪದ್ರಕೆ ನೊಂದು । ವರ । ಕುಲಿಶಪಾಣಿಯು ಬಂದು ॥
ಸಲಹೆನೆ ಹರಿ ಮನವೊಲಿದೆನ್ನೊಡಗೊಂ । ಡಲಸದೆ ದನುಜರ ನಿಳಯಕೆ ಪೋಗಲು ॥೩೬೪॥

ದುರುಳರ ಸಂಹರಿಸಿದನು । ದೈ । ತ್ಯರನೆಲ್ಲಾ ಮಡುಹಿದನು ॥
ನರಕನ ಶಿರವನು ತರಿದನು ಮತ್ತಾ । ಧರಣಿಯ ಮೊಮ್ಮನ ನೆರೆ ರಕ್ಷಿಸಿದನು ॥೩೬೫॥

ಅದಿತಿ ಕುಂಡಲಗಳನು । ಖಳ । ಸದನದಿಂ ತರಿಸಿದನು ॥
ಮಧುಸೂದನ ಹರುಷದಿ ನಾಕಕ್ಕೈ । ದಿದ ಸುರಜನನಿಯ ಪದಕರ್ಪಿಸಿದನು ॥೩೬೬॥

ಬರುತ ಕಂಡೆನು ನಾನು । ಶ್ರೀ । ಕರ ಪಾರಿಜಾತವನು ॥
ತರಹರಿಸದೆ ಮುರಹರನೊಳು ಪೇಳಲು । ಕರುಣಾಕರನೀ ಧರಣಿಗೆ ತಂದನು ॥೩೬೭॥

ವನಜಾಕ್ಷ ನೆಡಿಸಿದನು । ಅಂ । ಗಣದಲ್ಲೀ ವೃಕ್ಷವನು ॥
ಮನಗೈತಂದಾ ಕನಕಮಯದ ತರು । ವನು ಪೂಜಿಸು ನೀನನುಮಾನಿಸದೆ ॥೩೬೮॥

**ವಚನ**

ಇಂತೆನೆ ಸಂತಸಮಂ ತಳೆದು ಕಂತುಜನನಿ ಭಾಮಾಕಾಂತೆಯೊಳ್ ಪೇಳ್ದಳದೆಂತೆನೆ -

**ರಾಗ ಕೇದಾರಗೌಳ ಝಂಪೆತಾಳ**

ಲೇಸಾದುದಬ್ಜನೇತ್ರೆ | ಬಂದುದೇ | ವಾಸವನ ದ್ರುಮ ಸುಗಾತ್ರೆ ||
ಏಸು ಜನ್ಮದ ಸುಕೃತವೆ | ಧರೆಯೊಳಿರು | ವೀ ಸಕಲ ಜನಕೆ ಭಾವೆ ||೩೯೯||

ಧರೆಗಮರಪಾದಪವನು | ಪೂರ್ವದಲಿ | ಬರಿಸಿದವರನು ಕಾಣೆನು ||
ತರಳೆ ನೀನು ಸಮರ್ಥೆಯು | ನಿನ್ನಿಂದ | ಹರಿಗೆ ಬಂದುದು ಕೀರ್ತಿಯು ||೩೬೦||

ನಡೆ ಬಹೆನು ವೃಕ್ಷದೆಡೆಗೆ | ನೀ ಬೇಗ | ನಡೆಯಮ್ಮ ನಿನ್ನ ಮನೆಗೆ ||
ಮಡದಿಯರನೆಲ್ಲ ಕರೆಸು | ಪೂಜಿಪಡೆ | ಪೊಡವಿಯಮರರನು ಬರಿಸು ||೩೬೧||

ಇಂತೆಂದು ತೋಷವೆತ್ತು | ವೀಳ್ಯವನು | ತಾಂ ತವಕದಿಂದಲಿತ್ತು ||
ಕಂತು ಜನನಿಯು ಕಳುಹಲು | ಭಾವೆ ಮುದ | ವಾಂತು ಮನೆಗಯ್ತಂದಳು ||೩೬೨||

**ಭಾಮಿನಿ**

ಕೇಳು ಧರಣಿಪ ಸತ್ಯಭಾಮೆಯು |
ಬೀಳುಗೊಂಡಲ್ಲಿಂದ ಬಂದಳು |
ನೀಲೆ ಮೊದಲಾದಖಿಳ ವಧುಗಳ ಮನೆಗಳನು ಪೊಕ್ಕು ||
ಪೇಳಿದಳು ವೃತ್ತಾಂತವನು ಸುರ |
ಸಾಲಪೂಜೆಗೆ ಬಪ್ಪುದೆನುತ ವಿ |
ಶಾಲಲೋಚನೆ ಬಂದು ತಿಳುಹಿದಲರಸಗೀ ಹದನ ||೩೬೩||

**ಕಂದ**

ಸುರುಭೂರುಹಮಂ ನೋಡುವ |
ಭರದಿಂ ನಡೆತಂದರಂದು ವನಿತೆಯರೆಲ್ಲರ್ ||
ಸುರುಚಿರಘನತರರತ್ನಾ |
ಭರಣಗಳಂ ತೊಟ್ಟು ಸತ್ಯಭಾಮೆಯ ಮನೆಗಂ ||೩೬೪||

**ರಾಗ ಸೌರಾಷ್ಟ್ರ ಅಷ್ಟತಾಳ**

ಇಂದುನಿಭಾನನೆ ಇಂದಿರೆ ವಿಭವದಿ | ಬಂದಳಾಗ || ಚೆಲ್ವ |
ಕುಂದರದನೆ ಕಾಳಿಂದಿಯು ಸಂತಸದಿಂದ | ಬಂದಳಾಗ ||೩೬೫||

ಮಂದಗಾಮಿನಿ ಮಿತ್ರವಿಂದೆ ವಿನೋದದಿ । ಬಂದಳಾಗ ॥ ಆ ।
ನಂದದಿ ಜಾಂಬವನಂದನೆ ನಲವಿಂದ । ಬಂದಳಾಗ ॥೩೭೬॥

ನೀಲಕುಂತಳೆ ಚಾರುತಿರೆ ಲಕ್ಷಣೆ ತಾನು । ಬಂದಳಾಗ ॥ ರಮ್ಯ ।
ಕಾಳಾಹಿವೇಣಿ ಸುಶೀಲೆ ಭದ್ರಾದೇವಿ । ಬಂದಳಾಗ ॥೩೭೭॥

ಲೋಲಲೋಚನೆ ಮುದ್ದು ನೀಲೆ ಸಂಭ್ರಮದಿಂದ । ಬಂದಳಾಗ ॥ ಸ್ತ್ರೀ ।
ಜಾಲವನಿದಿರ್ಗೊಂಡು ಸತ್ಯಭಾಮಾದೇವಿ । ಬಂದಳಾಗ ॥೩೭೮॥

**ಕಂದ**

ಸಿರಿ ಮೊದಲಾದಂಗನೆಯರು ।
ಕರುಣಾಕರ ಕೃಷ್ಣನಂಘ್ರಿಕಮಲದ್ವಯಕಂ ॥
ಕರವಂ ಮುಗಿದುರುತರ ಸುರ ।
ತರುವಂ ಪೂಜಿಸುತಮಿರ್ದರತಿ ಸಂಭ್ರಮದೊಳ್ ॥೩೭೯॥

**ರಾಗ ಧವಳಾರ ಏಕತಾಳ**

ನಾರಿಯರೆಲ್ಲರು ನೆರೆದು । ಪಾರಿಜಾತಕೆ ಕೈಯ ಮುಗಿದು ।
ಧಾರಿಣಿ ಯಮರರ ಮಂತ್ರವಿಧಾನದಿ । ಭೂರುಹಕನುಪಮ ಹೇಮದ ಕಲಶದಿ ।
ವಾರಿಯ ತುಂಬುತಲಭಿಷೇಕವ ವಿ ।
ಸ್ತಾರದಿಂದೊಲಿದು ಮಾಡಿದರು ॥ ಶೋಭಾನೆ ॥೩೮೦॥

ನವ್ಯವಸ್ತುವನಲಂಕರಿಸಿ । ದಿವ್ಯ ವಿಭೂಷಗಳ ತೊಡಿಸಿ ।
ಕಾವ್ಯಾಗುರುಮುಖ್ಯ ಮದ ಸಂಕುಲ । ನವ್ಯಸುಪುಷ್ಪಫಲಾನ್ವಿತ ಮುನಿಕುಲ ।
ಭವ್ಯ ಸುರಾಗವಿದೆನುತಲಿ ಪೊಗಳುತ ।
ನವ್ಯಕ್ತವಾಗಿ ಪೂಜಿಸಿದರು ॥ ಶೋ ॥೩೮೧॥

ಗಂಧಕುಂಕುಮಾಕ್ಷತೆಯಿಂದ । ಮಂದಾರಕುಸುಮಗಳಿಂದ ।
ಚಂದದಿ ಧೂಪ ಸುದೀಪಗಳಿಂದಲಿ । ಕುಂದದೆ ಭಕ್ತಿಯೊಳರ್ಚಿಸಿ ಮುದದಲಿ ।
ತಂದಗಣಿತ ನೈವೇದ್ಯದ ರಾಶಿಯ ।
ಮುಂದಿಟ್ಟು ಅರ್ಪಿಸಿದರೊಲವಿಂದ ॥ ಶೋ ॥೩೮೨॥

ಜಂಭಾರಿ ಸತಿಯಿಂದ ಶಚಿಯಿಂದ । ರಂಭಾದಿ ನಾರಿಯರಿಂದ ।
ಅಂಬರಲೋಕದಿ ಸಂತಸ ಪೂಜಿಸಿ । ಕೊಂಬ ಮಹೀರುಹವೆನುತ ಕೀರ್ತಿಸಿ ।
ತಾಂಬೂಲವನರ್ಪಿಸಿ ಸಂತೋಷದೊ ।
ಳಂಬುಜಾಕ್ಷಿಯರು ಪೂಜಿಸಿದರು ॥ ಶೋ ॥೩೮೩॥

ಭೂರಿ ಮೌಕ್ತಿಕ ರತ್ನತತಿಯ । ಮೇರುವೆ ಕುರುಜಿನಾರತಿಯ ।
ಚಾರುತರದ ಕರ್ಪೂರಸುನಿರ್ಮಲ । ಸಾರಸುಸೌರಭ್ಯ ಮೂರು ಜಗಂಗಳ ।
ಪೂರಯಿಸಲು ಶತ ನೀರಾಜನಗಳ ।
ನೀರೆಯರೆಲ್ಲ ಬೆಳಗಿದರು ॥ ಶೋ ॥೩೮೪॥

ಪಾಡುತ ಪ್ರದಕ್ಷಿಣೆಗಳನು । ಮಾಡುತ ನಮಸ್ಕಾರವನು ।
ನೋಡುತ ವೃಕ್ಷದ ಸೌಂದರ್ಯಗಳನು । ಬೇಡಿದರನುಪಮ ಕಾಮಿತಫಲವನು ।
ನೀಡಿದ ರಖಿಲ ಸುವಾಸಿನಿನಿವಹಕೆ ।
ಪ್ರೌಢೆಯರೆಲ್ಲ ಬಾಗಿನವ ॥ ಶೋ ॥೩೮೫॥

ಗೀತ ಸುವಾದ್ಯ ನೃತ್ಯದಲಿ । ಜಾತಿ ಹೆಂಗಳ ಶೋಭಾನದಲಿ ।
ಭೂತಳಮರದ ಮಂತ್ರಸುಘೋಷದಿ । ಸಾತಿಶಯದ ಸುರದುಂದುಭಿನಾದದಿ ।
ಶಾತೋದರಿಯರು ಮಂತ್ರಸುಮವ ಸಂ ।
ಪ್ರೀತಿಯಿಂದರ್ಪಿಸಿ ನಲಿದರು ॥ ಶೋ ॥೩೮೬॥

**ಭಾಮಿನಿ**

ತರುಣಿಯರು ನಲವಿಂದ ನಿರ್ಜರ ।
ತರುವನತಿ ಭಕ್ತಿಯೊಳು ಪೂಜಿಸಿ ।
ಪರಮ ಹರುಷವ ತೋರಿ ಶೂರಕುಮಾರ ವಿಭವದಲಿ ॥
ಧರಣಿಪರ ಸತ್ಕರಿಸಿ ಪೃಥ್ವೀ ।
ಶ್ವರರ ಮನ್ನಿಸಿ ಬಂಧುಗಳನುಪ ।
ಚರಿಸಿದನು ಬಹುವಿಧದೊಳವನೀಪಾಲ ಕೇಳೆಂದ ॥೩೮೭॥

**ಕಂದ**

ಸದಮಲ ಗಾತ್ರೆಯರನುಪಮ ।
ವಧುಗಳ್ ಪದಿನಾರು ಸಾವಿರದ ಮೇಲೆ ಶತಂ ।
ಸದನದೊಳಿರೆ ತತ್ ಕ್ಷಣದೊಳ್ ।
ಮದುವೆಗೆ ಮದುವಣಿಗನಾದನಬ್ಜದಳಾಕ್ಷಂ ॥೩೮೮॥

**ದ್ವಿಪದಿ**

ಆ ಪೇಳೆಯೊಳೆದ್ದು ದೇವಕಿಯು ಮುದದಿ ।
ಭಾವೆಯರನೊಡಗೊಂಡು ಬಹಳ ಸಂಭ್ರಮದಿ ॥೩೮೯॥

ತೋರುಮುತ್ತುಗಳಿಂದ ತುಂಬಿದರು ಹಸೆಯ ।
ಚಾರು ಪೀಟವನಿಟ್ಟು ಚೆಲುವಿಂದ ಹರಿಯ ॥೩೯೦॥

ಕರೆಯಲ್ಕೆ ಕಮಲಾಕ್ಷಿ ಕಾಮಿನಿಯರುಗಳ ।
ಪರಿವೇಷದಿಂ ಬಂದು ಪೊಳೆವ ರತ್ನಗಳ ॥೩೯೧॥

ಹಸೆಮಣೆಯೊಳೊಪ್ಪಿರಲು ಹಂಸಗಮನೆಯರು ।
ಕುಶಲದಾರತಿಯ ಸಂತಸದೊಳೆತ್ತಿದರು ॥೩೯೨॥

**ರಾಗ ಧವಳಾರ ತ್ರಿವುಡೆತಾಳ**

ಮುರನರಕರ ಮಡುಹಿದ ಮಹಿಮಗೆ । ಧರಣಿಯ ಮೊಮ್ಮನ ಪೊರೆದಾತಗೆ ।
ಸುರಪಾರಿಜಾತವ ತಂದವಗೆ । ಸುರತರುಣಿಯರು ।
ಕುರುಜಿನಾರತಿಯ । ಬೆಳಗಿರೆ ॥೩೯೩॥

ವೇದವನುದ್ಧರಿಸಿದ ಮತ್ಸ್ಯಗೆ । ಭೂಧರವನು ತಾಳಿದ ಕೂರ್ಮಗೆ ।
ಮೇದಿನಿಯ ತಂದ ವರಹಗೆ । (ವರಹಗೆ) ನರಸಿಂಹಗೆ ಸೊಬಗಿನ ।
ಸಾದರದಾರತಿಯ । ಬೆಳಗಿರೆ ॥೩೯೪॥

ವಾಮನರೂಪಗೆ ಭಾರ್ಗವನಿಗೆ । ರಾಮಗೆ ಬಲನಿಗೆ ಕೃಷ್ಣನಿಗೆ ನಿ ।
ಸ್ಸೀಮ ಬೌದ್ಧಂಗೆ ಕಲ್ಕ್ಯನಿಗೆ । ನವರತ್ನದಿ ರಂಜಿಪ ।
ಹೇಮದಾರತಿಯ । ಬೆಳಗಿರೆ ॥೩೯೫॥

ಶ್ರೀಲಲನೆಗೆ ಭಾಮಾಸತಿಗೆ । ನೀಲಗೆ ಭದ್ರೆಗೆ ಲಕ್ಷಣೆಗೆ ।
ಕಾಳಿಂದಿಗೆ ಜಾಂಬವನ ಕುಮಾರಿಗೆ । ಲೋಲಾಂಬಕಿ ಮಿತ್ರವಿಂದೆಗೆ ಶೀಲೆಗೆ ।
ಬಾಲೆಯರೆಲ್ಲರು ನೆರೆವುತ ಹರುಷದಿ । ನೀಲದಾರತಿಯ ಬೆಳಗಿರೆ ॥೩೯೬॥

ಹದಿನಾರು ಸಾವಿರ ಗಣನೆಯ । ವಧುಗಳಿಗೆ ಶತಸಂಖ್ಯಾಶಶಿ ।
ವದನೆಯರಿಗೆಲ್ಲ ಮುದದಿಂದ । ಮಾಧವಕೃಷ್ಣಗೆ ।
ಪದುಮದಾರತಿಯ । ಬೆಳಗಿರೆ ॥೩೯೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಈ ತೆರದೊಳಬುಜಾಕ್ಷ ಸಂತತ ।
ಸಾತಿಶಯದಿಂದಿರ್ದನೆಂಬುದ ।
ಭೂತಳೇಶ ಪರೀಕ್ಷಿತಗೆ ಮುನಿ । ನಾಥನೊಲಿದು ॥೩೯೮॥

ಹರುಷರಸದಲಿ ಪೇಳ್ದ ಕಥೆಯನು ।
ಸುರನರೋರಗಲೋಕವಿನುತೆಯ ।
ವರಮಹಾಕುಟಜಾದ್ರಿ ಸದನೆಯ । ಕರುಣದಿಂದ ॥೩೯೯॥

ಮಹಿಯ ಸುಮನಸಕುಲದೊಳುದಿಸಿದ ।
ಮಹದಧಿಕಮತಿ ವೆಂಕಣಾರ್ಯನ ।
ಮಹಿಳೆ ದೇವಮ್ಮನ ತನೂದ್ಭವ । ಮಹಿತ ಸುಗುಣ ॥೪೦೦॥

ನೀತಿಯುತ ಚನ್ನಯ್ಯ ವರ ಸಹ ।
ಜಾತ ಸುಬ್ಬನು ಪೇಳಿದನು ಶ್ರೀ ।
ನಾಥನನುಪಮ ಕಥೆಯನಿದನೀ । ಭೂತಳದಲಿ ॥೪೦೧॥

ಹೇಳಿ ಕೇಳಿದವರಿಗೆ ಕಾಮ್ಯವ ।
ಲೋಲಲೋಚನೆ ಭಕ್ತಜನ ಪರಿ ।
ಪಾಲೆ ಮೂಕಾಂಬಿಕೆಯು ಸಂತತ । ಪಾಲಿಸುವಳು ॥೪೦೨॥

**ಮಂಗಲ**

**ರಾಗ ಅಹೇರಿ ಏಕತಾಳ**

ಮಂಗಲಂ । ಜಯ । ಮಂಗಲಂ ॥ಪ॥

ಅಜಸುರ ಮನುಮುನಿವಂದಿತೆಗೆ ।
ತ್ರಿಜಗತ್ಪಾಲೆಗೆ ಪಾರ್ವತಿಗೆ ॥
ನಿಜಪದಭಜಕವ್ರಜವನು ರಕ್ಷಿಪ ।
ಭುಜಗಾಭರಣೆಗೆ ಶಾಂಭವಿಗೆ ॥ ಮಂಗಲಂ ॥೪೦೩॥

ಅಗಣಿತ ಮಹಿಮೆಗೆ ಸುರನುತಗೆ ।
ಮೃಗಧರವಕ್ತ್ರೆಗೆ ಮಂಗಲೆಗೆ ॥
ಖಗಭಾಸೆಗೆ ನಿಗಮಾಗಮ ವೇದ್ಯೆಗೆ ।
ಸುಗುಣೆ ಸುಶೀಲೆಗೆ ಚಂಡಿಕೆಗೆ ॥ ಮಂಗಲಂ ॥೪೦೪॥

ಶಂಖಸುದರ್ಶನಧಾರಿಣಿಗೆ ।
ಪಂಕಜಪಾಣಿಗೆ ಪಾವನೆಗೆ ॥
ಕಿಂಕರನಿವಹವ ಸಂತತ ಸಲಹುವ ।
ಶಂಕರಿ ಶ್ರೀಮೂಕಾಂಬಿಕೆಗೆ ॥ ಮಂಗಲಂ ॥೪೦೫॥

**ಯಕ್ಷಗಾನ ಪಾರಿಜಾತ ಪ್ರಸಂಗ ಮುಗಿದುದು**

**ಭಾಮಿನಿ**

ನೀರೆ ಕಂಡಳು ಮುಂದೆ ರಾಜಿಪ ।
ಭೂರಿನೇತ್ರನ ವಿಭವಗಳಿಗಾ ।
ಧಾರವೆನಿಸುವ ಕಲ್ಪಪಾದಪ ಪಾರಿಜಾತವನು ॥
ತೋರಿದಳು ತಾ ವೃಕ್ಷವನು ಮಿಗೆ ।
ವಾರಿಜಾಕ್ಷನೆ ಮರವಿದಾವುದು ।
ಮಾರುಗೊಳುತಿದೆ ಮನವನೆಂದಳುಕಾಂತೆ ಕಳವಳಿಸಿ ॥೨೭೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇನೆಯ ನೋಡೀ ಮರನ ಬೇರ್ಗಳು ।
ಕನಕಮಯ ತನ್ಮಧ್ಯವೀ ದ್ರುಮ ।
ಕೊನೆಗಳುರು ಮರಕತದ ಮಯವೆಲೆ । ವನಜನಾಭ ॥೨೭೬॥

ಚಲಿಸುವೆಲೆಗಳು ನೀಲಮಯ ಪ್ರ ।
ಜ್ವಲಿಪ ಸುಮಮಾಣಿಕ್ಯಮಯ ಸ ।
ಲ್ಲಲಿತ ಕೆಂಜದೆಯೆಸಳು ವಜ್ರೋ । ಪಲವು ನೋಡೈ ॥೨೭೭॥

ಸ್ಥೂಲಮುಕ್ತಾವಳಿಯ ಮಯಸುಫ ।
ಲಾಳಿಗಳು ವೈಢೂರ್ಯಮಯವು ವಿ ।
ಶಾಲವಹುದಾಶ್ಚರ್ಯಮಯವಿದು । ಲೋಲನೇತ್ರ ॥೨೭೮॥

ಇಂತೆಸೆವ ವೃಕ್ಷವನರಿಯೆನಿ ।
ನ್ನೆಂತು ಧನ್ಯರೊನಾಕಿಗಳ ಸೀ ।
ಮಂತನಿಯರೆನಗಿದರ ಪೆಸರನು । ಕಾಂತ ಪೇಳ್ವೈ ॥೨೭೯॥

ಆವ ಜನ್ಮಾಂತರದ ಸುಕೃತವೊ ।
ದೇವತರುವನು ಕಂಡೆನೆನ್ನಯ ।
ಜೀವವಿದರಲಿ ನೆಲಸಿತೆಂದಳು । ಭಾವೆಯಂದು ॥೨೮೦॥

**ರಾಗ ಸಾರಂಗ ಅಷ್ಟತಾಳ**

ಭಾವಕಿ ಭ್ರಮರಾಳಕಿ । ಪೊಂಚೇಲಕಿ । ಭಾವಕಿ ಭ್ರಮರಾಳಕಿ ॥ ಪಲ್ಲವಿ ॥

ಕ್ಷೀರಾಬ್ಧಿಮಥನದಲಿ । ಸಂಭವಿಸಿತೀ । ಭೂರುಹ ಪೂರ್ವದಲ್ಲಿ ॥
ನಾರಿ ನಾ ನಿನಗಂದು । ತೋರುವೆನೆಂದೆಂದ । ಚಾರುಪುಷ್ಪಗಳುಳ್ಳ ।
ಪಾರಿಜಾತವು ಕಾಣೆ ॥ ಭಾವಕಿ ॥೨೮೧॥

ಮುನಿಯೊಂದು ಕುಸುಮವನು । ತಂದೀಯೆ ರು । ಗ್ಮಿಣಿಗಾದ ಭಾಗ್ಯವೇನು ॥
ಘನವಾದ ವೃಕ್ಷದ । ಶ್ಘನವಾದುದೆಲೆ ನಾರಿ ।
ನಿನಗಿನ್ನು ಸರಿ ಯಾರೆ । ವನಧಿಗಂಭೀರೆ ॥ ಭಾವಕಿ ॥೨೮೨॥

ತಡವನು ಮಾಡದೀಗ । ಸುಮಗಳನ್ನು । ಮುಡಿ ನೀರೆ ಪೋಪ ಬೇಗ ॥
ಪೊಡವಿಯೊಳಿದೆ ಕಾರ್ಯ । ನಡಿವವಸರವೆನ್ನ ।
ಮಡದಿ ರನ್ನಳೆ ಬಾರೆ । ಕಡೆಗೆ ನಾನದ ಪೇಳ್ವೆ ॥ ಭಾವಕಿ ॥೨೮೩॥

**ರಾಗ ಸಾಂಗತ್ಯ ರೂಪಕತಾಳ**

ಸುರವೃಂದನುತ ನಿನ್ನ ಕರುಣದಿ ಕಂಡೆನು ।
ಸುರಲೋಕವನದ ಈ ದ್ರುಮವ ॥
ಕರುಣವುಳ್ಳಡೆ ಲಾಲಿಸಿನ್ನೊಂದು ಬಿನ್ನಹ ।
ಕರುಣಾಸಾಗರನೆ ಪ್ರೇಮದಲಿ ॥೨೮೪॥

ಕಂಡೆನ್ನ ಮನವಿಲ್ಲಿ ನೆಲಸಿಕೊಂಡಿದೆ ದೇವ ।
ಪುಂಡರೀಕಾಕ್ಷನೆ ಸತತ ॥
ಕಂಡು ಜೀವಿಸುವಂತೆ ಕರುಣಿಸೀ ವೃಕ್ಷವ ।
ಕೊಂಡು ಪೋಗುವ ನಮ್ಮ ಪುರಕೆ ॥೨೮೫॥

**ರಾಗ ಶಂಕರಾಭರಣ ಅಷ್ಟತಾಳ**

ಬೇಡವೆ । ವೃಕ್ಷದ ತಳ್ಳಿ । ಬೇಡವೆ ॥ ಪಲ್ಲವಿ ॥

ಬೇಡವೆ ನೀನೆನ್ನ । ಕೂಡೆ ಸಲ್ಲದ ಮಾತ ।
ನಾಡುವದೊಳ್ಳಿತೆ । ಪ್ರೌಢೆ ಕೇಳಿ ಬುದ್ಧಿ ॥ ಬೇಡವೆ ॥ ಅ ॥
ಪರರ ವಸ್ತುವಿನಲ್ಲಿ ಮನವ । ಮಾಡೆ ।
ತರವಲ್ಲ ಮುಡಿ ಪುಷ್ಪಚಯವ । ಕಲ್ಪ ।
ತರುವ ಕದ್ದೊಯ್ದು ಜೀವಿಸುವ । ದಾವ ।
ಪರಿಯೊ ನಾನರಿಯೆ ನಿ । ರ್ಜರರು ಕಂಡರೆ ಸುಮ್ಮ ।
ನಿರರೀಗಲೆನಗೆ ತ । ಸ್ಕರವನ್ನು ಬೋಧಿಸ ॥ ಬೇಡವೆ ॥೨೮೬॥

ಕಾವಲ ಚರರು ಸೈರಿಸರು । ನಮ್ಮ ।
ಜೀವಿಸಿ ಪೋಗಲು ಬಿಡರು । ಬಂದು ।
ದೇವರ್ಕಳೆಲ್ಲ ಮುತ್ತುವರು । ಮುಂದೆ ।
ಕಾವವರುಂಟೆ ಇ । ದಾವ ನೀತಿಯೆ ಸತ್ಯ ।
ಭಾವೆ ನಿನ್ನಿಂದ ಸಂ । ಭಾವಿಪುದಪ ಕೀರ್ತಿ ॥ ಬೇಡವೆ ॥೨೮೭॥

**ಕಂದ**

ಆಳ್ದನ ಕಪಟದ ನುಡಿಯಂ ।
ಕೇಳ್ದಾಗಲೆ ಸತ್ಯಭಾಮೆ ಘನಚಿಂತೆಯುಮಂ ॥
ತಾಳ್ದುರುತರ ದುಃಖದೊಳಂ ।
ಪೇಳ್ದಳ್ ಕುಜಕಾಂಕ್ಷೆಯಿಂದ ನಿಜಪತಿಯೊಡನಂ ॥೨೮೮॥

**ರಾಗ ಕಾಂಭೋಜಿ ಝಂಪೆತಾಳ**

ವಾರಿಜದಳಾಕ್ಷ ನೀನಾರೊಡನೆ ಭೀತಿಯನು ।
ತೋರಿ ನುಡಿದಪೆ ದೇವ ನಿನ್ನ ।
ಚಾರುತರ ಮಹಿಮೆಗಳ ನಾನರಿಯೆನೆಲೆ ಜಗ ।
ತ್ಕಾರಣನೆ ಕೇಳು ಬಿನ್ನಪವ ॥೨೮೯॥

ಸುರಪನಾಲಯಕೆ ಪೋಗಿರಲಾತನರಸಿಯುಪ ।
ಚರಿಸದೆನ್ನನು ನುಡಿಸದಿಂದು ॥
ಮರೆತಳವಳೀ ಕಲ್ಪತರುವಿನಾಶ್ರಯದಿಂದ ।
ನರರೆಂದು ನೆರೆ ಗರ್ವತನದಿ ॥೨೯೦॥

ಈ ತರುವ ಕೊಂಡೊಯ್ದರಾ ತರುಣಿಯೈಶ್ವರ್ಯ ।
ಬೀತುಪೋಪುದು ಸಿದ್ಧವೈಸೆ ॥
ಭೂತಳದೊಳನುಮಪಖ್ಯಾತ ನಾನಹೆಯೆನ್ನ ।
ಮಾತ ಮನ್ನಿಪುದೆಂದಳಾಗ ॥೨೯೧॥

**ರಾಗ ಭೈರವಿ ಝಂಪೆತಾಳ**

ಇಂತೆನಲು ಕೇಳಿ ದನು । ಜಾಂತಕನು ನಸುನಗುತ ।
ಕಾಂತೆಯನು ಮನ್ನಿಸಿದ । ಸಂತಸದೊಳಾಗ ॥೨೯೨॥

ಮುಂಜೆರಗನಳವಡಿಸಿ । ರಂಜಿಸುವ ತರುವ ಕರ ।
ಕಂಜದಲಿ ಕಿತ್ತನು ಧ । ನಂಜಯನ ಸಖನು ॥೨೯೩॥

ಗರುಡ ನುರುಕಂಧರದೊ । ಳೇರಿಸಿ ಸತಿಸಹಿತೇರಿ ।
ಪೊರಟನುಪವನದಿಂದ । ಸರಿಸಿ ಜಾಂಬಕನು ॥೨೯೪॥

ವನಪಾಲಕರು ಕಂಡು । ಕನಲಿ ತಡೆದರು ಕಳ್ಳ ।
ತನವೆ ನಮ್ಮೊಡನೆ ನಿ । ಲ್ಲೆನುತ ಗರ್ಜಿಸುತ ॥೨೯೫॥

ಮತ್ತೆ ಕೆಲಬರು ಭೀತಿ । ವೆತ್ತುಬಂದಾಳ್ದನಿಗೆ ।
ಬಿತ್ತರಿಸಿದರು ನಡೆದ । ವೃತ್ತಾಂತಗಳನು ॥೧೯೬॥

**ರಾಗ ಮುಖಾರಿ ಏಕತಾಳ**

ಸುರನಾಥ ಕೇಳಯ್ಯ ಬಿನ್ನಪವ । ಸರಸಿಜಾಕ್ಷನು ಬಂದು
ತರುವ ಕೊಂಡೊಯ್ವನೀಗ ದೇವ ॥ ಸುರ ॥ ಪಲ್ಲವಿ ॥

ನಾರಿಸಹಿತ ಬಂದು ವನವ । ನೋಡುವೆನೆಂದು । ಪಾರಿಜಾತದ ಭೂರುಹವ ॥
ನಾರಿ ಸುದತಿಗಿದ । ತೋರಿ ತವಕದೊಳು ।
ಬೇರುವೆರಸಿ ಕಿ । ತ್ತೇರಿಸಿ ಗರುಡನ ।
ದ್ವಾರದಿ ತಡೆಯೆ ನಿ । ವಾರಿಸುತೆಮ್ಮನು ।
ಮೀರಿ ನಡೆದನು ವಿ । ಚಾರಿಸು ಬೇಗ ॥ ಸುರ ॥೧೯೭॥

**ಕಂದ**

ಚರರೆಂದುದನಾಲಿಸಿ ನಿ ।
ರ್ಜರನಾಥಂ ಬೆರಗುವಟ್ಟು ಕಾಂತೆಯ ಮೊಗಮಂ ॥
ಪರಿಕಿಸಲಾ ಕ್ಷಣ ತಿಳಿದದ ।
ರಿರಮಂ ಶಚಿ ಕಾಂತನೊಡನೆ ದುಗುಡದೊಳೆಂದಳ್ ॥೧೯೮॥

**ರಾಗ ಪೂರ್ವಿ ಅಷ್ಟತಾಳ**
ಪರರು ಬಂದು ವನವ ಪೊಕ್ಕು ತರುವನೊಯ್ವುದು । ಕೇಳು ।
ತರುವೆ ಪ್ರಾಣಕಾಂತ ಸುಮ್ಮನಿರಲು ಸಲ್ಲದು ॥
ಸುರರ ಸರ್ವಭಿಷ್ಟವಾದ ಚೆಲ್ವತರುವಿದು । ನಾವು ।
ಬರಿದೆ ಜೀವಿಸುವುದು ಹ್ಯಾಗೆ ನೀತಿಯಲ್ಲಿದು ॥೧೯೯॥

ಕುಂಡಲಗಳ ತಾನೆ ಕೊಡುವೆನೆಂಬ ನೆವದೊಳು । ಬಂದು ।
ಕಂಡು ನಮ್ಮ ಸತ್ಕರವ ವಹಿಸಿ ಭರದೊಳು ॥
ಪುಂಡರಂತೆ ಕಳ್ಳತನದಿ ದಿವ್ಯವಸ್ತುವ । ಈಗ ।
ಕೊಂಡುಪೋಗಬಹುದೆ ವಿಶ್ವಪಾಲನಾದವ ॥೨೦೦॥

ನಾಕಿಗಳಿಗೆ ಯೋಗ್ಯವಾದ ವಸ್ತುವ ನಾರಿ । ತಾನು ।
ಬೇಕೆಂದರೆ ಬುದ್ಧಿಯನ್ನು ಪೇಳದೆ ಶೌರಿ ॥
ಈ ಕಲ್ಪತರುವನಿಂದು ನಿಮ್ಮ ಕೇಳದೆ । ಮರ್ತ್ಯ ।
ಲೋಕದವರಿಗೀಯಬಹುದೆ ನೀತಿಯಲ್ಲದೆ ॥೨೦೧॥

ತರಿಸದುಳಿಯದಪಕೀರ್ತಿಯು ಬಾರದಿರ್ಪುದೆ । ಕಾಲ ।
ಹರಣ ಮಾಡಲೆಮಗೆ ವಸ್ತು ಸಾಧ್ಯವಾಹುದೆ ॥
ಅರಸ ನೀನು ತಿಳಿಯದವನೆ ಪೇಳ್ವುದೇನದೆ । ಎಂದು ।
ಸರಸಿಜಾಕ್ಷಿ ನುಡಿದಳಾಗ ಮೇಲನರಿಯದೆ ॥೩೦೨॥

**ಭಾಮಿನಿ**

ಕೇಳುತಲೆ ಸುರನಾಥನೆದ್ದನು ।
ಕಾಲಭೈರವನಂತೆ ನಿರ್ಜರ ।
ಜಾಲ ಬೆದರಲು ಬಿಂಕದಲಿ ಗದ್ದುಗೆಯನೊಡಹೊಯ್ದು ॥
ನೀಲಕಾಯನ ಸಂಗರಕೆ ದಿ ।
ಕ್ಪಾಲಕರ ಬರಹೇಳು ಹೇಳೆನು ।
ತಾಲಯವ ಹೊರವಂಟನಧಿಕ ಕ್ರೋಧಮುಖನಾಗಿ ॥೩೦೩॥

**ರಾಗ ಭೈರವಿ ಏಕತಾಳ**

ಬಂದರೆಲ್ಲರು । ರೋಷದಿ ನಡೆ । ತಂದರೆಲ್ಲರು ॥ ಪಲ್ಲವಿ ॥

ವಾರಣೇಂದ್ರನ ಭರದೊಳಿಂದ್ರ । ನೇರಿ ಕೃಷ್ಣನ ॥
ತೋರೆನುತ್ತ ಬರಲು ಕೂಡೆ । ಶೂರರೆಲ್ಲ ನಡೆದರು ॥
ನೈಋತಾಗ್ನಿ ವಾಯು ಯಮ ಕು । ಬೇರ ಶೂಲಿ ವರುಣರು ॥
ಭೂರಿ ಸೈನ್ಯವಾರಿಧಿಯು । ಭೋರನಿದಿರು ನಿಂದರು ।
ಪಾರಿಜಾತಾಪಹಾರನ । ಸಾರಿ ಮುತ್ತಿಕೊಂಡರು ॥ ಬಂದರೆಲ್ಲರು ॥೩೦೪॥

**ಕಂದ**

ಸುತ್ತಲು ಮುತ್ತಿದ ದಿವಿಜರ ।
ಮೊತ್ತಗಳಂ ಕಂಡು ಮಾರನಯ್ಯನು ನಗುತಂ ॥
ಚಿತ್ತದ ಬಗೆಯನು ತಿಳಿವೆನೆ ।
ನುತ್ತಂ ಮಿಗೆ ಸತ್ಯಭಾಮೆಯೊಡನಿಂತೆಂದಂ ॥೩೦೫॥

**ರಾಗ ಕಾಪಿ ಏಕತಾಳ**

ನಾರಿಮುಂದೇನು ದಾರಿ । ಕೆಟ್ಟಿತು ಕಾರ್ಯ ।
ನಾರಿ ಮುಂದೇನು ದಾರಿ ॥ಪ॥

ಮೊದಲೆ ನಾ ಪೇಳಲಿಲ್ಲವೆ । ಬಂದಿದೆ ನೋಡು ।
ತ್ರಿದಶದ ಸೇನೆ ಭಾವೆ ॥

ಕದನವೆನ್ನಲಿ ತೀರ । ದಿದಕೇನ ಕಂಡೆ ನೀ ।
ಹದನವನಂಬುಜ । ವದನೆ ಕುಂದರದನೆ ನಾರಿ ॥೩೦೬॥

**ರಾಗ ಪಂಚಾಗತಿ ಮಟ್ಟೆತಾಳ**

ತರುಣಿಗಿಂತು ಹರಿಯು ಪೇಳು । ತಿರಲು ಮುತ್ತಿಕೊಂಡರಾಗ ।
ಸುರರುರೋಷವೆತ್ತು ಸಪ್ತ । ಶರಧಿಯಂದದಿ ॥
ಕರೆದರೆಲವೊ ಕೃಷ್ಣ ನಿನಗೆ । ತರವೆ ಚೋರವೃತ್ತಿ ಕಲ್ಪ ।
ತರುವನಿರಿಸಿ ನಿಲ್ಲೆನುತ್ತ । ಜರೆದು ನುಡಿದರು ॥೩೦೭॥

ಘನ ತುರಂಗನಾಳ್ಗಳೆಂದ । ಬಿನುಗು ನುಡಿಯ ಕೇಳುತಬಲೆ ।
ಮನದಿ ಬೆದರದಸುರಹರಗೆ । ಮಣಿದು ಪೇಳ್ದಳು ॥
ವನಜನಾಭ ನೋಡು ನಿನ್ನ । ವನಿತೆಯ ಸಹಸಗಳನು ।
ಎನುತಲೆದ್ದು ದಿವ್ಯಶಾರ್ಙ್ಗ । ಧನುವ ಗೊಂಡಳು ॥೩೦೮॥

ಬಿಸರುಹಾಕ್ಷಿ ನಗುತಲೊಂದು । ವಿಶಿಖದಿಂದಲೆಸೆಯಲಮರ ।
ವಿಸರ ಬೆದರೆ ಕಂಡು ಭರದಿ । ತಿಸುಳಿಗೆಳೆಯನು ॥
ಮಿಸುನಿ ರಥವನೇರಿ ರೌದ್ರ । ರಸದಿ ಭುಜವನೊದಿರುಸುತ್ತ ।
ಮುಸುಡೊಳುರಿಯ ಕೆದರಿ ಮೂದ । ಲಿಸಿದ ನಾ ಕ್ಷಣ ॥೩೦೯॥

ಬಾಲೆ ನಿನಗೆ ಯುದ್ಧವೇಕೆ । ಕೋಲ ಬಿಸುಡು ಬಿಸುಡು ನಿನ್ನ ।
ಆಳಿದವಗೆ ಕೊಡು ಕೊಡೆಂದು । ಖೂಳತನದಲಿ ॥
ಆಳು ಮಾತ್ರವೆನಿಪ ಧನುವ । ಮೇಳವಿಸಿ ಮಹಾಸ್ತ್ರದಿಂದ ।
ಬೀಳೆನುತ್ತಲೆಸೆಯಲಸ್ತ್ರ । ಜಾಲ ಕವಿದುದು ॥೩೧೦॥

ಆ ಧನೇಶನಸ್ತ್ರಗಳನು । ಭೇದಗೆಯ್ದು ನುಡಿದಳಾಗ ।
ವಾದಗುಟ್ಟಲೇಕೆ ಬರಿದೆ । ಕಾದು ಸಮರದಿ ॥
ಪಾದಪವನು ಕೊಡೆನು ಬಾಲೆ । ಯಾದಡೇನು ನೋಡೆನುತ್ತ ।
ಕ್ರೋಧದಿಂದ ಧನುವ ಕಡೆದ । ಳೈದು ಶರದಲಿ ॥೩೧೧॥

ಕರದ ಬಿಲ್ಲು ಮುರಿಯೆ ಧನದ । ಕೆರಳಿ ಮುದ್ಗರವನು ಪಿಡಿದು ।
ತರುಣಿ ಕೇಳು ನಿನ್ನ ಹಣೆಯ । ಬರಹವಿದಿರಲಿ ॥
ಸರಿವೆನೆನುತಲಿಡಲು ಕಂಡು । ಸರಸಿಜಾಕ್ಷಿ ನಗುತ ವಾಮ ।
ಕರದಿ ಪಿಡಿಯಲದನು ತನ್ನ । ಪುರಕೆ ಗಮಿಸಿದ ॥೩೧೨॥

**ಭಾಮಿನಿ**

ಧನದ ನಿಜಪುರಿಗಯ್ದಲಿತ್ತಲು |
ವನಜದಳಲೋಚನನು ಭಾಮಾ |
ವನಿತೆಯನು ಬಿಗಿದಪ್ಪಿ ಪೊಗಳುತ್ತಿರಲು ಜಲಧಿಪನು ||
ಘನಮದೋದ್ರೇಕದಲಿ ನರವಾ |
ಹನನ ವಾಸಿಯು ತನ್ನದೆನುತಲಿ |
ದನುಜಹರನಭಿಮುಖಕೆ ನಡೆದನು ಬಹಳ ಬಲಸಹಿತ ||೩೧೩||

**ರಾಗ ದೇಶಿ ಮಟ್ಟೆತಾಳ**

ಬಂದು ವರುಣನು | ನಿಂದು ಹರಿಯನು ||
ನಂದತನಯ ಪೋಗಬೇಡ | ವೆಂದು ತಡೆದನು ||೩೧೪||

ಕೇಳಿ ಗರುಡನು | ತಾಳಿ ಖತಿಯನು ||
ಖೂಳ ನಿಲ್ಲೆನುತ್ತಲವನ | ಮೇಲೆ ಬಿದ್ದನು ||೩೧೫||

ರೋಷದಿಂದಲಿ | ಪಾಶಿ ಭರದಲ್ಲಿ ||
ಪಾಶವನ್ನು ಬೀಸೆ ಸೆಳೆದ | ನಾ ಸುಪರ್ಣನು ||೩೧೬||

ಜಡಧಿನಾಥನು | ಕಡುಗಿ ಹರಿಯನು ||
ಹೊಡೆದು ಭುಜವ ತಡೆದು ನಿಲಲು | ಬಿಡದೆ ಗರುಡನು ||೩೧೭||

ಕೆರಳಿ ನಖದೊಳು | ಉರವ ತಿವಿಯಲು ||
ಕರುಳು ಸುರಿವು ತಿರಲು ಮರಳಿ | ಸರಿದ ಶರಧಿಗೆ ||೩೧೮||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ವರುಣ ತನ್ನಾಲಯಕಯ್ದಲು | ಮತ್ತೆ |
ಮರುತ ಪಾವಕರೊಂದು ಮತದೊಳು ||
ತರುಬಿ ದಿವ್ಯಾಸ್ತ್ರಗಳೆಸೆಯಲು | ಕಂ |
ದುರಗಾರಿವಾಹನ ಕ್ಷಣದೊಳು ||೩೧೯||

ಕಂಗಾಣದ್ಯಾತಕೆ ಬಂದಿರಿ | ಸಮ |
ರಾಂಗಣದಲಿ ನೀವು ನೊಂದಿರಿ ||
ಹಿಂಗದೆಮ್ಮೊಳು ನಿಲ್ಲೆನುತ್ತಲಿ | ದಿವ್ಯ |
ಶಾರ್ಙ್ಗವ ಪಿಡಿದನು ನಗುತಲಿ ||೩೨೦||

ಕೋಲೊಂದರಿಂದ ಪಾವಕನನು | ಮ |
ತ್ತೇಳು ಬಾಣದಲಿ ಮಾರುತನನು ||

ಕೀಲಿಸೆ ಭೀತಿಯಿಂದವರಾಗ । ತಮ್ಮ ।
ಪಾಳೆಯ ಸಹಿತ ಸಾಗಿದರಾಗ ॥೩೨೧॥

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಬಂದನಂದು ಮಂದಮತಿಯಲಿ । ಸಮರದೆಡೆಗೆ ।
ಬಂದನಂದು ಮಂದಮತಿಯಲಿ ॥ ॥ಪ॥

ಚಂಡ ಮಹಿಷವೇರಿ ಮಾ । ರ್ತಂಡಸುತನು ಕಂಗಳಲ್ಲಿ ।
ಕೆಂಡಗೆದರಿ ಗೆದರಿ ಮಕಲ । ಜಾಂಡ ನಡುಗಲೊಡನೆ ತನ್ನ ।
ದಂಡು ಸಹಿತಲಿದರು ಬಂದನು । ನಿಲ್ಲು ನಿಲ್ಲು ।
ಗಂಡುಸಾದಡನ್ನೊಳೆಂದನು । ಭುಜವ ಹೊಯ್ದು
ದಂಡದಿಂದಲಿಟ್ಟು ಕೋಪ ।
ಗೊಂಡು ನಡೆದು ನಡೆದು ತಾನು ॥ ಬಂದ ॥೩೨೨॥

ಎಲವೊ ದಂಡಧರನೆ ಬರಿದೆ । ಬಳಲತೇಕೆಮ್ಮ ಕೊಡೆ ।
ಕಲಹಬೇಡ ಪೋಗು ನಿನ್ನ । ನಿಳಯಕೆನುತಲಸುರಹರನು ।
ತಳೆದು ಗದೆಯ ಭಾರಿದಂಡವ । ಹೊಡೆಯೆ ಭೀತಿ ।
ತಳೆದು ಸೇರ್ದ ತನ್ನ ನಗರವ । ಕಂಡು ನಿಖುತಿ ।
ನಿಲಲಸಾಧ್ಯವೆಂದು ತನ್ನ ।
ನೆಲೆಯ ಸಾರ್ದ ಭಯದೊಳಂದು ॥ ಬಂದ ॥೩೨೩॥

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಮನುಜ ಕೇಳು ನಿನ್ನ ತೆರದಿ ಧುರದೊಳು ।
ಲಲನೆಯಿಂದ ಜೀವಿಸುವರ ಕಾಣೆ ಜಗದೊಳು ॥
ಸಲೆ ಸಮರ್ಥನಹುದು ನಿಲ್ಲು ನಿಲ್ಲು ಸಮರದಿ ।
ಬಲಿಯ ಕೊಡುವೆ ಭೂತಗಣಕೆ ನಿಮಿಷಮಾತ್ರದಿ ॥೨೧೬॥

ಬರಿದೆ ಬಿಡೆನೆನುತ್ತ ಖಳನು ತಿರುಹಿ ಗದೆಯನು ।
ಭರದೊಳಿಡಲು ಶರದೊಳದನು ಕಡಿದ ಕೃಷ್ಣನು ॥
ಸುರಮಹಾದ್ರಿಯಂತೆ ಬರುವ ಸ್ಥೂಲಗಜವನು ।
ಶಿರದೊಳೆಚ್ಚ ನೋಯಿಸಲ್ಕೆ ಕಂಡು ನರಕನು ॥೨೧೭॥

ಫಡ ಫಡೆನುತ ಪರಶು ಶೂಲ ಭಿಂಡಿವಾಳದಿ ।
ಹೊಡೆವುರಲು ಸವರುತಿರ್ದ ಹರಿಯು ಖಡುಗದಿ ॥
ತಡವಿದೇತಕೆನುವ ಸುರರು ನುತಿಸೆ ನಗುತಲಿ ।
ಕಡಿದ ಚಕ್ರದಿಂದ ಖಳನ ಶಿರವ ಭರದಲಿ ॥೨೧೮॥

ದುರುಳ ಖಳನ ಶಿರವು ಧರೆಗೆ ಭೀಳಮರರು ।
ಹರುಷದಿಂದ ಹರಿಯ ಮೇಲೆ ಸುಮವ ಸುರಿದರು ॥
ಸೆರೆಯು ಬಿಟ್ಟಿತೆನುತ ಸುರಪ ಮುಖ್ಯದಿವಿಜರು ।
ಭರದಿ ಬಂದು ನುತಿಸಿ ಶ್ರೀವರಗೆ ಮಣಿದರು ॥೨೧೯॥

**ಭಾಮಿನಿ**

ಜನಪ ಕೇಳಮರೇಂದ್ರ ಮೊದಲಾ ।
ದನಿಮಿಷರು ಸಹಿತಬುಜನೇತ್ರನು ।
ದನುಜನಗರವ ಪೊಕ್ಕು ತತ್ಪುರಜನರ ಸಂತವಿಸಿ ॥
ವಿನಯದಲಿ ಮಂದಿರಕೆ ನಡೆತರ ।
ಲನಿತರೊಳು ನಿಜಪೌತ್ರನನು ಭೂ ।
ವನಿತೆ ತಂದಡಗೆಡಹಿ ಮಣಿದಳು ಹರಿಪದಾಂಬುಜಕೆ ॥೨೨೦॥

**ಕಂದ**

ವಿಲಸಿತದ ಕುಂಡಲಂಗಳಂ ।
ಬಲು ಶೋಭಿಪ ವೈಜಯಂತಿಮಾಲೆಯನಾಗಂ ॥
ಜಲರುಹನೇತ್ರಂಗೀವುತೆ ।
ಸಲಹೆನುತಲಿ ಬೇಡಿಕೊಂಡಳತಿಭಕ್ತಿಯೊಳಂ ॥೨೨೧॥

**ರಾಗ ಘಂಟಾರವ ಆದಿತಾಳ**

ಲಾಲಿಸು ಬಿನ್ನಪವ । ಈ ಸೂನುವ । ಪಾಲಿಪುದೆಲೊ ದೇವ ॥
ಪೇಳಲಿನ್ನೇನಬಲನ ತಪ್ಪೊಪ್ಪ । ತಾಳಿಕೊಳ್ಳದೆ ಕೊಂದೆಯ ॥ ಸುಪ್ರೀಯ ॥೨೨೨॥

ನಿನ್ನ ಪುತ್ರನನು ನೀನೆ । ಕೊಂದರೆ ಕಾವ । ರಿನ್ನುಂಟೆ ಮಾಧವನೆ ॥
ತನ್ನ ಬುದ್ಧಿಗಳಿಂದ ತಾನೆ ಪೋದನು ಸುಪ್ರ । ಸನ್ನ ನೀ ದಯವ ತೋರಿ । ಹೇ ಶೌರಿ ॥೨೨೩॥

ಧ್ರುವನನು ಸಲಹಿದಂತೆ । ಪ್ರಹ್ಲಾದನ । ಜವದಿಂದ ಕಾಯಿದಂತೆ ॥
ತವ ಪ್ರೀತಿಯಿಂದಲೀ ಕುವರನ ಸಲಹೀಗ । ದಿವಿಜಸನ್ನುತಶೀಲ । ಶ್ರೀಲೋಲ ॥೨೨೪॥

**ಕಂದ**

ಇಂತೆಂದಾ ಧರೆಯಂ ಶ್ರೀ ।
ಕಾಂತನು ಸಂತವಿಡುತಾಗ ಭಗದತ್ತನನುಂ ॥
ಚಿಂತಿಸದಿರು ನೀನೆನುತಂ ।
ಕಾಂತೆಯ ನೆಗಹಿ ಮನ್ನಿಸಿನತಿಯದಿಂದಂ ॥೨೨೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಆಯತಾಂಬಕಿ ಕೇಳು ಮನದಲಿ ।
ನೋಯದಿರು ನಿಜಪೌತ್ರನಿವನು ಮ ।
ದೀಯ ಭಕ್ತನೆನುತ್ತಲೆಂದನು । ತೋಯಜಾಕ್ಷ ॥೨೨೬॥

ದೇವರಿಪುವಿನ ರಾಜ್ಯವನು ಮಿಗೆ ।
ಭೂವಧೂಸುತಸುತನಿಗಿತ್ತನು ।
ತೀವಿದಧಿಕಾನಂದದಿಂದಲಿ । ದೇವನಂದು ॥೨೨೭॥

ಬಳಿಕ ಸುರಪನ ಕರೆದು ಕೊಟ್ಟನು ।
ಲಲಿತ ಮಣಿಶೈಲವನು ವಿನಯದಿ ।
ಜಲಧಿರಾಜಂಗಿತ್ತು ಚಕ್ರವ । ನೊಲವಿನಿಂದ ॥೨೨೮॥

ಸೆರೆಯೊಳಿರುತಿಹ । ದೇವವಧುಗಳ ।
ಕರೆಸಿ ಕಳುಹಿಸಿಕೊಟ್ಟನಾಸುರ ।
ಪುರಕೆ ವೇಗದಿ ಸರಸಿಜಾಕ್ಷನು । ಸುರಪನೊಡನೆ ॥೨೨೯॥

ಅಸುರ ನಿಳೆಯೊಳಗಿರ್ದ ನಾನಾ ।
ವಸುಮತೀಶರ ವಿಮಲ ಕನ್ಯಾ ।
ವಿಸರವನು ದ್ವಾರಕೆಗೆ ಕಳುಹಿದ । ಬಿಸಜನಯನ ॥೨೩೦॥

ಕ್ಷೀರವಾರ್ಧಿಯೊಳೊಗೆದ ಕರಿಗಳ ।
ಚಾರು ಹಯಗಳ ರತ್ನನಿಕರವ ।
ಭೂರಿ ಧನವನು ಕಳುಹಿಸಿದನಾ । ಶೌರಿ ಭರದಿ ॥೨೩೧॥

**ಭಾಮಿನಿ**

ವಸುಮತೀಪಾಲಕನೆ ನೀ ಕೇ ।
ಳಸುರರಿಪು ಭೌಮಜನಿಗತಿ ಸಂ ।
ತಸದಿ ದಿಗ್ಗಜ ಸುಪ್ರತೀಕವನಿತ್ತು ವಿನಯದಲಿ ॥
ವಸುಧೆಯನು ಸಂತಯಿಸಿ ವಹಿಲದಿ ।
ಶಶಿವದನೆ ಸಹಿತಿಂದ್ರನಗರಕೆ ।
ಅಸಮ ಬಲಂಸುತ ಪನ್ನಗಾರಿಯನೇರಿ ನಡೆತಂದ ॥೨೩೨॥

**ದ್ವಿಪದಿ**

ಕುಂಡಲವನದಿತಿದೇವಿಗೆ ಕೊಡುವೆನೆಂದು ।
ಪುಂಡರೀಕಾಕ್ಷಿಯೊಳು ಪೇಳಿ ಮನದಂದು ॥೨೩೩॥

ಬಂದು ತತ್ಪುರದ ಹೊರಬಾಗಿಲೊಳು ನಿಂದು ।
ನಂದಸುತ ಶಂಖವನು ನಾದಿಸಿದನಂದು ॥೨೩೪॥

ಕೇಳುತಲೆ ಸುರನಾಥ ಕಡುತೋಷದಿಂದ ।
ಶ್ರೀಲೋಲನಿದ್ದೆಡೆಗೆ ಸಂಭ್ರಮದಿ ಬಂದ ॥೨೩೫॥

ಕಲಶಗನ್ನಡಿವಿಡಿದ ಕಾಮಿನಿಯರುಗಳ ।
ಲಲಿತ ಶೋಭಾನಂಗಳಲಿ ಸುವಾದ್ಯಗಳ ॥೨೩೬॥

ರಭಸರಮ್ಯದಲಿ ದುಂದುಭಿಯ ನಾದದಲಿ ।
ಅಭಿನಯವ ತೋರುವಪ್ಸರರ ನಾಟ್ಯದಲಿ ॥೨೩೭॥

ಉಚ್ಚೈಶ್ರವಾಶ್ವದಲಿ ಉರುಶುಭ್ರ ಗಜದಿ ।
ಸ್ವಚ್ಛ ಚಾಮರಗಳಲಿ ಸಿತಛತ್ರಯದಿ ॥೨೩೮॥

ದಿಗಧಿಪರನೊಡಗೊಂಡು ದಿವಿಜೇಂದ್ರ ಮುದದಿ ।
ಖಗಗನಮನನಂಘ್ರಿಗಳ ಕಂಡನುತ್ಸಹದಿ ॥೨೩೯॥

**ಕಂದ**

ಶ್ರುತಿಗಳ್ ಕಾಣದ ಪಾದವ ।
ನತಿಶಯದಲಿ ಕಂಡೆನೆಂದು ವಾಸವ ಮುದದಿಂ ॥
ರತಿಪತಿಪಿತಗರ್ಪಿಸುತ ತು ।
ಲಿತವಹ ಕಾಣಿಕೆಯ ಮತ್ತಡಿಗೆ ವಂದಿಸಿದಂ ॥೨೪೦॥

**ರಾಗ ಕೇದಾರಗೌಳ ಅಷ್ಟತಾಳ**

ಚರಣಕ್ಕೆ ಮಣಿದ ಸುತ್ರಾಮನ ಪಿಡಿದೆತ್ತಿ ।
ಕರುಣದಿಂದಲಿ ಕೃಷ್ಣನು ॥
ಭರದಿ ಮಾತಲಿ ತಂದ ರಥವನೇರುತ ಭಾಮಾ ।
ತರುಣಿ ಸಹಿತ ಬಂದನು ॥೨೪೧॥

ಪಾಕಶಾಸನ ಮುಖ್ಯ ದಿವಿಜಸಮ್ಮೇಳದಿ ।
ಲೋಕೇಶನಯ್ತುರಲು ॥
ನಾಕನಾರಿಯರಾರತಿಗಳನೆತ್ತಿದರಂದ ।
ನೇಕ ಸಂಭ್ರಮದಿಂದಲಿ ॥೨೪೨॥

ಆನಂದದಿಂದ ತುಂಬುರ ನಾರದಾದ್ಯರು ।
ಗಾನವ ಪಾಡುತಲಿ ॥

ಶ್ರೀನಾರಿಯರಸನಿಂದ್ರನ ದಿವ್ಯ ಭವನಕ್ಕೆ ।
ಸಾನುರಾಗದಿ ಬಂದನು ॥೨೪೩॥

**ಭಾಮಿನಿ**

ಭೂರಮಣ ಕೇಳಮರನಾಥನು ।
ಭೂರಿಸಂತೋಷದಲಿ ಕೈಗೊಡ ।
ಲಾ ರಥವನಿಳಿದಂಬುಜಾಕ್ಷನು ಕಾಮಿನಿಯು ಸಹಿತ ॥
ಚಾರುತರ ನವರತ್ನ ಪೀಠವ ।
ನೇರಿ ಕುಳ್ಳಿರಲಂದು ತತ್ಪದ ।
ಸಾರಸವನರ್ಚಿಸಿದನಿಂದ್ರನು ಭಾವ ಭಕ್ತಿಯಲಿ ॥೨೪೪॥

**ರಾಗ ಶಂಕರಾಭರಣ ಏಕತಾಳ**

ಸೋಮಸೂರ್ಯಕೋಟಿಭಾಸ । ಕೋಮಲಾಂಗ ನಿನ್ನ ಪಾದ ।
ತಾಮರಸಕೃಪೆಯಿಂ ಸು । ಕ್ಷೇಮವಾದುದು ॥
ಸ್ವಾಮಿದ್ರೋಹಿಯಾದ ದುಷ್ಟ । ಭೌಮ ಮುಂತಾದಸುರರು ನಿ ।
ರ್ನಾಮರಾದರೆಂದನು ಸು । ತ್ರಾಮತೋಷದಿ ॥೨೪೫॥

**ಕಂದ**

ಶಕ್ರಂ ಪೇಳ್ದುದ ಲಾಲಿಸಿ ।
ಚಕ್ರಿಯುಮತಿ ನೀತಿವಾಕ್ಯಮಂ ತಾನು ಸಿರ್ದಂ ॥
ಅಕ್ರಮದೊಳ್ ನಡೆದುದರಿಂ ।
ವಿಕ್ರಮವಳಿದಿಂತು ಕೆಟ್ಟರವರೆನುತಿರ್ದಂ ॥೨೪೬॥

**ರಾಗ ಭೈರವಿ ಝಂಪೆತಾಳ**

ಜನಪ ಕೇಳಸುರಾಂತ । ಕನು ಮಹಿಳೆಯೊಡಗೊಂಡು ।
ವಿನಯದಿಂ ದದಿತಿಯರ । ಮನೆಗೆ ನಡೆತಂದ ॥೨೪೭॥

ಬರವ ಕಾಣುತಲೆದ್ದು । ಸುರಜನನಿ ಹರುಷದಿಂ ।
ದಿರಲು ಮಣಿದನು ನಗುತ । ಸರಸಿಜಾಂಬಕನು ॥೨೪೮॥

ಚರಣಕ್ಕೆ ಮಣಿದ ಸಿರಿ । ಯರಸನನು ಪಿಡಿದೆತ್ತಿ ।
ನೆರೆ ಪರಸಿ ಪೊಗಳಿದಳು । ಗರುಡವಾಹನನ ॥೨೪೯॥

**ವಚನ**

ಆ ಸಮಯದಲ್ಲಿ ಮುರಾಂತಕನು ಸತ್ಯಭಾಮೆಯೊಡನೇನೆಂದನು ಎಂದರೆ -

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮತ್ತಗಜಗಾಮಿನಿಯೆ ಕೇಳ್ ನಿ ।
ನ್ನತ್ತೆಯರಿಗೀ ಕುಂಡಲಂಗಳ ।
ನಿತ್ತು ಪಾದಕ್ಕೆರಗೆನಲು ಕೇ । ಳುತ್ತಲಾಗ ॥೨೫೦॥

ತರುಣಿ ಭಾಮಾದೇವಿಯದಿತಿಯ ।
ಚರಣದಲಿ ಕುಂಡಲಗಳನು ತಂ ।
ದಿರಿಸಿ ನಮಿಸಲು ದಿವಿಜ ಜನನಿಯು । ಹರುಷದಿಂದ ॥೨೫೧॥

ತಾಯೆ ಬಾರೆನ್ನವ್ವ ಕಮಲದ ।
ಳಾಯತಾಕ್ಷನ ಪಟ್ಟದರಸಿಯೆ ।
ಬಾಯೆನುತ್ತಪ್ಪಿದಳು ಕಾಶ್ಯಪ । ಜಾಯೆಯಂದು ॥ ॥೨೫೨॥

ಬಳಿಕ ಮಣಿಕುಂಡಲಗಳನು ಕಿವಿ ।
ಗಳಿಗೆ ತೊಡಿಸಲು ಸತ್ಯಭಾಮೆಯ ।
ನಲವಿನಿಂ ಪರಸುತ್ತಲೆಂದಳು । ಗೆಲುವಿನಿಂದ ॥೨೫೩॥

ಜಲಜಮುಖಿ ವೈರೂಪ್ಯ ನಿಜಕಾ ।
ದಲನಲಪ್ರಿಯ ಜಾಡ್ಯ ಜರೆ ನರೆ ।
ಗಳು ನಿನಗೆ ಸಂಭವಿಸದೆಂದಳು । ಸುಲಲಿತಾಂಗಿ ॥೨೫೪॥

**ವಚನ**

ಇಂತು ಉಪಚರಿಸಿ ಮತ್ತೂ ಉಪಚರಿಸಿದಳದೆಂತೆನೆ -

**ರಾಗ ಶಂಕರಾಭರಣ ಝಂಪೆತಾಳ**

ಅದಿತಿ ಅಯಧಿಕ ಸ್ನೇಹಭಾವದಿಂದ ।
ಪದುಮನಾಭನ ಸತಿಯ ಮನ್ನಿಸಿದಳಂದು ॥ ಅದಿತಿ ॥ಪ॥

ಚಾರುತರ ದಿವ್ಯ ಪುಷ್ಪಗಳ ಮುಡಿಸಿದಳೊಲಿದ ।
ನಾರತವು ಕಂದದಿರಲೆಂದೆನುತಲಿ ॥
ಕಾರುಣ್ಯದಿಂದ ಗಂಧಾನುಲೇಪಂಗಳಲಿ ।
ಸೌರಭ್ಯವಡಗದಿರಲೆನುತ ಪೂಸಿದಳು ॥ ಅದಿತಿ ॥೨೫೫॥

ಮಾಸದಿರಲೆನುತ ದಿವ್ಯಾಂಬರವನುಡಿಸಿದಳು ।
ಭೂಷಣಗಳನಧಿಕ ತರಿಸಿ ತೊಡಿಸಿ ॥
ಸೇಸೆಯನು ತಳಿದು ಮಿಗೆ ಪರಸಿದಳು ಪರಮಸಂ ।
ತೋಷದಿಂದಲಿ ಜಗದಿ ಬಾಳು ನೀನೆಂದು ॥ ಅದಿತಿ ॥೧೫೬॥

**ಕಂದ**

ಅದಿತಿಯು ಸತ್ಯಾಂಗನೆಗಂ ।
ಮುದದಿಂದೊಲಿದಿತ್ತು ನಿಖಿಳಸದ್ವಸ್ತುಗಳಂ ॥
ಮಧುಸೂದನನಂ ನೋಡುತ ।
ಮಧಿಕ ಪ್ರೇಮಾಶ್ರುನೇತ್ರದಿಂದೊಲಿದೆಂದಳ್ ॥೧೫೭॥

**ಭಾಮಿನಿ**

ಪನ್ನಗಾಧಿಶಯನ ಸುರನರ ।
ಸನ್ನುತನೆ ಕರುಣದಲಿ ಸಲಹಿದೆ ।
ಮುನ್ನೆನಗೆ ಮಗನಾಗಿ ಮತ್ತೆಯು ಜಗಕೆ ನೀನೊಲಿದು ॥
ಬನ್ನ ಬಡಿಸಿದ ಖಳನ ಮಡುಹಿದೆ ।
ನಿನ್ನ ಕೃಪೆಯಿಂದಾದುದೈ ಸಲೆ ।
ಜನ್ನ ಗೂಳರ್ಕಳಿಗೆ ನಿರ್ಭಯವೆಂದಳಬುಜಾಕ್ಷಿ ॥೧೫೮॥

**ರಾಗ ಮೋಹನ ಅಷ್ಟತಾಳ**

ಇಂತೆಂದ ಜನನಿಯನು । ಬೀಳ್ಕೊಂಡಾಗ ।
ಸಂತಯ್ಸಿ ದಿವಿಜರನು ।
ಕಾಂತೆ ಭಾಮೆಯು ಸಹಿತ । ಶ್ರೀಕಾಂತನು ।
ಸಂತೋಷದಲಿ ನಗುತ ॥ ॥೧೫೯॥

ಗರುಡನ ಹೆಗಲನೇರಿ । ವಯ್ಯಾರದಿ ।
ಹೊರವಂಟ ಪುರವ ಶೌರಿ ॥
ಬರಲು ನಂದನವನವ । ಕಾಣುತ ಭಾಮಾ ।
ತರುಣಿ ತತ್ಸಂಭ್ರಮವ ॥೧೬೦॥

ಬೆಳದಿಂಗಳೆಸುವುತಿರೆ । ರಾಜಿಪ ಮಂದಾ ।
ನಿಲ ತಾನು ಸುಳಿವುತಿರೆ ॥
ಅಳಿವಿಂಡು ಝೇಂಕರಿಸೆ । ಪುಷ್ಪಗಳ ಸಂ ।
ಕುಲ ಗಂಧವಾವರಿಸೆ ॥೧೬೧॥

ಋತುವಾರು ಸಂಭ್ರಮಿಸಿ । ಕೋಗಿಲೆವಿಂಡ ।
ನತಿಶಯದೊಳು ಕೂಗಿಸಿ ॥
ಸಿತ ಕಂಠಗಳ ನರ್ತಿಸಿ । ಸೋಕಿನ ಕೀರ ।
ತತಿಗಳ ಮಾತಾಡಿಸಿ ॥೨೬೨॥

ಸ್ಫುರಿತ ಪುಷ್ಪಂಗಳಿಂದ । ರಾಜಿಪ ದಿವ್ಯ ।
ತರು ಗುಲ್ಮ ಲತೆಗಳಿಂದ ॥
ಮೆರವುತಲಿರೆ ಕಂಡಳು । ವಿಸ್ಮಿತಳಾಗಿ ।
ಹರಿಗೆ ಬಿನ್ನೈಸಿದಳು ॥೨೬೩॥

**ಕಂದ**

ಪಗಲ್ ಬೆಳದಿಂಗಳಂದದಿ ।
ಸೊಗಯಿಸಿ ಷಡೃತುಗಳೇಕಕಾಲದೊಳಿಹುದಂ ॥
ಜಗದೊಳ್ ಕೆಳಿದುದಿಲ್ಲೆಲೆ ।
ನಗಧರ ನೀನೆನಗೆ ಪೇಳು ವನದಾ ಹೃಯಮಂ ॥೨೬೪॥

**ರಾಗ ಬೇಗಡೆ ಮಿಶ್ರ ಆದಿತಾಳ**

ಭಾವಕಿ ರನ್ನೆ ಕೇಳೀ ದಿವ್ಯವನವು । ದೇವೇಂದ್ರನುದ್ಯಾನವೆಂಬ ನಂದನವು ॥ ಪಲ್ಲವಿ ॥
ಸಂತತಮೀ ರೀತಿಯಲಿ ತೋರುತ್ತಿಹುದು ।
ಸಂತೋಷಕರಮಾಗಿ ಸಲೆ ರಂಜಿಸುವುದು ॥
ಚಿಂತಿತಾರ್ಥಂಗಳನೀವುತ್ತಲಿಹುದು ।
ದಂತೀಂದ್ರಯಾನಗೆ ಯೋಗ್ಯವಾಗಿಹುದು ॥ ಭಾವಕಿ ॥೨೬೫॥

**ರಾಗ ಜಂಗಲ್ ಏಕತಾಳ**

ಮಂದರಧರ ಸುರವೃಂದವಿನುತ ಗೋ ।
ವಿಂದನೆ ಮಾಧವನೆ ॥
ಇಂದೆನ ಗತಿ ದಯದಿಂದಲಿ ತೋರಿಸು
ನಂದನವೆನಿಪುದನು ॥೨೬೬॥

ಪುರುಹೂತನ ಪುರವರವನು ಕಂಡೆನು ।
ಕರುಣಿಯೆ ನಿನ್ನಿಂದ ॥
ಎರಡು ಘಳಿಗೆ ದೇವರು ಕೃಪೆ ಮಾಳ್ಪುದು ।
ಸುರವನಕ್ರೀಡೆಯಲಿ ॥೨೬೭॥

ಪಕ್ಷಿಯನಿಳಿ ವನಜಾಕ್ಷನೆ ಚಿತ್ತದ ।
ಪೇಕ್ಷೆಯ ಸಲಿಸುವಡೆ ॥
ಈ ಕ್ಷಣದಲ್ಲಿ ನಿರೀಕ್ಷಿಸಿ ಪೋಗುವ ।
ಋಕ್ಷಾತ್ಮಜೆಯರಸ ॥೨೬೮॥

**ಕಂದ**

ಲಲನೆಯ ನುಡಿಯಂ ಕೇಳ್ದಾ ।
ಜಲಜಾಕ್ಷಂ ತೋಷದಿಂದ ತದ್ವನದೆಡೆ ಗಂ ॥
ಫಳಿಲನೆ ಬಂದಹಿವೈರಿಯ ।
ನಿಳಿದಾಗಳೆ ಸತ್ಯಭಾಮೆಸಹಿತೊಳ ಪೊಕ್ಕಂ ॥೨೬೯॥

**ರಾಗ ಬಿಲಹರಿ ಏಕತಾಳ**

ಕರುಣದಿ ಕಾಹಿನ ಚರರ ನಂಬಿಸಿ ಕೃಷ್ಣ ।
ಹರುಷದಿಂದಲಿ ಪೊಕ್ಕನಿಂದ್ರನ ವನವ ॥
ತರುಣಿಯ ಕೋಮಲ ಕರವ ಪಿಡಿದು ನಾನಾ ।
ತರುಗುಲ್ಮಲತೆಗಳ ತೋರಿದನಾಗ ॥೨೭೦॥

ನಳಿನಲೋಚನೆ ನೋಡು ನಿಬಿಡವಾಗಿಹ ಚೆಲ್ವ ।
ತಳಿರೆಲೆಗಳ ಚಾರುಲತೆಗಳ ಸೊಂಪ ॥
ಸುಲಲಿತಸುಮಗಳ ಸೌರಭ್ಯವನು ಬೀರು ।
ತೆಲರು ಬೀಸುತಲಿದೆ ತಂಪಿನಿಂದಬಲೆ ॥೨೭೧॥

ಹಸನಾದ ಪಚ್ಚೆಯಂತೆಸೆವ ಕಾಯಿಗಳನ್ನು ।
ನಸುಮಿಡಿಗೊಂಚಲನೀಕ್ಷಿಸು ನೀರೆ ॥
ಮಿಸುನಿಯಂದದಿ ಪಣ್ಗಳಿಂದ ಮಹಾಮೃತ ।
ರಸವು ಸೂಸುತಲಿದೆ ಬಿಸರುಹಗಂಧಿ ॥೨೭೨॥

ಪ್ರೌಢಿಯಂದದಿ ಮಾತನಾಡುವ ಗಿಣಿಗಳ ।
ಪಾಡುತಲಿಹ ಮರಿ ಕೋಗಿಲೆ ಹಿಂಡ ॥
ಜೋಡಾಗಿ ನಟಿಸುವ ನವಿಲ ಲಾವಣ್ಯವ ।
ನೋಡೆ ಪನ್ನಗವೇಣಿ ಪಲ್ಲವಪಾಣಿ ॥೨೭೩॥

ಅರಳಿರ್ದ ಕೈರವ ಕಮಲಗಳಿಂ ವಾರಿ ।
ಚರಗಳಿಂದಲಿ ಸ್ವಚ್ಛಜಲದಿಂದಲೆಸೆವ ॥
ಸರಸಿಯ ಸಂಭ್ರಮ ನೋಡೆಂದು ತೋರುತ ।
ಬರಲು ಕಂಡಲು ಭಾಮೆ ಪಾರಿಜಾತವನು ॥೨೭೪॥

**ರಾಗ ಕೇದಾರಗೌಳ ಝಂಪೆತಾಳ**

ಕೇಳು ಸುರಪತಿಯೆ ನೀನು । ಚಿಂತೆಯನು ।
ಬೀಳುಗೊಡು ದಾನವರನು ॥
ಕಾಲನೂರಿಗೆ ಕಳುಹುವೆ । ನಾಳೆ ಸುರ ।
ಜಾಲವನು ಸಂತೈಸುವೆ ॥೧೪೨॥

ಪುಂಡೆದ್ದ ದೈತ್ಯತತಿಯ । ತಲೆಗಳನು ।
ಚೆಂಡಾಡಿ ನಿಜ ಮಾತೆಯ ॥
ಕಂಡು ಕಿವಿಗಳಿಗೆ ಮುದದಿ । ತೊಡಿಸುವೆ ।
ಕುಂಡಲಂಗಳನು ಜವದಿ ॥೧೪೩॥

ಅಂಜದಿರು ಮನದೊಳೆನುತಾ । ದನುಜಕುಲ ।
ಭಂಜನನು ದಯದೋರುತ ॥
ಕುಂಜರವರೂಥಗಾಗ । ಅಭಯಕರ ।
ಕಂಜವನು ತೋರ್ದ ಬೇಗ ॥೧೪೪॥

**ಕಂದ**

ಇಂತಬುಜಾಂಬಕನೆನಲುರೆ ।
ಸಂತಸದೊಳೆ ತತ್ಪದಾಬ್ಜದೊಳಿಂದ್ರಂ ।
ಚಿಂತೆಯನುಳಿದತಿ ಧೈರ್ಯವ ।
ನಾಂತಾಗಳೆ ನಾಕಲೋಕಮಂ ಮಿಗೆ ಸಾರ್ದಂ ॥೧೪೫॥

**ಭಾಮಿನಿ**

ಅರಸ ಕೇಳ್ಕೈ ದಿವಿಜಪತಿ ನಿಜ ।
ಪುರಕೆ ಬಿಜಯಂಗೆಯ್ಯುಲಿತ್ತಲು ।
ಪರಮ ಕರುಣಾಳುಗಳ ದೇವನು ವಿನತೆಯಾತ್ಮಜನ ॥
ಸ್ಮರಿಸಲಾತನು ಬಂದು ಹರಿಪದ ।
ಸರಸಿಜಕೆ ತಲೆವಾಗಿ ನಿಂದಿರೆ ।
ಹರುಷದಲಿ ಸತಿಯೊಡನೆ ನುಡಿದನು ದನುಜರಿಪು ನಗುತ ॥೧೪೬॥

**ರಾಗ ಸಾಂಗತ್ಯ ರೂಪಕತಾಳ**

ವಾರಿಜಾನನೆ ಕೇಳು ಘೋರ ದಾನವರೆಲ್ಲ ।
ಸೂರೆಗೊಂಡರು ತಮ್ಮ ಸಿರಿಯ ॥

ದಾರಿ ತೋರುವದೆಂದು ಭೂರಿನೇತ್ರನು ಬಂದು ।
ದೂರಿಕೊಂಡುದ ಕೇಳ್ದೆಯಲ್ಲ ॥೧೪೭॥

ದುರುಳ ಕರ್ಬುರರ ಸಂಹರಿಸಿ ಮತ್ತಮರೇಂದ್ರ ।
ಪುರಕೀಗ ಪೋಗಿ ಕುಂಡಲವ ॥
ಸುರಮಾತೆಗಿತ್ತು ನಿರ್ಜರರ ಪಾಲನೆಗೆಯ್ದು ।
ಬರುವೆ ನಾನತಿ ಬೇಗ ನೀರೆ ॥೧೪೮॥

ನೊಂದರೆಲ್ಲರು ದೈತ್ಯರಿಂದ ಸುಪರ್ವರು ।
ಇಂದು ನಿಲ್ಲದೆ ದುಷ್ಟ ಖಳರ ॥
ವೃಂದವ ಗೆಲಿದು ಸಾನಂದದಿ ಬಗೆನೆನೆ ।
ಲೆಂದಳು ಸಿಂಧುರಗಮನೆ ॥೧೪೯॥

**ರಾಗ ಕೇದಾರಗೌಳ ಅಷ್ಟತಾಳ**

ಸುರಲೋಕವನು ಸೂರೆಗೊಂಡ ದಾನವರ ಸಂ । ಹರಿಸಿ ನಿರ್ಜರರನೆಲ್ಲ ॥
ಪರಿಪಾಲನಯ ಮಾಳ್ಪುದೊಳ್ಳಿತು ಪಾವನ । ಚರಿತ ಕೇಳೆನ್ನ ಸೊಲ್ಲ ॥೧೫೦॥

ಅಮರೇಂದ್ರನುದ್ಯಾನವನದಿ ಶೋಭಿಸುವ ಕಲ್ಪ । ದ್ರುಮವ ತೋರುವೆನೆಂದುದಾ ॥
ರಮಣ ಕೇಳಾ ಮಾತು ನಿಜವಾದಡೆನ್ನೊಳು । ಸಮಯವಿದೆಂದಳಾಗ ॥೧೫೧॥

**ಭಾಮಿನಿ**

ಭೂತಳಾಧಿಪ ಕೇಳಿ ಕಾಂತೆಯ ।
ಮಾತನಾಲಿಸಿ ವನಜನಾಭನು ।
ತಾ ತತುಕ್ಷಣ ಪನ್ನಗಾರಿಯನೇರಿ ಸತಿಸಹಿತ ॥
ಪ್ರೀತಿಯಲಿ ಪೋಗುತ್ತಲಿರೆ ಪುರು ।
ಹೂತವೈರಿಗಳಾಳ್ವ ವರಪ್ರಾ ।
ಗ್ಜ್ಯೋತಿಷಾನ್ವಯ ನಗರವೆಸೆಯಲು ಕಂಡು ದೂರದಲಿ ॥೧೫೨॥

**ರಾಗ ಕೇದಾರಗೌಳ ಅಷ್ಟತಾಳ**

ಹಿಮಶೈಲದಗ್ರದೊಳ್ ಮೆರೆವ ಮಾರ್ಗವ ಕಂಡು ।
ಕಮಲನಾಭನು ವೇಗದಿ ॥
ರಮಣಿಯನೀಕ್ಷಿಸಿ ನೀನಂಜಬೇಡೆಂದು ।
ಸಮರಕೆ ನಡೆದನಾಗ ॥೧೫೩॥

ಗಿರಿದುರ್ಗಗಳನೆಲ್ಲ ನಿಜಕೌಮೋದಕಿಯಿಂದ ।
ಲೊರಸಿ ಪಟ್ಟಣವಪೊಕ್ಕು ॥

ಉರುಶಸ್ತ್ರಚಯವ ಮಾರ್ಗಣದಿಂದ ತರಿದೊಟ್ಟಿ |
ಭರದಿ ಜೀವನ ದುರ್ಗವ ||೧೫೪||

ಭೇದಿಸಿದಾಗ್ನೇಯಬಾಣದಿ ಮುರಪಾಶ |
ಭೇದಿಸಿ ಚಕ್ರದಲಿ ||
ಕಾದಿಹ ವಹ್ನಿಯ ವಾರುಣಾಸ್ತ್ರದಿ ಗೆದ್ದು |
ಕ್ರೋಧದಿ ಕ್ಷುರಮಾಲೆಯ ||೧೫೫||

ಖಡುಗದಿ ಕಡಿದು ಮುಂದಡಿಯಿಟ್ಟು ಒಳಪೊಕ್ಕು |
ಕಡುರೋಷದಿಂ ಶಂಖವ ||
ಬಿಡದೆ ನಾದಿಸಲಾಗ ಕೇಳ್ದು ದಾನವರೆಲ್ಲ |
ನಡುಗಿ ಹಮ್ಮೈಸಿದರು ||೧೫೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮೊರೆವ ಶಂಖಧ್ವನಿಯನಾಲಿಸಿ |
ಮುರನು ಮೈಮುರಿದೆದ್ದು ತಮ್ಮಯ |
ಪುರಕೆ ಬಂದವನಾರು ಕಾಂಬೆನು | ಭರದೊಳವನ ||೧೫೭||

ಕಾಲನಾಗಲಿ ಮೃತ್ಯುವಾಗಲಿ |
ಕಾಲಭೈರವನಾದಡಾಗಲಿ |
ಶೂಲಿಯಾಗಲಿ ನಿಮಿಷಮಾತ್ರಕೆ | ಬೀಳಕಡಿವೆ ||೧೫೮||

ಎನುತ ಕೊನೆಮೀಸೆಗಳ ತಿರುಹುತ |
ಕನಲಿ ಮುಖವಯ್ದರಲಿ ಗರ್ಜಿಸಿ |
ದನುಜಸಂಕುಲವೆರಸಿ ಪೊರಟನು | ಮನೆಯನಾಗ ||೧೫೯||

ಘುಡುಘುಡಿತಡಿಯಿಡಲು ಮುಂದಕೆ |
ಪೊಡವಿ ಕುಸಿದುದು ಸಿಡಿದವದ್ರಿಗಳ್ |
ಕಡಲ್ ಕುದಿದುದು ಸಕಲ ಸುರತತಿ | ನಡುಗಿತಂದು ||೧೬೦||

ಖಂಡೆಯವ ಜಡಿವುತ್ತ ರೌದ್ರದಿ |
ಕೆಂಡಗಳ ಕಂಗಳಲಿ ಸೂಸುತ |
ಖಂಡಪರಶುವಿನಂತೆ ನಡೆದನು | ಕಂಡು ಹರಿಯ ||೧೬೧||

**ಕಂದ**

ಖತಿಯೊಳ್ ದನುಜಂ ಕಮಲಾ |
ಪತಿಯನು ಕಾಣುತ್ತಲಯ್ದು ಮುಖದೊಳ್ ಭರದಿಂ |

ಕ್ಷಿತಿಯೊಡೆವಂದದಿ ಗರ್ಜಿಸಿ ।
ದಿತಿಜರ ಸಂಕುಲಮಧ್ಯದೊಳ್ ನಿಂದಿಂತೆಂದಂ ॥೧೬೨॥

**ಭಾಮಿನಿ**

ಆರೆಲವೊ ನೀ ನಮ್ಮ ನಗರಕೆ ।
ವಾರಿಜಾನನೆ ಸಹಿತ ಹಕ್ಕಿಯ ।
ನೇರಿ ಕೊಂಡಯ್ತಂದ ಕಾರಣವೇನು ಭಾಮಿನಿಯ ॥
ಚೋರತನದಲಿ ಬಂದು ದುರ್ಗವ ।
ಸೇರಿ ಬದುಕಲು ಬಂದೆಯೋ ಮಿಗೆ ।
ವೈರಿಯೋ ನಿಜವಾಗಿ ನುಡಿ ನುಡಿ ಮಾಜಬೇಡೆಂದ ॥೧೬೩॥

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಕೇಳ್ವ ಕಣಿಯ ಲೇಸು । ನಳಿನಜಾಂಡದೊಳಗೆ ದೈತ್ಯ ।
ಕುಲ ವಿರೋಧಿಯೆಂಬರೆಲ್ಲ । ಖಳನೆ ನಿನ್ನಯ ॥
ಬಲುಹ ಕೇಳಿ ಬಂದೆ ತೋಳ । ಬಲುಹ ತೋರಿಸೆಂದು ದನುಜ ।
ಬಲವ ಸವರಿ ನಡೆದ ಮುಂದೆ । ಜಲಜನೇತ್ರನು ॥೧೬೪॥

ಕಡುಸಮರ್ಥನಹುದು ನಿಲ್ಲು । ನುಡಿಯ ಕೇಳಿ ಹರುಷವಾಯ್ತು ।
ಮೃಡನ ಕೊಡೆ ಸೆಣಸಿ ಮದನ । ಮಡಿದ ತೆರದಲಿ ॥
ಮಡದಿ ಸಹಿತ ಬಂದು ನಮ್ಮ । ಪಡೆಯ ಕೆಣಕಿ ಕೆಟ್ಟೆಯೆಲವೊ ।
ಫಡ ಫಡೆನುತಲಾಗ ಶೂಲ । ವಿಡಿದು ಹಾಯಿದ ॥೧೬೫॥

ಉರಿಯನುಗುಳುತಾಗ ಬಂದು । ಗರುಡದೇವನೆದೆಗೆ ಶೂಲ ।
ವೆರಗುತಿರಲು ಕಂಡು ದನುಜ । ಹರನು ನಗುತಲಿ ॥
ಭರದಿ ಬಾಣವೆರಡರಿಂದ । ತರಿದು ಕೆಡಹಿ ಧುರಕೆ ನಿನ್ನ ।
ದೂರೆಯ ಕರೆಸು ನೋಳ್ಪೆನೆಂದು । ಮುರಗೆ ಪೇಳ್ದನು ॥೧೬೬॥

ನೀಲವರ್ಣ ಕೇಳು ನಮ್ಮ । ತೋಳಬಲುಹನೇನ ಕಂಡೆ ।
ಕಾಳುಗೆಡೆಯ ಬೇಡ ನಿನ್ನ । ಕಾಲನೂರಿಗೆ ॥
ಬೀಳುಗೊಡೆವೆನೊಂದು ನಿಮಿಷ । ತಾಳೆನುತ್ತ ಖಳನು ಖತಿಯ ।
ತಾಳಿ ಗದೆಯೊಳಿಟ್ಟನಮರ । ಜಾಲ ಬೆದರಲು ॥೧೬೭॥

ಘೋರನಿದಿರು ಬರುವ ಗದೆಯ । ಮಾರನಯ್ಯ ಕಂಡು ತನ್ನ ।
ಭಾರಿ ಗದೆಯ ನೀಡಿ ಹೊಯ್ದು । ಘೋರ ದೈತ್ಯನ ॥
ನೂರು ಶರದೊಳೆಚ್ಚು ಮತ್ತೆ । ತೇರು ಕುದುರೆಗಳನು ಕಡಿದು ।
ಭೂರಿ ಬಲವನೆಲ್ಲ ಕಾಲ । ನೂರು ಪೊಗಿಸಿದ ॥೧೬೮॥

**ಕಂದ**

ಶರಹತಿಯೊಳಗಾ ನಕ್ತಂ ।
ಚರನರೆನಿಮಿಷದಲಿ ಮೂರ್ಛೆಯಿಂದೊರಗುತ್ತಂ ॥
ಮುರಿದೆದ್ದೊಯ್ಯನೆ ಲಕ್ಷ್ಮೀ ।
ವರನಂ ನೋಡುತ್ತಲೆಂದನತಿ ರೋಷದೊಳಂ ॥೧೭೯॥

**ರಾಗ ಭೈರವಿ ಏಕತಾಳ**

ಮಸಿವರ್ಣನೆ ಕೇಳೆಲವೊ । ಸಾ । ಹಸಿಯಹುದ್ಯೆ ಬಾರೆಲವೊ ॥
ಪೆಸರಡಗಿಸುವೆನು ಧುರದಿ । ನಿ । ನ್ನನ್ನಸುವನು ಪೀರುವೆ ಕ್ಷಣದಿ ॥೧೮೦॥

ತರುಣಿಯ ಬಿಟ್ಟೇಗೆನ್ನ । ಪದ । ಕೆರಗಿದರೂ ಬಿಡೆ ನಿನ್ನ ॥
ಶಿರವನು ಚೆಂಡಾಡುವೆನು । ನಿ । ರ್ಜರಲೋಕವನಾಳುವೆನು ॥೧೮೧॥

ಎನುತಲಿ ಭುಜಗಳ ಹೊಯ್ದು । ಮುರ । ಮನದಲಿ ಖತಿಯನು ತಳೆದು ॥
ಧನುವಿಗೆ ಶರಗಳ ಪೂಡಿ । ಸ್ಮರ । ಜನಕನ ದೃಷ್ಟಿಸಿ ನೋಡಿ ॥೧೮೨॥

ಫಡ ಫಡ ತೊಲಗದಿರೆನುತ । ನೆಲ । ನೊಡೆಯಲು ಬಲು ಬೊಬ್ಬಿಡುತ ॥
ಬಿಡದೆಚ್ಚನು ಬಾಣದಲಿ । ಜಗ । ದೊಡೆಯುಗೆ ಕಡುತವಕದಲಿ ॥೧೮೩॥

ಬೆಚ್ಚದೆ ಕೃಷ್ಣನು ಮನದಿ । ಮುರ । ನೆಚ್ಚಂಬುಗಳನು ಭರದಿ ॥
ಕೊಚ್ಚಿದ ನಿಜಮಾರ್ಗಣದಿ । ಜಗ । ಕಚ್ಚರಿಯಾಗಲು ಮುದದಿ ॥೧೮೪॥

ಹಿಂಗದೆ ಶಸ್ತ್ರಾಸ್ತ್ರಗಳು । ಖಳ । ಪುಂಗವನತಿ ರೋಷದೊಳು ॥
ನುಂಗುವೆ ನಿಮಿಷದೊಳೆಂದು । ವದ । ನಂಗಳ ತೆರವುತ ಬಂದು ॥ ॥೧೮೫॥

ಆಕ್ರಮಿಸಲು ಭಯಗೊಂಡು । ವಿಧಿ । ಶಕ್ರಾದಿಗಳಿರೆ ಕಂಡು ॥
ಚಕ್ರಿಯ ಖಳಶಿರಗಳನು । ನಿಜ । ಚಕ್ರದಿ ಧರೆಗಿಳುಹಿದನು ॥೧೮೬॥

**ಭಾಮಿನಿ**

ಮುರನ ತಲೆಗಳು ಬೀಳೆ ಧರಣಿಗೆ ।
ಸುರರು ಸಂತಸವೆತ್ತು ಕರುಣಾ ।
ಕರನ ಮುಕುಟದ ಮೇಲೆ ಸುರಿದರು ಪುಷ್ಪವೃಷ್ಟಿಗಳ ॥
ಮರುಗಿದರು ಪಿತನಳಿದನೆಂಬುದ ।
ನರಿತು ತತ್ಸೂನುಗಳು ಕೃಷ್ಣನ ।
ತರುಬಿ ಶಸ್ತ್ರಾಸ್ತ್ರದಲಿ ಹೊಳಿದರಧಿಕ ರೋಷದಲಿ ॥೧೮೭॥

**ರಾಗ ಶಂಕರಾಭರಣ ಮಟ್ಟೆತಾಳ**

ಕರಿರಥಾಶ್ವಪತ್ತಿಸಹಿತ । ಧುರಕೆ ಬಂದರು ।
ಹರಿಯ ಕಂಡು ಕರೆದರಾಗ । ದುರುಳ ದೈತ್ಯರು ॥
ಧುರದೊಳೆಮ್ಮ ಪಿತನ ಗೆಲಿದ । ಗರುವತನವನು ।
ಮುರಿವೆವೆಲವೊ ನುಡಿವರಲ್ಲ । ಬರಿಯ ಮಾತನು ॥೧೭೮॥

ಮಡಿದ ತಂದೆಯೊಡನೆ ನಿನ್ನ । ಕೆಡಹಿ ಕೊಲ್ವೆವು ।
ಒಡಲ ಬಗಿದು ಕರುಳ ಮರುಳು । ಗಡಣಕೀವೆವು ॥
ಪಿಡಿದು ಸತಿಯ ದೈತ್ಯಪತಿಗೆ । ಕೊಡುವೆವೀಗಲೆ ।
ಕಡೆಯ ಕಾಲ ನಿನಗೆ ಬಂತು । ತುಡುಕಿದಾಗಲೆ ॥೧೭೯॥

ಎನುತ ಬೊಬ್ಬೆಗೆಯ್ದು ಮುರನ । ತನುಜರಾಕ್ಷಣ ।
ಕನಲಿ ಸರಳಮಳೆಯ ಕರೆಯೆ । ವನರುಹೇಕ್ಷಣ ॥
ದನುಜಬಲವನೆಲ್ಲ ಸವರಿ । ಘನತರೌಷಧಿ ।
ಬಿನುಗು ಖಳರಿಗೆಂದನಾಗ । ಘನ ವಿನೋದದಿ ॥೧೮೦॥

ಮರುಳುಗಳಿರ ಕೇಳಿರೆಲವೊ । ಮುರನು ರಣದಲಿ ।
ಉರು ಸಮರ್ಥನವನು ಜವನ । ಪುರಕೆ ಭರದಲಿ ॥
ಸರಿದುದರಿದು ಬಗುಳುತಿಹಿರಿ । ತರಳತನದಲಿ ।
ಪಿರಿದು ಸತ್ತ್ವವಿರಲು ತೋರಿ । ಸರಳ ಮೊನೆಯಲಿ ॥೧೮೧॥

ಎಂದು ಮಂದಹಾಸದಿಂದ । ನಂದತನಯನು ।
ಒಂದು ಶರದೊಳವರನೆಲ್ಲ । ಕೊಂದು ಕೆಡೆದನು ॥
ಚಂದವಾದುದೆನುತ ದೇವ । ವೃಂದ ಗಗನದಿ ।
ವಂದಿಸುತ್ತ ಸುಮವ ಸುರಿದ । ರಂದು ಹರುಷದಿ ॥೧೮೨॥

**ಕಂದ**

ಮುರನಳಿದುದನುಂ ತತ್ಪು ।
ತ್ರರ ವಧೆಯನು ಕಂಡು ದೂತರತಿ ಭರದಿಂದಂ ॥
ಪರಿತಂದಾಲಯದೆಡೆಗಂ ।
ನರಕಾಸುರನೊಡನೆ ಪೇಳಿದರು ಭೀತಿಯೊಳಂ ॥೧೮೩॥

**ರಾಗ ಸಾರಂಗ ಅಷ್ಟತಾಳ**

ಕೇಳಯ್ಯ ದೊರೆಯೆ ನೀನು । ಸಂಗರಕೆ ಬೇ । ಗೇಳನುಮಾನವೇನು ॥
ಕಾಲಾಗ್ನಿರುದ್ರನ । ವೋಲೊಬ್ಬ ಬಂದೊಂದು ।
ಕೋಲಿನಿಂದಲೆ ದೈತ್ಯ । ಜಾಲವ ಕೆಡಹಿದ ॥೧೮೪॥

ನಾರಿಯ ಕೂಡಿಕೊಂಡು । ರಾಜಿಪ ಪನ್ನ । ಗಾರಿಯನೇರಿಕೊಂಡು ॥
ವಾರಿ ಪಾವಕ ಪಾಶ । ಘೋರ ಶಸ್ತ್ರಂಗಳ ।
ನೋರಂತೆ ಭೇದಿಸಿ । ಮಾರಾಂತರನು ಗೆಲ್ದ ॥೧೮೫॥

ಮುರನ ಚಕ್ರದಿ ಕೊಂದನು । ತತ್ಪುತ್ರರ । ಸರಳಿಂದ ಸವರಿದನು ॥
ಧುರಕೆ ಬನ್ನಿರೊ ನಿಮ್ಮ । ಧೊರೆಯ ತೋರಿರೊ ಎಂದು ।
ಮೊರೆವ ಶಂಖವನೂದಿ । ಕರೆವುತ್ತಲಿಹ ನಮ್ಮ ॥೧೮೬॥

**ರಾಗ ಭೈರವಿ ಝಂಪೆತಾಳ**

ಚರರ ನುಡಿಯನು ಕೇಳ್ದು । ನರಕನತಿ ರೋಷದಲಿ ।
ಉರಿಯುನುಗುಳುತ ಕರೆದ । ನೆರೆದ ಪಟುಭಟರ ॥೧೮೭॥

ಬನ್ನಿರೋ ಬಂದವನ । ತನ್ನಿರೋ ಹಿಡಿದು ನೀ ।
ವೆನ್ನಡೆಗೆ ಭರದೊಳಾ । ಕನ್ನೆ ಸಹಿತೀಗ ॥೧೮೮॥

ಶಿವ ತಾನೆ ಬಂದಿರಲಿ । ರವಿತನಯನಾಗಿರಲಿ ।
ಜವದಿಂದ ಕೆಡಹುವೆನು । ಭುವಿಗವನ ತಲೆಯ ॥೧೮೯॥

ಪೊಗಲರಿದು ನಾವಿಪ್ಪ । ನಗರವನು ಮೃತ್ಯುವಿಗೆ ।
ಖಗವೇರಿ ಬಂದವನ । ಮೊಗವ ನೋಡುವೆನು ॥೧೯೦॥

ಎಂದು ವರ ದಿಗ್ಗಜದ । ಕಂಧರವನಡರಿ ನಡೆ ।
ತಂದ ಬಲಸಹಿತ ಗೋ । ವಿಂದನಿದ್ದೆಡೆಗೆ ॥೧೯೧॥

**ರಾಗ ಭೈರವಿ ತ್ರಿವುಡೆತಾಳ**

ಪೊರಟರಾಗ । ಯುದ್ಧಕ್ಕೆ । ಪೊರಟರಾಗ ॥ ಪಲ್ಲವಿ ॥
ತರುಣಿ ಭಾಮಾದೇವಿ ಸಹಿತಲೆ । ತರಣಿಕೋಟಿಪ್ರಕಾಶದಿಂದಲಿ ।
ಗರುಡದೇವನ ಮೇಲೆ ರಂಜಿಪ । ಪರಮಪುರುಷನ ಕಂಡು ಬೇಗದಿ ।
ನರಕದಾನವನುಗ್ರಕೋಪದೊ । ಳುರಿಯ ಸೂಸುತ ನೇತ್ರಯುಗ್ಮದಿ ।
ಮುರನ ಗೆಲಿದಿಹ ಗರ್ವತನವನು । ಮುರಿವೆನೆಂದಡಿಯಿಡುತ ತವಕದಿ ॥ ಪೊರಟಾಗ ॥೧೯೨॥

ಮುತ್ತಿರೋ ಮುರವೈರಿಯನು ಬೆಂ । ಬತ್ತಿ ಹಿಡಿಯಿರೊ ಬಿಗಿದು ಕಟ್ಟಿರೊ ।
ಮತ್ತಗಜಗಳ ಕಾಲ್ಗಳಿಂದಲಿ । ನೆತ್ತಿಯಜಿಗಿಜಿಯಾಗಿ ತುಳಿಸಿರೊ ।

ಕತ್ತಿಯವರೊಗ್ಗಾಗಿ ಹಕ್ಕಿಯ | ಬಿತ್ತರದ ಪಕ್ಕಗಳ ಕಡಿಯಿರೊ |
ವೃತ್ತಕುಚೆಯನು ಭರದಿ ತನ್ನಿರೆ | ನುತ್ತ ಖಳಪತಿ ಬೆಸಸೆ ದನುಜರು ‖ ಪೊರಟರಾಗ ‖೧೯೩‖

ವಾರಣಂಗಳನಡರಿ ಜೋಧರು | ಚಾರುತರ ಹಯಗಳಲಿ ವೀರರು ‖
ತೇರುಗಳ ತಿಂಥಿಣಿಯಲುರು ಮದ | ವೇರಿ ಧನುಶರವಿಡಿದು ರಥಿಕರು |
ಮೂರು ಲೋಕವ ತುತ್ತುಗೊಂಬತಿ | ಭೂರಿಬಲಯುತ ನಿಖಿಳ ಸುಭಟರು |
ವೈರಿಯಾವೆಡೆ ತೋರು ತೋರೆಂ | ದಾರುಭಟಿಸುತಲಂದು ಖತಿಯಲಿ ‖ ಪೊರಟಾಗ ‖೧೯೪‖

**ರಾಗ ಮಾರವಿ ಏಕತಾಳ**

ಊರ್ಬಿಯ ತನುಜನ | ಪೇರ್ಬಲ ಕೋಪದಿ |
ಪರ್ಬತವನು ಕಿ | ತ್ತಾರ್ಭಟಿಸುತ ವೈ |
ದರ್ಭಿಯ ರಮಣನ | ಪರ್ಬಲು ಗರುಡನು |
ನಿರ್ಭರದಿಂದಲಿ | ಕರ್ಬುರನಿಕರವ | ಕೊಂದನಾಗ ‖೧೯೫‖

ಕರಿಗಳ ಸುಂಡಿಲ | ತುರಗದ ಕಾಲ್ಗಳ |
ನುರುತರ ಸುಭಟರ | ಶಿರಗಳ ತೇರ್ಗಳ | ವರಚಕ್ರಂಗಳ |
ನರೆನಿಮಿಷದಿ ಮಿಗೆ | ಧರೆಗುರುಳಿಸಿ ಮುಂ |
ಬರಿವುತಲಸುರರ | ಕೆಡೆದನಾಗ ‖೧೯೬‖

ಹಿಡಿ ಹಿಡಿ ತಿವಿ ತಿವಿ | ಬಡಿ ಬಿಡಬೇಡೆನು |
ತಡಿಯಿಡುತಸುರರ | ಪಡೆಯೆಡಬಲದೊಳು | ಘುಡುಘುಡಿಸುತ ಬೊ |
ಬ್ಬಿಡುತಯ್ತುರುತಿರೆ | ಕಡಿಕಡಿದೊಟ್ಟಿದ |
ಪೊಡವಿಯಗಲದಲಿ | ಕೋಪದಿಂದ ‖೧೯೭‖

**ಕಂದ**

ತುಂಡದಿ ನಖದಿಂ ದನುಜರ |
ತಂಡಗಳಂ ವಿಹಗನಾಥನರೆನಿಮಿಷದೊಳಂ ‖
ಖಂಡಿಸಿ ಕೆಡಹಲ್ಕಸುರಂ |
ಕಂಡುರುತರ ಶಕ್ತಿ ತೆಗೆದು ಕೋಪದೊಳಿಟ್ಟಂ ‖೧೯೮‖

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕಡುಗಿ ನರಕಾಸುರನು ಗರುಡನ |
ಕಡುಹ ನಿಲಿಸುವೆನೆನುತ ಶಕ್ತಿಯೊ |
ಳಿಡಲು ಬಿದ್ದುದು ಸಿಡಿಲ ರವದಲಿ | ಪೊಡವಿಗಾಗ ‖೧೯೯‖

ಕಂಡು ದೈತ್ಯನು ಕೆದರಿ ನಿಜಕೋ ।
ದಂಡವನು ನೇವರಿಸಿ ಶಕ್ತಿಯ ।
ಕೊಂಡು ಬೊಬ್ಬಿಡುತೆಂದ ಲಕ್ಷ್ಮೀ । ಗಂಡನೊಡನೆ ॥೨೦೦॥

ಬಿನುಗು ಮಾನವ ಕೇಳು ನಮ್ಮೊಳು ।
ಸೆಣಸಿ ನೀ ಬದುಕುವೆಯೊ ನಿನ್ನಯ ।
ಹಣೆಯ ಬರಹವ ತೊಡೆವೆ ನಿಮಿಷದೊ । ಳೆನುತ ಖಳನು ॥೨೦೧॥

ಸರಳ ಸುರಿಮಳೆಗರೆಯಲದ ನಿಜ ।
ಶರದಿ ಖಂಡಿಸಿ ಕೃಷ್ಣದೇವನು ।
ಕಿರಿನಗೆಯ ಸೂಸುತ್ತಲೆಂದನು । ನರಕನೊಡನೆ ॥೨೦೨॥

ಘನಪರಾಕ್ರಮಿಯಹುದು ನಿನ್ನೊಳು ।
ಸೆಣಸಿ ಜೀವಿಸಬಲ್ಲನೇ ಹುಲು ।
ಮನುಜರ್ಮೈ ನಾವೆನುತ ವಿಶಿಖದಿ । ಧನುವ ಕಡಿದ ॥೨೦೩॥

ಮತ್ತೆ ಗಜವನು ನಡೆಸಿ ದೈತ್ಯನು ।
ಚಿತ್ತದಲಿ ಚಿಂತಿಸುತ ವಿಧಿ ತನ ।
ಗಿತ್ತ ದಿವ್ಯ ಶತಘ್ನಿಯನು ತಿರು । ಹುತ್ತಲೆಂದ ॥೨೦೪॥

ಸಂದ ಮುರನಂತೆನ್ನ ನೋಡದಿ ।
ರಿಂದು ನಿನಗೆ ಸಮಾಪ್ತಿಕಾಲವು ।
ಬಂದುದೆನುತಿದೆ ತಾಗಿದುದು ಗೋ । ವಿಂದನುರದಿ ॥೨೦೫॥

**ಭಾಮಿನಿ**

ವರಶತಘ್ನಿಯ ಗಾಯದಲಿ ಸಿರಿ ।
ಯರಸ ಮೂರ್ಛಿತನಾಗೆ ಕಾಣುತ ।
ಸುರರು ಕೆಟ್ಟೆವೆನುತ್ತ ಚಿಂತಿಸುತಿರಲು ಬೇಗದಲಿ ॥
ತರುಣಿ ಭಾಮಾದೇವಿ ಕಾಂತನ ।
ಕರದ ಶಾರ್ಙ್ಗವ ಕೊಂಡು ಘನತರ ।
ಶರವ ಕಿವಿವರೆಗೆಳೆದು ನುಡಿದಳು ಬಯ್ದು ದಾನವನ ॥೨೦೬॥

**ರಾಗ ದೇಶಿ ಮಟ್ಟೆತಾಳ**

ಕುನ್ನಿ ಕೇಳೆಲಾ । ಖೂಳ ನೀನೆಲಾ ।
ನಿನ್ನ ಕಡುಹನು । ನಿಲಿಸದುಳಿಯೆನು ॥೨೦೭॥

ಎನುತಲಸ್ತ್ರದಿ | ಎಚ್ಚು ಗರ್ವದಿ |
ಧನುಜಗೊಪ್ಪುವ | ದಿವ್ಯ ಮುಕುಟವ ||೨೦೮||

ಸುಪ್ರತೀಕವ | ಸುಭಟವರ್ಗವ |
ಕ್ಷಿಪ್ರದಿಂದಲಿ | ಕೆಡಹಿ ಖತಿಯಲಿ ||೨೦೯||

ನೋಡಿ ನರಕನು | ನಗುತಲೆಂದನು |
ಖೋಡಿಯಿಲ್ಲದೆ | ಕಡುಹ ತೋರಿದೆ ||೨೧೦||

ಅಮಿತ ಬಲದೊಳು | ಅಬಲೆ ನಿನ್ನೊಳು |
ಸಮರ ಸಲ್ಲದು | ಸಹಜ ಮಾತಿದು ||೨೧೧||

ಬರಿದೆ ಕಾದಲು | ಬೇಡವೆನುತಲೆ |
ಸೆರಗ ಹಿಡಿಯಲು | ಸತಿಯು ಭರದೊಳು ||೨೧೨||

ಕೊಡಹಿ ಸೆರಗನು | ಖಳನ ಶಿರವನು |
ದೃಢದಿ ಗದೆಯೊಳು | ಹೊಡೆದು ನಿಂದಳು ||೨೧೩||

**ಭಾಮಿನಿ**

ಗದೆಯ ಗಾಯದಿ ನೊಂದು ಭರದಲಿ |
ತ್ರಿದಶರಿಪು ಮೂರ್ಛೆಯಲಿ ಬಿದ್ದಿರೆ |
ಪದುಮದಳಲೋಚನನು ಮೈಮುರಿದೆದ್ದು ಭಾಮಿನಿಯ ||
ವದನ ಕಮಲವ ನೋಡಿ ಕರುಣದಿ |
ಸುದತಿ ನಿನಗೆಣೆಗಾಣೆನೆನುತತಿ |
ಮುದದಿ ಮುದ್ದಿಸೆ ಕರೆದರಭ್ರದಿ ಸರರು ಪೂಮಳೆಯ ||೨೧೪||

**ಕಂದ**

ದನುಜಂ ಮೈಮುರಿದೆದ್ದಾ |
ವನರುಸಂಜಾತನಯ್ಯನಂ ನೋಡುತ್ತಂ ||
ಘನಮದಕರಿಯಂ ನಡೆಸುತ |
ಲನುವಾದಂ ರೋಷದಿಂದ ಧುರಕಾ ಕ್ಷಣದೊಳ್ ||೨೧೫||

**ರಾಗ ಶಂಕರಾಭರಣ ರೂಪಕತಾಳ**

ತರುಣಿಯೆಂದ ನುಡಿಯ ಕೇಳ್ದ | ಹರಿಯು ಮನದಲಿ |
ಮರುಗತಾಗ ಪೇಳ್ದನೊಂದು | ಕರುಣದಿಂದಲಿ ||

ತರಳೆ ಕೇಳೆ ಶೀಘ್ರದಲ್ಲಿ ಬರುವೆನಲ್ಲಿಗೆ ।
ಭರದಿ ಪೇಳು ಬಂದೆನೆನುತ । ಲರಸಿ ಭಾಮೆಗೆ ॥೭೯॥

ನಡೆಯೆ ನಿಲ್ಲಬೇಡ ಮುದ್ದು । ನಡೆಯೆ ಭಾಮಿನಿ ।
ತಡೆಯದೀಗ ಬಹೆನು ನಿನ್ನ । ವಡನೆ ಕಾಮಿನಿ ॥
ಮಡದಿರನ್ನೆಯನ್ನು ಸಂತ । ವಿಡಿದು ವಿನಯದಿ ।
ಬಿಡದೆ ಬೇಡಿದಿಷ್ಟಗಳನು । ಕೊಡುವೆ ನಿಮಿಷದಿ ॥೮೦॥

ಎಂದು ಸಖಿಯನಾಗ ಕಳುಹಿ । ನಂದ ತನಯನು ।
ಬಂದು ಮಹಿಳೆ ಇರ್ಪ ಮನೆಯ । ಮುಂದೆ ನಿಂದನು ॥
ಎಂದಿನಂತೆ ಕಾಣದಿರಲು । ನೊಂದು ಮನದೊಳು ।
ಮಂದಿರವನು ಪೊಕ್ಕ ದುಗುಡ । ದಿಂದ ಭರದೊಳು ॥೮೧॥

**ಕಂದ**

ಮುರಹರನಂತಃಪುರಮಂ ।
ಭರದೊಳ್ ಪೊಕ್ಕಲ್ಲಿ ಸತಿಯ ಕಾಣದೆ ಬಳಿಕಂ ॥
ತರಹರಿಸುತ್ತಿರಲದ ಕಂ ।
ಡರುಹಿದಳೋರ್ವ ಪರಿಚಾರಿಣಿಯು ಹರಿಯೊಡನಂ ॥೮೨॥

**ರಾಗ ಸಾವೇರಿ ಅಷ್ಟತಾಳ**

ದೇವ ಲಾಲಿಸಯ್ಯ । ಬಿನ್ನಪವನ್ನು । ದೇವ ಲಾಲಿಸಯ್ಯ ॥ ಪಲ್ಲವಿ ॥

ಆಳಿಯ ಮುಖದಿಂದಲೀ । ಸುದ್ದಿಯನೊಂದು ।
ಕೇಳಿ ಸಂತಾಪದಲಿ ॥
ಬಾಲೆ ತಾನಿಂತಾದ ಮೇಲಿನ್ನು ಜೀವಿಸಿ ।
ಬಾಳುವದೆಂತೆಂದಳು । ನಿನ್ನವಳು ॥ ದೇವ ॥೮೩॥

ಉಸಿರಲೇನದನು ನಾನು । ದುಃಖದೊಳಿಂದು ।
ಬಿಸಜ ಲೋಚನೆಯು ತಾನು ॥
ಅಸುವ ನೀಗುವೆನೆಂದು । ಬಿಸುಸುಯ್ದು ಬಹಳ ಚಿಂ ।
ತಿಸುತೀಗ ಮಲಗಿರ್ಪಳು । ಮೂರ್ಛೆಯೊಳು ॥ ದೇವ ॥೮೪॥

**ಕಂದ**

ದೂತಿಯ ವಚನವನಾಲಿಸಿ ।
ಭೀತಿಯನುಂ ತಳೆದು ಜವದಿ ಚಿಂತಾಗೃಹಕಂ ॥

ಮಾತುಳ ಮರ್ದನನತಿ ಸಂ ।
ಪ್ರೀತಿಯೊಳಾ ಸತ್ಯಭಾಮೆಯೊಡನಿಂತೆಂದಂ ॥೮೫॥

**ಚೂರ್ಣಿಕೆ**

ಹೇ ಬಾಲೆ ಸರಸಗುಣಶೀಲೆ ಸಂಗೀತಲೋಲೆ ।
ರೋಲಂಬನಿಕುರಂಬಡಂಬರವಿಡಂಬಕನೀಲಕುಂತಲೆ
ನಿರ್ಮಲೆ ಅರ್ಧೇಂದುಸನ್ನಿಭಫಾಲೆ ಸಕಲ ಗುಣಾಲವಾಲೆ ।
ಶಂಬರಾಂತಕಶರಾಸನಭ್ರೂಲತೆಸನ್ಮತಿಯುತೆ ।
ಕುವಲಯ ಪತ್ರನೇತ್ರೆ ಕಮನೀಯಗಾತ್ರೆ ।
ವಿಲಸತ್ ಚಂಪಕಸುಮನಾಸಿಕೆ ಸೀಮಂತಿನೀಜನಶಿಖಾಮೌಕ್ತಿಕೆ ।
ಪದ್ಮರಾಗರಾಗಪ್ರಭಾಪ್ರಚಯಪ್ರಕಾಶಿತ ಶಾತಕುಂಭತಾಟಂಕಾಲಂ ।
ಕೃತಕರ್ಣಯುಗಳೆ ನಿತ್ಯಮಂಗಲೆ ಮುಕುರಕಪೋಲೆ ವಿಭ್ರಮಜಾಲೆ ।
ರಾಕೇಂದುನಿಭವದನೆ ಕಮನೀಯಕುಂದರದನೆ ।
ಚಾರು ತರಬಿಂಬಾಧರೆ ಕಂಬುಕಂಧರೆ ।
ಅತಿಮೃದುಳಬಾಹುಲತೆ ಆನಂದಭರಿತೆ ಲಲಿತಾರುಣಪದ್ಮರೇಖಾನ್ವಿತೆ ।
ಪಲ್ಲವಪಾಣಿ ಶುಕವಾಣಿ । ಜಂಭಾರಿ ಕುಂಭೇದ್ರಕುಂಭಸನ್ನಿಭ ಕುಚಯುಗೆ ಮನೋನುರಾಗೆ ।
ಕಾಂಚೀದಾಮ ವಿರಾಜಿತಹರಿಮಧ್ಯೆ ಕಾಮಾಗಮವೇದ್ಯೆ ।
ಪೃಥುಳ ಶೈತ್ಯನಿತಂಬೆ ಭೂರಂಭೆ । ರಂಭಾಸ್ತಂಭೋರುಯುಗಳೆ ಕೋಮಲೆ ।
ಕಲಧೌತಕೇತಕಿಕುಟ್ಮಳಜಂಘಾದ್ವಯೆ ಸದಯಹೃದಯೆ ।
ಝಣಝಣತ್ಕಾರಮಂಜೀರರಂಜಿತಚರಣಸರಸಿಜೆ ಪರಿಜನಸುಕುಜೆ ।
ಕಲಹಂಸನಿಭಯಾನೆ ಮಂದಕೋಕಿಲಗಾನೆ ।
ಶಾರದಾಂಬುಜರುಚಿರಚೇಲೆ ಮಯೂರನೃತ್ಯಲೀಲೆ ।
ಸರ್ವಾಲಂಕಾರಭೂಷಣಭೂಷಿತೇ ಚೌಷಷ್ಟಿಕಲಾಶೋಭಿತೆ ।
ಸತ್ಯಭಾಮೆ ನಿನಗೆನ್ನೊಡನೆ ಮುನಿಸೇನೆ ಪ್ರಾಣಕಾಂತೆ ಮಾತನಾಡೆ ॥೮೬॥

**ರಾಗ ಸೌರಾಷ್ಟ್ರ ಏಕತಾಳ**

ವಾರಿಜಗಂಧಿನಿ ಕೀರಭಾಷಿಣಿ ಮುದ್ದು ।
ನೀರೆ ನೀ ಬಾಗಿಲ ತೆರೆಯೆ ॥
ದ್ವಾರದಿ ಧ್ವನಿಯನ್ನು ತೋರುವಾತನು ನೀನು ।
ಯಾರು ಪೇಳ್ಳೈ ನಿನ್ನ ಪೆಸರು ॥೮೭॥

ಪ್ರಾಣನಾಯಕಿ ನಾಗವೇಣಿ ಕೇಳೆಲೆ ನಾನು ।
ವೇಣುಗೋಪಾಲನು ಕಾಣೆ ॥
ವೇಣುಗೋಪಾಲ ನೀನಾದರೊಳ್ಳಿತು ನಿನ್ನ ।
ಠಾಣದಿ ಪಶುವ ಕಾಯಯ್ಯ ॥೮೮॥

ಕ್ರೂರ ಕಾಳಿಂಗನ ಪೆಡೆಯ ತುಳಿದು ಬಂದ ।
ಧೀರ ಕಾಣೆಲೆ ಚಾರುಗಾತ್ರೆ ॥
ಧೀರ ನೀನಾದರೆ ಪಾವನಾಡಿಸಿಕೊಂಡು ।
ಗಾರುಡಿಗಾರ ಹೋಗಯ್ಯ ॥೮೯॥

ಬಲ್ಲಿದರೊಳು ಬಲು ಬಲವಂತರೆನಿಸುವ ।
ಮಲ್ಲರ ಗೆಲಿದವ ಕಾಣೆ ॥
ಮಲ್ಲರ ಗೆದಿದವನಾದರೆ ಗರಡಿಗೆ ।
ನಿಲ್ಲದೆ ಪೋಗು ಪೋಗಯ್ಯ ॥೯೦॥

ಕಾದಿದ್ದ ಕರಡಿಯ ಗೆಲಿದು ಕಾಮಿನಿಯ ವಿ ।
ನೋದದಿ ತಂದವ ಕಾಣೆ ॥
ಆದರೊಳ್ಳಿತು ಘೋರಾರಣ್ಯದೊಳಿಪ್ಪಂತ ।
ವ್ಯಾಧರ ಕೂಡಿ ಬಾಳಯ್ಯ ॥೯೧॥

ಕಾಂತೆ ಕೇಳಾರೊಂದು ವೃಷಭವ ಕಟ್ಟಿ ನೀಲಾ ।
ಕಾಂತೆಯ ತಂದವ ಕಾಣೆ ॥
ಅಂತಾದರೊಳ್ಳಿತು ಹೋರಾಟವನು ಮಾಡಿ ।
ಸಂತುಷ್ಟನಾಗು ಹೋಗಯ್ಯ ॥೯೨॥

ಕಮಲಕೋರಕಸನ್ನಿಭ ಕುಚಯುಗೆ ನಿನ್ನ ।
ರಮಣ ಕಾಣೆಲೆ ಮಂದಯಾನೆ ॥
ರಮಣನೆಂಬುದ ಕೇಳಿ ಕದವ ತೆಗೆದು ಮತ್ತೆ ।
ರಮಣಿಯು ಮಲಗಿರ್ದಳಾಗ ॥೯೩॥

**ಭಾಮಿನಿ**

ಲಲನೆ ಭಾಮಾದೇವಿ ಕಾಂತನ ।
ಲಲಿತ ವಾಕ್ಯವ ಕೇಳ್ದು ಮೌನವ ।
ತಳೆದು ಬಾಗಿಲ ತೆಗೆದು ಮೊಗವೀಕ್ಷಿಸದೆ ಮಂಚದಲಿ ॥
ಮಲಗಿರಲು ಕಾಣುತ್ತ ಕರುಣಾ ।
ಜಲಧಿ ಕೃಷ್ಣನು ಕಮಲನೇತ್ರೆಯ ।
ಬಳಿಗೆ ನಡೆ ತಂದಾಗ ನುಡಿದನು ಮಧುರವಚನದಲಿ ॥೯೪॥

**ರಾಗ ಸೌರಾಷ್ಟ್ರ ಅಷ್ಟತಾಳ**

ಯಾತಕೆನ್ನಲಿ ಮುನಿಸೀಗ ಮಾನಿನಿರನ್ನೆ । ಸತ್ಯಭಾವೆ ॥ ಸಂ ।
ಪ್ರೀತಿಯಿಂದಲಿ ಮಾತನಾಡೆನ್ನ ಮನದನ್ನೆ । ಸತ್ಯಭಾವೆ ॥೯೫॥

ಸೀತಾಂಶುವಕ್ತ್ರೆ ನಿನ್ನಯ ಮುದ್ದು ಮೊಗದೋರೆ । ಸತ್ಯಭಾವೆ ॥ ಪಂಕ ।
ಜಾತಾಕ್ಷಿ ಕರುಣ ಕಟಾಕ್ಷದಿಂದೀಕ್ಷಿಸು । ಸತ್ಯಭಾವೆ ॥೯೬॥

ಎಂದಿನಂತಿದಿರೆದ್ದು ಬರಲಿಲ್ಲ ವೇತಕೆ । ಸತ್ಯಭಾವೆ ॥ ಕಣ್ಣ ।
ಮುಂದೆ ನಿಂದರು ನೊಡದಿರ್ಪುದೊಳ್ಳಿತೆ ನೀರೆ । ಸತ್ಯಭಾವೆ ॥೯೭॥

ಇಂದೆನ್ನ ಮೇಲಿಷ್ಟು ಕೋಪವೇತಕೆ ಪೇಳೆ । ಸತ್ಯಭಾವೆ ॥ ಈಗ
ಎನ್ನಿಂದ ತಪ್ಪೇನೆ ನಿಧಾನಿಸು ಗುಣಶೀಲೆ । ಸತ್ಯಭಾವೆ ॥೯೮॥

ಮಲಿನವಸ್ತ್ರವನುಟ್ಟು ಭೂಷಣಂಗಳ ಬಿಟ್ಟು । ಸತ್ಯಭಾವೆ ॥ ನೀನು ।
ಮಲಗಿರ್ಪೆ ಮೌನದೊಳೇನಿದೇನಿದು ಗುಟ್ಟು । ಸತ್ಯಭಾವೆ ॥೯೯॥

ತಿಳಿವಂತೆ ಪೇಳೆನ್ನ ಕೂಡೆ ಮಾಜದೆ ಬೇಗ । ಸತ್ಯಭಾವೆ ॥ ನಾನು ।
ತಳುವದೆ ನೀ ಬೇಡಿದಿಷ್ಟವನೀವೆನು । ಸತ್ಯಭಾವೆ ॥೧೦೦॥

**ಕಂದ**

ಇನಿಯನ ನುಡಿಯಂ ಕೇಳ್ದಾ ।
ವನಿತಾಮಣಿ ಸತ್ಯಭಾವೆ ನೋಡದೆ ಮುಖಮಂ ॥
ಮುನಿಸಂದಾಳುತ ಪ್ರಿಯಕಾ ।
ಮಿನಿಯಂ ಕರೆದೆಂದಳೆಲ್ಲಮಂ ಭರದಿಂದಂ ॥೧೦೧॥

**ರಾಗ ಸಾರಂಗ ಅಷ್ಟತಾಳ**

ಯಾಕಿಲ್ಲಿಗಯ್ತಂದನಿವನು । ನೀರೆ ।
ನೀ ಕೇಳೆ ಬಂದ ಕಾರ್ಯವನು ॥
ಆ ಕನ್ನೆಗೆಣೆಯು ನಾನಲ್ಲವೆಂಬುದ ಕಂಡು ।
ಬೇಕಾದ ವಸ್ತುವನವಳಿಗೀಯದೆ ತಾನೆ ॥ ಯಾಕಿಲ್ಲಿ ॥೧೦೨॥

ಕಳವಿನಿಂದೋಡಿಬಂದವಳ । ಬಂಧು ।
ಗಳ ಮಾನವನು ತೆಗೆದವಳ ॥
ಇಳೆಯೊಳು ಖ್ಯಾತಿಯ ಪಡೆದ ಸಂಪನ್ನೆಯ ।
ಚೆಲುವೆಯ ಚಪಲೆಯ ನಿಲಯ ಬಿಟ್ಟಿಲ್ಲಿಗೆ ॥ ಯಾಕಿಲ್ಲಿ ॥೧೦೩॥

ಜಗಳವ ಗಂಟಿಕ್ಕುವವನು । ಬಂದು ।
ಮೊಗದಿಚ್ಛೆಯಾಡಿ ತಾನದನು ॥
ಮಿಗೆ ಕೇಳಿ ತನ್ನ ಕಾಂತೆಗೆ ಬೇಡಿದುದನಿತ್ತು ।
ಸೊಗಸಿನಿಂದಲಿರ್ದು ದುಗುಡವ ತೋರುತ್ತ ॥ ಯಾಕಿಲ್ಲಿ ॥೧೦೪॥

ವನರುಹನಯನೆ ಕೇಳಿದೆಯ । ಈತ ।
ನೆನುವ ಮಾತುಗಳ ಬನ್ನಣೆಯ ॥
ವನಿತೆಯರೊಳಗಾ ವನಿತೆಯುತ್ತಮವೆಂದು ।
ಮನವನಾಕೆಯಲಿಟ್ಟು ಮನೆಗೆ ತಾನಿಂದು ॥ ಯಾಕಿಲ್ಲಿ ॥೧೦೫॥

**ಕಂದ**

ಸತ್ರಾಜಿತರಾಯನ ವರ ।
ಪುತ್ರಿಯಳೆಂದ ಬಿರುನುಡಿಯನೆಲ್ಲವ ಕೇಳ್ದು ॥
ಪತ್ರೀಂದ್ರಧ್ವಜನಾಗಳ್ ।
ಚಿತ್ರದ ಪ್ರತಿಮೆಯೋಲ್ ನಿಂದು ಮೆಲ್ಲಗೆ ನುಡಿದಂ ॥೧೦೬॥

**ರಾಗ ಯರಕಲಕಾಂಭೋಜಿ ಅಷ್ಟತಾಳ**

ಸಿಟ್ಟುಮಾಡಲು ಬೇಡ ಸುಗುಣಸಂಪನ್ನೆ ।
ಪಟ್ಟದ ರಾಣಿ ಕೇಳ್ ಪರಮ ಕಲ್ಯಾಣಿ ॥ ಸಿಟ್ಟು ॥ ಪಲ್ಲವಿ ॥

ವನಜದಳಾಂಬಕಿ ನಿನ್ನ ಮಾತುಗಳೀಗ ।
ಮನಕೆ ಸಂಶಯವಾಗಿ ತೋರುತಲಿರುತಿದೆ ।
ವಿನಯದಿ ನೆಲೆಯ ಪೇಳು । ನೀನಲ್ಲದಿ । ನ್ನೆನಗಾರು ಪ್ರಿಯದವಳು ।
ಅನ್ಯಳಿಗಿತ್ತ । ಘವನಸ್ತುವೇನು ವಿಸ್ತರಿಸು ಶೀಘ್ರದೊಳು ॥ ಸಿಟ್ಟು ॥೧೦೭॥

ಆರ ಮಾತನು ಕೇಳಿ ನಡೆವಾತ ನಾನಲ್ಲ ।
ನೀರೆ ನೀನಾಡಿದ ಮಾತ ಮೀರುವನಲ್ಲ ।
ನಾರಿ ನಿನ್ನಿಷ್ಟವನು । ಪೇಳಲು ನಾನು । ಭೋರನೆ ನಿನಗೀವೆನು ।
ಕಾರುಣ್ಯವ । ತೋರಿ ಮಾತಾಡಿ ಮನ್ನಿಸೆ ಮತ್ತಗಜಯಾನೆ ॥೧೦೮॥

**ರಾಗ ಮಾರವಿ ಏಕತಾಳ**

ಬಿಡು ಬಿಡು ಬನ್ನಣೆ । ನುಡಿಗಳನೆನ್ನೊಳು । ನುಡಿವುದು ತರವಲ್ಲ ॥
ಕೊಡಲಿಲ್ಲವೆ ಕಿ । ತ್ತಡಿ ತಂದಲರನು । ಮಡದಿಗೆ ನಲಿನಲಿದು ॥೧೦೯॥

ಕಳವಿಲಿ ಬಂದಳ । ಕುಲವಧುವೆನುತಲಿ । ಕಲಹಾಳಿಗನು ನುಡಿಯೆ ॥
ಒಲಿದಾಕೆಗೆ ಮುನಿ । ಸುಲಲಿತ ವಾಕ್ಯಕೆ । ಸಲೆ ಮರುಳಾದೆಯಲ ॥೧೧೦॥

ನೀ ಕೇಳ್ದೆಯ ಸುರ । ಲೋಕದ ಕುಸುಮವ । ನಾಕೆಗೆ ಕೊಡುವಾಗ ॥
ಯಾಕಿನಿ ತೆಂಬೆ ವಿವೇಕದಿ ನಡೆ ನಡೆ । ಸಾಕುಪಚರ್ಯೆಗಳು ॥೧೧೧॥

**ಮಾಲಿನಿವೃತ್ತ**

ನಿನಗೆ ಸುಮನೊಂದಾನೀವುದದಾವ ಚಂದ ।
ಎನುತಮವಳಿಗಿತ್ತೆ ಕಮಲನೇತ್ರೆ ನೀ ಮತ್ತೆ ॥
ಮುನಿಯದಿರು ಸುವರ್ಣ ವೃಕ್ಷವ ತೋರ್ಪೆ ಪೂರ್ಣ ।
ಮನಕೆ ಹರುಷವದೋರಿ ಮನ್ನಿಸೆನ್ನನು ನಾರಿ ॥೧೧೨॥

**ರಾಗ ಶೃಂಗಾರಿ ಅಷ್ಟತಾಳ**

ಮನ್ನಿಸೆ ನಾರಿ ನೀನೊಲಿದೆನ್ನ । ಮನ್ನಿಸೆ ನಾರಿ ॥ ಪಲ್ಲವಿ ॥

ಮನ್ನಿಸೆ ನಾರಿ ವ । ಯ್ಯಾರಿ ಶೃಂಗಾರಿಣಿ ।
ಪನ್ನಗನಿಭವೇಣಿ । ಪಲ್ಲವಾರುಣಪಾಣಿ ॥ ಮನ್ನಿಸೆ ॥೧೧೩॥

ಜಲಜಲೋಚನೆ ಕೋ । ಕಿಲಗಾನೆ ಗಜಯಾನೆ ।
ಸಲೆ ಸುಪ್ರವೀಣೆ ನೀ । ಗೆಲವಿಂದಲೆನ್ನನು ॥ ಮನ್ನಿಸೆ ॥೧೧೪॥

ಇನಿತುಕಾರ್ಯಕೆ ನೀನು । ಮುನಿದೊಳ್ಳಿತೆ ವೃಕ್ಷ ।
ವನು ತೋರಿಸುವೆ ನಾನೆ । ಮನದಿ ಸಂತಸಗೊಂಡು ॥೧೧೫॥

ಮುನ್ನ ನಾನಲ್ಲಿರ್ದು । ದನ್ನು ನೀ ಕ್ಷಮಿಸು ಸಂ ।
ಪನ್ನೆ ಕೇಳ್ ನಿನ್ನ ಬಿ । ಟ್ಟಿನ್ನು ಪೋಗುವುದಿಲ್ಲ ॥ ಮನ್ನಿಸೆ ॥೧೧೬॥

**ರಾಗ ಸಾವೇರಿ ಏಕತಾಳ**

ಯೋಗಿ ತಂದ ಪೂವನೊಂದ । ತೋರದಿರುವಾ । ದಿವ್ಯಾ ।
ಮೋಘವಾದ ವೃಕ್ಷವೆಂದು । ತೋರುವೆನೀ ಕಾಂತ ॥೧೧೭॥

ಹೋಗದ ಊರಿಗೆ ದಾರಿ । ತೋರಿಸೆಯಲ್ಲ । ಕೈಯ ।
ಸಾಗದಂಥ ಕಾರ್ಯಮಾಳ್ಪೆ । ನೆಂದಾಡಿದೆಯಲ್ಲ ॥೧೧೮॥

ಆರಿಗೂ ಸಾಧ್ಯವಲ್ಲದ । ವಸ್ತುವನು ನೀನು । ಈಗ ।
ತೋರುವೆನೆಂದಾಡಿದುದ ನಿಜವೆಂದು ನಾನು ॥೧೧೯॥

ನೀರ ಕೇಳೊ ನಂಬಲಾರೆ । ಪುಸಿಯಾಡಬೇಡ । ನಿನ್ನ ।
ಚೋರವೃತ್ತಿಗಳ ಬಲ್ಲೆ । ಸಾಕು ನಡಿ ಗಾಢ ॥೧೨೦॥

**ರಾಗ ಭೈರವಿ ಅಷ್ಟತಾಳ**

ಮಾನಿನಿಮಣಿಯೆ ಬಾರೆ । ಈ ಕಾರ್ಯವಿ । ನ್ನೇನು ದೊಡ್ಡಿತು ವಯ್ಯಾರೆ ॥
ಏಣಾಕ್ಷಿ ನಿನಗನುಮಾನವೇತಕೆ ತೋರ್ಪೆ । ಸಾನುರಾಗದಿ ವೃಕ್ಷವ ॥೧೨೧॥

ಕುಟಿಲಕುಂತಳೆಯೆ ಕೇಳೆ | ನಾನೆಂದುದು | ಸಟೆಯಲ್ಲ ಸುಗುಣ ಶೀಲೆ ||
ದಿಟವೆಂದು ನಂಬು ಧೂರ್ಜಟಿಯಾಣೆ ತೋರುವೆ | ವಿಟ ಪ್ರಿಯೆ ಸದ್ಯದಲಿ ||೧೨೨||

ಕಾಂತೆ ಕೇಳ್ ಕೋಪವನು | ಮಾಡದೆ ದಯ | ವಾಂತು ಮತ್ಪ್ರಿಯೆ ನೀನು ||
ಸಂತೋಷದಿಂದೀಗ ಸಂತಯಿಸು | ಸೌಭಾಗ್ಯ | ವಂತೆ ಸಂತತವೆನ್ನನು ||೧೨೩||

**ಕಂದ**

ನಲ್ಲನ ವಚನನಾಲಿಸಿ |
ಮೆಲ್ಲನೆ ಪರಿಯಂಕದಿಂದಲಿಗಿಳಿದಾಗಳ್ ||
ಸೊಲ್ಲಿಸದುತ್ತರಮಂ ನಿಜ |
ನಲ್ಲನ ಮೃದುನುಡಿಗೆ ಸಿಲುಕಿ ಸಿಲುಕಿ ಲಜ್ಜಿಸಿ ನಿಂದಳ್ ||೧೨೪||

**ರಾಗ ಭೈರವಿ ಝಂಪೆತಾಳ**

ತಲೆವಾಗಿ ಲಜ್ಜೆಯೊಳು | ಲಲನೆಯಿರೆ ಕಾಣುತ್ತ |
ಜಲಜದಳಲೋಚನನು | ನಲವಿನಿಂದಾಗ ||೧೨೫||

ಬಾರೆಲೆಗೆ ಮತ್ಕಾಂತೆ | ಬಾರೆ ಸದ್ಗುಣವಂತೆ |
ಬಾರೆ ಬಾರೆಂದೆನುತ | ಭೂರಿ ಹರುಷದಲಿ ||೧೨೬||

ಮಡದಿರನ್ನೆಯ ತೋರ | ಮುಡಿಯ ನೇವರಿಸಿ ಮ |
ತ್ತೊಡನೆ ದಿವ್ಯಾಂಬರವ | ನುಡಿಸಿದನು ನಗುತ ||೧೨೭||

ವರ ಕಂಚುಕವ ತೊಡಿಸಿ | ಪರಿ ಪರಿಯ ಭೂಷಣವ |
ಕರುಣದಿಂ ತಾನೆ ಶೃಂ | ಗರಿಸಿದನು ಮುದದಿ ||೧೨೮||

ಮೃಗಮದವ ಪಣೆಗಿರಿಸಿ | ಬಗೆಬಗೆಯ ಲೇಪನವ |
ಸೊಗಸಿನಿಂ ಪೂಸಿದನು | ನಗಧರನು ಸತಿಗೆ ||೧೨೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತೆಸೆವ ಪೂಗೋಲಯ್ಯನು |
ಸಂತಸದಿ ಶೃಂಗರಿಸಿ ಮೋಹದ |
ಕಾಂತೆಯನು ಮನ್ನಿಸಿದನತಿ ಮುದ | ವಾಂತು ಬೇಗ ||೧೩೦||

ರಮಣನಡಿಗೊಂದಿಸಲು ಕಲ್ಪ |
ದ್ರುಮವ ತೋರ್ಪೆನೆನುತ್ತವಳ ಕರ |
ಕಮಲದಲಿ ನಿಜಕರವನಿರಿಸಿದ | ರಮಣಿಗೊಲಿದು ||೧೩೧||

ಮಂದಹಾಸದಿ ಕರವ ಪಿಡಿದರ ।
ವಿಂದವದನೆಯ ಸಜ್ಜೆಯೆಡೆಗೈ ।
ತಂದು ಸತಿಯೊಡನಿರ್ದ ಸುಖದಿ ಮು । ಕುಂದನಂದು ॥೧೩೨॥

**ಭಾಮಿನಿ**

ಧರಣಿಪತಿ ಕೇಳೊಂದು ದಿನ ಸಿರಿ ।
ಯರಸನೊಡ್ಡೋಲಗದೊಳೊಪ್ಪಿರೆ ।
ಸುರಪತಿಯು ನಡೆತಂದು ಕಂಡನು ತತ್ಪದಾಂಬುಜವ ॥
ಮುರನರಕರಿಂದಾದ ತನ್ನಯ ।
ಪರಿಭವವನೆಲ್ಲವನು ಪಾವನ ।
ಚರಿತನಿಗೆ ಬಿನ್ನೈಸಿದನು ತಲೆವಾಗಿ ದುಗುಡದಲಿ ॥೧೩೩॥

**ರಾಗ ಕಾಂಭೋಜಿ ಝುಂಪೆತಾಳ**

ಕರಣಾಳುಗಳ ದೇವ ಶರಣಸಂಜೀವ ಗುಣ ।
ಭರಿತ ಚಿತ್ತಯಿಸು ಬಿನ್ನಪವ ॥
ಧರಣಿಯಾತ್ಮಜನಾದ ದುರುಳ ನರಕಾಸುರನು ।
ಸುರಲೋಕವನು ಸೂರೆಗೊಂಡ ॥೧೩೪॥

ಪೇಳಲಹಿಪತಿಗರಿದು ಖೂಳನುಪಟಳವ ಸುರ ।
ಜಾಲವನು ಸೆರೆವಿಡಿದನಮರ ॥
ಬಾಲೆಯರಿಗಾದುದವ ನಾಲಯದಿ ದಾಸಿಯರ ।
ಮೇಳದೊಳು ತೊತ್ತುಗೆಲಸಗಳು ॥೧೩೫॥

ಲಲಿತ ಮಣಿಶೈಲವನು ಜಲಧಿಪನ ಚಕ್ರಪಿಂ ।
ಗಲ ದೃಶಾನದಿಯ ಧಿಗಧಿಪರ ॥
ಬಲು ಭಾಗ್ಯಗಳನೆಲ್ಲ ಸೆಳೆದು ಕೊಂಡೊಯ್ದು ನಿಜ ।
ನಿಳಯದೆಡೆಗತಿ ಶೌರ್ಯದಿಂದ ॥೧೩೬॥

ನುಡಿಯಲಿನ್ನೇನು ಜಗದೊಡೆಯ ಚಿತ್ತವಿಸೆನ್ನ ।
ಪಡೆದವಳ ಕುಂಡಲದ್ವಯವ ॥
ಬಿಡದೊಯ್ದನಸುರ ಸದೆಬಡಿದು ದಿವಿಜರನೆಲ್ಲ ।
ಕಡುಪರಾಕ್ರಮದಿಂದ ಪುರಕೆ ॥೧೩೭॥

ಅರಿದು ತನಗಾ ದನುಜಪುರವನದನೀಕ್ಷಿಪಡೆ ।
ಮುರುಪಾಶದಿಂದ । ಜಲದಿಂದ ॥

ಉರಿವ ಪಾವಕದಿಂದಲುರುಶಸ್ತ್ರದಿಂ ಭಯಂ।
ಕರವಾಗಿ ದುರ್ಗವೆಸದಿಹುದು ॥೧೩೮॥

ಪೊಗಲರಿದು ದಾನವನ ನಗರವನು ಮುರನೆಂಬ।
ವಿಗಡ ರಕ್ಕಸನ ಭಯದಿಂದ ॥
ಜಗವೆಲ್ಲ ಖಲರೊಲಿಸಿ ಬಾಳು ವಂದದೊಳಾಯ್ತು।
ಮಿಗೆ ಪೇಳ್ವುದೇನು ಪರಿಭವವ ॥೧೩೯॥

ಈಕ್ಷಿಸೈ ಕರುಣದೊಳುಪೇಕ್ಷೆಯಂ ಮಾಡದೆ ತ।
ರಕ್ಷುಚರ್ಮಾಂಬರನ ಮಿತ್ರ ॥
ಪಕ್ಷಿವಾಹನ ಪಂಕಜಾಕ್ಷ ನೀನೊಲಿದೆಮ್ಮ।
ರಕ್ಷಿಸೆಂದೆರಗಿದನು ಪದಕೆ ॥೧೪೦॥

**ಕಂದ**

ಚರಣಾಂಬುಜಯುಗಕೆರಗಿದ।
ಸುರಪನ ಪಿಡಿದೆತ್ತಿ ಪಂಚಬಾಣನ ಜನಕಂ ॥
ಬರಸೆಳೆದಾಲಿಂಗಿಸಿ ಮಿಗೆ।
ಪರಮಪ್ರೀತಿಯೊಳು ಪೇಳ್ದನತಿ ದಯೆಯಿಂದಂ ॥೧೪೧॥

**ಕಂದ**

ಶ್ರೀವನಿತೆಯ ಮನದನ್ನಂ।
ಭಾವಜಪಿತನಮರವೃಂದವಂದಿತ ಚರಣಂ ॥
ದೇವಕಿಯಣುಗಂ ಘನ ಶೋ।
ಭಾವಹ ನಮಗೀಗೆ ನಿತ್ಯಮಾನಂದಗಳಂ ॥ ॥೧॥

ಬುಡಕಡೆಯಿಂದಂ ವಾಚಿಸಿ।
ದೊಡೆ ಸಮವೆನಿಪುದದು ವರ್ಣದೊಳೆ ಶೋಭಿಸುವಂ ॥
ಕಡುಬೆಡಗಿನ ರೂಪಂ ಜಗ।
ದೊಡೆಯಂ ಕೊಡು ನಮಗೆ ನಿತ್ಯತಿಸಂಪದಮಂ ॥೨॥

ಇಂದಿರೆ ಸುರನರಪನ್ನಗ।
ವಂದಿತ ಪದ ವಿಶ್ವಮಾತೆ ಹರಿಯರಸಿಯೆ ನೀಂ ॥
ಕುಂದದೆ ಸಂತಸವೆನ್ನಯ।
ಮಂದಿರದೊಳು ವಾಸವಾಗಿ ಪೊರೆ ಸಂತಸದಿಂ ॥೩॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಗಜವದನ ಗಿರುವರಸುತಾತ್ಮಜ । ತ್ರಿಜಗಪಾಲ ಗುಹಾಗ್ರಜ ॥
ಅಸುರಾರ್ಚಿತಚರಣಸರಸಿಜ ।
ಭಜಕಸಂಕುಲಸುರಕುಜ ॥ ಶರಣು ಶರಣು ॥೪॥

ಬಾಲಭಾಸ್ಕರಕೋಟಿಭಾಸುರ । ಸ್ಥೂಲಕಂದರ ಶುಭಕರ ॥
ಕಾಲಕರ್ಮ ವಿದೂರ ಸುರುಚಿರ ।
ಲೋಲ ವರ ಲಂಬೋದರ ॥ ಶರಣು ಶರಣು ॥೫॥

ಪರಶು ಪಾಶಾಂಕುಶ ಸುಮೋದಕ। ಧರಮಹೇಶ್ವರ ಬಾಲಕ ॥
ಉರಗ ಭೂಷಣ ಸಿದ್ಧಿವಿನಾಯಕ ।
ವರದ ಶ್ರೀಗಣನಾಯಕ ॥ ಶರಣು ಶರಣು ॥೬॥

**ರಾಗ ಸೌರಾಷ್ಟ್ರ ಅಷ್ಟತಾಳ**

ಉರಗಕುಂಡಲ ಚಂದ್ರಧರ ಸೂರ್ಯಸಂಕಾಶ । ಪಾಹಿ ಶಂಭೋ ।
ಶರ ಜನ್ಮಜನಕ ಶಂಕರ ಸರ್ವಭೂತೇಶ । ಪಾಹಿ ಶಂಭೋ ॥
ದುರಿತಸಂಕುಲನಾಶ ಗಿರಿಶ ಪಾವನವೇಷ । ಪಾಹಿ ಶಂಭೋ ।
ಕರಿನಕ್ತಂಚರ ಸಂಹಾರಣ ಶಿವ ಗೌರೀಶ । ಪಾಹಿ ಶಂಭೋ ॥೭॥

**ರಾಗ ಸಾಂಗತ್ಯ ರೂಪಕತಾಳ**

ವರದೆ ಶಂಕರಿ ಪುಣ್ಯಚರಿತೆ ಕೋಮಲಗಾತ್ರೆ । ಹರಿಣಲೋಚನೆ ಚಂದ್ರ ವಕ್ತ್ರೆ ॥
ತರುಣಾರ್ಕಕೋಟಿಭಾಸುರೆ ಲಂಬೋದರಮಾತೆ । ಗಿರಿಜಾತೆ ಲೋಕ ವಿಖ್ಯಾತೆ ॥೮॥

ನೀಲಕುಂತಳೆ ಗೀತಾಲೋಲೆ ಮಂಗಲೆ ಭಕ್ತ । ಪಾಲೆ ನಿರ್ಜರವಂದ್ಯಚರಣೆ ॥
ಪಾಲಲೋಚನಪ್ರೀತೆ ಬಾಲೇಂದುಧರೆ ದೈತ್ಯ । ಜಾಲಸಂಹರೆ ರತ್ನಾಭರಣೆ ॥೯॥

ಸಾರಸೋಪಮಪಾಣಿ ಕ್ಷೀರಭಾಷಿಣಿಮೊಗ । ದೋರೆ ಪಾರ್ವತಿ ಜಗದಂಬೆ ॥
ವಾರಿಜೋದ್ಭವವಂದ್ಯೆ ವಾರಿಧಿ ಗಂಭೀರೆ । ಗೌರಿ ನೀ ಸಲಹೆ ಮೂಕಾಂಬೆ ॥೧೦॥

**ರಾಗ ಶಂಕರಾಭರಣ ರೂಪಕತಾಳ**

ದಿನಪಭಾಸ ದೀನಪೋಷ । ವನರುಹಾಸನ ।
ಸನಕಮುಖ್ಯ ಸಕಲ ಯೋಗಿ । ವಿನುತತೋಷಣ ॥
ವನಧಿಶಯನತನಯ ವಿಶ್ವ । ಜನಸುರಕ್ಷಣ
ಎನಗಭೀಷ್ಟವೀಯೊ ದ್ರುಹಿಣ । ಕನಕಭೂಷಣ ॥೧೧॥

**ಕಂದ**

ಶಾರದೆ ನಾನಾ ಶಾಸ್ತ್ರ ವಿ ।
ಶಾರದೆ ಪರಮೇಷ್ಠಿ ವನಿತೆ ವೀಣಾಪಾಣೀ ॥
ಕಾರುಣ್ಯದೊಳೆನಗನಿಶಂ ।
ಭೋರನೆ ಸನ್ಮತಿಯನಿತ್ತು ರಕ್ಷಿಸು ಮುದದಿಂ ॥೧॥

**ಭಾಮಿನಿ**

ಪರಮಪುರುಷನೆ ಪಾಪನಾಶನೆ ।
ದುರಿತನಿಡಬಿಧ್ವಾಂತಸೂರ್ಯನೆ ।
ಸುರನರೋರಗಲೋಕವಿನುತನೆ ಪರಮಪಾವನನೆ ॥
ನಿರುಪಮಾಂಗನೆ ನಿಷ್ಕಳಂಕನೆ ।
ಶರಣಜನಪರಿಪಾಲಶೀಲನೆ ।
ಗುರುವರನೆ ನೀನೊಲಿದು ಪಾಲಿಪುದೆನಗೆ ಸನ್ಮತಿಯ ॥೨॥

**ದ್ವಿಪದಿ**

ಪರಮಋಷಿ ವ್ಯಾಸರಿಗೆ ನಮಿಸಿ ಶುಕಮುನಿಯ ।
ಚರಣಾಬ್ಜ ಯುಗಕೆರಗಿ ಪಡೆವೆ ಸನ್ಮತಿಯ ॥೩॥

ಅನಿಮಿಷರ್ಗೆರಗಿ ಕವಿಗಳ ಪದಕೆ ಮಣಿದು ॥
ಮುನಿಗಳಿಗೆ ಶೇಷಾಧಿಪತಿಗೆ ಕೈಮುಗಿದು ॥೪॥

ವರಮಹಾಭಾಗವತ ಪೌರಾಣದೊಳಗೆ ।
ಸಿರಿಯರಸನಿಂದ್ರನುಪವನದಿಂದ ಧರೆಗೆ ॥೫॥

ಪಾರಿಜಾತವ ತಂದು ರಂಜಿಸಿದ ಕಥೆಯ ।
ಸಾರವನು ಕುಟಜಾದ್ರಿಸದನವಾಸಿನಿಯ ॥೬॥

ಕೃಪೆಯಿಂದ ಪೇಳ್ವೆನಾ ಯಕ್ಷಗಾನದಲಿ ।
ವಿಪುಳ ಮತಿಯುತರಿದನು ಕೇಳಿ ಲಾಲಿಸಲಿ ॥೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶಶಿಕುಲೋದ್ಭವ ವರ ಪರೀಕ್ಷಿತ ।
ವಸುಮತೀಶನು ಶುಕಮುನೀಂದ್ರನ ।
ಬಿಸಜಚರಣಕೆ ನಮಿಸಿ ಕೇಳ್ದನು ।
ಕುಶಲದಿಂದ ॥೮॥

ಅವಧರಿಸು ಮುನಿವರನೆ ಲಕ್ಷ್ಮೀ |
ಧವನು ತಂದನದೇನು ಕಾರಣ |
ದಿವಿಜಲೋಕದ ಪಾರಿಜಾತವ | ಭುವಿಗೆ ಮುದದಿ ||೨೦||

ಎನಗೆ ನೀವಿಂದರುಹಬೇಕೆನೆ |
ವನಜನಾಭನ ದಿವ್ಯಮಹಿಮೆಯ |
ವಿನಯದಿಂದಲೆ ಪೇಳತೊಡಗಿದ | ಮುನಿಪನಂದು ||೨೧||

**ರಾಗ ಭೈರವಿ ಝಂಪೆತಾಳ**

ಧಾರಿಣೀಪತಿ ಕೇಳು | ದ್ವಾರಕಾನಗರದಲಿ |
ಶ್ರೀರಮಣನಿರ್ದನತಿ | ಭೂರಿ ಭಾಗ್ಯದಲಿ ||೨೨||

ಭುವನಕತಿಶಯವೆನಿಪ | ನವರತ್ನ ಭವನದಲಿ |
ಯುವತಿ ರುಗ್ಮಿಣಿ ಸಹಿತ | ತವೆ ಹರುಷದಿಂದ ||೨೩||

ವರಸಿಂಹವಿಷ್ಟರದಿ | ಸ್ಮರಜನಕನೊಪ್ಪಿರಲು |
ಸುರನರೋರಗರು ಭೂ | ಸುರರು ಸಜ್ಜನರು ||೨೪||

ಋಷಿವರರು ಯೋಗಿಗಳು | ವಸುಮತೀಶರು ಭಕ್ತಿ |
ರಸದೊಳಿರ್ದರು ನೆರೆದು | ನೊಸಲ ಕೈಗಳಲಿ ||೨೫||

ನಾನಾ ಸುವಾದ್ಯರವ | ಗಾನ ನೃತ್ಯಗಳಿಂದ |
ಶ್ರೀನಾರಿಯರಸನಾ | ಸ್ಥಾನ ರಂಜಿಸಿತು ||೨೬||

ವಂದಿಘೋಷದಿ ಸಕಲ | ಬಂಧುವರ್ಗವು ಸಹಿತ |
ನಂದನಂದನನು ನಲ | ವಿಂದಲಿರುತಿರ್ದ ||೨೭||

**ಕಂದ**

ಇಂತತಿ ವಿಭವದಿ ಲಕ್ಷ್ಮೀ |
ಕಾಂತಂ ಮಿಗೆ ರಂಜಿಸುತ್ತಲಿರಲೊಂದು ದಿನಂ ||
ಸಂತಸದಿಂದಲಿ ಸದ್ಗುಣ |
ವಂತಂ ಮುನಿ ನಾರದಾಂಕ ತಾನಯ್ತಂದಂ ||೨೮||

**ರಾಗ ಸಾಂಗತ್ಯ ರೂಪಕತಾಳ**

ಸುರಪನಾನೆಯು ಬಹ ಪರಿಯಂತೆ ರವಿಯಂತೆ |
ಸುರಲೋಕದಿಂದ ನಾರದನು ||

ಹರಿಯ ನಾಮವ ಸಪ್ತಸ್ವರದಿಂದ ಮುದದಿಂದ ।
ಸ್ಮರಿಸುತ ಬರೆ ಯೋಗೀಶ್ವರನು ॥೧೯॥

**ರಾಗ ಕೇದಾರಗೌಳ ಅಷ್ಟತಾಳ**

ನಾರದಮುನಿಪನ ಕಾಣುತ್ತ ಕರುಣಾಳು ।
ಭೂರಿ ಸಂತೋಷದಲಿ ॥
ಭೋರನಿದಿರ್ಗೊಂಡು ಕರೆತಂದು ಪೀಠವ ।
ನೇರಿಸಿ ವಿನಯದಲಿ ॥೨೦॥

ಚರಣಾವಿಂದವ ತೊಳೆದು ತಜ್ಜಲವನ್ನು ।
ಶಿರದೊಳು ಧರಿಸಿದನು ॥
ಪರಿಪರಿ ವಿಧದಿಂದ ಪೂಜಿಸಿ ಭಕ್ತಿಯೊ ।
ಳೆರಗಿದ ಮುರಹರನು ॥೨೧॥

ಎತ್ತಣಿಂದಿಲ್ಲಿಗೆ ಬಂದಿರಿ ಲೋಕದ ।
ವೃತ್ತಾಂತವೇನದನು ॥
ಬಿತ್ತರಿಸೆಂದತಿ ನಮ್ರತೆಯಿಂದ ಪುರು ।
ಷೋತ್ತಮ ಕೇಳಿದನು ॥೨೨॥

**ಭಾಮಿನಿ**

ಧರೆಯ ಭಾರವ ಕಳೆಯಲೆನುತವ ।
ತರಿಸಿ ನರನಾಟಕದಿ ರಂಜಿಪ ।
ಪರಮಪುರುಷನೆ ಪದ್ಮನಾಭನೆ ವಿಶ್ವವಂದಿತನೆ ॥
ಅರಿಯದವನಂತೆನ್ನ ಕೇಳುವೆ ।
ಬರಿದೆ ನೀನ್ಯಾಕೆನುತ ಕೋಮಲ ।
ತರದ ನಿರುಪಮ ಪಾರಿಜಾತವನಿತ್ತನಾ ಮುನಿಪ ॥೨೩॥

**ರಾಗ ಕೇದಾರಗೌಳ ಅಷ್ಟತಾಳ**

ನಾರದಮುನಿನಾಥ ಕೇಳಯ್ಯ ನೀನಿತ್ತ ।
ಪಾರಿಜಾತದ ಪುಷ್ಪವು ॥
ಆರಿಗೆ ಯೋಗ್ಯವಿದೆಲ್ಲಿಂದ ಬಂತೆಂದು ।
ವಾರಿಜಾಕ್ಷನು ಕೇಳಿದ ॥೨೪॥

ಸರಸಿಜೋದ್ಭವಮುಖ್ಯ ದಿವಿಜವಂದಿತ ಕೇಳು ।
ಸುರಲೋಕದಿಂದ ನಾನು ॥

ಬರುತ ತಂದೆನು ಪುಷ್ಪವಿದು ಯೋಗ್ಯ ನಿ ।
ನ್ನರಸಿ ರುಗ್ಮಿಣಿಗೆಂದನು ॥೩೫॥

ಮುನಿಕುಲೇಂದ್ರನೆ ಕೇಳೀ ಕುಸುಮವ ಮುಡಿವಂಥ ।
ವನಿತೆಯರ್ಗೇನಹುದು ॥
ವಿನಯದಿಂದೆನಗೀಗ ಪೇಳಬೇಕೆನುತಲಿ ।
ದನುಜಾರಿ ಬೆಸಗೊಂಡನು ॥೩೬॥

ಬಿಡದನುದಿನದೊಳೀ ಕುಸುಮವ ಮುಡಿಯಲು ।
ಪಡೆವರು ಪುತ್ರರನು ॥
ಪೊಡವಿಯೊಳ್ ಸೌಭಾಗ್ಯದಿಂದ ಬಾಳುವರೆಂದು ।
ನುಡಿದನು ಮುನಿನಾಥನು ॥೩೭॥

**ರಾಗ ಮಧುಮಾಧವಿ ತ್ರಿವುಡೆತಾಳ**

ಮುನಿಪನೆಂದುದ ಕೇಳಿ ಕುಸುಮವ ।
ಮನದಿ ಸಂತಸಗೊಂಡು ತನ್ನಯ ।
ವನಿತೆರನ್ನೆಯ ಮುಡಿಗೆ ಮುಡಿಸಿದ ।
ವನಜನಾಭನು ನಗುತಲೆ । ಚಂದದಿಂದ ॥೩೮॥

ಭ್ರಮರಕುಂತಳೆ ಯುವತಿ ರುಗ್ಮಿಣಿ ।
ವಿಮಲ ಕುಸುಮವ ಮುಡಿದು ತನ್ನಯ ।
ರಮಣನಡಿಗೆರಗುತ್ತ ಮುನಿಪಗೆ ।
ನಮಿಸಿ ಹರುಷದೊಳಿರ್ದಳು । ಸಾರಸಾಕ್ಷಿ ॥೩೯॥

ಅ ಸಮಯದೊಳು ನಾರದನು ಜಗ ।
ದೀಶನಂಘ್ರಿದ್ವಯಕೆ ವಂದಿಸಿ ।
ವಾಸವನ ಪುರಕಯ್ದಿದನು ಪರಿ ।
ತೋಷದಿಂದಲಿ ನುತಿಸುತ । ಹರಿಸ್ಮರಣೆಯ ॥೪೦॥

**ಕಂದ**

ಸುರಮುನಿನಾಥಂ ಪೋಗಲ್ ।
ಹರಿಯೋಲಗದಿಂದ ದೂತಿಯೋರ್ವಳ್ ಭರದಿಂ ॥
ತೆರಳುತ ರಾಜಿಪ ಮಣಿಮಂ ।
ದಿರವಂ ಪೊಕ್ಕೊಡನೆ ಸತ್ಯಭಾಮೆಯೊಳೊರೆದಳ್ ॥೪೧॥

**ರಾಗ ಶಂಕರಾಭರಣ ಏಕತಾಳ**

ನೀರೆ ಕೇಳೆ ಸತ್ಯಭಾಮೆ । ನಾರದನಿಲ್ಲಿಗೆ ಬಂದು ।
ವಾರಿಜಾಕ್ಷಗಿತ್ತನೊಂದು । ಪಾರಿಜಾತವ ॥೪೨॥

ನಾರಿ ವೈದರ್ಭಿಗಲ್ಲದಿ । ನ್ಯಾರಿಗು ಯೋಗ್ಯವಲ್ಲೆಂದು ।
ನಾರದನೆಂದ ಕೇಳಮ್ಮ । ಸಾರಸನೇತ್ರೆ ॥೪೩॥

ಮುನಿಪನೆಂದ ಮಾತ ಕೇಳಿ । ವನಿತೆ ರುಗ್ಮಿಣಿಗೆ ಬೇಗ ।
ವಿನಯದಿಂದ ತಾನೆ ಮುಡಿಸಿ । ದನು ನಿನ್ನ ಕಾಂತ ॥೪೪॥

**ರಾಗ ಮೋಹನ ಏಕತಾಳ**

ಕಂಡು ಬಂದೆಯೊ ನೀನು । ಕಾಣದೆ ಪೇಳ್ವೆಯೊ ।
ಪುಂಡರಿಕಾಂಬಕಿ ಪುಸಿಯಾಡಬೇಡ ॥ ಕಂಡು ॥೪೫॥

ರಮಣಗೆನ್ನಯ ಮೇಲೆ । ಮಮತೆಯುಂಟೆಲೆ ಬಾಲೆ ।
ಭ್ರಮರಕುಂತಳೆ ಬಾರೆ ನೀರೆ ಗಂಭೀರೆ ॥ ಕಂಡು ॥೪೬॥

ಅಮರಲೋಕದ ಪೂವ । ರಮೆಗಿತ್ತುದಹುದೆ
ಸುಮವೆಂತು ರಂಜಿಪುದು । ಪೇಳೆ ನಿಜವಾಗಿ ॥ ಕಂಡು ॥೪೭॥

**ರಾಗ ಕೇದಾರಗೌಳ ಝಂಪೆತಾಳ**

ಪೇಳಿದೆನು ನೋಡಿದುದನು । ಪುಸಿಯಲ್ಲ ।
ಕೇಳದರ ಚೆಲ್ವಿಕೆಯನು ॥
ಭೂಲೋಕದೊಳು ತೋರುವ । ಸುಮಗಳೊಳು ।
ಹೋಲಿಕೆಯ ಕಾಣೆನವ್ವ ॥೪೮॥

ಬಿಳಿದಾಗಿ ಶೋಭಿಸುವುದು । ವಿದ್ರುಮವ ।
ಪಳಿದು ತೊಟ್ಟೆಸೆವುತಿಹುದು ॥
ಲಲಿತವಾಗಿಹುದು ಕೇಳೆ । ಬಹಳ ಪ್ರ ।
ಜ್ವಲಿಸುತ್ತಲಿಹುದು ಬಾಲೆ ॥೪೯॥

ಪರಿಮಳವು ಕುಂದದಂತೆ । ನಿರತವಾ ।
ಸುರಕುಸುಮ ಕುಂದದಂತೆ ॥
ಧರಣಿಯೊಳಿಗಿರ್ಪ ಕಾಂತೆ । ಯರು ಮುಡಿಯೆ ।
ವರಕಾಮ್ಯವಾಹುದಂತೆ ॥೫೦॥

ಇಂತೆಂದು ಸತಿ ನುಡಿಯಲು । ಕೇಳುತ್ತ ।
ಕಾಂತೆ ತಾನತಿಭರದೊಳು ॥

ಚಿಂತಿಸುತ ಲಲನೆಯರೊಳು । ನಡೆದ ವೃ ।
ತ್ತಾಂತಮಂ ಮಿಗೆ ಪೇಳ್ದಳು ॥೫೧॥

**ರಾಗ ಭೈರವಿ ಝಂಪೆತಾಳ**

ವನಿತೆಯರು ಕೇಳಿದಿರಿ । ಮುನಿಯಿತ್ತ ಪೂವ ರು ।
ಗ್ಮಿಣಿಗೆ ಕೊಡ ಬಹುದೆ ವಂ । ಚನೆಯೆಸಗುತೆಮಗೆ ॥೫೨॥

ನಾರದನ ನುಡಿ ಕೇಳಿ । ನೀರಜಾಂಬಕನೆನಗೆ ।
ತೋರದಿರಬಹುದೆ ಸುರ । ಪಾರಿಜಾತವನು ॥೫೩॥

ಮಡದಿಯರುಗಳನೊಡಂಬಡಿಸದೇ ವ್ಯಾಜದಲಿ ।
ಕೊಡಬಹುದೆ ರುಗ್ಮಿಣಿಗೆ । ಕಡು ಚೆಲ್ವ ಸುಮವ ॥೫೪॥

ಹೆಂಡಿರೆಲ್ಲರನು ಸಮ । ಕಂಡು ನಡೆಸದೆ ಹೀಗೆ ।
ಪುಂಡುತನವೇಕೆ ಕರ । ದಂಡನಾಭನಿಗೆ ॥೫೫॥

ಅವಳು ಹೆಚ್ಚೇನು ಮಿ । ಕ್ಕವರಲ್ಲಿ ಕುಂದೇನು ।
ಧವಗಿನಿತು ಬುದ್ಧಿ ಸಂ । ಭವಿಸಿತಿಂದಿನಲಿ ॥೫೬॥

**ವಚನ**

ಇಂತೆಂದು ಸತ್ಯಾಂಗನೆಯು ಮತ್ತೋರ್ವ ಸಖಿಯೊಡನೆ ಪೇಳ್ದಳದೆಂತೆನೆ -

**ರಾಗ ಭೈರವಿ ರೂಪಕತಾಳ**

ಏನ ಮಾಡಲಿ ಯುವತಿ । ಇನಿಯಗಿಲ್ಲವೆ ನೀತಿ ।
ಆ ನಾರಿಯೊಳು ಪ್ರೀತಿ । ಅಧಿಕ ಕೇಳ್ ಸುದತಿ ॥೫೭॥

ಕಲಹಾಳಿಗನು ಬಂದು । ಕಪಟಕೃತ್ಯದೊಳಿಂದು ।
ನಳಿನಾಕ್ಷನಿಗೆ ತಾನೇ । ನುಸಿರಿದನೊ ಕಾಣೆ ॥೫೮॥

ಲಲನೆ ರುಗ್ಮಿಣಿಯೆಂಬ । ಳವಳ ಮಾಯಕ ತುಂಬ ।
ತಿಳಿಯಬಾರದು ನೀರೆ । ತರಳಾಕ್ಷಿ ಬಾರೆ ॥೫೯॥

ಎಂದು ಇಲ್ಲದ ನಡತೆ । ಯಾರಿದೇತಕೆ ಬಂತೆ ।
ಒಂದೆ ವಾಸರವೆನ್ನ । ವಂಚಿಸ ಮುನ್ನ ॥೬೦॥

ಮುಂದುಗಾಣದೆ ನಾನೆ । ಮೋಸಹೋದೆನು ಜಾಣೆ ।
ಸಿಂಧೂರಯಾನೆ ಎ । ನ್ನಿಂದ ತಪ್ಪೇನೆ ॥೬೧॥

ಕಾಂತಗೆನ್ನೊಳು ಬಾಲೆ | ಕರುಣವಿಲ್ಲದ ಮೇಲೆ |
ಎಂತು ಸೈರಿಸಲಿ ಮ | ತ್ತೆಂತು ಜೀವಿಸಲಿ ||೬೨||

ಕಂತುಯೆಂಬವ ತಾನು | ಕಾಲನಂದದೊಳಿಹನು |
ಇಂತಾದ ಬಳಿಕ ಕೇಳ್ | ಕಾಂತೆ ತಾನೇಕೆ ||೬೩||

**ವಚನ**

ಇಂತೆನುತ ಭಾಮಾದೇವಿ ನುಡಿಯಲಾ ಮಾತಿಗೆ ದೂತಿ ಸಂತವಿಟ್ಟಳದೆಂತೆನೆ -

**ರಾಗ ಕಾಂಭೋಜಿ ಏಕತಾಳ**

ಚಿಂತಿಸಬೇಡವೆ ಭಾಗ್ಯ | ವಂತೆ ಮಂದಯಾನೆ ||
ಕಾಂತ ತಾನೆ ಬಂದು ನಿನ್ನ | ಸಂತವಿಸುವ ಕಾಣೆ ||೬೪||

ಮುನಿಯ ಮಾತ ಮೀರಬಾರ | ದೆನುತ ಲಿಂದು ಬಾಲೆ ||
ವನಜಾಭನಿತ್ತರೇನೆ | ಪ್ರೀತಿ ನಿನ್ನ ಮೇಲೆ ||೬೫||

ಮುನಿವದುಂಟೆ ಮಾತಿದೇಕೆ | ಮಂಗಲಾಂಗಿ ಕೇಳೆ ||
ನಿನಗೆ ತಿಳಿಯದೇನೆ ನೀತಿ | ವಂತೆ ಗಾನಲೋಲೆ ||೬೬||

**ರಾಗ ಆನಂದಭೈರವಿ ಏಕತಾಳ**

ಇಂತಾಡಲೇಕೆನ್ನ ಮನೆಗೆ | ಕಾಂತ ಬಾರದಿರಲು ನಿನಗೆ |
ನೀತಿಯೆ | ಕೇಳು | ದೂತಿಯೆ ||೬೭||

ಹಿರಿಯ ಕಾಂತೆಯೆಂದು ತಾನೆ | ಹರುಷದಿಂದ ಲಿಹನು ಕಾಣೆ |
ಕೇಳಮ್ಮ | ತಿಳಿದು | ಹೇಳಮ್ಮ ||೬೮||

ಆತಗೆನ್ನ ಮೇಲೆ ಯಿಂತು | ಪ್ರೀತಿಯಿಲ್ಲದಿರಲಿನ್ನೆಂತು |
ತಾಳಲಿ | ಹೇಗೆ | ಬಾಳಲಿ ||೬೯||

**ದ್ವಿಪದಿ**

ಇಂತು ಭಾಮಾದೇವಿ ಕಾಂತೆಯೊಳು ಪೇಳ್ದು |
ಎಂತು ಜೀವಿಪೆನೆಂದು ಚಿಂತೆಯನು ತಾಳ್ದು ||೭೦||

ಕರಗಿದಳು ಕಣ್ಣೀರ ಸುರಿದು ಬಿಸುಸುಯ್ದು |
ಮರುಗಿದಳು ವಾಗ್ದೇವಿಯರಸನನು ಬಯ್ದು ||೭೧||

ಉಣ್ಣದಾದಳು ಉಡಳು ಬಣ್ಣ ಬಿಳಿದುಗಳ ।
ಖಿನ್ನಳಾಗುತ ತೊಡಳು ರತ್ನ ಚಿನ್ನಗಳ ॥೭೨॥

ಹರಣವನು ತಾನಿಂದು ತೊರೆವೆನುತಾಗ ।
ಭರದಿ ಚಿಂತಾಗೃಹಕೆ ಪರಿ ತಂದು ಬೇಗ ॥೭೩॥

ಬಲಿದು ಕದವನು ಮಂಚದಲಿ ಪವಡಿಸಿದಳು ।
ಹಲುಬಿದಳು ಭಾಮಿನಿಯು ಹಲವು ರೀತಿಯೊಳು ॥೭೪॥

**ಕಂದ**

ಇಂತಾ ಭಾಮೆಯು ದುಃಖವ ।
ನಾಂತಿರೆ ಕಂಡು ಸಖಿಯೋರ್ವಳತಿಚಚ್ಚರದಿಂ ॥
ಕಂತುಪಿತನ ಸನ್ನಿಧಿಗಂ ।
ಚಿಂತಿಸುತಲೆ ಬಂದು ಪೇಳ್ದಳೊಯ್ಯನೆ ಹದನಂ ॥೭೫॥

**ರಾಗ ಮಧುಮಾಧವಿ ಏಕತಾಳ**

ಸ್ವಾಮಿ ಕೇಳೆನ್ನ ಬಿನ್ನಪವ ಕರುಣದಲಿ ।
ಭಾಮಾದೇವಿಗೆ ತಾಪ ಬಹಳವಿಂದಿನಲಿ ॥
ಈ ಮಾತು ಪುಸಿಯಲ್ಲ ಸಹಜವಾಕೆಯಲಿ ।
ಪ್ರೇಮವುಳ್ಳಡೆ ಬಂದು ನೋಡು ವೇಗದಲಿ ॥೭೬॥

ನೋಡಳಾವುದನು ಮಾತಾಡಳು ಉಣಳು ।
ಬಾಡಿ ಬಸವಳಿದು ಬೆಂಡಾಗಿ ಮಲಗಿಹಳು ॥
ಕೂಡೆ ಸುಯ್ವಳು ಕ್ಲೇಶವನು ಮಾಡುತಿಹಳು ।
ಗಾಢ ಸಂತಾಪದಿ ಮೂರ್ಛೆಗಯ್ದಿಹಳು ॥೭೭॥

ಎಂತಾಗುವಳೊ ಕಾಣೆ ಪೇಳಲಳವಲ್ಲ ।
ಕಂತುತಾತನೆ ನೀನೆ ಬಲ್ಲೆಯಿದನೆಲ್ಲ ॥
ಕಾಂತೆ ಭಾಮೆಯ ಮೇಲೆ ದಯದೋರಿ ಬಂದು ।
ಸಂತಯಿಸು ಕರುಣಸಾಗರನೆ ನೀನಿಂದು ॥೭೮॥

# ೮. ಬಾಣಾಸುರ ಕಾಳಗ - ಪಾತ್ರಗಳು

ಬಾಣಾಸುರ

ಕುಂಭಾಂಡ-ಮಂತ್ರಿ

ಈಶ್ವರ

ಉಷೆ

ಚಿತ್ರಲೇಖೆ - ಗೆಳತಿ

ನಾರದ

ಪಾರ್ವತಿ

ಅನಿರುದ್ಧ

ಕೃಷ್ಣ

ಸಾತ್ಯಕಿ

ಷಣ್ಮುಖ

ದಾನವದೂತ

**ಬಾಣಾಸುರನ ಕಾಳಗ**

**ಕಂದ**

ಶ್ರೀಮಾಕಾಂತಂ ಸದ್ಗುಣ ।
ಧಾಮಂ ಸುರವರಪೂಜಿತಾಂಘ್ರಿಸರೋಜಂ ॥
ಸೋಮಾರ್ಕಾನಲನೇತ್ರಂ ।
ಪ್ರೇಮದೊಳೆನಗೀಗೆ ಮತಿಯನತಿ ಸೌಖ್ಯದೊಳಂ ॥೧॥

**ರಾಗ ಶಂಕರಾಭರಣ ತ್ರಿವುಡೆತಾಳ**

ಶ್ರೀಗಣಪ ಗಜವಕ್ತ್ರ ಹರಸುತ । ನಾಗವಾಹನವಂದಿತ ॥
ಭೋಗಿ ಭೂಷಣ ಷಣ್ಮುಖಾಗ್ರಜ । ಯೋಗಿಜನಸುಮನಸಕುಜ ॥೨॥

ತರಣಿ ಕೋಟಿಪ್ರಕಾಶ ಶಶಿಧರ । ಕರುಣವಾರಿಧಿ ಶುಭಕರ ॥
ಉರಗವೈರಿಯ ವಾಹನನ ಸಖ । ಪರಮಮಂಗಲದಾಯಕ ॥೩॥

ಗಿರಿಸುತಾತ್ಮಜ ಶರಣಪೋಷಣ । ದುರಿತಸಂಕುಲನಾಶನ ॥
ಸುರುಚಿರಾಲಂಕಾರರಂಜಿತ । ಹರಿತನೂಭವ ಪೂಜಿತ ॥೪॥

**ವಾರ್ಧಕ**

ಹರನ ಪದಪದ್ಮಗಳಿಗೆರಗುತಾ ಗಿರಿಜೆ ಸಿರಿ ।
ಸರಸ್ವತಿಯರಂಘ್ರಿಗಾನತನಾಗಿ ಅನಿಮಿಷರ ।
ನೆರೆ ಭಕ್ತಿಯಿಂ ನಮಿಸುತಿರದೆ ದಿಕ್ಪಾಲರಂ ಧ್ಯಾನಿಸುತೆ ಮನ್ಮನದೊಳು ॥
ಪರಮಋಷಿಗಳ್ವ್ಯಾಸ ಶುಕರ ತಾ ನೆನೆವುತಂ ।
ಗುರುವಿ ನಡಿದಾವರೆಗೆ ತಲೆವಾಗಿ ದೈನ್ಯದಿಂ ।
ಧರೆಯ ಕವಿಜನಸಮೂಹಕೆ ಮಣಿದು ಮಾನಂದದಿಂದುಸಿರ್ವೆನೀ ಕಥೆಯನು ॥೫॥

**ದ್ವಿಪದಿ**

ಘನಮಹಿಮ ಶುಕಮುನಿಯ ಪಾದವನು ನುತಿಸಿ ।
ಕನಕದಾಸರ ಚರಣಯುಗಳವನು ಸ್ಮರಿಸಿ ॥೬॥

ಮುದದಿ ಭಾಗವತಾಖ್ಯ ಪೌರಾಣದೊಳಗೆ ।
ಪ್ರದ್ಯುಮ್ನ ಬಾಣನಾ ಕರವನ್ನು ಧರೆಗೆ ॥೭॥

ಇಳುಹಿದಾ ಕಥನವನು ಯಕ್ಷಗಾನದಲಿ ।
ನಳಿನಭವಪುರದೆರೆಯ ಹರನ ಕರುಣದಲಿ ॥೮॥

ಪೇಳುವೆನು ತಿಳಿದಂತೆ ಧರೆಯ ಸಜ್ಜನರು ।
ಕೇಳಿ ತಪ್ಪನು ತಿದ್ದಿ ಮೆರಸಿ ಬಲ್ಲವರು ॥೯॥

**ವಚನ**

ಈ ಪ್ರಕಾರದಿಂದ ದೇವ ಋಷಿ ಕವಿಗಳಂ ಭಾವಿಸಿ ತತ್ಕಥಾಪ್ರಸಂಗಮಂ ಪೇಳ್ವೆನದೆಂತೆನೆ -

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹರಿಕುಲೋದ್ಭವ ವರಪರೀಕ್ಷಿತ । ಧರಣಿಪತಿಗಾ ಶುಕಮುನೀಂದ್ರನು ।
ಕರುಣದಿಂ ಭಾಗವತ ಕಥನವ । ನೊರೆವುತಿರಲು ॥೧೦॥

ಒಂದು ದಿನ ಭೂವರನು ಋಷಿಪಗೆ । ವಂದಿಸುತ ಬೆಸಗೊಂಡ ಬಾಣನ ।
ನಂದನೆಯು ಸ್ಮರಸುತಗೆ ಸತಿಯಾ । ದಂದವನ್ನು ॥೧೧॥

ಪ್ರೇಮದಿಂ ಪೇಳೆನಲು ಮುನಿಪತಿ । ಭೂಮಿಪನ ಭಕ್ತಿಯನು ಕಾಣುತ ।
ಕಾಮಜನಕನ ನೆನೆದು ಪೇಳ್ದನು । ತಾ ಮುದದೊಳು ॥೧೨॥

**ರಾಗ ಭೈರವಿ ಝುಂಪೆತಾಳ**

ಭೂರಮಣ ಲಾಲಿಸೈ ದ್ವಾರಕಾಪಟ್ಟಣದಿ ।
ಶ್ರೀರಮಣನಿರ್ದ ಶತಸೂರ್ಯತೇಜದಲಿ ॥೧೩॥

ವನಜಾಕ್ಷತನುಜ ಸ್ಮರಗನಿರುದ್ಧನೆಂಬ ಸುತ ।
ಜನಿಸಿ ಬೆಳೆವುತ್ತಿರ್ದ ಘನಸೊಬಗಿನಿಂದ ॥೧೪॥

ಇರಲಿತ್ತ ಬಲಿಗಾತ್ಮಜರು ಜನಿಸಿದರು ನೂರ ।
ವರು ಶೂರರವರೊಳಗೆ ಪಿರಿಯ ಬಾಣಾಖ್ಯ ॥೧೫॥

ಹರನ ಮೆಚ್ಚಿಸಿ ಜಗದ ಧೊರೆತನ ಸಹಸ್ರಕರ ।
ವರಗಳನು ಪಡೆದು ಘನ ಹರುಷದಿಂ ಬಳಿಕ ॥೧೬॥

ಭಕ್ತಿಯಿಂ ಶೋಣಿತಾಪಟ್ಟಣದೊಳಾ ಬಾಣ ।
ದೈತ್ಯನಿರುತಿರೆ ಕಂಡು ಚಿತ್ತಜಾಂತಕನು ॥೧೭॥

ದನುಜನರಮನೆಯ ಬಾಗಿಲ ಕಾಯ್ವುತಿರ್ದನಿ ।
ನ್ನೆನಿತು ಸುಕೃತಿಯೊ ಖಳನು ಜನಪ ಕೇಳ್ ನೀನು ॥೧೮॥

**ಭಾಮಿನಿ**

ಇನ್ನು ಪೇಳುವುದೇನು ದಾನವ ।
ನುನ್ನತದ ಗರ್ವವನು ಧರಿಸುತ ।
ಲಿನ್ನು ಶಂಕರ ಕಾಯ್ವ ತನ್ನಯ ಮನೆಯ ಬಾಗಿಲನು ॥
ಉನ್ನತಿಕೆಯಿಂದಿರುವೆ ತಾನಿಂ ।
ದೆನ್ನೊಳಿದಿರಾರೆನುತ ಲೋಕಗ ।
ಳನ್ನು ಬಾಧಿಸಿ ಸೆಳೆದುಕೊಂಡನು ಸಕಲ ಸಂಪದವ ॥೧೯॥

**ವಾರ್ಧಕ**

ದುರುಳ ಖಳನೀ ಪರಿಯೊಳಿರುತಿರಲ್ಕಾತನಂ ।
ಸುರನರೋರಗರು ಬಂದೋಲೈಸುತಿರ್ದರವ ।
ನುರುತರೈಶ್ವರ್ಯಮಂ ಬಣ್ಣಿಪರೆ ಪನ್ನಗಾಧಿಪ ಗರಿದು ಆ ಸಮಯದಿ ॥
ತರಳೆಯೋರ್ವಳು ಜನಿಸಿದಳ್ ಮಿಸುನಿಬೊಂಬೆಯಂ ।
ತಿರದೆ ದಿನದಿನಕೆ ಯೌವನವು ಮೊಳೆದೋರಲುರೆ ।
ಹರುಷದಿಂದವಳ ನೊಂದರಮನೆಯೊಳಿಟ್ಟು ಅತಿ ಸಂಭ್ರಮದೊಳಿರುತಿರ್ದನು ॥೨೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಒಂದು ದಿನ ಬಾಣಾಖ್ಯನೀಶನ । ಚಂದದಿಂದರ್ಚಿಸುವೆ ತಾನೆನು ।
ತಂದು ಯೋಚಿಸಿ ಚರರ ಕರೆದಿಂ । ತೆಂದನಾಗ ॥೨೧॥

ಖಳರು ಕೇಳಿರೊ ಹರನ ಪೂಜೆಗೆ । ಚೆಲುವಿನಿಂ ಸನ್ನಹವ ಮನದೊಳ ।
ಗಲಸದೆಯ ನೀವು ಮಾಡಿರೆನೆ ಕೇ । ಳ್ದೊಲವಿನಿಂದ ॥೨೨॥

ಬಂದು ಪೂಜೆಗೆ ತಕ್ಕ ಸನ್ನಹ । ವಂದದಿಂದಲೆ ರಚಿಸಿ ಮಗುಳೈ ।
ತಂದು ಬಿನ್ನೈಸಿದರೊಡೆಯ ತೆರ । ಳೆಂದು ಬೇಗ ॥೨೩॥

ಕೇಳುತಲೆ ದನುಜೇಂದ್ರ ಹರುಷವ । ತಾಳಿ ಪೂಜಾಗೃಹಕೆ ಬಂದತಿ ।
ಲೀಲೆಯಿಂದರ್ಚಿಸಿದನಾಗ ಕ । ಪಾಲಧರನ ॥೨೪॥

**ವಚನ**

ಈ ರೀತಿಯಿಂ ಬಾಣಾಖ್ಯನೇಕಭಾವದಿಂ ಪರುಹರನ ಪೂಜಿಸಿ ಮಂಗಳಾರತಿಯನೆತ್ತಿದನದೆಂತೆನೆ -

**ರಾಗ ನಾದನಾಮಕ್ರಿಯೆ ಆದಿತಾಳ**

ಆರತಿ ಬೆಳಗಿದನು । ಬಾಣನು । ಮಾರಹರಗೆ ತಾನು ॥ ಪ ॥

ಮುರಹರಪ್ರಿಯನಿಗೆ । ಈಶಗೆ । ಗಿರಿತನುಜಾಧವಗೆ ॥
ಶರಣಾರಕ್ಷಣಗೆ । ಭವಗೆ । ಪರಮಾತ್ಮರೂಪನಿಗೆ ॥೨೫॥

ವ್ಯಾಳಕುಂಡಲಧರಗೆ । ಬಾಲೇಂದು । ಮೌಳಿಗೆ ಭವಹರಗೆ ॥
ಕಾಲಕಾಲಗೆ ಶಿವಗೆ । ಆನತಜನ । ಪಾಲಗೆ ಪುರಹರಗೆ ॥೨೬॥

ಮನುಮಥನಾಶನಿಗೆ । ಅಂಬರ । ಮಣಿಶತಭಾಸನಿಗೆ ॥
ಮುನಿಜನಪೋಷನಿಗೆ । ಸಾಮಜ । ದನುಜಸಂಹಾರನಿಗೆ ॥೨೭॥

**ಭಾಮಿನಿ**

ಶಿವನೆ ಪರಮಾನಂದರೂಪನೆ ।
ಶಿವನೆ ಪಾರ್ವತಿಧವನೆ ಭರ್ಗನೆ ।
ಶಿವ ಚರಿತ್ಯಘಕುಲವಿನಾಶನೆ ವಿಶ್ವಮೂರುತಿಯೆ ॥
ಶಿವಶರೀರನೆ ದುರಿತದೂರನೆ ।
ಶಿವವಿಭೂಷನೆ ದುರಿತನಾಶನೆ ।
ಶಿವಕರನೆ ನೀನೊಲಿದು ಪಾಲಿಸು ಎನಗೆ ಸುಮತಿಯನು ॥೨೮॥

**ರಾಗ ಕಾಂಭೋಜಿ ಝಂಪೆತಾಳ**

ಈ ಪರಿಯೊಳಾ ದಾನವೇಂದ್ರ ನುತಿಗೈವುತಿರ ।
ಲಾ ಪಾರ್ವತೀಶ ಸಂಭ್ರಮದಿ ॥

ತಾಪಸಾದ್ಯರಿಗಗೋಚರನಾದ ಪರಬ್ರಹ್ಮ ।
ರೂಪುದೋರಿಯೆ ಮುದದೊಳಾಗ ॥೧೯॥

ಸಚ್ಚಿದಾನಂದನೆಂದನು ಬಾಣ ಕೇಳ್ ನಿನಗೆ ।
ಮೆಚ್ಚಿದೆನು ತವ ಭಕ್ತಿಗಿಂದು ॥
ಇಚ್ಛೆಯಾಗಿರುವುದೇನುಂಟು ಪೇಳೆನ್ನೊಡನೆ ।
ಉಚ್ಚರಿಸಲೀವೆನಾ ಕ್ಷಣದಿ ॥೨೦॥

ಎಂದು ಹರ ಪೇಳ್ದಡಾ ನುಡಿ ಕೇಳಿ ಬಾಣಖಳ ।
ನೆಂದನಘಹರ ಕೇಳು ನೀನು ॥
ಹಿಂದೆ ಸಾಹಸ್ರಹಸ್ತವನಿತ್ತೆ ಮತ್ತೆ ನೀ ।
ನಿಂದು ಬಾಗಿಲನು ಕಾಯ್ದಿರುವೆ ॥೨೧॥

ಇಂತು ನೀ ದಯೆಗೈದ ಮೇಲೆ ನಾ ನಿನ್ನೊಡನೆ ।
ಮುಂತೆ ಕೇಳುವುದೇನು ದೇವ ॥
ಕಂತುಸಂಹರನೆ ಮಾರಾಂತು ಸಮರಾಂಗಣದಿ ।
ನಿಂತು ಕಾದುವರ ತೋರೆಂದ ॥೨೨॥

**ಭಾಮಿನಿ**

ವೀರ ಖಳನಿಂತೆನಲು ಕೇಳುತ ।
ಮಾರಮಣನುಸಿರಿದನು ನಿನ್ನ ಮ ।
ಯೂರಕೇತನ ಮುರಿದು ಭೂಮಿಗೆ ಬಿದ್ದ ದಿವಸದಲಿ ॥
ವಾರಿಜಾಕ್ಷನೊಳ್ಳೈದೆ ಸಮರವು ।
ದೋರುವುದು ನಿನಗೆಂದು ಪುರಹರ ।
ಭೂರಿ ಸಂತಸದಿಂದ ಲಂತರ್ಧಾನಮಂ ತಳೆದ ॥೨೩॥

**ರಾಗ ಕೇದಾರಗೌಳ ಅಷ್ಟತಾಳ**

ಇಂತೆಂದು ಭವನೈದಲಿತ್ತ ಬಾಣಾಖ್ಯನ । ತ್ಯಂತ ಸೌಖ್ಯದೊಳಿರಲು ॥
ದಂತಿಗಮನೆ ದೈತ್ಯಸುತೆಯುಷೆ ತಾನಾಗ । ಲಂತರಂಗದಿ ಯೋಚಿಸಿ ॥೨೪॥

ಕರೆದು ಮಂತ್ರಿಜೆಗೆಂದಳ್ ಸಖಿ ಕೇಳು ಪ್ರಾಯದಿ । ಮೆರೆವ ವೇಳ್ಯಕೆ ಪಿತನು ॥
ಪರಿಣಯವನು ಮಾಡಲಿಲ್ಲ ಸುಖದೊಲಿರ್ಪ । ಪರಿಯೆಂತೆಂದೆನಲೆಂದಳು ॥೨೫॥

ಕನಕಾಂಗಿ ಕೇಳೆಮ್ಮ ಉದ್ಯಾನದೊಳು ಹರ । ನನುದಿನ ನೆಲೆಸಿರ್ಪನು ॥
ಚಿನುಮಯಾತ್ಮಿಕೆ ಸದಾಶಿವೆಯಿಹಳಲ್ಲಿ ನೀ । ಘನ ವೇಗದಿಂದ ಲೈದಿ ॥೨೬॥

ಹರಿವಾಹಿನಿಯ ಚರಣಾಬ್ಜಕೆರಗಿ ಪರಿ | ಪರಿಯಿಂದ ಸಂಸ್ತುತಿಸಿ ||
ಹರುಷದಿ ಬೇಡಿಕೊಂಡರೆ ಮನದಿಷ್ಟವು | ಅರೆನಿಮಿಷದೊಳಹುದು ||೩೭||

ಎನಲುಷೆ ಪೇಳ್ದಳು ಕೇಳು ಮಾನಿನಿಯೆನ್ನ | ಜನಕನಿದ್ದೆಡೆಗೆ ಪೋಗಿ ||
ಮನುಮಥಾರಿಯ ನೋಡಿ ಬರ್ಪೆವೆಂದವನೊಳ | ಪ್ಪಣೆಗೊಂಡು ಬಾರೆ ಈಗ ||೩೮||

**ಕಂದ**

ಎಂದಾ ಮಾತಂ ಕೇಳು |
ತ್ತಂದದೊಳಾ ಚಿತ್ರಲೇಖೆಯತಿ ಭರದಿಂದಂ ||
ಬಂದಾ ಬಾಣನ ಬಳಿಗಂ |
ವಂದಿಸೆ ಪಿಡಿದೆತ್ತಿ ಪರಸುತಾ ಖಳನೆಂದಂ ||೩೯||

**ರಾಗ ತೋಡಿ ಅಷ್ಟತಾಳ**

ಸರಸವಂತೆ ಮಂತ್ರಿಜಾತೆ | ತರಳೆ ಎನ್ನೆಡೆಗೈತಂದ |
ಪರಿಯದೇನೆಂದು ನೀನೀಗ | ಅರುಹೆನಲಿಂತೆಂದಳಾಗ ||೪೦||

ದನುಜಾಧೀಶ ಕೇಳು ನಿನ್ನ | ತನುಜೆ ಹರನ ನೋಡಲಿಂದು |
ಜನಕನ ನೇಮವನು ಕೊಂಡು | ವಿನಯದಿ ಬಾರೆಂದಳಯ್ಯ ||೪೧||

ಮಂದಯಾನೆ ಲಾಲಿಸೆನ್ನ | ನಂದನೆಯ ಸಹಿತ ನೀನು |
ಚಂದದಿಂದ ಶಂಕರನ್ನ | ಇಂದು ನೋಡಿ ಬಾರೆ ಈಗ ||೪೨||

**ಕಂದ**

ದನುಜಾಧಿಪನೆಂದುದನುಂ |
ವನಜಾಂಬಕಿ ಕೇಳುತಾಗಳುರು ಸಂಭ್ರಮದಿಂ ||
ವನಿತಾಮಣಿಯುಷೆಯೆಡೆಗಂ |
ಘನ ವೇಗದೊಳೈದಿ ಪೇಳ್ದಳತಿ ಸಂತಸದಿಂ ||೪೩||

**ರಾಗ ಕೇದಾರಗೌಳ ಅಷ್ಟತಾಳ**

ಚಂದಿರಾನನೆ ಉಷೆ ಕೇಳ್ ನಿನ್ನ ಪಿತನಲ್ಲಿ | ಗಿಂದು ನಾ ಭರದಿ ಪೋಗಿ ||
ಚಂದದಿಂದಪ್ಪಣೆಗೊಂಡೈತಂದೆನು ಪೋಪು | ದೆಂದೆನಲಿಂತೆಂದಳು ||೪೪||

ತರುಣಿ ನಿನ್ನಂಥ ಸಖಿಯರ್ಯಾರು ಮನದಿ ಬೇ | ಸರಿಸಿ ನಾನೆಂದುದನು ||
ಹರುಷದಿ ನಡೆಸಿದೆಯೆಂದು ತೋಷದೊಳುಪ | ಚರಿಸೆ ಮಂತ್ರಿಜೆ ಪೇಳ್ದಳು ||೪೫||

ಎನ್ನನೇತಕೆ ನೀನು ಮನ್ನಿಪೆ ಉಷೆ ಕೇಳು । ನಿನ್ನ ಮನದ ಬಯಕೆ ॥
ಎನ್ನದಲ್ಲವೆ ಏಳು ಶಿವೆಯಲ್ಲಿಗೈದುವ । ಚೆನ್ನಾಗಿ ನಾವೀರ್ವರು ॥೪೬॥

ಎನಲಾ ಮಾತನು ಲಾಲಿಸುತ ಉಷೆ ತನ್ನಯ । ವಿನಯದ ಸಖಿಯರೊಳು ॥
ಕನಕದಾಭರಣವ ತನ್ನಿರೆಂದೆನಲಾಗ । ವನಜಾಕ್ಷಿಯರು ತಂದರು ॥೪೭॥

**ಭಾಮಿನಿ**

ಧಾರಿಣಿಪ ಕೇಳುಷೆಯು ನಗುತಾ ।
ನಾರಿಯರ ತಂದಾಭರಣವನು ।
ಭೂರಿ ಸಂತಸದಿಂದ ತೊಟ್ಟಳದೇನ ಬಣ್ಣಿಸುವೆ ॥
ಮಾರದೇವನ ಕೈಯ ಗಿಣಿಯಂ ।
ತಾ ರಮಣಿ ನಲವಿಂದ ಪೊರಟಳು ।
ಮಾರಹರನಿಹ ಬನಕೆ ಸತಿಯರ ಗಡಣದೊಗ್ಗಿನಲಿ ॥೪೮॥

**ರಾಗ ಮಾರವಿ ಆದಿತಾಳ**

ಬಂದಳು । ಉಷೆ । ಬಂದಳು ॥
ಸತಿ । ವೃಂದಸಹಿತವಾಗಿ ಮಂತ್ರಿ । ನಂದನೆಯನೊಡಗೊಂಡು ॥ ಬಂದಳು ॥ ಪ ॥

ನಡೆಗೆ ಹಂಸೆ ಮರುಳಾಗೆ । ನುಡಿಗೆ ಗಿಣಿಗಳು ಕೂಡ್ಯೆತರೆ ।
ಮಡದಿಯರ ಧ್ವನಿಗೆ ಕೋಗಿಲೆ ಭ್ರಮಿಸೆ । ಕಡುಜಾಣೆಯರ ಕಂಪಿಗಾ ।
ರಡಿಗಳು ಝೇಂಕೃತಿಯಿಂದ । ಬಿಡದೆ ಬೆಂಬಳಿಯೊಳಗೆ ।
ಮೃಡನಿಪ್ಪ ಕಾಂತಾರಕಾಗಿ ॥ ಬಂದಳು ॥೪೯॥

**ವಾರ್ಧಕ**

ತರತರದೊಳೆಸೆದಿರ್ಪ ಸರಗಳಿಂ ಮರಗಳಿಂ ।
ಮೆರೆದು ಝೇಂಕರಿಸುತಿರುವಳಿಗಳಿಂ ಗಿಳಿಗಳಿಂ ।
ಪರಮ ಸಂಯಮಿಗಳಾಶ್ರಮಗಳಿಂ ಸುಮಗಳಿಂದುರೆ ಬೆಳೆದ ಲತೆಗಳಿಂದ ॥
ಮರಿಗಳಿಗೆ ಮೊಲೆಕೊಡುವ ಮೃಗಗಳಿಂ ಖಗಗಳಿಂ ।
ದಿರದೆ ಸತತಂ ಪರಿವ ಜಲಗಳಿಂ ಫಲಗಳಿಂ ।
ಧರಣಿಗತಿ ಹಿತಮಾಗೆ ಸೊಂಪಿನಿಂ ತಂಪಿನಿಂದಾ ವನಂ ಕಂಗೊಳಿಸಿತು ॥೫೦॥

ಉರಗಕುಲ ವೇಣಿಯಿಂ ಕಲಕೀರವಾಣಿಯಿಂ ।
ಶರಚರಸುನೇಂತ್ರದಿಂ ಮೃದುಲತಾ ಗಾತ್ರದಿಂ ।
ತರಣಿಸಖವದನದಿಂ ವರಕುಂದರದನದಿಂ ತರುಣಹರಿಮಧ್ಯದಿಂದ ॥
ಅರಳಸುಮಹಾಸದಿಂ ಕೆಂದಳಿರಭಾಸದಿಂ ।

ಅರಸಂಚೆಯಾನದಿಂ ನಿರತಸುಮ್ಮಾನದಿಂ ।
ಕಿರುವೆಲರ ಸಂಗದಿಂ ಕರುಣಾಂತರಂಗದಿಂ ವನದೇವಿ ಮೆರೆದಿರ್ದಳು ॥೫೧॥

ಹರಿಗೆ ಹಾಸಿಗೆಯಾದ ಮಹಿಮನಾರ್ಶಿಷ್ಯರುಂ ।
ಗುರುವಿನಂ ಕಂಡರೇಂ ಗೈವರುಂ ರತ್ನಮಂ ।
ಮೆರೆವರಿದರಾಧಾರಮೆನಿದು ಮೂರಭಿಧಾನದೊಳ್ ತ್ರಿಯಕ್ಷರದ ಪೆಸರಾ ॥
ನೆರೆ ಮೂರು ಪಂಙ್ತಿಯಂ ಬರೆದೋದೆ ಮಧ್ಯದ ।
ಕ್ಷರಕೆ ಬಂದಿಹ ನಾಮಮಿ ವನಕ್ಕಾಪುದೆಂ ।
ದರವಿಂದ ನೇತ್ರೆಯರ್ ತಮ್ಮ ತಮ್ಮೊಳ್ಮಾತನಾಡುತ್ತವೇಳ್ತಂದರು ॥೫೨॥

ಹರಿವೇಣಿಯರ್ ಕೀರವಾಣಿಯರ್ ರಾಣಿಯರ್ ।
ಸರಸಸಲ್ಲಾಪ ಪ್ರವೀಣೆಯರ್ ಜಾಣೆಯರ್ ।
ಸ್ಮರಕದನಕೇಳಿಗತಿ ಧೀರೆಯರ್ ನೀರೆಯರ್ ಭೃಂಗನಿಭ ಕುಂತಳೆಯರು ॥
ಹರಿಣಾಕ್ಷಿಯರ್ ಭಾಗ್ಯವಂತೆಯರ್ ಕಾಂತೆಯರ್ ।
ಕರಿಗಮನೆಯರ್ ಚಾರುಚರಣೆಯರ್ ಕರುಣೆಯರ್ ।
ಪರಿಮಳಿಪ ನವ ಕುಸುಮಮಾಲೆಯರ್ ಬಾಲೆಯರ್ ಪರಶಿವೆಯೆಡೆಗೆ ಬಂದರು ॥೫೩॥

**ಕಂದ**

ಬಾಣನ ನಂದನೆ ಸುದತಿ ।
ಶ್ರೇಣಿಯನೊಡಗೊಂಡುಮ್ಮೈದೆ ಗಿರಿಶನ ಪದಮಂ ॥
ಕಾಣುತೆ ಪಿಡಿರನ್ನವನುಂ ।
ಕಾಣಿಕೆಯಿಟ್ಟರ್ಥಿಯಿಂದ ನಮಿಸಿದಳಾಗಳ್ ॥೫೪॥

**ರಾಗ ಮಾರವಿ ಝುಂಪೆತಾಳ**

ವಂದಿಸಿದ ದೈತ್ಯಜೆಯ । ನಿಂದುಧರ ಪಿಡಿದೆತ್ತಿ ।
ಇಂದೇತಕಿಲ್ಲಿಗೈ । ತಂದಿರೆಂದೆನಲು ॥೫೫॥

ಉಷೆ ನಾಚಿ ತಲೆಯ ತ । ಗ್ಗಿಸಿ ಸುಮ್ಮನಿರಲಾಗ ।
ಶಶಿಧರಗೆ ಮಂತ್ರಿಸುತೆ । ಉಸಿರಿದಳು ಮುದದಿ ॥೫೬॥

ದೇವ ನಿನ್ನಯ ಪದವ । ನಾವವನು ನೋಳ್ಪನಿ ।
ನ್ನಾವ ಜನ್ಮದಿ ತಪವ । ನಾವು ಮಾಡಿದೆವು ॥೫೭॥

ಅದರಿಂದ ನಿಮ್ಮ ಮೃದು । ಪದವ ನೋಡಿದೆವೆಂದು ।
ಸುದತಿ ಮಣಿ ಪೇಳಿದಳು । ಮದನಾರಿಗಾಗ ॥೫೮॥

ರಾಕೇಂದುವದನೆ ಕೇಳ । ಳೇಕೆ ನಾಚುವಳಿವಳು ।
ಬೇಕಾದ ವಸ್ತುವನು । ನಾ ಕೊಡುವೆನೆನಲು ॥೫೯॥

ಹರನು ಮಂತ್ರಿಜೆಗೆಂದ । ಸರಸವಾಕ್ಯವ ಕೇಳಿ ।
ಹರುಷದಿಂದುಷೆ ನುಡಿದ । ಳುರಗಭೂಷಣಗೆ ॥೬೦॥

**ರಾಗ ತೋಡಿ ಆದಿತಾಳ**

ಹರನೆ ಕೇಳ್ ನಿನ್ನ ಪಟ್ಟದರಸಿ ಗಿರಿಸುತೆಯ ।
ಚರಣವ ಕಾಣಲ್ಕೆ ತಂದೆವು ನಾವು ॥೬೧॥

ಎನಲೀಶ ತನ್ನಯ ವನಿತೆಯೊಳೆಂದನು ಬಂದ ।
ಕನಕಾಂಗಿಯನು ಮನ್ನಿಸೆನುತಲಾಕ್ಷಣದಿ ॥೬೨॥

ಇಂದುಧರನ ನೇಮದಿಂದ ಗಿರಿಜೆಯರ ।
ವಿಂದಮುಖಿಯರ್ಸಹ ಬಂದಳು ಒಳಗೆ ॥೬೩॥

**ಕಂದ**

ಗಿರಿಜೆಯುಮಂತಃಪುರಕಂ ।
ಭರದಿಂದೇಳ್ತಂದುಮೈದೆ ಸಂತಸದಿಂದಂ ॥
ತರುಣಿಯರಂ ನೋಡುತಮತಿ ।
ಕರುಣದೊಳಂ ಚಿತ್ರಲೇಖೆಯೊಡನಿಂತೆಂದಳ್ ॥೬೪॥

**ರಾಗ ಮಾರವಿ ಏಕತಾಳ**

ಕ್ಷೇಮವೇನೆ ಚಿತ್ರಲೇಖೆ ನಿಮ್ಮೆಲ್ಲರಿಗೆ । ಪರಿ ।
ಣಾಮವೆ ಬಾಣಗೆ ಸುಖವೇನೆ ತವ ಪಿತಗೆ ॥ ಕ್ಷೇಮ ॥ ಪ ॥

ಎಂದು ಬಾರದವಳು ಉಷೆಯೆನ್ನಲ್ಲಿಗೆ ಈಗ । ತಾ ।
ಬಂದಳೇಕೆ ತನ್ನ ಮನದಿಷ್ಟವನ್ನು ಬೇಗ ॥
ದಿಂದ ಲರುಹಿದರೆ ನಾನೀವೆ ಪುಸಿಯಲ್ಲ ।
ಎಂದೆನಲು ಮಂತ್ರಿಜಾತೆ ಪೇಳ್ದಳೊಂದು ಸೊಲ್ಲ ॥೬೫॥

ಹರನರ್ಧಾಂಗಿ ನಿನ್ನ ಕಂಡ ಮೇಲೆಲ್ಲರ್ಗೆ ಕ್ಷೇಮ ।
ಹೊರತು ತಪ್ಪುದೋರುವುದೆ ಉಷೆಯ ಮನದ ಪ್ರೇಮ ॥
ಒರೆಯಲೇಕೆ ತಿಳಿಯೆಯ ನೀ ಲೋಕಮಾತೆಯೈಸೆ । ಶಂ ।
ಕರಿಯೆ ನೀನರಿತು ದಯಮಾಡೆಂದಳು ಮಂದಹಾಸೆ ॥೬೬॥

ಪುರುಷನ ಮೇಲಾಪೇಕ್ಷೆಯೆಂದರಿತೆ ಕೇಳೆ ನಾಳೆ ।
ಬರುವ ವೈಶಾಖಶುದ್ಧ ದ್ವಾದಶಿಯ ದಿನದಿ ಬಾಲೆ ॥
ಸರಿರಾತ್ರಿಯೊಳ್ ಸ್ವಪ್ನದಲ್ಲಿ ಮದನನಂದದಾತ । ಬಂ ।
ದಿರದೆ ನೆರೆವನವನು ಕಾಂತನಹನು ನಂಬಿ ಮಾತ ॥೬೭॥

ಇಂತೆಂದ ದೇವಿಯಪ್ಪಣೆಗೊಂಡು ನಲವಿಂದ ।
ಕಾಂತೆ ಚಿತ್ರಲೇಖೆ ಸಹಿತುಷೆಯು ಚಂದದಿಂದ ॥
ಸಂತೋಷದಿಂದುಬ್ಬಿ ಬಂದಳ್ ತನ್ನ ನಿಳೆಯಕಾಗ । ತಾ ।
ನೆಂತು ಬಣ್ಣಿಸುವೆನವಳ ಮನದನುರಾಗ ॥೬೮॥

**ಕಂದ**

ಶುಂಭಾಂತಕಿ ಪೇಳ್ದುದನುಂ ।
ಪೊಂಬಲಿಸುತ ಬಾಣನಾತ್ಮಭವೆಯೊಂದು ದಿನಂ ॥
ಕುಂಭಾಂಡಾತ್ಮಜೆಯಂ ಕರೆ ।
ದುಂ ಬಹಳಾಲಸ್ಯದಿಂದ ಮೆಲ್ಲನೆ ಪೇಳ್ದಳ್ ॥೬೯॥

**ರಾಗ ಎರಕಲಕಾಂಭೋಜ ಅಷ್ಟತಾಳ**

ಏನ ಮಾಡುವೆನು । ಹೇ ಸಖಿಯೆ ನಾನಿ । ನ್ನೇನ ಮಾಡುವೆನು ॥ ಪ ॥

ಎಂದು ಬರುವುದೋ । ಮೂಕಾಂಬಿಕೆ । ಯೆಂದ ದಿವಸವದೋ ॥
ಎಂದಿಗೆನ್ನಯ ಮನದಿಷ್ಟ ಕೈಸೇರುವು । ದೆಂದು ಸುಖದೊಳಿಹೆನು । ಹೇಳ್ ನೀನು ॥೭೦॥

ಪರಶಿವೆಯೆಡೆಗೆ ನಾನು । ಪೋಗಿ ಕೇಳ್ದರೆ । ಸರಿರಾತ್ರಿಯೊಳ್ ಗೋರ್ವನು ॥
ಬರುವ ಸ್ವಪ್ನದೊಳಾತನೆ ಕಾಂತನಹೆನೆಂದು । ಹರುಷದಿ ಪೇಳ್ದಳಂದು । ನಾನಿಂದು ॥೭೧॥

ಹೇಗೆ ಬರುವನೊ । ಕನಸಿನಲ್ಲಿ । ಹೇಗೆ ತೋರುವನೊ ॥
ಹೇಗೆ ಮರುಳುಮಾಡಿ ಒಲಿಸಿಕೊಂಬೆನು ನಾನು । ಹೇಗೆ ಮುದ್ದಿಪೆನವನ । ಮತ್ತವನ ॥೭೨॥

**ರಾಗ ನೀಲಾಂಬರಿ ರೂಪಕತಾಳ**

ಎಂದ ಮಾತಿಗೆ ಮಂತ್ರಿನಂದನೆ ನಸುನಗು ।
ತಂದು ಪೇಳಿದಳು ಬಾಣಜೆಗೆ ॥
ಇಂದೇಕೆ ಚಿಂತಿಪೆ ಕಂದರ್ಪಾರಿಯ ಸತಿ ।
ಯೆಂದ ದಿವಸ ಇದು ಕೇಳೆ ॥೭೩॥

ಅಳಬೇಡ ಸುಮ್ಮನೆ ಮಲಗಿರೆ ರಾತ್ರಿಯೊಳ್ ।
ಚೆಲುವನೈತಹನಂಬುಜಾಕ್ಷಿ ॥

ಬೆಳಗಾದ ಮೇಲೆನ್ನ ಮನಕೆ ತೋರ್ದೆತ್ನವ ।
ತಳುವದೆ ನಾ ಮಾಳ್ಪೆನಬಲೆ ॥೭೪॥

ಇಂತೆಂದುದನು ಕೇಳ್ದು ಕಾಂತೆ ದೈತ್ಯಜೆ ವಿರಹ ।
ಸಂತಾಪದಿಂದೆಂದಳಾಗ ॥
ಎಂಥಾ ಮಾತೆಂದೆಯರ್ಯಮನತಿಯಾಲಸ್ಯ ।
ದಿಂ ತಡೆದೈದುವನೇಕೆ ॥೭೫॥

ತರಣಿ ಮೆಲ್ಲನೆ ಪೋಪುದುಂಟೇನೆ ಎಂದಿನ ।
ಪರಿಯಲಿ ಸಾಗುವನವನು ॥
ಮರುಗದಿರೆಂದು ಮಂತ್ರಿಜೆಯುಷೆಯನು ಸಂತೈ ।
ಸಿರಲಿನನಿಳಿದನಂಬುಧಿಗೆ ॥೭೬॥

**ಭಾಮಿನಿ**

ಜನಪ ಕೇಳಿಂತರ್ಯಮನು ತಾ ।
ವನಧಿಗಿಳಿಯಲ್ಸತಿಯರೀರ್ವರು ।
ವಿನಯದಿಂ ಭೋಜನವ ಗೈದತಿ ಸುಖದಿ ಮಲಗಿರಲು ॥
ಅನಿಮಿಷಾರ್ಚಿತೆ ಪೇಳ್ದ ದಿವಸದಿ ।
ಮನುಮಥೋಪಮ ಪುರುಷನೋರ್ವನೊ ।
ಳನುವಿನಿಂದುಷೆ ಸ್ವಪ್ನದಲಿ ಮೆರೆದಳು ವಿಲಾಸದಲಿ ॥೭೭॥

**ಕಂದ**

ಇಂತುಷೆಯು ಸ್ವಪ್ನದೊಳುಂ ।
ಕಂತುಸಮಾನನೊಳುಮ್ಮೈದೆ ರಮಿಸುತ್ತಾಗಳ್ ॥
ತಾಂ ತವಕದೊಳೆಚ್ಚರ್ತುಂ ।
ಕಾಂತನನುಂ ಕಾಣದಿರಲುಮತಿ ದುಃಖಿಸಿದಳ್ ॥೭೮॥

**ರಾಗ ಸಾವೇರಿ ಏಕತಾಳ**

ನಲ್ಲ ನೀನೆಲ್ಲಿಗೈದಿದೆ । ಎನ್ನಯ ಪ್ರಾಣ । ನಿಲ್ಲದು ನಿನ್ನ ನೋಡದೆ ॥
ಪುಲ್ಲಶರನ ಬಾಧೆಗೆ । ಗುರಿಯ ಮಾಡಿ । ಮೆಲ್ಲನೈದುವರೆ ಹೀಗೆ ॥೭೯॥

ಸೋತೆ ನಾ ನಿನ್ನ ಗುಣಕೆ । ಇಂಥಾ ಮುನಿಸು । ಏತಕೆನ್ನೊಳು ಪರಾಕೆ ॥
ಮಾತೊಂದನಾಡಬಾರದೆ । ನಿಮಿಷ ಇನ್ನು । ಪ್ರೀತಿಯೊಳಿಬಾರದೆ ॥೮೦॥

ಕುಳಿತಲ್ಲಿ ಕರೆವಳೆಂದು । ಚಿತ್ತದೊಳತಿ । ಮುನಿಸಿಂದ ಬಾರೆಯೆಂದು ॥
ತಿಳಿದೆ ನಾ ನಿನ್ನ ಬಗೆಯ । ಇದ್ದಲ್ಲಿ ಬಂದು । ಘಳಿನನೊಂದಿಪೆನು ಜೀಯ ॥೮೧॥

**ಭಾಮಿನಿ**

ಧರಣಿಪತಿ ಕೇಳಿಂತು ಬಾಣಜೆ ।
ವಿರಹದಿಂ ಭ್ರಮೆಗೊಂಡು ತನ್ನಯ ।
ಪುರುಷನಿಲ್ಲಿಯೆ ಮುನಿಸಿನಿಂ ಮಲಗಿರುವನೆಂದೆನುತ ॥
ಮರುಗುತಲೆ ಪರಿಯಂಕದಿಂದಿಳಿ ।
ದಿರದೆ ಮಂತ್ರಿಜೆಯನ್ನು ಪ್ರಿಯನೆಂ ।
ಬುರುತರ ಪ್ರೇಮದಲಿ ಬಂದಪ್ಪಿದಳು ಮನದಣಿಯೆ ॥೮೨॥

**ಕಂದ**

ವಿರಹದೊಳುಷೆಯಪ್ಪಲ್ಕಾ ।
ತರುಣಿಯುಮತಿ ಬೆದರುತೆದ್ದುಮಾಶ್ಚರ್ಯದೊಳುಂ ॥
ತರಳಾಕ್ಷಿಯನುಂ ಕಾಣುತ ।
ವರಹರುಷದೊಳೆತ್ತಿ ಪೇಳ್ದಳತಿ ಮುದದಿಂದಂ ॥೮೩॥

**ರಾಗ ಸಾವೇರಿ ಅಷ್ಟತಾಳ**

ಏಕಿಲ್ಲಿಗೈತಂದೆ ಪೇಳೆ । ಇಂಥ । ವ್ಯಾಕುಲವೇನು ಈ ವೇಳೆ ॥
ರಾಕೇಂದುಮುಖಿ ನಿ । ನ್ನಾಕಾರ ಬೇರಾಗಿ । ದೇ ಕಾಮಿನಿರನ್ನೆ । ಸಾಕು ಮರುಗಬೇಡ ॥೮೪॥

**ರಾಗ ಘಂಟಾರವ ಅಷ್ಟತಾಳ**

ಏನ ಪೇಳಲಮ್ಮ । ಎನ್ನಯ ದುಃಖ । ವೇನ ಪೇಳಲಮ್ಮ ॥ ಪ ॥

ಸುರನರನಾಗರೊಳು । ಇಲ್ಲದಂಥ । ಪುರುಷ ಸಂಪ್ರೀತಿಯೊಳು ॥
ನೆರೆದು ವಂಚಿಸಿ ಪೋದನಾತನ ಕಾಣದೆ । ಇರಲಾರೆ ಭೂತಳದಿ । ಏ ಕೆಳದಿ ॥೮೫॥

ಕನಸಿನಲ್ಲಿ ತೋರುವ । ಧಾನ್ಯಕೆ ಗೋಣಿ । ಯನೊಡ್ಡಿದಂತಾಯ್ತುವ್ವ ॥
ನೆನೆಸಿಕೊ ಹರನರ್ಧಾಂಗಿ ಪೇಳಿದ ಮಾತ । ಮನದೊಳು ಧೈರ್ಯಗೊಳು । ಉಷೆ ತಾಳು ॥೮೬॥

ಇಂತು ಲಜ್ಜಿಸಬೇಡವೆ । ಕಾಯದೊಳಿರ್ದ । ಕಂತುಗಲೆಯು ಕಾಣವೆ ॥
ಕಾಂತನೆಲ್ಲಿಗೆ ಪೋದನಾತನ ತಂದೊಮ್ಮೆ । ನೀಂ ತೋರಿಸೆನಗೆ ಜಾಣೆ । ಪ್ರವೀಣೆ ॥೮೭॥

**ರಾಗ ಸಾವೇರಿ ಅಷ್ಟತಾಳ**

ಸುಮ್ಮನೆ ಮತಿಗೆಟ್ಟು ನೀನು । ಕೂಗ । ಲಮ್ಮಯ್ಯ ಸಜ್ಜಲ್ಲವಿನ್ನು ॥
ನಮ್ಮವರೆಚ್ಚರುವರು ಮರುಗದಿರ್ । ದಮ್ಮಯ್ಯ ಉದಯವಾಗಲಿ ತಾಳು ತಾಳವ್ವ ॥೮೮॥

**ಕಂದ**

ತರುಣಿಯನುಂ ಸಂತೈಸಿಯೆ ।
ಹರುಷದೊಳುಂ ಚಿತ್ರಲೇಖೆ ಮಲಗಿರುವಾಗಳ್ ॥
ಸರಸಿಜಸಖನುದಯಿಸಲುಷೆ ।
ಮರುಗುತ್ತಿರೆ ಸಚಿವನಣುಗೆ ಮತ್ತಿಂತೆಂದಳ್ ॥೮೯॥

**ರಾಗ ತೋಡಿ ಅಷ್ಟತಾಳ**

ಶಶಿಮುಖಿಯೇಕೆ ದುಃಖಿಸುವೆ ಪೇಳೆನ್ನೊಳು । ಪೆಸರೇನು ಬಂದವನ ॥
ಪುಸಿಯಲ್ಲ ನಿನ್ನ ಬಳಿಗೆ ತಹೆನೆನ್ನ ಸಾ । ಹಸವನ್ನು ನೋಡೆ ನೀನು ॥೯೦॥

ಕಾಮನಂತಿಹನು ಮಂತ್ರಿಜೆಯೆ ಕೇಳಾತನ । ನಾಮವ ನಾನರಿಯೆ ॥
ಸಾಮರ್ಥ್ಯದಿಂದೆಂತಾದರು ಕರೆತಂ । ದಾ ಮಹೀಶನ ತೋರಿಸೆ ॥೯೧॥

ತರುಣಿ ಬಾಣಜೆ ಲಾಲಿಸು ಮೂರು ಲೋಕದ । ಪುರುಷರಾಕಾರವನ್ನು ॥
ಬರೆತಹೆನಾತನ ಗುರುತವ ಪೇಳ್ದರೆ । ಕರೆತಹೆನವನ ನೋಡೆ ॥೯೨॥

ಅಕ್ಕ ನೀನೆನಗೋಸ್ಕರ ಲೋಕಲೋಕವ । ತುಕ್ಕಬೇಕಿರುಳಿನಲ್ಲಿ ॥
ರಕ್ಕಸಭೂತ ಭೇತಾಳಾದಿಗಳಿಂಗೆ । ಸಿಕ್ಕದೆಂತೈದುವೆಯೆ ॥೯೩॥

ದನುಜರ ಗುರು ಕಲಿಸಿದ ವಿದ್ಯದಿಂದ ಮ । ತ್ತನುವಿನಿಂ ತಿರುಗುವೆನು ॥
ವನಜಾಕ್ಷಿ ನಾ ಬರುವನಕ ದುಃಖಿಸದೆ ನೀ । ಮನೆಯೊಳಗಿರು ಸುಮ್ಮನೆ ॥೯೪॥

**ವಾರ್ಧಕ**

ಜನಪ ಕೇಳಿಂತುಷೆಯ ಸಂತೈಸಿ ಮಂತ್ರಿಸುತೆ ।
ದಿನಪನಸ್ತಮಿಸಲಾ ರಾತ್ರಿಯೊಳ್ ಪೊರಟಾಗ ।
ಳನುವಿನಿಂದೀರೇಳು ಭುವನದವರಾಕಾರಮಂ ಕಂಡು ಕಂಡು ಬರೆದು ॥
ಘನವೇಗಮಾಲಯಕ್ಕೈದಲತಿ ಶ್ರಮದಿಂದ ।
ಕನಕಾಂಗಿಯೊರಗಿರಲ್ಕಿನನುದಯಮಾಗಲುರೆ ।
ವಿನಯದಿಂದೆದ್ದುಮಾ ಬಾಣಜೆಯನೈದೆ ಕರೆದೆಂದಳಾ ಸಚಿವಾತ್ಮಜೆ ॥೯೫॥

**ರಾಗ ಕೇದಾರಗೌಳ ಝಂಪೆತಾಳ**

ತರುಣಿ ದುಃಖಿಸದಿರಿನ್ನು । ಲೋಕದಾ । ಪುರುಷರಾಕಾರವನ್ನು ॥
ಬರೆದೀಗ ತಂದೆ ಕಾಣೆ । ಕಮಲಾಕ್ಷಿ । ಹರುಷದಿಂ ನೋಡೆ ಜಾಣೆ ॥೯೬॥

ಸುರಪ ಮುಖ್ಯಾಮರರನು । ಸಿದ್ಧ ಕಿ । ನ್ನರ ಯಕ್ಷ ರಾಕ್ಷಸರನು ॥
ಗರುಡ ಗಂಧರ್ವರನ್ನು । ಉರಗ ಕಿಂ । ಪುರುಷ ವಿದ್ಯಾಧರರನು ॥೯೭॥

ಪೃಥ್ವಿ ಪಾಲರರೂಪವ ತಾ । ಬರೆತಂದೆ । ನಿತ್ತ ನೋಡವ್ವ ಎನುತ ॥
ಮತ್ತಕಾಶಿನಿ ತೋರಲು । ಇವರಲ್ಲೆ । ನುತ್ತ ಬಾಣಜೆ ಪೇಳಲು ॥೯೮॥

ಬಳಿಕ ಯದುವೀರರನ್ನು । ತೋರಿದಳು । ಬಲರಾಮ ಕೃಷ್ಣರನ್ನು ॥
ನಳಿನಬಾಣನ ಕಂಡಳು । ಇವನವನ । ಚೆಲುವಿಕೆಗೆ ಸಮನೆಂದಳು ॥೯೯॥

ರಕ್ಕಸಾಂತಕ ಮೊಮ್ಮನ । ತೋರಿಸಲು । ನಕ್ಕಳಿವನಹುದು ಎನ್ನ ।
ಠಕ್ಕಿಸಿದ ಧೀರನೆಂದು । ಉಷೆ ಹರುಷ । ಉಕ್ಕಿ ಲಜ್ಜಿಸಿದಳಂದು ॥೧೦೦॥

ಏಕೆ ಲಜ್ಜಿಸುವೆ ಪ್ರೌಢೇ । ಕ್ಷಣಕವನ । ನಾ ಕರೆದು ತರುವೆ ನೋಡೆ ॥
ಸಾಕು ಚಿಂತಿಸದಿರೆಂದು । ವರಚಿತ್ರ । ಲೇಖೆ ತಾ ನುಡಿದಳಂದು ॥೧೦೧॥

**ಭಾಮಿನಿ**

ಅರಸ ಕೇಳಿಂತುಷೆಯ ಸಂತೈ ।
ಸಿರಲು ಮಂತ್ರಿಜೆಯತ್ತ ಕಾಮನ ।
ತರುಣಗೀ ಬಾಣಜೆಯು ಸ್ವಪ್ನವ ಕಂಡ ದಿವಸದಲಿ ॥
ತರುಣಿಯೋರ್ವಳ ಕನಸಿನಲಿ ತಾ ।
ನೆರೆದೆನೆಂದೀಕ್ಷಿಸಿಯೆ ಚಿಂತಾ ।
ಭರಿತದಿಂದಿರುತಿರ್ದನವಳಂ ನೋಳ್ಪ ತವಕದಲಿ ॥೧೦೨॥

**ವಾರ್ಧಕ**

ಆ ಸಮಯದೊಳಗಿತ್ತಲೀ ಮಂತ್ರಿಯಾತ್ಮಜೆ ವಿ ।
ಲಾಸದಿಂ ತರಣಿ ಯಸ್ತಮಿಸಲೈತಂದಳ್ ಪ್ರ ।
ಕಾಶದಿಂ ಮೆರೆವ ದ್ವಾರಕೆಗಲ್ಲಿ ಮೆಲ್ಲನೊಳ ಪೊಕ್ಕು ಮನ್ಮಥಸುತನನು ॥
ತೋಷದಿಂದೊಡಬಡಸುತುಷೆಯ ರೂಪಂ ದೋರೆ ।
ತಾ ಸ್ವಪ್ನದೊಳ್ಕಂಡ ಸತಿಯಂತಿರಲ್ಮಂದ ।
ಹಾಸದಿಂ ಬರ್ಪೆನೆನಲನಿರುದ್ಧನಂ ಪೊತ್ತುಮನಿಲವೇಗದಿ ಬಂದಳು ॥೧೦೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಪುರಜನವರಿಯದಾ ವೋಲ್ । ಕಂತುಜನ ತಂದಾಗಲುಷೆಯ ಗೃ ।
ಹಾಂತರದೊಳಿಳುಹಿದಳು ಮಂತ್ರಿಜೆ । ಸಂತಸದೊಳು ॥೧೦೪॥

ಬಳಿಕ ಸರಸಿಜಮಿತ್ರನುದಯಿಸೆ । ಘಳಿಲನಾ ಬಾಣಜೆಯ ಕರೆದೆಂ ।
ದಳು ವಿನೋದದಿ ಸಚಿವಸುತೆಯತಿ । ಗೆಲವಿನಿಂದ ॥೧೦೫॥

ಸರಸಿಜಾಂಬಕಿ ನೋಡೆ ನಿನ್ನೊಳು । ನೆರೆದು ತೋಷವಬಡಿಸಿ ಮೆಲ್ಲನೆ ।
ಮರಳಿ ಮಾಚಿಸಿ ಮೆಲ್ಲನೈದಿದ । ಪುರುಷನನ್ನು ॥೧೦೬॥

ಎನಲು ಕೇಳ್ದಾ ಬಾಣನಂದನೆ । ಘನಹರುಷದಿಂ ಬಂದು ಕಂಡಳು ।
ದಿನಪತೇಜವ ಜರವುತಿರ್ಪಾ । ಮನುಮಥಜನ ॥೧೦೭॥

**ರಾಗ ಸಾಂಗತ್ಯ ರೂಪಕತಾಳ**

ಚೆಲುವನ ಕಂಡುಷೆಯೊಲವಿಂದವನ ಪಾದ । ಜಲಜವ ತೊಳೆದು ಸಂಭ್ರಮದಿ ॥
ನಲವಿನಿಂದಲ್ಲಿ ಲಜ್ಜಿಸಿ ನಗುತೆಂದಳು । ನೆಲನ ನೋಡುತ ಕಾಂತಗಂದು ॥೧೦೮॥

ಸರಸವಂತನೆ ಮೊನ್ನೆ ಇರುಳೊಳೈತಂದು ನಾ । ನರಿಯಂದದಲಿ ಎನ್ನೊಡನೆ ॥
ಸರಸದೊಳಿದ್ದು ಸಂತೋಷಬಡಿಸಿ ಮತ್ತೆ । ಮರಳಿ ವಂಚಿಸಿ ಪೋಗಬಹುದೆ ॥೧೦೯॥

ಮಾನಿನಿಮಣಿ ಕೇಳೆ ವಂಚಿಸಿ ಪೋದವಳ್ । ನೀನಲ್ಲದಾನಲ್ಲ ಕೇಳೆ ॥
ಏನಾದರಾಗಲೀಗಾ ಮಾತಿನ್ನೇಕೆನು । ತಾನಂದ ದಿಂದಲಪ್ಪಿದನು ॥೧೧೦॥

ಎರೆಯ ಕೇಳ್ ನಿನ್ನ ಕಾಣದೆ ನಾನು ದುಃಖದೊ । ಳಿರಲು ಮಂತ್ರಿಜೆ ಕಂಡು ಬೇಗ ॥
ಕರೆತಂದು ಹರುಷವ ರಚಿಸಿದಳಿವಳಿಗೆ । ಸರಿಹಯ ನಾರಿಯರಿಲ್ಲ ॥೧೧೧॥

**ಕಂದ**

ಇಂತೆಂದುಷೆ ಮಂತ್ರಿಜೆಯಂ ।
ಸಂತೋಷದೊಳಪ್ಪಿ ಯುಪಚರಿಸುತಿರಲಾಗಳ್ ॥
ಸಂತಸವೆತ್ತುಂ ವರಸೀ ।
ಮಂತಿನಿಮಣಿ ಚಿತ್ರಲೇಖೆ ಪೇಳ್ದಳ್ ಮುದದಿಂ ॥೧೧೨॥

**ರಾಗ ಮಾರವಿ ಏಕತಾಳ**

ವನಿತೆಯೇಕೆನ್ನನು ಪೊಗಳುವೆ ಭೇದವೆ । ನಿನಗೆನಗೀರ್ವರಿಗೆ ॥
ದಣಿದಿಹ ಕೇಳ್ನಿನ್ನಿನಯನಿವಗೆ ಮ । ಜ್ಜನಗೈಸಿನ್ನ ಬಲೆ ॥೧೧೩॥

ಎಂದಮಾತನು ಕೇಳ್ದುಷೆ ಸ್ಮರಜಾತನಿ । ಗಂದು ಮಜ್ಜನಗೈಸಿ ॥
ಚಂದದಿಂ ಭೋಜನವಾಗಲು ಪರಮಾ । ನಂದದೊಳನವರತ ॥೧೧೪॥

ಸುರತಕ್ರೀಡೆಯೊಳಿರು ತಿರ್ದಳುಮತಿ । ಸರಸದೊಳಿನ್ನವಳಾ ॥
ಹರುಷವ ನಾನೇನೊರೆವೆನು ಕೇಳೈ । ಧರಣೀಶಲಲಾಮ ॥೧೧೫॥

**ಕಂದ**

ಅನಿರುದ್ಧನೊಳೀ ಪರಿಯಿಂ ।
ದಿನದಿನದೊಳು ಬಾಣತನುಜೆಯತಿ ಸಂಭ್ರಮದಿಂ ॥
ಮನುಮಥಕೇಳಿಯೊಳಿರುತಿರೆ ।
ಮುನಿಪತಿ ನಾರದನಸುರನ ಸಭೆಗೇಳ್ತಂದಂ ॥೧೧೬॥

**ರಾಗ ಸಾಂಗತ್ಯ ರೂಪಕತಾಳ**

ಅಂಬರಮಣಿ ಭೂಮಿಗಿಳಿವಂತೆ ನಭದಿಂದ । ಕುಂಭಿನಿಗಿಳಿದ ನಾರದನು ॥
ಅಂಬುಜನಾಭ ಶಂಕರರ ನಾಮಸ್ಮರಣೆ । ಯಿಂ ಬಂದ ಶೋಣಿತ ಪುರಕೆ ॥೧೧೭॥

**ರಾಗ ಭೈರವಿ ಅಷ್ಟತಾಳ**

ನಾರದಮುನಿಪನನು । ಕಾಣುತಲಮ । ರಾರಿ ಬಾಣಾಖ್ಯ ತಾನು ॥
ಭೋರನೆದ್ದಿದಿರ್ಬಂದು ಪರಮಋಷಿಯ ಚರ । ಣಾರವಿಂದಕೆ ನಮಿಸಿ ॥೧೧೮॥

ಕರವಿಡಿದಾಸನದಿ । ಕುಳ್ಳಿರಿಸುತ । ಚರಣಪೂಜೆಯ ಮುದದಿ ॥
ವಿರಚಿಸಿ ಬಲು ಸ್ತುತಿಗೈದು ಮಗುಳೆ ಪಾದ । ಕೆರಗುತ್ತಲಿಂತೆಂದನು ॥೧೧೯॥

ಯತಿ ರಾಯನೊಲಿದು ನೀನು । ಬಂದುದರಿಂದ । ಕೃತಕೃತ್ಯನಾದೆ ನಾನು ॥
ಮತಿವಂತನೆನ್ನಲ್ಲಿಗೈತಂದ ಕಾರ್ಯವ । ನತಿವೇಗದಿಂದ ಪೇಳು ॥೧೨೦॥

ಬಾಣ ನಿನ್ನೈಶ್ವರ್ಯಕೆ । ನಿಖಿಳ ಗೀ । ರ್ವಾಣರು ಸರಿಯಿಲ್ಲ ಕೇ ॥
ಳೇಣಾಂಕ ಧರ ಬಂದು ಬಾಗಿಲ ಕಾಯ್ದಿರ್ದ । ಕಾಣನಾದವಮಾನವ ॥೧೨೧॥

ಆತ ಕಾಣದೆ ಪೋದರೆ । ಪೋಗಲಿ ಮುನಿ । ನಾಥ ನೀನರಿದಿರ್ದರೆ ॥
ಏತರ ಮಾನಹಾನಿಯ ಪೇಳು ಪೇಳೆಂದು । ಕಾತರದಿಂ ಕೇಳಿದ ॥೧೨೨॥

ಉಸಿರೆಂದರುಸಿರ್ವೆ ನಾನು । ನೀ ತಲೆಯ ತ । ಗ್ಗಿಸುವ ಹಾಗಾಯಿತಿನ್ನು ॥
ಅಸುರೇಂದ್ರ ಕೇಳ್ ನಿನ್ನ ತನುಜಾತೆ ಸೂಳೆಯಂ । ತೆಸೆವಳೇನೆಂಬೆನಯ್ಯ ॥೧೨೩॥

**ವಚನ**

ಈ ಪರಿಯಿಂ ನಾರದ ಪೇಳಲಾ ಬಾಣಾಖ್ಯನತಿ ಚೋದ್ಯವೆತ್ತುಸುರಿದನದೆಂತೆನೆ -

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸುರಮುನಿಪ ನೀನಿಂತು ಪೇಳ್ವರೆ । ತರಳೆಯಾಲಯದಲ್ಲಿ ಕಾವಲ ।
ನಿರಿಸಿಹೆನು ಬಲು ಖಳರನಲ್ಲಿಗೆ । ಬರುವರುಂಟೆ ॥೧೨೪॥

**ರಾಗ ಸಾಂಗತ್ಯ ರೂಪಕತಾಳ**

ಅಸುರಾಧಿಪತಿ ನೀನು ಬಡವನೆ ಬಲ್ಲೆ ಸಾ। ಹಸವಂತನೆಂದೆಂಬುದನ್ನು ॥
ಪುಸಿಯಲ್ಲೋರ್ವನು ಬಂದು ಪೊಕ್ಕಿಹ ಕಾವಲಿ। ರ್ದಸುರರರಿಯದಂತೆ ಕೇಳು ॥೧೨೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದುದನು ಕೇಳುತ್ತ ಖಳ ಖತಿ। ಯಿಂದ ನುಡಿದನು ಮುನಿಪ ಕೇಳ್ಳೈ।
ಬಂದವನು ತಾನಾರು ಮುಗಿಸುವೆ। ನೊಂದು ಕ್ಷಣದಿ ॥೧೩೬॥

**ರಾಗ ಸಾಂಗತ್ಯ ರೂಪಕತಾಳ**

ಬಂದವನ್ಯಾರೆಂದರೆ ಕೇಳು ಪೇಳುವೆ। ಇಂದಿರೆಯರಸನ ಮೊಮ್ಮ ॥
ಕೊಂದೆನೆಂದರೆ ನಿನ್ನ ಕೈಗಳ ಒಡೆಸುವ। ನೆಂದನು ಮುನಿನಾಥ ನಗುತ ॥೧೨೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಋಷಿಕುಲತಿಲಕ ನೀನಲ್ಲದುಳಿದವ। ರುಸಿರಿದರೆ ಶಿಕ್ಷಿಸುವೆನೆನುತಲೆ।
ರಸೆಯೊಳೆನಗಿದಿರುಂಟೆ ಕೇಳೀ। ಪೊಸಬಗೆಯನು ॥೧೨೮॥

**ರಾಗ ಸಾಂಗತ್ಯ ರೂಪಕತಾಳ**

ಹರ ನಿನ್ನ ಮನೆಯ ಬಾಗಿಲ ಕಾಯ್ವನೆಂದಹಂ। ಕರಿಸದಿರಾ ಹರಿಗಿದಿರೆ ॥
ಬರುವ ಭಾಗ್ಯವದೇನೊ ಪುಸಿ ಪೇಳ್ದರೆನಗೆ। ತರಳೆಯಾಲಯವ ನೋಡೆಂದ ॥೧೨೯॥

**ಕಂದ**

ಎಂದಾ ವಾಕ್ಯವನುಂ ಕೇ।
ಳ್ದೆಂದಂ ಖತಿಯಿಂದ ದಾನವೇಂದ್ರಂ ಭರದಿಂ ॥
ಮುಂದಿಹ ಕುಂಭಾಂಡನೊಳಿಂ।
ತೆಂದನು ಅತಿ ಗರ್ಜಿಸುತ್ತಲೆ ಪೇಳ್ವೆನದಂ ॥೧೩೦॥

**ರಾಗ ಕಾಂಭೋಜಿ ಝಂಪೆತಾಳ**

ಧುರಧೀರ ಮಂತ್ರಿ ಕೇಳ್ ಮುನಿ ಪೇಳ್ದ ವಚನವಿದು। ಸರಿಬಂತೆ ನಿನ್ನ ಮನಕಿಂದು ॥
ತುರುಗಾಯಿಯಣುಗನಾತ್ಮಜನೆನ್ನ ಮಗಳಿಂಗೆ। ವರನಾಗಬಲ್ಲನೇನಯ್ಯ ॥೧೩೧॥

ದಾನವಾಧಿಪ ಕೇಳು ಪುಸಿ ಪೇಳ್ವನಲ್ಲ ಸುರ। ಮೌನಿ ತಾ ಸುಜ್ಞಾನಿಯೈಸೆ ॥
ಏನಾದಡೊಮ್ಮೆ ನಾ ಪೋಗಿಯದನೀಕ್ಷಿಸಿ ನಿ। ದಾನವರಿತುಸಿರ್ವೆ ನಿನ್ನೊಡನೆ ॥೧೩೨॥

ಎಲೆಸಚಿವನಾಲಿಸೆನ್ನಣುಗೆಯಾಲಯಕೆ ನೀ। ಘಳಿಲನಿರದೈದಿ ಬಂದವನ ॥
ಬಲವಂತನಾದಡವನನು ತಾರದಿರೆ ನಿನ್ನ। ನುಳಿಸೆನರಿತೈದು ವೇಗದಲಿ ॥೧೩೩॥

ಜೀಯ ನಿನ್ನಲಿ ಪೇಳ್ದ ಮಾತಿಗಂತರವುಂಟೆ । ಮಾಯದಂಥವನಾದಡೇನು ॥
ಆಯದಂತೆಡಗೆಡಹಿ ತಂದೊಪ್ಪಿಸುವೆನಸುರ । ರಾಯ ಚಿತ್ತೈಸೆಂದನಾಗ ॥೧೩೪॥

**ಕಂದ**

ಎಂದಪ್ಪಣೆಗೊಂಡಾಶರ ।
ವೃಂದವನುಂ ನೆರಪಿ ಮಂತ್ರಿವರನಾ ಕ್ಷಣದೊಳ್ ॥
ನಿಂದತಿ ರೋಷವ ತಾಳ್ದೈ ।
ತಂದನು ಘನಘೋಷದಿಂದಲುಷೆಯಾಲಯಕಂ ॥೧೩೫॥

**ವಾರ್ಧಕ**

ಉತ್ತರಾಸುತನೆ ನೀಂ ಚಿತ್ತವಿಸು ಮಂತ್ರಿಯುಂ ।
ಮತ್ತೆ ಖತಿವೆತ್ತು ಪೊಳೆವುತ್ತಲಿಹ ಖಡ್ಗಮ ।
ನ್ನೆತ್ತಿ ಹಯ ಹಸ್ತಿ ರಥ ಪತ್ತಿಸಂದೋಹದಿಂ ದೊತ್ತಿ ನಡೆವುತ್ತಲಿರಲು ॥
ಸತ್ತಿಗೆಯ ಮೊತ್ತಂಗಳೆತ್ತಲುಂ ತಮವ ಬೆಂ ।
ಬತ್ತುತ್ತಿರೆ ದೈತ್ಯರುರೆ ಸತ್ವದಿಂದೈತರಲ್ ।
ಮತ್ತೆ ಕಾಣುತ್ತೋರ್ವ ಸತಿಯು ಬೆದರುತ್ತಂದು ಚಿತ್ರಲೇಖೆಗೆ ಪೇಳ್ದಳು ॥೧೩೬॥

**ರಾಗ ಶಂಕರಾಭರಣ ಅಷ್ಟತಾಳ**

ಕೇಳೆ ಅಕ್ಕ ನಾರದನು ಬಾಣನ ಸಭೆಗೆ । ಬಂದು । ಪೇಳಿದನಂತೆ ವೃತ್ತಾಂತವನ್ನು ಆತಗೆ ॥
ಕಾಲನ ತೆರದಿ ದೈತ್ಯ ಕೋಪಿಸುತ್ತಿರೆ । ಮಂತ್ರಿ । ಕೇಳಿ ಬಂದನೀತನನ್ನು ಕೊಂಡುಪೋಪರೆ ॥೧೩೭॥

ಎಂದ ಮಾತ ಕೇಳುತಲೆ ಚಿಂತಿಸುತಾಗ । ಮಂತ್ರಿ । ನಂದನೆ ಬಾಗಿಲನೆಲ್ಲನಿಕ್ಕಿ ಬೇಗ ॥
ತಂದು ರಾಕ್ಷಸರನ್ನು ಕಾವಲನಿರಿಸಿ । ತಾನು । ಬಂದು ಪೇಳಿದಳು ಕಾಮಜಗೆ ಚಿಂತಿಸಿ ॥೧೩೮॥

**ರಾಗ ನೀಲಾಂಬರಿ ರೂಪಕತಾಳ**

ಕೇಳಯ್ಯ ಸ್ಮರಜಾತ ನಾನೇಂಬ ವಚನವ । ಜಾಲಮಾತಲ್ಲ ಕಿವಿ ಗೊಟ್ಟಿದನೆಲ್ಲ ॥ ಪ ॥
ಋಷಿ ನಾರದನು ಬಂದು ಬಾಣನೊಳ್ ಚಾಡಿಯ । ನುಸಿರಲು ಬಹುಕೋಪಿಸಿದನಂತೆ ॥
ಅಸುರೇಂದ್ರ ಮಂತ್ರಿಯ ಕರೆದಟ್ಟಲಾತ ರಾ । ಕ್ಷಸಬಲ ಸಹ ಬರ್ಪನದಕೋ ನೋಡಯ್ಯ ॥೧೩೯॥

ಖಳರೆಲ್ಲರ್ ಬಂದೆಮ್ಮ ಮನೆಯ ಮುಂಬಾಗಿಲ । ಬಳಿಯಿರುವರ್ ನಿನ್ನ ತಿಂಬೆವೆಂದೆನುತ ॥
ಲಲಿತಾಂಗಿಯುಷೆಗಾಗಿ ನಾನೆ ಕರೆತಂದಿಲ್ಲಿ । ಕೊಲಿಸಿದಂತಾಯ್ತುಕಟೆಂದಳಲಿದಳು ॥೧೪೦॥

ಜಲಜಾಕ್ಷಿ ಮಂತ್ರಿಜೆ ಕೇಳಾ ಮಾತೆಯ ಗರ್ಭ । ದೊಳ್ ಪೊಕ್ಕರ್ ಬಿಡದು ಲೋಕೇಶನ ಬರಹ ॥
ಚೆಲುವೆಯೋರ್ವಳ ದೊರಕಿಸಿದೆ ನೀನೆಗನೆನ್ನ । ಕೊಲಿಸಿದೆ ಎಂಬುದುಂಟೆನೀ ಪೇಳು ಜಾಣೆ ॥೧೪೧॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಇಂತು ಮಾತಾಡುವುದನು ಕೇಳ್ದು । ತನ್ನ । ಕಾಂತನ ಪಾದದೆಡೆಗೆ ಬಿದ್ದು ॥
ಕಾಂತೆಯುಷೆಯು ಪೊರಳುತ್ತಿರೆ । ಕಂಡು । ಸಂತೈಸಿದನು ಸುಮ್ಮನಿರೆ ನೀರೆ ॥೧೪೨॥

ಬೇಡವೆ ನಿನಗೆ ಶೋಕವು ಕೇಳು । ಯುದ್ಧ । ಮಾಡುವುದನು ನೋಡು ನೀನೇಳು ॥
ಕೂಡಿದ ರಾಕ್ಷಸಬಲವನು । ಮಣ್ಣ । ಗೂಡಿಸುವೆನು ನಿಮಿಷದೊಳಾನು ॥೧೪೩॥

ಎಂದು ಸತಿಯ ಕಂಬನಿಯನು । ಸೆರ । ಗಿಂದಲೊರೆಸಿ ಚುಂಬಿಸಿದನು ॥
ಚಂದದಿಂದಪ್ಪಿ ಸಂತೈಸಿದ । ರಣ । ಕಂದು ಶೃಂಗರವಾದನನಿರುದ್ಧ ॥೧೪೪॥

**ವಾರ್ಧಕ**

ಧರಣಿಪತಿ ಲಾಲಿಸೀ ಪರಿಯಿಂದನಂಗಜಂ ।
ಧುರಕೆ ಸನ್ನಹನಾಗಿರಲ್ ಮಂತ್ರಿಜಾತೆ ಕಂ ।
ಡುರುತರ ಪ್ರೇಮದಿಂ ಯಂತ್ರಮಣಿಯಂ ರಚಿಸಿ ತೋಳ್ಗದಂ ಕಟ್ಟಿ ಬಳಿಕಾ ॥
ದುರುಳರೈತರ್ಪ ಸಮಯದೊಳಿವಂ ಬರಿಗೈಯೊ ।
ಳಿರಬಾರದೆಂದು ಕಪಟದೊಳೆ ಧನುಶರವನುಂ ।
ತರಿಸಿಕೊಟ್ಟಳು ಮತ್ತೆ ಸಂಭ್ರಮದಿ ಸೇಸೆಯಂ ತಳಿಯೆ ಸ್ಮರಸುತನೆದ್ದನು ॥೧೪೫॥

**ಕಂದ**

ಕಂದರ್ಪಾತ್ಮಜನೀ ಪರಿ ।
ಯಿಂದಂ ಶಸ್ತ್ರಾಸ್ತ್ರವಿಡಿದು ಮೆರೆದಿರ್ಪಾಗಳ್ ॥
ಬಂದಾ ಸಚಿವಂ ಗರ್ಜಿಸು ।
ತೆಂದಂ ಪೊರಬಳಿಯ ನಿಂದುಮೇವೇಳ್ವೆನದಂ ॥೧೪೬॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪಗಲವೇಳ್ಯದಿ ಬಾಗಿಲನು ಬಲು । ಬಿಗುಹಿನಿಂದಿಕ್ಕಿರುತಿರುವರಾರ್ ।
ತೆಗೆಯೊ ಬೇಗದೊಳೆನಲು ಪೇಳ್ದಳು । ಮುಗುದೆಯಂದು ॥೧೪೭॥

ತೆಗೆಯೆ ಬಾಗಿಲನಾಳ್ದನಳಿದರೆ । ಜಗತಿಯಲಿ ಬಾಳುವೆನೆ ಕಾಂತನ ।
ನಗಲಲಾರೆನು ಗೃಹಕೆ ವಹ್ನಿಯ । ಪೊಗಿಸು ಹೀಗೆ ॥೧೪೮॥

ಎನಲು ಕೇಳುತ ಮಂತ್ರಿನಗುತಾ । ಮುನಿಪ ಪೇಳಿದ ಮಾತು ಧಿಟವಾ ।
ಯ್ತೆನುತ ಮದದಾನೆಗಳ ತರಿಸಿದ । ಕಿನಿಸಿನಿಂದ ॥೧೪೯॥

**ರಾಗ ಶಂಕರಾಭರಣ ಮಟ್ಟೆತಾಳ**

ಕರಿಗಳಿಂದ ಬಾಗಿಲನ್ನು | ಮುರಿಸಲನುವ ಗೈಯೆ ಕಂಡು |
ಸ್ಮರಜ ಖಾತಿವೆತ್ತು ಹೂಂ | ಕರಿಸುತಾ ಕ್ಷಣ ||
ಶರಶರಾಸನವನು ಕೊಂಡು | ಭರದಿ ಕದವ ತೆಗೆದು ಪೊರಟು |
ಸರಳಿನಿಂದ ಗಜವ ಧರಣಿ | ಗುರುಳಲೆಚ್ಚನು ||೧೫೦||

ಬಿಡದೆ ರಥಿಕರೊಂದು ಕಡೆಯ | ಘುಡುಘುಡಿಸುತ ಸರಳ ಮಳೆಯ |
ಕಡುಗಿ ಸುರಿಯೆ ಕಂಡು ತರಳ | ಫಡಫಡೆನುತಲಿ ||
ಒಡನೆ ಸತ್ವದಿಂದಲಾಗ | ಧಡಿಗ ಖಳರತೀರ್ಚೆ ತೇಜಿ |
ಗಡಣವೈದೆ ಎಲ್ಲ ಕಾಲ | ನಡೆಗೆ ಕಳುಹಿದ ||೧೫೧||

ಧುರದಿ ದೈತ್ಯರೆಲ್ಲ ಯಮನ | ಪುರವನೈದೆ ಕಂಡು ಮಂತ್ರಿ |
ಬೆರಳ ಮೂಗಿಲಿಟ್ಟು ಪಂಚ | ಶರಜಗೆಂದನು ||
ತರಳನೆಂದು ಬಿಟ್ಟರೆ ಈ | ತೆರದ ಗರ್ವವೇತಕೆನ್ನ |
ಪರಿಯ ನೋಡೆನುತ್ತ ಕರೆದ | ಶರದ ವೃಷ್ಟಿಯ ||೧೫೨||

ದುರುಳನೆಚ್ಚದಂಬ ತರಿದು | ಸ್ಮರಜ ಪೇಳ್ದನೆಲವೊ ನಾನು |
ತರಳನಾದಡೇನು ಎನ್ನ | ಸರಳು ತರುಣವೆ ||
ಬರಿಯ ಮಾತಿನಿಂದಲೇನು | ಪರಿಕಿಸೆನುತಲಾಗಲೈದು |
ಶರವನೆಸೆಯೆ ಮಂತ್ರಿಯುರವು | ಬಿರಿದುದಾಕ್ಷಣ ||೧೫೩||

ಎದೆಯು ಬಿರಿಯೆ ರೋಷದಿಂದ | ಮದಮುಖತ್ವದೊಳಗೆ ಸಚಿವ |
ನುದಧಿ ಕದಡೆ ಬೊಬ್ಬಿಡುತ್ತ | ಲೊದರೆ ಗರ್ಜಿಸಿ ||
ಮದನಜಾತ ನಿಲ್ಲು ನಿಲ್ಲು | ಬೆದರಬೇಡೆನುತ್ತ ಬಾಣ |
ಎದೆಯ ಸಮವೆ ಕೀಲಿಸಲ್ಕೆ | ರುಧಿರವೊರೆತುದು ||೧೫೪||

ಕೋಪದಿಂದಲಾಗಲಿಕ್ಷು | ಚಾಪನಣುಗನೈದೆ ತನ್ನ |
ಚಾಪವನ್ನು ನೆಗಹಿ ಸುಪ್ರ | ತಾಪದಿಂದಲಿ ||
ಭಾಪು ಭಳಿರೆ ವೀರನಾನ | ಲಾಪಡಿದಕೊ ಎನುತಲೆಸೆಯ |
ಲಾ ಪಲಾಶ ಮಂತ್ರಿ ಬಿದ್ದ | ಭೂಪ ಲಾಲಿಸು ||೧೫೫||

**ಕಂದ**

ದುರುಳಖಳಂ ಮೂರ್ಛೆಯೊಳಂ |
ದರೆನಿಮಿಷಂ ಬಿದ್ದು ಮೈದೆ ತರಹರಿಸುತ್ತಂ ||
ಭರದಿಂದೆದ್ದುರೆ ಕಿನಿಸಿಂ |
ಧರಣಿಯು ಬಿರಿವಂತೆ ಗರ್ಜಿಸುತ್ತಿಂತೆಂದಂ ||೧೫೬||

**ರಾಗ ಪಂಚಾಗತಿ ಮಟ್ಟೆತಾಳ**

ಭಳಿರೆ ಕಾಮತನುಜ ಕುವರನೆಂದು ದಯದೊಳು ।
ಉಳುಹೆ ಶೌರ್ಯವಂತನಾದೆ ನೀನು ಧುರದೊಳು ॥
ಗೆಲಿದೆನೆಂದಹಂಕರಿಸದಿರಿನ್ನು ಕೇಳೆಲೊ ।
ಬಲಿಯ ಕೊಡುವೆ ನಿನ್ನ ಭೂತಗಳಿಗೆ ನಿಲ್ಲೆಲೊ ॥೧೫೭॥

ಎಂದು ಕಿನಿಸಿನಿಂದಮಂತ್ರಿ ಸರಳಮಳೆಯನು ।
ನಿಂದು ಸುರಿಯೆ ಸ್ಮರಜನಿರದೆ ನಡುವೆ ತಡೆದನು ॥
ಮುಂದುವರಿದು ದೈತ್ಯ ಗದೆಯನಿಡಲು ಕಂಡನು ।
ಒಂದು ಶರವ ಕಡಿದು ಬಿಸುಟ ಮದನಜಾತನು ॥೧೫೮॥

ಪಸುಳೆಗಿಷ್ಟು ಪಂಥವೇತಕೆನುತ ಕೋಪಿಸಿ ।
ಅಸುರಮಂತ್ರಿ ಕ್ರೂರಶರವನೆಚ್ಚು ಗರ್ಜಿಸಿ ॥
ಕುಸುಮಶರ ಸುತನು ಖಾತಿವೆತ್ತು ಬಾಣವ ।
ನೆಸೆದು ಖಂಡಿಸಿದನು ಸಚಿವ ಪಿಡಿದ ಚಾಪವ ॥೧೫೯॥

ಕರದ ಬಿಲ್ಲು ಮುರಿಯೆ ದನುಜನಾರ್ಭಟಿಸುತಲೆ ।
ಭರದೊಳೆದ್ದು ಪೊಸತು ಧನುವ ಪಿಡಿದ ಖತಿಯಲಿ ॥
ತರಳ ನಿಲ್ಲು ನಿಲ್ಲು ಬೆದರ ಬೇಡವೆನುತಲೆ ।
ಕೆರಳಿ ಸರಳ ಸುರಿಯೆ ಸ್ಮರಜ ಕಂಡು ಮುದದಲಿ ॥೧೬೦॥

ಬರುವ ನಾರಾಚಗಳನು ಭರದಿ ಕಡಿದನು ।
ಹರಿಯ ಮನದಿ ಸ್ಮರಿಸಿ ದಿವ್ಯಶರವನೆಚ್ಚನು ॥
ಉರಿಯನುಗುಳತ್ಯೈದಿ ಖಳನ ಫಣೆಗೆ ನಾಂಟಲು ।
ಸುರವಿರೋಧಿ ಮೂರ್ಛೆಯಿಂದ ಬಿದ್ದ ಭುವಿಯೊಳು ॥೧೬೧॥

**ಭಾಮಿನಿ**

ಧರಣಿಪತಿ ಕೇಳಿಂತು ಸಚಿವನು ।
ಮರವೆಯಿಂದೊರಗಿರಲನಂಗಜ ।
ಹರುಷದಿಂದೊಳಪೊಕ್ಕು ಸತಿಯೊಡನತಿವಿಲಾಸದಲಿ ॥
ಧುರದ ವೃತ್ತಾಂತವನು ಪೇಳ್ತಿರ ।
ಲಿರದೆ ದಾನವರಿತ್ತಲೈತಂ ।
ದರಿಭಯಂಕರ ಬಾಣಗೆರಗು ತುಸಿರ್ದರುರುಭಯದಿ ॥೧೬೨॥

**ರಾಗ ಸಾರಂಗ ಅಷ್ಟತಾಳ**

ಕೇಳಯ್ಯ ದೈತ್ಯರಾಯ । ನಾವೆಲ್ಲರು । ಪೇಳುವ ಮಾತು ಜೀಯ ।
ಜಾಲಮಾತಲ್ಲ ನಾರದರೆಂದ ವಚನವು । ಕಾಲನ ತೆರದಲಿ ಇಹನೊಬ್ಬವೀರನು ॥೧೬೩॥

ಕುಂಭಿವಾರವ ಮುರಿದ | ಸರಳಿನಲ್ಲಿ | ದೊಂಬಿಗಾರ ತರಿದ |
ಕುಂಭಾಂಡದಾನವನೆಂಬ ಮಂತ್ರೀಶನ | ಕುಂಭಿನಿಯೊಳಗೆ ಒಂದಂಬಿಲಿ ಕೆಡಹಿದ ||೧೬೪||

ಹೆಣ್ಣಿಗೆ ಬಂದನಲ್ಲ | ಕದನವನ್ನು | ಹಣ್ಣಲು ಬಂದವನು |
ಚೆಣ್ಣನೆಂದಿರ್ದರೆ ಉನ್ನತ ಖಳರನ್ನು | ಮಣ್ಣಗೂಡಿಪನು ಮುಕ್ಕಣ್ಣಭಕ್ತನೆ ಕೇಳು ||೧೬೫||

**ರಾಗ ಕಾಂಭೋಜಿ ಝಂಪೆತಾಳ**

ದೂತರಂಜುತಲೆಂದ | ಮಾತ ಕೇಳುತಲುಷೆಯ |
ತಾತ ಖಳರೊಳು ಪೇಳ್ದ | ಖಾತಿಯಂ ತಳೆದು ||೧೬೬||

ಕರೆಯಿರೋ ಪಟುಭಟರ | ಕರಿಹಯ ರಥಾರೋಹ |
ಕರನು ಬರಹೇಳಿರೆಂ | ದೊರೆದು ಕೋಪದಲಿ ||೧೬೭||

ಆನೆ ಕುದುರೆ ವರೂಥ | ಸೇನೆಗಳು ಸಹಿತಲಾ |
ದಾನವನು ಪೊರಟನೀ | ಶಾನ ತಾ ಬೆದರೇ ||೧೬೮||

ನಡೆವ ಭರದಲಿ ಕೂರ್ಮ | ನೊಡಲು ಕಂಪಿಸೆ ಪೊಡವಿ |
ನಡುಗಿದುದು ಮೇರು ಶಿರ | ಗೊಡಹಲೈತಂದ ||೧೬೯||

**ಕಂದ**

ಉಗ್ರದೊಳೇಳ್ತರ್ಪವನಸು |
ರಾಗ್ರಣಿಯೆಂದರಿದು ಮದನಪುತ್ರಂ ಸತಿಯಂ ||
ಶೀಘ್ರದೊಳೊಡಬಡಿಸುತೆ ಹ |
ಸ್ತಾಗ್ರದೊಳುಂ ಚಾಪವಿಡಿದು ಮೈತಂದಣಿಗಂ ||೧೭೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಣಕೆ ಸನ್ನಹನಾಗಿ ಮನ್ಮಥ | ನಣುಗ ನಿಂತಿರೆ ದನುಜರಂಕದ |
ಕಣನ ಮುತ್ತಿದರಾಗ ಕರೆವುತ | ಕಣೆಯ ಮಳೆಯ ||೧೭೧||

ದಾನವರು ಸುರಿವಂಬನೆಲ್ಲವರ | ಮಿನಕೇತನಭವ ತರಿಯೆ ಬಲಿ |
ಸೂನು ಕೋಪವ ತಾಳ್ದುಖಳರೊಳು | ತಾನುಸಿರ್ದ ||೧೭೨||

ಕೊಲ್ಲಿ ಇರಿಯಿರಿ ಕಡಿಯಿರೀತನ | ಬಿಲ್ಲ ಬೊಬ್ಬೆಗೆ ಹೆದರದಿರಿ ನಿಂ |
ದಲ್ಲಿ ನಿಲಗೊಡದಿರಿ ಎನುತ ರಣ | ಮಲ್ಲನಂದು ||೧೭೩||

ಮತ್ತಗಜ ಹಯ ರಥ ಪದಾತಿಯ | ಮೊತ್ತವನು ನೂಕಿದನು ತರಣಿಯ |
ಮುತ್ತುವಾ ಮುಗಿಲಂತೆ ಕವಿದರು | ದೈತ್ಯರಂದು ||೧೭೪||

**ರಾಗ ಮಾರವಿ ಏಕತಾಳ**

ಬಲಿತನುಜನ ಪೇ | ರ್ಬಲ ಕೋಪದೊಳಂ | ದಿಳೆ ಬಳುಕಲು ಮಾ | ರ್ಮಲೆತೈತರೆ ಕಂ |
ಡಲಸದೆ ಸ್ಮರನ ತ | ರಳ ಕೂರ್ಗಣೆಯಿಂ | ಕಳುಹಿದ ನಿನಜನ ನಿಳೆಯಕೆ || ಬೇಗನೆ ||೧೭೫||

ಅಸಮಸಾಹಸರಾ | ದಸುರರು ಗಜ ಹಯ | ವಿಸರದೊಳೈದುತ | ಮುಸುಕಲು ಶಕ್ತಿಯೊಳ್ |
ಕುಸುಮ ಶರನ ಸುತ | ಪೊಸಮಸೆ ವಿಶಿಖದಿ | ಕುಸುರಿದರಿದ ಪಸರಿಸಿದಬುಧಿಯೊಳು ||೧೭೬||

ಸಾಲ್ಗೈಯ್ಯನ ಕ | ಟ್ವಾಳ್ಗಳ ಯಮನ ಪೊ | ಳಲ್ಗೆ ಪೊಗಿಸೆಯೆ ಸ | ರಳ್ಗರೆದು ಹಯದ |
ಕಾಲ್ಗಳ ಗಜದ ಸೊಂ | ಡಿಲ್ಗಳ ಕಡಿಯೆ ಕ | ರುಳ್ಗಳ ಸವಿದು ಮರುಳ್ಗಳು ಕುಣಿದುವು || ||೧೭೭||

**ಕಂದ**

ಈ ಪರಿಯಿಂ ಸ್ಮರಸಂಭವ |
ನಾ ಪಟುಭಟರಂ ವಿಘಾತಿಸುತ್ತಿರೆ ಬಾಣಂ ||
ಕೋಪವ ತಳೆದಾ ಪ್ರಳಯದು |
ಮಾಪತಿಯಂತೈದೆ ಗರ್ಜಿಸುತ್ತಿಂತೆಂದಂ ||೧೭೮||

**ರಾಗ ಪಂಚಾಗತಿ ಮಟ್ಟೆತಾಳ**

ಎಲವೊ ಮನ್ಮಥಾತ್ಮಭವನೆ ಖಳಸಮೂಹವ |
ಗೆಲಿದೆನೆಂದು ಹಿಗ್ಗಬೇಡ ನಿನ್ನ ದೇಹವ ||
ತಳುವದೀಗ ಸೀಳ್ದು ಕರುಳ ಮರುಳುಬಳಗಕೆ |
ಬಲಿಯ ಕೊಡುವೆನೀಗ ನಿಲ್ಲು ನಿಲ್ಲು ಸಮರಕೆ ||೧೭೯||

ಎನಲು ಸ್ಮರಜ ಪೇಳ್ದ ಮಾವ ಕೇಳಿ ನಿಮ್ಮಯ |
ತನುಜೆಯಾಳ್ದ ನಾದೆನೆನ್ನೊಡನೆ ಖಾತಿಯ ||
ಮನದೊಳಿಟ್ಟು ಮಾತನಾಡಲೇಕೆ ಸುಮ್ಮನೆ |
ಮನೆಗೆ ದಂಪತಿಗಳನು ಕಂದೊಯ್ಯೊ ಗಮ್ಮನೆ ||೧೮೦||

ಮಾರನಣುಗ ಕೇಳೊ ಎನ್ನಾತ್ಮಭವೆಯನು |
ಯಾರು ಕೊಟ್ಟರೆಲವೊ ನಿನಗೆ ಮಾವನ್ಯಾವನೊ ||
ಜಾರತನದ ಮಾತದೆನ್ನ ಕೂಡೆ ನಡೆಸದೆ |
ವೀರತನವದುಳ್ಳಡೀಗ ತೋರು ಬೇಗದಿ ||೧೮೧||

ಯಾರು ಸುತೆಯನಿತ್ತರೆಂಬ ಮಾತದೇತಕೆ |
ಶಾರದಾಂಬೆ ವರನ ತಂತ್ರವದುವೆ ಲೋಕಕೆ ||
ಧೀರತನವ ತೋರ್ಪುದಕ್ಕೆ ನೀವು ಹಿರಿಯರು |
ಮಿರಿ ನಿಮ್ಮೊಳಾನು ಸೆಣಸೆ ಮೆಚ್ಚರಮರರು ||೧೮೨||

**ರಾಗ ಭೈರವಿ ಏಕತಾಳ**

ಎನೆ ಕೇಳ್ದಾಶರನಾಗ । ಶರ । ವನು ಬಿಟ್ಟನು ಬಲು ಬೇಗ ॥
ಅನಿರುದ್ಧನು ಛೇದಿಸುತ । ಬಾ । ಣನಿಗೆಚ್ಚನು ನಸುನಗುತ ॥೧೮೩॥

ತರಳನೆಸೆದ ಸರಳನ್ನು । ಕಡಿ । ದರೆನಿಮಿಷದಿ ದಾನವನು ॥
ಉರುಮಂತ್ರಾಸ್ತ್ರವೆಸೆಯಲು । ಸ್ಮರ । ತರುಣನದನು ಖಂಡಿಸಲು ॥೧೮೪॥

ಭಳಿರೆ ಕುವರನೆಂದೆನುತ । ಭೂ । ತಳ ಬೆಚ್ಚಲು ಬೊಬ್ಬಿಡುತ ॥
ಮುಳಿದು ಸಹಸ್ರಕರಗಳಲಿ । ಖಳ । ತಳುವದೆಚ್ಚನು ಕೋಪದಲಿ ॥೧೮೫॥

ಅನಿತು ಶರವ ಕತ್ತರಿಸಿ । ಕಾ । ಮನಸುತ ಕೋಪವ ಧರಿಸಿ ॥
ದನುಜಾಧಿಪ ತಡೆಯೆಂದು । ಅಂ । ಬಿನ ಮಳೆಗರೆಯಲ್ಕಂದು ॥೧೮೬॥

ಬರುವಂಬುಗಳನು ತರಿದು । ಪುರ । ಹರನಿತ್ತಸ್ತ್ರವ ತೆಗೆದು ॥
ಸ್ಮರಜ ತೊಲಗಬೇಡೆನುತ । ಬಹು । ಭರದೊಳೆಚ್ಚನು ಕೋಪಿಸುತ ॥೧೮೭॥

ಉರಿಯ ಸೂಸುತ ಬಂದಾಗ । ಉರ । ಕೆರಗಲು ಶರವತಿ ಬೇಗ ॥
ಹರಿಯ ಜಪಿಸುತನಿರುದ್ಧ । ಮೈ । ಮರೆದು ವಸುಧೆಯೊಳು ಬಿದ್ದ ॥೧೮೮॥

**ವಾರ್ಧಕ**

ಸ್ಮರಸುತಂ ಧರೆಗೊರಗೆ ಹರುಷದಿಂ ಖಳನವನ ।
ಪೊರೆಗೈದಿಯಾಲೋ ಚಿಸಿದನೀತನಂ ಮಡುಹಿ ।
ದರೆ ತನ್ನ ಸುತೆಗೆ ವೈಧವ್ಯಮಹುದೆಂದು ತತ್ಕಾಮಸುತನಂಗವನ್ನು ॥
ಕರದಿಂದ ತಡವರಿಸುತಿರಲಿತ್ತ ಉಷೆ ತನ್ನ ।
ವರನೈದೆ ತಾತನೊಳು ಸಿಕ್ಕಿದನು ಎಂದಳಲು ।
ತಿರೆ ಕಾಣುತಣುಗೆ ಕೇಳ್ ನಾ ಕೊಲ್ಲೆನಿವನನೆಂದೊಡಬಡಿಸಿದಂ ಮಗಳನು ॥೧೮೯॥

**ಕಂದ**

ತನುಜೆಯನುಂ ಸಂತೈಸಿಯ ।
ಮನುಮಥಭವನಂ ಕರಾಗ್ರದೊಳ್ ಪಿಡಿದಸುರಂ ॥
ಮನೆಗೇಳ್ತಂದಾ ನಾರದ ।
ಮುನಿಯಂಘ್ರಿಗೆ ನಮಿಸಿ ಭಕ್ತಿಯಿಂದಿಂತೆಂದಂ ॥೧೯೦॥

**ರಾಗ ಮಾರವಿ ಅಷ್ಟತಾಳ**

ಮುನಿವರ ಲಾಲಿಸಯ್ಯ । ನೀ ಪೇಳ್ದವ । ಚನವು ತಪ್ಪಲ್ಲ ಜೀಯ ॥
ತನುಜೆಯಾಲಯದಲ್ಲಿ । ದ್ದನ ಪಿಡಿತಂದೆನೀ ।
ತನಿಗೇನಾಜ್ಞೆಯ ಮಾಳ್ಪೆ । ಘನಮಹಿಮನೆ ಪೇಳು ॥೧೯೧॥

ಎನ್ನ ಕೇಳುವುದೇನಯ್ಯ । ದಾನವರಾಯ । ನಿನ್ನ ಬಾಗಿಲ ಬಳಿಯ ॥
ಪನ್ನಂಗಾಭರಣ ತಾ । ನಿನ್ನು ಕಾದಿರ್ಪನವ ।
ನನ್ನು ಕೇಳಿದರೆಲ್ಲ । ವನ್ನಿನಗುಸಿರುವ ॥೧೯೨॥

ಎನಲೀಶನಲ್ಲಿಗೈದೀ ಉಭಯ ಪಾದ । ವನಜಕೆರಗಿ ಮುದದಿ ॥
ದನುಜೇಶ ಕಾಮನ । ತನುಜನ ತೋರಿಸು ।
ತನುವಿನಿಂದ ಭವಗೆ । ವಿನಯದಿಂ ಪೇಳಿದ ॥೧೯೩॥

**ರಾಗ ಶಂಕರಾಭರಣ ಆದಿತಾಳ**

ಭಳಾಕ್ಷ ಕೇಳೆನ್ನಾತ್ಮಜೆ । ಯಾಲಯದಲಿ ಪೊಕ್ಕಿರ್ದನೀ ।
ಖೂಳ ನಿವನ ಪಿಡಿತಂದೆ ಮುಂದೇನಾಜ್ಞೆ ಜೀಯ ॥
ಲಾಲಿಸಯ್ಯ ಬಾಣಾಖ್ಯನೀ ಬಾಲಗಾಜ್ಞೆಯಾದರೆ ಶ್ರೀ ।
ಲೋಲ ಕಿನಿಸಿನಿಂ ಬರುವ । ತಾನೆ ಧಿಟವಯ್ಯ ॥೧೯೪॥

ಬಂದರತಿ ಲೇಸಾಯಿತವನ । ನೊಂದು ನಿಮಿಷ ಮಾತ್ರದಿ ನಾ ।
ಕೊಂದು ಕೆಡಹಿ ಈವೆ ಭೂತ । ವೃಂದಕ್ಕೆ ಜೀಯ ॥
ಕೊಂದೆನೆಂಬ ಮಾತಂತಿರಲಿ । ಇಂದಿರೆಯರಸನೊಳು ಕಲಹ ।
ಚಂದವಲ್ಲವೆನಗೆ ಕಂಡು । ದೆಂದೆ ಖಳರಾಯ ॥೧೯೫॥

ಹರನೆ ಬಿಡು ಬಿಡೆಂಥಾ ಮಾತ । ನೊರೆವೆ ಗೋವಳನ ಗರ್ವವ ।
ಮುರಿಯದಿದ್ದ ಮೇಲೆ ನಿನ್ನ । ಶರಣನೆ ಜೀಯ ॥
ಸುರವೈರಿ ಕೇಳಿಷ್ಟು ಸತ್ತ್ವ । ವಿರಲು ನಿನ್ನ ಮನಕೆ ತೋರ್ದ ।
ಪರಿಯ ಮಾಡೊಂದಕೆ ನಾನು । ಹೊರತೆ ಖಳರಾಯ ॥೧೯೬॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಪೇಳಲು ಕೇಳಿ ಖಳನತಿ । ಸಂತಸದೊಳೋಲಗಕೆ ಬಂದಾ ।
ಕಂತುತನಯಗೆ ವಜ್ರಶೃಂಖಲ । ವನ್ನು ತೊಡಿಸೆ ॥೧೯೭॥

ಮಾರಸುತಗಾದುದನು ಕಾಣುತ । ನಾರದಾಖ್ಯನು ನಗುತ ಪೇಳ್ದನು ।
ಚೋರತನದಿಂದಾಯಿತೀ ವ್ಯಥೆ । ಧೀರ ಕೇಳು ॥೧೯೮॥

ಎನುತಲತಿ ಹರುಷದಲಿ ಬಾಣನೊ । ಳನುವಿನಿಂ ಬೀಳ್ಕೊಂಡು ಮನದೊಳು ।
ವನಜನಾಭನ ನೆನೆದು ಪೊರಟನು । ವಿನಯದಿಂದ ॥೧೯೯॥

**ವಾರ್ಧಕ**

ನರನಾಥ ಲಾಲಿಸೈ ತ್ವರದಿ ಸುರಮುನಿಪನುಂ ।
ಹರುಷದಿಂ ವೀಣೆಯಂ ಕರದಿಂದ ಬಾರಿಸುತ ।
ಮರವಿಂದನಾಭನಿಹ ಪುರಕೆ ಬರುತಿರಲಿತ್ತಲುರುತರಾ ನಂದದಿಂದ ॥
ಮುರಹರಂ ಸಿಂಹವಿಷ್ಟರದೊಳುಂ ಕುಳಿತಿರಲ್ ।
ಸುರನರೋರಗರು ಬಂದೋಲಗಿಸಲಾ ಯತೀ ।
ಶ್ವರನು ನಡೆತಂದಚ್ಯುತನ ಪದಕೆ ಸಾಷ್ಟಾಂಗದಿಂದೆರಗಿದಂ ಮುದದೊಳು ॥೨೦೦॥

**ರಾಗ ಕೇದಾರಗೌಳ ಅಷ್ಟತಾಳ**

ಎರಗಿದ ಮುನಿಪನ ಶಿರವನ್ನು ಪಿಡಿದೆತ್ತಿ । ಕರುಣದಿಂದಲೆ ಕೃಷ್ಣನು ॥
ವರಸಿಂಹಾಸನದೊಳಾತನನು ಕೈಗೊಟ್ಟು ಕು । ಳ್ಳಿರಿಸುತಿಂತೆಂದನಾಗ ॥೨೦೧॥

ಪರಮಋಷಿಯೆ ಲಾಲಿಸೀರೇಳು ಜಗವ ಸಂ । ಚರಿಸುವೆ ನೀನನಿಶ ॥
ಸ್ಮರಜಾತನೆಲ್ಲಿರ್ಪನೆಂಬುದ ತಿಳಿದಿರ್ದ । ಡೊರೆಯೆನಲೆಂದನಾಗ ॥೨೦೨॥

ಹರನನು ನೋಳ್ಪ ತಾತ್ಪರ್ಯದಿ ಶೋಣಿತ । ಪುರಕೆ ನಾನೈದಿದೆನು ॥
ಮುರಮರ್ದನ ನಿನ್ನ ಮೊಮ್ಮನ ವಾರ್ತೆ ವಿ । ಸ್ತರವಾದುದೇನ ಪೇಳ್ವೆ ॥೨೦೩॥

ದುರುಳ ಬಾಣನ ಸಂಭವೆಯೋರ್ವಳುಷೆಯೆಂಬ । ಳಿರುವಳಾ ಕಾಮಿನಿಯ ॥
ಸುರತ ಲಂಪಟದಿಂದ ನಿರತ ಸಂತೋಷದೊ । ಳಿರುವನವಳ ಗೃಹದಿ ॥೨೦೪॥

ಈ ಪರಿಯೊಳಗೀತನಿಹನೆಂಬ ವಾರ್ತೆಯ । ನಾ ಪೇಳ್ದೆನಾಶರಗೆ ॥
ಕೋಪದಿಂ ದೈತ್ಯನೀ ತರಳನ್ನ ಪಿಡಿದು ಮ । ಹಾಪರಾಕ್ರಮದಿಂದಲಿ ॥೨೦೫॥

ಎರಡು ಕಾಲ್ಗಳಿಗೆ ಸಂಕಲೆಯನ್ನು ಜೋಡಿಸಿ । ಸೆರೆಯೊಳಗಿಟ್ಟಿಹನು ॥
ಹರಿಯೆ ನಾ ಕಂಡುದ ಪೇಳ್ದೆನೆನಲು ಕೇಳಿ । ಮರುಗಿ ರುಕ್ಮಿಣಿ ಪೇಳ್ದಳು ॥೨೦೬॥

**ರಾಗ ನೀಲಾಂಬರಿ ಆದಿತಾಳ**

ನಾರದಾಂಕಮುನಿನಾಥ । ಲಾಲಿಸೆನ್ನ ಮಾತ ॥
ಮಾರನ ಕುಮಾರನನ್ನು । ಕೊಂದೆಯಾ ನೀನು ॥೨೦೭॥

ಈತನಲ್ಲಿ ಇರುವನೆಂದು । ಏತಕೆ ನೀ ಪೇಳ್ದೆ ॥
ಏತರಾಜ್ಞೆಯ ಮಾಡುವನೊ । ದೈತೇಯ ತಾನಿಂದು ॥೨೦೮॥

ಅಣುಗ ಪೋದ ಮರುದಿವಸ । ಇನೆಯನೊಳು ಪೇಳ್ದೆ ॥
ವನಜಾಕ್ಷ ಮಾತಾಡಲಿಲ್ಲ । ಇನಿತಾಯಿತಲ್ಲ ॥೨೦೯॥

**ಕಂದ**

ಇಂತಾ ರುಕ್ಮಿಣಿಯುಂ ಘನ ।
ಸಂತಾಪವೆತ್ತುಮೈದೆ ಮರುಗಲ್ ಸ್ಮರನಂ ॥
ಕಾಂತೆಯುಮತಿ ದುಃಖಿಸಲುಂ ।
ತಾಂ ತವಕದೊಳೊಡಬಡಿಸುತೆ ಹರಿಯಿಂತೆಂದಂ ॥೨೧೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮರುಳು ಸತಿಯರಿರೇತಕಳುವಿರಿ । ತರಳ ಸಿಕ್ಕಿದರೇನು ಫಣೆಯಲಿ ।
ಬರೆದ ಬರಹವ ಮಿರಿ ನಡೆವರೆ । ಹರನಿಗರಿದು ॥೨೧೧॥

ರಕ್ಕಸನ ತೋಳ್ಗಳನು ಖಂಡಿಸಿ । ಸಿಕ್ಕಿದನಿರುದ್ಧನನು ತರುವೆನಿ ।
ದಕ್ಕೆ ತಪ್ಪಿದರಯ್ಯನಾಣೆಯು । ದುಃಖ ಬೇಡ ॥೨೧೨॥

ಎಂದವರನೊಳಿದಾಗ ಸೈಪಿ । ಟ್ಬಂದಿರಾಧವನೋಲ ಗಕ್ಕೈ ।
ತಂದು ಕರೆಸಿದನಾಗ ಯಾದವ । ವೃಂದವನ್ನು ॥೨೧೩॥

**ಭಾಮಿನಿ**

ಶಿರಿಯರಸ ಯಾದವರನೆಲ್ಲರ ।
ಕರೆಸಿ ಭೇರಿಯ ಹೊಡೆಸೆ ನಾದಕೆ ।
ಸರಸಿರುಹತನುಜಾಂಡವೊಡೆಯಿತ್ತೆಂಬ ತೆರನಾಗೆ ॥
ಕರುಣದಿಂ ಮಾಧವನು ಗರುಡನ ।
ಸ್ಮರಿಸೆ ತತ್‌ಕ್ಷಣದಲ್ಲಿ ಬಂದಾ ।
ಸರಸಿಜಾಕ್ಷಂಗೆರಗಿ ಕುಟ್ಮಲ ಕರದಲಿಂತೆಂದ ॥೨೧೪॥

**ರಾಗ ಮಾರವಿ ಏಕತಾಳ**

ಕರುಣಾಕರನೇಂ ಕಾರಣವೆನ್ನನು । ಸ್ಮರಿಸಿದೆ ಬೆಸಸೇನು ॥
ಒರೆಯೆಂದೆನುತಹಿವೈರಿಯು ಪುನರಪಿ । ಎರಗಿದ ಭಕ್ತಿಯೊಳು ॥೨೧೫॥

ಗರುಡ ನೀ ಲಾಲಿಸು ಕಂದರ್ಪಾತ್ಮಜ । ದುರುಳ ಬಾಣನ ಸುತೆಯ ॥
ಸುರತ ಕಲಾಪದೊಳಿರಲಾ ಖಳ ಕೇಳಿ । ಸೆರೆಯೊಳಿಕ್ಕಿಹನಂತೆ ॥೨೧೬॥

ಮದನನ ಪುತ್ರನ ಬಿಡಿಸಲು ಪೋಪೆವು । ಯದುಬಲ ಸಹಿತೀಗ ॥
ಅದರಿಂ ನಿನ್ನನು ಸ್ಮರಿಸಿದೆನೆನೆ ಹರಿ । ಪದಕೆರಗುತಲೆಂದ ॥೨೧೭॥

ಕಿರುಬಲ ದೈತ್ಯನ ಸಮರ ಕದೇನ್ ಸಥ । ಗರ ನೀವೇಕಿದಕೆ ॥
ಭರದಿಂದ್ದಾರಿಯಸುರನ ದುರ್ಗವ ಕಿತ್ತು । ತರದಡೆ ಸೇವಕನೆ ॥೧೦೮॥

ಉರಗಾರಾತಿ ಕೇಳಾದಾನವನಿಹ । ಪುರವ ಕಿತ್ತು ತಹರೆ ॥
ಹರ ತನ್ನ ಗಣಸಹಿತಾತನ ಬಾಗಿಲ । ನಿರತವು ಕಾಯ್ದಿಹನು ॥೧೦೯॥

ಮೃಡನೊಳು ನಿನ್ನ ಪರಾಕ್ರಮ ಕೊಳ್ಳದು । ಬಿಡು ನಿನ್ನ ಪಂಥವನು ॥
ಪಡೆ ಸಹ ನಮ್ಮನು ಪೊತ್ತು ನೀನೀ ಕ್ಷಣ । ನಡೆಯೆನೆ ನಮಿಸಿದನು ॥೧೧೦॥

**ಭಾಮಿನಿ**

ಎಂದು ಪೇಳ್ದತಿ ವೇಗದಿಂದರ ।
ವಿಂದನಾಭನು ಮುಖ್ಯ ಯದುಬಲ ।
ವೃಂದದೊಡನೆದ್ದಾ ಖಗೇಂದ್ರನೊಳ್ಳೈದು ಬೇಗೆನಲು ॥
ಇಂದಿರಾಧವನೊಡನೆ ನಾರದ ।
ನಂದು ಹಂಸೆಯನಡಂ ಬರೆ ಸಾ ।
ನಂದದಿಂದಂಬರಕೆ ನೆಗೆದ ಗರುತ್ಮನೊಲವಿನಲಿ ॥೧೧೧॥

**ರಾಗ ಭೈರವಿ ತ್ರಿವುಡೆತಾಳ**

ಗರುಡನೀ ಪರಿಯಿಂದ ಸತ್ತ್ವದಿ । ಹರಿಯ ಯದುಬಲ ಸಹಿತ ಪೊತ್ತಂ ।
ಬರಕೆ ಚಿಗಿದತಿ ವೇಗದಿಂದಲಿ । ಬರುತಿರಲು ಪವಮಾನನಂದದಿ ।
ಗರಿಯ ಗಾಳಿಗಜಾಂಡ ಕಂಪಿಸೆ । ಶರಧಿಗಳು ತುಳುಕಿದವು ಕುಲಭೂ ।
ಧರೆಗಳೋಲಾಡಿದವು ನೃಪ ಕೇ । ಳೊರೆಯಲಳವಲ್ಲವನ ಸಾಹಸ ॥ ಏನನೆಂಬೆ ॥೧೧೨॥

ಛಲದೊಳೀ ಪರಿಯಿಂ ಗರುತ್ಮನು । ನಿಲದೆ ಬಂದಾ ಬಾಣದೈತ್ಯನ ।
ಪೊಳಲ ಕಾಣುತ ಗಗನದಿಂದಿಳೆ । ಗಿಳಿದು ಬರುತಿಹ ರಭಸದೊಳಗಾ ।
ಖಲನ ರಥದ ಮಯೂರಕೇತನ । ಇಳೆಗೆ ಮುರಿದೊರಗಿದುದು ದಾನವ ।
ಕುಲವು ಭಯಪಡಲತ್ತಲಿತ್ತಲು । ಗೆಲವಿನಿಂ ಧರೆಗಿಳಿದ ಗರುಡನು ॥ ಏನನೆಂಬೆ ॥೧೧೩॥

**ವಾರ್ಧಕ**

ವಿನತೆಯಾತ್ಮಜನವನಿಗಿಳಿಯೆ ಸಂತೋಷದಿಂ ।
ವನರುಹಾಕ್ಷಂ ಧರಣಿ ಗಿಳಿಯಲಾನಂದದಿಂ ।
ಮುನಿಪ ಬಲಭದ್ರರೊಳು ಮಾತಾಡುತೈದೆ ಗೋಮತಿಯೆಂಬ ವರನದಿಯೊಳು ॥
ವಿನಯದಿಂ ಕಾಲ್ಮೊಗಂ ತೊಳೆದುಮಾತೀರದೊಳ್ ।
ಘನವೃಕ್ಷಮೂಲದೊಳ್ ಕುಳಿತಿರಲ್ಕೆಲ್ಲರುಂ ।
ಮನದಣಿಯಲಾ ಹಿಮೋದಕವೀಂಟಿ ತರುಗಳ ನೆಳಲ್ಗಳಲ್ಮಂಡಿಸಿದರು ॥೧೧೪॥

ಹರಿಪದೋದ್ಭವೆ ಯಾದುದರಿಂದೆ ಜಾಹ್ನವಿಯ ।
ನುರಗಭೂಷಣ ಶಿರದಿ ಧರಿಸಿದಂ ಸಜ್ಜನರ ।
ಪರಮ ಭಕ್ತಿಯೊಳು ಸ್ನಾನಂಗಳಂ ಮಾಡಿ ತಂತಮ್ಮ್ಮಘವನುಂ ಕಳೆವರು ॥
ಮುರಹರನ ಮೃದುಪದಸ್ಪರ್ಶವಾಯ್ತಿಂದು ನಾ ।
ಸರಿಯಾದೆನಾ ಗಂಗೆಗಾನೆಂದು ಗೋಮತೀ ।
ವರನದಿಯುಮ್ಮೈದೆ ತಾನುಬ್ಬಿತೆಂಬಂತೆ ಮೆರೆದುಕ್ಕಿ ಪರಿಯುತ್ತಿರ್ದಳು ॥೨೨೫॥

ಹರನಂತೆ ಶಿವೆಯುಕ್ತೆಯಾಗಿ ಕಾಂತಾರದಿಂ ।
ದುರೆ ಪುಂಡರೀಕರಂಜಿತೆಯಾಗಿ ಭೂದಿವಿಜ ।
ವರನಂತೆ ಘೋಷಶೋಭಿತೆಯಾಗಿ ಶಿರಿಯಂತೆ ಹರಿಗೆ ತಾಂ ಪ್ರೀತೆಯಾಗಿ ॥
ಅರಳಿರ್ಪ ಸುಮದಂತೆ ಸುರಭಿಯುತೆಯಾಗಿಯಂ ।
ಬರದಂತೆ ಹಂಸರಾಜಿತಳಾಗಿ ಜನಕಜಾ ।
ವರನ ಮನೆಯಂತೆ ಕುಶಸಂಯುಕ್ತೆಯಾಗಿ ತಾನಿರುತಿರ್ದಳಾ ಗೋಮತಿ ॥೨೨೬॥

**ಕಂದ**

ಆ ನದಿಯಂದವನೀಕ್ಷಿಸು ।
ತಾನಂದಂಬಡೆದುಮೆಲ್ಲರುಂ ಕುಳಿತಿರಲಾ ॥
ಮಿನಾಂಕಾದ್ಯದುವೀರರ್ ।
ಗಾನತಜರಕ್ಷನೆಂದನತಿ ಮೋದದೊಳುಂ ॥೨೨೭॥

**ರಾಗ ವೃಂದಾವನಸಾರಂಗ ತ್ರಿವುಡೆತಾಳ**

ಕೇಳಿ ಯಾದವರೆಲ್ಲ । ನಿಮ್ಮೊಳು ನಾನು । ಪೇಳುವುದೊಂದು ಸೊಲ್ಲ ।
ಇಂದೆಮ್ಮ । ಪಾಳೆಯ ಸಹಿತೆಲ್ಲರೈತಂದೆವಲ್ಲ ॥
ಖೂಳ ಬಾಣನ ತೋಳನವನಿಗೆ । ಹೋಳುಗಳೆವೆನೆನುತ್ತ ಮಾನಿನಿ ।
ಮೌಳಿಮಣಿಯೊಳು ನುಡಿದ ನುಡಿಗನು । ಕೂಲವಾವುದು ಪೇಳಿರೆನ್ನೊಳು ॥೨೨೮॥

ಖಳವೈರಿಯೆ ತೋಷದೊಳು । ನಮ್ಮಯ ಭುಜ । ಬಲವನ್ನು ನಿಮಿಷದೊಳು ।
ಸುಮ್ಮನೆ ನೀನು । ಕುಳಿತೀಕ್ಷಿಸು ದಯಾಳು । ಈ ವೇಳೆಯೊಳು ॥
ಮುಳಿದು ನಮ್ಮೊಳು ಕಲಹಕಾ ವಿಷ । ಗಳನು ನಿಂದೊಡೆಯಳುಕದಾಶರ ।
ಕುಲವ ಕಾಲನ ಬಳಿಗೆ ಸೇರಿಸಿ । ಘಳಿಗೆಯೊಳು ತತ್ಪೊಳಲನೆಲ್ಲವ ।
ತಳಪಟವ । ಗೈದೆಳೆದು ತರುವೆವು । ಬಲಿಸುತನ ನಿಂದಳುಕದಾ ಯದು ।
ಬಲಭುಜರು ಧುರಕೇಳಲವದಿರ । ನಿಲಿಸಿ ಹರಿ ಮುನಿ ತಿಲಕಗೆಂದನು ॥೨೨೯॥

**ರಾಗ ಕೇದಾರಗೌಳ ಆದಿತಾಳ**

ಕೇಳೊ ನಾರದ ಮಹಾಮುನಿವರ್ಯ । ಪೇಳುವೆ ನಿನಗೊಂದು ಕಾರ್ಯ ॥ ಪ ॥

ಅತಿವೇಗದಿಂ ಹೋಗಿ ಋಷಿವರನುಸಿರು ಪಾ । ರ್ವತಿಯ ಪ್ರಾಣೇಶನೊಳಿಂದು ॥
ಸೋತಂಗಜಸುತನನು ಮದದಿಂದ ಬಲಿ । ಸುತ ಸೆರೆಯೊಳಗಿಟ್ಟನಂತೆ ॥೨೩೦॥

ನಿನ್ನ ಸಹಾಯದೊಳಸುರಾಧೀಶ್ವರ । ನೆನ್ನ ಮೊಮ್ಮನ ಬಂಧಿಸಿದ ॥
ಮುನ್ನ ಹಿರಣ್ಯಕ ಮುಂತಾದ ದನುಜರು । ಬನ್ನ ಬಟ್ಟುದ ಬಲ್ಲ ತಾನು ॥೨೩೧॥

ಶರಣನ ಕೊಂದೆನೆಂಬಪಕೀರ್ತಿಯನೆನ್ನ । ಶಿರದಲ್ಲಿಡುವನು ಗೌರೀಶ ॥
ದುರುಳನೊಳುಷೆಯನು ಸ್ಮರಜಾತಗೀಯೆಂ । ದೊರೆಯಲು ಪೇಳ್ದೆ ನಾನೆಂದು ॥೨೩೨॥

**ಕಂದ**

ಇಂತೆನೆ ಕೇಳ್ದಾ ಮುನಿಪಂ ।
ಕಂತುಪಿತಗೆ ವಂದಿಸುತಲಿ ಅತಿವೇಗದೊಳಂ ॥
ಅಂತಕವೈರಿಯ ಬಳಿಗಂ ।
ತಾಂ ತಳುವದೆ ಬಂದು ಎರಗಿದಂ ಪದಯುಗಕಂ ॥೨೩೩॥

**ರಾಗ ಸಾಂಗತ್ಯ ರೂಪಕತಾಳ**

ಘನಹರುಷದಲಿ ನಾರದನನ್ನು ಪಿಡಿದೆತ್ತಿ । ಮನದೊಳಭವ ನಸುನಗುತ ॥
ಮುನಿಪ ನೀನಾರನು ಕೊಂದಾಡಿಸಲು ಬಂದೆ । ಎನುತ ಕೇಳಲು ಪೇಳ್ದನಾಗ ॥೨೩೪॥

ಹರನೆ ಲಾಲಿಸು ತನ್ನ ಮೊಮ್ಮಗೋಸುಗ ಮುರ । ಹರನು ದಂಡೆತ್ತಿ ಬಂದಿಹನು ॥
ಬರಿದೆ ಕಲಹ ಬೇಡವೆಂದೀಶನೊಳ್ಪೇಳೆಂ । ದೊರೆದೆನ್ನ ನಿಲ್ಲಿಗಟ್ಟಿದನು ॥೨೩೫॥

ಅದರಿಂದ ನಾ ನಿನ್ನ ಬಳಿಗೆ ಬಂದೆನು ದೇವ । ಮದನಸಂಭವಗೆ ಬಾಣಜೆಯ ॥
ಮುದದಿಂದ ಕೊಡಿಸಿ ಮನ್ನಿಸದೆ ಮಾಧವನೊಳು । ಕದನ ಲೇಸಾಗದಾಶರಗೆ ॥೨೩೬॥

**ಕಂದ**

ಸುರಮುನಿಯೆಂದುದನುಂ ಪುರ ।
ಹರನಾಲಿಸುತ್ತೈದೆ ಸಂತಸವೆತ್ತಾಗಳ್ ॥
ಚರರೊಳ್ ಬಲ್ಲಿದನೋರ್ವನ ।
ಕರೆದತಿ ಮೃದುವಾಕ್ಯದಿಂದ ಪೇಳಿದ ನವನೊಳ್ ॥೨೩೭॥

**ರಾಗ ಪಂಚಾಗತಿ ಮಟ್ಟೆತಾಳ**

ಚರನೆ ಕೇಳು ಬಾಣಖಳನ ಬಳಿಗೆ ಕ್ಷಣದಲಿ ।
ಭರದಿ ಪೋಗಿಯಾತನೊಡನೆ ಪೇಳು ಮುದದಲಿ ॥

ಸ್ಮರನ ತನುಜಗಾಗಿ ಸೇನೆಸಹಿತ ಕೃಷ್ಣನು ।
ಧುರಕೆ ಬಂದನಂತೆ ಕಲಹ ಬೇಡ ಸುತೆಯನು ॥೨೩೮॥

ಹರಿಯ ಮೊಮ್ಮಗಿತ್ತು ಪ್ರೇಮದಿಂದಲವರನು ।
ಪುರಕೆ ಕಳುಹೆ ಚಂದವಹುದು ಎಂಬ ಮಾತನು ॥
ಹರನು ಪೇಳ್ದನೆಂದು ದೈತ್ಯಗುಸಿರಿ ಬೆದರದೆ ।
ಮರಳಿ ಬಹುದು ಕೋಪಿಸಿದಡೆ ಪೋದ ಮಾರ್ಗದಿ ॥೨೩೯॥

**ಶರಷಟ್ಪದಿ**

ಇಂದುಧರಂ ಪೇ ।
ಳ್ದಂದವನುಂ ಕೇ ।
ಳ್ದಂದಾ ಚರನತಿ ವೇಗದಲಿ ॥
ಬಂದಾ ಬಾಣನ ।
ಮುಂದತಿ ಧೈರ್ಯದಿ ।
ನಿಂದಿಂತೆಂದಂ ವಿನಯದಲಿ ॥೨೪೦॥

**ರಾಗ ಕಾಪಿ ಅಷ್ಟತಾಳ**

ಲಾಲಿಸ ಕೇಳೆನ್ನ ಮಾತ । ಕಾಲ । ಕಾಲ ಭಕ್ತ ಮೂಲೋಕ ವಿಖ್ಯಾತ ॥ ಪ ॥

ಒರೆಯೆಂದೀಗೆನ್ನ ನಟ್ಟಿದನು । ದೈತ್ಯ ।
ವರ ನೀ ಕೋಪಿಸದಿರ್ದಡುಸಿರುವೆ ನಾನು ॥೨೪೧॥

ಕಾಮನಾತ್ಮಜನ ನೀ ತಂದು । ಬಹು । ಸಾಮರ್ಥ್ಯದಿಂ ಸೆರೆಯೊಳಗಿಟ್ಟೆಯೆಂದು ॥
ಆ ಮಾತ ಹರಿ ಕೇಳ್ದನಂತೆ । ಬಲ । ರಾಮ ಯಾದವರ್ ಸಹ ಬಂದಿಹನಂತೆ ॥೨೪೨॥

ಇನ್ನಾದರೂ ಸ್ಮರಸುತಗೆ । ಉಷೆ । ಯನ್ನಿತ್ತು ನರಕಾಂತಕನನ್ನು ಮನೆಗೆ ॥
ಮನ್ನಿಸಿ ಕರೆತಂದು ನೀನು । ಆತ । ನನ್ನು ಸಂತೋಷಿಸಿದರೆ ಕಾವನವನು ॥೨೪೩॥

ಕದನವೆಂಬುವುದೆ ಲೇಸಲ್ಲ । ಎಂದು । ಮದನಾರಿ ನಿನಗೊರೆಯೆಂದನೀ ಸೊಲ್ಲ ॥
ತ್ರಿದಶಾರಿ ನಾ ಪೇಳ್ದೆನಯ್ಯ । ಇನ್ನು । ಪದುಮನಾಭನ ಹರುಷಿಸಿ ಕಳುಹಯ್ಯ ॥೨೪೪॥

**ಶರಷಟ್ಪದಿ**

ಎನೆ ಕೇಳ್ದಸುರಂ ।
ಘನಕೋಪದೊಳಾ ।
ತನನುಂ ಗರ್ಜಿಸಿ ಮಂತ್ರಿಯೊಳುಂ ॥
ಅನುವರಮೆನಗಿಂ ।

ದಿನಲಿ ದೊರಕಿತೆಂ ।
ದೆನುತಾನಂದದೊಳಿಂತೆಂದಂ ॥೨೪೫॥

**ರಾಗ ಸುರುಟಿ ಏಕತಾಳ**

ಕೇಳ್ ಮಂತ್ರಿಯೆ ನೀನು । ಸಂತಸ । ದೊಳ್ ಮನ್ಮಥಹರ ತಾನು ॥
ಮೇಲ್ಮಾಡಿದ ತುರುಗಾಯಿಯನೆನ್ನನು । ಕೀಳ್ ಮಾಡಿದನಿದು ಸಮವೆ ನೀ ಪೇಳು ॥೨೪೬॥

ಸೆರೆಯೊಳಗಾನಂದು । ಇಟ್ಟಿಹ । ತರಳಗೋಸುಗ ಇಂದು ॥
ಧುರಕೆನ್ನೊಳು ಗೋಪರ ಬಲಸಹಿತಾ । ಕರಿಮೈಯವನೆನ್ನ ಪುರಕೆ ಬಂದಿಹನಂತೆ ॥೨೪೭॥

ಅನಿರುದ್ಧಗೆ ಬೇಗ । ಎನ್ನಯ । ತನುಜೆಯನಿತ್ತೀಗ ॥
ವಿನಯದಿ ಗೋವಳನನು ಮನ್ನಿಸಿ ಕಳು । ಪೆನುತ ಗಿರೀಶ ದೂತನ ಕಳುಹಿರ್ಪನು ॥೨೪೮॥

ಉರಗಭೂಷಣ ಹೀಗೆ । ಪೇಳ್ದುದು । ಸರಿಬಂದುದೆ ನಿನಗೆ ॥
ಒರೆಯೆಂದಾಶರವರ ಪೇಳಲುಮತಿ । ಹರುಷಬಡುತಲಾ ಸಚಿವ ನಿಂತೆಂದನು ॥೨೪೯॥

**ರಾಗ ಮಧುಮಾಧವಿ ಆದಿತಾಳ**

ಕೇಳು ದಾನವರಾಯ ನಾನೆಂಬ ನುಡಿಯ । ಜಾಲಮಾತಲ್ಲ ಕಿವಿಗೊಟ್ಟು ಎನ್ನೊಡೆಯ ॥ ಪ ॥

ತನುಜೆಯ ಸ್ಮರಜಗಿತ್ತರೆ ಚಂದವಯ್ಯ । ದನುಜಾರಿ ಬಂಧುತ್ವವಾಗೆ ಸುಖವಯ್ಯ ॥
ಬಿನುಗು ಮಾತಾಡಿದನೆಂದು ನೀ ಎನ್ನ । ಘನವೇಗದಿಂದಟ್ಟಿಸೋ ಜೀಯ ಮುನ್ನ ॥೨೫೦॥

ಮಾಧವನೊಳು ಕಾದಿ ಬದುಕಿದರ್ಯಾರು । ವೇದಚೋರನೀತ ಕೊಲೆ ಕಾಯ್ದರಾರು ॥
ಭೂಧರವನು ಬೆನ್ನಿನೊಳು ಪೊತ್ತನಿವನು । ಮೇದಿನಿತಸ್ಕರನನು ಕೊಂದನಿವನು ॥೨೫೧॥

ಹೇಮಾಕ್ಷನನು ಕಾದಿ ಗೆಲಿದಾತನೀತ । ವಾಮನನಾಗಿ ಭೂಮಿಯಳೆದಾತನೀತ ॥
ಭೂಮಿಪ ಕಾರ್ತವೀರ್ಯನ ಗೆಲ್ದನೀತ । ಭೂಮಿಜೆಚೋರನ ಮಡುಹಿದನೀತ ॥೨೫೨॥

ಮಾತುಗಳ ಮೊದಲಾದ ದೈತ್ಯರನೆಲ್ಲ । ಖಾತಿಯಿಂದೆಮನೂರಿಗಟ್ಟಿದನಲ್ಲ ॥
ಪಾತಕಿಗಳನೆಲ್ಲನುಳಿಸ ಲೋಕದಲಿ । ಮಾತು ನಂಬಿದರನ್ನು ಕಾವ ತೋಷದಲಿ ॥೨೫೪॥

ಬಲಿಯು ಪ್ರಹ್ಲಾದನು ಧ್ರುವವಿಭೀಷಣರು । ಜಲಜನಾಭನ ಪೊಂದಿ ಸುಖಿಯಾದರವರು ॥
ನಳಿನಾಕ್ಷ ಹರರೊಳು ಭೇದವೆಣ್ಣಿಸದೆ । ಫಳಿಲನಾತನ ನಂಬು ಮನದಿ ಯೋಚಿಸದೆ ॥ ೫ ॥

**ಕಂದ**

ಈ ತೆರದಿಂ ಮಂತ್ರಿಯುಮತಿ ।
ನೀತಿಯನುಂ ದೈನ್ಯದಿಂದ ಪೇಳಲ್ಕಮರಾ ॥

ರಾತಿಯು ಆರ್ಭಟಿಸುತೆ ಘನ ।
ಖಾತಿಯನುಂ ತಳೆದುಮೆಂದನಾ ಸಚಿವನೊಳುಂ ॥೧೫೫॥

**ರಾಗ ಸೌರಾಷ್ಟ್ರ ಅಷ್ಟತಾಳ**

ಎಲವೊ ಮಂತ್ರಿ ಕೇಳೊ ನಿನಗೆ । ಸಲುಗೆಗೊಟ್ಟುದರಿಂದೆನಗೆ ।
ಬಲು ಹಿತವನು ನೀನು ನುಡಿದೆ । ಭಳಿರೆ ಮೆಚ್ಚಿದೆ ॥೧೫೬॥

ಕದನಕಟ್ಟಲಾಗಿ ನಿನ್ನ । ಮುದದಿ ಕರೆದು ಪೇಳ್ದರೆನ್ನ ।
ಬೆದರಿಸಿ ನೀ ಪೇಳುವುದಿದು । ಚದುರತೆಯೇನೋ ॥೧೫೭॥

ದನುಜೇಶ ಲಾಲಿಸು ನಿನ್ನ । ಮನಕೆ ಕೋಪವಾದರೆನ್ನ ।
ನನುವರಕೆ ಕಳುಹಿಸಯ್ಯ । ಕಿನಿಸೇಕೆ ಜೀಯ ॥೧೫೮॥

**ಕಂದ**

ಎನುತ ಸಚಿವಂ ಪೇಳಿದು ।
ದನುಮಾಲಿಸುತಾಶರೇಂದ್ರನತಿ ತೋಷದೊಳಾ ॥
ತನನುಂ ಮನ್ನಿಸಿ ಸ್ಮರನಾ ।
ಶನ ಚರರನು ಕರೆದು ಪೇಳ್ದನೊಂದುತ್ತರವಂ ॥೧೫೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಚರನೆ ಕೇಳೆಲೊ ಲಿಂಗಪೂಜೆಯ । ವಿರಚಿಸಿಯೆ ನಾ ಬಹೆನುಮನಿತರೊ ।
ಳುರಗಭೂಷಣ ಕದನಕೈದಲಿ । ಭರದಿ ಪೇಳು ॥೧೬೦॥

ಎನಲು ಕೇಳ್ದಾ ದೂತ ವೇಗದಿ । ದನುಜನನು ಬೀಳ್ಕೊಂಡು ನಡೆತಂ ।
ದನಿಮಿಷಾ ರ್ಚಿತಗೆರಗಿ ಪೇಳ್ದನು । ವಿನಯದಿಂದ ॥೧೬೧॥

ಗಿರಿಜೆಯರಸನೆ ಲಾಲಿಸಾಶರ । ವರಗೆ ದೇವರು ಪೇಳ್ದುದನು ನಾ ।
ನೊರೆಯಲವ ಕೋಪಿಸಲು ಮಂತ್ರಿಯು । ಭರದಿ ಬಂದು ॥೧೬೨॥

ನೀತಿಮಾರ್ಗವನುಸಿರಲಮರಾ । ರಾತಿ ಕೇಳದೆಯವನ ಬೆದರಿಸಿ ।
ಖಾತಿಯಂ ತಳೆದೆನ್ನೊಳೆಂದನು । ತಾ ತವಕದಿ ॥೧೬೩॥

ಲಿಂಗಪೂಜೆಯ ವಿರಚಿಸಿಯೆ ಬಹೆ । ನಂಗಜಾಂತಕನನಿತರೊಳು ಸಮ ।
ರಾಂಗಣಕೆ ಮುಂದೈದಲೆಂದನು । ಭಂಗ ಬಾಣ ॥೧೬೪॥

**ಕಂದ**

ಚರನೆಂದುದ ಲಾಲಿಸುತಂ।
ಹರ ನಸುನಗುತಸುರಗಾಗಿ ಹರಿಯೊಡ ನೆಮಗಂ॥
ಧುರಮಾದುದೆನುತ ಸುರಮುನಿ।
ವರನಂ ನಮ್ರತೆಯೊಳ್ಳೈದೆ ಕರೆದಿಂತೆಂದಂ॥೨೬೫॥

**ರಾಗ ಮಾರವಿ ರೂಪಕತಾಳ**

ಮುನಿನಾಥ ಕೇಳ್ದೆಯಾ ದನುಜೇಶ ಪೇಳ್ದುದನು। ವನಜಾಕ್ಷನೆಡೆಗೆ ನೀವೈದಿ॥
ಅನುವರಕಾ ಭವನ್ನೆತಹನೆಂದು ಪೇ। ಳೆನುತ ಬೀಳ್ಕೊಟ್ಟನಾ ಋಷಿಯ॥೨೬೬॥

ಇಂದುಧರನ ಬಳಿಯಿಂದ ನಾರದನು ಆ। ನಂದದೊಳ್ಳೈತಂದು ಹರಿಯ॥
ಮುಂದೆ ನಿಂದರ್ತಿಯೊಳಂದು ನಮಿಸಿ ಭಕ್ತಿ। ಯಿಂದ ಕೈಮುಗಿದೆಂದನಾಗ॥೨೬೭॥

ಪೀತಾಂಬರ ಕೇಳು ಬಾಣ ಸಂಧಾನದ। ಮಾತಾಗದೆಂದು ಆಹವಕೆ॥
ಭೂತೇಶನಿಂಗೆ ಸೂಚಿಸಲಾಗ ಕಾಳಗ। ಕಾತಬರ್ಪನು ಪುಸಿಯಲ್ಲ॥೨೬೮॥

**ವಾರ್ಧಕ**

ಇತ್ತಲುಂ ನಾರದಮ ಹರಿಯೊಳಿಂತುಸಿರುತಿರ।
ಲತ್ತ ಗಂಗಾಧರಂ ಸಂಗರಕೆ ಪಯಣಮಂ।
ಚಿತ್ತದೊಳ್ ನಿಶ್ಚಯಿಸಿ ಪೊರೆಯೊಳಿಹ ವಾಸವಾ ದ್ಯಮರರಂ ಬರ್ಪುದೆಂದು॥
ಪತ್ತಿದಂ ಗೋಪತಿಯನಾ ಸಮಯದೊಳ್ಗಣರ।
ಮೊತ್ತಮತಿಯಾರ್ಭಟಿಸುತೊಡನೇಳಲಾಕ್ಷಣಂ।
ಹಸ್ತಿಮುಖ ಷಡ್ವದನ ಭೈರವರ್ ಸಹಿತ ತ್ರಿಲೋಚನಂ ನಡೆತಂದನು॥೨೬೯॥

**ರಾಗ ಪಂತುವರಾಳಿ ಮಟ್ಟೆತಾಳ**

ಬಂದನೀಶನಂದು ಸಮರಕೆ। ತೋಷದಿಂದ। ಬಂದನೀಶನಂದು ಸಮರಕೆ॥ ಪ॥
ಇಂದಿರೇಶನೊಡನೆ ಸಮರ। ಬಂದಿತೆಮಗೆ ಬಾಣಗಾಗಿ।
ಎಂದು ನಂದಿಯೇರಿ ವೇಗ। ದಿಂದಲೈತರಲ್ಕೆ ದೇವ।
ದುಂದುಭಿಯು ಮೊಳಗಿತಬ್ಧಿ। ಬೆಚ್ಚಿ ನಡುಗಿ।
ತಂದು ಧರಣಿ ವಾದ್ಯಘೋಷದಿ। ಸುರರು ಪ್ರಮಥ।
ವೃಂದಸಹಿತ ಜಯಜಯೆನುತ। ಮುಂದೆ ನಡೆಯಲಂದದಿಂದ॥ ಬಂದನೀಶ॥೨೭೦॥

ತಾರಕೇಶಧರನು ದಿವಿಜ। ವಾರಸಹಿತ ಬಂದು ರಣವ।
ಸಾರಲಾಗ ಸ್ಕಂದ ತಾ ಮ। ಯೂರವೇರಿ ಮುಂದೆ ಯಾದವ।
ವೀರರಿದಿರ್ಗೆ ಬಂದು ನಿಂದನು। ಸಮರಕೆನ್ನೊ।

ಳ್ಯಾರು ಬಹಿರಿ ಬನ್ನಿರೆಂದನು । ಮತ್ತೆ ಸರಳ ।
ಸಾರದಿಂದಲವರ ಬಲವ । ಧೀರತನದಿ ಬೆದರಿಸಿದನು ॥ ಬಂದನೀಶ ॥೨೭೦॥

**ಕಂದ**

ಭರ್ಗಜನೀ ಪರಿಯಿಂ ಯದು ।
ವರ್ಗವ ನೋಯಿಸಲ್ಕಂಡುಮನಂಗಜಂ ತ್ವರದೊಳ್ ॥
ಕಾರ್ಗಾಲದ ಮಳೆಯಂದದಿ ।
ಕೂರ್ಗಣೆಯಂ ಕರೆವುತೈದ ಬಂದಿದಂತೆಂದಂ ॥೨೭೧॥

**ರಾಗ ಭೈರವಿ ಅಷ್ಟತಾಳ**

ಎಲವೋ ಷಣ್ಮುಖ ನೀನು । ನಮ್ಮಯ ಯದು । ಬಲವನು ನೋಯ್ದಿದಡೇನು ॥
ಫಲವೆನ್ನೊಳಿದಿರಾಗಿ ಕಾದಿ ಜೈಸಿದಡೆ ನೀನು । ಕಲಿಯಹುದೆನಲೆಂದನು ॥೨೭೨॥

ಕೇಳೊ ಮನ್ಮಥ ಹಿಂದೆ । ಮಜ್ಜನಕನ । ಫಾಲನೇತ್ರಾಗ್ನಿಯಿಂದೆ ॥
ಕಾಲಗಂಡವ ಮೊದಲಿನ್ನಳಿಯಲೀರೈದು । ಕಾಲದೊಳೆನೆ ಕಾಮನು ॥೨೭೪॥

ಎನ್ನ ಬಾಣದಲಿ ನಿನ್ನ । ಪೆತ್ತವ ತಪ । ವನ್ನು ಬಿಟ್ಟ ತಾ ಮುನ್ನ ॥
ಚೆನ್ನಾಗಿ ಸತಿಯೊಳು ರಮಿಸೆ ನೀ ಜನಿಸಿದೆ । ಎನ್ನಲಾರ್ಮೊಗನೆಂದನು ॥೨೭೫॥

ಶ್ರೀನಾರಿಯಳ ಗರ್ಭದಿ । ಪುಟ್ಟದಾತನು । ನೀನೆಂದೆಂಬರು ಜಗದಿ ॥
ಮಿನಿಂದಲುದಿಸಿದೆಯೆನಲು ಭಳಿರೆ ಹರಿ । ಸೂನು ಮತ್ತಿಂತೆಂದನು ॥೨೭೬॥

ಹರನಾತ್ಮಭವನೆ ನೀನು । ನಿನ್ನಯ ಮೂಲ । ವರಿಯದವನೆ ಕೇಳೊ ನೀನು ॥
ಗಿರಿಜೆಯುದರದಲಿ ಜನಿಸದೆ ಗಿರೀಶಗೆ । ತರುಣನೆಂತಾದೆಯಯ್ಯ ॥೨೭೭॥

**ರಾಗ ಪಂಚಾಗತಿ ಮಟ್ಟೆತಾಳ**

ಎಂದ ಮಾತ ಕೇಳುತಾಗ ಸ್ಕಂದ ಕೋಪದಿ ।
ನಿಂದು ಸರಳ ಸುರಿಯೆ ಕಾಮಗಂದು ವೇಗದಿ ॥
ಮಂದಹಾಸದಿಂದಲವನ ಶರವ ತರಿವುತ ।
ಇಂದುಧರನ ಕುವರ ಭಳಿರೆ ಎಂದು ಪೊಗಳುತ ॥೨೭೮॥

ಭೂರಿ ಬಾಣತತಿಯ ಮದನನಂದು ಸುರಿಯಲು ।
ಘೋರನದನು ಹರನ ತನುಜ ನಡುವೆ ತರಿಯಲು ॥
ಧೀರತನದಿ ನಗುತ ಮತ್ತೆ ಮನಸಿಜಾತ್ಮನು ।
ಕ್ರೂರತನದಿ ಗೌರಿಸುತನ ಧನುವ ಕಡಿದನು ॥೨೭೯॥

ಬಿಲ್ ಮುರಿಯಲು ಕೋಪದಿಂದ ಕಾರ್ತಿಕೇಯನು ।
ಪಲ್ಮೊರೆವುತ ಗರ್ಜಿಸುತ್ತ ಶೂಲವಿಟ್ಟನು ॥
ಮೇಲ್ಮೊಗದೊಳು ನೋಡುತಾಗ ಬೆದರೆ ಕಾಮನು ।
ಬಲ್ಮೆಯಿಂ ಮುರಾರಿ ಚಕ್ರದಿಂದಲದರನು ॥೨೮೦॥

ಕಡಿಯೆ ಕಂಡು ಖಾತಿಯಿಂದ ಗಿರಿಜೆಯಣುಗನು ।
ಫಡಫಡೆನುತ ಕೃಷ್ಣನೊಡನೆ ಧುರಕೆ ನಿಂದನು ॥
ಮೃಡನು ಕಂಡು ಹರಿಯ ಕಲಹ ಬೇಡವೆನುತಲಿ ।
ಒಡಬಡಿಸುತ ಷಣ್ಮುಖನನು ಕರೆದು ಮುದದಲಿ ॥೨೮೧॥

**ವಾರ್ಧಕ**

ಹರನಿಂತೆನಲು ಷಣ್ಮುಖಂ ಸುಮ್ಮನಿರೆ ನವಿಲು ।
ಸ್ಮರನ ಕೇತನಕಡರೆ ಗರುಡನದ ಕುಪ್ಪರಿಸೆ ।
ಭರದಿಂದ ವೃಷಭನೇಳ್ತಂದುಮಾ ಪಕ್ಷಿಯೊಳ್ ಕಾದಲೀಶಂ ನಿಲಿಸಲು ॥
ಹರಿಯಗ್ರಜನೊಳ್ಕೆದೆ ವಿಘ್ನರಾಜಂ ನೊಂದು ।
ಮಿರದೆ ಪೋಗಲು ಭೈರವಂ ಯುದ್ಧಗೈಯಲಾ ।
ಪುರಹರಂ ಬೇಡವೆನುತಾತನಂ ಸಂತೈಸಿ ಹರಿಗೆ ತಾನಿದಿರಾದನು ॥೨೮೨॥

**ಕಂದ**

ಹರನುಂ ತಾ ಸಂಗರಕೇ ।
ಳ್ತರೆ ಕಾಣುತಮಂಬುಜಾಕ್ಷನತಿ ವೇಗದೊಳಂ ॥
ಹರುಷದಿ ಧುರಕನುವಾಗಲು ।
ಪುರಮಥನನಾಗಲಿಂತೆಂದನು ಹರಿಯೊಡನಂ ॥೨೮೩॥

**ರಾಗ ಶಂಕರಾಭರಣ ಮಟ್ಟೆತಾಳ**

ಹರಿಯೆ ನಿನ್ನೊಳಿಂದು ಸಮರ । ದೊರಕಿತೆನಗೆ ದುರುಳ ಖಳರ ।
ಮುರಿದ ತೆರವಿದಲ್ಲ ಕಳುಹು । ಸರಳ ವೇಗದಿ ॥
ಹರನೆ ನೀನು ಧೀರನೆಂಬ ಪರಿಯ ಕೇಳಿ ಬಲ್ಲೆನಾದ ।
ರೆರಡು ಘಳಿಗೆ ಪರಿಕಿಸೆನ್ನ । ಧುರದ ಬಗೆಯನು ॥೨೮೪॥

ಧುರದಿ ಶೌರ್ಯವಂತನಹುದು । ದುರುಳ ಕಾಲಯವನು ನಿನ್ನ ।
ಬೆರಸಲೋಡಿದಧಟನೆಂದ । ಹರನು ನಗುತಲಿ ॥
ಪುರವಿನಾಶ ಕೇಳು ಭಸ್ಮಾ । ಸುರಗೆ ಬೆದರಿ ಭರದಿ ಬಂದ ।
ಪರಿಯನೆಲ್ಲ ಬಲ್ಲೆನೆಂದ । ಶಿರಿಯರಮಣನು ॥೨೮೫॥

ವೀರರಿಂಗೆ ಕರಿ ವರೂಥ । ವಾರುಹಂಗಳಿಹವು ಪಕ್ಷಿ ।
ಯೇರಿ ನಿಲುವ ಭಟರ ಕಾಣೆ । ವಾರಿಜಾಕ್ಷನೆ ॥
ಗೌರಿಯರಸ ನೀನು ಪೇಳ್ದ । ಮೂರರೊಳ ಗಿದಾವುದೀಗ ।
ಏರಿಕೊಂಡು ನಡೆವೆಯೆಂದ । ಮಾರತಾತನು ॥೧೮೬॥

ಎಂದ ಮಾತ ಕೇಳಿಸಿ ಕಿನಿಸಿ । ನಿಂದಲಭವ ಧನುವ ಪಿಡಿದು ।
ನಿಂದು ಸರಳ ಸುರಿದ ನಮರ । ವೃಂದ ಬೆದರಲು ॥
ಸಿಂಧುಜಾತೆಯರಸನದರ । ನೊಂದು ಬಾಣದಿಂದ ತರಿದು ।
ಮಂದಹಾಸದಿಂದಲಿರಲು । ಕಂದುಗೊರಳನು ॥೧೮೭॥

ಖಗ ವರೂಥನನ್ನು ನೋಡಿ । ನಗೆಯ ಮಾಣಿಸುವೆನೆನುತ್ತ ।
ಧಗಧಗಿಪ ತ್ರಿಶೂಲ ಪಿಡಿಯೆ । ಜಗತಿ ನಡುಗಲು ॥
ಮಿಗೆ ವಿನೋದದಿಂದಲಾಗ । ನಗಧರನು ಸುದರ್ಶನವನು ।
ತೆಗೆಯೆ ಕಾಣುತೊದರಿತಾಗ । ಗಗನವಾಕ್ಯವು ॥೧೮೮॥

**ಭಾಮಿನಿ**

ಈಶ ಶೂಲವನಿಡಲು ಭೂಮ್ಯಾ ।
ಕಾಶದಲಿ ಬದುಕಿದರ ಕಾಣೆನು ।
ಕೇಶವನ ಚಕ್ರದಲಿ ಬದುಕಿದರಿಲ್ಲ ಪೂರ್ವದಲಿ ॥
ಈಸು ಕಾಳಗವೇತಕೆನಲು ಮ ।
ಹೇಶ ಕೇಳ್ದಿಂದೆಮ್ಮ ಕದನದಿ ।
ಘಾಸಿಯಾಹುದು ಲೋಕವೆನುತಿಂತೆಂದನಚ್ಯುತಗೆ ॥೧೮೯॥

**ರಾಗ ಮಾರವಿ ಝಂಪೆತಾಳ**

ಸಿರಿವರನೆ ಕೇಳು ಸಂ । ಗರಕೇಳಿಯೊಳಗೆ ನಾ ।
ವಿರಲು ಮೂಜಗವೆಲ್ಲ । ಉರಿದುಪೋಪುದಲ್ಲೈ ॥೧೯೦॥

ಎಂದಭವ ನಾ ಸೋತೆ । ನಿಂದಿಗಾಹವದೊಳೆನು ।
ತಂದು ಕೌಳಿಕದಿಂದ । ನಿಂದು ಮರಳಿದನು ॥೧೯೧॥

ಶಿವನೈದಲಿತ್ತಯಾ । ದವರೆಲ್ಲ ಬಲಿಯ ಸಂ ।
ಭವನೂರ ಮುತ್ತಿದರು । ತವಕದಿಂದಾಗ ॥೧೯೨॥

**ರಾಗ ಮಾರವಿ ಏಕತಾಳ**

ಭೋರ್ಗರೆವುತ ಯದು । ವರ್ಗವು ದನುಜನ ।
ದುರ್ಗವ ಪೊಗಲು ಭ । ಟರ್ಗಳೈತರೆ ಬಲು ।

ಭೋರ್ಗುಡಿಸುತ ದೈ । ತ್ಯರ್ಗೆಯರ್ಯಮಸುತ ।
ನೂರ್ಗಾಣಿಸಿದರು । ಮಾರ್ಗಣದಿಂದ ॥ ಕೇಳೊ ಭೂಪ ॥೧೯೩॥

ಬಿಡದೊಳ ಗೈತಂ । ದೊಡನತಿ ರೋಷದಿ ।
ಘುಡುಘುಡಿಸುತಲಾ । ಧಡಿಗ ಖಳರ ತಲೆ ।
ಗೆಡೆವುತ ಭರದಿಂ । ತಡೆಯದೋಡುವರನು ।
ಹಿಡಿದೆಲ್ಲರ ಸದೆ । ಬಡೆದರು ನಿಮಿಷಕೆ ॥ ಕೇಳೊ ಭೂಪ ॥೧೯೪॥

ಹರಿಯವರಂದೀ । ಪರಿಯಿಂದಾಶರ ।
ಚರರಂ ಕಾಣುತ । ಉರು ವಿಕ್ರಮದಿಂ ।
ಬರೆದು ಸುಣ್ಣವನವ । ದಿರಮೂಗಿಗೆ ನಿ ।
ಮ್ಮರಸಗುಸಿರಿರೆಂ । ದೊರೆದಟ್ಟಿದರು ॥ ಕೇಳೊ ಭೂಪ ॥೧೯೫॥

**ಕಂದ**

ಕೇಳ್ದವರೆಂದುದನಾಶರ ।
ರಾಳ್ದುಃಖಂಬಡೆದುಮೆಲ್ಲರೇಳ್ತಂದಾಗಳ್ ॥
ತಾಳ್ದತಿಭಯಮಂ ಮೆಲ್ಲನೆ ।
ಪೇಳ್ದರ್ಬಾಣಾಖ್ಯನೊಡನೆ ಕುಡ್ಮಲಕರದಿಂ ॥೧೯೬॥

**ರಾಗ ಮುಖಾರಿ ಆದಿತಾಳ**

ಕೇಳಯ್ಯ ದಾನವೇಂದ್ರ ನೀನು । ಫಾಲಾಂಬಕನ ಭಕ್ತ ಮೂಲೋಕ ಪ್ರಖ್ಯಾತ ॥ ಪ ॥

ಗಿರೀಶ ಯುದ್ಧಕ್ಕೈತಂದನಯ್ಯ । ಸೋತು ಹಿಮ್ಮೆಟ್ಟಿ । ಮರಳಿ ಲಜ್ಜೆಯಿಂ ಪೋದನಯ್ಯ ॥
ಹರ ಪೋಗಲರಿಗಳು । ಭರದಲಿ ಕೋಟೆಯ ।
ಮುರಿದೆಮ್ಮ ಮೂಗಿಗೆ । ಬರೆದು ಸುಣ್ಣವ ನಿ ।
ಮ್ಮರಸನ ಕದನಕೆ । ಬರಹೇಳಿರೆಂದೆಲ್ಲ ।
ರೊರೆದು ಕಳುಹಿದರು । ಹರಣವನುಳುಹಿ ॥೧೯೭॥

**ರಾಗ ಮಾರವಿ ಝಂಪೆತಾಳ**

ಚಾರರೆಂದುದ ಕೇಳ್ದು । ದಾರಬಲ ಖಳ ಲಯದು ।
ಮಾರಮಣನಂ ತಾರ್ದು । ವೀರರೊಳುಸಿರ್ದ ॥೧೯೮॥

ಧಡಿಗರಾಲಿಸಿರವನ । ಪಡೆಯ ನುಗ್ಗರಿದು ಸೆರೆ ।
ವಿಡಿಯಿರಾ ಗೋವಳನ । ಕಡುತವಕದಿಂದ ॥೧೯೯॥

ಎನುತ ಮಂತ್ರೀಶ ಸಹಿ । ತನುವರವ ನಿಶ್ಚಯಿಸಿ ।
ಘನರೌದ್ರದಿಂದೆದ್ದ । ದನುಜೇಶನಂದು ॥೨೦೦॥

ರಥವೇರಿ ಖಳರು ಸಹಿ । ತತಿ ಗರ್ಜನೆಯೊಳು ಬಲಿ ।
ಸುತನು ನಡೆತಂದ ಸುರ । ತತಿ ಬಾಯಿಬಿಡಲು ॥೨೦೧॥

ಭಾರಕಹಿಪತಿ ಕೂರ್ಮ ॥ ರಾನಲಾರದೆ ಬಳಲಿ ।
ಚೀರಿದರದೇನೆಂಬೆ । ಭೂರಿಬಲ ಭಟನ ॥೨೦೨॥

ಭೇರಿಯಬ್ಬರಕೆ ನೆಲ । ನೋರುಗುಡಿಸುತಲುಡುಗ ।
ಘೋರಂತೆ ಸುರಿದವೆಲೆ । ಧಾರಿಣೀಪತಿಯೆ ॥೨೦೩॥

**ಕಂದ**

ಪರ್ಬತಮಂ ಜರಿವಂದದಿ ।
ನಾರ್ಭಟಿಸುತ ಮಂತ್ರಿ ಸಹಿತಮಾಶರರಧಿಪಂ ॥
ಪೇರ್ಬಲಮಂ ನೂಕಿದನತಿ ।
ಗರ್ಬದೊಳಿನ್ನಾರು ನಿಲ್ವರವರಿದಿರಿ ನೊಳುಂ ॥೨೦೪॥

**ರಾಗ ದೇಶಿ ಮಟ್ಟೆತಾಳ**

ಬಂದು ದನುಜರು । ಕಣೆಯ । ನಂದು ಸುರಿದರು ॥
ಇಂದಿರಾಧವನ ನೇಮ । ದಿಂದಲವದಿರು ॥೨೦೫॥

ಹೊಕ್ಕು ಹೊಯ್ದರು । ಭಟರ । ಸೊಕ್ಕ ಮುರಿದರು ॥
ಸಿಕ್ಕಿದವರ ಸೀಳ್ದು ರಣವ । ಪೊಕ್ಕು ನಡೆದರು ॥೨೦೬॥

ಕರಿಸಮೂಹವ । ಕೆಡಹಿ । ವರರಥಾಶ್ವವ ॥
ಮುರಿದು ಮುಂದೆ ನಡೆದು ಕೊಂದ । ರರಿಬಲೌಘವ ॥೨೦೭॥

**ವಾರ್ಧಕ**

ಧರಣಿಪತಿಯಾಲಿಸಿಂತಾನೆಯಂ ಸೇನೆಯಂ ।
ಧುರಧೀರರೇರ್ದ ರಥ ಚಯವನುಂ ಹಯವನುಂ ।
ಹರಿಯವರ್ಮುಳಿಸಿನಿಂ ಸವರಿದರ್ ಅರೆನಿಮಿಷದೊಳಗದನ್ನೇವೇಳ್ವೆನು ॥
ಕೆರಳಿ ಬಲಿಜಂ ಸುಪ್ರತಾಪದಿಂ ಕೋಪದಿಂ ।
ವರುಷಕಾಲದ ಮಳೆಯ ತೆರದೊಳುಂ ಭರದೊಳುಂ ।
ಸರಳನುಂ ಸುರಿವುತೇಳ್ತಂದನುಂ ನಿಂದನುಂ ಕೃಷ್ಣನಿದಿರೊಳು ಗಜರುತ ॥೨೦೮॥

**ಕಂದ**

ಛಿದ್ರಿಸಿ ಯದುಬಲಮಂ ಘನ ।
ರೌದ್ರಾನ್ವಿತನಾಗಿಯಾಶರೇಂದ್ರಂ ಭರದಿಂ ।
ಚಿದ್ರೂಪನುಮಿವನೆಂಬುದ ।
ನುದ್ರೇಕದೊಳರಿಯದಚ್ಯುತನೊ ಳಿಂತೆಂದಂ ॥೨೦೯॥

**ರಾಗ ಸೌರಾಷ್ಟ್ರ ಅಷ್ಟತಾಳ**

ಎಲವೊ ಗೋವಳ ಕೇಳ್ನೀನು । ಕಲಹದಲ್ಲಿ ಮಾಗಧನೊಳು ।
ನಿಲಲರಿಯದೆ ಓಡಿದಂಥ । ಕಲಿಯಲ್ಲವೇನೋ ॥೨೧೦॥

ಖಳನೆ ಯುದ್ಧಗೈವೆನೆಂಬ । ಛಲವದುಳ್ಳದೊಂದು ಸರಳ ।
ಕಳುಹಿ ನೋಡು ಮತ್ತೆಮ್ಮ ಕೈ । ಚಳಕವನೀಗ ॥೨೧೧॥

ನರಕನನ್ನು ಕೊಂದೆನೆಂಬ । ಗರುವ ಬೇಡ ನಿನ್ನಧಟ್ಟ ।
ಮುರಿವೆನೊಂದು ಕ್ಷಣಮಾತ್ರದಿ । ತುರುಗಾಯಿ ಕೇಳೋ ॥೨೧೨॥

ಮುರಿವ ಧೀರನಹುದೆಂದು ನಾ । ನರಿದು ಬಲ್ಲೆನಾದರಿನ್ನು ।
ಬರಿ ಮಾತದೇಕೆ ಬೇಗ । ಧುರಕನುವಾಗು ॥೨೧೩॥

**ರಾಗ ಪಂಚಾಗತಿ ಮಟ್ಟೆತಾಳ**

ಎನಲು ಹರಿಯ ಮಾತ ಕೇಳಿ ದನುಜರಾಯನು ।
ಕನಲಿ ಕರೆದನಾಗ ಕೂರ್ಗಣೆಯ ಮಳೆಯನು ॥
ವನಜನಾಭನವನ ಬಾಣವನ್ನು ಖಂಡಿಸಿ ।
ದನುಜನಿಂಗೆ ಶರವನೆಚ್ಚ ಮನದಿ ರೋಷಿಸಿ ॥೨೧೪॥

ಹರಿಯು ಬಿಟ್ಟ ಸರಳ ನಡುವೆ ತರಿವುತಾಕ್ಷಣ ।
ಧುರುಳನುರುಗಶರವೆಸೆನೆಯೆ ಸರಸಿಜೇಕ್ಷಣ ॥
ಗರುಡಬಾಣದಿಂದಲದನು ತೀರ್ಚೆ ಕಾಣುತ ।
ಕೆರಳಿ ಬಳಿಕ ತಿಮಿರಶರವನೆಚ್ಚ ಬಲಿಸುತ ॥೨೧೫॥

ರಣದೊಳಂಧಕಾರಮಾಗೆ ಕಂಡು ಕೃಷ್ಣನು ।
ದಿನಮಣಿಯ ಶರದೊಳದನು ನಿಲಿಸೆ ಬಾಣನು ॥
ಕನಲಿ ಪರ್ವತಾಸ್ತ್ರವೆಸೆಯೆ ವನಜ ನೇತ್ರನು ।
ವಿನಯದಿಂದ ಕುಲಿಶಶರದಿಯದನು ತರಿದನು ॥೨೧೬॥

ಏಸು ಮಂತ್ರಾಸ್ತ್ರವೆಸೆಯಲ್ಕೈದೆ ಖಂಡಿಸಿ ।
ಪೂಶರನ ಪಿತನು ಮತ್ತೆ ಮನದಿ ರೋಷಿಸಿ ॥
ಆಶರೇಂದ್ರನೇರ್ದ ರಥದ ತುರಗನಿಕರವ ।
ಘಾಸಿಮಾಡೆ ಖತಿಯೊಳಾತ ಪೊಸವರೂಥವ ॥೨೧೭॥

ಅಡರಿ ಕಿನಿಸಿನಿಂದ ಬೊಬ್ಬಿಡುತ್ತ ದೈತ್ಯನು ।
ಜಡಜಸಂಭವಾಸ್ತ್ರವನ್ನು ಭರದೊಳೆಚ್ಚನು ॥
ಒಡನೆ ಶಾಂತತ್ವದಿಂದ ಬಂದು ದೇವರ ।
ಅಡಿಗೆ ಎರಗಿ ನಾಚಿಯಲ್ಲಿ ಕುಳಿತುದಾ ಶರ ॥೨೧೮॥

**ಕಂದ**

ದನುಜಾಧಿಪನೀ ಪರಿಯಿಂ ।
ವನಜಾಸನಶರವನೆಸೆಯಲದುಮೇಳ್ ತಂದುಂ ॥
ಚಿನುಮಯನೊಳಡಗಲಾ ಬಲಿ ।
ತನುಜಂ ಬೆರಗಾಗೆ ಕಾಮಪಿತ ನಿಂತೆಂದಂ ॥೨೧೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ದಾನವ ಕೇಳು ನಮ್ಮಯ । ಬಳಿಗೆ ಬ್ರಹ್ಮಾದ್ಯಮರಶರವನು ।
ಕಳುಹಿದಡೆ ಗೆಲವಹುದೆ ನಿನ್ನೊಳು । ತಿಳಿದು ನೋಡು ॥೨೨೦॥

ಎನಲು ಕೇಳುತ ಭಳಿರೆ ಮೆಚ್ಚಿದೆ । ನೆನುತ ದೈತ್ಯಾಧಿಪನು ಭರ್ಗನು ।
ತನಗೆ ಕೊಟ್ಟಾಸ್ತ್ರವನು ತೆಗೆದೆಂ । ದನು ಹರಿಯೊಳು ॥೨೨೧॥

ಕಪ್ಪು ವರ್ಣನೆ ಕೇಳು ನಿನ್ನಯ । ದರ್ಪವನು ನಿಮಿಷದಲಿ ಮುರಿದ ।
ಲ್ಲಿರ್ಪ ಭೂತಕೆ ಬಲಿಯ ಕೊಡುವೆನು । ತಪ್ಪೆನಿದಕೆ ॥೨೨೨॥

**ರಾಗ ದೇಶಿ ಮಟ್ಟೆತಾಳ**

ಎಂದು ಪೇಳುತ । ಕೋಪ । ದಿಂದ ಬಲಿಸುತ ॥
ನಿಂದು ಮಾಯದಸ್ತ್ರವೆಚ್ಚ । ನಂದು ಗಜರುತ ॥೨೨೩॥

ಎಸೆಯಲಾತನ । ಸಾ । ಹಸವ ನೇನ ನಾ ॥
ನುಸಿರ್ವೆ ರಣದೊಳಂಧಕಾರ । ಮುಸುಕಿತಾಕ್ಷಣ ॥೨೨೪॥

ಸಿಡಿಲು ಪೊಯ್ದುವು । ಮರುಳು । ಗಡಣವೆದ್ದವು ॥
ಕಡುಗಿ ಕೂಗುತಸುರಹರನ । ಪಡೆಯ ತುಳಿದವು ॥೨೨೫॥

ಬಾಣನಭ್ರದಿ । ಹರಿಗೆ । ಕಾಣ ದಂದದಿ ॥
ತ್ರಾಣದಿಂದ ಸರಳ ಸುರಿದ । ಕ್ಷೋಣಿಯಗಲದಿ ॥೩೩೬॥

ಬರುವ ಬಾಣವ । ಕಂಡು । ಶರಧಿಜಾಧವ ॥
ಧರೆಯೊಳಿರ್ದು ತರಿವುತಿರ್ದ । ಧರಿಸಿ ರೋಷವ ॥೩೧೭॥

**ಕಂದ**

ಅಂಬರದೊಳ್ ಬಾಣಂ ಪೀ ।
ತಾಂಬರನವನಿಯೊಳು ಕಾದುತಿರಲಾ ಕ್ಷಣದೊಳ್ ॥
ಕುಂಭಾಂಡಂ ಕೋಪದೊಳುಂ ।
ಕುಂಭಿನಿಯೊಡೆವಂತೆ ಪೊಕ್ಕನಾ ಯದುಬಲವಂ ॥೩೧೮॥

**ರಾಗ ಘಂಟಾರವ ಅಷ್ಟತಾಳ**

ಬಂದು ಮಂತ್ರೀಶನಂದು ಗರ್ಜಿಸುತಲಿ ।
ನಿಂದು ಯಾದವವೃಂದವನು ಸರ । ಳೊಂದರಲಿ ಖಂಡಿಸಿದನು ॥ ಪ ॥

ಜಲಜಬಾಣನ ಗೆಲಿದು ಸಾತ್ಯಕಿಯನ್ನು ।
ಮಲಗಿಸಿಯೆ ಉದ್ಧವನ ಸೋಲಿಸಿ ।
ಹಲಧರನಿಗಿದಿರಾದನು ॥
ಖಳನ ಗರ್ವವ ಬಲಭದ್ರ ಕಾಣುತ ।
ಭಳಿರೆ ಎನ್ನುತ ಮಲೆತು ನಿಂದಿ । ರ್ದಲಘು ಭುಜಬಲನೆಂದೆನು ॥೩೧೯॥

ಆರೆಲವೊ ದೈತ್ಯ ವೀರರೊಳಧಟ್ಟನಿಂ ।
ಭೂರಿಸೈನ್ಯವ ಸೂರೆಗೊಂಬುದು । ಧೀರತನಕಿದು ಯೋಗ್ಯವೆ ॥
ತೋರಿಸೊ ನಿನ್ನ ಶೂರತ್ವವನು ಎನ್ನ ।
ಮೋರೆಯಿದಿರಲಿ ಬಾರೊ ಬಾರೆನು । ತಾರುಭಟೆಯಲಿ ಕರೆದನು ॥೩೨೦॥

ಎನಲು ಕೇಳುತ ಕಿನಿಸಿನಿಂ ಮಂತ್ರೀಶ ।
ಧನುವ ಕೊಂಡತಿ ವೇಗದಿಂ ಶರ । ವನು ಸುರಿದನೇನೆಂಬೆನು ॥
ಮನದಿ ರಾಮನು ಕನಲುತಲೊಂದು ಮಾ ।
ರ್ಗಣದೊಳಾತನ ಕಣೆಯನೆಲ್ಲ । ಕ್ಷಣದೊಳಗೆ ತರಿದೊಡ್ಡಿದ ॥೩೨೧॥

ಮತ್ತೆ ಕೋಪಿಸಿ ದೈತ್ಯಮಂತ್ರಿ ಗದೆ ।
ಎತ್ತಿ ಯಾರ್ಭಟಿಸುತ್ತ ಪೊಯ್ವೆನೆ । ನುತ್ತ ಬರುತಿರೆ ಕಾಣುತ ॥
ಚಿತ್ತದೊಳ್ ಖತಿವೆತ್ತು ಕೃಷ್ಣಾಗ್ರಜ ।
ನೆತ್ತಿ ಮುಸಲವ ಸತ್ವದಿಂದಲಿ । ನೆತ್ತಿಯೊಡೆಯಲು ಪೊಯ್ದನು ॥೩೩೨॥

**ವಾರ್ಧಕ**

ವನಜಾಕ್ಷನಗ್ರಜಂ ಕುಶಲದಿಂ ಮುಸಲದಿಂ ।
ದನುಜನಿಂಗೆರಗಲಾ ಘಾಯದಿಂ ಕಾಯದಿಂ ।
ತನಿರಕುತಮೊರೆತುದಾ ದಾನವಂ ಮೌನವಂ ಕೈಕೊಂಡು ಭೀತಿಯಿಂದ ॥
ಅನುವರಕೆ ನಿಲಲಾರದೋಡಿದಂ ನೋಡಿದಂ ।
ದನುಜಪತಿಯಂ ಗಗನಪಥದೊಳಂ ರಥದೊಳಂ ।
ವಿನಯದಿಂ ತಾನಭ್ರಕೇರಿದಂ ಸಾರಿದಂ ಬಾಣನಂ ಮಂತ್ರೀಶನು ॥೩೩೩॥

**ಕಂದ**

ಖಳರೀರ್ವರ್ ಮಾಯದೊಳುಂ ।
ಜಲಜಾಕ್ಷನ ಮೇಲೆ ಕಲ್ಲು ಮರ ಬೆಟ್ಟಗಳಿಂ ॥
ಮುಳಿದಿರದೊಟ್ಟಲು ಹರಿ ತಾ ।
ಬಳಲಿದುಮಿಂತೆಂದನುರಗ ವೈರಿಯೊಳಾಗಳ್ ॥೩೩೪॥

**ರಾಗ ಭೈರವಿ ಏಕತಾಳ**

ಗರುಡ ಬಾರಯ್ಯ ನೀನೀಗ । ಅಂ । ಬರಕಡರಿಯೆ ಬಲು ಬೇಗ ॥
ದುರುಳರ ನೆಗೆದಾಟವನು । ಪರಿ । ಹರಿಸೈ ಎನೆ ಕೇಳ್ದವನು ॥೩೩೫॥

ಭರದಿಂ ನಭಕೈತಂದು । ದನು । ಜರ ಕಡುಹನು ಕಂಡಂದು ॥
ಚರಣದೊಳೊದದನು ಗರುಡ । ದೈ । ತ್ಯರು ಧರೆಗಿಳಿದರು ಗಾಢ ॥೩೩೬॥

ಅಸುರಾಧಿಪ ಖತಿಗೊಂಡು । ಸಾ । ರಸಲೋಚನನನು ಕಂಡು ॥
ವಿಶಿಖದ ವೃಷ್ಟಿಯ ಸುರಿದ । ನೈಮಿಷದೊಳ್ ಹರಿಯದ ತರಿದ ॥೩೩೭॥

ಸುರರಿಪು ಶೂಲವನಿಡಲು । ಕಡಿ । ದುರಗಶಯನ ರೋಷದೊಳು ॥
ಭರದಿಂ ಚಕ್ರವ ಪಿಡಿದಾ । ಖಳ । ರೆರೆಯ ನೊಳಾಕ್ಷಣ ನುಡಿದ ॥೩೩೮॥

ಖೂಳನೋಡೆಲವೊ ಇದಕೆ । ನಿನ್ನ । ತೋಳಿನ ಮೇಲ್ಬಲು ಬಯಕೆ ॥
ತಾಳಿಕೊಳ್ಳೆಲವೊ ಎಂದೆನುತ । ವನ । ಮಾಲ ಚಕ್ರವ ಬಿಟ್ಟ ನಗುತ ॥೩೩೯॥

ದುರುಳನ ತೋಳ್ಗಳನಾಗ । ಕ । ತ್ತರಿಸಿ ಸುದರ್ಶನವಾಗ ॥
ಕರವೆರಡುಳಿಯಲು ಬಂದು । ಹರಿ । ಗೆರಗಿತು ಇನ್ನೇನೆಂದು ॥೩೪೦॥

**ಕಂದ**

ಚಕ್ರದ ಮನದೊಲವಂ ಮಿಗೆ ।
ಚಕ್ರಿಯು ಮಿಕ್ಷಿಸುತಲವನ ಕೊರಳಿಗೆ ಮತ್ತಾ ॥
ಚಕ್ರವ ನೆಗೆಯಲು ಕೃಷ್ಣನ ।
ವಿಕ್ರಮವಂ ಕಂಡು ಅಭವನೇಳ್ತಂದೆಂದಂ ॥೩೪೧॥

**ರಾಗ ಶಂಕರಾಭರಣ ಮಟ್ಟೆತಾಳ**

ಸಾಕು ಸಾಕು ರೋಷ ಯುದ್ಧ । ವೇಕೆ ಈತನಾವ ಲಕ್ಷ ।
ಬೇಕು ಬೇಡವೆಂಬರಾರು । ನೀ ಕೊಲುತಿರೆ ॥
ಕಾಕುಮನವನುಳಿದನಿನ್ನು । ಏಕೆ ಭಕ್ತನೊಡನೆ ಮುನಿಸು ।
ಸಾಕೆನುತ್ತ ನುಡಿದನಾ ಪಿ । ನಾಕಿ ಮುದದಲಿ ॥೩೪೨॥

ಚೆನ್ನವಾಯ್ತು ಪೇಳ್ದ ಮಾತು । ಪನ್ನಗಾಭರಣ ಕೇಳು ।
ನಿನ್ನ ಹೊಂದಿದವರು ಜಗದೊ । ಳೆನ್ನ ಭಕ್ತರು ॥
ಭಿನ್ನ ಭೇದವುಂಟೆ ನಿನ್ನೊ । ಳೆನ್ನೊಳಿಂದುತನಕಮಾದ ।
ಡೆನ್ನ ಭಾಷೆ ಸಫಲವಾಯಿ । ತಿನ್ನು ಕೊಲ್ಲೆನು ॥೩೪೩॥

ಎಂದು ಪೇಳಲಭವ ತೋಷ । ದಿಂದ ತಿರುಗಲಿತ್ತ ಬಾಣ ।
ನಂದ ವೇನನೆಂಬೆ ರುಧಿರ । ವಂದು ಭುಜದೊಳು ॥
ಮಂದವಾಗಿ ಸುರಿವುತಿರಲು । ಕಂದುಗೊರಳ ನೋಡಿ ಕರುಣ ।
ದಿಂದ ತಡವರಿಸಲು ದಾನ । ವೇಂದ್ರ ನಂಗವ ॥೩೪೪॥

**ಭಾಮಿನಿ**

ಹರನುಮವನಂಗವನು ತನ್ನಯ ।
ಕರದಿ ತಡವರಿಸಲ್ಕೆ ದನುಜನು ।
ಸುರುಚಿರಾಂಗನುಮಾದನಾತನ ಕರಸಹಸ್ರವನು ॥
ತರಿದನೋ ಹರಿ ಧುರದೊಳಲ್ಲಿವ ।
ಗಿರುವ ಹಸ್ತವೆ ದ್ವಯವೊ ಎಂಬಂ ।
ತಿರಲು ಕಾಣುತಮಭವ ನೆಂದನು ಕೃಷ್ಣನೊಳು ನಗುತ ॥೩೪೫॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಇಂದಿರಾವರನಾಲಿಸೈ ನಾ । ನಿಂದು ಬಾಣನು ಸಹಿತ ಪೋಪೆನು ।
ಚಂದದಿಂದವನೂರ ಸಲಹಿಕೊ । ಮುಂದೆ ನೀ ಸಂತಸದಲಿ ॥೩೪೬॥

ಎಂದ ಮಾತನು ಕೇಳಿ ಹರಿ ಮುದ । ದಿಂದ ಪೇಳ್ದನು ಹರನೆ ಕೇಳೈ ।
ಇಂದು ನೀ ಪೇಳಿದ ವಚನ ಸರಿ । ಬಂದಿತೇ ಬಾಣಾಖ್ಯಗೆ ॥೩೪೭॥

ಎನಲು ಭಕ್ತಿಯೊಳಚ್ಯುತನ ಪದ । ವನಜಕೆರಗುತ ನುಡಿದ ದೈತ್ಯನು ।
ಎನಗೆ ತಿಳಿಯದು ತವ ಮಹಿಮೆ ಮಮ । ಜನಕ ಬಲ್ಲನು ಪೂರ್ವದಿ ॥೩೪೮॥

ಅರಿಯದೇ ನಾ ನಿನ್ನ ಪಾದಕೆ । ದುರುಳತನವನು ಮಾಡಿದೆನೋ ನೀ ।
ಮರೆವುದೆನ್ನಯ ತಪ್ಪನೆನುತಲಿ । ಮರಳಿ ಚರಣದಿ ಬಿದ್ದನು ॥೩೪೯॥

**ಭಾಮಿನಿ**

ಇಂತು ಅಡಿಗೆಡೆದಿರ್ಪ ಬಾಣನ ।
ಸಂತಸದಿ ಪಿಡಿದೆತ್ತಿ ಲಕ್ಷ್ಮೀ ।
ಕಾಂತನೆಂದನು ಮಗನೆ ನೋವಿಲ್ಲೆನ್ನ ಚಿತ್ತದಲಿ ॥
ಮುಂತೆ ಸುಖಿಯಾಗೆನಲು ಕೇಳುತ ।
ಕಂತುಹರನತಿ ಹರುಷವೆತ್ತು ಮು ।
ರಾಂತಕಗೆ ಕೈಮುಗಿದು ಮರಳಿದನಂದು ಖಳಸಹಿತ ॥೩೫೦॥

**ರಾಗ ಸಾಂಗತ್ಯ ರೂಪಕತಾಳ**

ಹರನು ಬಾಣನು ಸಹ ತೆರಳಿದ ಕೈಲಾಸ । ಗಿರಿಗಾಗಿ ಇತ್ತ ನಾರದನು ।
ಹರಿಯ ಪಾದಾಂಬುಜಕೆರಗಿ ಕೈಮುಗಿದೆದ್ದು । ಪರಿಪರಿಯಿಂದ ಕೀರ್ತಿಸಿದ ॥೩೫೧॥

ಅಂದು ಮಂತ್ರಿಯು ಭಯದಿಂದ ಕಾಣಿಕೆಯನ್ನು । ತಂದು ಶ್ರೀಕೃಷ್ಣ ಗರ್ಪಿಸುತ ॥
ತಂದೆ ರಕ್ಷಿಸು ರಕ್ಷಿಸೆಂದು ಚರಣದ್ವಯಕೆ । ವಂದಿಸಿ ಬಲು ಸ್ತುತಿಗೈದ ॥೩೫೨॥

ಎರಗಿದ ಸಚಿವನ ಪತಿಕರಿಸಿ ಪ್ರೇಮದಿ । ಕಿರುನಗೆಯಿಂದ ಮಾಧವನು ॥
ಶಿರ ಪಿಡಿದೆತ್ತಿ ನೀನೇಂಗೈವೆ ದೊರೆಯಿದ್ದಂ । ತಿರುವುದು ಸಹಜ ಸೇವಕಗೆ ॥೩೫೩॥

ಚೆನ್ನಾಯ್ತು ಕೊರತೆಯೇನಿನ್ನು ನೀ ಪೋಗಿಯಾ । ಎನ್ನ ಮೊಮ್ಮಗನನು ಭರದಿ ॥
ಕನ್ಯೆ ಸಹಿತ ಕರೆತಹುದೆನೆ ಕೇಳಿ ಸಂ । ಪನ್ನಮಂತ್ರೀಶನೈತಂದು ॥೩೫೪॥

**ಕಂದ**

ಇಂತೇಳ್ತಂದಾ ಮಂತ್ರಿಯು ।
ಮಂತರಿಸದೆ ವಜ್ರಶೃಂಖಲವ ಖಂಡಿಸುತಂ ॥
ಕಾಂತಾಮಣಿಯುಷೆ ಸಹಿತಂ ।
ಕಂತುಜನ ಕರೆತಂದನಸುರಹರನಲ್ಲಿಗೆ ತಾ ॥೩೫೫॥

**ಭಾಮಿನಿ**

ಜನಪ ಕೇಳ್ಕೆ ಮಂತ್ರಿ ಮದನನ ।
ತನುಜನನು ದೈತ್ಯಜೆಯ ಸಹಿತಲೆ ।
ವಿನಯದಿಂದಂದಣವನೇರಿಸುತತಿ ವಿಲಾಸದಲಿ ॥
ಘನತರದಿ ಮೊಳಗುವ ಸುವಾಧ್ಯ ।
ಧ್ವನಿಗೆ ಕಂಪಿಸೆ ಧರಣಿ ತನ್ನಯ ।
ತನುಜೆ ಸಹ ನಡೆತಂದು ಕಾಣಿಸಿದನು ಮುರಾಂತಕಗೆ ॥೩೫೬॥

**ರಾಗ ಕೇದಾರಗೌಳ ಅಷ್ಟತಾಳ**

ಬಂದು ಪಿತಾಮಹನನು ಕಂಡು ಕಾಮನ । ನಂದನ ಲಜ್ಜಿಸುತ ।
ಇಂದುವದನೆ ಸಹ ವಂದಿಸೆ ಪಿಡಿದೆತ್ತಿ । ಇಂದಿರಾಧವ ತೋಷದಿ ॥೩೫೭॥

ಈ ಪಾಟಿ ಚೆಲುವಿನ ಕನ್ಯೆಯು ಕಮನೀಯ । ರೂಪ ನಿನಗೆ ಹೊರತು ।
ಕಾಪುರುಷರ್ಗೆ ಕೈಸೇರುವಳೇ ಎಂದು । ಶ್ರೀಪತಿ ನಗುತೆಂದನು ॥೩೫೮॥

ಉಷೆಯನಿರುದ್ಧರೀರ್ವರನು ಜೋಡಾಗಿ ನಿ । ಲ್ಲಿಸಿ ಹರಿ ಸಂತಸದಿ ॥
ಬಿಸಜ ಬಾಣಾದಿಗಳಿಗೆ ತೋರಲೆಲ್ಲ ಹ । ರುಷಬಟ್ಟು ನಲಿದರಾಗ ॥೩೫೯॥

ಕುಂಭಾಂಡ ಕೇಳಯ್ಯ ಈ ಊರ ದೊರೆತನ । ಶಂಬರಾರಿಯ ಸುತಗೆ ॥
ಹಂಬಲಿಸದೆ ಈತನೊಡನೆ ನೀ ನೋಡೆಂದು । ಅಂಬುಜಾಕ್ಷನು ಪೇಳಿದ ॥೩೬೦॥

ಜೀಯ ಹಸಾದವೆಂದೆನುತ ಮತ್ತಾ ಮಂತ್ರಿ । ನಾಯಕ ಪುರಕೈದಲು ॥
ಕಾಯಜಾದ್ಯರು ಸಹಿತಬುಜನೇತ್ರನು ಖಗ । ರಾಯನನೇರ್ದನಂದು ॥೩೬೧॥

**ಭಾಮಿನಿ**

ದೇವದುಂದುಭಿ ಮೊಳಗೆ ದೇವರ ।
ದೇವರೆಲ್ಲರು ಸಹಿತಲಾ ದ್ವಾ ।
ರಾವತಿಗೆ ನಡೆತಂದನತ್ಯಾನಂದದಲಿ ಬಳಿಕ ॥
ಶ್ರೀವರನುಮೈತಂದನೆನೆ ವಸು ।
ದೇವ ಕೇಳಿದು ತೋಷಬಡುತಲಿ ।
ದೇವಕಿಯನೊಡಗೊಂಡಿದಿರ್ಗೊಳಲೆಂದು ಪೊರಮಟ್ಟ ॥೩೬೨॥

**ರಾಗ ನವರೋಜು ಆದಿತಾಳ**

ಉರುತರ ಸಂತಸದಿ । ಸಿರಿವರ ಸಹ ಭರದಿ ॥
ಮಾರಜನಾ ನಾರಿಯ ನೋಳ್ಪೆವೆನುತಲಿ ।
ಭೋರನೈತಂದನು ಘನಹರುಷದಿ ॥೩೬೩॥

ಕಳ ಹಂಸಗಮನೆಯರು । ಜಲಜಸೌಗಂಧಿಯರು ॥
ಕಲಶಕುಚದ ಭಾರಕೆ ನಡುಬಳುಕಲು ।
ಕಲಶಕನ್ನಡಿಯನು ಪಿಡಿದೈತಂದರು ॥೩೬೪॥

ವಸುದೇವ ಬರುವುದನು । ಬಿಸಜನೇತ್ರನು ತಾನು ॥
ಕುಶಲದಿ ಕಾಣುತ ಖಗವರವನಿಳಿದು ।
ನಸುನಗೆಯಿಂದಲಿ ಪಿತಗೆ ವಂದಿಸಿದನು ॥೩೬೫॥

ಎರಗಿರ್ಪ ಹರಿಯನ್ನು । ಶಿರಪಿಡಿದೆತ್ತಿದನು ॥
ಮುರಹರ ಪುನರಪಿ ಮಾತೆಗೆ ವಂದಿಸೆ ।
ಪರಸುತಲಪ್ಪಿದಳಣುಗನ ನಲವಿಂ ॥೩೬೬॥

ಅನಿರುದ್ಧ ಉಷೆಯರನು । ವನಜನೇತ್ರನು ತಾನು ॥
ಜನಕಜನನಿಯರ ಚರಣಕೆ ಮಣಿಸಲು ।
ಸನುಮತದಿಂದೆತ್ತುತ ಪರಸಿದರು ॥೩೬೭॥

**ಕಂದ**

ಸ್ಮರಸುತನಂ ಬಾಣಜೆಯಂ ।
ಪರಿಕಿಸಿ ವಸುದೇವ ಮುಖ್ಯರೆಲ್ಲರು ಮನದೊಳ್ ॥
ಹರುಷಂಬಡೆದುಂ ಕೃಷ್ಣಾ ।
ದ್ಯರು ಸಹಿತೇಳ್ ತಂದರಂದುಮತಿ ವೇಗದೊಳಂ ॥೩೬೮॥

**ರಾಗ ಮಾರವಿ ಏಕತಾಳ**

ವಾರಿಜಾಕ್ಷನನಿರುದ್ಧಂ ಬಾಣಜೆಯರ । ನೇರಿಸಿಯಂದಣದಿ ॥
ಭೂರಿ ಸುವಾದ್ಯಘೋಷದೊಳಂದು ಯಾದವ । ವಾರ ಸಹಿತ ಭರದಿ ॥೩೬೯॥

ನಡೆ ತರುತಿರಲಂದಂಗಜತನುಜನ । ಮಡದಿಯನೀಕ್ಷಿಸಲು ॥
ಒಡನೈತಂದರು ಪುರಜನರೆಲ್ಲರು । ಕಡುಸಂತೋಷದೊಳು ॥೩೭೦॥

ಬಂದು ಬಂದಡಿಗೆರಗುವರನ್ನು ಮನ್ನಿಸು । ತಂದು ಮುರಾಂತಕನು ॥
ಅಂದಣವಿಡಿದೇಳ್ ತರುತಿರ್ದನುಮೇ । ನೆಂದು ಪೊಗಳ್ವೆ ನಾನು ॥೩೭೧॥

ಉಷೆಯಂದವ ಬಣ್ಣಿಸುವಡರಿದು ಶೋ । ಭಿಸುತಿರುವಂದಣದಿ ॥
ಮಿಸುನಿಬೊಂಬೆಯು ಮಂಡಿಸಿದುದೆ ಎಂಬಂ । ತೆಸೆದಳು ನೋಳ್ಪರಿಗೆ ॥೩೭೨॥

**ಕಂದ**

ಹರಿಯಿಂತೆಲ್ಲರು ಸಹಿತಂ ।
ಹರುಷದೊಳರಮನೆಗೆ ಬಂದುಮನಿರುದ್ಧನಿಗಂ ॥
ವರಶುಭಲಗ್ನದೊಳುಷೆಯಂ ।
ಪರಿಣಯವಂ ಮಾಡಿಸಿದನು ಅತಿವೈಭವದಿಂ ॥೩೭೩॥

**ದ್ವಿಪದಿ**

ಅಂದು ರುಕ್ಮಿಣಿ ಸತ್ಯಭಾಮೆಯರು ಮುದದಿ ।
ಕಂದರ್ಪನರಸಿಯ ನ್ನೊಡಗೊಂಡು ಭರದಿ ॥೩೭೪॥

ಚಾರು ಮೌಕ್ತಿಕದಿಂದ ಹಸೆಮಣೆಯ ಮಾಡಿ ।
ಮಾರತನುಜಾತನನು ಬಾಣಜೆಯು ಕೂಡಿ ॥೩೭೫॥

ನಲವಿನಿಂ ಕುಳ್ಳಿರಿಸಿ ಅರಸಿನೆಣ್ಣೆಯನು ।
ಚೆಲುವಿನಿಂದೆಸಗಿದರು ಪೊಗಳಲೇನಿನ್ನು ॥೩೭೬॥

ಇಂತುತ್ಸವದೊಳು ದಿನ ನಾಲ್ಕಾಗಲಾಗ ।
ಕಾಂತೆಯರು ಮಜ್ಜನವ ಮಾಡಿದರು ಬೇಗ ॥೩೭೭॥

ಹರಿ ಬಳಿಕ ಅನಿರುದ್ಧ ಉಷೆಯರಿಗೆ ಭರದಿ ।
ಸುರುಚಿರಾಭರಣಗಳ ತೊಡಿಸಿ ಸಂತಸದಿ ॥೩೭೮॥

ನವದುಕೂಲವನುಡಿಸಿ ನೋಡಲವದಿರನು ।
ದಿವಸೇಶನಂತೆ ಎಸೆವುತ್ತಿರ್ದರಿನ್ನು ॥೩೭೯॥

ಮದುಮಕ್ಕಳನು ಕುಳ್ಳಿರಿಸಿ ಸತಿಯರಂದು ।
ಮುದದಿಂದಲಾರತಿಯ ಬೆಳಗಿದರು ನಿಂದು ॥೩೮೦॥

**ರಾಗ ಧವಳಾರ ಆದಿತಾಳ**

ಕಾಮನ ಪುತ್ರಗೆ ಬಾಣಜೆಗೆ । ರಾಮನನುಜಪೌತ್ರಗೆ ಉಷೆಗೆ ।
ಕಾಮಿನಿಯರೆಲ್ಲ ನಲವಿಂದ ॥ ನಲವಿಂದಲೆ ಪಾಡುತ್ತ ಪೊಗಳುತ್ತ ।
ಹೇಮದಾರತಿಯ ಬೆಳಗಿರೆ । ಶೋಭಾನೆ ॥೩೮೧॥

ಕರಿವಾರವ ತರಿದೊಟ್ಟಿದಗೆ । ದುರುಳರ ಶಿರವನು ಕುಟ್ಟಿದಗೆ ।
ಶರಬಾಣಸುತೆಯ ರಮಣಗೆ ॥ ರಮಣಗೆ ಗಜಗಮನೆಯರೆಲ್ಲರು ।
ಕುರುಜಿನಾರತಿಯ ಬೆಳಗಿರೆ । ಶೋಭಾನೆ ॥೩೮೨॥

ಚಂದಿರವದನೆಗೆ ಶುಕವಾಣಿಗೆ | ಕುಂದರದನೆಗಮಿತ ಪ್ರಕಾಶಿನಿಗೆ |
ಕಂದರ್ಪ ಸುತನ ರಮಣಿಗೆ || ರಮಣಿಗೆ ಹರಿಣಾಕ್ಷಿಯರೆಲ್ಲರು |
ಕುಂದಣದಾರತಿಯ ಬೆಳಗಿರೆ | ಶೋಭಾನೆ ||೩೮೩||

**ಭಾಮಿನಿ**

ಅರಸ ಕೇಳಿಂತಚ್ಯುತನು ವಿ |
ಸ್ತರದಿ ವೈವಾಹವನ್ನು ಮಾಡಿಸಿ |
ಪರಿ ಪರಿಯ ದಕ್ಷಿಣೆಯನಿತ್ತನು ವಿಪ್ರಸಂಕುಲಕೆ ||
ಪುರಜನವ ಪರಿಜನವ ಪೋಷಿಸು |
ತಿರಲು ಸ್ಮರಜನು ಸತಿಯನೊಡಗೊಂ |
ಡಿರದೆ ಚರಣಕೆ ನಮಿಸಲೆತ್ತಿದನಸುರರಿಪು ನಗುತ ||೩೮೪||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಿರತವೀ ಪರಿ ವಿಭವದಲಿ ಶಿರಿ | ವರನುಮಿರ್ದನೆನುತ್ತಲಾ ಭೂ |
ವರಪರೀಕ್ಷಿತಗೆಂದ ಶುಕಮುನಿ | ಕರುಣದಿಂದ ||೩೮೫||

ಧರೆಯೊಳೀ ಕಥೆಯನ್ನು ಕೇಳ್ದರ | ದುರಿತವನು ಪರಿಹರಿಸಿ ಸೌಖ್ಯವ |
ನಿರದೆ ಪಾಲಿಪಜನ ಪುರಾಧೀ | ಶ್ವರನು ಸತತ ||೩೮೬||

ಪುರಮಥನ ಗಿರಿಜಾಮನೋಹರ | ದುರಿತ ವಿಪಿನಕೃಶನು ದಿವಿಜೇ |
ಶ್ವರನಮಿತ ಪದಯುಗಳ ಗಂಗಾ | ಧರ ಗಿರೀಶ ||೩೮೭||

ಅಂಗಜಾಂತಕ ದುಷ್ಟಸಂಕುಲ | ಭಂಗ ಸಜ್ಜನಸಂಗ ಕರುಣಾ |
ಪಾಂಗ ಕಮಲಜಪುರದೆರೆಯ ಮಹ | ಲಿಂಗ ಸಲಹೋ ||೩೮೮||

ಭೂಮಿ ಯಮರರ ಕುಲದಿ ಜನಿಸಿದ | ರಾಮಪುತ್ರನು ವಿಷ್ಣುವೆಂಬವ |
ಶ್ರೀಮಹಾಲಿಂಗನ ಪದದ್ವಯ | ತಾಮರಸದ ||೩೮೯ ||
ಕರುಣದಿಂದೀ ಕಥೆಯನುಸಿರಿದೆ | ಧರೆಯ ಕವಿಗಳು ಲಾಲಿಸುತ ತ |
ಪ್ಪಿರಲು ಜರೆಯದೆ ಪೂರ್ಣ ದಯದಲಿ | ಮೆರೆಸಿ ಜಗದಿ ||೩೯೦||

**ಮಂಗಲ**

**ರಾಗ ಸೌರಾಷ್ಟ್ರ ಆದಿತಾಳ**

ನಾಗಭೂಷಣಗೆ ಗಂಗಾಧರಗೆ | ನಾಗಶಯನಮಿತ್ರನಗೆ ಹರಗೆ ||
ನಾಗವಾಹನಮುಖ್ಯ ಸುರನುತಚರಣಗೆ | ನಾಗದಾನವಸಂಹಾರನಿಗೆ ||
ಮಂಗಳಂ ಜಯ ಮಂಗಳಂ ||೩೯೧||

ಹರಿಗಾತ್ರೆ ಫಾಲಾಕ್ಷನಿಗೆ । ಹರಿಶತಭಾಸಗೆ ಪುರಹರಗೆ ॥
ಹರಿಯ ಕುಮಾರಗೆ ಶರಪಿತ ದೇವಗೆ । ಹರಿಕಾಲಗೆ ಹರಿಚಾಕ್ಷನಿಗೆ ॥
ಮಂಗಳಂ ಜಯ ಮಂಗಳಂ ॥೩೯೧॥

ಅಂಬುಜಪಾಣಿಗೆ ಶಶಿಮುಖಿಗೆ । ಅಂಬುಜನೇತ್ರೆಗೆ ಪಾರ್ವತಿಗೆ ॥
ಅಂಬುಜಪುರವಾಸನ ರಮಣಿಗೆ । ಅಂಬುಜಗಂಧಿ ಮೂಕಾಂಬಿಕೆಗೆ ॥
ಮಂಗಳಂ ಜಯ ಮಂಗಳಂ ॥೩೯೩॥

***ಯಕ್ಷಗಾನ ಬಾಣಾಸುರನ ಕಾಳಗ ಮುಗಿದುದು***

## ೯. ನರಕಾಸುರವಧೆ - ಪಾತ್ರಗಳು

ದೇವೇಂದ್ರ
ದೇವತೆಗಳು
ನರಕಾಸುರ
ಮುರಕಾಸುರ
ನಾರದ
ನವಿ (ನರಕಾಸುರನ ತಂಗಿ)
ಶಚಿ
ಸಖಿಯರು
ಜಯಂತ
ಕೃಷ್ಣ
ಸತ್ಯಭಾಮಾ
ವನಚರರು
ಈಶ್ವರ
ಗಿರಿಜೆ
ಬ್ರಹ್ಮ
ಅದಿತಿ

**ವಾರ್ಧಿಕ**

ಗುರುಗಣಪ ಹರಿಹರಬ್ರಹ್ಮ ಸಿರಿವಾಗ್ದೇವಿ ।
ಗಿರಿಜೆ ಗುಹಸುರಪ ಮುಖ್ಯರ ಸ್ಮರಿಸಿ ಭಕ್ತಿಯಿಂ ।
ಹಿರಿಯರಿಗೆ ಮುನಿಗಳಿಗೆ ಕವಿಗಳಿಗೆ ಪೊಡಮಟ್ಟು ಸಜ್ಜನರ ಕೊಂಡಾಡುತ ॥
ತರುಣಿ ಭಾಮಾದೇವಿ ಸಹಿತಲಾ ಶ್ರೀವರಂ ।

ಮುರನರಕರಂ ಸದೆದು ತೆರಳಿದಿವದಿಂದಿಳೆಗೆ ।
ವರಮಹಾ ಪಾರಿಜಾತವ ತರುವ ತಂದ ಕಥೆ ಯಕ್ಷಗಾನದಿ ಪೇಳ್ವೆನು ॥೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೂಮಿಪಾಲ ಪರೀಕ್ಷಿತಗೆ ಸು ।
ಪ್ರೇಮದಿಂ ಭಾಗವತ ಚರಿತೆಯ ।
ಆ ಮಹಾಶುಕಯೋಗಿ ವಿವರಿಸ । ಲಾ ಮಹೀಶ ॥೨॥

ಕೇಳಿದನು ಕೈಮುಗಿದು ನರಕನ ।
ಶ್ರೀಲಲಾಮನು ಭಾಮೆ ಸಹಿತಲಿ ।
ಕಾಳಗದಿ ಹತಗೆಯ್ದು ಮುಕ್ತಿಯ । ಪಾಲಿಸುತಲಿ ॥೩॥

ಸಾರಿ ನಾಕಕೆ ವನದಿ ಶೋಭಿಪ ।
ಪಾರಿಜಾತ ಮಹಾತರುವ ಈ ।
ಧಾರಿಣಿಗೆ ಯಿಳಿಸಿರುವ ಕಥೆ ವಿ । ಸ್ತಾರಮಾಗಿ ॥೪॥

ಎನಗರುಹ ಬೇಕೆನುತ ಎರಗಿದ ।
ಜನಪನನು ತಕ್ಕೈಸಿ ಸತ್ಕಥೆ ।
ವನಜನಾಭನ ನೆನೆದು ಪೇಳಿದ । ವಿನಯದಿಂದ ॥೫॥

**ವಾರ್ಧಕ**

ಧರಣೀಶ ಕೇಳು ತ್ರೈಮೂರ್ತಿಗಳ ಒಲುಮೆಯಿಂ ।
ಸುರಪ ದಿವವಾಳುತಿರಲತ್ರಿಜನ ಶಾಪದಿಂ ।
ಶರಧಿ ಪಾಲಾಗಲಾ ಸೌಭಾಗ್ಯ ಸುರರಸುರರೊಂದಾಗಿ ಜಲಧಿ ಮಥಿಸೆ ॥
ದೊರಕಿದುದು ಸಕಲಸಂಪದ ಸುರಭಿ ಕಲ್ಪತರು ।
ತುರಗ ಗಜ ಮಂದಾರ ಪಾರಿಜಾತಾದ್ಯಖಿಳ ।
ಪರಿಪರಿಯ ವಸ್ತುಗಳ ವಶಗೈದು ಸುಧೆಯುಂಡು ಸುರಪ ಸುಖದಿಂದಿರ್ದನು ॥೬॥

**ರಾಗ ಭೈರವಿ ಝಂಪೆತಾಳ**

ವಿಸ್ತರಿಸಲಳವಲ್ಲ । ವೃತ್ರವೈರಿಯ ವಿಭವ
ಸಪ್ತದಿಕ್ಪಾಲಕರು। ಒತ್ತಿನಲಿ ಮೆರೆಯೆ ॥೭॥

ಗರುಡ ಗಂಧರ್ವ ಯ । ಕ್ಷರು ಮಹಾತಾಪಸರು
ಪರಮ ಧಾರ್ಮಿಕರು ನೆರೆ । ದಿರಲು ಸಂತಸದಿ ॥೮॥

ರಂಭಾದಿ ಸತಿಯರ ಕ । ದಂಬ ನರ್ತಿಸುತಿರಲು
ಸಂಭ್ರಮದಿ ದಿವಿಜರಿಗೆ । ಜಂಭಾರಿ ಪೇಳ್ದ ॥೯॥

ಆದಿಯಿಂದಲೆ ವೈರ । ಸಾಧಿಸುತ ದಿತಿಸುತರು
ಹೊದಾಡಿ ಧುರದಿ ಹತ । ವಾದರೆಯು ಜಗದಿ ॥೧೦॥

ಮುರನರಕರೆಂಬುವರು । ಸರಸಿರುಹಭವನಿಂದ
ವರ ಪಡೆದು ಪೀಡಿಪರು । ಧರೆಯ ಸಜ್ಜನರ ॥೧೧॥

ಬಾರದುಳಿಯರು ನಾಕ । ಸೂರೆಗೈಯ್ಯಲು ಗೆಲುವ
ದಾರಿಯೇ ನೆನಲು ಸುರ । ವೀರರುಸುರಿದರು ॥೧೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧರೆಯಧಿಪರಂ ಗೆಲಿದು ಲೋಕದಿ ।
ತರುಣಿಯರ ಸೆರೆಪಿಡಿದು ಬಾಳುವ ।
ದುರುಳರಿಗೆ ಸುಖವೆಂದಿಗಾದರು । ದೊರೆಯದಯ್ಯ ॥೧೩॥

ಏಕೆ ನಾವಳುಕುವುದು ಖಳರಿಗೆ ।
ನಾಕ ಪದವಿಯ ಬಯಕೆಯಂತ್ಯಕೆ ।
ಸೋಕುವುದು ಹೊರತುಳಿಯುವರೆ ಅವಿ । ವೇಕದಿಂದ ॥೧೪॥

ಮರಣಬಾರದ ತೆರದಿ ಮೊದಲಿಗೆ ।
ಪರಿಪರಿಯ ವರದಿಂದ ಕೊಬ್ಬಿದ ।
ದುರುಳರಾರುಳಿದಿಹರು ನೀನದ । ನರಿಯೆ ಏನೈ ॥೧೫॥

**ರಾಗ ಭೈರವಿ ಅಷ್ಟತಾಳ**

ಶರಧಿಯ ಮಥನದಲಿ । ರಾಕ್ಷಸರೆಲ್ಲ । ಪರಿಪರಿ ಯತ್ನದಲಿ ॥
ಸುರರಿಗೆ ಭಂಗವ ಬರಿಸಿದರೀ ಭಾಗ್ಯ । ದೊರಕಿದುದೆಮಗಂದಿಲಿ ॥೧೬॥

ನಿರತವು ಹರಿಹರ । ಕೃಪಾರಸ । ವಿರುತಿರೆ ನಿರ್ಜರರ ॥
ಧುರದಿ ಗೆಲ್ಲುವರುಂಟೆ । ಬರಲು ನಾಕಕೆ ಯಮ । ಪುರಕಟ್ಟುವೆವು ಖಳರ ॥೧೭॥

ಅನಿಮಿಷರೆಂಬುದನು । ಕೇಳುತ ತೋಷ । ವನು ತಾಳಿ ಸುರನಾಥನು ॥
ವಿನಯದಿ ಮನ್ನಿಸಿ । ಮನದೊಳು ಹರಿಹರ । ರನು ಧ್ಯಾನಿಸುತಿರ್ದನು ॥೧೮॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪೃಥ್ವಿಯಾತ್ಮಜ ನರಕನೆಂಬವ |
ನಿತ್ತನೋಲಗವಖಿಳ ವಿಭವದಿ |
ಸುತ್ತ ನೆರೆದಿಹ ಭಟರ ಪರಿಕಿಸಿ | ಬಿತ್ತರಿಸಿದ ||೧೯||

ಜನನಿ ಜನಕರು ಹೊರತುಳಿದರಿಂ |
ದೆನಗೆ ಮೃತಿ ಇಲ್ಲೆನುತ ಮೊದಲಿಗೆ |
ವನಜಭವ ವರವಿತ್ತ ಮೇಲತಿ | ಘನತೆಯಿಂದ ||೨೦||

ಧರೆಯಧಿಪರಂ ಗೆಲಿದು ಸೆರೆಯೊಳ |
ಗಿರಿಸಿಹೆನು ಹದಿನಾರು ಸಾವಿರ |
ತರುಣಿಯರ ಒಂದೇ ಮುಹೂರ್ತದಿ | ವರಿಪೆನೆನುತ ||೨೧||

**ಭಾಮಿನಿ**

ಇಂದು ಪರಿಯಂತರವು ಸತಿಯರ |
ಹೊಂದಿಕೆಗೆ ಶುಭಲಗ್ನ ದೊರೆಯದೆ |
ನಿಂದುದಾ ಘನಕಾರ್ಯವೆನಲಾ ಸಭೆಗೆ ನಾರದನು ||
ಇಂದುಶೇಖರ ಪರಮ ಕರುಣಾ |
ಸಿಂಧು ಸರ್ವೇಶ್ವರ ಸದಾಶಿವ |
ನೆಂದು ವೀಣೆಯ ನುಡಿಸುತಲಿ ನಡೆತಂದ ನಲವಿನಲಿ ||೨೨||

**ರಾಗ ಕೇತಾರಗೌಳ ಅಷ್ಟತಾಳ**

ಪರಿಕಿಸಿ ಮುನಿಪನ ಕರೆತಂದಾಸನದಿ ಕು |
ಳ್ಳಿರಿಸಿ ಸದ್ಭಕ್ತಿಯಿಂದ ||
ಚರಣಪೂಜೆಯ ಗೈದು ಕರ ಮುಗಿವುತ ಮನ |
ದಿರವಾತಗಿಂತೆಂದನು ||೨೩||

ಪಾವನನಾದೆ ನಿನ್ನಯ ದರ್ಶನದಿ ಗೆದ್ದು |
ಭೂವರರೆಲ್ಲರನು ||
ಭಾವಕಿಯರನು ತಂದಿರಿಸಿದೆ ಷೋಡಷ |
ಸಾವಿರ ಪರಿಣಯಕೆ ||೨೪||

ಒಂದೇ ಮುಹೂರ್ತವು ದೊರೆಯದರಿಂ ಬಲು |
ನೊಂದುಕೊಂಡಿಹೆ ಮನದಿ ||
ಮುಂದಿದರಂ ಪೇಳಿ ನಡೆಸು ನೀನೆನಲಾತ |
ಗೆಂದನಾ ಮುನಿನಾಥನು ||೨೫||

**ರಾಗ ಶಂಕರಾಭರಣ ಏಕತಾಳ**

ಧಿರುರೇ ಶಾಭಾಸು ನಿನ್ನ । ವೀರತನಕೆ ಎಣೆಯ ಕಾಣೆ ।
ಮೂರು ಲೋಕಗಧಿಕ ಭಾಗ್ಯವೇರಿ ನಲಿವುದು ॥
ನಾರಿಯರನು ವರಿಪ ದಿನ ವಿ । ಚಾರಿಸುತಲಿ ಪೇಳ್ವೆನದಕೆ ।
ತೋರಿ ಬರುವ ಕೊರತೆಯೊಂದೆ ಕಾರಣೀಕನೆ ॥೩೬॥

ಸೃಷ್ಟಿಗಧಿಕ ನಿನ್ನಾಳ್ತನಕೆ । ಪಟ್ಟದ ರಾಣಿತ್ವಕಾಹ ।
ಬಟ್ಟಕುಚೆಯರಿಲ್ಲ ಪೇಳ್ವೆ ಗುಟ್ಟನೊಂದನು ॥
ಅಟ್ಟಿ ಸುರಪ ಮುಖ್ಯಾಮರರ । ಥಟ್ಟನೇ ನೀ ಶಚಿಯ ತರಲು ।
ಅಷ್ಟಭಾಗ್ಯ ಶೋಭಿಸುವುದು ಕಷ್ಟವಲ್ಲದು ॥೧೭॥

**ರಾಗ ಭೈರವಿ ಏಕತಾಳ**

ಅರಿಯೆ ಇನಿತು ದಿನ ಜೀಯ । ನೀ ।
ನರುಹಿದೆ ಲೋಕದ ನ್ಯಾಯ ॥
ಸುರಪ ಷಂಡನಾಕೆಯನು । ಆ ।
ಳಿರುವುದರಿಂ ಫಲವೇನು ॥೧೮॥

ಧರಣಿಯೊಳಿಹ ಚೆಲುವೆಯರ । ತಂ ।
ದಿರಿಸಿಹೆ ಬಡ ನಿರ್ಜರರ ॥
ತರುಣಿಯ ತಹೆ ಲಗ್ನವನು । ಬಂ ।
ದರುಹು ಎನುತ ಕಳುಹಿದನು ॥೧೯॥

**ಕಂದ**

ನೆರಹುತ ಸೇನಾ ಶರಧಿಯ ।
ತೆರಳುವೆನತಿ ತ್ವರಿಯದಿಂದ ನಾಕಕೆನುತ ನಿಂ ॥
ದಿರಲನುಜೆಯು ನಡೆತರುತಲಿ ।
ಹಿರಿಯಂಗಭಿವಂದಿಸುತ್ತ ಬಳಿಕಿಂತೆಂದಳ್ ॥೨೦॥

**ರಾಗ ಕೇದಾರಗೌಳ ಝಂಪೆತಾಳ**

ಏನಿದಾಶ್ಚರ್ಯವಯ್ಯ । ಮನದೊಳ । ತ್ಯಾನಂದದಲಿ ಸೇನೆಯ ॥
ನೀ ನೆರಹಿ ಪೊರಡಲೇನು । ಹದನವಿದ । ನಾನರಿಯೆ ಎನಲೆಂದನು ॥೨೧॥

ತಂದಿರ್ಪ ಸತಿಯರಲ್ಲಿ । ಪಟ್ಟಕೆಣೆ । ಹೊಂದಿಹಳ ಕಾಣೆ ತೆರಳಿ ॥
ಇಂದ್ರನರಸಿಯಳ ತರಲು । ಶುಭಲಗ್ನ । ಬಂದೊರೆವನೆನುತೆನ್ನೊಳು ॥೨೨॥

ಸುರಮುನಿಪ ಪೇಳ್ದನದಕೆ । ತೆರಳುವೆನು । ತ್ವರಿಯದಿಂದಲಿ ನಾಕಕೆ ॥
ಪೊರಡುವಾನಂದವೆನಲು । ಉಬ್ಬುತಲಿ । ದುರುಳೆ ಪೇಳಿದಳವನೊಳು ॥೩೩॥

**ರಾಗ ಮುಖಾರಿ ಏಕತಾಳ**

ಸುಲಭದಿಂದಲಿ ಸಾಗದಯ್ಯ । ನೀ ಪೋದಡೀ ಕಾರ್ಯ ।
ಸುಲಭದಿಂದಲಿ ಸಾಗದಯ್ಯ ॥
ತಿಳಿದಿದರನು ಬರ್ದಿಲರು ಮುಳಿದು ಕೊಳು ।
ಗುಳ ಗೈದರೆ ಬಲು ಬಳಲಿಕೆಯಪ್ಪುದು ॥೩೪॥

ಕಡು ತವಕದಿ ಉಗುರಿಂದ । ಚಿಗುಟುವಂಥಾದಕ್ಕೆ ।
ಕೊಡಲಿ ಕೊಳ್ಳುವುದೇನಾನಂದ ॥
ಕೊಡು ಎನಗಾಜ್ಞೆಯ ಬಿಡುಗಣ್ಣರ ದೃಢ ।
ಕೆಡಿಸಿ ಮಾಯೆಯಿಂ ಪಿಡಿದೊಪ್ಪಿಪೆ ನಾ ॥೩೫॥

**ಭಾಮಿನಿ**

ಕೇಳುತಾಲೋಚಿಸಿದ ತಾನೇ ।
ಮೇಲುವರಿದರೆ ಮುನಿದು ನಿರ್ಜರ ।
ಪಾಳಯವು ಧುರವೆಸಗಿದರೆ ದೆಸೆಗೆಡಿಸುತೆಲ್ಲರನು ॥
ಲೋಲನೇತ್ರೆಯ ವಶಪಡಿಸೆಬಲು ।
ಕಾಲವಪ್ಪುದು ಮಾಯೆಯಿಂ ತಹ ।
ಊಳಿಗವು ಸೊಗಸೆನುತಲಾಜ್ಞೆಯನಿತ್ತು ಬೀಳ್ಗೊಟ್ಟ ॥೩೬॥

**ರಾಗ ದೇಶಿ ಅಷ್ಟತಾಳ**

ಪೊರಟಳಾಕ್ಷಣ ಶಚಿಯ ಯತ್ನದಿ ತಂದು ।
ಹಿರಿಯಗೊಪ್ಪಿಸೆ ಮುಂದೆ ತನ್ನನು । ಸರಸಗೊಳಿಸುವನೆನುತಲಿ ॥೩೭॥

ಸಾರಿ ಬೇಗದೊಳೋರ್ವರರಿಯದಂತೆ ।
ಏರಿ ನಾಕಕೆ ಗುಪ್ತದಿಂದಲಿ । ಕೇರಿಯೊಳು ನಡೆತಂದಳು ॥೩೮॥

**ವಾರ್ಧಕ**

ಭೂತಳಾಧಿಪ ಲಾಲಿಸಂದು ಬೇಸರದಿ ಸುರ ।
ನಾಥನರಸಿಯು ನಂದನವ ಚರಿಪೆನೆನುತ ಸತಿ ।
ವ್ರಾತದೊಡನೈತಂದು ಜಲಕೇಳಿಯಾಡಿ ಉದ್ಯಾನವನು ಸಂಚರಿಸುತ ॥
ಜಾತಿ ಜಾತಿಯ ಸುಮಗಳರಸಿ ಕೊಯ್ಯುವದೆಂದು ।

ದೂತಿಯರ ಕಳುಹುತ್ತಲೋರ್ವಳೊಂದೆಡೆ ಕುಳಿತು ।
ನೂತನದೊಳೆಸೆವ ಸೊಬಗುಗಳ ನೋಡುತ ಸರಸ ಪಡುತೀರ್ದಳೇನೆಂಬೆನು ॥೩೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತಲಾ ದಾನವಿಯು ಹಲವೆಡೆ ।
ಸುತ್ತಿ ಶಚಿಯನ್ನರಸಿ ಕಾಣದೆ ।
ಮತ್ತೆ ಅಂತಃಪುರವ ಶೋಧಿಸೆ । ಕೃತ್ರಿಮದಲಿ ॥೪೦॥

ಕುರುಹ ತಿಳಿಯದೆ ಮನದೊಳರಿತಳು ।
ತೆರಳಿಹಳೊ ನಂದನಕೆನುತ್ತಲಿ ।
ತ್ವರಿತದಿಂ ನಡೆತಂದು ದೂರದಿ । ಪರಿಕಿಸುತಲಿ ॥೪೧॥

ತೂಗಿದಳು ಮಸ್ತಕವ ಮತ್ತೀ ।
ನಾಗವೇಣಿಯ ವರಸುವಡೆ ಶತ ।
ಯಾಗನೇತರ ಸುಕೃತ ಪೂರ್ವದಿ । ಸಾಗಿಸಿದನೊ ॥೪೨॥

ಜಾಲ ಮಾತುಗಳಲ್ಲ ಸುರಮುನಿ ।
ಪಾಲ ಪೇಳ್ದುದು ಅಗ್ರಜಂಗನು ।
ಕೂಲೆಯಾದರೆ ವೈಭವಂಗಳ । ಪೇಳಲರಿದು ॥೪೩॥

**ಭಾಮಿನಿ**

ನಿಶಿಯೊಳಗಣಿತ ತಾರಕಿಗಳಿಂ ।
ವಸುಧೆ ಶೋಭಿಪುದುಂಟೆ ಕಾಂತಿಯ ।
ಪಸರಿಸುವ ಚಂದ್ರೋದಯದಿ ಸಂತೋಷ ಸಕಲರಿಗೆ ।
ಬಿಸಜನೇತ್ರೆಯರೀರ್ಪರಗಣಿತ ।
ರೊಸಗೆಯಿಂ ಫಲವಿಲ್ಲ ಈಕೆಯ ।
ಕುಶಲದಿಂದೊಪ್ಪಿಸುವೆನೆನುತುಬ್ಬಿದಳು ಮನದೊಳಗೆ ॥೪೪॥

**ಕಂದ**

ನುಡಿಸಿದರೀಕೆಯ ಸತಿಯರ ।
ಗಡಣವು ನಡೆತಂದರೆನ್ನ ತಡೆವರು ಜವದಿಂ ॥
ಪಿಡಿದೊಯ್ಯುವೆನೆನ್ನುತ ಮು ।
ನ್ನಡೆಯುತ ಕರವಿಕ್ಕಲಾಗ ರೋದಿಸುತೆಂದಳ್ ॥೪೫॥

**ರಾಗ ನೀಲಾಂಬರಿ ರೂಪಕತಾಳ**

ಹರನೇ ಇದೇತರ ಕಷ್ಟವೊ | ತ್ವರಿಯದಿ ನಡೆತಂದೋರ್ವಳು |
ಕರಪಿಡಿದೆಳೆವುತ ಭಂಗವ | ಬರಿಸುವಳಕಟಕಟ ||
ಸುರರುದ್ಯಾನದೊಳೀಪರಿ | ಪರಿಭವವೆಂತಾದುದೊ ಇದ |
ನರಿಯದೆ ಪೋದಿರೆ ಬಿಡಿಸಿರಿ | ತರುಣಿಮಣಿಯರೆಲ್ಲ ||೪೬||

ವೃಂದಾರಕರೇ ಗರುಡರೆ | ಗಂಧರ್ವರೆ ದಿಕ್ಪಾಲರೆ |
ಬಂದೆನ್ನನು ಬಿಡಿಸಿರಿ ತ್ವರೆ | ಯಿಂದಲಿ ದಯವಿರಿಸಿ ||
ಇಂದಿರೆಯರಸನೆ ಕರುಣಾ | ಸಿಂಧು ಮಹೇಶ್ವರನೆನುತಲಿ |
ಇಂದ್ರಾಣಿಯು ಮೊರೆಯಿಟ್ಟಳು | ನಂದನ ವನದೊಳಗೆ ||೪೭||

**ಭಾಮಿನಿ**

ಮೇಳವಸಿ ಗೆಳೆಯರ ವಿನೋದದ |
ಕಾಲಕಳೆಯುತ್ತಿರೆ ಜಯಂತಗೆ |
ಕೇಳೆ ರೋದನ ನಂದನದಿ ವಿಪರೀತವೇನೆನುತ ||
ಗಾಳಿಯನು ಹಿಂದಿಡುವ ಗಮನದಿ |
ತೋಳಬಲ್ಪಿನ ಸುಭಟ ಬಂದಾ |
ಖೂಳೆಯನು ಜರೆವುತ್ತ ನುಡಿದನು ಸಿಂಹನಾದದಲಿ ||೪೮||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಎಲೆ ಖೂಳೆ ನೀನೇನ ಗೈಯ್ಯುವೆ | ಮಾತೆ | ಯಳ ಸೆಳೆದಿನ್ನೆಲ್ಲಿ ಗೊಯ್ಯುವೆ ||
ಕಳೆದುಕೊಂಬೆಯ ಪ್ರಾಣ ಸುಮ್ಮನೆ | ಬಿಟ್ಟು | ತೊಲಗು ಬಂದಂದದಿ ಗಮ್ಮನೆ ||೪೯||

ಸಾರೆಲೋ ಬಾಲಕನಿಲ್ಲಿಗೆ | ನಿನ್ನ | ನಾರಟ್ಟಿದರು ಮಾರಿಬಾಯಿಗೆ ||
ಸೇರಿದ ಕುರಿಮರಿಯಂದದಿ | ಹುಲು | ಪೋರ ಸಾಯುವೆಯಹಂಕಾರದಿ ||೫೦||

ಕೇಳುವರಿಲ್ಲೆಂಬುದರಿಯೆಯ | ಕಡೆ | ಗಾಲದಕೃತ್ಯವ ಗೈಯ್ವೆಯ ||
ಬಾಳುವೆಯುಂಟೆ ಅನ್ಯಾಯಕೆ | ನಡೆ | ಹಾಳಾಗಬೇಡ ಸಾರಿದೆ ಜೋಕೆ ||೫೧||

ಶಿಶುವಧೆ ಸಲ್ಲದೆಂಬುದರಿಂದ | ನಿನ | ಗುಸುರುವೆ ನಾ ಬಲು ಬಗೆಯಿಂದ ||
ತುಸುಮಾತ್ರದಯವಿಲ್ಲವೆನಗಿಂದು | ನಿನ್ನ | ಅಸುಗೊಂಬೆ ಕೇಳುವರಾರ್ಬಂದು ||೫೨||

ಬೇಡ ಸ್ತ್ರೀಹತ್ಯವೆಂದೆನು ತಲಿ | ಮಾಫು | ಮಾಡಿದೆ ಮುನಿದತೀ ಕ್ಷಣದಲೀ ||
ತೋಡಿ ಕರುಳ ರಕ್ತ ಮಾಂಸದಿ | ಹಬ್ಬ | ಮಾಡುವ ಗಣಗಳ್ಗೆನಿಮುಷದಿ ||೫೩||

ಪರಿಕಿಪೆ ಪೌರುಷವೆನ್ನುತ್ತ | ಮುಂದು | ವರಿಯುವ ದುರುಳೆಯ ಕಾಣುತ್ತ ||
ಕರವೆರಡರನು ತುಂಡರಿಸಿದ | ನಿಜ | ಪುರಕೆ ಶಚಿಯ ಕೂಡಿ ಮರಳಿದ ||೫೪||

**ಭಾಮಿನಿ**

ಕತ್ತರಿಸಲಾ ಕರವೆರಡರಿಂ ।
ರಕ್ತದೋಕುಳಿಯಾಗಲರೆಕ್ಷಣ ।
ಪೃಥ್ವಿಗುರುಳುತಲೆದ್ದು ಬಲು ಬಸವಳಿದು ಗೋಳಿಡುತ ॥
ವ್ಯರ್ಥವಾದುದೆ ಬಾಳ್ವೆ ಹಾ ಎ ।
ನ್ನುತ್ತ ಬೈವುತ ಸುರಸಮೂಹವ ।
ಮೃತ್ಯುವಿನ ವೋಲ್ ಬಾಬಿಡುತಲೋಡಿದಳು ಪುರದೆಡೆಗೆ ॥೫೫॥

**ರಾಗ ಕೇತಾರಗೌಳ ಝಂಪೆತಾಳ**

ಕಂಡು ನರಕನು ಭ್ರಮೆಯಲಿ । ಕರೆದು ಬೆಸ । ಗೊಂಡ ಕರವಾರಿಂದಲಿ ॥
ತುಂಡೆಸಗಿದರು ವೈರದಿ । ಬಾಳಗೊಡೆ । ಪುಂಡರಂ ಮೂರ್ಲೋಕದಿ ॥೫೬॥

ಹರನೊ ಕಮಲಜನೊ ಸುರರೊ । ಯಕ್ಷಕಿ । ನ್ನರ ಗರುಡ ಗಂಧರ್ವರೊ ॥
ನರರು ಈ ತೆರಗೈದರೆ । ಇಕ್ಕೆಲದಿ । ಸುರಿವುತಿದೆ ರುಧಿರಧಾರೆ ॥೫೭॥

ಪೃಥ್ವಿ ಮೂರಕೆ ಒಡೆಯನು । ತಾನೆಂಬ । ಕೀರ್ತಿಯಿಂ ಫಲಗಳೇನು ॥
ಉತ್ತಮದ ಕುಲದ ಮಾನ । ಕಳೆದಿರುವ । ಧೂರ್ತರಂ ಬಾಳಗೊಡೆ ನಾ ॥೫೮॥

**ರಾಗ ಕಾಂಭೋಜಿ ಝಂಪೆತಾಳ**

ಬಿತ್ತರಿಸಲೇನಣ್ಣ ನಿನ್ನಾಜ್ಞೆಯಿಂ ನಾಕ ।
ಹತ್ತಿ ಶೋಧಿಸಲು ಬಲು ಕಡೆಯ ॥
ಮತ್ತಕಾಶಿನಿಯ ಕಾಣದೆ ತೆರಳೆ ನಂದನದಿ ।
ನಿತ್ತಿರ್ಪಳಾಕೆಯಂ ನೋಡಿ ॥೫೯॥

ಒತ್ತಿನೊಳಗಾರಿಲ್ಲದಿರಲು ಕರವಿಕ್ಕಿ ನಾ ।
ನಿತ್ತ ಸೆಳೆಯುತ ಬರಲು ಪಥದಿ ॥
ಎತ್ತಣಿಂದನೆಂಬುದರಿಯದು ಮನಕೆ ।
ಕೃತ್ತಿವಾಸನ ತೆರದಿ ಕನಲಿ ॥೬೦॥

ತಡೆದೆನ್ನ ಮೂದಲಿಸಿ ನುಡಿದು ಬಾಲಕನೋರ್ವ ।
ಕಡಿದಿಕ್ಕಿ ಕರವನಾಕೆಯನು ॥
ಬಿಡಿಸಿ ಕೊಂಡೊದ ಬಂದಡಚೆದೀಕಷ್ಟದೊಳು ।
ಪೊಡವಿಯೊಳು ಮೊಗ ತೋರ್ಪುದೆಂತು ॥೬೧॥

**ರಾಗ ಭೈರವಿ ಏಕತಾಳ**

ಬಿಡು ಭಗಿನಿಯೆ ದುಗುಡವನು । ಬಡ । ಹುಡುಗನಿಂದ ಭಂಗವನು ॥
ಪಡಿಸಿದ ನಿರ್ಜರ ಕುಲವ । ಸದೆ । ಬಡಿದಾಳುವೆ ಸುರಪುರವ ॥೬೨॥

ಹರಿಹರ ಬ್ರಹ್ಮಾದಿಗಳ । ತ । ನ್ನರಸಿ ಸಹಿತ ಸುರಪಾಲ ॥
ಮರೆಹೊಕ್ಕರು ಎಳೆತಂದು । ನಾ । ವರಿಸದೆ ಬಿಡೆನೆಂದೆಂದು ॥೬೩॥

ವಿರಚಿಸಿ ಮಂತ್ರೌಷಧವ । ನೀ । ನಿರು ಎಂದಟ್ಟುತ ಬಲವ ॥
ನೆರಹಿಸುತಿರೆ ಮುರ ಬಂದು । ಪದ । ಕೆರಗುತ ಪೇಳಿದನಂದು ॥೬೪॥

**ರಾಗ ಭೈರವಿ ಅಷ್ಟತಾಳ**

ವಿಪರೀತವೇನೆಮಗೆ । ಬಂತಿಂದು ನೀ । ಕುಪಿತನಾಗುತ್ತ ಹೀಗೆ ॥
ಅಪರಿಮಿತದ ಸೇವೆ ನೆರಹಲೇತರ ಕಾರ್ಯ । ಕೃಪೆಯಿಂದ ಪೇಳೆನಗೆ ॥೬೫॥

ಸುರಮುನಿ ಪೇಳ್ದಂದದಿ । ಶಚಿಯ ಕರೆ । ತರಲು ಭಗಿನಿ ಶೀಘ್ರದಿ ॥
ತೆರಳುತ್ತ ಕರವಿಕ್ಕೆ ತುಂಡರಿಸಿದ ನಿರ್ಜ । ರರ ನಿಲಗೊಡೆಕ್ಷಣದಿ ॥೬೬॥

ಇನಿತಾಯ್ತೆ ಕಾರ್ಯಗಳು । ದಿವಿಜರೆಮ । ಗನುಚರರಾಗಿರಲು ॥
ಬಿನುಗರ ದಂಡಿಸದುಳಿವುಡೆ ಬಿಡೆ ನಾನು । ರಣಕೆ ನಿನ್ನೊತ್ತಿನೊಳು ॥೬೭॥

**ಕಂದ**

ನುಡಿಯಿಂದುಬ್ಬುತ ನರಕಂ ।
ಪೊಡವಿಯು ನಡನಡುಗುವಂತೆ ಮಾರ್ಬಲ ಸಹಿತಂ ॥
ನಡೆತರೆ ನಾಕಕೆ ಪರಿಕಿಸಿ ।
ಕಡು ತವಕದಿ ಸುರವರಂಗೆ ಚರರಿಂತೆಂದರ್ ॥೬೮॥

**ರಾಗ ಸಾರಂಗ ಅಷ್ಟತಾಳ**

ನಿರ್ಜರರೆರೆಯ ಕೇಳಯ್ಯ । ಬಲು । ದುರ್ಜನರೊಂದಾಗಿ ನಮ್ಮಯ ಸಿರಿಯ ॥
ಊರ್ಜಿತದಿಂದಾಳ್ವೆವೆಂದು ಬಂದಿಲ್ಲಿಗೆ । ಗರ್ಜಿಸಿ ಬಡಿವುದ ಧೂರ್ಜಟಿ ಬಲ್ಲನು ॥೬೯॥

ನರಕನೆಂಬವನತಿ ಬಲನು । ಒತ್ತಿ । ಗಿರುವ ಸಚಿವ ವೀರ ಮುರನೆಂಬೋರುವನು ॥
ಹರಣಮಾತ್ರದಿ ಬಿಟ್ಟು ದೊರೆಗರುಹೆಂಬವ । ದಿರ ಪರಿಕಿಸಲೆದೆ ತರಹರಗೊಳುತಿದೆ ॥೭೦॥

**ರಾಗ ಭೈರವಿ ಅಷ್ಟತಾಳ**

ಕೇಳಿ ಚರರ ನುಡಿಯ | ನಿರ್ಜರರೊಳು | ಪೇಳಿದ ಸುರರೆರೆಯ |
ಪಾಳಯದೊಡಗೂಡಿ | ಖೂಳ ಖಳರು ಬಂದು | ಕೋಳುಗೊಂಬರು ಸಿರಿಯ ||೭೧||

ಅರಿತೆ ನಾ ಸುರಪ ನಿನ್ನ | ಕುಮಾರ ತುಂ | ಡರಿಸಲು ಕರಗಳನ್ನ ||
ದುರುಳೆಯ ದೂರಿಂದ | ಧರಿಸಿ ವಿರೋಧವ | ಧುರಕೆ ಬಂದಿಹರು ಮುನ್ನ ||೭೨||

ಒಳ್ಳಿತಾಯ್ತಾ ಹಗೆಗೆ | ಸೇನೆಯ ಕೂಡಿ | ಇಲ್ಲಿಗೈತಂದ ಬಗೆ ||
ಮಲ್ಲಭಟರ ಕೂಡಿ | ಖುಲ್ಲರ ವಧಿಪುದೆಂ | ದೆಲ್ಲರು ಧುರಕೊದಗೆ ||೭೩||

**ಕಂದ**

ಬರಲೊಂದೆಡೆ ನಿರ್ಜರರೊಳು |
ಮುರ ಹೊದಾಡುತಲಿರಲ್ಕೆ ತ್ರಿದಶರಿಗೆರೆಯಂ ||
ಪರಿಕಿಸಿ ನರಕಾಸುರನಂ |
ಉರಿಮಸಗುತ ತಡೆದು ಪೇಳ್ದನತಿ ಭರದಿಂದಂ ||೭೪||

**ರಾಗ ಶಂಕರಾಭರಣ ಮಟ್ಟೆತಾಳ**

ನೀನೆ ನರಕನೆಂಬ ಖಳನು ಸೇನೆ ಸಹಿತಲಿ |
ಏನ ನೆನೆದು ಬಂದೆ ಗೀರ್ವಾಣರಿದಿರಲಿ ||
ಪ್ರಾಣ ಕಳೆದುಕೊಂಬ ಬಗೆಯೊ ಮಾಣದುಸುರೆಲ |
ಹೀನತನದಿ ಕೆಡದೆ ನಿನ್ನಾಸ್ಥಾನ ಸೇರೆಲ ||೭೫||

ಸುರರು ನೀತಿವಂತರಾಗೆ ತರುಣಿಯೋರ್ವಳ |
ಕರವ ತುಂಡುಗೈದರಿಂದ ದೊರಕುವುದೆ ಫಲ ||
ಮರೆವುದುಂಟೆ ಮಾನಹಾನಿಯಾದ ಬಗೆಯನು |
ಮರುಳು ತಕ್ಕ ಮದ್ದ ನರೆಯಲೀಗ ಬಂದೆನು ||೭೬||

ತಿಳಿಯೆ ಏನೊ ನಂದನದಲಿ ಲಲನೆಯೋರ್ವಳು |
ಕುಳಿತರಲ್ಲಿ ದುಷ್ಟೆ ಬಂದು ಸೆಳೆಯೆ ಭರದೊಳು ||
ಮುಳಿದು ತಕ್ಕ ಶಾಸ್ತ್ರಿ ಗೈದರವಳ ಬಗೆಯಲಿ |
ಕಲಹವೆಸಗುತುಳಿವೆಯಾ ಬರ್ದಿಲರ ಹಗೆಯಲಿ ||೭೭||

ತರುಣಿಕರವ ಪಿಡಿದರೇನು ಕೊರತೆಯಾದುದು |
ಪೊರೆವ ನಾಥಗುಸುರದಿಂತು ಕರವ ಕಡಿದುದು ||
ಮರೆವುದಲ್ಲ ಪರಿಹರಿಸಲಿಕವಳ ವ್ಯಥೆಯನು |
ಧುರಹಿ ಕೆಡಹಿ ನಿನ್ನ ಸತಿಯ ಭರದೊಳೊಯ್ವೆನು ||೭೮||

ಕೇಳಿ ಕನಲುತಾಗ ತ್ರಿದಶರಾಳುವಾತನು ।
ಬಾಳಗೊಡೆನೆನುತ್ತ ಕುಲಿಶದಿಂದ ಹೊಡೆದನು ॥
ಖೂಳಗಣಿಸದದನು ಸರಳ ಜಾಲ ಸುರಿವುತ ।
ಮೇಲುವರಿದು ನಿಂದ ದಿವಿಜ ಪಾಳ್ಯ ಸದೆವುತ ॥೭೯॥

**ವಾರ್ಧಕ**

ಪರಿಕಿಸುತ ಸುರಪನದೃಶ್ಯದಿಂ ಸುರರೊಡನೆ ।
ತರುಣಿ ಶಚಿದೇವಿ ಸಹ ತೆರಳಿ ವನದೊಳಗಿರಲು ।
ಮುರ ನರಕ ಮುಖ್ಯರಾ ಪುರವ ಶೋಧಿಸದಡೆಯು ಕಾಣದಿರಲಿಂದ್ರಾಣಿಯು ॥
ಪರಮಪಾವನೆಯದಿತಿ ಕುಂಡಲವ ವಶಗೈದು ।
ವರುಣನಿಂ ಮಣಿಶೈಲ ಧನಪನಾಗಾರ ಮ ।
ತ್ತುರುತರ ಸುವಸ್ತುಗಳ ಕೈಗೊಳುತ ಬಲದೊಡನೆ ಪುರಕೈದನುತ್ಸವದಲಿ ॥೮೦॥

**ರಾಗ ಸಾಂಗತ್ಯ ರೂಪಕತಾಳ**

ಸುತ್ತುತ ದುರುಳಗರಿಯದಂದದಿ ಶಕ್ರ । ಒತ್ತಿನವರಿಗೆಂದ ದಿವದಿ ॥
ಪೃಥ್ವಿಯಾತ್ಮಜನಿಂದ ಬಳಲುವರೆಲ್ಲರು । ಬಿತ್ತರಿಸುವೆನಾರಿಗಿದನು ॥೮೧॥

ನಿರತವು ಕಷ್ಟವ ಬರಿಸುವರಿದಕೇನು । ಪರಿಹಾರವೆನುತ ಚಿಂತೆಯಲಿ ॥
ದೊರೆವುದೆ ಶುಭವು ಶ್ರೀವರಗಿದನರುಹಲು । ಸ್ಥಿರಗೊಳಿಸುವನು ಸಂಪದವ ॥೮೨॥

ಧರೆಗವತರಿಸುತ ಕೃಷ್ಣಾವತಾರದಿ । ಮೆರೆವನು ದ್ವಾರಕಾಪುರದಿ ॥
ತೆರಳಿ ಸಂಕಷ್ಟವನೊರೆವೆ ಶೀಘ್ರದೊಳೆಂದು । ಪೊರಮಟ್ಟು ಬಂದನಾ ಕಡೆಗೆ ॥೮೩॥

**ರಾಗ ಕಾಂಭೋಜಿ ಝಂಪೆತಾಳ**

ಧಾರಿಣೀಶ್ವರ ಕೇಳು ಶ್ರೀಲೋಲ ಕೃಷ್ಣಾವ ।
ತಾರದಲಿ ಜನಿಸಿ ಭೂತಳದಿ ॥
ಕ್ರೂರ ಕಂಸಾದಿ ಖಳವಾರವಂ ಸದೆದು ಸುಖ ।
ತೋರಿದನು ಯಾದವರ ಕುಲಕೆ ॥೮೪॥

ಧುರದಿ ಮಾಗಧನೊಡನೆ ವಿರಚಿಸುತ ನಟನೆಯಂ ।
ಶರಧಿ ಮಧ್ಯದಲಿ ದ್ವಾರಕೆಯು ॥
ಪುರವ ನಿರ್ಮಿಸಿ ಅಷ್ಟಮಾಂಗನೆಯರೊಡಗೂಡಿ ।
ಗರುಡವಾಹನನೀರ್ದ ಪುರದಿ ॥೮೫॥

**ಕಂದ**

ಒಂದು ದಿವಸ ವೈಭವದಿಂ
ಇಂದಿರೆವರ ಕುಳ್ಳಿರಲ್ಕೆ ನರಕನ ಭಯದಿಂ ॥
ಬಂದಲ್ಲಿಗೆ ಸುರಪಾಲಕ ।
ವಂದಿಸಿ ತರಹರಿಸುತೀರ್ಪವಗೆ ಹರಿ ನುಡಿದಂ ॥೮೬॥

**ರಾಗ ಕಲ್ಯಾಣಿ ಅಷ್ಟತಾಳ**

ಏನು ದುಮ್ಮಾನದಲಿ । ಬಂದಿರುವೆ ಗೀ ।
ರ್ವಾಣಪಾಲಕನಿಂದಿಲಿ ॥
ಆನಂದಗೊಳಿಪ ನಿನ್ನಾನನ ಕುಂದಲು ।
ಊನವಾರಿಂದ ಪೇಳು । ಶೀಘ್ರದೊಳು ॥೮೭॥

ದಿತಿಜರಿಂದಲಿ ನಾಕಕೆ । ಭೀತಿಯೆ ಸುರ ।
ತತಿಯಿಂ ಭೇದವೆ ಮನಕೆ ॥
ಹಿತದಿ ವರ್ತಿಸುವ ದಿಕ್ಪತಿಗಳಿಂ ತೊಡರಾಯ್ತೆ ।
ವ್ಯಥಿಸಬೇಡೆನಲೆಂದನು । ಬವಣೆಯನ್ನು ॥೮೮॥

**ರಾಗ ಹನುಮತೋಡಿ ಆದಿತಾಳ**

ಬಿನ್ನವಿಸುವದೇನು ಚಿನ್ಮಯ ನಿನಗೆ ।
ಪನ್ನಗಶಯನ ಕೃಪಾರ್ಣವನೆನಗೆ ॥
ದುರ್ನೀತಿವಂತರು ನಿಲಗೊಡರಯ್ಯ ।
ಬಣ್ಣಿಸಲರಿಯೆ ನಾ ಒದಗಿದ ವ್ಯಥೆಯ ॥೮೯॥

ಧರಣಿಯಾತ್ಮಜ ದುಷ್ಟ ನರಕನೆಂಬವನು ।
ಮುರನೆಂಬ ಧೂರ್ತನ ಬೆರೆದು ಕೊಂಡಿಹನು ॥
ಮರುತ ಅನಲರೊಂದು ಜತೆಗೂಡಿದಂತೆ ।
ಸರಸಿಜಭವನಿಂದ ವರವಾಂತರಂತೆ ॥೯೦॥

ಸುರಪುರಕೈತಂದು ಧುರದೊಳೆಲ್ಲರನು ।
ಹರಿಗೈದು ಸದ್ವಸ್ತುಪುರಕೆ ಒಯ್ದಿಹನು ॥
ಪರಮಪಾವನೆ ಮಾತೆಯದಿತಿ ಕುಂಡಲವ ।
ವರುಣನ ಮಣಿಶೈಲ ಅಪಹರಿಸಿರುವ ॥೯೧॥

**ಭಾಮಿನಿ**

ಸತಿಯಳಾಪೇಕ್ಷೆಯಲಿ ಬಂದವ ।
ಗತಿಗೆಡಿಸುತದೃಶ್ಯದಲಿ ನಾ ।

ನತುಳಯತ್ನದಿ ಕಾಣಿಸದೆ ಕಾನನದಿ ಚರಿಸುವೆನು ||
ಮಥಿಸಿ ತ್ವರಿಯದಿ ದುಷ್ಟ ಸಂಕುಲ |
ಸತತ ನಿನ್ನಾಶ್ರಮದೊಳಿಹ ಸುರ |
ತತಿಯ ಪಾಲಿಪುದೆನುತ ಮಣಿಯಲ್ಕೆಂದ ಶ್ರೀಲೋಲ ||೬೨||

**ರಾಗ ಜಂಜೂಟಿ ಏಕತಾಳ**

ಇದಕ್ಯಾತಕೆ ನೀ ಬೆದರುವೆ ಮುದದೊಳು |
ತ್ರಿದಶರೊಡನೆ ತೆರಳ್ಳೈ ದಿವಕೆ ||
ಅಧಮರ ಸಂಕುಲ ಸದೆದು ಶೀಘ್ರದಲಿ |
ಮುದಗೊಳಿಸುವೆ ನಿನ್ನಾಳ್ತತನಕೆ ||೬೩||

ಎಂದು ಕಳುಹಿ ಅಮರೇಂದ್ರನ ಹರಿ ತ್ವರೆ |
ಯಿಂದ ಸನ್ನಾಹದಿ ಪೊರಮಡಲು ||
ಬಂದಾ ಭಾಮೆಯು ವಂದಿಸಿ ವಿಸ್ಮಯ |
ದಿಂದಲಿ ವಲ್ಲಭ ಗುಸುರಿದಳು ||೬೪||

**ರಾಗ ಕಾಂಭೋಜಿ ತ್ರಿವುಡೆತಾಳ**

ಗಮನವಿದೆಲ್ಲಿಗಯ್ಯ | ಮನೋಹರ | ಗಮನವಿದೆಲ್ಲಿಗಯ್ಯ ||
ಕಮಲಲೋಚನ ಭವವಿಮೋಚನ | ಸುಮನಸಾರ್ಚಿತ ವಿಶ್ವವಂದಿತ ||
ಸಮರ ಸನ್ನಾಹದಲಿ ಪೊರಟಾ | ಗಮನವರಿಯೆನು ವಿಮಲಮೂರುತಿ ||೬೫||

ಆರೊಡನಿನಿತು ಪಂಥ | ಸಂಗ್ರಾಮದ | ಕಾರಣವರಿಯೆ ಕಾಂತ ||
ಸೂರೆಗೈದರೆ ಖಳರು ನಾಕವ | ಧಾರಿಣಿಯ ಸಜ್ಜನರ ಕಷ್ಟವ |
ದೂರಗೈಯ್ಯುವ ಕಾರ್ಯವೋ ತವ | ಸ್ವಾರಿಯರಿಯೆನು ಕಾರಣೀಕನೆ ||೬೬||

**ರಾಗ ಸುರುಟಿ ಏಕತಾಳ**

ನಾರಿಮಣಿಯೆ ಕೇಳೆ | ಪೊರಟ ವಿ | ಚಾರವ ಗುಣಶೀಲೆ ||
ಧಾರಿಣಿಯಾತ್ಮಜ ನರಕನು ನಾಕವ | ಸೇರಿ ಭಾಗ್ಯ ಅಪಹಾರವ ಗೈದನು ||೬೭||

ಅದಿತಿಯ ಕುಂಡಲವ | ಸೆಳೆವು | ತ್ತಧಮನು ಶೋಭಿಸುವ ||
ವಿಧ ವಿಧ ವಸ್ತುವ ಮಣಿಶೈಲವ ಸಹ | ತ್ರಿದಶರ ಬೆದರಿಸಿ ಸದನಕ್ಕೊಯ್ದನು ||೬೮||

ಬಳಲುತ ಸುರವರನು | ಬಂದೆ | ನ್ನೊಳು ಗೋಳಾಡಿದನು ||
ತಿಳುಹುತ ಧೈರ್ಯವ ಕಳುಹಿದೆನದಕಾ | ಕೊಳುಗುಳಕೈದುವೆ ನಳಿನದಳಾಂಬಕಿ ||೬೯||

**ಕಂದ**

ತೀರಿಸಿ ದುಷ್ಟರ ಕುಲಮಂ ।
ತೋರುತ ಸುಖವಮರರಿಂಗೆ ಬಹೆ ತ್ವರ್ಯದೊಳಂ ॥
ಬೇರೆಣಿಕೆಗಳಿಲ್ಲೆನುತಾ ।
ಮಾರಜನಕ ಪೊರಮಡಲಾಗ ತಡೆದಿಂತೆಂದಳ್ ॥೧೦೦॥

**ರಾಗ ಬಿಲಹರಿ ಅಷ್ಟತಾಳ**

ಸರಿಯಾದುದೀ ಕಾರ್ಯ ಅರಿತೆನಂತರ್ಯ ।
ಸುರರ ಪಾಲನೆ ನಿನ್ನ ನಿರತದಚರ್ಯ ॥
ತ್ವರಿಯದಿಂದಲ್ಲಿಗೆ ತೆರಳಲು ಬೇಕು ।
ಅರುಹುವೆ ಮನ್ಮನದಿರವ ಪರಾಕು ॥೧೦೧॥

ಅರೆಕ್ಷಣ ಅಗಲಿರಲಾರೆ ನಾ ನಿನ್ನ ।
ಕರೆದೊಯ್ಯಬೇಕಲ್ಲಿಗೆನ್ನ ಮೋಹನ್ನ ॥
ನರಕನ ವಧಿಸುವ ತೆರಳಿ ನಾಕವನು ।
ಪರಿಕಿಸಿ ಬರುವೆ ಆನಂದದೊಳಾನು ॥೧೦೨॥

ದೈತ್ಯಾರಿ ನೀ ಎನ್ನ ಒತ್ತಿನೊಳಿರಲು ।
ಧೂರ್ತರ ಭಯ ಚಿತ್ತಕಹುದೇ ಕೃಪಾಳು ॥
ವ್ಯರ್ಥ ಮಾತುಗಳ್ಯಾಕೆ ಬಿಡೆ ನಿನ್ನನೆನುತ ।
ಸತ್ಯಭಾಮಾದೇವಿ ಪೊರಟಳುಬ್ಬುತ್ತ ॥೧೦೩॥

**ವಾರ್ಧಕ**

ದಾನವಾರಿಯು ತಿಳಿದ ನಮ್ಮುಭಯರಿಂದ ಅವ ।
ಸಾನವಲ್ಲದೆ ಖಳಗೆ ವಿಧಿಯಿತ್ತ ವರ ಬಲದಿ ।
ತಾನೋರ್ವ ಕಾದಾಡಿ ಜೈಸಲಸದಳವಿದಕೆ ವಾದಿಸುವುದೇಕೆನ್ನುತ ॥
ಮಾನಿನಿಯ ಕರಕೊಳುತ ಏರಿ ಗರುಡನ ಕ್ಷಣದಿ ।
ಭಾನುಮಂಡಲವಡರಿ ತೆರಳಲ್ಕೆಯಿದಿರಿನೊಳು ।
ಕಾಣಿಸಿತು ನರಕನಾಸ್ಥಾನ ಪ್ರಾಗ್ಜೋತೀಷ ಪುರವ ತೋರಿಸುತೆಂದನು ॥೧೦೪॥

**ರಾಗ ಕಾಂಭೋಜಿ ಝಂಪೆತಾಳ**

ತರುಣಿಮಣಿ ಕೇಳಿದುವೆ ಧರೆಯಾತ್ಮಭವನಾದ ।
ನರಕನಾಳುವ ಮಹಾಪುರವು ॥
ಪರಿಕಿಸಲು ಬಲು ಭಯಂಕರಮಾಗಿಹುದು ಒಳಗೆ ।
ಸರಿಯಲರಿದಾ ತ್ರಿಪುರಹರಗೆ ॥೧೦೫॥

ಸುತ್ತೇಳು ಕೋಟೆಕೊತ್ತಳಗಳಾ ಮೇಲೆ ಬಲು ।
ಶಸ್ತ್ರ ಸಜ್ಜಿತ ಭಟರ ದುರ್ಗ ॥
ಮತ್ತೆ ಜಲಗಿರಿಯ ದುರ್ಗಗಳು ಪ್ರಜ್ವಲಿಸಿ ಉರಿ ।
ಯುತ್ತಿರುವ ಅಗ್ನಿದುರ್ಗಗಳು ॥೧೦೬॥

ಪುಂಡರೀಕಾಸನನ ಕೊಂಡಾಡಿ ಮುರನು ಮುಂ ।
ಕೊಂಡು ಪಡೆದಿರುವ ಪಾಶಗಳ ॥
ಕುಂಡಲಾಕೃತಿಯಿಂದ ಆರು ಸಾವಿರ ಬಲಿದು ।
ಕೊಂಡಿರುವ ಪುರದ ಸುತ್ತಿನಲಿ ॥೧೦೭॥

ಪತ್ನಿ ಭಾಮೆಗೆ ಸಕಲ ವಿಸ್ತಾರ ತೋರುತಿರೆ ।
ಮಿತ್ರನಸ್ತಮಿಸೆ ನಾಲ್ದೆಸೆಯ ॥
ಕತ್ತಲೆಯು ಮುಸುಕಲಾ ಶತ್ರುಗಳ ಪುರಕೆ ನು ।
ಗ್ಗೊತ್ತುವರೆ ಶುಭಸಮಯವೆಂದು ॥೧೦೮॥

ಗಿರಿಯ ಪವಿಯಿಂ ತರಿದು ಮರುತನಿಂ ಜಲವ ಪರಿ ।
ಹರಿಸಿ ಉರಿಯನು ವರುಣನಿಂದ ॥
ಬರಿಗೈದು ಬಲಿದಿರ್ಪ ಮುರ ಪಾಶಗಳನು ತುಂ ।
ಡರಿಸಿ ಚಕ್ರದಲಿ ಶ್ರೀವರನು ॥೧೦೯॥

**ಕಂದ**

ಊದಿದ ವೈರಿಗಳೆದೆಯಂ ।
ಭೇದಿಸುವಂದದೊಳು ಶಂಖನಾದಕೆ ನಡುಗಿತು ॥
ಮೇದಿನಿ ಖಳರೆಚ್ಚರಗೊಳೆ ।
ಚೋದಿಗವೇನೆನುತಲೆದ್ದು ಮುರ ಕುಳಿತೆಂದಂ ॥೧೧೦॥

**ರಾಗ ಭೈರವಿ ಏಕತಾಳ**

ಏನಿದು ವಿಪರೀತಗಳು । ಹೊರ । ಠಾಣದಿ ಬೊಬ್ಬೆ ನಿಶಿಯೊಳು ॥
ಕ್ಷೋಣಿಯು ಬಿರಿವ ವಿಧಾನ । ಎಣೆ । ಗಾಣದ ಶಂಖಧ್ವಾನ ॥೧೧೧॥

ಕಾಲ ಮೃತ್ಯುವಾಗಿರಲಿ । ತ್ರಿ । ಶೂಲಿಯೆ ನಡೆತಂದಿರಲಿ ॥
ಭೂಲಲನಾಪತಿ ಬರಲಿ । ಸುರ । ಜಾಲವೆ ಮುನಿದೈತರಲಿ ॥೧೧೨॥

ಪರಿಕಿಪೆ ತಾನದನೆನುತ । ಮೈ । ಮರೆದು ಮುರನು ಕನಲುತ್ತ ॥
ಪೊರಟೈತಂದರಸುತಲಿ । ಶ್ರೀ । ವರಗೆಂದನು ಖಾತಿಯಲಿ ॥೧೧೩॥

ಮಸಿಬಣ್ಣನೆ ನೀನಾರು । ನಡು । ನಿಶಿ ಬಂದಿಹುದೇಕುಸುರು ॥
ಶಶಿಮುಖಿಯೋರ್ವಳ ಕೂಡಿ । ಇಲ್ಲಿ । ನುಸುಳುವುದೇತಕೊ ಖೋಡಿ ॥೧೧೪॥

ದುಷ್ಟಖಳಾಧಮ ಕೇಳು । ಈ । ಸೃಷ್ಟಿಯ ಭಾರವಿಳುಹಲು ॥
ಪುಟ್ಟಿದೆ ಕೃಷ್ಣಾಖ್ಯೆಯೊಳು । ಸತಿ । ಪಟ್ಟಭದ್ರೆ ಎನಗಿವಳು ॥೧೧೫॥

ಬಲ್ಲೆನು ಗೋವಳ ಪೋರ । ಹೆಂ । ಗಳ್ಳ ಬೆಣ್ಣೆದಧಿ ಚೋರ ॥
ಇಲ್ಲಿ ಬಂದು ಅಹಿತದಲಿ । ಪೋಗ । ಬಲ್ಲೆಯೊ ಜೀವದಿ ಮರಳಿ ॥೧೧೬॥

ತಿಳಿಯೆಯ ಎನ್ನ ಬಾಲ್ಯದಲಿ । ಬಲು । ಖಳರ ಸದೆದೆ ಲೋಕದಲಿ ॥
ಉಳಿದಿಹ ನಿಮ್ಮಯ ವಧೆಗೆ । ಈ । ನಿಳಯವ ಸೇರಿದೆ ಕಡೆಗೆ ॥೧೧೭॥

ಬಲುಹಿರೆ ತೋರೆಂದೆನುತ । ಶರ । ಗಳ ಬಿಡಲದ ಶ್ರೀನಾಥ ॥
ಉಳಿಯಗೊಡದೆ ಚಕ್ರದಲಿ । ಕಡಿ । ದಿಳುಹಿನ ಶಿರವವನಿಯಲಿ ॥೧೧೮॥

**ವಾರ್ಧಕ**

ಧರಣಿಗುರುಳಿದ ಮುರನ ಪರಿಭವ ।
ಪರಿಕಿಸುತಲಾತನ ಕುಮಾರರು ।
ಕರಿತುರಗ ರಥ ದಳದೊಡನೆ ಕಾದಲ್ಕೆ ॥
ಸುರರು ಬಾಯ್ಬಿಡುವನಿತರೊಳು ಕ ।
ತ್ತರಿಸಿ ಬಿಸುಟನು ತಿಳಿದು ವಾರ್ತೆಯ ।
ನರಕ ತ್ರಿಪುರಾಂತಕನ ತೆರದಲಿ ಕನಲಿ ತಡೆದೆಂದ ॥೧೧೯॥

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಮನುಜ ಲಲನೆಯೊಡನೆ ಬಂದು ನಿಶಿಯಲಿ ।
ಹಲವರನ್ನು ತರಿದು ಉಬ್ಬಿ ನಲಿವೆ ಮದದಲಿ ॥
ಕಳೆದುಕೊಳ್ಳಬೇಡ ಪ್ರಾಣ ಚೆಲುವೆಯಿವಳನು ।
ನಲವಿನಿಂದಲಿತ್ತು ಪೋಗು ನಿಳಯಕೆಂದನು ॥೧೨೦॥

ಕ್ರೂರಮತಿಯೆ ನೃಪರ ಗೆದ್ದು ನಾರಿಮಣಿಯರ ।
ಸೇರಿಸುತ್ತ ಸೆರೆಗೆ ಕಷ್ಟಗೊಳಿಸಿ ಸುಜನರ ॥
ಘೋರ ಪಾಪಗೈದ ಪಿತ್ಥವೇರಿ ನಲಿವುದು ।
ಮಾರಿಗೀಯೆ ಜಗದಿ ಸುಖಕೆ ದಾರಿಯಪ್ಪುದು ॥೧೨೧॥

ಜಲಜಭವನ ಒಲುಮೆಯಿರಲು ಗೆಲುವನಾವನು ।
ಅಳುಕಿ ಪೊಕ್ಕರೆಲ್ಲ ಬರ್ದಿಲರು ವನವನು ॥

ತಲೆಯ ಕಡಿದು ಮನುಜ ನಿನ್ನ ಲಲನೆ ಇವಳನು ।
ಬಳಿಯೊಳಿರಿಸಲು ತಾಳ್ವೆ ಸುಖದಿ ನಿಳಯವೆಂದನು ॥೧೨೨॥

ವಿಧಿಯ ಒಲುಮೆ ಪಡೆದ ಬಗೆಯ ಮೊದಲೆ ಬಲ್ಲೆನು ।
ಅದಕೆ ತಕ್ಕುಪಾಯವೆಣಿಸಿ ಕದನಕೈದೆನು ॥
ತುದಿಯ ಕಾಲವಿಂದು ನಿನಗೆ ಒದಗಿತೆನ್ನುವ ।
ಪದುಮನಾಭ ಶರವನೆಸೆಯೆ ಸದೆದು ಕನಲುತ ॥೧೨೩॥

**ಭಾಮಿನಿ**

ನರಕ ಶರವಂ ಬಿಡಲು ನಟನೆಯ ।
ವಿರಚಿಸುತ ಚೈತನ್ಯ ಕುಂದಿದ ।
ತೆರದಿ ಮುರಹರನಿರಲು ಬಳಿಗೈ ತರುವವನ ನೋಡಿ ॥
ತರುಣಿ ಭಾಮಾದೇವಿ ರೋಷದಿ ।
ಧುರಕೆ ಧನು ಕೈಗೊಳುತಲಿದಿರಿಗೆ ।
ಬರಲು ಬಹುಪರಿಯಿಂದ ಜರಿದಿಂತೆಂದನಾಕೆಯೊಳು ॥೧೨೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತರುಣಿ ನಾಚಿಕೆ ತೊರೆದು ಎನ್ನೊಳು । ಧುರಕೆ ಇದಿರಾಗುವೆಯೊ ನಿನ್ನಯ ।
ವರನ ಭಂಗವನರಿತು ಬಾಳಿರು । ಚರಣಕೆರಗಿ ॥೧೨೫॥

ದೀನ ರಕ್ಷಕನಿಂದ ಮಡಿದರೆ । ತಾನೆ ಸದ್ಗತಿಯಹುದು ನರಕದ ।
ಸ್ಥಾನ ತೋರಲು ಎನ್ನ ಕಳುಹಿದ । ದಾನವಾರಿ ॥೧೨೬॥

ಲಲನೆ ನಿನ್ನಯ ವಧೆಗೆ ಹೇಸುವೆ । ಕಲಹವ್ಯಾತಕೆ ಎನ್ನ ಪುರದೊಳು ।
ಹಲವರಿರುವರು ತೊರೆದಿವನ ನೀ । ನೆಲಸು ಸುಖದಿ ॥೧೨೭॥

ಘೋರಪಾತಕ ಪುರುಷರನು ಸಂ । ಹಾರ ಗೈಯ್ವುದು ಸತಿಯರಿಗೆ ನಾ ।
ಸಾರಿ ಪೇಳುವೆ ನೀತಿ ಮುನಿದರೆ । ಮಾರಿ ನಿನಗೆ ॥೧೨೮॥

ಸೊಕ್ಕ ನಿಲಿಸುವೆನೆನುತ ಶರ ಪೂ । ಡಲ್ಕೆ ಹರಿ ಕಂಡದರ ತುಂಡಿಸಿ ।
ಚಕ್ರ ಬಿಡೆ ಒಮ್ಮೆತದಿ ಖಳನುದ । ರಕ್ಕೆ ಪೊಗಲು ॥೧೨೯॥

**ರಾಗ ಕಾಂಭೋಜಿ ಝಂಪೆತಾಳ**

ಅರೆ ನಿಮಿಷ ಮೂರ್ಛೆಯಿಂ ಧರೆಗುರುಳಿ ಎಚ್ಚರಿತು । ಸರಸಿರುಹ ಭವನಿತ್ತ ವರವು ॥
ಬರಿದಾದುದೇಕಿದರ ಒಳವರಿವೆ ತಾನೆನುತ । ಪರಿಕಿಸುತ ಸುಜ್ಞಾನದಿಂದ ॥೧೩೦॥

ಆದಿ ಪುರುಷನು ಈತ ಮೇದಿನಿಯ ಬಾಧಿಸಿದ । ಆ ದಿತಿಜರನು ಸದೆದ ಮೊದಲು ॥
ಸಾಧುಗಳ ರಕ್ಷಣೆಗೆ ತಾಳ್ದ ಅವತಾರವಿದು । ಭೂದೇವಿಯಂಶದವಳಿದವಳು ॥೧೩೧॥

ಘನ ಮಹಿಮರೀರುವರು ಜನನಿ ಜನಕರು ಎನ್ನ । ಜನುಮ ಸಾರ್ಥಕವಾಯಿತಿನ್ನು ॥
ವನಿತೆ ಸುತ ಧನಕನಕವೆನುವ ಪಾಶದಿ ಸಿಲುಕಿ । ದಣಿವುದೇಕೆನುತ ಕೈಮುಗಿದ ॥೧೩೨॥

ಜಯ ಜಗನ್ಮಯ ಸಚ್ಚಿದಾನಂದ ಮೂರ್ತಿ ಅಹಿ । ಶಯನ ನಿಟಿಲಾಕ್ಷ ಸುಪ್ರೀತ ॥
ಭಯ ನಿವಾರಣನೆ ನಿರ್ದಯ ವೇತಕೆನಗೆ ಆ । ಶ್ರಯವಿತ್ತು ಪಾಲಿಸನವರತ ॥೧೩೩॥

**ಭಾಮಿನಿ**

ಭರಿತ ಭಯ ಭಕ್ತಿಯಲಿ ನುತಿಸುವ ॥
ನರಕನನು ಕಾಣುತ್ತ ಶ್ರೀವರ ।
ತರುಣಿ ಭಾಮಾದೇವಿ ಸಹಿತೈತಂದು ಹತ್ತಿರಕೆ ॥
ಕರುಣದಿಂದಾತನ ತನುವ ತಡ ।
ವರಿಸುತೆಂದನು ತವ ಮನೋರಥ ।
ಕರುಣಿಸುವೆ ನೀನಂಜದಿರು ಎನೆ ಪೇಳ್ದ ಕೈಮುಗಿದು ॥೧೩೪॥

**ರಾಗ ಸಾಂಗತ್ಯ ರೂಪಕತಾಳ**

ಪಾಲಿಸು ಮುಕ್ತಿ ಚಂದ್ರಾರ್ಕರಿಪ್ಪನ್ನೆಗಂ । ಮೂಲೋಕ ಕೊಂಡಾಡುವಂತೆ ॥
ಮೇಲಾದ ಕೀರ್ತಿಯು ಮೆರೆಯುವಂದದ ಕಾರ್ಯ । ಪೇಳುವೆ ನಡೆಸಬೇಕದನು ॥೧೩೫॥

ವನಜಾಕ್ಷನವ ಸುದರ್ಶನವು ಸೋಕಿದುದೆನ್ನ । ತನುವಾಶ್ವೀಜದಸಿತಪಕ್ಷಾ ॥
ಇನಿತು ತ್ರಯೋದಶಿ ಕಳೆದ ಚತುರ್ದಶಿ । ಯನು ಎನ್ನ ಪೆಸರಿಂದ ಕರೆದು ॥೧೩೬॥

ಹಿರಿಯರು ಕಿರಿಯರು ಯತಿಗಳು ಸಹ ಹಿಮ । ಕರನುದಯದಿ ತೈಲಾಭ್ಯಂಗ ॥
ವರಸ್ನಾನ ವಿರಚಿಸಿ ಭಕ್ಷ್ಯಭೋಜ್ಯವನುಂಡು । ಮೆರೆವುದು ಜಗತಿಯೊಳೆಲ್ಲ ॥೧೩೭॥

ಮರೆತವರಿಗೆ ಘೋರ ನರಕವಾಚರಿಪರ್ಗೆ । ಕರುಣಿಸು ಉತ್ತಮಗತಿಯ ॥
ಸ್ಥಿರವಾಗಿರಲಿ ಮಮ ಚರಿತೆ ಈ ತೆರ ನೀಡು । ವರಮಹಾಮುಕ್ತಿಯನೆನಗೆ ॥೧೩೮॥

ಅಸ್ತು ಎಂದಾತನ ಪರಸೆ ಸುದರ್ಶನ । ಕತ್ತರಿಸಲು ಆತ್ಮಜ್ಯೋತಿ ॥
ಮತ್ತೆ ಶ್ರೀವರನ ಸೇರ್ದುದು ಪೊಗಳಿದರೆಲ್ಲ । ಭಕ್ತಿಯಿಂದಲಿ ಮುರಹರನ ॥೧೩೯॥

**ವಾರ್ಧಕ**

ಪೃಥ್ವಿಯಾತ್ಮಜಗೆಂದ ತೆರದಿ ಮೊದಲಾಗಿ ಹರಿ ।
ಪತ್ನಿ ಸಹಿತಾ ವ್ರತವ ಕೈಗೊಂಡು ಸಕಲರಿಗೆ ।

ವಿಸ್ತರಿಸುತವರ ಸಂತೈಸಿ ಧರೆಯಂ ನರಕ ಪುತ್ರ ಭಗದತ್ತಗಿತ್ತು ॥
ಮತ್ತಕಾಶಿನಿಯರಂ ಸೆರೆ ಬಿಡಿಸುತವರ ದೃಢ ।
ಭಕ್ತಿಯನ್ನರಿತು ದ್ವಾರಕೆಗೆ ಕಳುಹುತ್ತ ಖಳ ।
ವಸ್ತುಗಳು ಸಹಿತ ಸತಿಯಳನು ಕರಕೊಳುತ ನಾಕಕೆ ತೆರಳಿ ಸರಸದಿಂದ ॥೧೪೦॥

**ರಾಗ ಕೇದಾರಗೌಳ ಅಷ್ಟತಾಳ**

ಇಂದ್ರಾದಿ ದಿಕ್ಪಾಲರಿಂದ ಮನ್ನಣೆಗೊಂಡಾ । ನಂದದಿ ಮರಹರನು ॥
ಒಂದುಳಿಯದೆ ಅವರವರ ವಸ್ತುವನಿತ್ತು । ವಂದಿಸಿ ಸುರಮಾತೆಗೆ ॥೧೪೧॥

ಭಕ್ತಿಯಿಂ ಕುಂಡಲವಿತ್ತವರನು ಪರ । ಸುತ್ತ ಅದಿತಿ ಮುದದಿ ॥
ಸತ್ಕರಿಸಲು ಪಡೆದಾಜ್ಞೆಯನಾಕದ । ವಿಸ್ತಾರಗಳ ನೋಡುತ ॥೧೪೨॥

ಪಾಕಶಾಸನನ ಸಂತೋಷಗೊಳಿಸುತ್ತ ಭೂ । ಲೋಕಕೆ ಪೋಪೆನೆಂದು ॥
ಶ್ರೀಕಾಂತ ಪೊರಟು ಮುಂದೈತರೆ ಮಣಿಯುತ್ತ । ರಾಕೇಂದುಮುಖಿ ಪೇಳ್ದಳು ॥೧೪೩॥

**ರಾಗ ಘಂಟಾರವ ಏಕತಾಳ**

ಧನ್ಯಳಾದೆ ಸಂಪನ್ನ ನಿನ್ನ ದಯದಿ । ಸಂಪೂರ್ಣ ಕೃಪಾವನಧಿ ।
ಎನ್ನ ಪೋಲ್ವರಾರಿನ್ನು ಮೂರು ಜಗದಿ ॥
ಬಣ್ಣಿಸಲರಿಯೆನು ಪುಣ್ಯದ ಫಲ ಬಿಡು ।
ಗಣ್ಯರಿಂದ ನಾ ಮನ್ನಣೆ ಪಡೆದೆನು ॥೧೪೪॥

ತೋರಿದೆ ದಿವಿಜರ ಊರ ವಿಭವ ಎರೆಯ । ಪರಿಪರಿಯಾದಚ್ಚರಿಯ ॥
ತೀರದು ವಿವರಿಸಲಾರಿಗು ಈ ಸಿರಿಯ ॥
ವಾರಿಜಾಕ್ಷ ಶುಭಮೂರುತಿ ನಿನ್ನನು ।
ಸೇರಿದರಿಂ ಕಣ್ಣಾರೆ ಕಂಡೆನಿದ ॥೧೪೫॥

ಚಂದದ ನಂದನ ಇಂದ್ರನ ಉದ್ಯಾನ । ಎಂಬುದವ ಕೇಳ್ದಿಹೆನಾ ।
ತಂದು ಕೃಪೆಯ ನಲವಿಂದ ತೋರಿ ಎನ್ನ ॥
ಒಂದು ಬಾರಿ ಆನಂದಪಡಿಸು ತ್ವರೆ । ಯಿಂದಲ್ಲಿಂದಲೆ ಹೊಂದುವ ಮಂದಿರ ॥೧೪೬॥

**ವಾರ್ಧಕ**

ನಾರಿಯಿಂತೆನೆ ಕೇಳ್ದು ಕರಕೊಳುತ ಬಂದಾಗ ।
ತೋರಿಸಿದ ಸುರಭಿಹಯ ಗಜಕಲ್ಪತರುಗಳಂ ।
ಬೇರೆ ಬೇರೆಲ್ಲವಂ ಬಲಬಂದು ಕೈ ಮುಗಿದು ನಂದನವ ಪರಿಕಿಸುತಲಿ ॥
ಸೂರ್ಯ ಚಂದ್ರಮರ ಧಿಕ್ಕರಿಪ ಶೋಭೆಯಲಿ ಮಂ ।

ದಾರ ಮಲ್ಲಿಗೆ ಜಾಜಿ ಸುರಗಿ ಮೊದಲಾದ ಸುಮ ।
ರಾರಾಜಿಸಲು ಬರುತ ಮುಂದೆ ಕಂಡಳು ಮಹಾ ಪಾರಿಜಾತದ ತರುವನು ॥೧೪೭॥

**ರಾಗ ಯಮುನಾಕಲ್ಯಾಣಿ ಝಂಪೆತಾಳ**

ಬೆರಗಾಗಿ ಭಾಮೆ ಹತ್ತಿರಕೈದಿ ತರುವ ।
ಪರಿಕಿಸುತಲಾ ಸುಮದ ಪರಿಮಳವು ಮನವ ॥
ಮರಳುಗೊಳಿಸುವುದು ನಾನರಿಯೆ ನೀ ತನಕ ।
ಪರಮ ಸೌರಭ್ಯದಿಂ ಮೆರೆವುದೀ ನಾಕ ॥೧೪೮॥

ಮರದ ಬುಡದಲಿ ವಜ್ರ ಹರಡಿದಂದದಲಿ ।
ಇರುತಿಹುದು ಸುಮರಾಶಿ ಮೇಲೆ ಗಗನದಲಿ ॥
ಮೆರೆವ ಉಡಗಣದಂತೆ ತರು ಶೋಭಿಸುವುದು ।
ಜರೆದು ಹವಳವ ತೊಟ್ಟು ಪ್ರಭೆಯ ಬೀರುವುದು ॥೧೪೯॥

ನೀಲರತ್ನದ ಕಾಂತಿ ಪೋಲ್ವ ಚಿಗುರೆಲೆಯು ।
ಮೂಲದಲಿ ಬೇರ್ಗಳು ಸುವರ್ಣದಾ ಕೃತಿಯು ॥
ಭೂಲೋಕದೊಳಗೆ ಕಂಡರಿಯೆ ನೀವರೆಗೆ ।
ಆಲಯಕ್ಕೊಯ್ದು ಪಾಲಿಸೆ ಕೀರ್ತಿ ಎನಗೆ ॥೧೫೦॥

**ಭಾಮಿನಿ**

ಮನವು ನಟ್ಟಲು ತೋರಿಸುತಲದ ।
ಚಿನುಮಯನೆ ನಾನರಿಯೆ ಇದಕೇ ।
ನೆನುವರೈ ಪೆಸರುಸುರೆನಲು ನಗುತೆಂದ ಪೂರ್ವದಲಿ ॥
ಮುನಿಪ ನಾರದ ರುಕ್ಮಿಣಿಗೆ ನೀ ।
ಡೆನುತ ಎನ್ನಯ ಕೈಯೊಳಿತ್ತಿರು ।
ವನುಪಮದ ಸುಮ ಪಾರಿಜಾತದ ತರುವಿದೆಂದೆನುತ ॥೧೫೧॥

**ರಾಗ ಆರ್ಯಸವಾಯಿ**

ನಡೆಯಲು ಮುಂದಕೆ ತಡೆದೆಂದಳು ನೀ । ಕೊಡುವುದಾಜ್ಞೆ ಶಾಖೆಯದೊಂದು ॥
ಪೊಡವಿಗೊಯ್ದು ಯಶ ಪಡೆವೆನೆನಲ್ಕಾ । ಮಡದಿಗೆಂದ ಸುಜನರ ಬಂಧು ॥೧೫೨॥

ಇಲ್ಲಿಹ ತರುಲತೆ ಸಲ್ಲದು ಜಗತಿಗೆ । ನಿಲ್ಲದೆ ನಡೆ ಎಂದೆನಲಿದನು ॥
ವಲ್ಲಭ ನಾ ಬಿಡಲೊಲ್ಲೆ ಎನುತ ಕೈ । ಯಲ್ಲಿ ಪಿಡಿಯೆ ಪೇಳಿದನವನು ॥೧೫೩॥

**ರಾಗ ಶಂಕರಾಭರಣ ಅಷ್ಟತಾಳ**

ಬೇಡವೆ । ವೃಕ್ಷದ ತಳ್ಳಿ । ಬೇಡವೆ  ॥ ಪಲ್ಲವಿ ॥

ಬೇಡ ವೃಕ್ಷದ ತಳ್ಳಿ ನಿನಗೆ । ಬಲು । ಕೇಡು ಬಂದೊದಗುವುದೆಮಗೆ ।
ಚರ । ರೋಡಿ ಪೇಳಿದರೆ ಈ ಬಗೆಗೆ । ಒಂದು । ಗೂಡಿ ನಿರ್ಜರರು ಈ ಕಡೆಗೆ ॥
ಬಲು । ಗಾಢದೊಳೈತಂದು ನೋಡಿ ಸೈರಿಸರೆಲ್ಲ ।
ಮೋಡಿಯಿಂದಲೆ ಖಾಡಾಖಾಡಿಯ ಮಾಳ್ಪರು ॥ ಬೇಡವೆ ॥೧೫೪॥

ಶರಧಿಯ ಮಥನದೊಳಂದು । ದೊರ । ಕಿರುವ ವಸ್ತುಗಳೊಳಿದೊಂದು ।
ಇಲ್ಲಿ । ಸ್ಥಿರಪಡಿಸಿದ ಮೇಲೆ ಬಂದು । ಅಪ । ಹರಿಸುವದೆಮಗತಿ ಕುಂದು ॥
ಪುರ । ಹರವಿಧಿ ಮುಖ್ಯರು ಜರೆದು ನಿಂದಿಪರೆನ್ನ ।
ಬಿರುದಿಗೆ ಅಪಕೀರ್ತಿ ಬರುವುದು ನಿನ್ನಿಂದ ॥ ಬೇಡವೆ ॥೧೫೫॥

**ಕಂದ**

ಸಂತೈಸಲು ಬಲು ವಿಧದಿಂ ।
ದಂತಿಗಮನೆ ಬಿಟ್ಟು ಪೋಗೆ ಪುರಕಿದನೆನುತಂ ॥
ನಿಂತಿರೆ ಛಲದಿಂ ಲಕ್ಷ್ಮೀ ।
ಕಾಂತನು ಮುಂದ್ವರಿಯಲಾಕೆ ಧೈರ್ಯದೊಳಾಗಳ್ ॥೧೫೬॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ನೀರಜಾಕ್ಷನ ನುಡಿಯ ಕೇಳದೆ । ಪಾರಿಜಾತದ ತರುವ ಕೊಂಬೆಯ ॥
ನಾರಿ ಭಾಮಾದೇವಿ ಮುರಿಯುತ । ಸಾರಿದಳು ಜತೆಗೂಡುತ ॥ ಅರಿಯದಂತೆ ॥೧೫೭॥

ದೇವನೆಂಬುದ ತಿಳಿಯದಾ ವನ । ಕಾವಲಿಗರರದ ಕಂಡು ಹತ್ತಿರೆ ॥
ಧಾವಿಸುತ ತಡೆದೀರ್ವರನು ನಾ । ನಾ ವಿಧದಿ ಜರೆವುತ್ತಲಿ ॥ ನುಡಿದರಾಗ ॥೧೫೮॥

**ರಾಗ ಶಂಕರಾಭರಣ ಮಟ್ಟೆತಾಳ**

ಆರೊ ಕಪ್ಪು ಮೈಯ್ಯವ ನೀ । ನಾರಿಯೊಡನೆ ಸೇರಿ ಚೆಲುವ ।
ಪಾರಿಜಾತ ತರುವ ಮುರಿದೆ । ಚೋರರಂದದಿ ॥
ಮೂರುಲೋಕಕಧಿಕ ಸುರರ । ಸಾರತರದುದ್ಯಾನ ಕಾವ ।
ಪಾರುಪತ್ಯವೆಮಗೆ ಬಿಟ್ಟು । ಸಾರು ಲೋಕಕೆ ॥೧೫೯॥

ಕಳ್ಳನಲ್ಲ ನಾಕಪದವಿ । ಒಳ್ಳಿತೆಸಗಲೆಂದು ಬಂದೆ ।
ವಲ್ಲಭೆಯು ಸಹಿತ ವನವನೆಲ್ಲ ಸುತ್ತಲು ॥
ಫುಲ್ಲನೇತ್ರೆ ಬಯಸಲಿದ ನಾ । ನಲ್ಲಗಳೆವುದೆಂತು ಮುರಿದು ।
ದಿಲ್ಲಿ ತರುವ ಶಾಖೆವೊಯ್ದು । ರಿಲ್ಲಿ ಕುಂದೇನು ॥೧೬೦॥

ಸತಿಯ ಮಾತ ಕೇಳಿ ನಡೆವ । ಮತಿವಿಹೀನ ಬಿಟ್ಟು ತೆರಳು ।
ಸತತ ಇಲ್ಲಿ ಸದ್ವಸ್ತುಗಳ । ಜತೆಯೊಳೀರ್ಪುದು ॥
ಕ್ಷಿತಿಗೆ ಪೋಗಗೊಡೆವು ನಿನ್ನ । ಗತಿಯ ಗೆಡಿಪೆನೆನುತಲವರು ।
ಖತಿಯಿಂ ತುಡುಕೆ ಕಾಣುತಾ ಶ್ರೀ । ಪತಿಯು ಕ್ರೋಧದಿ ॥೧೬೧॥

**ಭಾಮಿನಿ**

ಬಂಧಿಸುತ ಕರಗಳನು ಪೇಳಿ ಪು ।
ರಂದರಗೆ ಈ ಹದನವೆನುತಲಿ ।
ಮುಂದೆ ವನ ವೈಭವವ ಪರಿಕಿಪೆನೆಂದು ಸತಿ ಸಹಿತ ॥
ನಂದನದಿ ಸಂಚರಿಸುತಿರೆ ಬಲು ।
ನೊಂದು ವನಪಾಲಕರು ಭಯದಲಿ ।
ಇಂದ್ರನೆಡೆಗೈದಾಗ ಬಿನ್ನವಿಸಿದರು ಭೀತಿಯಲಿ ॥೧೬೨॥

**ರಾಗ ಸಾರಂಗ ಅಷ್ಟತಾಳ**

ನಾಕಾಧಿಪತಿ ಲಾಲಿಸಯ್ಯ । ನರ ।
ಲೋಕದವರ ಬಲುಹೇನೆಂಬೆ ಜೀಯ ॥
ಸಾಕಾರಮಾದ ನಂದನದಿ ಕಪ್ಪಿನ ಮೈಯ್ಯ ।
ಕಾಕುಮಾನವ ಸತಿಯೊಡನೆ ಸಂಚರಿಸುತ್ತ ॥೧೬೩॥

ಪಾರಿಜಾತದ ಶಾಖೆ ಮುರಿದು । ತನ್ನ ।
ಊರಿಗೆ ಒಯ್ದಪನೆಂಬುದ ತಿಳಿದು ॥
ಸಾರಗೊಡದೆ ನಾವು ದಾರಿಯಡ್ಡವಿಸಲು ।
ಈರುವರೊಂದಾಗಿ ಭಾರಿ ದಂಡಿಸಿದರು ॥೧೬೪॥

**ರಾಗ ಕಾಂಭೋಜಿ ಝಂಪೆತಾಳ**

ಲಾಲಿಸುತ ನುಡಿಯ ಸುರಪಾಲ ತಿಳಿದನು ಮನದಿ । ಶ್ರೀಲಲಾಮನುಭಾಮೆ ಸಹಿತ ॥
ಬೀಳುಗೊಂಡೆನ್ನ ನಂದನದಿ ಪರಿಕಿಸಿ ತರುವ । ಭೂಲೋಕಕೊವ ಬಗೆಗಾಗಿ ॥೧೬೫॥

ಮುರಿವುದೇತರ ನ್ಯಾಯ ಚರರು ತಡೆದರೆ ಭಂಗ । ಬರಿಸಿದನು ಹಲವು ವಿಧದಿಂದ ॥
ನರಕಾದಿ ದುಷ್ಟರಂ ತರಿದು ಭಾಗ್ಯವನಿತ್ತು । ಮರಳಿ ಅಪಹಾರಗೈವನಲ ॥೧೬೬॥

ಸಾಧಿಸುತ ವೈರ ದಿತಿಜಾಧಮರು ನಮ್ಮೊಡನೆ । ಕಾದಾಡಿ ವಶಪಡಿಸಲವರ ॥
ಛೇದಿಸುತ ಸುಖವಿತ್ತ ಮಾಧವನೆ ಇಂತೆಸಗೆ । ಆಧರಿಪರಾರು ನಿರ್ಜರರ ॥೧೬೭॥

**ವಾರ್ಧಕ**

ಸಿಂಧುಮಥನದೊಳುದಿಸಿರುವ ಪಾರಿಜಾತತರು ।
ಒಂದಾಗಿ ತ್ರೈಮೂರ್ತಿಗಳು ಕರುಣದಿಂದಿರಿಸಿ ।
ನಂದನದಿ ರಕ್ಷಿಸುವ ನಿಯಮವೆನಗಿರಲೋರ್ವ ಬಂದು ಧರೆಗೊವುದೆಂತು ॥
ಇಂದಿರೇಶನೊಳು ಧುರವೆಸಗಲಸದಳ ಶೀಘ್ರ ।
ದಿಂದಲೀ ವಾರ್ತೆಯಂ ಹರಗೆ ತಿಳುಹುವದೆನುತ ।
ಇಂದ್ರ ಸುರರೊಡಗೂಡಿ ಶಿವನ ಸನ್ನಿಧಿಗೈದಿ ಮಣಿಯಲ್ಕೆ ಪರಸುತೆಂದ ॥೧೬೮॥

**ರಾಗ ಕಲ್ಯಾಣಿ ಅಷ್ಟತಾಳ**

ಸುರರಧಿಕಾರಿ ನೀನು । ಮೂಲೋಕದಿ । ಸಿರಿವಂತ ಪ್ರಖ್ಯಾತನು ॥
ನಿರತವು ನಮ್ಮಯ ಚರಣವ ಸ್ಮರಿಪ ಕಿಂ । ಕರಕುಲಕಧಿನಾಥನು । ಸುಪ್ರೀತನು ॥೧೬೯॥

ಒಂದುಗೂಡುತ ಸುರರ । ಬಂದಿಹೆ ತ್ವರೆ । ಯಿಂದ ನಾಕಕೆ ಖೂಳರ ॥
ವೃಂದದಿಂದುಪಹತಿ ಬಂದಡಚಿದುದೋ ಪೇ । ಳೆಂದಭವನಿಗೆಂದನು । ದೇವೇಂದ್ರನು ॥೧೭೦॥

**ರಾಗ ಮಧ್ಯಮಾವತಿ ಏಕತಾಳ**

ನೀಲಕಂಧರ ನಿಟಿಲಾಕ್ಷ ಮಹೇಶ । ಪೇಳಲಂಜುವೆ ನಮಗೊದಗಿದ ಕ್ಲೇಶ ॥
ಪಾಲಾಬ್ಧಿ ಮಥನದಿ ಪಡೆದ ಭಾಗ್ಯವನು । ಪಾಲಿಸುತೀರ್ದೆ ನಿಮ್ಮಾಜ್ಞೆಯೊಳಾನು ॥೧೭೧॥

ದುರುಳ ನರಕನಪಹರಿಸಿದನದಕೆ । ಹರಿಗೆ ದೂರಲು ತರಿದಾತನ ದಿವಕೆ ॥
ತರುಣಿ ಭಾಮಾದೇವಿ ಸಹಿತಲಿ ಬಂದು । ಮರುಳುವ ಪಥದಿ ನಂದನ ಪೊಕ್ಕು ಇಂದು ॥೧೭೨॥

ಪಾರಿಜಾತದ ತರು ಧಾರಿಣಿಗೊಯ್ವ । ಕಾರಣದಿಂ ಶಾಖೆ ಮುರಿಯುತಲ್ಲಿರುವ ॥
ಚಾರರ ಬೆದರಿಸಿ ಶ್ರೀರಮಾಧವನು । ನಾರಿಯು ಸಹಿತಲಿ ಮುಂದ್ವರಿಯುವನು ॥೧೭೩॥

**ವಾರ್ಧಕ**

ಒಂದಾಗಿ ನೀವಲ್ಲಿ ನೆಲೆಗೊಳಿಸಿದದನು ಹರಿ ।
ಬಂದೋರ್ವ ಭೂತಳಕ್ಕೊಯ್ದನಾದರೆ ದಿವದಿ ।
ಕುಂದುವುದು ಸೌಭಾಗ್ಯಪಾಲನೆಯ ಕರ್ತ ಅಪಹಾರವೆಸಗಿದರದರನು ॥
ಮುಂದೆ ಉತ್ತಮ ಪದವಿ ಬರಿದಾಯ್ತು ಬೇಲಿ ಬೆಳೆ ।
ತಿಂದು ಕೆಡಿಸಲು ಕಾವರಾರು ಲತೆ ನೆಟ್ಟು ಕೈ ।
ಯಿಂದ ಕೀಳ್ವವರುಂಟೆ ಎನಲಾಗ ತ್ರಿಪುರಾರಿ ಸುರಪತಿಯೊಳಿಂತೆಂದನು ॥೧೭೪॥

**ರಾಗ ಸಾಂಗತ್ಯ ರೂಪಕತಾಳ**

ಭೀತಿಯಾತಕೆ ಪಾರಿಜಾತದ ವೃಕ್ಷವ । ಭೂತಳ ಸೇರದಂದದಲಿ ॥
ನೀತಿಯ ತಿಳುಹಿ ನಂದನದಲ್ಲಿ ಇರಿಪೆ ಶ್ರೀ । ನಾಥ ಮುಳಿಯ ನಿಮ್ಮಾಳ್ತನಕೆ ॥೧೭೫॥

ಅರಸಿ ಭಾಮೆಯ ಮನ ಸರಸವಗೊಳಿಸಲು । ಮುರಿದನಾತನ ಕಂಡು ದಿವಕೆ ॥
ಕೊರತೆ ಹೊದ್ದದ ತೆರ ವಿರಚಿಪೆನೆನ್ನುತ । ಪೊರಡಲಾ ಗಿರಿಜೆ ಪೇಳಿದಳು ॥೧೭೬॥

ಒಂದೇ ಸುವರ್ಣದಿ ಬೊಂಬೆಗಳೆರಡು ನಾ । ವೆಂದು ಪೇಳುವಿರೈಸೆ ಹರಿಯ ॥
ಸಂದರ್ಶನದಿಮತ ಬೇರಾಗದಿರೆ ಮಹಾ । ನಂದನ ಬರಿದಪ್ಪುದಯ್ಯ ॥೧೭೭॥

**ಕಂದ**

ನೀನದಕೊಪ್ಪಂಗೊಟ್ಟರು ।
ಮಾನಿನಿಮಣಿ ಸತ್ಯಭಾಮೆಗೆಲ್ಲವ ತಿಳಿಸುತ ॥
ತಾ ನಿರಿಸುವೆನದರಂ ಉ ।
ದ್ಯಾನದೊಳೆನುತವರ ಕೂಡಿ ಪೊರಟಳು ಜವದಿಂ ॥೧೭೮॥

**ರಾಗ ಕಾಂಭೋಜಿ ಝುಂಪೆತಾಳ**

ನಂದಿಯನ್ನೇರಿ ಸತಿಸಹಿತ ಮುಂದಕೆ ಗಮಿಪ । ಇಂದು ಶೇಖರನ ಬಳಿ ಪಿಡಿದು ॥
ಒಂದಾಗಿ ಗಜವದನ ಸ್ಕಂದ ಭೈರವ ಪ್ರಮಥ । ವೃಂದ ಪೊರಮಟ್ಟು ಬೇಗದಲಿ ॥೧೭೯॥

ನಡೆತಂದು ನಂದನದ ಬೆಡಗ ಪರಿಕಿಸುತಲಾ । ಮೃಡನು ಇದಿರಿಗೆ ಬರುವ ಬಗೆಯ ॥
ಜಡಜನಾಭನು ತಿಳಿದು ಮಡದಿ ಸಹಿತಲಿ ಬಂದು । ನುಡಿದ ಕೈಮುಗಿದು ಸರಸದಲಿ ॥೧೮೦॥

**ರಾಗ ಕಲ್ಯಾಣಿ ತ್ರಿವುಡೆತಾಳ**

ಸಂತಸವಾಂತೆನಯ್ಯ । ಏತರ ಕಾರ್ಯ । ದಿಂ ತವ ಗಮನ ಜೀಯ ॥
ಅಂತಕಾಂತಕ ರಜತ ಶೈಲದಿ । ನಿಂತು ಶರಣರ ಚಿಂತಿತಾರ್ಥ ನಿ ।
ರಂತರವು ಪಾಲಿಸುವ ಗೌರೀ । ಕಾಂತ ಪೇಳೆನಗಂತರಂಗವ ॥೧೮೧॥

ಎನ್ನನು ಕೇಳಲೇಕೆ । ಸೇವಿಪ ಸ್ತ್ರೀಯ । ರನ್ನಗಲುತ ದಿವಕೆ ॥
ಚಿನ್ಮಯನೆ ನೀ ನಡೆತರುತ ಶತ । ಮನ್ಯುವಿಗೆ ನಾವೊಂದುಗೂಡುತ ।
ಮನ್ನಿಸಿದ ತರು ಜಗತಿಗೊಯ್ಯುವೆ । ಎನ್ನುವುದನರಿತೈದೆನಿಲ್ಲಿಗೆ ॥೧೮೨॥

**ವಾರ್ಧಕ**

ನರಕನಂ ವಧಿಸಲೈತಂದು ಸತಿಸಹಿತ ಅಪ ।
ಹರಿಸಿದ ಸುವಸ್ತುಗಳನಿಲ್ಲಿರಿಸಿ ಮರಳುತಿರೆ ।
ತರುಣಿ ಕಂಡಾ ಪಾರಿಜಾತತರು ಶಾಖೆಯೊಂದನು ಮುರಿದು ಧರೆಗೊದರೆ ॥
ಕೊರತೆ ಬಪ್ಪುದೆ ದಿವಕೆ ದುರುಳರಂ ನಿರ್ಜರರು ।
ಪರಿಪರಿಯ ಕಷ್ಟದಿಂ ಮತಿಗೆಟ್ಟು ದೂರಿದರು ।
ಅರಿಯೆಯಾ ನೀ ಮೂಲವುಳಿಸಿ ಕೊಂಬೆಯ ಕೊಳುತ ಗಿರಿಜೆ ಸಹ ತೆರಳೆಂದನು ॥೧೮೩॥

**ರಾಗ ಸಾವೇರಿ ಅಷ್ಟತಾಳ**

ನುಡಿಯನಾಲಿಸಿ ನಸುನಗುತ । ಒಪ್ಪಿ । ಮೃಡನಿರೆ ಗಿರಿಜೆ ಕಾಣುತ್ತ ॥
ಕಡು ಜಾಣ್ಮೆಯಿಂದೊಡಬಡಿಸುತ ತರುವನು ।
ಪೊಡವಿಗೊಯ್ಯುವನದ ಬಿಡೆನೆಂದು ಪೇಳ್ದಳು ॥೧೮೪॥

ಪಾಲನೆಯಧಿಕಾರಗಳನು । ಪೊತ್ತು । ಹಾಳು ಕೃತ್ಯವ ಮಾಳ್ಪುದೇನು ॥
ಕೀಳುಮೇಲೆಂಬುದರಿಯದವಳ ನುಡಿ । ಕೇಳಿ ನಾಕದ ವಸ್ತು ಭೂಲೋಕಕೊಯ್ವುದೆ ॥೧೮೫॥

ಬೋಧಿಸಿ ದುರ್ಮಾರ್ಗಗಳನು । ಕೆಟ್ಟ । ಹಾದಿಗಿಳಿವ ಸತಿಯನ್ನು ॥
ಮೋದಗೊಳಿಪೆನೆಂದು ಸಾಧಿಸಿದರೆ ಕಾರ್ಯ । ಮೇದಿನಿಯೊಳು ಅಪವಾದ ಹೊದ್ದುವುದಯ್ಯ ।೧೮೬॥

**ಕಂದ**

ಹಲವಂಗದೊಳಾ ಭಾಮೆಯ ।
ಹಳಿಯುತ ಶ್ರೀವರನೊಳೆಂದ ವಾಕ್ಯವ ನಾಲಿಸಿ ॥
ಮುಳಿಸಂ ತಾಳುತ ಮನದೊಳು ।
ಬಳಿ ಸಾರುತಲಾಕೆ ಎಂದಳತಿ ನಿಷ್ಠುರದಿಂ ॥೧೮೭॥

**ರಾಗ ಕೇದಾರ ಏಕತಾಳ**

ದೂರುವೆ ಯಾಕೆನ್ನ ನರಕ । ಸೂರೆಗೈಯ್ಯೆ ದಿವವ ಖಳನ ।
ತೀರಿಸುತ್ತ ಸಲಹಿದ ವಿ । ಚಾರ ತಿಳಿಯೆಯ ॥
ಪಾರಿಜಾತ ವೃಕ್ಷದಿಂದ । ಊರಿಗೊಯ್ಯೆ ಕೊಂಬೆಯೊಂದು ।
ಆರು ನಿನಗೆ ಕೇಳ್ವ ಅಧಿಕಾರವಿತ್ತರು ॥೧೮೮॥

ಗಳಹಬೇಡ ಭಾಮೆ ನಾಕ । ಬೆಳಗಲೆಂದು ತ್ರೈಮೂರ್ತಿಗಳು ।
ಒಲಿದು ಸುರರಿಗಿತ್ತರಿದನು । ಇಳೆಗೆ ಒಯ್ವುದೆ ॥
ಹಲವು ಸತಿಯರಿದ್ದರವರ । ಬಳಿಗೆ ಸೋಕದಂತೆ ಮರುಳು ।
ಗೊಳಿಸಿ ವರನ ಮಾನ ಕಳೆದು । ಹಳಿವೆ ನಮ್ಮನು ॥೧೮೯॥

ದಾನವಾರಿಯಂತರಂಗ ನೀನೇನರಿವೆ ನಿರತವು ಸ್ಮ ।
ಶಾನ ಕಾವನರಸಿಗುಂಟೆ । ಸ್ಥಾನಮಾನವು ॥
ಹೀನೆ ನಿನ್ನ ಕರೆದರಾರು । ಜಾಣತನವು ಸಲ್ಲದಿಲ್ಲಿ ।
ಪ್ರಾಣದರಸನೊಡನೆ ನಡೆ ಉ । ದ್ಯಾನದಿಂದಲಿ ॥೧೯೦॥

ಬಲ್ಲುದು ಮೂಲೋಕ ನಿನ್ನ । ವಲ್ಲಭನನು ಪೊಗಳಬೇಡ ।
ಗೊಲ್ಲರಾಲಯಾಲಯಂಗಳಲ್ಲಿ ಚರಿಸುತ ॥

ಕಳ್ಳತನದಿ ಪಾಲು ಮೊಸರ । ನೆಲ್ಲ ಮೆದ್ದು ಸತಿಯರನ್ನು ।
ಲಲ್ಲೆಗೈದು ಕೂಡಿದವ ಗಿ । ನ್ನೆಲ್ಲಿ ಮಾನವು ॥೧೯೧॥

ಮರುಳುಗಳನು ಕೂಡಿ ಹಗಲು । ಇರುಳು ನಲಿದು ತಿರಿದುಂಬುವನ ।
ಅರಸಿ ಎನ್ನ ವರನ ಇನಿತು । ಜರೆದು ನುಡಿವೆಯಾ ॥
ವಿರಸವಿಲ್ಲದಂತೆ ಹಲವು । ತರುಣಿಯರನು ವರಿಸಿ ಸುಖವ ।
ಕರುಣಿಸುವನು ಧರ್ಮಬೋಧೆ । ಯರುಹಿ ಕರುಣದಿ ॥೧೯೨॥

**ವಾರ್ಧಿಕ್ಯ**

ಸತ್ಯಧರ್ಮದಿ ನಡೆಸುವವನು ನಂದನದಿ ತ್ರೈ ।
ಮೂರ್ತಿಗಳು ಒಮ್ಮತದಿ ಇರಿಸಿದ ಮಹಾತರುವ ।
ಪೃಥ್ವಿಗೊಯ್ಯುವ ನಿನಗೆ ನೆರವಾಗುವನೆ ಪೋಗಗೊಡೆನು ನಾ ದಿಟವೆನುತಲಿ ॥
ಹಸ್ತದಿಂ ಪಿಡಿದೆಳೆಯುವನಿತರೊಳು ಕನಲುತ್ತ ।
ಸತ್ಯಭಾಮೆಯು ತುಡುಕುತಿರಲಾಕೆಯೊಳು ಮುಳಿದು ।
ಸುತ್ತುಮುತ್ತಲು ಕವಿದು ಗಜವದನ ಗುಹಭೈರವಾದಿ ಪ್ರಮಥರು ಮುಸುಕಲು ॥೧೯೩॥

**ರಾಗ ಆರ್ಯುಸವಾಯಿ**

ಬಿರುಸಾಗಲು ಸಂಗರ ಮೂಲೋಕವು । ತರಹರಗೊಳುತಿರಲರಿತದನು ॥
ಸರಸಿಜಭವ ನಡೆತರುತ ತಡೆವುತೀ । ರ್ವರ ಹರಿಹರರೊಡನರುಹಿದನು ॥೧೯೪॥

**ರಾಗ ಬಿಲಹರಿ ಅಷ್ಟತಾಳ**

ಸರಸವೆ ನಿಮಗಿದು ಸತಿಯರೀರುವರು । ಪರಿ ಪರಿ ಪಂಥದಿ ಕಾದಾಡುತಿಹರು ॥
ಪರಿಕಿಸಿ ನೀವು ಕುಳ್ಳಿರುವುದೇಕಯ್ಯ । ಸುರಪುರದೊಳು ಇಂತಾಗಿರುವುದಾಶ್ಚರ್ಯ ॥೧೯೫॥

ಆದಿಯಿಂದಲಿ ನೀವು ಭೇದರಹಿತರು । ಕ್ರೋಧದಿಂದಿವರತಿ ಖೇದ ಪುಟ್ಟಿಪರು ॥
ವಾದಕೆ ಮೂಲವೆಂತಾಯ್ತೆನೆ ಕೇಳಿ । ಮಾಧವನೆಂದ ವಿನೋದವ ತಾಳಿ ॥೧೯೬॥

**ರಾಗ ಬೇಗಡೆ ಅಷ್ಟತಾಳ**

ಕಮಲಭವ ನಾನೇನ ಬಣ್ಣಿಪೆನು । ಮುರನರಕರಿಂದಲಿ ।
ಅಮಿತಸಂಪದ ಸೂರೆಯಾದುದನು ॥
ಸುಮನಸಾಧಿಪ ದೂರಲೋರ್ವಗೆ । ಕುಮತಿಯೊಳು ಜಯವಾಗದೆನುತಾ ।
ರಮಣಿ ಭಾಮಾದೇವಿ ಸಹಿತಾ । ಗಮಿಸುತವರೊಳು ಸಮರವೆಸಗಿದೆ ॥೧೯೭॥

ಕ್ರೂರನನು ತೀರಿಸುತ ಸಂಪದವ । ಸುರವಾರಕೀವುತ ।
ದಾರಿ ಪಿಡಿದೈತರಲು ನಂದನವ ॥

ನಾರಿಮಣಿ ಪರಿಕಿಸುತಲಿಲ್ಲಿಹ | ಪಾರಿಜಾತದ ಮರದ ಶಾಖೆಯ |
ಊರಿಗೊಯ್ಯುವ ಬಗೆಯರಿತು ತ್ರಿಪು | ರಾರಿ ಬಂದು ವಿಚಾರಗೈದನು ||೯೮||

ಅರಿತು ಹದನವ ಸರಿಯೆನುತ ಹರನು | ಅದಕೊಪ್ಪಗೊಡಲಾ |
ಗಿರಿಜೆ ಮತ್ಸರಿಸುತ್ತ ಭಾಮೆಯನು ||
ಜರೆದು ನುಡಿಯಲು ಸೈರಿಸದೆ ಉ | ತ್ತರದಿವಾದವು ಬೆಳೆದುದದರಿಂ |
ತರುಣಿಯರು ಹೊದಾಡಿಕೊಂಬರು | ಪರಿಹರಿಸು ನೀನೆನಲಿಕೆಂದನು ||೯೯||

**ವಾರ್ಧಕ**

ಮೂರುಮೂರ್ತಿಗಳಾವು ಇರಿಸಿರುವ ಈ ಮಹಾ |
ಪಾರಿಜಾತದ ತರುವ ಮುರಿದುದನುಚಿತ ನರಕ |
ಸೂರೆಗೈದುದನು ಮಗುಳಿತ್ತ ಉಪಕೃತಿಗೆ ಬಳುವಳಿ ಎಂದು ಭಾವಿಸುವುದು ||
ಧಾರಿಣಿಗೆ ಕೊಂಡು ಪೋಪುದು ಕೊರತೆಯಾದಡೆಯು |
ಶ್ರೀರಮಾಧವನಿರುವ ಪರಿಯಂತರಲ್ಲಿರಲಿ |
ಸಾರಿ ಬಹುದಾಮೇಲೆ ದಿವಕೆ ಒಮ್ಮತದೊಳಿದ ಭಾಮೆಗೀಯುವದೆಂದನು ||೧೦೦||

**ರಾಗ ಕೇದಾರಗೌಳ ಅಷ್ಟತಾಳ**

ಎಂದು ಸಂತೈಸುತ್ತ ಹರಿಹರರನು ಅರ | ವಿಂದಭವನು ಕರೆದು ||
ಒಂದಾಗಿ ಗಿರಿಜಾತೆ ಸಹಿತ ಶಾಖೆಯ ಮುದ | ದಿಂದಿತ್ತನಾ ಭಾಮೆಗೆ ||೧೦೧||

ಮೃಡನು ತನ್ನವರೊಡಗೂಡಿ ತೆರಳೆ ಸುರ | ಗಡಣವ ಸಂತವಿಸಿ
ಮಡದಿ ಭಾಮೆಯ ಸಹ ಜಡಜಾಕ್ಷ ತ್ವರಿಯದಿ | ನಡೆತಂದ ದ್ವಾರಕಿಗೆ ||೧೦೨||

ಭೂತಳಕಿಳಿಸಿದಳಾ ಭಾಮೆ ಸುರಪಾರಿ | ಜಾತವ ತರುವನೆಂದು ||
ಮಾತಾಡುತದನು ನೋಳ್ಪಾತುರದಲಿ ಜನ | ವ್ರಾತವು ನಡೆತರಲು ||೧೦೩||

**ಕಂದ**

ಬೆಳೆಸಲ್ಕಾ ತರು ರುಕ್ಮಿಣಿ |
ನಿಳಯಕೆ ಸುಮ ಸುರಿವು | ತೀರ್ದುದತಿ ಪರಿಮಳದಿಂ ||
ಒಳವಂ ತಿಳಿಯದೆ ಗರ್ವದಿ |
ಬಲು ಉಬ್ಬುತ ನುಡಿದಳಾಗ ಹರಿ ಇದಿರಿನೊಳಂ ||೧೦೪||

**ರಾಗ ಕಾಂಭೋಜಿ ಝಂಪೆತಾಳ**

ತರುಣಿ ರುಕ್ಮಿಣಿ ಹಿರಿಯ ಅರಸಿ ಗುಣಯುತೆಯೆಂದು |
ಸುರ ಮುನಿಪನೆಂದ ನುಡಿಗೇಳಿ ||

ಮರುಳಾಗಿ ಕೊಂಡಾಡಿ ಫಲವೇನು ಎನಗೆ ಸರಿ ।
ಇರುವವಳೆ ಅರಿತು ನೋಡಯ್ಯ ॥೧೦೫॥

ಕ್ರೂರ ನರಕನ ವಧೆಗೆ ಆರು ನೆರವಾದವಳು ।
ಏರಿದರೆ ಸುರರ ಮಂದಿರಕೆ ॥
ಪಾರಿಜಾತದ ತರುವ ಧಾರಿಣಿಗೆ ಇಳಿಸಿದಳೆ ।
ಗೌರಿಯೊಳು ಧುರವನೆಸಗಿದಳೆ ॥೧೦೬॥

ಹರಬ್ರಹ್ಮ ಸುರಪ ಮುಖ್ಯರ ಬೆರಗುಗೊಳಿಸಿದಳೆ ।
ಪರಿಣಯದಿ ಬಂದಿಹಳೆ ಪುರಕೆ ॥
ಪರಿಪರಿಯ ಸೌಭಾಗ್ಯಕೊಂಡು ಬಂದವರಾರು ।
ಅರಿಯೆಯಾ ಎನ್ನ ಹಿರಿಮೆಗಳ ॥೧೦೭॥

ಸತಿಯಂತರಂಗವನು ಪತಿಯರಿತು ನಡೆಯಲು ।
ನ್ನತ ಕೀರ್ತಿಬಹುದು ಭೂತಳದಿ ॥
ಸತತ ನೀ ಎನ್ನ ಅಭಿಮತದಂತೆ ಇಹುದೆಂದು ।
ಅತಿ ಗರ್ವದಿಂದಿರಲು ಪುರದಿ ॥೧೦೮॥

**ರಾಗ ಸಾಂಗತ್ಯ ರೂಪಕತಾಳ**

ನರಲೀಲೆಗಿದು ಶುಭಕರವೆಂಬ ತೆರದಿ ಶ್ರೀ । ವರ ಅಷ್ಟಮಾಂಗನೆಯರಲಿ ॥
ಸರಸವನಾಡುತ್ತ ಚರಣಸೇವೆಯಗೊಂಡು । ಮೆರೆದೀರ್ದ ದ್ವಾರಕಾಪುರದಿ ॥೧೦೯॥

**ವಾರ್ಧಕ**

ಧರಣಿಪ ಪರೀಕ್ಷಿತಗೆ ಶುಕ ಮುನಿಪನೊಲಿದು ವಿ ।
ಸ್ತರಿಸಿದ ಕಥಾ ಸಮುದ್ರದೊಳಗೊಂದು ಬಿಂದು ವೀ ।
ಚರಿತೆಯಂ ಹರಿಯ ಸ್ತುತಿಸುತ ಯಕ್ಷಗಾನದೊಳು ಮನಕೆ ಹೊಳೆದಂದದಿಂದ ॥
ವಿರಚಿಸಿದ ಬಲಿಪನಾರಾಯಣಂ ಭಾಗವತ ।
ಶರಣ ಜನ ಕಿಂಕರಂ ಪೇಳಿ ಕೇಳ್ವರಿಗೆಲ್ಲ ।
ಕರುಣದಿಂ ಮನದಿಷ್ಟವಿತ್ತು ಪಾಲಿಪ ಕಣ್ವ ಪುರದೊಡೆಯ ಶ್ರೀಕೃಷ್ಣನು ॥೧೧೦॥

**ಯಕ್ಷಗಾನ ನರಕಾಸುರ ವಧೆ ಮುಗಿದುದು**

# ೧೦. ಶ್ರೀಕೃಷ್ಣದಿನಾಶ್ವಮೇಧ - ಪಾತ್ರಗಳು

ರುಕ್ಮಿಣಿ
ಸತ್ಯಭಾಮ
ಸುಭದ್ರೆ
ಬ್ರಾಹ್ಮಣನ ಪತ್ನಿ
ವ್ಯಾಸ
ಕೃಷ್ಣ
ಬಲರಾಮ
ಧರ್ಮರಾಯ
ಭೀಮ
ಅರ್ಜುನ
ಮಂತ್ರಿ
ಬ್ರಾಹ್ಮಣರು
ಮಾಗಧ
ಹಂಸ
ಡಿಬಿಗ
ವಕ್ರದಂತ

**ರಾಗ ಮೆಚ್ಚು ಅಷ್ಟತಾಳ**

ದುಷ್ಟ ಬಾರ್ಹದ್ರಥ ನಿನ್ನಯ । ಬಾಣ । ವೃಷ್ಟಿಯ ಪುಡಿಗೈದೆ ನಮ್ಮಯ ॥
ವಿಷ್ಟಪೇಶನ ಮಖಹಯವನು । ನೀನು । ಬಿಟ್ಟು ವಂದಿಸೆ ಕೈಯ ತಡೆವೆನು ॥೧೩೯॥

ಧುರ್ತ ಸಾತ್ಯಕಿ ಕೇಳು ಧುರದೊಳು । ದುಷ್ಟ । ವಾರ್ತೆಯುಚಿತ ಯಾದವರೊಳು ॥
ಮಾರ್ತಾಂಡನಿಭರಿರಲ್ ನಾವು । ಕೀಟ । ಸಾರ್ಥದತೆರ ನಿಮ್ಮ ಶೌರ್ಯವೂ ॥೧೪೦॥

ಹುಚ್ಚರಂದದಿ ಯದುವರರನು । ನೀನು । ತುಚ್ಛೆಸಬೇಡ ಬಲಭದ್ರನೂ ॥
ಅಚ್ಛ ಲಾಂಗಲದಿಂದ ಬಡಿಯಲು । ಬಲು । ಬೆಚ್ಚು ತೋಡಿದೆ ಮಧುಪುರಿಯೊಳೂ ॥೧೪೧॥

ಹೆಚ್ಚು ಪೌರುಷವೆಲ್ಲ ಬೇಡ । ಮೂಢ । ಮುಚ್ಚು ಬಾಯನು ತನ್ನ ಗಾಥಾ ॥
ಸ್ವಚ್ಛ ಕೂರ್ಗಣೆ ಸಹಿಸೆನುತಲಿ । ಪೇಳು । ತೆಚ್ಚನು ಶರವ ಸಂಗರದಲ್ಲೀ ॥೧೪೨॥

**ಭಾಮಿನಿ**

ಉರುತರಾಸ್ತ್ರದಿ ಕಾದುತಲಿ ಶಿನಿ ।
ತರಳ ಬಾರ್ಹದ್ರಥನ ರಭಸದ ।
ಶರದಿ ಮೈಮರೆತುದನು ಕಾಣುತ ಪಾರ್ಥ ಹರಿಸುತರೂ ॥

ಕರದಿ ಚಾಪವಗೊಂಡು ಬಹುತರ ।
ಸರಳವೃಷ್ಟಿಯ ಗೈಯೆ ದಿಕ್ತಟ ।
ಜರಿದು ಬೀಳ್ವಂತೆಲ್ಲ ಭಯಗೊಳಲಾಗ ಮಾರುತಿಯೂ ॥೧೪೩॥

ತಡೆದು ಮದನಾರ್ಜುನರ ಭೀಮನು ।
ನುಡಿದನಿವನೊಳು ನಿಲಲು ನೀವುಗಳ್ ।
ಜಡಜನಾಭನ ಸವಕೆ ಕಾಲಾತ್ಯಯವು ದೊರಕುವದೂ ॥
ಕಡುವಿರೋಧಿಯ ತಾನು ನಿಮಿಷದಿ ।
ಬಡಿದು ಕಪ್ಪವ ತರುವೆನೆಂದವ ।
ರಡಿಯನಡ್ಡೈಸುತಲಿ ಕಲ್ಪದ ಸಿಡಿಲುಧ್ವನಿಯಿಂದಾ ॥೧೪೪॥

**ರಾಗ ಶಂಕರಾಭರಣ ಮಟ್ಟೆತಾಳ**

ಬಂದು ರಭಸದಿಂದ ಬಾರ್ಹದ್ರಥನನಿದಿರಲಿ ।
ನಿಂದು ಗದೆಯ ತಿರುಹುತೆಂದ ಭೀಮ ಧುರದಲೀ ॥
ಇಂದಿರೇಶನಧ್ವರಾಶ್ವವನ್ನು ಬಿಡದಿರೆ ।
ಬಂದಿಸೀಗಲೊವೆ ನಿನ್ನ ಧುರದಿ ತಾ ಖರೇ ॥೧೪೫॥

ಶಂಭುಭಕ್ತನಹೆನು ತಾನೀಗ ಯುದ್ಧದಿ ।
ಜಂಭಭೇದಿ ಬರಲು ಗೆಲುವೆ ನಿಜವು ನಿಮಿಷದೀ ॥
ಕುಂಭಿನಿಯ ಮಾನವೇಂದ್ರಗಿಂಬು ಕೊಡುವೆನೆ ।
ಶಂಬರಾರಿಪಿತನ ಹಯವನಿಂದು ಬಿಡುವೆನೇ ॥೧೪೬॥

ಹರಿಯ ಭಕ್ತನಹೆನು ತಾನು ದುರುಳ ನೋಡೆಲು ।
ಹರನ ಭಜಕ ನೀನು ನಮಗೆ ಗಣ್ಯವೇನೆಲಾ ॥
ಕರವ ಸಹಿತ ಹಯವ ಬಿಡದಿರೀಗ ನಿನ್ನಯ ।
ಉರವ ಬಗಿದುಬಿಡುವೆ ನೋಡು ಬಲವ ತನ್ನಯಾ ॥೧೪೭॥

ನಮ್ಮ ಭಯಕೆ ಬೆದರಿ ಹರಿಯು ಸಿಂಧುಮಧ್ಯದಿ ।
ಸುಮ್ಮನಿರುವನವನ ಭಜಕ ಯುದ್ಧದೀ ॥
ಒಮ್ಮೆಗಿಂದು ಗೆಲಿದು ಗೋಪವರನ ಧುರದಲಿ ।
ಹೆಮ್ಮೆ ನೋಳ್ಪೆನವನ ಕುಟಿಲತನವ ತೋರಲೀ ॥೧೪೮॥

ಭಂಡನೆಲವೊ ಬಗುಳಬೇಡ ಶಲಭವಗ್ನಿಯ ।
ಕುಂಡ ಶಮಿಸಿ ಮುಂದೆ ಪೋಪುದುಂಟೆ ನಮ್ಮಯಾ ॥
ಚಂಡ ಹರಿಯು ನಿನ್ನ ನಮಿತ ಪಾಪಪುಂಜವ ।
ನುಂಡಮೇಲೆ ಕೊಲಿಸಲಿಕ್ಕೆ ಯತನಗೈಯುವಾ ॥೧೪೯॥

ರುಂಡಮಾಲಿ ಬಿಡನು ತನ್ನನೆಂದು ಧುರದಲಿ |
ಪುಂಡಗೋಪಹರಿಯ ಪೊಗಳಬೇಡವಿಂದಿಲೀ ||
ಗಂಡುಸಾದಡೀಗಲೆನ್ನ ಹತಿಯ ಸಹಿಸೆಲ |
ದಂಡಧರನ ತೆರದೊಳಿಹೆನು ಬಲವ ನೋಡೆಲಾ ||೧೫೦||

ಪಾವಮಾನಿ ಕನಲುತೆಂದನಿಂದು ಧುರದಲಿ |
ಯಾವನೀಗ ಗೆಲುವನವನ ದೇವ ಜಗದಲೀ ||
ಸೇವ್ಯ ಸರ್ವ ಜಗಕೆ ಮಾನ್ಯನವನೆನುತ್ತಲಿ |
ಕೋವಿದಗ್ರಗಣ್ಯ ಫಣವ ಗೈವುತಿಂದಿಲೀ ||೧೫೧||

ಲಕ್ಷಭಾರ ಗದೆಯಗೊಂಡು ತಿರುಹಲಾ ಕ್ಷಣ |
ದಕ್ಷ ಭೀಮ ಹೊಡೆಯಲಾಗ ಕಿಡಿಯು ತತುಕ್ಷಣಾ ||
ರೂಕ್ಷ ವೇಗಕ್ಕೇಳಲಾಗ ಸಮದೊಳೀರ್ವರು |
ಲಕ್ಷಗೊಳ್ಳದವರು ಕ್ರಮದಿ ಕಾದುತೀರ್ದರೂ ||೧೫೨||

**ಭಾಮಿನಿ**

ಯುದ್ಧಭೂಮಿಯೊಳಿನಿತು ರಣವನು |
ಬದ್ಧವೈರದಿ ಗೈಯುತಿರೆ ಧುರ |
ಗದ್ದಲಕೆ ಬೊಮ್ಮಾಂಡ ನಡುಗಲು ಗದೆಯು ಪುಡಿಯಾಗೇ ||
ಉದ್ಧತನು ಕಲಿಭೀಮನಾ ಕ್ಷಣ |
ಗುದ್ದುತಿರೆ ರಿಪುಸಂಧಿಸಂಧಿಗೆ |
ಸದ್ದಡಗಿ ಮಾಗಧನು ಮೂರ್ಛಿಸಿ ಬಿದ್ದನೇನೆಂಬೇ ||೧೫೩||

**ರಾಗ ಶಂಕರಾಭರಣ ರೂಪಕತಾಳ**

ಕ್ಷಣದಲಿ ಕಣ್ತೆರವುತ ತಾ | ರಣಕೇಳಲು ಬಲ ಗುಂದಿದೆ ||
ಮನದಲಿ ಚಿಂತೆಯ ತಾಳುತ | ಘನ ಶೋಕದೊಳೆಂದಾ ||೧೫೪||

ಶಿವಶಿವ ಹೇ ಹರ ತನ್ನಯ | ಭವಣೆಯುಯಿಂತಾಯಿತೆ ರಣ ||
ದವನಿಯೊಳೇಳದೆ ಬಿದ್ದಿಹೆ | ಭವದೇವನೆ ಸಲಹೋ ||೧೫೫||

ಕಾದಲು ದೇಹದಿ ಸತ್ವವು | ಪೋದುದು ಧುರವೇನ್‌ಗೈವೆನು ||
ಕ್ರೋಧದಿ ಹೆಮ್ಮಾರಿಯ ತೆರ | ಬಾಧಿಪನೀ ಭೀಮಾ ||೧೫೬||

ಕಪ್ಪವ ಕೊಡದಿರೆ ತನ್ನನು | ಒಪ್ಪಿಸುವನು ಹರಿಚರಣಕೆ ||
ಬಪ್ಪುದು ದುರ್ಯಶ ದಿನಕರ | ನಿಪ್ಪುವ ತನಕ ದಿಟಾ ||೧೫೭||

ವೈಷ್ಣವಯಾಗಕೆ ಕರವನು । ವಿಷ್ಣುವೆ ಮಾಡಲು ಕೊಡುವದು ॥
ಉಷ್ಣಘೃತವ ಕುಡಿದಂದದಿ । ತೀಕ್ಷ್ಣದ ದುಃಖವಿದೂ ॥೧೫೮॥

ಶಿಟ್ಟಿಲಿ ಭೀಮಾರ್ಜುನರರಿ । ರಟ್ಟೆಯ ಕಟ್ಟಲು ಬರುತಿರೆ ॥
ಇಷ್ಟರ ಹರವೇನೆನುತಲಿ । ದುಷ್ಟನು ಭೋರಿಡುತಾ ॥೧೫೯॥

**ಭಾಮಿನಿ**

ಇಂತಧಿಕ ಶೋಕದಲಿ ಮಾಗಧ ।
ನಂತರಂಗದಿ ಕಳವಳಿಸುತ ದು ।
ರಂತ ದುಗುಡದೊಳೆಂದ ಭೀಮಗೆ ನಮಿಸಿ ಕೊಬ್ಬಳಿದೂ ॥
ಪಂಥವೇತಕೆ ರಣದಿ ಸೋತಿಹೆ ।
ನಂತಕನ ತೆರ ಕೊಲದಿರೆನ್ನನು ।
ಕುಂತಿಸುತ ತಾನೀವೆ ಕರ ಹಯವೆಂದುತರಿಸಿತ್ತಾ ॥೧೬೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರನ್ನರಾಶಿಯ ಕೊಟ್ಟು ಭೀಮನ । ಮನ್ನಿಸುತ ಸಾಷ್ಟಾಂಗ ವಂದಿಸಿ ॥
ಕನ್ನೆಯರ ತೆರ ಪುರಕೆ ಪೋದನು । ಖಿನ್ನನಾಗೀ ॥೧೬೧॥

ಭೀಮನಾ ಕ್ಷಣ ಕಾಮಪಾರ್ಥರ । ಪ್ರೇಮದಲಿ ಕರೆದೆಂದ ಕಪ್ಪವ ॥
ಶ್ರೀಮನೋಹರ ಕೊಡಿಸಿದನು ಸಂ । ಗ್ರಾಮದೊಳಗೇ ॥೧೬೨॥

ಮುಂದೆ ಕುದುರೆಯ ಬಿಡುವದೆಂದೆನು । ತಂದದಲಿ ಬಿಡಲಾಗ ಸತ್ವರ ॥
ದಿಂದ ದೇಶಗಳನ್ನೆ ಚರಿಸುತ । ಬಂದಿತಾಗಾ ॥೧೬೩॥

**ಭಾಮಿನಿ**

ಶೃಂಗರಿಸಿ ಪೊರಟೇರ್ದ ಮಖಹಯ ।
ವಂಗ ಮಾಳವ ದ್ರವಿಡ ಕುರುಕಾ ।
ಳಿಂಗ ಬರ್ಬರ ಚೋಳ ಕೇರಳ ತೌಳವಾದಿಗಳಾ ॥
ಹಿಂಗದತಿವೇಗದಲಿ ಚರಿಸುತ ।
ತುಂಗಮಾನದೊಳೀರ್ಪ ರವಿಸುತ ।
ನಂಗದೇಶವನೈದಿತೈ ಶ್ರೀಹರಿಯ ದಯದಿಂದಾ ॥೧೬೪॥

**ಎರಡನೆಯ ಸಂಧಿ**

**ದ್ವಿಪದಿ**

ಶ್ರೀಪತಿಯ ಪದಕೆರಗುತ ಪರೀಕ್ಷಿತನೂ ।
ತಾಪಸೇಂದ್ರನೊಳೊರೆದ ನೀ ಪರಿಯೊಳವನೂ ॥೧॥

ಮಂಗಳಾಂಗನೆಸೆವ ತುರಂಗಮವು ಭರದೀ ।
ಅಂಗದೇಶಕೆ ಬರಲು ಹಿಂಗದತಿಜವದೀ ॥೨॥

ಆ ದೇಶಕರಸಾರು ಮಾಧವನ ಹಯವಾ ।
ಕ್ರೋಧದಲಿ ಕಟ್ಟಿದನೊ ಗೈದನೇನಿರವಾ ॥೩॥

ಚಂದದೊಳಗರುಹುವುದು ಮುಂದಣವ ಕಥೆಯಾ ।
ಎಂದು ವಿನಯದಿ ನುಡಿದು ವಂದಿಸಲು ಮುನಿಯಾ ॥೪॥

ಸಾವಧಾನದಿ ಪೇಳ್ದ ದೇವರಾತನಿಗೇ ।
ಭಾವಶುದ್ಧದಿ ಕೇಳು ನಾನೊರೆವೆ ನಿನಗೇ ॥೫॥

ಆ ತೇಜಿಯನುಸರಿಸಿ ಖ್ಯಾತರೈತರಲೂ ।
ವಾತಸುತನೊಳು ಮೀನಕೇತು ವಿನಯದೊಳೂ ॥೬॥

ಬೆಸಗೊಂಡನೀ ಪುರದ ಪೆಸರ ಬೇಗೆನಗೇ ।
ಉಸುರುವುದು ಮತ್ತದರ ವಸುಧೀಶ ನಮಗೇ ॥೭॥

ಸಾಮದಲಿ ಕರವಿತ್ತು ಪ್ರೇಮಗೈವವನೋ ।
ಭೂಮಿಪರ ನಯದಿ ಸಂಗ್ರಾಮ ಕೊಡುವವನೋ ॥೮॥

ಇಂತುಸುರೆ ನಸುನಗುತ ಕುಂತಿಯಾತ್ಮಜನೂ ।
ಕಂತುವಿಗೆ ಪೇಳ್ದನತಿ ಸಂತಸದೊಳದನೂ ॥೯॥

ಗರುಡಿಸದನದಿ ಸುರಪತರಳನತಿ ಮುದದೀ ।
ಶರವಿದ್ಯ ಮಂಗಳದಿ ಮೆರೆಯೆ ಸಾಹಸದೀ ॥೧೦॥

ಕುರುಪತಿಯು ತಾ ಬೆಚ್ಚಿ ಬೆರಗಾಗುತಿರಲೂ ।
ತರಣಿಸುತ ಸಾಹಸಿಕ ಪರಶುರಾಮರೊಳು ॥೧೧॥

ಕಲಿತ ವಿದ್ಯವ ತೋರೆ ಬಲುಮೆಯಲಿ ಬಂದೂ ।
ಕಲಿ ಧಾರ್ತರಾಷ್ಟ್ರನವಗೊಲಿದು ಕರತಂದೂ ॥೧೨॥

ಶ್ವೇತವಾಹನನಿದಿರಿಗೀತ ಭಟನೆನುತಾ ।
ಖ್ಯಾತ ರವಿಸುತಗಂಗಭೂತಳವನಿತ್ತಾ ॥೧೩॥

ರಾಧೇಯನೀಹಯವ ಕ್ರೋಧದಲಿ ಬಿಗಿದೂ ।
ಕಾದದಿರ ಜಯಶಿರಿಯ ಸಾಧಿಸುವೆ ಗೆಲಿದೂ ॥೧೪॥

ಇಂತರುಹಿ ಹಯವ ದಿನಕಾಂತಜನ ಪುರಕೇ ॥
ಹೊಂತಕಾರರು ಕಳುಹಿ ನಿಂತರನುಬಲಕೇ ॥೧೫॥

**ವಾರ್ಧಕ**

ಪೃಥ್ವಿಪತಿ ಕೇಳ್ಮಖದ ಸಪ್ತಿಯಾ ಪುರದ ಬಳಿ ।
ಗರ್ತಿಯಲಿ ಬರಲು ರಾವುತ್ತರಾಕ್ಷಣ ಕಾಣು ।
ತೆತ್ತಣದ ಹಯವೆಂದು ಚಿತ್ತದಲಿ ಭ್ರಮೆಗೊಂಡು ಹತ್ತಿರದಿ ನೋಡುತದನೂ ॥
ಸತ್ವರದಿ ಪಿಡಿದಾಗ ಮಸ್ತಕದ ಪಟ ಕಂಡು ।
ಕೃತ್ವಶ್ವವಿದನು ಭೂಪೋತ್ತಮಗೆ ಕೊಡುವೆವೆಂ ।
ದಸ್ತಿಪುರದೊರೆಯ ಸಖನಾಸ್ಥಾನಕೈತಂದರುತ್ತಮದ ಹಯ ಸಹಿತಲೀ ॥೧೬॥

**ಕಂದ**

ಇತ್ತಲು ರವಿಜಂ ವಿಭವದಿ ।
ಮತ್ತೇಭದ ತೆರ ಸುಖದಿಂ ಕುಳಿತಿರಲಾಗಳ್ ॥
ಸಪ್ತಿಯ ಸಹಿತಲಿ ಚರರತಿ ।
ಸತ್ವರದಿಂ ಬಿನ್ನೈಸಿದರೀ ಪರಿಯವನೋಳ್ ॥೧೭॥

**ರಾಗ ಕಾಂಭೋಜಿ ಅಷ್ಟತಾಳ**

ರವಿಜಾತ ಲಾಲಿಸಯ್ಯಾ । ನಾ ಪೇಳುವ । ದವಧರಿಸುವದು ಜೀಯಾ ॥
ಜವದಿ ಗೋಪುರದೆಡೆಗವಘಡಿಸುತಲಿ ಸೈಂ । ಧವವು ಬಂದುದ ಕಂಡು ಬೆರಗಾದೆವಯ್ಯಾ ॥೧೭॥

ಪಂಚವರ್ಣದ ವಾಜಿಯೂ । ಲಲಾಟದೊಳ್ । ಮಿಂಚಿಪ ಪೊನ್ನೋಲೆಯೂ ॥
ಸಂಚರಿಸುತ ಬರಲದನು ತಂದಿಹೆವು ಪ್ರ । ಪಂಚದೊಳ್ ಕಾಣೆವೀ ತೆರದ ವಾಜಿಯ ನಾವೂ ॥೧೮॥

ಅಂಬರ ಧರೆಗೆ ಸರೀ । ಯಾಗಿಹ ರಥ । ತುಂಬಿದ ಭಟರು ಧೊರೀ ॥
ಬೆಂಬಿಡದು ವಾಜಿಯ ಬಂದವೀರರ ಸಂ । ರಂಭವ ಕಾಣುತ್ತ ಭಯದಿಂ ಬಂದೆವೂ ॥೧೯॥

**ಭಾಮಿನಿ**

ಭೂರಮಣ ಕೇಳಾಗ ಕರ್ಣನು ।
ಚಾರಕರ ನುಡಿ ಕೇಳಿ ಬಾಯೊಳ ।
ಗಾರುಭಟಿಸುತಲೆಂದ ಮೂರ್ಜಗ ನಡುಗುವಂದದಲೀ ॥
ಸೂರೆ ಪೋದುದೆ ತುರಗಮೇಧವು ।
ಶೂರ ಮಣಿಮಯಮಕುಟ ತಾನಿರ ।
ಲಾರು ಗೈಯುವರೆಂದು ಹಯಶಿರಲೇಖ ವಾಚಿಸಿದಾ ॥೨೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸೋಮವಂಶಲಲಾಮ ರಿಪುಕುಲ । ಭೀಮ ವಸುದೇವಾತ್ಮಜನು ನಿ ॥
ಸ್ಸೀಮ ಗುಣಸಂಪನ್ನ ಕೃಷ್ಣನು । ದ್ದಾಮಬಲನೂ ॥೨೧॥

ದ್ವಾರಕಾಪುರದಲ್ಲಿ ತನ್ನಯ । ಶೌರ್ಯ ತೋರ್ಪುದಕೊಂದು ದಿನದೊಳ ॥
ಗಾರು ಗೈಯದ ವಾಜಿಮೇಧವ । ಧೀರತನದೀ ॥೨೨॥

ಮಾಡಲೋಸುಗ ಮುದದಿ ಹರಿ ತಾ । ಗಾಢ ದೀಕ್ಷೆಯಗೊಂಡು ಕುದುರೆಯ ॥
ರೂಢಿಯಲಿ ಸಂಚರಿಸೆ ಬಿಟ್ಟಿಹೆ । ನೋಡುತಿದನೂ ॥೨೩॥

ಘನಬಲಾಢ್ಯರು ಯಯುವ ಬಂಧಿಸಿ । ಶೆಣಸುವದು ಸಾಹಸದಿ ಧುರದಲಿ ॥
ರಣಪರಾಕ್ರಮಿ ಭೀಮ-ನರ-ಹರಿ । ತನಯರೊಡನೇ ॥೨೪॥

ಹೇಡಿಗಳು ಬಂಧಿಸದೆ ಕುದುರೆಯ । ನೀಡುವದು ಕಪ್ಪವನು ತಪ್ಪದೆ ॥
ಮಾಡಿ ಪವಮಾನಜಗೆ ನಮನವ । ಕೂಡಿ ಬಹದೂ ॥೨೫॥

**ಭಾಮಿನಿ**

ಇನಿತು ನೋಡುತ ವಾಚಕವ ರವಿ ।
ತನಯ ಕಲ್ಪದ ಧೂರ್ಜಟಿಗೆ ಮಿಗಿ ।
ಲೆನಿಸಿ ಭೂಮಂಡಲವು ನಡುಗುವ ಧ್ವನಿಯೊಳಿಂತೆಂದಾ ॥
ಸನುಮತವೆ ಭೂಭುಜರಿಗೀ ನುಡಿ ।
ಘನಮದಾಂಧರು ಯಾದವರು ಖರೆ ।
ಬಿನುಗು ಮಾತಂತಿರಲಿ ತೋರ್ಪೆನು ಧುರದೊಳುತ್ತರವಾ ॥೨೬॥

**ಕಂದ**

ಎಂದಾಕ್ಷಣ ಬೇಗದಿ ಹಯ ।
ಬಂಧಿಸಲಿಂದೆನುತಾಜ್ಞಾಪಿಸಿ ರವಿಜಾತಂ ॥

ಬಂದನು ರಿಪುಗಳ ತಾಣಕೆ ।
ಚಂದದಿ ತನ್ನಯ ತಮ್ಮ ವಿಕರ್ಣನ ಸಹಿತಂ ॥೧೭॥

**ಭಾಮಿನಿ**

ಸೂತಜನು ರಣಕೆಂದು ಬರೆ ಸುರ ।
ನಾಥಜಾತನು ಶೌರ್ಯದಲಿ ಕಂ ।
ಡಾತತುಕ್ಷಣ ಪೊರಡೆ ಕಾಣುತಲೆಂದ ಸಾತ್ಯಕಿಯೂ ॥
ಖ್ಯಾತನೆನಗಪ್ಪಣೆಯನೀಯುವ ।
ದೀತನನು ಜಂಬುಕವ ಕೇಸರಿ ।
ಘಾತಿಸುವ ವೋಲ್ ಬಡಿವೆನೆನೆ ನರನಿತ್ತನಾಜ್ಞೆಯನೂ ॥೧೮॥

**ರಾಗ ಶಂಕರಾಭರಣ, ರೂಪಕತಾಳ**

ಕರ್ಣನರಿಯ ಬರವ ಕಂಡು । ಸ್ವರ್ಣರಥವನೇರಿ ಬರೆ ವಿ ॥
ಕರ್ಣ ನೋಡುತೆಂದ ನಮಿಸಿ । ತೂರ್ಣದಿಂದಲೀ ॥೧೯॥

ಅಣ್ಣ ಕೇಳು ಧುರಕೆ ಮು । ಕ್ಕಣ್ಣ ಬರಲು ಬಿಡೆನು ತಾನು ॥
ತನ್ನ ಕಳುಹುದುಚಿತವಿನಿತು । ಸಣ್ಣ ಕೆಲಸಕೇ ॥೨೦॥

ಪ್ರಣಯದಿಂದಲನುಜಗ । ಪ್ಪಣೆಯನಿತ್ತು ಕಳುಹಲಾಗ ॥
ಶಿನಿಯತನಯನಿದಿರು ಬಂದು । ಕಣೆಯನೆಸೆದನೂ ॥೨೧॥

ಚಾಪ ಪಿಡಿದು ಸಾತ್ಯಕಿಯು । ಕೋಪಗೊಳ್ಳುತಾಗಲರಿಗೆ ॥
ತಾಪ ಗೈಯುವಂತೆ ಶರಪ್ರ । ತಾಪತೋರಲೂ ॥೨೨॥

ಸರಳಿನುರಿಗೆ ಭ್ರಮಿಸಿ ಪೇಳ್ದ । ಧುರದಿ ತುರಗದಾಶೆಗಾಗಿ ॥
ಹರಣಕಾಣಿಕೇಯನೀವ । ದುರುಳ ನಿಲ್ಲೆಲಾ ॥೨೩॥

ನಾವು ದುರುಳರಲ್ಲಪೋರ । ದೇವ ಹರಿಯ ಹಯವ ದುಷ್ಟ ॥
ಭಾವದಿಂದ ಕಟ್ಟಿದಧಮ । ನಾವನುಸುರೆಲಾ ॥೨೪॥

ಇನಿತು ನುಡಿದು ರಭಸದಿಂದ । ಶೆಣಸುತಾಗ ಧುರದಿ ಮಂತ್ರ ॥
ಕಣೆಯ ಬಿಡುತ ತೋರ್ದರಮಿತ । ರಣದ ಚೋದ್ಯವಾ ॥೨೫॥

**ಭಾಮಿನಿ**

ತುಂಗವಿಕ್ರಮರಿನಿತು ತಾವ್ ರಣ ।
ರಂಗದೊಳಗನ್ಯೋನ್ಯ ಬಹುಪರಿ ।

ಭಂಗಿಸುತ ಸಾತ್ಯಕಿ ವಿಕರ್ಣನ ಧುರದಿ ಮೂರ್ಛಿಸಲೂ ||
ಅಂಗಭೂಭುಜ ಕಾಣುತಾಕ್ಷಣ |
ಕಂಗಳಲಿ ಕಿಡಿಗೆದರಿ ಜಗವನು |
ನುಂಗುವಂದದಿ ಸರಳ ಮಳೆಗರೆದೆಂದ ಶಿನಿಸುತಗೇ ||೩೬||

**ರಾಗ ನೀಲಾಂಬರಿ, ಅಷ್ಟತಾಳ**

ತೋರು ತೋರೆಲೊ ಸಾಹಸ | ನಮ್ಮನುಜನ | ಗಾರುಗೆಡಿಸಿದ ತೋಷಾ ||
ಈ ರಣಾಗ್ರದಿ ನಿನ್ನನಾರು ಕಾಯುವರತ್ತ | ಸಾರು ಮೂರ್ಖನೆ ನಿಲ್ಲದೇ ||೩೭||

ಮೂರ್ಖ ನಾನಲ್ಲ ಕೇಳು | ಕೌರವರೊಳು | ಮೂರ್ಕಾಲ ಬೋಧೆಯೊಳೂ ||
ಆರ್ಕಿಯೆ ಪಾರ್ಥರೊಳು ವಿಗಡ ಸಂಜನಿಸುತ್ತ | ಕಾರ್ಕಶ್ಯ ತೋರ್ಪೆ ಖಳಾ ||೩೮||

ಖಳನೆಂದು ಪೇಳದಿರು | ನಮ್ಮಯ ಕೊಳು | ಗುಳದಲ್ಲಿ ಶೌರ್ಯ ತೋರೋ ||
ಬಿಲದಿ ಮೆರೆವ ಸರ್ಪನಿಗೆ ಖಗರಾಯನೊಳ್ | ಕಲಹದಂತಾಯ್ತು ಮರುಳೇ ||೩೯||

ಮರುಳಾನಾರಯ್ಯ ನೋಡೊ | ನಮ್ಮಯ ಮುಖ | ತುರಗ ಬಿಡುತ ಮಾತಾಡೋ ||
ಗರುಡವಾಹನ ದ್ರೋಹ | ಕೊಳಗಾಗಿ ಕೆಡದಿರೆಂ | ದರುಹುತೆಚ್ಚನು ಶರವಾ ||೪೦||

ಬಂದ ಶರವ ಖಂಡಿಸಿ | ಭಾಸ್ಕರಜಾತ | ನೆಂದ ತಾ ಬಲು ಕೋಪಿಸೀ ||
ಇಂದಿನ ಧುರದಲ್ಲಿ | ದ್ರೋಹದ ಪರಿ ಶರ | ವೃಂದದಿ ತೋರ್ಪೆ ನಿಲ್ಲೋ ||೪೧||

**ಭಾಮಿನಿ**

ಹಟದೊಳಿನಿತಾ ವೀರವರರತಿ |
ಕಠಿಣ ಶರಗಳ ಬಿಡಲು ರಭಸದೊಳ್ |
ಚಟಚಟೆಂಬುವ ರವಕೆ ಧೀರರ ಕಟಕ ಭಯಗೊಳಲೂ ||
ಭಟಕುಲಾಗ್ರಣಿ ಕರ್ಣ ಬಿಟ್ಟಿಹ |
ಕುಟಿಲ ವಿಶಿಖಾಹತಿಗೆ ಸಾತ್ಯಕಿ |
ಪಟುತನವ ಬಿಟ್ಟಾಗ ಭ್ರಮಣೆಯಗೊಂಡು ಪಿಂತಿರುಗೇ ||೪೨||

**ರಾಗ ಶಂಕರಾಭರಣ ರೂಪಕತಾಳ**

ಹರಿಯ ತನಯ ನೋಡಿ ಶಿನಿಯ | ತರಳ ರಣದಿ ಸೋತನೆನುತ ||
ಭರದಿ ರವಿಜರಂಗದಲ್ಲಿ | ಶರವ ಮುಸುಕುತಾ ||೪೩||

ಅರರೆ ಸೂತಸುತನೆ ಸಾಕು | ಧುರದಿ ಸಾತ್ಯಕಿಯ ಗೆಲಿದ ||
ಹರುಷ ಬೇಡ ವಿಶಿಖ ಪರಿಕಿ | ಸೆನ್ನ ಸಮರದಾ ||೪೪||

ಸೂತನಾದಡೇನು ಪರಶು । ರಾಮಶಿಷ್ಯನಹೆನು ತಾನು ॥
ಖ್ಯಾತನಹುದು ನೀನು ಗೋವ । ಕಾವ ಗೊಲ್ಲನೂ ॥೪೫॥

ವಸುವ ಸಹಿತ ಮಖದಹಯವ । ನರಗೆ ಕೊಡದೆ ಪೋದಡೆಲವೊ ॥
ಕುಸುಮವಿಶಿಖದೆಸುಗೆಯಿಂದ । ಲಸುವ ಹೀರುವೇ ॥೪೬॥

ಸೋತ ಸುದತಿಗಡಣವಲ್ಲ । ಸವಿಯ ಮಾತು ಧುರದೊಳಲ್ಲ ॥
ಭೀತಿ ನಮಗೆ ರಣದೊಳಿಲ್ಲ । ನರನ ಬರಿಸೆಲಾ ॥೪೭॥

ವಸುಮತೀಶ ದ್ರುಪದಸುತೆಯು । ವರಿಸೆ ಪಾರ್ಥ ನಿನಗೆ ರಣದಿ ॥
ಮಸೆದ ಶರವ ತೋರ್ದ ಸವಿಯ । ಮರೆತು ಕರೆವೆಯಾ ॥೪೮॥

ಭೂಪವರರು ಗೈವ ವಾಜಿ । ಮಖವಿದೆಂದು ತಿಳಿಯದಾದೆ ॥
ಗೋಪವರರು ಮಾಡಲಿನಿತು । ಚೋದ್ಯವಾಗಿದೇ ॥೪೯॥

ಸಾಕು ಖೂಳ ನಿನಗಸಾಧ್ಯ । ವೆಂದು ಹರಿಗೆ ಅಸದಳವೆ ॥
ನಾಕಿನಮಿತನಿಂಗೆ ನುಡಿವೆ । ದೋಷಮಾತನೂ ॥೫೦॥

ದ್ವೀಪಿಸದೃಶನಾಪೆನೆನುತ । ನರಿಯು ದೇಹ ದಹಿಸಿ ಬಹಳ ॥
ತಾಪಪಡುವ ಪರಿಯಿದಾಯ್ತು । ಮದನ ನೋಡೆಲಾ ॥೫೧॥

ಕಾಕು ಧಾರ್ತರಾಷ್ಟ್ರನೆಲವೊ । ಹವಿಯ ಶುನಕಗಿತ್ತ ತೆರದಿ ॥
ದುಷ್ಕುಲಜಗೆ ಕೊಟ್ಟು ರಾಜ್ಯ । ಕೆಟ್ಟ ಲೋಕದೀ ॥೫೨॥

ಬಾಯಬಡಿಕ ಯೇಕೆ ನುಡಿವೆ । ಸಾಯಕಂಗಳನ್ನು ತಾಳು ॥
ಕಾಯ ಕಾಯ್ವ ರಾರೆನುತ್ತ । ಹೊಡೆದ ಸರಳೊಳೂ ॥೫೩॥

ಆ ಯದೂದ್ಭವೇಶ ಕರ್ಣರಿನಿತು ಕಾದಲಾಗ ನಭದಿ ॥
ಜಾಯರೊಡನೆ ಸುರರು ಸುಮವ । ಸುರಿಸೆ ಚೋದ್ಯದೀ ॥೫೪॥

**ಭಾಮಿನಿ**

ಪಂಥದಲಿ ಶಸ್ತ್ರಾಸ್ತ್ರ ಕೋವಿದ ।
ರಿಂತು ಸಮಸತ್ವದಲಿ ರಣದೊಳ ।
ಗಂತರವ ತೋರಿಸದೆ ಕಾದಿದದ್ಭುತವನೇನೆಂಬೇ ॥
ಅಂತರಂಗದಿ ಯುಕ್ತಿಯನು ಶ್ರೀ ।
ಕಾಂತತರಳನು ಯೋಚಿಸುತಲಿ ದು ।
ರಂತ ಭ್ರಾಮಕ ಶರವ ಬಿಡೆರವಿಸುತನು ಮೋಹಿಸುತಾ ॥೫೫॥

ಕ್ಷಣದೊಳಗೆ ಚೇತರಿಸಿ ರವಿಸುತ ।
ಕನಲುತಾರ್ಭಟಿಸಲ್ಕೆ ಪಾರ್ಥನು ।
ಮನಸಿಜನ ತಡವುತ್ತ ರಭಸದಿ ಕರ್ಣಗಿದಿರಾಗೀ ॥
ಮಣಿಮಯದ ರಥವೇರಿ ಕೋಪದೊ ।
ಳನುಪಮದ ಶೌರ್ಯವನು ತೋರಿಸು ।
ತೆಣಿಕೆಯಿಲ್ಲದ ಕಣೆಯನೆಸೆವುತ ಭೋರ್ಗುಟಿಸುತೆಂದಾ ॥೫೬॥

**ರಾಗ ಮೆಚ್ಚು ಅಷ್ಟತಾಳ**

ಎಲ ಹಯಚೋರ ಕೇಳೀಗ । ನಮ್ಮ । ಜಲಜನೇತ್ರನ ವಾಜಿಯಬೇಗ ॥
ಸಲ್ಲಿಸದೀರ್ದಡೆ ಕಪ್ಪ ಸಹಿತಲಿ । ನಿನ್ನ । ನಳುಕದೆ ಪುಡಿಗೈವೆ ಧುರದಲಿ ॥೫೭॥

ಹೆಚ್ಚು ಮಾತುಗಳೆಲ್ಲ ಸಾಕು । ಬಾಯ । ಮುಚ್ಚು ಬಿರುನುಡಿಯ ಸೊಕ್ಕು ॥
ಅಚ್ಚುತನನುಜೆಯ ಕಳವಿಲಿ । ತಂದ । ತುಚ್ಛ ಚೋರ ನೀ ಜಗದಲೀ ॥೫೮॥

ಅರೆ ಮೂಢ ಬಿಡು ನಿನ್ನ ನುಡಿಯ । ಸ್ವಯಂ । ವರದಿ ತುಡುಕಿ ಭಾನುಮತಿಯ ॥
ಕುರುನೃಪಸಹಿತ ನೀನೆಳೆಯಲು । ಬಲು । ಭರದ ಹತಿಯ ತಿಂದೆ ನೃಪರೊಳೂ ॥೫೯॥

ಮೂಢಾತ್ಮನಾರೆಂಬುವದನು । ಪೇಳ್ವೆ । ನೋಡೀಗ ಕುರುಭೂಪ ನಿಮ್ಮನೂ ॥
ಗೂಢತನದಿ ಜತುಗೃಹದೊಳು । ದಹಿಸೆ । ಕಾಡ ಸೇರಿದಿರಾಗ ಭಯದೊಳೂ ॥೬೦॥

ಕಾಡ ಸೇರ್ದರು ಮುದದಲ್ಲಿ । ನೋಡು । ರೂಢಿಯಾಳ್ವೆವು ಹರಿದಯದಲ್ಲೀ ॥
ಕೇಡ ಮಾಡಲು ಸೇರ್ದ ನಿನ್ನನು । ಈಗ । ಝಾಡಿಸಿಬಿಡುವೆನೆಂದೆಚ್ಚನೂ ॥೬೧॥

**ರಾಗ ಮಾರವಿ ಏಕತಾಳ**

ಇಂಥಾ ವೀರರು ಸರಿಸಮ ಯುದ್ಧದಿ । ಪಂಥದಿ ಹೊಡೆಯುತಲೀ ॥
ದಂತೀಂದ್ರರ ತೆರ ಕಾದುವ ಮಧ್ಯದಿ । ಕುಂತಿಯ ಸುತ ಕನಲೀ ॥೬೨॥

ಪೇಳಿದನೆಲೆ ಕುರುಧೊರೆಯೊಳು ನೀ ಬಹು । ಕೂಳ ತಿನ್ನುತ ಮುದದೀ ॥
ಬಾಳಿಕೊಂಡಿಹೆ ಗಜಪುರಧಾಳ್ಗೇಡಿಯೆ । ತೋಳ್ಬಲ ನೋಡ್ಭರದೀ ॥೬೩॥

ತಂದೆಯ ಖಾಂಡವವನವನು ದಹಿಸಿದ । ಮಂದಮತಿಯೆ ನೋಡೂ ॥
ಚಂದದಿ ಗೋಪನ ವಾಜಿಯ ಪೃಷ್ಠದಿ । ಬಂದೆಯೊ ನೀ ಪೇಳೂ ॥೬೪॥

ಇಂದಿರೆಯಾಳ್ದನ ಸೇವೆಯು ದುರ್ಜನ । ವೃಂದಕೊಪ್ಪದೆ ಮರುಳೇ ॥
ಇಂದಿಲಿ ನೀ ನೋಡ್ ಬಹುತರ ಗರೆವುದ । ಚಂದದ ಸರಳಮಳೇ ॥೬೫॥

**ಭಾಮಿನಿ**

ಭೂತಳೇಶನೆ ಕೇಳು ನರ ರವಿ।
ಜಾತರೀರ್ವರು ರಣದೊಳುರುಶರ।
ವ್ರಾತಗಳ ಬಿಡುತಿರಲು ಪಾರ್ಥನ ಶರಕೆ ಭಾನುಜನೂ॥
ಧಾತುಗೆಟ್ಟವನಿಯೊಳಗಾ ಪುರು।
ಹೂತಕೇತುವಿನಂತೆ ಬೀಳಲ್।
ಕಾತತುಕ್ಷಣ ರಣದಿ ಸೈನ್ಯವು ಕಂಡು ಬೆರಗಾಗೇ॥೬೩॥

**ರಾಗ ಶಂಕರಾಭರಣ ರೂಪಕತಾಳ**

ಭೂತಳದಲಿ ಬಿದ್ದಿಹ ರವಿ। ಜಾತನು ಬೇಗೇಳುತ ತಾ।
ಚೇತರಿಸುತ ಸಮ್ಮಂತ್ರಿಸಿ। ಧಾತನ ಶರ ಬಿಡಲೂ॥೬೭॥

ಆ ಶರವೇಗದಿ ಸೇನೆಯ। ನಾಶಿಸಿ ಬರುತಿರೆ ಪಾರ್ಥನು।
ರೋಷದಿ ವೈಷ್ಣವಶರದಲಿ। ಘಾತಿಸುತುಸುರಿದನೂ॥೬೮॥

ರಾಧೇಯನೆ ಕರ-ಹಯಗಳ। ಕ್ರೋಧದಿ ಕೊಡದಿರೆ ನಿನ್ನನು।
ಬಾಧಿಪ ಸೌರಾಸ್ತ್ರವನೀ। ನಾದರಿಸೆನುತೆಚ್ಚಾ॥೬೯॥

ನಾರಾಚವು ಶಿಡಿಲಂದದಿ। ಭೋರ್ಗುಡಿಸುತ ಬಡಿಯಲು।
ಘೋರದ ಹತಿಗಾ ರವಿಸುತ। ತೇರೊಳಗೊರಗಿದನೂ॥೭೦॥

ತನಯನ ಮಮತೆಯೊಳಾ ಶರ। ತನುವನು ದಹಿಸದೆ ಬಿಡುತಿರೆ।
ಕ್ಷಣದೊಳಗೇಳುತ ಕರ್ಣನು। ಕನಲುತ ಶರ ತೊಡಲೂ॥೭೧॥

**ಭಾಮಿನಿ**

ಅಷ್ಟರಲಿ ಪಲ್ಧ್ವನಿಯ ಗೈವುತ।
ಸಿಟ್ಟಿನಲಿ ಫಲುಗುಣನು ವೈರಿಯ।
ನಟ್ಟುವೆನು ಸುರಭವನಕೆಂದೆನುತೈಂದ್ರ ಶರ ತೊಡಲೂ॥
ದಿಟ್ಟ ಭೀಮನು ತಡೆದು ಪೇಳಿದ।
ನಿಷ್ಟವಲ್ಲಿದು ಕೊಲಲು ವೈರಿಯ।
ಕಟ್ಟಿ ಕಪ್ಪವ ತರುವೆತಾನೆಂದೆನುತ ಸಂತೈಸೀ॥೭೨॥

**ರಾಗ ಭೈರವಿ ಏಕತಾಳ**

ಕಿಡಿಕಿಡಿಯೆನುತಲಿ ಭೀಮ। ಗದೆ। ಪಿಡಿಯುತ ಬಲು ನಿಸ್ಸೀಮಾ॥
ಕಡೆಕಾಲದ ಭವನಂತೆ। ಧುರ। ಪೊಡವಿಯು ಕಂಪಿಸುವಂತೇ॥೭೩॥

ಬಂದಾಕ್ಷಣಗರ್ಜಿಸಲು | ರಿಪು | ಸಂದೋಹವು ಭಯಗೊಳಲೂ ||
ಕುಂದದೆ ರವಿಜನು ಬಂದು | ಶರ | ವೃಂದದಿ ಮುಸುಕಿದನಂದೂ ||೭೪||

ಥಟ್ಟನೆ ಪುಡಿಗೈಯುತಲಿ | ಜಗ | ಜಟ್ಟಿಯು ಭೀಮನು ಕೈಲೀ ||
ಇಷ್ಟಿಯ ಹಯ ಬಿಡದಿರಲು | ಹೊಡ | ದಟ್ಟುವೆ ನೋಡೆಂದೆನಲೂ ||೭೫||

ಭಂಡಿಯ ಅನ್ನವ ತಿಂದು | ದ್ವಿಜ | ಮಂಡಲದಲಿ ಮೆರದೆಂದೂ ||
ಕೊಂಡಾಡುವೆ ತಾನೀಗ | ಶರ | ಖಂಡಿಸದಡೆ ನೀ ಬೇಗಾ ||೭೬||

ಖಳ ಕೌರವನೊಡಗೂಡಿ | ಬಲು | ಚಳಕದಿ ನೀ ಮಾತಾಡೀ ||
ಅಳುಕದೆ ತಂದುದನೀಗ | ತಾ | ನಿಲಿಸುವೆ ಧುರದಲಿ ಬೇಗಾ ||೭೭||

ಇಂತವರುಸುರುತ ಜವದಿ | ಬಲು | ಪಂಥದಿ ಕಾದುತ ಧುರದೀ ||
ಮಂತ್ರಾಸ್ತ್ರವನೆಸೆಯುತಲಿ | ರಣ | ತಂತ್ರವ ತೋರ್ದರು ಕನಲೀ ||೭೮||

**ಭಾಮಿನಿ**

ರೋಷದಲಿ ರವಿಸುತನ ಬಲ ನಿ |
ಶ್ಶೇಷಿಸುತ ಪಾವನಿಯು ಸೂತನ |
ಘಾಸಿಸುತ ರಥ -ವಾಜಿಗಳ ಧನು-ಖಡ್ಗಗಳ ತರಿಯೇ ||
ಪೌಷಣಿಯು ಬಿದ್ದವನಿಯಲಿ ಜಯ |
ದಾಶೆ ತೋರದೆ ಬಳಲಿ ಕಂಗೆಡು |
ತಾ ಸುಶೀಲನು ತನ್ನೊಳಗೆ ಬಲು ಶೋಕಿಸುತಲೆಂದಾ ||೭೯||

**ರಾಗ ನೀಲಾಂಬರಿ ಆದಿತಾಳ**

ಕೃತ್ತಿ ವಾಸನಯ್ಯೋ ಯೆನ್ನ | ಶಕ್ತಿ ಭೀಮನೊಳಗೇ ||
ವ್ಯಕ್ತವಾಯಿತಿನಿತು ಸಹಜ | ಸತ್ವ ಗುಂದಿತಯ್ಯೋ ||೮೦||

ಸತ್ವ ಗುಂದಿತೀಗ ಭೀಮ | ಮತ್ತ ಗಜದ ತೆರದೀ ||
ನೆತ್ತಿ ಬಡಿವನಿವನ ಗೆಲುವ | ಯುಕ್ತಿ ತೋರದಿಂದೂ ||೮೧||

ಯುದ್ಧ ಮಾಡಲೆನ್ನ ಸುಸ | ನ್ನದ್ಧ ರಥವು ಧುರದೀ ||
ಸದ್ದಡಗಿ ಪೋಯಿತಿನಿತು | ಮಧ್ಯಧುರದೊಳ್ ಶಿವನೇ ||೮೨||

ಮಧ್ಯದೊಳಿವನ ಗೆಲುವ | ಹದ್ದ ಕಾಣದಾದೇ ||
ಬದ್ಧ ವೈರಿಯೊಡನೆ ನಿಲಲು | ಗುದ್ದಿ ಕೊಲುವನಲ್ಲಾ ||೮೩||

ವೀರನಾಗಿ ಕಟ್ಟಿ ಹಯವ । ಧೀರತನವ ತೊರೆದೂ ॥
ನಾರಿಯಂತೆ ಮರುಗಲೆನ್ನ । ನಾರು ಕೇಳ್ವರೀಗಾ ॥೮೪॥

ಆರು ಕೇಳ್ವರೀಗಲೆನುತ । ಧೈರ್ಯಗೊಂಡು ಮನದೀ ॥
ವೈರಿಯೊಡನೆ ಸಮರಕೊಡುವ । ಶೌರ್ಯದಿಂದಲಿನ್ನೂ ॥೮೫॥

**ರಾಗ ಘಂಟಾರವ ಅಷ್ಟತಾಳ**

ಏಳುತಾಕ್ಷಣ ರಭಸದಿ ರವಿಸುತ ।
ಕಾಳಗಕೆ ನಿಲುತಾಗ ತನ್ನಯ । ತೋಳಬಲವನು ತೋರ್ದನೂ ॥೮೬॥

ಭುಜವನೆತ್ತುತ ರೋಷದೊಳಂಗ ಭೂ ।
ಭುಜನ ಭುಜಕಿದಿರಾಗಿ ಭೀಮನು । ನಿಜ ಪರಾಕ್ರಮ ತೋರಲೂ ॥೮೭॥

ಚಟಚಟೆನ್ನು ದೋರ್ಘಟ್ಟನಕಗ್ನಿ ।
ಚಟುಲ ಕಣೆಗಳ ತೋರ್ದರಾದುರ । ಭಟರು ರಣಮಂಡಲದೊಳು ॥೮೮॥

**ಭಾಮಿನಿ**

ಗಂಧವಹಸುತ ಸೂತತನುಜನ ।
ಸಂಧಿಸಂಧಿಗೆ ಹೊಡೆಯೆ ಮುಷ್ಟಿಯೊಳ್ ।
ನೊಂದು ಬಳಲಿರೆ ಪೇಳ್ದ ರವಿಸುತಗಾ ವೃಕೋದರನೂ ॥
ಇಂದಿರೇಶನ ಯಜ್ಞ ಕುದುರೆಯ ।
ನಿಂದು ಕರಸಹಿತೆನಗೆ ಕೊಡದಿರೆ ।
ಬಂಧಿಸುತ ಕೊಂಡೊದು ಕೆಡಹುವೆ ಹರಿಯ ಚರಣದಲೀ ॥೮೯॥

**ರಾಗ ಮುಖಾರಿ ಝಂಪೆತಾಳ**

ರವಿಸುತನು ಪವನಜನ ಪವಿಸಮದ ನುಡಿ ಕೇಳು ।
ತವನಿಯಲಿ ಬಿದ್ದು ಮೂರ್ಛಿಸುತಾ ॥
ತವಕದಲಿ ಚೇತರಿಸಿ ಭವಣೆಯನು ನೆನೆನೆನೆವು ।
ತವಧರಿಸಿ ಮನದಿ ಯೋಚಿಸುತಾ ॥೯೦॥

ಭೀಮನಂತಿಹ ವೀರನೀ ಮಹಿಯೊಳಗಾರು ।
ನಾ ಮರುಳುತನದಿ ಧುರಗೈದೇ ॥
ಸಾಮದಲಿ ಕರ ಹಯವನೀ ಮುಹೂರ್ತದಿ ಕೊಡದೆ ।
ಕ್ಷೇಮ ದೊರಕದು ಸಿದ್ಧವೆನುತಾ ॥೯೧॥

ಶಕ್ತಿಯಲಿ ಕಾದುವಡೆ ಸತ್ವ ದೇಹದೊಳಿಲ್ಲ ।
ಕೃತ್ವಶ್ವ ಕೊಡದಿರಲು ತನ್ನಾ ॥
ದೃಪ್ತನಿವ ಬಂಧಿಸುತ ಸತ್ವರದಿ ಕೊಂಡೊವ ।
ದೈತ್ಯವೈರಿಯ ಬಳಿಗೆ ದಿಟವೂ ॥೯೨॥

ದಂತಿಪುರ ಧೊರೆಸಹಿತ ಕುಂತಿಯಾತ್ಮಜರಿಂಗೆ ।
ಪಂಥ ತೋರದೆ ಬಿಡೆನು ಮುಂದೇ ॥
ಇಂತು ಯೋಚಿಸಿ ಕರ್ಣನಂತರಂಗದಿ ತಾನು ।
ಸಂತಸದಿ ಭೀಮನೊಳು ಪೇಳ್ದಾ ॥೯೩॥

**ಭಾಮಿನಿ**

ವಾತಸುತ ಕೇಳೆನ್ನ ನುಡಿಗಳ ।
ನೀ ತೆರದ ಧುರವೇಕೆ ನಮ್ಮೊಳು ।
ಖ್ಯಾತ ಬಹುಬಲನೈಸೆ ಕಪ್ಪವ ಕೊಡುವೆ ತಾನೆನುತಾ ॥
ಭೀತಿಯಲಿ ಬಹುತರದ ರತ್ನದ ।
ವ್ರಾತವನು ಮಖಹಯವ ಸಹಿತಲಿ ।
ಸೂತಜನು ಕೊಟ್ಟಾಗ ವಿನಯದಿ ನುಡಿದು ಪುರಕೈದಾ ॥೯೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕರವ ಕೈಗೊಂಡಾಗ ಭೀಮನು । ಕರದು ಫಲುಗುಣ ಕಾಮ ಸಾತ್ಯಕಿ ।
ಯರಿಗೆ ಪೇಳಿದ ನಗುತ ಕರ್ಣನ । ಧುರದ ಪರಿಯಾ ॥೯೫॥

ಜಯವು ನಮಗಿಂದಾಯ್ತು ಕೃಷ್ಣನ । ದಯದಿ ಮುಂದಕೆ ಬಿಡುವ ಯಾಗದ ।
ಹಯವ ನೆಂದೆನುತಂಗದಿಂದಲಿ । ಪಯಣಗೈಯೇ ॥೯೬॥

**ಭಾಮಿನಿ**

ಕಂಸರಿಪುಪಾಲಿತನೆ ಕೇಳ್ ವಿಪು ।
ಲಾಂಸ ಮುಂಗಥೆಯೊರೆವೆನಾ ಹಯ ।
ವಂಶುಮಾಲಿಯ ತೇಜಿಯಂದದಿ ಸಾಲ್ವಪುರಕೆ ಬರೆರೆ ॥
ಹಂಸಡಿಭಗಾಹ್ವಯರು ದಾನವ ।
ರಂಶಜರು ತತ್ಸಮಯದಲಿ ಕುನೃ ।
ಶಂಸರಿಂದೊಡಗೂಡಿ ಬರೆ ಡಿಭಗಾಖ್ಯನಿಂತೆಂದಾ ॥೯೭॥

**ರಾಗ ಕಾಂಭೋಜಿ ಆದಿತಾಳ**

ಅಗ್ರಜನಡಿಗೆರಗುತ ಡಿಬಗನು ಪೇಳ್ದ । ನಣ್ಣ ಕೇಳು ॥ ಕಾಡೊ ।
ಳುಗ್ರಮಿಗಂಗಳ ಬೇಟೆಗೈಯುವ ಯೇಳೀ । ಗಣ್ಣ ಕೇಳು ॥೯೮॥

ಕರಡಿ ಶರಭ ಹುಲಿ ಹರಿಣ ಹರಿಗಳನ್ನು । ತಮ್ಮ ಕೇಳು ॥ ಅಲ್ಲಿ ।
ಇರಗೊಡಿಸದೆ ಶಿತ ಶರಗಳಿಂದಟ್ಟುವ । ತಮ್ಮ ಕೇಳು ॥೯೯॥

ಬೇಟೆಗಾರರ ವರ ಕೂಟದಿಂದೊಡಗೂಡಿ । ಅಣ್ಣ ಕೇಳು ॥ ಸರಿ ।
ಸಾಟಿಯಿಲ್ಲದ ರೀತಿಯಾಟವನಾಡುವ । ಅಣ್ಣಕೇಳು ॥೧೦೦೩॥

**ಭಾಮಿನಿ**

ಮತ್ತೆ ಹಂಸನು ಶಬರಬಲಗಳ ।
ಸತ್ವರದಿ ತಾವೆರಸಿ ಕರದೊಳು ।
ಕತ್ತಿ ಬರ್ಚಿಗಳೀಟಿ ಕೋವಿ ಕಠಾರಿ ಚಾಲಗಳಾ ॥
ಬಿತ್ತರಿಸಿಕೊಳುತಾಗ ಮದಿರದ ।
ಮತ್ತರಾಗುವ ಪ್ರಾಣಿನಿಕರವು ।
ಕತ್ತರಿಸುವಂದದಲಿ ಬೇಟೆಗೆ ಬಂದರ್ವನಕಾಗೀ ॥೧೦೧॥

**ರಾಗ ಘಂಟಾರವ ಅಷ್ಟತಾಳ**

ಬಿಲ್ಲು ಬಾಣವ ಧರಿಸಿ ಬೇಗದಿ ಧುರ ।
ಮಲ್ಲ ಹಂಸನು ಬಂದನಾ ವನ । ದಲ್ಲಿ ಬೇಡರ ಬಲವ ಸಹಿತಲೀ ॥೧೦೨॥

ಈಟಿ ಬರ್ಚಿಯು ತೋಮರ ಮೊದಲಾದ ।
ಪಾಟಕಾಯುಧಗಳನು ಧರಿಸುತ । ಬೇಟೆಯಾಟವ ಗೈದನೂ ॥೧೦೩॥

ಕಂಡುಕಂಡಿಹ ವನಮೃಗಗಳ ಬಹು ।
ತಂಡವೆಲ್ಲವ ಸೂರೆಗೊಂಡರು । ಚಂಡಹಂಸನ ಬಲದ ಭಟರೂ ॥೧೦೪॥

ಕರಡಿ ಕೇಸರಿ ಕಾಡ್ಗೋಣ ಹೆಬ್ಬುಲಿ ।
ಹರಿಣ ಮುಂತಾಗಿರುವ ಮೃಗಗಳ । ತರಿದು ನಿಮಿಷದೊಳಾಗ ಬಿಸುಟರು ॥೧೦೫॥

**ಭಾಮಿನಿ**

ಧರಣಿಯಧಿಪನೆ ಕೇಳು ದುರುಳರು ।
ಕರುಣವಿಲ್ಲದೆ ವಿಪಿನಮೃಗಗಳ ।
ತರಿದು ಶ್ರಾಂತಿಯೊಳಿರಲು ಭಕ್ತೋದ್ಧರನ ಮಖಹಯವೂ ॥
ಸರಸದಲಿ ಕುಣಿದಾಡಿ ಹಂಸನ ।

ಪರಿಮುಖಕೆ ರಾಘವನ ಶರದೋಲ್ ।
ಬರಲದನು ತಡೆವುತ್ತ ಫಣಪಟವನ್ನು ವಾಚಿಸಿದಾ ॥೧೦೬॥

**ರಾಗ ಕೇತಾರಗೌಳ ಝಂಪೆತಾಳ**

ಇಂದುಕುಲಶರಧಿಸೋಮ । ವಸುದೇವ । ನಂದನನು ವೈರಿಭೀಮಾ ॥
ಇಂದು ಶ್ರೀಕೃಷ್ಣ ಧರೆಯ । ದುಷ್ಟನೃಪ । ವೃಂದ ಭಂಗಿಸುವ ಪರಿಯಾ ॥೧೦೭॥

ನೆನೆವುತೊಂದಹದಿ ಹಯದ । ಯಾಗವಿಧಿ । ಯನುಕರಿಸಿ ದಿಗ್ದೇಶದಾ ॥
ಜನಪರಿಕರವ ತರಲು । ವಾಜಿಯನು । ಘನತೇಜ ಬಿಟ್ಟು ಬರಲೂ ॥೧೦೮॥

ಈ ತುರಗ ಪಾಲಿಸುತಲಿ । ಜಗದ ವಿ । ಖ್ಯಾತರೈದಿಹರು ತೆರಳೀ ॥
ಸಾತ್ಯಕಿಯು ಧೀರ ಕಾಮ । ಜಗಜಟ್ಟಿ । ವಾತಸಂಭವನು ಭೀಮಾ ॥೧೦೯॥

ದಿಟ್ಟರಿದ ನೋಡಿ ನೃಪರು । ವಾಜಿಯನು । ಕಟ್ಟಿ ಧುರಗೈವುದವರೂ ॥
ಕೊಟ್ಟು ನಮಿಪುದು ಕಪ್ಪವ । ಹೇಡಿಗಳು । ಧೃಷ್ಟ ಭೀಮನ ಪಾದವಾ ॥೧೧೦॥

**ಭಾಮಿನಿ**

ಬದ್ಧ ಪತ್ರವ ನೋಡುತಾ ಕ್ಷಣ ।
ಕ್ರುದ್ಧರಾಗುತ ಹಂಸಡಿಭಗರು ।
ಶುದ್ಧ ಗೋವಳ ಕೃಷ್ಣ ನಮ್ಮಿದಿರೆಂತು ಮಖಗೈವಾ ॥
ಬುದ್ಧಿ ಕಲಿಸುವೆನೆನುತ ಹರಿಯೊಳು ।
ವೃದ್ಧವೈರರು ಬಿಗಿದು ಹಯವನು ।
ಯುದ್ಧಸನ್ನಹಗೈದು ಮಧುಕೈಟಭರ ತೆರ ಬರಲೂ ॥೧೧೧॥

**ಕಂದ**

ಅತ್ತಲು ಭೀಮಾದ್ಯರು ಸವ ।
ಸಪ್ತಿಯನೊದಿಹ ಕಡು ದುರುಳರನೀಕ್ಷಿಸುತಂ ॥
ಸತ್ವದೊಳಿರುಹುತ ಚಾಪವ ।
ಸುತ್ತಲು ಕೋಪಿಸಿ ಕಾಡ್ಗಿಚ್ಚಂತೆ ಮುಸುಕುತಂ ॥೧೧೨॥

**ಭಾಮಿನಿ**

ವೀರವರರೀ ತೆರದ ಶರಮಳೆ ।
ಬೀರುತಲಿ ಮುಂಬರಿದು ಬರೆ ಧುರ ।
ಧೀರ ಪಾರ್ಥನು ತಡೆದು ಧನುಝೇಂಕರಿಸಿ ಸಮ್ಮುಖದೀ ॥
ಆರು ನಮ್ಮಯ ಹರಿಯ ಮಖಹಯ ।

ಚೋರನಭಿಮುಖನಾಗಲೆನ್ನುತ ।
ಘೋರ ಲಯಭೈರವನ ತೆರದಲಿ ನಿಲ್ಲಲತಿಬಲನೂ ॥೧೧೩॥

**ರಾಗ ಶಂಕರಾಭರಣ ಮಟ್ಟೆತಾಳ**

ವೈರಿನುಡಿಯ ಕೇಳಿ ಡಿಭಗ । ನಾರುಭಟಿಸುತಾ ॥
ಭೂರಿ ಸರಳನೆಸೆದು ಪೇಳ್ದ । ನಾರದೆನ್ನುತಾ ॥೧೧೪॥

ಧೀರ ನಿನ್ನ ಹಯವ ಬಿಗಿದ । ವೀರ ನಾನೆಲಾ ॥
ಶೂರನಾದಡೀಗ ಸತ್ವ । ತೋರಿ ಬಿಡಿಸೆಲಾ ॥೧೧೫॥

ಮಾರಪಿತನ ಸಖನು ಖ್ಯಾತ । ಮೂರು ಲೋಕದೀ ॥
ವೀರ ಪಾರ್ಥನೆನುವರೆಲ್ಲ । ಪೋರ ನಿಮಿಷದೀ ॥೧೧೬॥

ವಾರಿಜಾಕ್ಷನಧ್ವರಾಶ್ವ । ವೀ ರಣಾಗ್ರದೀ ॥
ಸಾರ ಸರಳಿನಿಂದ ಸೆಳೆವೆ । ಕ್ರೂರ ಸತ್ವದೀ ॥೧೧೭॥

ಕೇಳಿಬಲ್ಲೆ ಯಶವ ಗೋ । ಪಾಲ ಸೇವೆಯಾ ॥
ಹಾಲಿ ಮಾಳ್ಪ ಪಾರ್ಥನೆಂದು । ಬಾಲಿಶಾಶಯಾ ॥೧೧೮॥

ನೀಲಕಂಠ ಬರಲು ಹಯವ । ಕಾಳಗಾಗ್ರದೀ ॥
ಫಾಳಿ ಸೋಕಬಿಡೆನು ತನ್ನ । ತೋಳ ಸತ್ವದೀ ॥೧೧೯॥

ಖೂಳ ನಿನ್ನ ಗೆಲುವದೇಕೆ । ಶೂಲಪಾಣಿಯೂ ॥
ಕೀಲು ಮುರಿಯಲೇಕೆ ಪರಶು । ಚಾಲಬಯಕೆಯೂ ॥೧೨೦॥

ಮಾಲಲಾಮವೈರಿ ನಿನ್ನ | ಸೀಳಿ ಶರದಲೀ ||
ಬಾಲಭಾವ ತೋರ್ಪೆನೆನುತ | ಲೆಚ್ಚ ರಣದಲೀ ||೧೨೧||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ದುರುಳ ನೀ ನಮ್ಮ ವಾಜಿಯ । ಬಿಡ । ದಿರಲು ತೋರ್ಪೆನು ಕಾಲ ನಗರಿಯಾ ॥
ಮರುಳತನದಿ ನಮ್ಮ ಧುರದೊಳು । ನೀ । ಬರಿದೆ ಕೆಡುವೆ ಮಂದಮತಿಯೊಳೂ ॥೧೨೪॥

ಮಂದಮತಿಯ ತಾ ಧುರದಲ್ಲಿ । ಶರ । ವೃಂದದಿ ತೋರುವೆ ಜವದಲ್ಲಿ ॥
ನಂದಕಂದನ ವಾಜಿಪೃಷ್ಠದಿ । ನೀ । ಬಂದು ನುಡಿವದ್ಯಾವ ಶೌರ್ಯದಿ ॥೧೨೫॥

ಹುಚ್ಚರಂದದಿ ಲೋಕಸ್ವಾಮಿಯ । ನೀ । ತುಚ್ಛೀಕರಿಸಲೀಗ ಜಿಹ್ವೆಯಾ ॥
ಬೆಚ್ಚದ ಛೇದಿಪೆ ನೋಡೀಗ । ನಮ । ಗಚ್ಚುತ ಸೇವೆಯೆ ಲೇಸೀಗಾ ॥೧೩೬॥

ಇಂತು ಮಾತಾಡುತ್ತ ರೋಷದಿ | ಬಲ | ವಂತರೀರ್ವರು ಕಾದಲ್ ಶೌರ್ಯದಿ ||
ಪಂಥದಿ ಸೋಲುತ್ತ ಹಂಸನು | ತ್ರಿಪು | ರಾಂತಕಗಣಗಳ ನೆನೆದನೂ ||೧೨೭||

**ಭಾಮಿನಿ**

ಆರ್ತನಿನದವ ಕೇಳುತೀರ್ನಾಲ್ |
ಮೂರ್ತಿದೇವನ ಪ್ರಥಿತಗಣಗಳು |
ತೂರ್ತದಲಿ ಬಂದಾಗ ಕುಂಡೋದರ ವಿರೂಪಾಕ್ಷಾ ||
ಸಾರ್ಥನಾಮರು ಬರುತ ರಣದಿಂ |
ದಾರ್ತಿಗೊಂಡಿಹ ಹಂಸನಿದಿರೊಳ |
ಗರ್ತಿಯಲಿ ಭೋರ್ಗುಟಿಸಿ ಕೇಳ್ದರು ನೆನೆದುದೇಕೆನುತಾ ||೧೨೮||

**ಕಂದ**

ಈತನ ರಣದೊಳು ಸೋಲಿಸಿ |
ಖ್ಯಾತಿಯನಿಂದೆನಗರ್ಪಿಸಲೋಸುಗ ನಿಮ್ಮಂ ||
ಆತುರದಲಿ ಕರೆದೆನು ಧುರ |
ಭೀತಿಯ ಪರಿಹರಿಸಲೆನಗಾಪುದು ಸುಪ್ರೇಮಂ ||೧೨೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಖೂಳನೆಂದುದ ಕೇಳಿ ಗಣಗಳು | ಕಾಳಗಕೆ ವೀಟಿಕೆಯಗೊಳ್ಳುತ |
ಕಾಳಭೈರವನಂತೆ ಗರ್ಜಿಸಿ | ಬಾಲರವಿಯ ||೧೩೦||

ಮೇಲೆ ಕಗ್ಗತ್ತಲೆಯ ತೆರದಿ ವಿ | ಶಾಲಭುಜ ಮಾರುತಿಯ ಮುಸುಕಲ್ |
ಗೋಳುಗುಡಿಸುತ ಭೀಮ ಬಂದನು | ಕಾಲನಂತೆ ||೧೩೧||

**ರಾಗ ಕಾಂಭೋಜಿ ಮಟ್ಟೆತಾಳ**

ಭೀಮನಾಗ ಗದೆಯ ತಿರುಹುತೆಂದ ನಿಮ್ಮಯ |
ಸ್ವಾಮಿಯನ್ನು ಬಿಡುತ ಬಂದುದ್ಯಾಕೆ ನಮ್ಮಯಾ ||
ಈ ಮಹಾದ್ಭುತದ ಗದೆಯ ಹತಿಯ ತಿಳಿಯದೆ |
ಕಾಮಿಸುವಿರಿ ಧುರವ ಬರಿದೆ ಜಯವು ದೊರಕುದೇ ||೧೩೨||

ಘಡಘಡೆಂದು ಪೇಳ್ದರಾಗ ಭೂತಗಣಗಳು |
ಕಿಡಿಯನುಗುಳಿ ಜಗವ ನುಂಗುವಂತೆ ಭರದೊಳೂ ||
ಮೃಡನ ಭಕ್ತನನ್ನು ಕೆಡಹೆ ಬಿಡೆವು ಧುರದಲಿ |
ತೊಡಕಿ ನಮ್ಮ ಗೆಲುವರಾರು ಮೂರು ಜಗದಲೀ ||೧೩೩||

ಎಂದ ನುಡಿಯ ಕೇಳಿ ಭೀಮನಂದು ಕೋಪದಿ ।
ಕುಂದದಾಗ ಪಿಡಿದು ಭೂತಗಳನು ನಿಮಿಷದೀ ॥
ಮುಂದೆ ಮಸಣವನ್ನು ಸಾರಿರೆಂದು ಶಿರದಲೀ ।
ಚಂದದಿಂದ ತಿರುಹಿಬಿಸುಟನಾಗ ಕ್ಷಣದಲೀ ॥೧೩೪॥

**ಭಾಮಿನಿ**

ಭೂತಗಣಗಳ ಭೀಮನಾಕ್ಷಣ ।
ಭೀತಿಯಿಲ್ಲದೆ ತಿರುಹಿ ಬಿಸುಡಲು ।
ನಾಥರಿಲ್ಲದೆ ಹಂಸ ನಡುಗುತ ಭಯದಿ ಬೊಬ್ಬಿರಿದೂ ॥
ಘಾತಿಪನು ದಿಟವೀತನೆಂದು ನಿ ।
ಕೇತನವ ಸೇರುವೆನು ತಾನೆಂ ।
ದಾತುರದೊಳವ ನೋಡೆ ಭೀಮನು ಕಚದೊಳೆಳೆತಂದೂ ॥೧೩೫॥

**ರಾಗ ಶಂಕರಾಭರಣ ರೂಪಕತಾಳ**

ಎಲ್ಲಿಗೆ ಪೋಪೆಯೊ ಕ್ಷತ್ರಿಯ । ರಲ್ಲಿ ನೀನ್ಯಾತಕೆ ಜನಿಸಿದೇ ॥
ಬಲ್ಲವರೋಡುವರೆನುತಲಿ । ಬಿಲ್ಲಲಿ ತಿವಿದೆಂದಾ ॥೧೩೬॥

ಇಂದಿರೆಯರಸನ ಜಗದೊಳು । ನಿಂದಿಪ ನಿನ್ನಯ ಜಿಹ್ವೆಯ ॥
ಚಂದದಿ ಛೇದಿಸಿ ಕುಕ್ಕುರ । ದಂದದಿ ಬಂಧಿಸುವೇ ॥೧೩೭॥

ಅಂದಿಲಿ ಹಂಸನು ಮರುಗುತ । ವಂದಿಸಿ ಭೀಮಗೆ ಪೇಳ್ದನು ॥
ನಂದನನಂದದಿ ತನ್ನಯ । ಕುಂದನು ನೀ ಕ್ಷಮಿಸೈ ॥೧೩೮॥

ಕೊಡುವೆನು ಕಪ್ಪವನೆನುತಲಿ । ತಡಗೈಯದೆ ವಾಜಿಯ ಕರ ॥
ದೊಡಗೂಡುತ ತಾ ತರಿಸುತ । ಲಡಿಯೊಳಗರ್ಪಿಸಲೂ ॥೧೩೯॥

**ಭಾಮಿನಿ**

ನಡಿಯೆಲಾ ಯೆಲ ಹೇಡಿ ಗೃಹಕೆ ।
ಮ್ಮೊಡೆಯ ಕೃಷ್ಣನ ನಾಮ ಪೇಳುತ ।
ಪೊಡವಿಯೊಳು ಬದುಕೆಂದು ಕಳುಹುತ ಭೀಮ ಮೋದದಲೀ ॥
ಸಡಗರದಿ ಫಲುಗುಣನ ಕರೆವುತ ।
ಜಡಜನಾಭನ ದಯದಿ ದಿಗ್ಜಯ ।
ವೆಡರಿರದೆ ಕೈಗೂಡಿತೆನುತಲಿ ನುಡಿದು ಪೊರಮಟ್ಟಾ ॥೧೪೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಉತ್ತರೆಯ ಸುತ ಕೇಳು ಶ್ರೀಪುರು । ಷೋತ್ತಮನ ಭಕ್ತರಲಿ ಜಗದಿ ಮಾ ।
ರುತ್ತಸುತನಿಂಗಾರು ಸಮರೆ । ನ್ನುತ್ತ ನುಡಿದ ॥೧೪೧॥

ಸಾದರದಿ ಭಜಿಸಿರ್ದ ಜನರಿಂ । ಗಾದಿಪುರುಷನ ದಯದೊಳಿವ ಮೋ ।
ಕ್ಷಾದಿ ಪುರುಷಾರ್ಥಗಳನೀವನು । ಮೋದದಿಂದ ॥೧೪೨॥

ರಾಜಸಂಘವ ಗೆಲಿದು ರತ್ನದ । ರಾಜಿಸಹಿತಲಿ ಭೂರಿ ವಿಭವದಿ ।
ಸೋಜಿಗದಿ ದ್ವಾರಕಿಗೆ ಬಂದರು । ವಾಜಿ ಸಹಿತ ॥೧೪೩॥

**ಭಾಮಿನಿ**

ವಸುಮತೀಶನೆ ಕೇಳು ಪವನಜ ।
ನೆಸೆವ ಹರಿಯಧ್ವರದ ಶಾಲೆಗೆ ।
ಕುಶಲದಿಂ ನರ-ಪುಷ್ಪಶರ-ಶಿನಿಸುತರ ಸಹ ಬಂದೂ ॥
ಋಷಿಕುಲದಿ ಶತಲಕ್ಷ ಚಂದ್ರನ ।
ಬಸಿವ ಚಂದ್ರಿಕೆಯಂತೆ ಶೋಭಿಪ ।
ಹಸಿತ ಶ್ರೀಹರಿಗೊಪ್ಪಿಸಲು ಹಯ ರತ್ನರಾಶಿಗಳಾ ॥೧೪೪॥

**ರಾಗ ಸೌರಾಷ್ಟ್ರ ಏಕತಾಳ**

ಶ್ರೀಲೋಲ ಕಂಡು ಭೀಮನ ಬೇಗದೊಳಗಾಗ । ಲಾಲಿಂಗಿಸುತ ಪೇಳ್ದ ಮುದದಿ ॥
ಕಾಳಗದೊಳು ನಿನಗೆಣೆಗಾಣೆ ವೀರರೊಳ್ । ಕಾಲ ಮೀರದೆ ತಂದೆ ಕರವ ॥೧೪೫॥

ಜಗಳದ ಶ್ರಮವಿಲ್ಲ ನಿನಗೆಂದು ಬಲ್ಲೆ ನಾ । ಹಗಲಧಿಪತಮ ತರಿವಂತೆ ॥
ಸುಗುಣರರ್ಜುನ ಮೊದಲರು ಬಳಲಿದರೆಂದು । ನಗುತ ಪೇಳಿದನು ಮಾಧವನು ॥೧೪೬॥

**ಭಾಮಿನಿ**

ಇನಿತು ಭೀಮಾದ್ಯರನು ದೇವಕಿ ।
ತನಯ ಮನ್ನಿಸಿ ಮುದದೊಳಿರಲಾ ।
ಕ್ಷಣದಿ ತೊಂಭತ್ತಾರು ವರುಷದವಂತಿದೇಶಜನೂ ॥
ತನುವ ಬಗ್ಗಿಸಿ ಬರುತ ಘಲಘಲ ।
ವೆನುತ ಕೈ-ಕಾಲ್-ತಲೆಯನೆತ್ತುತ ।
ಘನದಿ ಕೈಕೋಲೊತ್ತಿ ಕೂಗುತಲಾ ತೃಣಾವಹನೂ ॥೧೪೭॥

**ರಾಗ ಪೂರ್ವಿ ಅಷ್ಟತಾಳ**

ಬಂದನು ಪಾರ್ವ ಬಂದನೂ ॥ ಪಲ್ಲ ॥
ಶ್ರೀಗೋ । ವಿಂದನ ಸ್ಮರಿಸುತ
ಕುಂದಿದ ಮನದಿ ತಾ ॥ ಬಂದನು ॥೧೪೮॥

ಮಂದರೋದ್ಧರ ಮುಚು । ಕುಂದ ವರದ ಕೃಪಾ
ಸಿಂಧೊ ಯೆನ್ನನು ಮುದ । ದಿಂದ ರಕ್ಷಿಪುದೆಂದೂ ॥೧೪೯॥

**ರಾಗ ಮುಖಾರಿ, ಆದಿತಾಳ**

ಹಾಹಾ ನಾನಾರ ಪೇಳಲಿ । ಯೆನ್ನೊಡಲಳಲ । ಮಹಾಜ್ವಾಲೆಗೆ ಬಳಲಿ ॥ ಪಲ್ಲ ॥
ಮೋಹಿಸಿ ಸಂಸಾರಕೆ ಸಾಹಸದಿಂದ ವಿ ।
ವಾಹಿತ ಮೂರನೆ ಸ್ನೇಹದ ಸುದತಿಯ ।
ದೇಹಜ ಸುತಸಂದೋಹವನೊದುದ ॥ ಹಾಹಾ ನಾನಾರ ಪೇಳಲೀ ॥೧೫೦॥

**ಭಾಮಿನಿ**

ಅರ್ಜುನನೆ ಫಲುಗುಣನೆ ಪಾರ್ಥನೆ ।
ದುರ್ಜನರ ಶಿಕ್ಷಿಪ ಕಿರೀಟಿಯೆ ।
ಭರ್ಜಿಸಿದೆ ಹಾ ದುಃಖದಲಿ ನಾ ಶ್ವೇತವಾಹನನೇ ॥
ನಿರ್ಜರೇಂದ್ರನ ತರಳನರ ಧುರ ।
ಗರ್ಜನೆಗೆ ರಿಪು ಜಿಷ್ಣು ಕೃಷ್ಣನೆ ।
ದುರ್ಜಯನೆ ಹರಿ ಸವ್ಯಸಾಚಿ ಧನಂಜಯನೆ ನರನೇ ॥೧೫೧॥

ಸ್ತೋತ್ರಗಳ ಕೇಳ್ದಾಗ ವಿಪ್ರನ ।
ರಾತ್ರಿಚರರಿಪುಸುತನು ಹರುಷದೊ ।
ಳೀ ತ್ರಿಲೋಕದೊಳಾರು ತನಗಿದಿರೆಂದು ಗರ್ವದಲೀ ॥
ಧಾತ್ರಿ ಸುರನೆಡೆಗೈದು ವಸನದಿ ।
ನೇತ್ರಜಲಗಳನೊರಸುತಭಯವ ।
ಕ್ಷಾತ್ರತೇಜದೊಳಿತ್ತು ಭೋ ಭಯವೇನು ನಿಮಗೆನಲೂ ॥೧೫೨॥

**ರಾಗ ಕೇತಾರಗೌಳ ಅಷ್ಟತಾಳ**

ತ್ರಿದಶಾಧಿಪತಿಯ ಸಂಜಾತನ ನುಡಿ ಕೇಳು । ತದುಭುತ ಭಯದಿವಿಪ್ರಾ ॥
ಗದಗದ ಧ್ವನಿಯೊಳಗೊದರಿ ಮರುಗಿ ಬೀಳ । ಲಿದ ಪೇಳ್ದನರ್ಜುನನೂ ॥೧೫೩॥

ಎಲ ವೃದ್ಧ ಭಯವೇಕೆ ನುಡಿವುದೆನ್ನೊಡನೆಲ್ಲ । ವಿಳೆಯೊಳು ಬಿದ್ದು ನೀವೂ ॥
ಬಳಲುವದೇಕಿಂದು ಸಲಹುವೆ ತಾನೆನು । ತಳುವ ವಿಪ್ರನನೆತ್ತಲೂ ॥೧೫೪॥

ವಸುಧೇಶನೆಬ್ಬಿಸಲೆದ್ದು ನಡುಗಿ ವಿಪ್ರ | ಬಿಸುಸುಯ್ದು ನೆನೆ ನೆನೆದೂ ||
ಉಸುರಾಡಿ ಧೃತಿಗೊಂಡು ಪಾರ್ಥಗಾಶಿಷವಿತ್ತು | ಬೆಸಗೊಂಡನಾಕ್ಷಣದೀ ||೧೫೫||

ಭೂತಳದೊಳಗೆನ್ನ ಭೀತಿಯ ತರಿವ ವಿ | ಖ್ಯಾತರಾರಿಹರು ಪೇಳೂ ||
ನಾಥರ ಕಾಣದೆ ಬಾಯ ಬಿಡುತಲಿಂದ್ರ | ಜಾತ ನಿನ್ನೆಡೆಗೆ ಬಂದೇ ||೧೫೬||

ನುಡಿದ ಮಾತಿಗೆ ಮೂರ್ಜಗದ ಭಟನು ಕರ | ಪಿಡಿದು ವಿಪ್ರಗೆ ನಂಬಿಗೇ ||
ಕೊಡುತ ಪೇಳಿದ ಮೇರು ಶರಧಿಯೊಳ್ ತೇಲಲು | ದೃಢದಿ ಮಾಡುವೆ ಕಾರ್ಯವಾ ||೧೫೭||

ಕೊಟ್ಟ ಮಾತಿಗೆ ನೀನು ತಪ್ಪುವನಲ್ಲೆಂದು | ದಿಟ್ಟ ನಿನ್ನೆಡೆಗೆ ಬಂದೇ ||
ಕೃಷ್ಣರಾಮಾದ್ಯರಿಗರುಹಿದರೀ ಕಾರ್ಯ | ಕೆಟ್ಟು ಹೋಯಿತು ನೀ ನೋಡೂ ||೧೫೮||

ಕೃಷ್ಣ-ರಾಮರ ಪರಿಯಲ್ಲ ತನ್ನಯ ಶೌರ್ಯ | ದಿಟ್ಟತನವ ನೀ ನೋಡೂ ||
ವಿಷ್ಟಪದೊಳಗೆನ್ನ ಸರಿಯಾದ ಧುರಜಗ | ಜಟ್ಟಿಗಳೆಲ್ಲಿಹರೂ ||೧೫೯||

ಇದ ಕೇಳಿ ವಿಪ್ರನು ಮುದಗೊಂಡು ಬೆಸಗೊಂಡ | ಮುದುಕನೆನಗೆ ಮೂರನೇ ||
ಮುದುವೆಯ ಸತಿಯೊಳು ಮೂರು ಬಾಲರು ಪುಟ್ಟ | ಲದರೊದರ್ಯಾರೊ ಕಾಣೇ ||೧೬೦||

**ಭಾಮಿನಿ**

ವಾಸವನ ಸುತ ಕೇಳು ನಿನ್ನಯ |
ಭಾಷೆ ದಿಟ ಖರೆ ಸಹಜವೋ ದಿಗ್ |
ದೇಶದಲಿ ಜನರಿಂಗೆ ನೀನಪಹಾಸ್ಯನಾಗದಿರೈ ||
ಮಾಸವಿದು ಹತ್ತನೆಯದೆನ್ನಯ |
ಭಾಸುರಾಂಗಿಗೆ ನಾಲ್ಕನೆಯ ಬಸು |
ರೀಸು ತಾಮಸವಿಲ್ಲ ಜನನಕೆ ಸಲಹೊ ಗರ್ಭವನೂ ||೧೬೧||

**ರಾಗ ಭೈರವಿ ಏಕತಾಳ**

ದ್ವಿಜವರ ಪೇಳ್ದುದ ಕೇಳಿ | ಪಾಂ | ಡುಜನತಿ ರೋಷವ ತಾಳೀ ||
ನಿಜಭುಜಬಲದಿಂದಲೀಗ | ಲಾ | ತ್ಮಜನನ್ನು ಸಲಹುವೆ ಬೇಗಾ ||೧೬೨||

ಪೊರಡು ನೋಡುವದೀಗಲೆಂದು | ಧನು | ಶರವ ಬೇಗದಿ ಪಿಡಿದಂದೂ ||
ತರಳನ ಬದುಕಿಸಿಕೊಡುವೆ | ದಿಟ | ಹರುಷಗೊಳ್ಳುವದೀಗ ಬರುವೇ ||೧೬೩||

ವಾರಿಜಾಕ್ಷನು ನೋಡಿ ನಗುತ | ನರ | ವೀರ ಸಾಧ್ಯವೋ ನಿನಗೆನುತಾ ||
ಮೀರಬಾರದು ನುಡಿಯಿತ್ತು | ನಾ | ಸಾರಿ ಪೇಳಿದೆ ಬೇಡವಿನಿತೂ ||೧೬೪||

ಭೂಸುರ ಪೇಳಿದ ಬಿಡನು । ಖರೆ । ಲೇಸು ಯೋಚಿಸಿ ಪೋಗು ನೀನೂ ॥
ಪೂಶರ ರಾಮ ಕಾಮಜರ । ಬಿಡು । ತೋಷದಿ ಗಮಿಸು ಸಹಿತೆಲ್ಲರಾ ॥೧೬೫॥

**ಭಾಮಿನಿ**

ಕಪಟನಾಟಕನುಡಿಗೆ ಲಜ್ಜೆಯೊಳ್ ।
ವಿಪುಲ ಧೈರ್ಯವನಾಂತು ತವಕದಿ ।
ಶಪಥವನು ಗೈದೆಂದನರ್ಜುನನೀಗ ದ್ವಿಜಸತಿಯಾ ॥
ಅಪರಿಮಿತ ಸಾಹಸದಿ ಗರ್ಭವ ।
ನಪಹರಿಸದಿರ್ಪಂತೆ ರಕ್ಷಿಸ ।
ಲಪಟುವಾದಡೆ ವಹ್ನಿ ಕುಂಡವ ಪೊಗುವೆ ತಾನೆಂದಾ ॥೧೬೬॥

**ರಾಗ ಶಂಕರಾಭರಣ ರೂಪಕತಾಳ**

ಕುಂತಿಸುತನ ನುಡಿಯ ಕೇಳಿ । ಕಂತುತಾತ ತಲೆಯ ತೂಗ ॥
ಲಂತ ರಂಗದಲ್ಲಿ ವಿಪ್ರ । ಚಿಂತೆ ತೊರೆವುತಾ ॥೧೬೭॥

ತೋಷಶರಧಿಯೊಳಗೆ ತೇಲಿ । ವಾಸವಾತ್ಮಜಂಗೆ ಮಂಗ ॥
ಳಾಶೀರ್ವಾದ ಗೈದು ಪೇಳ್ದ । ಭಾಷೆ ನೆನಪಿಡೈ ॥೧೬೮॥

ಇನಿತು ಪೇಳಲಾಗ ಪಾರ್ಥ । ಧನುವ ಝೇಂಕರಿಸಿ ಬೇಗ ॥
ದನುಜರಿಪುಗೆ ನಮಿಸಿ ಸ್ಯಂ । ದನವನಡರುತಾ ॥೧೬೯॥

ವೀರ ಪಾರ್ಥ ರಥದಿ ವೃದ್ಧ । ನ್ನೇರಿಸುತ್ತ ಜವದಿ ಹಯವ ॥
ಹಾರಿಸುತ್ತ ಬಂದನವನಾ । ಗಾರದ್ವಾರಕೇ ॥೧೭೦॥

**ರಾಗ ಸಾಂಗತ್ಯ ರೂಪಕತಾಳ**

ಸ್ಯಂದನದಿಂದಿಳಿದು ಬಂದು ಪಾರ್ಥಗೆ ತನ್ನ । ಮಂದಿರದಲಿ ವಿಪ್ರವರನೂ ॥
ತಂದು ಪೀಠವನೀವುತುಚಿತದೊಳುಪಚರಿಸು । ತಂದಿಲಿ ಕರೆದ ತಾ ಸತಿಯಾ ॥೧೭೧॥

ಪತಿಯ ಶಬ್ದವಿದೆಂದು ತಿಳಿದು ಬೇಗದೊಳೇಳ । ಲತಿಶಯದುಃಖದಿ ಸತಿಯೂ ॥
ಪೃಥಿವಿಗೆ ಕೈಯೂರಿ ಭುಸುಭುಸುತೆನುತೆದ್ದು । ಪೃಥುಳಕಟಿಗೆ ಕರವಿಡುತಾ ॥೧೭೨॥

ಪೊರಟು ಮೆಲ್ಲನೆ ಬರುತಾಗ ಕಾಣುತ ಪತಿ । ಕೊರಳನಪ್ಪುತ ರೋದಿಸಿದಳೂ ॥
ಹರಹರ ತನಗೇಕೆ ಗರ್ಭ ಸಂಜನಿಸಿತು । ಬರಿದೆ ಯೌವನ ಸರಿಯಾಯ್ತೂ ॥೧೭೩॥

ಮೂರು ಮಕ್ಕಳ ಪೊತ್ತುತೀ ರೀತಿ ಬಳಲಿ ಬಾ । ಯಾರಿ ಕೂಗಿದರು ನೀವೆನ್ನಾ ॥
ಘೋರ ದುಃಖವ ಪರಿಹರಿಸುವ ವೀರರನು । ಸೇರದೆ ಕುಳಿತೇನು ಫಲವೂ ॥೧೭೪॥

ಪುಟ್ಟಿದ ಮಕ್ಕಳನೊಂದೂ ಕಾಣದ ದುರ | ದೃಷ್ಟಳಾಗಿಹೆನಲ್ಲ ತಾನೂ ||
ಅಷ್ಟರೊಳಗೆ ಯಾವ ದಿಟ್ಟರೊವರೊ ಕಾಣೆ | ಸೃಷ್ಟಿಯೊಳ್ ಪುಟ್ಟೇನು ಫಲವೂ ||೧೭೫||

ಮರುಗುವ ಸತಿಯ ಕಂಬನಿಯನೊರಸಿ ವೃದ್ಧ | ತರಳೆ ದುಃಖಿಸಬೇಡ ಬರಿದೇ ||
ಹರಿಯ ಭಾವನ ಕರತಂದೆ ನಿನ್ನಯ ದುಃಖ | ಪರಿಹರಿಸಲು ಧೀರಳಾಗೇ ||೧೭೬||

ಇವನ ಪೋಲುವ ವೀರರನು ಕಾಣೆ ರಮಣಿ ತ್ರಿ | ಭುವನೇಶಜಾತನೆಂದೆನಲೂ ||
ದಿವಿಜ ಪಾಲಕ ಕೃಷ್ಣ-ರಾಮಾದ್ಯರಿದಕಂಜ | ಲವನ್ಯಾಕೆ ಬರಿದೆಂದಳವಳೂ ||೧೭೭||

ಧಿಕ್ಕಾರನುಡಿ ಕೇಳಿ ಪಾರ್ಥ ಕೋಪಿಸಿ ಸಿಂಹ | ಘಕ್ಕನೆಂಬಂತೆ ಗರ್ಜಿಸುತಾ ||
ಚಿಕ್ಕ ಹುಡುಗಿ ನಿನ್ನ ಸೊಕ್ಕಿನ ನುಡಿ ಸಾಕು | ಹಕ್ಕಿವಾಹನ-ರಾಮರಿರಲೀ ||೧೭೮||

ಪುಟ್ಟಿದ ಮಗುವ ಕೊಂಡೊಯ್ಯಲು ಬಿಡೆ ಬಾಣ | ವೃಷ್ಟಿ ಗೈಯುತ ದಿಗ್ಬಂಧನದೀ ||
ದಿಟ್ಟತನದಿ ನಿನ್ನ ತರಳನುಳಿಸದಿರೆ | ಕೊಟ್ಟ ಭಾಷೆಯ ಕೇಳೆ ಪತಿಯಾ ||೧೭೯||

**ಭಾಮಿನಿ**

ಸುರಪಜನ ನುಡಿಗೆಂದ ವಿಪ್ರನು |
ತರುಣಿ ಕೇಳ್ ಫಲುಗುಣನು ನಿನ್ನಯ |
ತರಳನಂ ಬದುಕಿಸಲು ಶಪಥವ ದಿಟದಿ ಗೈದಿಹನೂ ||
ಸರಸಿಜಾಂಬಕಿ ಹರುಷಗೊಳುತಿರ |
ಉರುತರದ ವೇದನೆಯ ಮೊಳಕೆಯು |
ಭರದೊಳುದ್ಭವಿಸಲ್ಕೆ ತಾ ಕಂಗೆಟ್ಟಳೇನೆಂಬೇ ||೧೮೦||

**ರಾಗ ಪಂಚಗಾತಿ ಮಟ್ಟೆತಾಳ**

ಅಷ್ಟರೊಳಗೆ ವಿಪ್ರ ಸುದತಿ | ಕಷ್ಟಗಳನ್ನು ನೋಡಿ ಭರದೊ |
ಳಿಷ್ಟ ಭೇಷಜಂಗಳನ್ನು | ಥಟ್ಟನೊದಗಿಸೀ ||
ಥಟ್ಟನೊದಗಿಸುತ್ತ ಪೇಳ್ದ | ದಿಟ್ಟ ಪಾರ್ಥನೆಲವೊ ತನ್ನ |
ಪುಟ್ಟ ತರುಣಿಗೀಗ ಪ್ರಸವ | ದಿಟ್ಟ ವದಗಿತೂ ||೧೮೧||

ಎಂತು ಸಹಿಪೆನಯ್ಯೊ ತಾನಿ | ನ್ನಿಂಥ ವೇದನೆಯನಬಲೆ |
ಗಿಂತು ಕುಂತದೊಳಗೆ ಕುಕ್ಷಿ | ಯಂತರಂಗಕೇ ||
ಅಂತರಂಗಕೀಗ ತಿವಿ | ದಂತೆ ಪೇಳಲರಿಯದ ದು |
ರಂತ ದುಃಖವಮ್ಮ ಜಠರ | ಜಂತು ಭೂತವೋ ||೧೮೨||

ಸುತವಿಹೀನ ಸುದತಿಯರಿಗೆ | ಗತಿಯೆ ಯಿಲ್ಲವೆನುತ ಶಾಸ್ತ್ರ |
ತತಿಯು ಪೇಳ್ವದಲ್ಲ ಮನದ | ವ್ಯಥೆಯ ಖಂಡಿಸೋ ||

ವ್ಯಥೆಯ ಖಂಡಿಸಯ್ಯೊ ಶಿವನೆ । ಮತಿವಿಮೂಢಳಾಗಿ ಯೋಗ್ಯ ।
ಪಥವ ಕಾಣದಿಹೆನು ಗೌರಿ । ಪತಿಯೆ ರಕ್ಷಿಸೋ ॥೧೮೩॥

ಹತ್ತುಮಾಸ ಗರ್ಭವನ್ನು । ಪೊತ್ತು ತುದರದಲ್ಲಿ ದೇಹ ।
ಸತ್ವ ಗುಂದಿತಾದರೀಗ । ಪುತ್ರನುದಿಸುವಾ ॥
ಪುತ್ರನುದಿಪನೆಂದು ತನ್ನ । ಚಿತ್ತದೊಳಗೆ ತೋಷವಿಲ್ಲ ।
ಕೃತ್ತಿವಾಸನಯ್ಯೊ ಸುತನ । ದೃಪ್ತನೊಯ್ಯುವಾ ॥೧೮೪॥

ಆರ ಪೇಳಲೆನುತ ಪತಿಯ । ನಾರಿಮಣಿಯು ಕರದು ಕೊರಳ ।
ಬಾರಿಬಾರಿ ಪಿಡಿದು ಮುಖಕೆ । ಮೋರೆ ಚಾಚುತಾ ॥
ಮೋರೆ ಚಾಚಿ ಮರುಗಿ ಪೇಳ್ದ । ಳಾ ರಮೇಶಭಾವನಿಂಗೆ ।
ಭೂರಿ ಕಾಲವಿಲ್ಲವೆನುತ । ಸಾರಿ ಬನ್ನಿರೀ ॥೧೮೫॥

ವಲ್ಲಭೆ ಮರುಗಲಿನಿತು ಜಠರ । ವಲ್ಲಿ ಗರ್ಭ ತಿರುಗಿ ತಲೆಯ ।
ಮೆಲ್ಲಮೆಲ್ಲಗಾಗ ತೋರ । ಲಲ್ಲಿ ವಿಪ್ರನೂ ॥
ಇಲ್ಲಿ ವಿಪ್ರ ಭಯದಿ ನರಗೆ । ತಲ್ಲಣಿಸುತ್ತ ಪೇಳೆ ಬಿಲ್ಲಿ ।
ನಲ್ಲಿ ಶರವತೊಟ್ಟು ಭವನ । ಕೆಲ್ಲ ಪಂಜರಾ ॥೧೮೬॥

ಪಂಜರವನು ಮಾಡಿ ಸರಳ । ಪುಂಜದಿಂದ ಗೃಹಕೆ ಸುತ್ತು ।
ತಂಜದಂತೆ ಧೈರ್ಯ ಪೇಳಿ । ರಂಜಿಸುತ್ತಲೀ ॥
ರಂಜಿಸುತ ಪೇಳಲಾಗ । ಮಂಜುಳಾಂಗಿ ಸುತನ ಹೆರಲು ।
ಕಂಜನಾಭಭಟರು ಮಾಯ । ಪುಂಜದಿಂದಲೀ ॥೧೮೭॥

**ಭಾಮಿನಿ**

ವಂಚಿಸುತ ಮಗುವನ್ನು ನಭದಲಿ ।
ಕೊಂಚ ನಿಲ್ಲುತ ಹೂಂಕರಿಸೆ ಪ್ರ ।
ಪಂಚ ನಡುಗಲು ಪಾರ್ಥ ಶರ ಬಿಡೆ ವ್ಯರ್ಥವಾಗಿರಲೂ ॥
ಉಂಛವೃತ್ತಿಯ ವಿಪ್ರ ಶಿಶು ಗೃಹ ।
ಸಂಚರಿಪ ನಾರಿಯರ ಕೇಳಲು ।
ವಂಚಿಸಿದರು ಹಾ ಶಿಶುವನೆನುತಿರೆ ದ್ವಿಜನು ನರಗೆಂದಾ ॥೧೮೮॥

**ರಾಗ ಶಂಕರಾಭರಣ ರೂಪಕತಾಳ**

ಹರಿಯ ಭಾವ ನೀನೆನುತ್ತ । ಕರೆಯಲೆನಗೆ ಫಲವಿದೇನೊ ॥
ನರನೆ ನಾರಿಯಂತೆ ಕುಳಿತೆ । ತರಳನೊಯ್ಯಲೂ ॥೧೮೯॥

ಖಾಂಡವಾಖ್ಯ ವನವ ಸೂರೆ | ಗೊಂಡು ದಹಿಸಲಗ್ನಿ ಸುರರ ||
ಮಂಡಲಾಧಿಪರನು ಗೆಲ್ದ | ಪುಂಡ ನೀನೆಲಾ ||೧೯೦||

ಇನಿತು ಜರೆಯಲಾಗ ಪಾರ್ಥ | ಮನದಿ ಚಿಂತಿಸುತ್ತ ಪೇಳ್ದ ||
ಕ್ಷಣದಿ ತರುವೆನೀಗ ನಿಮ್ಮ | ತನಯನೆನುತಲೀ ||೧೯೧||

ಕೌಶಿಕಾಖ್ಯ ವಿದ್ಯದಿಂದ | ತಾಸಿನೊಳಗೀರೇಳು ಲೋಕ ||
ವೀಸು ಬಿಡದೆ ಹುಡುಕಿ ತಂದು | ಭಾಷೆ ಸಲಿಸುವೇ ||೧೯೨||

**ವಾರ್ಧಕ**

ಕ್ಷೋಣಿಪತಿ ಕೇಳಾಗ ಶ್ವೇತವಾಹನ ಮನದಿ |
ಧ್ಯಾನಿಸುತ ಶುಚಿಯೊಳಗೆ ಕೌಶಿಕರು ದಶರಥನ |
ಸೂನುಗಳಿಗುಪದೇಶವಿತ್ತ ಮಂತ್ರವ ಜಪಿಸಿ ನಭಕಡರಿ ಪೋಗುತಿರಲೂ ||
ಶಾಣೆತನದೀರೇಳು ಭುವನಗಳನೆಡೆಬಿಡದೆ |
ಕಾಣಲಾ ಶಿಶು ತೋರದಾ ನರಾಧಿಪನಧಿಕ |
ದೀನಭಾವದಿ ವಿಪ್ರಗೃಹಕೈದಿ ಚಿಂತಿಸುತ ಪೇಳಲೀ ಸ್ಥಿತಿಯನವನೂ ||೧೯೩||

**ಕಂದ**

ಫಲುಗುಣ ನುಡಿಯಲ್ಕಾ ದ್ವಿಜ |
ವಿಲಯದ ಧೂರ್ಜಟಿಯಂತಾರ್ಭಟಿಸುತಲಾಗಳ್ ||
ನಲಿಯುತ ರೋಷದಿ ತಾವೆ |
ಗ್ಗಳಿಕೆಯ ನಿಂದಿಸುತಾ ನರವೀರನ ಜರೆಯಲ್ ||೧೯೪||

**ಭಾಮಿನಿ**

ಎಲವೊ ವಿಪ್ರರೆ ಜರೆದು ಬಹುಪರಿ |
ಫಲವು ನಿಮಗೇನೀಗ ಬನ್ನಿರಿ |
ಜಲಜನೇತ್ರನ ಬಳಿಗೆ ಪೋಗುವಸಲಹದಿರಲವನೂ ||
ಚಲುವ ದೇಹವನಿತ್ತು ಭಾಷೆಯ |
ಸಲಿಸುವೆನು ದಿಟವೆಂದು ಪೇಳುತ |
ಫಲುಗುಣನು ದ್ವಿಜಸಹಿತ ಹರಿಯೆಡೆ ಬರೆ ಮುಖಜನೆಂದಾ ||೧೯೫||

**ರಾಗ ಸೌರಾಷ್ಟ್ರ ಆದಿತಾಳ**

ಹರಿಯ ಬಳಿಗೆ ಬಂದಂತಾಯ್ತು | ತರಳನನ್ನು ತೋರಿಸಯ್ಯ ||
ಬರಿದೆ ಕಾಲಹರಣವ್ಯಾಕೆ | ಶರಗೊಡ್ಡಿ ಕೇಳ್ವೇ ||೧೯೬||

ಮಾತು ಕೊಟ್ಟು ಸಲಿಸದಿರುವ । ಪಾತಕಿ ಗಾಂಡೀವವೇಕೆ ॥
ಭೂತಳದೊಳೆಲ್ಲ ನಿನ್ನ । ಖ್ಯಾತಿ ಮೆರೆಸುವೇ ॥೧೯೭॥

ಮೋಸಗಾರನೆಂದು ತಿಳಿಯ । ದಾಶೆಯಿಂದ ಬಂದುದಕ್ಕೆ ॥
ಭಾಷೆ ಕೊಟ್ಟು ತಪ್ಪಿ ನಡದೆ । ಲೇಸು ಪೋಪೆನೈ ॥೧೯೮॥

**ಭಾಮಿನಿ**

ಸಿಟ್ಟಿನಲಿ ನಡನಡುಗಿ ಪೋಗುವ ।
ದಿಟ್ಟ ವಿಪ್ರನ ತಡೆದು ಹರಿ ತಾ ।
ನೆಷ್ಟು ಪೇಳಲು ಕೇಳದಿರೆ ಹರಿ ಯಾದವರ ಸಹಿತಾ ॥
ಜಿಷ್ಣು ವಿವನೇನೈವನೆನುತ ಕಿ ।
ಬ್ಬೆಟ್ಟಿನಲಿ ನಗ ಪೊತ್ತವನು ತ ।
ನ್ನಷ್ಟ ಕಿರುತಿರಲಾಗಲೀ ಪರಿ ಪಾರ್ಥ ಶೋಕಿಸಿದಾ ॥೧೯೯॥

**ರಾಗ ನೀಲಾಂಬರಿ, ಆದಿತಾಳ**

ಇಂದ್ರಜಾತನಂದು ವಿಪ್ರ । ನೆಂದ ನುಡಿಗೆ ಮನದೀ ॥
ನೊಂದು ಪೇಳ್ದನಿನಿತು ಜಗದಿ । ಕುಂದು ಬಂದಿತಕಟಾ ॥೨೦೦॥

ಸರಳಪಂಡಿತನ್ನ ಸೇರಿ । ವರ ಮಹಾಸ್ತ್ರ ಕಲಿತೇ ॥
ಪರಮವಿದ್ಯವಿಂತು ವ್ಯರ್ಥ । ವರಿಯ ಕಾಣೆನಯ್ಯೋ ॥೨೦೧॥

ಕುಂತಿಯುದರದಲ್ಲಿ ಜನಿಸು । ತಿಂಥ ವಿಧಿಯು ಬಂತೇ ॥
ಪಂಥದಿಂದ ಗೆಲಲು ವೈದ । ಹೊಂತಕಾರಿ ಯಾರೋ ॥೨೦೨॥

ಭಾವ ಹರಿಯ ಮರೆತುದಕ್ಕೆ । ಈ ವಿಧಿಯಾತು ದಿಟವೂ ॥
ಕಾವರ್ಯಾರ ಬೇರೆ ಕಾಣೆ । ಹೇ ವಾರ್ಧಿಜೆಪ್ರಿಯನೇ ॥೨೦೩॥

ತಂಗಿಯನ್ನು ಕೊಟ್ಟು ತನ್ನ । ಭಂಗ ನೋಳ್ಪುದೇನೋ ॥
ರಂಗ ಕೃಷ್ಣ ದ್ವಿಜಗೆ ನುಡಿದ । ತುಂಗಭಾಷೆ ಸಲಿಸೋ ॥೨೦೪॥

ಗಂಡುಸಾಗಿ ನುಡಿದ ಭಾಷೆ । ಖಂಡಿಸೀಗ ಹೋಯ್ತೂ ॥
ಚಂಡಶೌರ್ಯ ಪೋಗಲಗ್ನಿ । ಕುಂಡ ಯೋಗ್ಯವಹುದೂ ॥೨೦೫॥

**ಭಾಮಿನಿ**

ಎಂದು ಮರುಗುತ ಪಾರ್ಥ ವಿಶಿಖದೊಳ್ ।
ಕುಂದದಗ್ನಿಯ ಕುಂಡಗೈವುತ ।

ಮಂದರವ ಪೊತ್ತವನೆ ಸಲಹೆಂದಾಗ ಭಕ್ತಿಯಲೀ ॥
ಒಂದೆರಡು ಬಾರಿ ಪ್ರದಕ್ಷಿಣೆ ।
ಬಂದು ಬೀಳುವೆನೆನುವ ಸಮಯದಿ ।
ಇಂದಿರೇಶನು ಸುತನ ಸಹಿತಲಿ ತಡೆದು ಬಿಗಿದಪ್ಪೀ ॥೨೦೬॥

**ರಾಗ ಭೈರವಿ ಅಷ್ಟತಾಳ**

ಏನಯ್ಯ ಪಾರ್ಥ ಏನಯ್ಯಾ   ॥ ಪಲ್ಲ ॥

ಏನಯ್ಯ ಪಾರ್ಥ ನೀನೀಗ ವಹ್ನಿಯ ಕುಂಡ ।
ಏನು ಕಾರಣ ಗೈದೆ ಮೂರ್ಲೋಕಚಂಡಾ ॥ ಏನಯ್ಯಾ ॥ ॥ ಅನು ಪಲ್ಲವಿ ॥

ದ್ವಿಜನಸಂತತಿಯುಳಿಸಲು ಪೋದ ವೀರನು ।
ಭುಜಪರಾಕ್ರಮ ತೋರ್ದುದೇನು ವಿಖ್ಯಾತನೂ ॥
ನಿಜವಾರ್ತೆ ಪೇಳದೆ ಮಾಡುತಗ್ನಿಯ ಕುಂಡ ।
ಭಜಿಸುವೆ ಬಲು ವೀರ ಸರಿಯೇನುದ್ದಂಡಾ ॥೨೦೭॥

ಹರಿಯ ಮಾತಿಗೆ ಪಾರ್ಥ ಲಜ್ಜೆಯೊಳರುಹಿದ ।
ನರಿತವರ್ ಯಾರ್ ನಿನ್ನ ಮಹಿಮೆಯ ಗೋವಿಂದಾ ॥
ಬರಿದೆ ಯತ್ನಗಳೆಲ್ಲ ನಿನ್ನ ದಯದಿ ವೀರ ।
ಉರಿಯೊಳು ಬಿದ್ದೀಗ ಭಾಷೆ ತೀರ್ಪುದೆ ವರಾ ॥೨೦೮॥

ಲೇಸಾಯ್ತು ಭಾವಯ್ಯ ಸಾಕು ಸಾಹಸವಯ್ಯ ।
ಆಶಿಸುತೊದೆ ನೀ ತಂಗಿಯನಯ್ಯಾ ॥
ಈ ಸೂಕ್ಷ್ಮಕಾರ್ಯಕ್ಕೆ ದೇಹ ದಹಿಸೆ ಬಂಧು ।
ಪಾಶ ಬಿಡದು ದಿಟ ತನಗಿಂದು ಕುಂದೂ ॥೨೦೯॥

**ಭಾಮಿನಿ**

ಮರುಳೆಲಾ ಯೆಲ ಪಾರ್ಥ ಸುಮ್ಮನೆ ।
ಬರಿದೆ ಶೋಕಿಸಲೇಕೆ ನೀ ಬಿಡು ।
ಹರ ವಿರಿಂಚಾದಿಗಳು ಬಲ್ಲರೆ ತನ್ನ ಲೀಲೆಗಳಾ ॥
ಭರದಿ ಪೊರಡೀಗೆನುತ ರಥವನು ।
ತರಿಸಿ ವಿಪ್ರಾರ್ಜುನರ ಸಹಿತಲಿ ।
ಹರಿಯು ತಾನೇರುತ್ತ ಸೌತ್ಯವ ನರನೆ ಮಾಡೆನಲೂ ॥೨೧೦॥

**ವಾರ್ಧಕ**

ಗರುಡವಾಹನ ನುಡಿಗೆ ಫಲುಗುಣನು ವಾಘೆಯಂ ।
ಭರದಿ ಕೈಗೊಳ್ಳೆ ರಥ ಉತ್ತರಕೆ ಹಾರಿಸೆನೆ ।
ಹರಿಸುತನು ನಡಿಸುತ್ತಲೇಳು ವಾರಿಧಿ ದಾಟಿ ಸ್ವರ್ಣಮಯ ಭೂಮಿಗಳನೂ ॥
ಚರಿಸುತಲಿ ವಜ್ರಾದಿಲೇಪಿತದ ದೇಶಗಳು ।
ಕರಿದಂಧಕಾರಗಳ ನರ ನೋಡಿ ಬೆರಗಾಗೆ ।
ಹರಿ ಚಕ್ರದಿಂದಲದ ಕತ್ತರಿಸಿ ತೋರಿಸಿದ ವರಘನೋದಕದ ಸಿರಿಯಾ ॥೨೧೧॥

ಘನಜಲವನುತ್ತರಿಸಿ ಪರಮಪುರುಷನು ತನ್ನ ।
ಮಣಿಮಯೋಜ್ವಲದನಂತಾಸನವ ಕಂಡು ಸ್ಯಂ ।
ದನದಿಂದಲಿಳಿಯುತ್ತ ವಿಪ್ರ-ಪಾರ್ಥರ ನಿಲಿಸಿ ನಿಜಭವನವಂ ಪೋಗುತಾ ॥
ವನಜನಾಭನು ಮೂಲರೂಪದಿಂದೈಕ್ಯವ ।
ನ್ನನುಕರಿಸಿ ದಿನನಾಥಕೋಟಿ ದೀಧಿತಿಯಿಂದ ।
ಲನುಪಮದ ವೈಭವವನೀರ್ವರಿಗೆ ತೋರಿಸಲ್ ಬೆರಗಾದರವರು ನೋಡೀ ॥೨೧೨॥

**ಭಾಮಿನಿ**

ದಕ್ಷ ಪಾರ್ಥನು ಭಕ್ತಿಯಲಿ ತಾ ।
ಪಕ್ಷಿವಾಹನಗೆಂದ ತನ್ನಯ ।
ಅಕ್ಷಯಪರಾಧವನು ಕ್ಷಮಿಸೆನ್ನುತ್ತ ಬೀಳ್ಕೊಂಡೂ ॥
ಕುಕ್ಷಿಯಲಿ ಬೊಮ್ಮಾಂಡವನು ಮಾ ।
ವಕ್ಷ ಧರಿಸುತ ಪೊರೆವ ದೊರೆ ತ ।
ನ್ನಕ್ಷಿ ಗೋಚರನಾದೆಯೆನುತಿರೆ ಹರಿಯು ನಗುತಾಗಾ ॥೧೧೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅದುಭುತದ ಮೋಹವನು ಬಿಡುತಲಿ । ಯದುಕುಲೇಶನ ನುತಿಸೆ ಹರಿ ಪಾ ॥
ರ್ಷದರ ಗಡಣದ ನಾಲ್ಕು ಶಿಶುಗಳ । ಮುದದಿ ತಂದು ॥೧೧೪॥

ಜಡಜನೇತ್ರನು ನಾಲ್ಕು ತರಳರೊಳ್ । ಕಡೆಯ ಸುತತನ್ನೊಂದು ಕರದಲಿ ॥
ಬುಡದ ಮೂವರ ಮೂರು ಕರದೊಳು । ಪಿಡಿದು ತಂದೂ ॥೧೧೫॥

ಶೇಷಶಯನನು ಕೊಡುತ ಪಾರ್ಥಗೆ । ಭಾಷೆ ಪೂರೈಸೆನುತ ಪೇಳಲು ॥
ವಾಸವಾತ್ಮಜನಿತ್ತು ನಾಲ್ವರ । ಭೂಸುರಂಗೇ ॥೧೧೬॥

ಕೊಟ್ಟ ಭಾಷೆಯು ತೀರಿತೆಂದನು । ವಷ್ಟರಲಿ ಮುಖಜೇಂದ್ರ ತರಳರ ॥
ತೊಟ್ಟು ಮುದ್ದಿಡುತೆಂದ ನೀ ಜಗ । ಜಟ್ಟಿಯೆನುತಾ ॥೧೧೭॥

ಒಂದಕಿದು ನಾಲ್ಕಾಯ್ತು ಶಕ್ರನ | ಕಂದ ಸರಿ ನಿನಗಾರು ದೀನರ ||
ಬಂಧು ಖರೆ ನೀನಾಪೆ ರಾಜರ | ವೃಂದಕಧಿಪಾ ||೧೧೮||

ಗೋತ್ರ ರಿಪುಸುತ ಕೇಳು ನಿನ್ನಯ | ಪೌತ್ರನಿಗೆ ಬರೆ ಬ್ರಹ್ಮಶರಭಯ ||
ಈ ತ್ರಿಧಾಮನು ತೆಗೆದು ಸಲಹಲಿ | ಕ್ಷಾತ್ರಕುಲವಾ ||೧೧೯||

**ಭಾಮಿನಿ**

ನರನು ವಿಸ್ಮಿತನಾಗಿ ಕೇಳಿದ |
ತರಳರಿವರಾರರುಹು ಭೂಮಿಗೆ |
ಬರಲು ಕಾರಣವೇನು ಪುಟ್ಟಿರಲಾರು ವೈದವರೂ ||
ಪರಮಪುರುಷನು ಪೇಳ್ದ ತನ್ನಯ |
ಚರಣಭಜಕ ದ್ವಾರಪರು ಕಿಂ |
ಕರರು ನಂದ-ಸುನಂದ-ಚಂದ್ರ-ಪ್ರಚಂಡನಾಮಕರೂ ||೧೨೦||

ಪಾಕಶಾಸನಿ ಕೇಳು ಮೂಜಗ |
ಕೇಕವೀರನು ಖರೆಯು ನಿನಗದೆ |
ಸಾಕೆನುವಹಂಕಾರ ತೆಗೆವುತ ತೋರ್ದೆ ಲೀಲೆಗಳಾ ||
ಆ ಕುಮಾರರನೊಯ್ಸೆ ಮಾಯದಿ |
ನಾ ಕಳುಹಿದೆನು ತರಲು ದೂತರ |
ವ್ಯಾಕುಲವ ನೀ ಬಿಡುತಲೆನ್ನನು ಭಜಿಸೆ ಸಲಹುವೆನೂ ||೧೨೧||

**ಕಂದ**

ಶ್ವೇತಾಶ್ವನಿಗೀಪರಿ ಪೇ |
ಳ್ದಾ ತತ್‌ಕ್ಷಣ ನರವಿಪ್ರಸುತ ಸಹಿತಂ ||
ವಾತಾಧಿಕ ವೇಗದೊಳೈ |
ತರುತ ದ್ವಾರಕಿಯೊಳ್ ವಿಪ್ರನ ಬೀಳ್ಕೊಡುತಂ ||೧೨೨||

**ರಾಗ ಭೈರವಿ ಝಂಪೆತಾಳ**

ದೇವರಾತನೆ ಕೇಳು | ಶ್ರೀವಾಸುದೇವ ನಿಜ |
ಭಾವ ಪಾರ್ಥಗೆ ಪ್ರೇಮ | ಭಾವ ತೋರಿಸುತಾ ||೧೨೩||

ಆವಾವ ಕಾಲದಲಿ | ನೋವು ಬಾರದ ತೆರದಿ ||
ಶ್ರೀವತ್ಸ ಸೇವಕನ | ಕಾಯ್ದ ತಾ ದಯದೀ ||೧೨೪||

ಲಾಲಿಸೈ ಮುಂಗಥೆಯ | ಮಾಲೋಲನಿತ್ತ ಮುನಿ ||
ಜಾಲವೆರಸೀರ್ಪ ಮಖ | ಶಾಲೆಗೈತಂದೂ ||೧೨೫||

ಶೇಷಶಯನನನು ಮಖದೊ । ಳಾಸನವ ಬಿಟ್ಟಿರುವ ॥
ದೋಷಹರ ಮಖಗೈದು । ವ್ಯಾಸನಾಜ್ಞೆಯಲೀ ॥೧೩೬॥

**ಭಾಮಿನಿ**

ಮೇದಿನೀಪತಿ ಕೇಳು ಭವಭಯ ।
ಭೇದಕನು ಯಾದವರ ಸಂತತಿ ।
ಗಾದಿಯಲ್ಲಿ ಯಯಾತಿನೃಪತಿಯು ಪೇಳ್ದ ವಾಕ್ಯಯವೂ ॥
ಬಾಧಿಪುದು ತಮಗಲ್ಲವೆಂದೆನು ।
ತೀ ಧರೆಯೊಳೊಂದಹದಿ ವಾಜಿಯ ।
ಮೇಧ ಪೂರೈಸುವಡೆ ಸತಿಯರ ಸೇರ್ದು ಕುಳ್ಳಿರಲೂ ॥೧೨೭॥

**ರಾಗ ಮುಖಾರಿ, ಝಂಪೆತಾಳ**

ಸುಮುಹೂರ್ತವೆನುತಾಗ । ಸುಮನಸರು ಪೂಮಳೆಯ ।
ವಿಮಲಭಾವದಿ ಕರೆಯಲಾಗಾ ॥
ಅಮಲ ಋಷಿವರರೆಲ್ಲ । ಚಮಸಾದಿ ಭಾಜನವ ।
ವಿಮಲ ಹಸ್ತದಿಗೊಂಡು ಬರಲೂ ॥೧೨೮॥

ನಾಗಶಯನನು ಪೇಳ್ದ । ಯಾಗಕಾರ್ಯವನೆಲ್ಲ ।
ಸಾಗಿಪುದು ಯೋಗಿವರರೆನುತಾ ॥
ವಾಗೀಶನಿಂತುಸುರೆ । ಯಾಗದಶ್ವವ ಯೂಪ ।
ಕಾಗ ಬಂಧಿಸೆ ಮೌನಿವರರೂ ॥೧೨೯॥

**ರಾಗ ಕೇತಾರಗೌಳ ಅಷ್ಟತಾಳ**

ವ್ಯಾಸಮೌನೀಶ್ವರನಂದು ತೇಜಿಗೆ ವಾರಿ । ತೋಷದಿ ಪ್ರೋಕ್ಷಿಸುತಾ ॥
ಈ ಸುಯಜ್ಞದಿ ನಿನ್ನ ಹೋಮಿಸುವೆವು ನಾಕ । ವಾಸವಪ್ಪುವದೆನಲೂ ॥೧೩೦॥

ಹಯವು ಕೃಷ್ಣನ ಮುಖ ನೋಡೆ ಪಾರ್ಥನು ತದಾ । ಶಯವ ತಿಳಿವುತೆಂದನೂ ॥
ಯಯುವು ಶ್ರೀಹರಿಯೆ ವೈಕುಂಠವ ನಿನ್ನಯ । ದಯದಿಂದ ಬಯಸುವದೂ ॥೧೩೧॥

ವಿಜಯನೆಂದುದ ಕೇಳುತೆಂದ ಮಾಧವ ಸಾ । ಯುಜ್ಯವೀಯುವೆ ದಿಟವೂ ॥
ಭಜಿಸಿದ ಭಕ್ತರ್ಗಭೀಷ್ಟ ಕೊಡುವದೆನ್ನ । ನಿಜಲೀಲೆ ನೋಡೆಂದನೂ ॥೧೩೨॥

ಮುನಿಕುಲೋತ್ತಮನಾಗ ಖಡ್ಗವ ತರಿಸಿ ಪ್ರ । ದ್ಯುಮ್ನನ ಕರೆದು ಪೇಳ್ದಾ ॥
ಮನದಿ ಧೈರ್ಯವ ತಾಳುತ್ತೀವಾಜಿಯನು ಛೇದಿ । ಸೆನಲು ವಂದಿಸಿ ತಾತಗೇ ॥೧೩೪॥

ಭೇರಿ ಮಂಗಳವಾದ್ಯ ದುಂದುಭಿ ಘನಘೋಷ। ಘೋರಿಡುತಿರಲಾ ಕ್ಷಣಾ ॥
ಭೂರಿ ಮಂತ್ರಗಳನ್ನು ಋತ್ವಿಜರ್ ಪಠಿಸಲ್ಕೆ। ಮಾರ ಭಕ್ತಿಯಲಿ ತಾನೂ ॥೧೩೫॥

ಕುಶ-ಹೇಮಭೂಷಿತ ದಿವ್ಯ ವಾಜಿಯ ಶಿರವ। ನಸಿಯಿಂದ ಛೇದಿಸಲೂ ॥
ಶಶಿಯಂತೆ ಹಯಜೀವ ನಭದಿ ಪೋಪುದ ಕಂಡು। ವಸುಧೇಶರ್ ಬೆರಗಾದರೂ ॥೧೩೬॥

ಸ್ತುತ್ಯವಾದಶ್ವದ ತನುವ ಮಾರನು ಸೀಳಿ। ಕತ್ತರಿಸುತ ಪೂಳ್ಗಳಾ ॥
ಶಕ್ತಿ ಋಷಿಯ ಮೊಮ್ಮನಿಗೆ ಕೊಡಲ ವರದ। ನೆತ್ತಿ ಹೋಮಿಸುತ ಮತ್ತೇ ॥೧೩೭॥

ಕರ್ಪೂರಖಂಡದಂತಿರುವ ನಾಜಿಯ ವಪ। ವರ್ಪಿಸುತ್ತನಲನಿಂಗೇ ॥
ಸರ್ಪಿ-ಪಾಲ್-ಮೊಸರು ಮುಂತಾದಲಂಕೃತಿಗಳ। ಸರ್ಪಶಾಯಿಯು ಹೋಮಿಸೇ ॥೧೩೮॥

ಸೋಮಾದಿ ದ್ರವ್ಯವ ಸೋಮಪಾಯಿಗಳಿಂಗೆ। ಸಾಮಗಾನವ ಪಠಿಸೀ ॥
ಪ್ರೇಮದಿ ಕರೆದಾಗ ಕೊಡಲಗ್ನಿ-ಸುರರಿಂಗೆ। ನೇಮದೊಳ್ ಸಲಿಸಿರ್ದನೂ ॥೧೩೯॥

**ಭಾಮಿನಿ**

ವಿಧಿಯ ತಾತನು ಪೇಳ್ದ ಬಂದಿಹ।
ತ್ರಿದಶವರ ದಿಕ್ಪಾಲ ಮೊದಲರು।
ಮುದದಿ ತನ್ನಧ್ವರದಿ ತೃಪ್ತಿಯಗೊಳ್ಳಿರೀಗೆನುತಾ ॥
ಪದುಮನಾಭನೆ ಭಜಕರಿಗೆ ನೀ।
ನದುಭುತದ ಸಂತೋಷಗೊಳಿಸಿರು।
ವದನು ಸಾಸಿರಫಣಗೆ ಪೇಳಲಸಾಧ್ಯವೆನಲವರೂ ॥೧೪೦॥

**ವಾರ್ಧಕ**

ಮತ್ತೆ ಮುರಹರ ಮುದದೊಳಗ್ರಪೂಜೆಯ ಭಾರ್ಗ।
ವೋತ್ತಮಗೆ ವಿರಚಿಸುತ ಪೃಥ್ವಿಪಾಲರಿಗೆಲ್ಲ।
ಉತ್ತಮದ ಸನ್ಮಾನವಿತ್ತವರನುಪಚರಿಸುತಾ ಯಾಚಕರ ತೃಪ್ತಿಸೀ ॥
ಋತ್ವಿಜರ ಸತ್ಕರಿಸಿ ರತ್ನರಾಶಿಯ ಸಹಿತ।
ಸ್ತುತ್ಯಮಾಗಿಹ ಕೋಟಿ ಗೋದಕ್ಷಿಣೆಯನಿತ್ತು।
ಸತ್ಪುರುಷರಾಶಿಷವ ನಿತ್ಯತೃಪ್ತನು ಪಡೆದು ಕೃತ್ಯಾತ್ಮ ಹರಿಗರ್ಪಿಸೇ ॥೧೪೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸತ್ಯಲೋಕದ ಭಾವಿದೊರೆ ಮಾ। ರುತ್ತ ಸಂಭವ ಭೀಮನಾಕ್ಷಣ ॥
ಕೌಸ್ತುಭವ ತಾ ಕೊಟ್ಟನುಡುಗರೆ। ಯರ್ತಿಯಿಂದಾ ॥೧೪೨॥

ಮುತ್ತಿನ್ಹಾರವ ಪಾರ್ಥ ಶ್ರೀಹರಿ । ಗಿತ್ತು ರುಕ್ಮಿಣಿ-ಭಾಮೆಯರಿಗತಿ ॥
ಕೆತ್ತಿಕೆಯ ಶುಭ ವೈಜಯಂತಿಯ । ನೆತ್ತಿಕೊಡಲೂ ॥೧೪೩॥

ಕೃಷ್ಣನಾಜ್ಞೆಯೊಳಾಗ ಮದನನು । ಜಿಷ್ಣು-ಭೀಮರಿಗೆಂದನುಡುಗೊರೆ ॥
ವೃಷ್ಣಿವರಗಾಯ್ತಧಿಕವೆನೆ ನರ । ಶ್ಲಕ್ಷ್ಣವೆನಲೂ ॥೧೪೪॥

ಅವಭೃಥಕೆ ಶ್ರೀರಮಣ ಸರ್ವರ । ತವಕದಲಿ ಕರಕೊಂಡು ಶರಧಿಯ ॥
ರವಕೆ ಮಿಗಿಲೆನಿಸಿರುವ ವಾದ್ಯವಿ । ಭವದಿ ಬಂದಾ ॥೧೪೫॥

ಸಿಂಧುತಟಕೈತಂದು ಮಾಧವ । ಕುಂದರದನೆಯರಿಂದ ಕೂಡುತ ॥
ಚಂದದೋಕುಳಿ-ಚಪ್ಪೆಯಾಟವ । ನಂದು ಗೈದೂ ॥೧೪೬॥

ಮಿಂದನಾ ಕ್ಷಣ ಕೃಷ್ಣ ಮುನಿಗಳ । ವೃಂದವೆರಸುತ ಭಾಮೆಯರ ಸೆರ ॥
ಗಿಂದ ಜೊತೆಗೊಳಿಸುತ್ತ ಲಬ್ಧಿಯೊ । ಳಂದು ಮುದದೀ ॥೧೪೭॥

**ಭಾಮಿನಿ**

ಇಂತು ಕೃತ್ವವಭೃಥವ ಮಾಧವ ।
ಸಂತಸದಿ ಗೈದಾಗ ಹೇಮದ ।
ತಂತುವಿರಚಿತ ಪೀತವಸನವ ಧರಿಸಿ ಸಂಭ್ರಮದೀ ॥
ಕುಂತಿಯಾತ್ಮಜರಿಂದ ಕೂಡುತ ।
ದಂತಿಪೋತನ ತೆರದಿ ಮಾರ್ಗದೊ ।
ಳಂತರದಿ ಮುದವಾಂತು ಮಂಗಳಮೂರ್ತಿ ಬರುತಿರಲೂ ॥೧೪೮॥

ಧಾತ್ರಿಯಧಿಪನೆ ಕೇಳು ವಿಭವದೊ ।
ಳೀ ತ್ರಿಲೋಕದೊಳಾರು ಗೈಯದ ।
ಕ್ಷಾತ್ರದರ್ಪವನಿಳುಹಲೊಂದಹದಶ್ವ ಮೇಧವನೂ ॥
ಗೋತ್ರಧರ ಗೈದುದನು ಕೇಳುತ ।
ಶಾತ್ರವಾಗ್ರಣಿ ದಂತವಕ್ರನು ।
ಚೈತ್ರಕೀರ್ತಿಯ ಸಹಿಸದೆ ವಿಡೂರಥನ ಸಹಿತೈದಾ ॥೧೪೯॥

**ಕಂದ**

ಕಾರೂಷನು ತಾ ರೋಷದಿ ।
ವಾರಿಧಿಯೊಳವಭೃಥವ ಗೈದು ಬಹಮಾಧವನಂ ॥
ಭೋರಿಡುತಲಿ ಶಸ್ತ್ರಾಸ್ತ್ರವ ।
ಬೀರುತ ಮಾರ್ಗದಿ ತಡೆದಾಡಿದ ನೀ ವಚನಂ ॥೧೫೦॥

**ರಾಗ ಶಂಕರಾಭರಣ ರೂಪಕತಾಳ**

ಹಸುವ ಪಾಲ ಕೇಳು ತುರಗ | ದೆಸೆವ ಯಾಗ ಗೈದೆಯೆಂದು |
ಜಸವ ಕೇಳಿ ಬಂದೆ ಯುದ್ಧ | ಕ್ಕಸಮಸಾಹಸಾ ||
ವಸುಮತಿಯೊಳಿರಲು ತಾನು | ಪಸುಳನೆನ್ನ ಗೆಲದೆ ಗೈದ |
ಹುಸಿಯ ಯಾಗಫಲವ ತೋರ್ಪೆ | ಮಸೆದ ಶರದಲೀ ||೧೫೧||

ನುಡಿಯ ಕೇಳಿ ಭೀಮ-ಪಾರ್ಥ | ರೊಡನೆ ಕಾಮ-ಶಿನಿಯ ಸುತರು |
ಫಡೆಫಡೆನುತ ಪೊರಡೆ ರಣಕೆ | ತಡೆದು ಮಾಧವಾ ||
ಕಡು ವಿರೋಧಿಯವನ ಶಿರವ | ಕೊಡುವೆ ಗದೆಗೆ ಬಲಿಯನೆನುತ |
ನುಡಿದು ಹರಿಯು ವೈರಿಯನ್ನು | ತುಡುಕಿ ಪೇಳ್ದನೂ ||೧೫೨||

ಭ್ರಷ್ಟ ನಾವು ಹಸುಪರಹುದು | ಸೃಷ್ಟಿಯೊಳಗೆ ನಿನ್ನ ಪೋಲ್ವ |
ದುಷ್ಟ ಪಶುಗಳನ್ನು ಬಡಿವ | ಯಷ್ಟಿ ಗದೆಯಿದೂ ||
ಇಷ್ಟಯಾಗ ಹುಸಿಯಿದಾದ | ರಷ್ಟಕೀಗ ನಿನ್ನ ತರಿದು |
ಇಷ್ಟಿ ಪೂರ್ತಿಗೈವೆ ನೋಡು | ಕಷ್ಟವಿಲ್ಲದೇ ||೧೫೩||

ಇಂತು ನುಡಿದ ಮಾತ ಕೇಳಿ | ದಂತವಕ್ರ ಕೋಪಿಸುತ್ತ |
ದಂತಿರಾಜನಂತೆ ರಣಕೆ | ನಿಂತು ಪೇಳ್ದನೂ ||
ಕಂತು ಶರದಿ ಸೋತು ಕುಟಿಲ | ಕುಂತಳೇಯರೊಡನೆ ರಮಿಸಿ |
ದಂತೆ ಸಮರವಲ್ಲ ನಿಲ್ಲು | ಪಂಥವಿದ್ದಡೇ ||೧೫೪||

ನಿಲ್ಲು ಖೂಳ ನಿನ್ನ ವಕ್ರ | ಹಲ್ಲು ಮುರಿದು ನಿಮಿಷ ಮಾತ್ರ |
ದಲ್ಲಿ ದುರುಳತನದ ಕೆಟ್ಟ | ಸೊಲ್ಲ ನಿಲಿಸುವೇ ||
ಫುಲ್ಲನೇತ್ರ ನಿಂತು ನುಡಿದು | ಮಲ್ಲರಂತೆ ತಿರುಹಿ ಗದೆಯ |
ಘಲ್ಲನೆನುತ ಹೊಡೆಯೆ ವೈರಿ | ಯಲ್ಲೆ ಬಿದ್ದನೂ ||೧೫೫||

**ಭಾಮಿನಿ**

ಕಂತುಜನಕನ ಗದೆಯ ಹತಿಗಾ |
ದಂತವಕ್ರನು ಬೀಳುತಷ್ಟರೊ |
ಳಂತಕನ ಪುರ ಸೇರೆ ಕಾಣುತಲಾ ವಿಡೂರಥನೂ ||
ಪಂಥದಲಿ ಶ್ರೀಹರಿಯ ಸನ್ಮುಖ |
ನಿಂತು ಬಹುಶರ ಬಿಡುತ ಬಾಡಬ |
ದಂತರವ ಪೊಗುವಂತೆ ನಡೆಹಾಯ್ದಂದ ರೋಷದಲೀ ||೧೫೬||

**ರಾಗ ಪಂಚಗಾತಿ ಮಟ್ಟೆತಾಳ**

ಕುಟಿಲಗಾರ ದೊರೆಯ ಗೆಲಿದ | ಹಟವ ನಿಲಿಸುವೆ ||
ನಿಟಿಲನೇತ್ರ ಬರಲು ಗೆಲುವ | ಭಟನು ತಾನಹೆ ||೧೫೭||

ಜಡಜನಯನ ಕೋಪಿಸುತ್ತ । ನುಡಿದನವನೊಳೂ ॥
ಒಡೆಯ ಪೋದ ಗತಿಯ ತೋರ್ಪೆ । ಬಡಿದು ಧುರದೊಳೂ ॥೧೫೮॥

ಮತ್ತೆ ದುರುಳ ಪೇಳ್ದನೆಲ್ಲ । ಪೃಥ್ವಿಪಾಲರಾ ॥
ಮೊತ್ತಗೆಲಿದ ಪರಿಯಿದಲ್ಲ । ದೃಪ್ತ ಸಂಗರಾ ॥೧೫೯॥

ಖೂಳನೊಬ್ಬನುಳಿದೆ ವೈರಿ । ಜಾಲಮಧ್ಯದೀ ॥
ತೋಳಬಲದಿ ವಸತಿ ತೋರ್ಪೆ । ಕಾಲನಗರದೀ ॥೧೬೦॥

ಇನಿತು ನುಡಿದ ಹಟದಿ ಭಟರು । ರಣವ ಗೈಯಲೂ ॥
ಮನುಮಥಯ್ಯನರಿಯ ಕೂಡೆ । ಸೆಣಸಿ ಬಡಿಯಲೂ ॥೧೬೧॥

**ಭಾಮಿನಿ**

ಶ್ರೀಧವನು ಧುರದೊಳಗೆ ಗೆದ್ದುದ ।
ಮೋದದಲಿ ಸುರರೆಲ್ಲ ನೋಡುತ ।
ಸಾದರದಿ ಸುಮವೃಷ್ಟಿ ಗೈದರು ಜಯವುಜಯವೆನುತಾ ॥
ಮಾಧವನು ನಸುನಗುತಲಾ ಕ್ಷಣ ।
ಮೇದಿನೀಪತಿ ಭೀಮಪಾರ್ಥರ ।
ಗಾಢ ಪ್ರೇಮದೊಳಪ್ಪಿಕೊಳ್ಳುತ ಸಂತಸವನಾಂತೂ ॥೧೬೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಡಬಲದಿ ಭೀಷ್ಮಕಜೆ-ಭಾಮೆಯರ್ । ಜಡಜಪಾದದ ನಿಕಟ ಭೀಮನು ॥
ಪಿಡಿದು ಛತ್ರವ ಪಾರ್ಥ ಹಿಂಗಡೆ । ನಡುವೆ ಹರಿಯೂ ॥೧೬೩॥

ಅಂಬರದಿ ಸುರದುಂದುಭಿಯ ರವ । ಕಂಬುಮುಖ ಶುಭವಾದ್ಯಘೋಷವು ॥
ಕುಂಭಕುಚೆಯರ ಗಾನದಿಂದೈ । ದಂಬುಜಾಕ್ಷಾ ॥೧೬೪॥

ಈ ತೆರದ ವೈಭವದಿ ಖಗಪತಿ । ಕೇತನದ ರಥವೇರಿ ಯದುಕುಲ ॥
ನಾಥ ಬಂದನು ನಭರಿ ವಾರಿಧಿ । ಜಾತನಂತೇ ॥೧೬೫॥

ಮಂಗಳೆಗೆ ಶುಭಮಂಗಳನು ಮಾ । ತಂಗವರದನು ಬರಲು ದ್ವಾರಕಿ ॥
ಯಂಗನೆಯರಾರತಿಯ ಬೆಳಗಿದರ್ । ಮಂಗಲಂಗೇ ॥೧೬೬॥

ಈ ಮಹಿಯೊಳೂ ಮಹಿಮ ಶುಕಮನಿ । ಶ್ರೀ ಮಹಾಭಾಗವತ ಕಥೆಯನು ॥
ಪ್ರೇಮದೊಳಗಿನಿತೊರೆದ ಪಾರ್ಥಿಜ । ಭೂಮಿಪತಿಗೇ ॥೧೬೭॥

ರಾಜತಾಸನ ಪುರದೊಳಿಹ ಗುರು । ರಾಜಪದರಾಜೀವಮಧುಕರ ॥
ರಾಜಗೋಪಾಲಾಖ್ಯಕೃತ ಯದು । ರಾಜಕಥೆಯೂ ॥೧೭೮॥

ಕೋವಿದರ ಮತಿಗೊಪ್ಪಲೀ ಕೃತಿ । ಶ್ರೀವರನ ಜಯನುತಿಯಿದೆನ್ನುವ ॥
ಭಾವದಲಿ ಮನ್ನಿಸಲಭೀಷ್ಟವ । ನೀವ ಹರಿಯೂ ॥೧೭೯॥

ಮಂದಮತಿಯೊಳು ರಚಿತ ಕೃತಿಯನು । ನಂದಿತೀರ್ಥ ಸುವಾದಿರಾಜ ಹೃ ।
ನ್ಮಂದಿರಗೆ ಹರಿಗರ್ಪಿಸುವೆ ಹಯ । ಕಂಧರರಂಗೇ ॥೧೮೦॥

**ಮಂಗಲ ಪದ**

**ರಾಗ ಪಂತುವರಾಳಿ ಆದಿತಾಳ**

ಮಂಗಲಂ ಜಯಮಂಗಲಂ  ॥ ಪಲ್ಲ ॥

ಮಂಗಲ ನಿಗಮವ ಬೋಧಿಪಗೇ । ತುಂಗಶಿರದ ಹಯಕಂಧರಗೇ ॥
ಅಂಗನೆ ಧರೆಯನು ಕರದೊಳು ಧರಿಸಿದ । ಭಂಗಾರೇಕ್ಷಣರಿಪು ವರಹನಿಗೇ ॥ ಮಂಗಲಂ ॥೧೮೧॥

ವೇದವಿಭಾಗವ ರಚಿಸಿದಗೇ । ಸೋದೆಯ ಮಠದಲಿ ಮೋದಿಪಗೇ ॥
ಸಾದರದಲಿ ಬ್ರಹ್ಮ ಸೂತ್ರವ ಮಾಡಿದ । ವಾದಿರಾಜಪ್ರಿಯ ಬಾದರಾಯಣಗೇ ॥ ಮಂಗಲಂ ॥೧೮೨॥

ಕಡಗೋಲು ನೇಣ್‌ಗಳ ಧರಿಸಿದಗೇ । ನಡುಗೃಹಪೂರ್ವಜಸುತಪ್ರಿಯಗೇ ॥
ಹಡಗೇರುತ ಬಂದ ಬಡಜನರನ್ನಗೇ । ಉಡುಪಿಯೊಳ್ ನೆಲಸಿದ ಸಿರಿಕೃಷ್ಣಗೇ ॥
ಮಂಗಲಂ ಜಯಮಂಗಲಂ ॥೧೮೩॥

**ಯಕ್ಷಗಾನ ಶ್ರೀಕೃಷ್ಣದಿನಾಶ್ವಮೇಧ ಸಂಪೂರ್ಣವು.**

**ಭಾಮಿನಿ**

ಅಚ್ಚುತನ ಶಾಲಕನು ತಾನಿಂ ।
ತಚ್ಚರದ ಧುರ ತೋರಿ ಶೌರ್ಯದಿ ।
ಬೆಚ್ಚದಾ ಖಳನೇರ್ದ ರಥ ಹಯ ಸೂತ ಚಾಪಗಳಾ ॥
ವೆಚ್ಚಗೈಯಲು ಮಗುಳೆ ಯುದ್ಧವ ।
ನಿಚ್ಚಿಸುತಲಸಿ ತಿರುಹಿ ಮುಂಬಹ ।
ತುಚ್ಚ ಡಿಭಗನ ಕ್ಷಣದಿ ಪಾರ್ಥನು ಬಡಿದು ಮೂರ್ಛಿಸಲೂ ॥೧೨೨॥

ಸೋದರನು ಧುರನೆಲದಿ ಬಿದ್ದಿಹು ।
ದಾ ದುರಾತ್ಮಕ ಹಂಸ ಕಾಣುತ ।
ಕ್ರೋಧದಲಿ ಧನು ಶರವಗೊಂಡಿದಿರಾಗಲರ್ಜುನಗೇ ॥

ಭೇದಿಸುವೆನೀ ದುರುಳನೆಂದೆನು ।
ತಾ ಧನಂಜಯನನ್ನು ತಡೆವುತ ।
ಮೇದಿನಿಯ ಕಂಪಿಸುತ ಹಾಯ್ದ ಪ್ರಕಂಪನಾತ್ಮಜನೂ ॥೧೨॥

**ಶಾರ್ದೂಲವಿಕ್ರೀಡಿತ**

ಶ್ರೀಸತ್ಯಾಧವಮಬ್ಜಜಾತಪಿತರಂ ಸರ್ವೇಷ್ಟದಂ ಭೂಧರಂ ।
ಶ್ರೀಸಾಮೋದ್ಧರಣಂ ಸಮುದ್ಧೃತಗಿರಿಂ ಶ್ರೀಸ್ವರ್ಣನೇತ್ರಾಂತಕಂ ॥
ಶ್ರೀಸಿಂಹಾಸ್ಯನರಂ ವಟುಂ ಜಿತಬಲಿಂ ಪೃಥ್ವೀಶಗರ್ವಾಪಹಂ ।
ಶ್ರೀಸೌಮಿತ್ರಿನುತಂ ಕಿರೀಟವಿನುತಂ ಬುದ್ಧಂ ಕಲಿಘ್ನಂ ಭಜೇ ॥೧॥

**ರಾಗ ಭೈರವಿ ಝಂಪೆತಾಳ**

ಶ್ರೀಕಾತ್ಯಾಯನಿಕಂದ ನಮಿಪೆ ನಾನನವರತ । ರಾಕೇಂದುನಿಭವಕ್ತ್ರ ಕೋಮಲಗಾತ್ರ ॥
ಏಕದಂತನೆ ನಿನ್ನನೇಕಭಾವದಿ ನಮಿಪೆ । ಶ್ರೀಕಂಠತರಳ ನೀ ಬೆಂಬಿಡದೆ ಸಲಹೋ ॥೨॥

ಶ್ರೀರಮಣ ತವ ಚರಣ ನೆರೆ ನಂಬಿದವರನ್ನು । ಕಾರುಣ್ಯದಲಿ ಕಾವಪಾರಗುಣಸಿಂಧೋ ॥
ಸಾರಭಕ್ತಿಯನಿತ್ತು ವಾರಿಜಾಕ್ಷನೆ ಪೊರೆಯೊ । ನೀರಜೋದ್ಭವತಾತ ಸಜ್ಜನರ ಪ್ರೀತಾ ॥೩॥

ವಾಣೀಶರನು ನಮಿಸಿ ರಾಮಕೃಷ್ಣರ ಭಜಕ । ಹನುಮಂತಭೀಮರಡಿಗೆರಗಿ ಭಕ್ತಿಯಲೀ ॥
ಪ್ರಾಣಪತಿ ಗುರುಮಧ್ವರನು ಭಜಿಸುತಲಿ ಭಾವಿ । ವಾಣೀಶ ವಾದಿರಾಜಾಖ್ಯಯೋಗಿಗಳಾ ॥೪॥

ಮೋದದಲಿ ನಮಿಸುತ್ತ ಯಾದವೋತ್ತಮನು ಹಯ । ಮೇಧವನು ರಚಿಸಿರ್ದನೊಂದು ದಿನದೊಳಗೇ ॥
ಆದಿವ್ಯ ಕಥನವನು ಸಾದರದಿ ಪೇಳ್ವೆ ನಾ । ನಾದರಿಸಲಿದನು ಬುಧರೆಂದು ಭಕ್ತಿಯಲೀ ॥೫॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಶ್ರೀಪರೀಕ್ಷಿತನೊಂದು ದಿನದಲಿ । ತಾಪಸೋತ್ತಮ ಶುಕಮುನೀಶ್ವರ ॥
ರಾ ಪದಾಂಬುಜಕೆರಗಿ ಕೇಳಿದ । ಗೋಪವರನೂ ॥೬॥

ದ್ವಾರಕಾಪುರವನ್ನು ನಿರ್ಮಿಸಿ । ಶ್ರೀರಮಣ ಷೋಡಶದ ಸಾಸಿರ ॥
ನಾರಿರತುನಗಳೆಂಟು ಪಟ್ಟದ । ದಾರರೊಡನೇ ॥೭॥

ಇನಿತು ಸುಂದರಿಯರನು ಕೂಡುತ । ಚಿನುಮಯಾತ್ಮನು ಮನುಜರಿಗೆ ಬಲು ॥
ಘನತೆಯಿಂದಲಿ ಚೋದ್ಯ ಕಾರ್ಯಗ । ಳೇನತೋರ್ದಾ ॥೮॥

ಎನಲು ವೇದವ್ಯಾಸಮಾನಸ । ತನುಜ ಶುಕಮುನಿಪಿತನ ವಂದಿಸು ॥
ತಿನಿತು ಪೇಳ್ದನು ಪಂಕಜಾಕ್ಷನ । ಮನದಿ ನುತಿಸೀ ॥೯॥

**ದ್ವಿಪದಿ**

ಪೊಡವಿಪತಿ ಕೇಳು ಜಗದೊಡೆಯ ದ್ವಾರಕಿಯ ।
ಕಡಲಮಧ್ಯದಿ ಮಾಡಿ ದೃಢ ಮಹಾಪುರಿಯಾ ॥೧೦॥

ಅಲ್ಯಲ್ಲಿ ನವರತುನದುಲ್ಲಸಿತ ಕಂಭಾ ।
ಗಲ್ಲಿಗಲ್ಲಿಯೊಳೆಸೆವ ಚಲ್ವ ವರಕುಂಭಾ ॥೧೧॥

ಭಂಗಾರಮಯವಾದ ತುಂಗ ಗೋಪುರವೂ ।
ಶೃಂಗರಿಸಿ ಮೆರದಿರ್ಪ ಮಂಗಲಾಂಗಣವೂ ॥೧೨॥

ಜಂಭಾರಿಪುರದೊಳಿಹ ಕಂಬುಕಂಠಿಯರಾ ।
ಹಿಂಬಳಿಸಿ ಮೆರೆವ ಕರಿಕುಂಭಕುಚದವರಾ ॥೧೩॥

ಬೆಡಗಿನಲಿ ಶೋಭಿಸುವ ನಡುವಿನಾರಾಮಾ ।
ಸಡಗರದಿ ಕುಣಿದಾಡಿ ನುಡಿವ ಪಿಕಧಾಮಾ ॥೧೪॥

ತಿಳಿನೀರ ಕೊಳದೊಳಗೆ ನಲಿದು ಶೋಭೀಸುವಾ ।
ನಳಿನಮಧ್ಯದಿ ನಿಲುವ ಕಲಹಂಸವಿಭವಾ ॥೧೫॥

ಅಂಬುಜದೊಳೆಸೆವ ಮರಿದುಂಬಿಗಳ ಗುಂಪೂ ।
ಅಂಬುಜಾಕ್ಷಿಯರ ಕಡೆಯಂಬಕದ ಸೊಂಪೂ ॥೧೬॥

ಸುರಲೋಕದಿಂದಧಿಕ ಮೆರೆವ ದ್ವಾರಕಿಯಾ ।
ನರರಾರು ವರ್ಣಿಸುವರರಿಧರನ ಪುರಿಯಾ ॥೧೭॥

ಇಂತೆಸೆವ ನಗರದೊಳು ಕುಂತಿಯಾತ್ಮಜರಾ ।
ಸಂತಸದಿ ಕರತಂದು ಕಂತುಪಿತನವರಾ ॥೧೮॥

ವೆರಸುತೆಸಗಿದ ದಿನದಿ ತುರಗಮೇಧವನೂ ।
ನರನ ಭಾಷೆಗೆ ವಿಪ್ರತರಳರನು ತಾನೂ ॥೧೯॥

ಮೆರೆವನಂತಾಸನಕೆ ನರಸಹಿತ ಪೋಗೀ ।
ತರುತ ಪುತ್ರರನಿತ್ತು ವರವಿಪ್ರಗಾಗೀ ॥೧೧॥

ಮತ್ತೆ ಯಾಗವ ರಚಿಸಿ ಯುಕ್ತವಿಧಿಯಿಂದಾ ।
ಕೃತ್ವಂತ್ಯದವಭೃಥವ ವರ್ತಿಸಲು ಬಂದಾ ॥೧೨॥

ದಂತವಕ್ರನ ತರಿವುತಂತರದಿ ತಾನೂ ।
ಸಂತೋಷದೊಳಗೈದನಿಂತು ಧಾಮವನೂ ॥೧೩॥

**ವಾರ್ಧಕ**

ಧೊರೆ ಪರೀಕ್ಷಿತ ಮೌನಿಪದಕೆರಗಿ ಪೇಳ್ದನಾ ।
ಗರುಡವಾಹನನೊಂದು ದಿನದೊಳಗೆ ವೈಭವದಿ ।
ತುರಗಮೇಧವ ತಾನು ವಿರಚಿಸಲು ಕರಗಳಂ ತರಲಾರು ಪೋದ ಭಟರೂ ॥
ಪರಮ ಸಾಹಸ ಗೈದ ಬಲಶಾಲಿಯೆಂತಹನೊ ।
ಮರಳಿ ವರ ಭಾಗವತದರಿಧರನ ಕಥೆಯ ವಿ ।
ಸ್ತರದೊಳಗೆ ಪೇಳ್ವುದೆನೆ ಮುನಿನಾಥನಿಂತೆಂದ ವಿಸ್ತರಿಸಿ ಶುಭಕಥೆಯನೂ ॥೧೪॥

**ಭಾಮಿನಿ**

ಒಂದು ದಿನ ಮಧುವೈರಿ ತನ್ನಯ ।
ಮಂದಿರದಿ ರುಕ್ಮಿಣಿಯೆ ಮೊದಲಾ ।
ದಿಂದುಮುಖಿಯರ ಸಹಿತ ಒಡ್ಡೋಲಗಕೆ ನಡೆತಂದೂ ॥
ಅಂದದಲಿ ಝುಗಝುಗಿಪ ರತ್ನದ ।
ವೃಂದದಲಿ ಮೆರೆದಿರ್ಪ ಪೀಠದೊ ।
ಳಿಂದುಲಕ್ಷದ ತೇಜದಲಿ ಕುಳಿತಾಗ ಯದುವರನೂ ॥೧೫॥

**ರಾಗ ಕಾಂಭೋಜಿ ಝುಂಪೆತಾಳ**

ವಾರಿಜಾಂಬಕಿಯರಿಗಾ ರಮೇಶನು ಪೇಳ್ದ । ಸೂರ್ಯೋಪರಾಗವಿದೆನಾಳೆ ॥
ಸೀರಪಾಣಿಯ ಸಹಿತ ತ್ವರ್ಯದಲಿ ಪೋಗುವೆನು । ಸಾರ ಶಾಮಂತ ಪಂಚಕಕೇ ॥೧೬॥

ಮಡದಿ ರುಕ್ಮಿಣಿ ಸತ್ಯರೊಡಗೂಡಿ ಪೇಳಿದರು । ಬೆಡಗಿ ನಲಿ ಮನವೊಲಿಸುತಾಗಾ ॥
ಜಡಜಾಕ್ಷ ನೀನೆಮ್ಮ ಬಿಡುತ ಪೋಗುವರೆ ಮನ । ಕೊಡುವದುಚಿತವೆ ಪೇಳು ರನ್ನಾ ॥೧೭॥

ಎನಲು ನಗುತಾಗ ಹರಿ ಪ್ರಣಯದಲಿ ಬಿಗಿದಪ್ಪಿ । ವನಿತೆಯರೊಡನೆಂದ ನಿಮ್ಮಾ ॥
ಮನ ಪರೀಕ್ಷಿಸೆ ಪೇಳ್ದೆನನು ಸರಿಸಿ ಬಹದೆಂದು । ವನಜಾಕ್ಷ ಚರರ ಕರದೆಂದಾ ॥೧೮॥

ಎಲವೊ ಚಾರಕ ಬೇಗದಲಿ ಪೋಗಿ । ನೀನೀಗ । ಬಲದೇವನನು ನಮ್ಮ ಸಭೆಗೇ ॥
ಚೆಲುವ ವೇಳೆಯನರಿತು ತಿಳುಹುವುದು ಬಹದೆಂದು । ನಳಿನಾಕ್ಷನಿಂತುಸುರಿ ಕಳುಹೇ ॥೧೯॥

**ಕಂದ**

ಹರಿಯಾಜ್ಞೆಯೊಳಾ ಚರನತಿ ।
ಭರದೊಳು ಬಲರಾಮನ ಸಭೆಗೈದನು ಜವದಿಂ ।
ಶರಣೆನುತಲಿ ತಲೆವಾಗುತ ।
ಕರಗಳ ಜೋಡಿಸಿ ಬಲು ವಿನಯದೊಳಿಂತೆಂದಂ ॥೨೦॥

**ರಾಗ ಭೈರವಿ ಅಷ್ಟತಾಳ**

ಯದುವೀರ ಲಾಲಿಸಯ್ಯ । ನಿಮ್ಮಯ ಕೋ । ವಿದ ವಾಸುದೇವ ಜೀಯಾ ॥
ಮುದದಿ ನಿಮ್ಮಯ ಬರವಿದಿರು ನೋಡುತಲಿರ್ಪ ।
ಮದಿರನೇತ್ರನೆ ತಡವ ಮಾಡದೆ । ಪದುಮನಾಭನ ಸಭೆಗೆ ಬಾರೈ ॥೧೦॥

**ವಚನ**

ಶ್ರೀಲೋಲಂ ಪೇಳಿದ ನುಡಿಯಂ । ಲಾಲಿಸಿ ಚರರಿಂ ಕೇಳುತ ತಾಳಾಂಕಂ ॥
ಬಾಲಾರ್ಕನ ಪೋಲ್ ಕಣ್ಣಿಂ । ದಾ ಲಕ್ಷ್ಮೀಶನ ಸಭೆಗೈತಂದಿಂತೆಂದಂ ॥೧೧॥

**ರಾಗ ಮಾರವಿ ಏಕತಾಳ**

ಅನುಜನೆ ನಮ್ಮಯ ಪುರಕೇಸರಿಗಳು । ಸೆಣಸಲು ಬಂದಿಹರೇ ॥
ಘನತರ ಕಾರ್ಯಗಳೇನಿಹುದಾ ಪರಿ । ಯನು ನೀನೆನಗುಸುರೈ ॥೧೩॥

ಧುರದೊಳು ರಿಪುಕೇಸರಿ ನಾನಿರುತಿರ । ಲರಿಗಜಭಯವೆಲ್ಲೀ ॥
ಪರರಾಷ್ಟ್ರವು ಗೆಲಲಿರುವುದೆ ಪೋಗಲು । ಕರದೆಯೊ ಪೇಳಲ್ಲೀ ॥೧೪॥

ಬಡ ಮುನಿಗಳ ತಪಗೆಡಿಸಲು ದೈತ್ಯರು । ವಡಗೂಡಿಹರೇನೊ ॥
ಮೃಡನೊಮ್ಮೆಗೆ ಬರೆ ಬಿಡೆಬಿಡೆನವರನು । ಜಡಜನಾಭನೆ ತಾನೂ ॥೧೫॥

**ರಾಗ ಬೇಗಡೆ ಏಕತಾಳ**

ಅಣ್ಣ ಲಾಲಿಪುದೆನ್ನ ಬಿನ್ನಪವನ್ನ ।
ನಿನ್ನ ಪೋಲುವ ವೀರರಿರಲು ಸಂಪನ್ನಾ ॥೩೬॥

ಕಣ್ಣೆತ್ತಿ ನೋಡುವ ವೈರಿಗಳಿಹರೇ ।
ಪುಣ್ಯಕಾರ್ಯವದನ್ನು ಪೇಳ್ವೆ ಪೂರ್ವಜರೇ ॥೧೭॥

ಸೂರ್ಯೋಪರಾಗ ನಾಳಿನ ದಿನವೆನುತ ।
ತ್ವರ್ಯದಿ ಕರೆಸಿದೆ ಯದುಸಂಘನಾಥಾ ॥೧೮॥

ಪೋಗುವದೀಗ ಶಾಮಂತಪಂಚಕಕೆ ।
ಭಾಗೀರಥಿಯ ಸ್ನಾನದಾ ಪುಣ್ಯಪಥಕೇ ॥೧೯॥

ಆ ಗುಣನಿಧಿ ಹರಿಪೇಳಲಾ ಕ್ಷಣದಿ ।
ಬೇಗದೊಳ್ಬಲಭದ್ರಾದಿಗಳೆಲ್ಲ ಭರದೀ ॥೨೦॥

ಪೋದರಾ ಶಾಮಂತಪಂಚಕಕ್ಕಾಗಿ ।
ಮಾಧವಾದ್ಯರು ಬಲಭದ್ರರೊಂದಾಗೀ ॥೨೧॥

**ರಾಗ ಭೈರವಿ ತ್ರಿವುಡೆತಾಳ**

ಬಂದರಾಗ । ಯದುವರರ್ । ಬಂದರಾಗ ॥
ಬಂದರಾ ಯದುಕುಲದ ಶರಧಿಯೊ । ಳಿಂದುವಂದದಿ ಜನಿಸಿದರ್ ಗೋ ।
ವಿಂದ ಬಲರಾಮಾದಿ ಯಾದವ । ರಂದಣದಿ ತಾವು ತಮ್ಮ ಸುದತಿಯ ।
ವೃಂದದೊಂದಿಗೆ ಭಕ್ತಿಯಲಿ ಸುರ । ಮಂದಾಕಿನಿತಟಕಾಗಿ ಸರ್ವರು ॥ ಬಂದರಾಗ ॥೩೨॥

**ರಾಗ ಘಂಟಾರವ ಝಂಪೆತಾಳ**

ಕ್ಷಿತಿಪತೀಶ್ವರ ಪರೀಕ್ಷಿತ ಕೇಳು ಶ್ರೀಹರಿ ।
ಯತಿಶಯದ ಮೋಹದ ಸುದತಿಯರೊಡಗೊಂಡೂ ॥
ಇತರ ಯಾದವರು ರೇವತಿಯಧವ ಸಹಭಾಗೀ ।
ರಥಿಯ ತೀರದೊಳಿರಲ್ ಮತಿವಂತರಿನಿತೂ ॥೩೩॥

ಅಂದು ಬೇಗದಿ ಪಾಂಡುನಂದನರು ಸಭೆಗೆ ನಡೆ ।
ತಂದೀಂದ್ರಪ್ರಸ್ಥದೊಳ್ ನಂದದಲಿ ತಮ್ಮಾ ।
ಇಂದುಸಾಸಿರ ಭಾಸದಿಂದಧಿಕ ಲಾವಣ್ಯ ।
ಮಂದಿರದ ದ್ರುಪದಜೆಯ ಚಂದ ವೈಭವದೀ ॥೩೪॥

ಕುಳಿತು ಧರ್ಮಜ ತನ್ನ ಲಲಿತ ರನ್ನದ ಪೀಠ ।
ದಲಿ ಭೀಮ ಪಾರ್ಥರೊಡನೊಲವಿನಲಿ ಪೇಳ್ದಾ ॥
ಬಲವಂತ ಸಹಜಾತರಿಳೆಯ ಪಾಲರು ತಮ್ಮ ।
ಛಲ ಬಿಟ್ಟು ಕಪ್ಪವನು ಸಲಿಸುವರೊ ನಮಗೇ ॥೩೫॥

ವಾಯುಜನು ಪೇಳ್ದನರಿರಾಯರೆಲ್ಲರು ತಮ್ಮ ।
ಕಾಯ ಬಗ್ಗಿಸಿ ಕಪ್ಪವೀಯುವರು ಭಯದೀ ॥
ದಾಯಾರ್ಹನಾದ ಕುರುರಾಯನರಿತನದಿಂದ ।
ಮಾಯ ತೋರ್ಪನು ದಿಟವು ಜೀಯ ಬಿಡೆನವನಾ ॥೩೬॥

ಫಲುಗುಣನು ಮಗುಳೆಂದ ಜ್ವಲನಂಗೆ ಖಾಂಡವನ ।
ದೊಳಗಿರ್ಪ ನಿಖಿಲವಂ ಫಳಿಸದಿತ್ತುದಕೇ ॥
ಒಲಿದಿತ್ತ ಗಾಂಡೀವ ಚಲುವ ಕಾಂಚನರಥವ ।
ಕೊಳುಗುಳದಿ ಪರರ ತೋಳ್ಬಲದಿಂದ ಗೆಲುವೇ ॥೩೭॥

**ಕಂದ**

ಸಹಜಾತರ ನುಡಿ ಕೇಳುತ ।
ಲಹಿತರ ಭೀತಿಯ ತೊರೆವುತ ಧರ್ಮಜನಾಗಳ್ ॥

ಬಹು ಸಂಭ್ರಮದೊಳು ಸಹಜರ ।
ಸಹಿತಲಿ ರಾಜ್ಯತಂತ್ರದೊಳಿರೆ ಮಹಾಮುನಿಗಳ್ ॥೩೮॥

**ರಾಗ ಸಾಂಗತ್ಯ ರೂಪಕತಾಳ**

ಸಮಯದಿ ವೇದವ್ಯಾಸರ್ ಪಾಂಡುಜರಿದ್ದ । ವಾಸಮಂದಿರಕೆ ನಡೆತಂದೂ ॥
ತೋಷದಿಂದಲಿ ತನ್ನ ದೋಷದಿಂ ಬಿಗಿದಪ್ಪಿ । ನಾಸದೊಳ್ ಶಿರವಾಘ್ರಾಣಿಸಲೂ ॥೩೯॥

ಭೂಸುರೋತ್ತಮನಂಘ್ರಿಗೆರಗಿ ಪಾಂಡವರು ಸ್ವ । ರ್ಣಾಸನವಿತ್ತರ್ಚಿಸುತಲೀ ॥
ಪೂಶಿಪ ಗಂಧ ಮಾಲ್ಯಗಳಿಂದ ದ್ರುಪದಜೆ । ತೋಷಗೊಳಿಸಿ ಮುನಿಗೆರಗೇ ॥೪೦॥

ಲೇಸು ಕುಂತಿಜರೆ ನೀ ವಾಸಿಸಿ ಬಹುದಿನ । ದೇಶದೇಶವ ತಿರುಗಿದರೂ ॥
ಈ ಸುಶೀಲೆಯು ನಿಮ್ಮ ಕೈ ಸೇರಿದುದರಿಂದ । ಭೂಸಿರಿಯೊಡೆತನವಾಯ್ತೂ ॥೪೧॥

ಸತ್ಯವಂತೆಯ ಸುತನೆಂದ ಬಾಲಕನೆ ನೀ । ಸತ್ಯಪದ್ಧತಿ ಬಿಡದಿನ್ನೂ ॥
ಪೃಥ್ವಿಪಾಲಿಸಿ ರಾಜಸೂಯಾಶ್ವಮೇಧದಿಂ । ದುತ್ತಮ ರಾಜನೆಂದೆನಿಸೋ ॥೪೨॥

ಮೊಗವ ತಗ್ಗಿಸಿ ಕೈಯಮುಗಿದು ಧರ್ಮಜನೆಂದ । ಜಗದೊಡೆಯನೆ ನಿನ್ನ ನುಡಿಯೂ ॥
ನಿಗಮದಿಂದಧಿಕವೆಂದೊದರುವರನಿಬರು । ಮಿಗೆ ಪೇಳ್ವದಿನ್ನೇನು ತಾನೂ ॥೪೩॥

**ಭಾಮಿನಿ**

ಸತ್ಯಶರಧಿಯೆ ನಾಳೆಯೊದಗಿದ ।
ಸಪ್ತಸಪ್ತಿಯ ಗ್ರಹಣಯೋಗಕೆ ।
ಸತ್ಯಭಾಮೆಯ ಧವನು ತಾನೀಗಲ್ಲಿ ಗೈದಿಹನೂ ॥
ಸತ್ವರದಿ ನಿಜಸೋದರರು ಸತಿ ।
ಯುಕ್ತನಾಗುತೆ ಪೊರಡು ಜಗದೊಳ ।
ಗುತ್ತಮದ ಶಾಮಂತನಾಮಕ ಕ್ಷೇತ್ರದೆಡೆಗೆನಲೂ ॥೪೪॥

**ರಾಗ ಮುಖಾರಿ ಏಕತಾಳ**

ಕುಂತಿಜಾತರು ಬಂದರ್ ಭರದಿ । ಶ್ರೀಹರಿಯ ನೋಡುವ ಮನದೀ ॥
ಕುಂತಿಜಾತರು ಬಂದರ್ಭರದೀ ॥ ಪಲ್ಲ ॥

ದಂತಿಪೋತರ ತೆರನಿಂತಲ್ಲಿಹ ಋಷಿ । ಹಂತರರದತಿಶಯ ಸಂತೋಷ ಬೀರುತ ॥
ಕುಂತಿಜಾತರು ಬಂದರ್ಭರದಿ ॥೪೫॥

**ಭಾಮಿನಿ**

ಧರಣಿಪತಿ ಧರ್ಮಜನೆ ನೀ ನೋ ।
ಡುರಗವೈರಿಯ ನಾಥಶ್ವಶುರನ ।
ಹರಿಗಳಿಂ ಬಂಧಿಸಿದ ವೀರನ ಸತಿಯ ಕದ್ದವನಾ ॥
ಮೆರೆವ ವನ ತರಿದವನ ಕೇತನ ।
ದಿರಿಸಿದಾತನ ಸಖನ ಮೊಮ್ಮನ ।
ತರುಣಿತಾತನ ದೇವ ಶಿರದಿಂದಿಳಿದ ಜಾಹ್ನವಿಯಾ ॥೪೬॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಶ್ರೀರಮಣ ಪಾಂಡವರನಾ ಕ್ಷಣ । ದೂರದಲಿ ಕಾಣುತ್ತ ಮನದೊಳು ॥
ಭೂರಿ ತೋಷದೊಳಾಗ ನಗುತಾ । ಪಾರಮಹಿಮನು ನುಡಿದನು । ರಾಮನೊಡನೇ ॥೪೭॥

ಬಂಧುಕುಲಕೆ ಲಲಾಮ ಪಾಂಡುಜ । ರಿಂದು ಬಂದಿಹರಲ್ಲಿ ನೋಡೈ ॥
ಮುಂದೆ ಋಷಿವರ ವ್ಯಾಸರೊಡನಾ । ನಂದದಲಿ । ಕರೆಯುವ । ಮೋದದಿಂದಾ ॥೪೮॥

ಎನಲು ಹಲಧರ ಕೋಪದಲಿ ತಾ । ವನಜನಾಭನೊಳುಸುರಿದನು ನ ॥
ಮ್ಮನುಜೆ ಸೌಭದ್ರೆಯನು ಕದ್ದಿಹ । ಬಿನುಗು ಜನರನು ಕರೆಯಲು । ಬರೆನು ತಾನೂ ॥೪೯॥

ಸಿಟ್ಟು ಮಾಡಲು ಬೇಡ ನಮ್ಮೊಡ । ಪುಟ್ಟಿದವಳಿಗೆ ಯೋಗ್ಯನಹನಿವ ॥
ಗಿಷ್ಟದಲಿ ಕೊಡದೀರ್ದುದಕೆ ವಿಧಿ । ಕೊಟ್ಟನಿವಳನು ಪಾರ್ಥಗೆ । ನೋಡು ಮನದೀ ॥೫೦॥

ನುಡಿದನಾ ಬಲರಾಮ ನಿನ್ನಯ । ನಡತೆಯಂದದಿ ಪಾರ್ಥ ಗೈದಿಹ ॥
ಕಡು ವಿರೋಧವಿನ್ಯಾಕೆ ತನಗವ । ರೊಡನೆ ಬರಿದೆಂದೆನುತಲಿ । ಪೊರಟನಾಗಾ ॥೫೧॥

ಕಾಮಪಿತ ಬಲರಾಮಗರುಹಿದ । ಭೂಮಿಯಲಿ ಬಾಹುಜರ ಸ್ತ್ರೀಯರು ॥
ಕಾಮಿಸುತ ಸ್ವಯಂವರದಿ ವರಿಸುವ । ನೇಮವಿಹುದೈ ನಡತೆಯು । ದುಗುಡ ಬೇಡೈ ॥೫೨॥

**ಭಾಮಿನಿ**

ಹರಿಯ ಮುನಿವರ ಪಾಂಡುಸುಕುಮಾ ।
ರರಿಗೆ ತೋರಿಸುತೆಂದ ಭಕ್ತರ ।
ನರಗಿಣಿಯ ಪೋಲ್ ಸಲಹಿ ಕರುಣಾಪಂಜರದಿ ತಾನೂ ॥
ಬರುವ ದುಗುಡವ ಕಳೆವ ದಾಮೋ ।
ದರನು ಧರಣಿಯ ಭಾರವನು ಪರಿ ।
ಹರಿಪೆನೆಂದವತರಿಸಿದನು ತನ್ನಂಶ ನೋಡೆನಲೂ ॥೫೩॥

**ಕಂದ**

ವ್ಯಾಸನು ನುಡಿ ಕೇಳುತ ಸವ ।
ಕಾಶವ ಗೈಯದೆ ಪಾಂಡುಸುತರು ಬಲು ಭರದಿಂ ॥
ತೋಷದಿ ರೋಮೊದ್ಗಮದಿಂ ।
ಶ್ರೀಶನ ಪದಕೆರಗುತ ನುತಿಸಿದ ರತಿಮುದದಿಂ ॥೫೪॥

**ರಾಗ ಯರಕಲಕಾಂಬೋಧಿ ಝಂಪೆತಾಳ**

ಜಯಜಯ ಶ್ರೀರಮಣ ಜಯತು ಭಕ್ತರ ಶರಣ ।
ಜಯಜಯ ಗುಣಪೂರ್ಣ ಜಯ ಪಾಪಹರಣಾ ॥
ಜಯ ಜೀಯ ಪಾಹಿ ನಮ್ಮನುದಿನದಿ ಮುಂದೆ ನಮ ।
ಗಯನ ನೀನೆಂದು ಭವಭಯಹರಗೆ ನಮಿಸೇ ॥೫೫॥

ಮಂದಹಾಸದಿ ಪೇಳ್ದ ಬಂದರೆಮ್ಮಯ ಮುಖ್ಯ ।
ಬಂಧು ಕುಂತಿಯ ಜಾತರಿಂದು ನಮ್ಮೆಡೆಗೇ ॥
ಚಂದವೇ ನಿಮಗೆಲ್ಲವೆಂದು ಮಾಧವ ಪೇಳ ।
ಲೆಂದನಾ ಮುನಿರಾಯ ನಂದದಲಿ ಹರಿಗೇ ॥೫೬॥

ಇಂದಿರೇಶನ ಕುಂತಿನಂದನರು ತವ ಪಾದ ।
ದ್ವಂದ್ವಸೇವಕರಿವರಿಂದುವಂಶಜರೂ ॥
ಕಂದರೀ ಪಾರ್ಥರನು ಮುಂದೆ ನೀ ರಕ್ಷಿಪುದು ।
ಸಂಧಿ-ವಿಗ್ರಹ-ಯಾನಗಳಲಿ ಬೆಂಬಿಡದೇ ॥೫೭॥

**ಭಾಮಿನಿ**

ಎನಲು ಶ್ರೀಮಾಧವನು ನುಡಿದನು ।
ಮುನಿಯೆ ಸೌಭದ್ರೆಯು ಕಿರೀಟಿಯ ।
ನನುವರಿಸೆ ರಕ್ಷಿಸುವ ಭಾರವು ನಮ್ಮದೆಂದೆನಲೂ ॥
ಚಿನುಮಯನ ನುಡಿ ಕೇಳಿ ಋಷಿವರ ।
ಸನುಮತದಿ ಪಾಂಡವರ ನೋಡುತ ।
ವನಜನಾಭನೆ ನಿಮಗೆ ಮುಂದಣ ಗತಿಯು ದಿಟವೆನಲೂ ॥೫೮॥

**ವಾರ್ಧಕ**

ಧಾರುಣೀಶ್ವರನೆ ಕೇಳಾ ಋಷೀಶ್ವರ ವ್ಯಾ ।
ಹಾರಗಳ ಕೇಳಿ ಸುಕುಮಾರರತಿ ಮೋದದೊಳ್ ।
ಕೌರವಾದ್ಯರ ಮಹಾಘೋರಕರ ಜಯವು ಕೈ ಸೇರಿತೆಂದೆನುತಲಿರಲೂ ॥
ನಾರಿಯರ ಗಡಣದಿಂ ವಾರಿಜಾಂಬಕಿ ಬೇಗ ।

ಮಾರಪಿತನೆಡೆಗೆ ವೈಯಾರದಿಂದ್ಯೆದಿ ಪದ ।
ಸಾರಸಂಗಳಿಗೆರಗೆ ಶ್ರೀರಮಣ ಶುಭವೆನುತ ಪಾರ್ಷತೆಯನುಪಚರಿಸಲೂ ॥೫೯॥

**ರಾಗ ಶಂಕರಾಭರಣ ಏಕತಾಳ**

ಸತ್ಯಭಾಮಾದೇವಿಯು ತ । ನ್ನತ್ತಿಗೆ ದ್ರೌಪದಿಯ ಕಾ ।
ಣುತ್ತಲತಿ ಮುದದಿ ನುಡಿದಳ್ । ಮತ್ತೇಭಗಮನೇ ॥೬೦॥

ಅತ್ತಿಗೆ ಕ್ಷೇಮವೆ ನಿಮ್ಮ । ನಿತ್ಯದಿ ನಾ ನೋಳ್ಪೆನೆನುತಾ ॥
ಚಿತ್ತದಿ ಬಯಸುತ್ತಲಿದ್ದೆ । ಮತ್ತಕಾಶಿನೀ ॥೬೧॥

ಮಾರನಯ್ಯನರಸಿ ಕೇಳೆ । ಭೂರಿ ತೋಷವಾಯ್ತು ಹರಿಯ ॥
ಸೇರಿದ ಭಕ್ತರ್ಗೆ ಕ್ಷೇಮ । ದೊರೆಯದೀರ್ಪುದೇ ॥೬೨॥

ಕಪಟಮುನಿಯ ವೇಷದಿಂದ । ಜಪಿಸುತಿರ್ಪ ನರಗೆ ಮೋಹಿಸಿ ॥
ಗುಪಿತದಿಂದ ರಮಿಸಿ ಪೋದ । ಚಪಲೆಗೆ ಸುಖವೇ ॥೬೩॥

ಚಂಚಲಾಕ್ಷಿ ಭಾಮೆ ಕೇಳೆ । ವಂಚಿಸಿ ಸ್ತ್ರೀಯರ ರುಕ್ಮಿಣಿ ॥
ಪಂಚೇಷುಪಿತಗೊಲಿದುದ ಪ್ರ । ಪಂಚವರಿಯದೇ ॥೬೪॥

ಪಂಚಶಿರನ ಧನುವನೆತ್ತಿ । ಸಂಚಿತಾರ್ಥಳಾಗಿ ಪಾರ್ಥಗೆ ॥
ವಂಚಿಸುತ್ತ ಹ್ಯಾಗೆ ಪಂಚರ । ಹಂಚಿಕೊಂಡಿರ್ಪೇ ॥೬೫॥

ಮಾತೆಮಾತಿಗಾಗಿ ಸುತರೀ । ರೀತಿಗೈದಪರಿಯು ಶಾಸ್ತ್ರ ॥
ವ್ರಾತಕಿದು ಸಮ್ಮತವು ವಿ । ಖ್ಯಾತೆ ನೀ ಕೇಳೇ ॥೬೬॥

ಭ್ರಾಂತಳಂತೆ ನಿಖಿಲ ಗೋಪೀ । ಕಾಂತ ಹರಿಯ ದಾನಕೊಡುವ ॥
ಸ್ವಾಂತ ಬಂತೆ ಮುನಿಗೆಲೆ ಕ । ರ್ಣಾಂತನಯನೆಯೇ ॥೬೭॥
ಮಾನವಂತೆ ಕೋಪಿಸ ಬೇಡೆ । ಧ್ಯಾನಿಸಿ ನೀ ನೋಡೆ ಪತಿಯ ॥
ದಾನಕೊಟ್ಟೆನು ಹರಿಗೆ ನಿತ್ಯದಿ । ರಾಣಿಯಹಳೆನುತಾ ॥೬೮॥

ಮಂದಯಾನೆ ದ್ರೌಪದಿ ನಾ । ರಂದಮುನಿಯ ಮಾತಿಗೆ ಸಂ ।
ಕ್ರಂದಸುತನು ಯಾತ್ರೆಗೈಯಲ್ । ಚಂದದಿ ನೋಡ್ದೇ ॥೬೯॥

**ಭಾಮಿನಿ**

ಇನಿತು ಪೇಳಿದ ಭಾಮೆನುಡಿಗಳ ।
ವನಜನಾಭನು ಕೇಳಿ ಭಗಿನಿಯ ।
ನನುನಯದಿ ತಕ್ಕೈಸಿ ತನ್ನಯ ಸತಿಯೊಳಿಂತೆಂದಾ ॥

ಬಿನುಗು ನುಡಿಗಳ ಪೇಳ್ವರೇ ಮಾ ।
ನಿನಿಯೆ ಬಾಂಧವರೆಂದು ಮರೆತೆಯ ।
ಪ್ರಣಯದಲಿ ಮುಂದೀರ್ಪುದೆನುತಲಿ ಹರಿಯೊಡಂಬಡಿಸೀ ॥೭೦॥

**ರಾಗ ಸಾಂಗತ್ಯ ರೂಪಕತಾಳ**

ಜಡಜಬಾಂಧವಗೀಗ ಬಂದೊದಗಿತು ರಾಹು । ಕಡು ಛಾಯವೆನುತಲಿ ಹರಿಯೂ ॥
ನುಡಿದ ಮಾತಿಗೆ ಧರ್ಮನಂದನಾದ್ಯರು ಯದು । ಗಡಣಸಹಿತ ಗಂಗಾತಟಕೇ ॥೭೧॥

ಸಂಭ್ರಮದಲಿ ನಡೆತಂದು ಪಾರ್ಥರ ಸಹ । ಶಂಭರಾರಿಯ ಪಿತನು ತಾನೂ ॥
ಅಂಬುಜಾಕ್ಷಿಯರೊಡಗೊಂಡು ಮೌನಿಗಳ ಕ । ದಂಬದಿ ಸಹಿತ ತಾ ಮಿಂದೂ ॥೭೨॥

ಸ್ವರ್ಣ ರೌಪ್ಯವು ವಸ್ತ್ರ ಗಜ ರಥ ನವರತ್ನ । ಪೂರ್ಣಭಾಜನವ ವಿಪ್ರರಿಗೆ ॥
ಕರ್ಣಾಂತನಯನೆಯರ ಸಹಿತ ಭೂಭುಜರು ಕೊ । ಟ್ವಾರ್ಣವಸತಿಯನರ್ಚಿಸುತಾ ॥೭೩॥

ಭೂದೇವಮುಖದಿಂದ ವಿಧವಿಧಧ್ವರಗಳ । ಸಾಧಿಸಿ ಧರ್ಮಾದ್ಯರೆಲ್ಲಾ ॥
ಮಾಧವನನು ಪೂಜಿಸುತಲಿರೆ ಭಾಮೆಯು । ಮೋದದಿ ಪೇಳ್ದಳು ಹರಿಯಾ ॥೭೪॥

**ರಾಗ ಕೇತಾರಗೌಳ ಆದಿತಾಳ**

ಬಂದ ಕಾರ್ಯವು ನಮಗೆ । ಚಂದದೊಳಾಯಿ । ತಿಂದು ನಾವ್ ದ್ವಾರಕಿಗೇ ॥
ಕುಂದರದನೆ ದ್ರೌಪದಿ । ಮೊದಲಾದ ಬಂಧು । ವೃಂದದೊಂದಿಗೆ ಭರದೀ ॥೭೫॥

ಹೊರಡು ಭವನಕೆನಲು । ತನ್ನವರಿಂಗೆ । ಹರಿಯು ತಾ ಸತ್ವರದೊಳೂ ॥
ಪುರಕೆ ಪೋಗುವದೆನಲು । ಯಾದುವರೆಲ್ಲ । ತ್ವರಿತದಿ ಪೊರಮಡಲೂ ॥೭೬॥

**ಶಬ್ದಾರ್ಥ :** ವೃಂದ=ಸಮೂಹ, ಭವನ=ಮನೆ

**ಭಾಮಿನಿ**

ಮಂದಹಾಸದಿ ಪಾಂಡವರ ಕರ ।
ದೆಂದ ನಮ್ಮಯ ದ್ವಾರಕಿಗೆ ನೀ ।
ವಿಂದು ನಡೆತಂದೆಲ್ಲ ದ್ರುಪದನ ನಂದನೆಯ ಕೂಡೀ ॥
ಒಂದೆರಡು ದಿನವಿದ್ದು ನಮಗಾ ।
ನಂದವನು ಸಂಜನಿಸಿ ಸಂಭ್ರಮ ।
ದಿಂದ ಮುಂದಕೆ ಪೋಗುವದು ಮುನಿಕಂದ ಮೊದಲಾಗೀ ॥೭೭॥

**ರಾಗ ಮಾರವಿ ಏಕತಾಳ**

ಎಂದಾ ಕ್ಷಣ ಋಷಿನಂದನ ಮುಖ್ಯರು । ಮಂದಾಕಿನಿತಟದೀ ॥
ಮಂದರಧರ ಗೋವಿಂದನ ಜತೆಯೊಳು । ಬಂದರು ತಾವ್ ಮುದದೀ ॥೭೮॥

ಹರಿ ಪಾರ್ಥರ ಕರದುರುತರ ದ್ವಾರಕಿ । ಗ್ದುರುಷದೊಳೈತರಲೂ ॥
ಪುರದ್ವಾರದಿ ಗೋಪ್ಯರು ನೀರಾಜನ । ವರಿಧರಗರ್ಪಿಸಲೂ ॥೭೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸತ್ಯವಂತೆಯ ಸುತನ ತರಿಸುತ । ನಿತ್ಯತೃಪ್ತನು ನುಡಿದ ಪಾಂಡವ ॥
ಪೃಥ್ವಿಪಾಲಕರಿಂಗೆ ಮನ್ನಣೆ । ಯರ್ತಿಯಿಂದಾ ॥೮೦॥

ವಿರಚಿಸಲು ಮನವಿಹುದು ಪೂರ್ವದೊ । ಳುರ್ವಿಯೊಳಗಿನಿತಾರು ಗೈಯದ ॥
ಪರಿಯ ಪೇಳೆಂದೆನಲು ಋಷಿವರ । ನೊರೆದನಾಗಾ ॥೮೧॥

ಒಂದು ದಿನದಲಿ ವಾಜಿಮೇಧವ । ಚಂದದಲಿ ವಿರಚಿಸುತ ಬಂದಿಹ ॥
ಬಂಧುಜಾಲಕೆ ತೋಷಿಸ್ಯೆ ಗೋ । ವಿಂದ ನೀನೂ ॥೮೨॥

ತುರಗರಕ್ಷೆಗೆ ಭೀಮಪಾರ್ಥರು । ತರಳ ಪ್ರದ್ಯುಮ್ನಾಖ್ಯ ಸಾತ್ಯಕಿ ॥
ಯರನು ನಿನ್ನಯ ರಥದಿ ಕೂರಿಸಿ । ಭರದಿ ಕಳುಹೈ ॥೮೩॥

ಯಾಮವೊಂದರಲಿಳೆಯ ಚರಿಸುತ । ಭೀಮಮುಖ್ಯರು ಕರವ ತರುವರು ॥
ಭೂಮಿಪಾಲರ ಗರ್ವವಿಳುಹುವರ್ । ಕಾಮಪಿತನೇ ॥೮೪॥

ಪ್ರಹರದಲಿ ಭೂಲಕ್ಷಯೋಜನ । ವಿಹರಿಸುವ ವಾಜಿಯನು ಸತ್ವದಿ ॥
ವಿಹಗವಾಹನ ನಿರ್ಮಿಸ್ಯೆ ಬಲ । ಸಹಜನೆನಲೂ ॥೮೫॥

**ಭಾಮಿನಿ**

ಯೋಗಿಯರಸನ ನುಡಿಯ ಕೇಳು ।
ತ್ತಾಗ ವಾಯುಜ ಪಾರ್ಥ ಸಾತ್ಯಕಿ ।
ನಾಗಸಾಸಿರಬಲದ ಪ್ರದ್ಯುಮ್ನಾಖ್ಯಸಾಂಬರನೂ ॥
ಭೋಗಿಶಯನನು ಕರಸಿ ಮತ್ತನು ।
ರಾಗದಲಿ ಪೇಳಿದನು ರಿಪುಮೃಗ ।
ವಾಗುರರೆದಿನವೊಂದರಲಿ ಹಯಮೇಧವನು ಮಾಳ್ಪೇ ॥೮೬॥

**ವಾರ್ಧಕ**

ಶೈನೇಯ ಕೇಳೀಗ ಯಜ್ಞವಾಟವು ಯೋಗ್ಯ ।
ಮೌನಿಗಳು ನಿಲುವುದಕ್ಕುಚಿತ ವೇಶ್ಮವು ಬಂದ ।

ಕ್ಷೋಣಿಪರ ಸಂವಾಸ ಠೀವಿಗಳು ಮತ್ತವರ ರಾಣಿಯರ್ಗರ್ಹ ಭವನಾ ॥
ದೀನಾಂಧಬಧಿರರಿಗೆ ಮೊದಲಾಗಿ ಸತ್ಕಾರ ।
ದಾನಮಾನವು ವಾಸ ವೇಷ ಭೂಷಣ ಯಾಗ ।
ಪೂರ್ಣ ಸಾಧನವ ನೀ ಸಾನುರಾಗದಿ ರಚಿಸಿ ಬೇಗದೊಳಗರುಹೆಂದನು ॥೮೭॥

**ರಾಗ ಪಂತುವರಾಳಿ ಏಕತಾಳ**

ಹರಿಯ ನುಡಿಯ ಕೇಳಿ । ಹರುಷದಿ ಸಾತ್ಯಕಿ ॥
ಭರದಿಂದಲೆಜ್ಜದ । ವರವಾಟಿ ರಚಿಸೀ ॥೮೮॥

ಸರ್ವ ಸನ್ನಾಹವ । ನರ್ಹ ಸಾಧನವ ॥
ತ್ವರ್ಯದೊಳ್ ರಚಿಸುತ್ತ । ನೂರ್ವೀಶಾಜ್ಞೆಯಲೀ ॥೮೯॥

ರತಿಪತಿಪಿತಗೊಂದಿ । ಸುತ ಸಾತ್ಯಕಿಯು ಪೇಳ್ದ ॥
ಕ್ರತುಗೃಹಾದಿಗಳೆಲ್ಲಾ । ಯಿತು ತವದಯದೀ ॥೯೦॥

**ಭಾಮಿನಿ**

ಕೋಕದಭಿಧಾಯುಧನು ನರಭವ ।
ಶೋಕತೂಲಕೆ ಆಶುಶುಕ್ಷಣಿ ।
ಲೋಕಸೃಷ್ಟಕ ಹರಿಯು ತಾ ಶಾಮ್ಯೈಕ ಕರ್ಣದಲೀ ॥
ಚಾಕಚಕ್ಯದೊಳೈದು ಬಣ್ಣದಿ ।
ನಾಕಿನಿಕರಕೆ ಚೋದ್ಯ ತೋರುವ ।
ನೇಕಗುಣಸಂಪನ್ನ ವಾಜಿಯ ಕರದಿ ನಿರ್ಮಿಸುತಾ ॥೯೧॥

**ರಾಗ ಕೇತಾರಗೌಳ ಅಷ್ಟತಾಳ**

ಕಂಜನಾಭನು ಮುದದಿಂದ ಶೋಭಿಪ ತಾರ । ಪುಂಜತೇಜದ ಮುತ್ತಿನಾ ॥
ಮಂಜುಳ ಹಾರವ ಕಂಠದಿ ತಾನಿಟ್ಟು । ರಂಜಿಸಿ ಮಖವಾಜಿಯಾ ॥೯೨॥

ಪೊನ್ನ ಪೈಝಣಿ ಪಾಡಗಗಳನಿಡುತಬ್ಧಿ । ಕನ್ನೆಯ ಪ್ರಿಯನು ತಾನೂ ॥
ರನ್ನದ ಪದಕವ ಫಾಲದೊಳಿಡುತಾಗ । ಲುನ್ನತ ವೈಭವದೀ ॥೯೩॥

ಮೋದದಿ ಹೊದಿಸುತ ದಿವ್ಯಮಾಗಿಹ ಝುರಿ । ಭಾದರ ಸುಮಗಂಧವಾ ॥
ವಾದ್ಯ ದುಂದುಭಿಘೋಷ ಶುಭಮಂತ್ರಗಳ ಸಹಿ । ತಾದಿಪುರುಷನಿಡುತಾ ॥೯೪॥

ಫಾಲದಿ ಬಂಧಿಸಿ ಹೇಮಪಟ್ಟದ ಲೇಖ । ಲೀಲೆಯೊಳ್ ವಾಚಿಸುತಾ ॥
ಶೀಲಗುಣಾಢ್ಯ ಭೂಭುಜರು ಸಂಭ್ರಮದೊಳ । ಗಾಲಿಸುತೆಲ್ಲವರೂ ॥೯೫॥

ಬಲ್ಲಿದ ವೀರರು ಕಟ್ಟಿ ವಾಜಿಯ ಧುರ । ದಲ್ಲಿ ಕಾದುವದುಚಿತಾ ॥
ಸಲ್ಲದ ರಾಜರು ಕಪ್ಪಕಾಣಿಕೆ ಕೊಡು । ತೆಲ್ಲರು ನಮಿಸುವದೂ ॥೯೬॥

ಇಂತು ವಾಲೆಯ ವಾಚಿಸುತ ಹರಿ ಸರ್ವರ । ಸಂತೋಷದಲಿ ನೋಡಲೂ ॥
ಪಂಥದಿಂದಲಿ ಮುದವಾಂತು ಭೀಮನು ಪೇಳ್ದ । ಕಂತುಪಿತಗೆ ವಂದಿಸೀ ॥೯೭॥

**ರಾಗ ದೇಶಿ ಅಷ್ಟತಾಳ**

ಸೃಷ್ಟಿಪಾಲಕ ಕೇಳು ನಾ ತರುವೆ ವಿ ।
ಶಿಷ್ಟ ಭೂಪರ ಗೆಲಿದು ಕರಹಯ । ವೃಷ್ಟಿಗಳ ಸಹ ಯಾಮದೀ ॥೯೮॥

ಪಾರ್ಥ ವಂದಿಸುತೆಂದ ತಾ ಧರಣಿಯ ।
ಪಾರ್ಥಿವರ ಗೆಲಿದೀಗ ಕಪ್ಪವ । ನರ್ಥಿಯಲಿ ತಂದೀಯುವೇ ॥೯೯॥

ಫುಲ್ಲಬಾಣನು ಪಿತಗೆ ವಂದಿಸಿ ಪೇಳ್ದ ।
ನೆಲ್ಲ ರಿಪುಗಳ ಗೆಲಿದು ಧುರದಲಿ । ಮಲ್ಲರಿಪುಸುತನೆನಿಸುವೇ ॥೧೦೦॥

ಒಡೆಯಗೊಂದಿಸುತಾಡಿದ ಸಾತ್ಯಕಿ ।
ಪೊಡವಿಯಲಿ ಕರ ಕೊಡದ ಮೂಢರ । ಬಡಿದು ಯಮಪುರ ತೋರ್ಪೆನೂ ॥೧೦೧॥

**ರಾಗ ಭೈರವಿ ಝುಂಪೆತಾಳ**

ಭೀಮ ಸಾತ್ಯಕಿ ಪಾರ್ಥ । ಕಾಮರಾಡಿದ ಕೇಳಿ ॥
ಶ್ರೀಮನೋಹರ ಹರಸಿ । ಪ್ರೇಮದಲಿ ಪೇಳ್ದಾ ॥೧೦೨॥

ಪೃತನಾಧಿಪತಿತನವ । ಶತಮನ್ಯುಸುತಗಿತ್ತು ॥
ರತಿಪತಿಯು ರಕ್ಷಿಸಲಿ । ಕ್ರತುಹಯವನೆನುತಾ ॥೧೦೩॥

ಶೈನೇಯನನು ಕರದು । ಸೇನೆ ಬೆಂಬಲಕಾಗಿ ॥
ಸಾನುರಾಗದಿ ಪೋಗು । ನೀನೆಂದು ಹರಿಯೂ ॥೧೦೪॥

ಕಾಮಪಿತ ನೇಮಿಸಿದ । ಭೀಮ ನೀ ಸರ್ವರನು ॥
ಪ್ರೇಮದಲಿ ಸಲಹಿ ಕರ । ಯಾಮದಲಿ ತಹದೂ ॥೧೦೫॥

**ಭಾಮಿನಿ**

ಮುದದಿ ಪೇಳಿದ ನುಡಿಗೆ ಶ್ರೀಹರಿ ।
ಪದಕೆ ವಂದಿಸಿ ಭೀಮಪಾರ್ಥರು ।
ಕದನಕೋವಿದ ಸಾತ್ಯಕಿ ಪ್ರದ್ಯುಮ್ನರೊಡಗೂಡೀ ॥
ಪದುಮನಾಭನ ರಥದೊಳೇರುತ ।

ಯದುಬಲವ ಸಹಿತವರು ಕುದುರೆಯ ।
ನದುಭುತದ ವೇಗದೊಳಗವರನು ಕರಸಿ ಪೊರಮಟ್ಟೂ ॥೧೦೬॥

**ರಾಗ ಭೈರವಿ ತ್ರಿವುಡೆತಾಳ**

ಬಂದನಾಗ । ವಾಯುಜ । ಬಂದನಾಗ ॥
ಬಂದ ರಿಪುಕುಲಭೀಮ ಯದುಬಲ । ವೃಂದವೆರಸುತ ಕಾಮಪಾರ್ಥರು ।
ಚಂದದಲಿ ರಥದಲ್ಲಿ ಕೂಡುತ । ಮಂದಿ ಮಾರ್ಬಲ ಹಯ ಮತಂಗಜ ।
ಸ್ಯಂದನದಿ ಶುಭಭೇರಿ ವಾದ್ಯದ । ಧಿಂಧಿಮ್ಮೆಂಬುವ ಶಬ್ದದಲಿ ಸುರ ।
ದುಂದುಭಿಯ ರವದಿಂದ ಮೆರೆಯುತ ॥ ಬಂದನಾಗ ॥೧೦೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಯೋಗಿವರಗರುಹಿದನು ಕೃಷ್ಣನ । ಭಾಗಿನೇಯಾತ್ಮಜನು ಮುದದಲಿ ।
ಯಾಗದಶ್ವವು ಮುಂದಕೆಲ್ಲಿಗೆ । ಸಾಗಿತೆನುತಾ ॥೧೦೮॥

ಇಂದುಕುಲಸಂಜಾತ ಲಾಲಿಸು । ಮುಂದಕಾ ಹಯ ವಾಯುವೇಗದಿ ।
ಬಂದುದಾ ಕ್ಷಣ ಮಗಧ ದೇಶಕೆ । ಚಂದದಿಂದಾ ॥೧೦೯॥

ಮುನಿಪ ಕೇಳಾ ಪೊಳಲಿಗರ ಸಾ । ರೆನುವದನು ಮತ್ತಾ ನೃಪಾಲನ ।
ಜನನ ಪರಿಯೇನಿಹುದು ಭೀಮಗೆ । ಮಣಿದನೇನ್ನೈ ॥೧೧೦॥

**ವಾರ್ಧಕ**

ಧರೆಯಧಿಪ ಕೇಳ್ ಮಗಧದೊರೆ ಬೃಹದ್ರಥ ತನಗೆ ।
ತರಳರಿಲ್ಲದೆ ಮನದಿ ತರಹರಿಸೆ ಮುನಿ ಕೌಶಿ ।
ಕರು ಮಂತ್ರಪೂತಾಮ್ರ ಸರಸಫಲಕೊಡಲಿರ್ವರರಸಿಯರು ಸಮದಿ ಮೆಲಲೂ ॥
ಸರಿ ಪೊಳ್ಗಳೆರಡು ಜನಿಸಿರಲದನು ಬಿಸುಡಲಾ ।
ಜರೆಯೆಂಬ ರಾಕ್ಷಸಿಯು ಭರದಿ ಸಂಧಿಸೆ ಜೀವ ।
ಧರಿಸಿ ಬೊಬ್ಬಿರಿಯಲದನರಸ ಕೇಳುತ ಬರಲು ಕರುಣಿಸುತಲವಗಿತ್ತಳೂ ॥೧೧೧॥

**ಭಾಮಿನಿ**

ಬಂಧುಸಂದೋಹವನು ಕೂಡುತ ।
ನಂದದಲಿ ನಂದನನಿಗೆ ಜರಾ ।
ಸಂಧನೆಂಬನ್ವರ್ಥ ನಾಮವನಿಟ್ಟು ವರ್ಧಿಸಲೂ ॥
ಇಂದುಮೌಳಿಯ ದಯದಿ ತಾನಿ ।
ರ್ದ್ವಂದ್ವ ಭಟನೆನಿಸುತಲಿ ನೃಪಪಶು ।
ಬಂಧಲೋಲುಪನಾಗಿರಲು ಮಖಹಯವು ಬರೆ ಪುರಕೇ ॥೧೧೨॥

**ಕಂದ**

ಜಂಭಾರಿಯ ಕಡು ವೈರಿಯು ।
ಕುಂಭಿನಿಯೊಳು ವಿಪ್ರಚಿತ್ತಿಯೆ ಜರಾಸಂಧಂ ॥
ಜೃಂಭಿತ ಮಾಷನನಾಳದ ।
ಗಂಭೀರದ ಮೂರ್ಭೇರಿ ಮೊಳೆಯೆ ಸಭೆಗೈದಂ ॥೧೧೩॥

**ರಾಗ ಭೈರವಿ ಝಂಪೆತಾಳ**

ಓಲಗಕೆ ಬರಲು ಭೂ । ಪಾಲ ಮಗಧೇಶನೆಡ ॥
ತೋಳು ಕಂಪಿಸೆಮನದಿ । ತಾಳಿ ಯೋಚನೆಯಾ ॥೧೧೪॥

ಶರ್ವವರದಲಿ ದೃಪ್ತ । ನುರ್ವಿಪನು ಶಕುನವನು ॥
ಗರ್ವದಲಿ ಲಕ್ಷಿಸದೆ । ಪರ್ವದಿನವೆನುತಾ ॥೧೧೫॥

ಪರ್ವತದ ಲಿಂಗವನು । ತ್ವರ್ಯದಲಿ ಪೂಜಿಪಡೆ ॥
ಸರ್ವಸಾಧನದಿ ಖಳ । ವರ್ಯಪೊರಮಡಲೂ ॥೧೧೬॥

**ಭಾಮಿನಿ**

ರುಂಡಮಾಲಿಯ ಪೂಜೆಸಾಧನ ।
ಕೊಂಡು ವೈಭವದಿಂದ ಮಾರ್ಗದೊ ।
ಳಂಡಜಾಸನವೈರಿ ಶಿವಪಾಷಂಡಿ ಬರಲಿತ್ತಾ ॥
ಪುಂಡರೀಕಾಕ್ಷನಲಿ ವೈರವ ।
ಗೊಂಡು ದುರುಳರ ಮೇಲೆ ಪಾದದ ।
ಚಂಡ ಘಾತವೆ ಲೇಸೆನುವ ತೆರ ಹಾರಿತಾ ಹಯವೂ ॥೧೧೭॥

**ರಾಗ ಶಂಕರಾಭರಣ ತ್ರಿವುಡೆತಾಳ**

ಹಯದ ಪಾದದಹತಿಗೆ ಮಗಧೇ । ಶ್ವರನು ಪೂಜೆಯ ವಸ್ತುವಾ ॥
ಭರದಿ ಕೆಡಹುತ ಭೂಮಿಗಾ ನೃಪ । ನೊರಗಿ ತಾಳ್ದನು ಕೋಪವಾ ॥೧೧೮॥

ಅರರಯೇನಾಶ್ಚರಿಯನೆನುತುರು । ರಭಸದಿಂ ತಾನೇಳುತಾ ॥
ತಿರುಗಿ ನೋಡುತ ಕಂಡನಶ್ವವ । ಕೊಲುವೆನೆನುತಲಿ ಪಿಡಿಯುತಾ ॥೧೧೯॥

ಅಸಿಯ ತೆಗೆದಾ ಕ್ಷಣದಿ ತಿರುಹುತ । ಲಿರಲು ಫಾಲದಿ ಮಿನುಗುವಾ ॥
ಶಶಿಕಲೆಯ ಪೋಲಿರುವ ಪೋಲೆಯ । ನೋಡುತಿಳುಹಿದ ಖಡ್ಗವಾ ॥೧೨೦॥

ಸೈಂಧವದ ಶಿರದಿಂದ ಪಟ್ಟವ । ತೆಗೆದು ಕೈಯೊಳು ಪಿಡಿದನೂ ॥
ಬಾಂಧವಾಗ್ರಣಿ ಮಂತ್ರಿಶೇಖರ । ದುರ್ಮದಾಂಧನ ಕರೆದನೂ ॥೧೨೧॥

**ಕಂದ**

ಪೊಡವಿಪನಪ್ಪಣೆ ಕೇಳುತ ।
ತಡಮಾಡದೆ ಭರದೊಳಗತಿ ವಿಸ್ಮಯದಿಂದಂ ॥
ಕೊಡನಿಭದೊಡಲನು ಕೈಯಲಿ ।
ಪಿಡಿಯುತ ಪೊಡವಿಯೊಳಡಿಯಿಡುತ್ತೈತಂದೆಂದಂ ॥೧೨೨॥

**ರಾಗ ಮಾರವಿ ಏಕತಾಳ**

ಭೂಪನೆ ತನ್ನನಕಾಲದಿ ಭರದೊಳ । ಗೀ ಪರಿ ಕರೆಸುವರೆ ॥
ತಾಪವು ಮನದೊಳಗೇನೊದಗಿಹುದದ । ನೀ ಪೇಳೆನ್ನ ದೊರೆ ॥೧೨೩॥

ಸೊಕ್ಕಿದ ಭೂಭುಜರೆಮ್ಮಯ ನಗರಕೆ । ಫಕ್ಕನೆ ಬಂದಿಹರೆ ॥
ರಕ್ಕಸ ಸುರ ನರರೊಮ್ಮೆಗೆ ಬರೆ ನಾ । ತಿಕ್ಕುವೆ ಧುರದಿ ಖರೆ ॥೧೨೪॥

ಮಂತ್ರಿಯ ವೆಗ್ಗಳ ಕೇಳುತ ಮಾಗಧ । ಸಂತೋಷದಿ ನುಡಿದಾ ॥
ಬಂತೊಂದಧ್ವರದಶ್ವವು ಪುರಕು । ನ್ನಂತ ಫಣಿಯ ಪಟದಾ ॥೧೨೫॥

ಪಟ್ಟವ ತೆಗೆದಿಟ್ಟಿರುವೆನು ನೋಡೆನೆ । ದಿಟ್ಟ ಸಚಿವತಾನೂ ॥
ಕಟ್ಟುತ ವಸನವ ಕಟಿಯೊಳು ಪತ್ರವ । ಥಟ್ಟನೆ ವೋದಿದನೂ ॥೧೨೬॥

**ರಾಗ ಕೇತಾರಗೌಳ ಅಷ್ಟತಾಳ**

ಮಧುವಂಶರತ್ನನಾನಕದುಂದುಭಿಯ ಸುತ । ನದುಭುತ ಗುಣನಿಧಿಯೂ ॥
ಪದುಮಾಕ್ಷ ಶ್ರೀಕೃಷ್ಣ ಖಳಕುಲರಾಯರ । ಮದವಿಳುಹುವೆನೆನುತಾ ॥೧೨೭॥

ಮೋದದಿ ದ್ವಾರಕಿಯೊಳಗೊಂದೆ ದಿನ ವಾಜಿ । ಮೇಧವ ಮಾಡುವಡೆ ॥
ಮೇದಿನಿನಾಥರಿಂ ಕರವ ತರ್ವರೆ ಹಯ । ವೀದಿನ ಬಿಟ್ಟಿರುವೆ ॥೧೨೮॥

ಬಲವಂತ ಭೂಪರು ವಾಜಿಯ ಬಿಗಿಯುತ್ತ । ಕಲಹಕ್ಕೆ ನಿಲ್ಲುವುದೂ ॥
ಕೊಳುಗುಳಭೀರುಗಳ್ ಭೀಮಗೊಂದಿಸಿ ಕಪ್ಪ । ಸಲಿಸುತ್ತೊಡನೆ ಬಹದೂ ॥೧೨೯॥

**ಭಾಮಿನಿ**

ಪತ್ರದಲಿ ಬರದಿಹುದ ಕೇಳುತ ।
ಕೃತ್ರಿಮದ ರಣರಸಿಕ ಮಾಗಧ ।
ವೃತ್ರದೈತ್ಯನ ತೆರದಿ ಗರ್ಜಿಸಿ ನೇತ್ರಗಳ ತಿರುಹೀ ॥

ಶತ್ರುಗಳು ಯಾದವರು ಸೊಕ್ಕಿ ಧ ।
ರಿತ್ರಿಯಲಿ ಪೌರುಷವ ತೋರ್ಪರು ।
ಕ್ಷತ್ರಧರ್ಮವನರಿಯರ ವರೆನುತೆಂದ ಮಂತ್ರಿಯೊಳೂ ॥೧೩೦॥

**ರಾಗ ತೋಡಿ ರೂಪಕತಾಳ**

ಯಾಗದಶ್ವವನ್ನು ಬಿಗಿಸಿ । ಪೋಗಿ ಪುರಕೆ ಸೇನೆಸಹಿತ ॥
ಬೇಗದಿಂದ ಯುದ್ಧಕ್ಕನು । ವಾಗಿ ಬಾರಯ್ಯಾ ॥೧೩೧॥

ಅರಸನೆಂದ ನುಡಿಗೆ ಮಂತ್ರಿ । ವರನು ಪೇಳ್ದ ಕರಿಯಲೆನ್ನ ॥
ಧುರವು ಪೊದಗಿತೆಂದು ಸೇನೆ । ವೆರಸಿ ತಂದಿಹೇ ॥೧೩೨॥

ಭಳಿರೆ ಸಚಿವನೆನುತ ನುಡಿದು । ಚೆಲುವ ಚಾಪ ಕವಚ ಧರಿಸಿ ॥
ಕೊಳುಗುಳಕ್ಕೆ ಸೈನ್ಯಸಹಿತ । ಚಳಕದಿ ಬರಲೂ ॥೧೩೩॥

ವೈರಿನಿಕರ ಕಂಡು ಮಂತ್ರಿ । ವೀರ ಭಟರ ಗೆಲುವೆನೆನಲು ॥
ಭೂರಿ ತೋಷದಿಂದ ಕಳುಹಲ್ । ಶೌರ್ಯದಿ ಬಂದಾ ॥೧೩೪॥

**ರಾಗ ಶಂಕರಾಭರಣ, ಮಟ್ಟೆತಾಳ**

ಬಂದ ರಿಪುವನು ಕಂಡು ಸಾತ್ಯಕಿ । ಇಂದ್ರಜಾತಗೆ ಮಣಿಯುತೆಂದನು ॥
ಮುಂದೆ ಬಂದಿಹ ರಿಪುವ ಸಮರದಿ । ಇಂದು ಭಂಗಿಪೆನೆನಲು ಕಳುಹಲೂ ॥೧೩೫॥

ಕಂಡು ಮಂತ್ರಿಯು ನುಡಿದನಾ ಕ್ಷಣ । ಖಂಡಿಪೆ ನಿನ್ನ ನೋಡು ಸಾಹಸ ॥
ಪುಂಡ ಯಾದವ ದುರ್ಮದಾಂಧನೆ । ಚಂಡವಿಕ್ರಮ ನೋಡು ಧುರದಲೀ ॥೧೩೬॥

ಹೆಸರಿಗೊಪ್ಪಿಹ ಪಾಪಿ ನಿನ್ನಯ । ಅಸುವ ಹೀರುವೆನೆನುತ ಸಾತ್ಯಕಿ ॥
ಮಸೆದ ಖಡ್ಗವಗೊಂಡು ಮಂತ್ರಿಯ । ಎಸೆವ ಜಠರವ ಬಗಿದು ಬಿಸುಡಲೂ ॥೧೩೭॥

**ಭಾಮಿನಿ**

ಕಂಡು ಮಂತ್ರಿಯ ಭವಣೆಯನು ರಣ ।
ಮಂಡಲದಿ ಮಾಗಧನು ಕಲ್ಪದ ।
ರುಂಡಮಾಲಿಯ ತೆರದಿ ಬೊಬ್ಬಿರಿದೆಂದ ಸಾತ್ಯಕಿಗೇ ॥
ಚಂಡವೇಗದ ಖಡ್ಗವೆನ್ನೊಳು ।
ಗಂಡುಗಲಿ ನೀ ನೋಡೆನುತಲು ।
ದ್ದಂಡ ಶರಗಳ ಬಿಡುತಿರಲು ತರಿದೆಂದ ಶಿನಿಸುತನೂ ॥೧೩೮॥

***